ಕರ್ನಾಟಕ ಜೈನ ಚಿತ್ರಕಲಾ ಪರಂಪರೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)





ಸಂಶೋಧಕರು

ರಾಜೀವ ಎಂ.ವೈ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೫

794

ಕರ್ನಾಟಕ ಜೈನ ಚಿತ್ರಕಲಾ ಪರಂಪರೆ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ರಾಜೀವ ಎಂ.ವೈ

ಮಾರ್ಗದರ್ಶಕರು

ಪ್ರೊ. ಎಸ್. ಸಿ. ಪಾಟೀಲ

ಪ್ರಾಧ್ಯಾಪಕರು, ದೃಶ್ಯಕಲಾ ವಿಭಾಗ
ಮತ್ತು
ವಿಶೇಷಾಧಿಕಾರಿಗಳು (ವಿಶ್ರಾಂತ)
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ : ಬೆಂಗಳೂರು

ಲಲಿತಕಲಾ ನಿಕಾಯ

ದೃಶ್ಯಕಲಾ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೭

<u>ಪ್ರಮಾಣ ಪತ್ರ</u>

ಕರ್ನಾಟಕ ಜೈನ ಚಿತ್ರಕಲಾ ಪರಂಪರೆ ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಪ್ರೊ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೬.೦೯.೨೦೧೭

ಸ್ಥಳ : ಹಂಪಿ

(ರಾಜೀವ ಎಂ.ವೈ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದೃಢೀಕರಣ ಪತ್ರ

ರಾಜೀವ ಎಂ.ವೈ ಇವರು ಸಾದರಪಡಿಸಿದ **ಕರ್ನಾಟಕ ಜೈನ ಚಿತ್ರಕಲಾ ಪರಂಪರೆ** ಎಂಬ ಶೀರ್ಷಿಕೆಯ ಮಹಾಪ್ರಬಂಧವು ಮೂಲ ಸಂಶೋಧನ ಕೃತಿಯಾಗಿದ್ದು ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಪಿಹೆಚ್.ಡಿ. ಪದವಿಗಾಗಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಮಹಾಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೦೬.೦೯.೨೦೧೭

ಸ್ಥಳ : ಹಂಪಿ

(ಪ್ರೊ. ಎಸ್.ಸಿ. ಪಾಟೀಲ)
ವಿಶೇಷಾಧಿಕಾರಿಗಳು (ವಿಶ್ರಾಂತ)
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ : ಬೆಂಗಳೂರು

ಕರ್ನಾಟಕ ಜೈನ ಚಿತ್ರಕಲಾ ಪರಂಪರೆ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಮಾನವ ಹುಟ್ಟಿನಿಂದಲೂ ಅವನ ಜೀವನ ಕ್ರಮದಲ್ಲಿ ಸಾಮಾಜಿಕ, ಧಾರ್ಮಿಕ ಹಾಗೂ ಪಾರಂಪರಿಕ ಮಹತ್ವಪೂರ್ಣ ಬೆಳವಣಿಗೆಗಳು, ಚಿಂತನೆಗಳು ಹಾಗೂ ಬದಲಾವಣೆಗಳು ಸಹಜವಾಗಿಯೇ ಅವನೊಡನೆ ಬೆಳೆದುಬಂದಿವೆ. ಅಂತೆಯೇ ಈ ಅಂಶಗಳು ಆ ಮಾನವ ಸ್ಥಿತಿಗತಿ, ಆಚಾರ–ವಿಚಾರ, ಜೀವನದ ಮೌಲ್ಯೀಕತೆಯ ಪ್ರತೀಕವಾಗಿವೆಯೆಂದರೂ ತಪ್ಪಾಗಲಾರದು. ಇದೆಲ್ಲವುದರ ನಡುವೆ ಮನುಷ್ಯನಿಗೆ ಧರ್ಮ ಎಂಬ ಶಬ್ದವು ಅವನ ಸಹಜಶೀಲ ನಿತ್ಯ ವರ್ತನೆಯ ಪ್ರತೀಕವಾಗಿರುವುದು. ಕ್ರಿ.ಪೂ. ೫೦೦ ವರ್ಷಗಳ ಇತಿಹಾಸವಿರುವ ಹಿಂದೂ ಸಂಸ್ಕೃತಿಯಲ್ಲಿ ಹಲವಾರು ಕವಲುಗಳೊಡೆದು ಸಹಸ್ರ ಧರ್ಮಶಾಖೆಗಳಾಗಿ ಪ್ರಜ್ವಲಿಸಿ ಪ್ರವಹಿಸುತ್ತಿವೆ. ಧರ್ಮವೊಂದು ಸಂಸ್ಕೃತಿಯ ಸಂಸ್ಕಾರ, ಆಚಾರ, ವಿಚಾರ, ನಿರ್ದಿಷ್ಟ ಧೋರಣೆ, ನೀತಿ–ನಿಯಮಗಳನ್ನೊಳಗೊಂಡ ಅಚ್ಚುಕಟ್ಟಾದ ಚೌಕಟ್ಟು. ದಿನಕಳೆದಂತೆ ಹೊಸ ಹೊಸ ಆಯಾಮಗಳಲ್ಲಿ ಧರ್ಮದ ಪ್ರಚಾರಗಳಾಗತೊಡಗಿದವು. ಚಿತ್ರಕಲೆ, ಸಾಹಿತ್ಯ, ಸಂಗೀತ ಇವುಗಳು ಧರ್ಮ ಪ್ರಚಾರದ ಮಾಧ್ಯಮಗಳಾಗಿದ್ದವು ಎಂಬುದು ವಿದ್ವಾಂಸರ ಅಭಿಪ್ರಾಯ.

ಚಿತ್ರಕಲೆಯು ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಬೆಳವಣಿಗೆಯ ಜೊತೆಗೆ ಸಂಸ್ಕೃತಿಯ ಬೆಳವಣಿಗೆಯನ್ನು ಮಾಡುತ್ತಾ ಬಂದಿದೆ. ಮೊದಮೊದಲು ವ್ಯಕ್ತಿ–ವ್ಯಕ್ತಿಯ ನಡುವಿನ ಸಂವಾದದ ಮಾಧ್ಯಮವಾಗಿದ್ದ ಈ ಚಿತ್ರಕಲೆಯು ಕಾಲದಿಂದ ಕಾಲಕ್ಕೆ ಪರಂಪರಾಗತವಾಗಿ ಸಮುದಾಯ ಮತ್ತು ವರ್ಗಗಳ ಮೇಲೆ ಆ ಪ್ರದೇಶದ ನೆಲೆಗಟ್ಟುಗಳ ಜನಜೀವನ, ಆಚಾರ, ವಿಚಾರ, ನಂಬಿಕೆ ಆಚರಣೆಗಳು ಅವರ ಚಿತ್ರಕಲೆಯ ಮೇಲೆ ಪ್ರಭಾವ ಬೀರಿರುವುದನ್ನು ಪ್ರಾಂತ್ಯವಾರು ಹಾಗೂ ಕಾಲಗಳ ನಿಗಧಿಯಿಂದ ಇವರ ಚಿತ್ರಕಲೆಯಲ್ಲಿ ಇರುವ ಭಿನ್ನತೆಯ ವೈವಿಧ್ಯತೆಗಳು ಕಾರಣಗಳಾಗಿವೆ.

ಇವುಗಳಿಗೆ ಸಾಕ್ಷಿಯಾಗುವಂತೆ ಆಯಾಕಾಲದ ಜನರ ಸಂಸ್ಕೃತಿ, ಇತಿಹಾಸ, ರಾಜಕಾರಣ, ಧಾರ್ಮಿಕ ಸಂಘರ್ಷಗಳ ಜೀವಾಳಗಳನ್ನು ಆ ಕಾಲದ ಚಿತ್ರಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಇಂದು ಹಾಲಿವುಡ್ ಐತಿಹಾಸಿಕ ಚಲನಚಿತ್ರಗಳಲ್ಲಿ ಕಂಡುಬರುವ ವಸ್ತ್ರವಿನ್ಯಾಸ, ಆಭರಣ, ಅರಮನೆಗಳು, ಬಳಸುತ್ತಿದ್ದ ಶಸ್ತ್ರಾಸ್ತ್ರಗಳು, ವಾಹನ ವಿನ್ಯಾಸ, ಜನರ ಜೀವನ ಪದ್ಧತಿಗಳಿಗೆ ಹಿಂದಿನ ಕಾಲದ ಕಲಾಕೃತಿಗಳ ಮೂಲ ಆಗರವಾಗಿವೆ. ಅಲ್ಲದೆ ಈ ಚಿತ್ರಗಳು ಕಾಲ ನಿರ್ಮಾತೃ ಹಾಗೂ ಕಾರಣಗಳನ್ನು ಸಹ ತನ್ನ ಆಂತರ್ಯದಲ್ಲಿ ಬಿಗಿದಿಟ್ಟುಕೊಂಡಿರುತ್ತವೆ.

ಇದೇ ಅಲ್ಲದೆ ನಮ್ಮ ಪೂರ್ವಜರು ಚಿತ್ರಕಲೆಯನ್ನು ಬಹುವಾಗಿ ಅವಲಂಬಿಸಿದ್ದರು. ಅಲ್ಲೆ ಈ ಕಲೆಗೆ ಧಾರ್ಮಿಕ ಚೌಕಟ್ಟನ್ನು ಹಾಕಿ ಮನೆತನದಿಂದ ಮನೆತನಕ್ಕೆ ಪರಂಪರಾಗತವಾಗಿ ಸಾಗುವಂತೆ ಮಾಡಿದ್ದರು. ಮೊದಮೊದಲು ಚಿತ್ರಕಲೆಯ ಧಾರ್ಮಿಕ ಆಚರಣೆ, ಧರ್ಮಪ್ರಚಾರಕ್ಕೆ ಅಲ್ಲದೆ ರಾಜಕೀಯ ಸದುದ್ದೇಶಗಳಿಗೆ ಮಾತ್ರ ಬಳಸಬೇಕಿತ್ತು. ತದನಂತರ ಕಾಲ ಕಳೆದಂತೆ ಕಲಾವಿದನ ಅಭಿವ್ಯಕ್ತಿ ಸ್ವಾತಂತ್ರ್ಯದ ಬೆಳಕಿನಿಂದ ಸಾಮಾಜಿಕವಾಗಿ ಹಾಗೂ ಸ್ವ-ಅಭಿವ್ಯಕ್ತಿಯ ಮನೋರಂಜನಾ ವಿಷಯವಾಗಿಯೂ ಮಾರ್ಪಾಡು ಹೊಂದಿತು. ಇದರಿಂದ ಹಂತಹಂತವಾಗಿ ಕಲೆಯ ಮಾರ್ಪಾಡು ಅಸ್ತಿತ್ವದ ಛಾಯೆಗಳನ್ನು ಇವುಗಳ ತೌಲನಿಕ ಅಧ್ಯಯನದಿಂದ ಮಹತ್ವದ ಅಂಶಗಳು ಹೊರಚೆಲ್ಲುತ್ತವೆ.

ಸಂಸ್ಕೃತಿಯನ್ನು ಅರಿಯಲು ಇರುವ ಮೂಲ ಆಕರಗಳಲ್ಲಿ ಚಿತ್ರಕಲೆಗೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆ ದಿಸೆಯಲ್ಲಿ ಚಿತ್ರಕಲೆಯ ಮುಖಾಂತರ ಮಾನವ ತನ್ನ ಸಂಸ್ಕೃತಿಯನ್ನು ಹೇಗೆ ವ್ಯಕ್ತಗೊಳಿಸಿದ್ದಾನೆ ಎಂಬುದು ಅಥವಾ ಸಂಸ್ಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆ ಇತರೆ ಆಕರಗಳಿಗಿಂತ ಬೇರೆಯಾಗಿ ಇದು ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಪುನಃ ರಚಿಸಲು ಹೇಗೆ ಸಹಾಯ ಮಾಡುತ್ತದೆ[೧] ಎಂಬುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಬಹುದಾಗಿದೆ. ಕಲೆಗಳ ಅಧ್ಯಯನದಿಂದ ತಿಳಿಯುವ ಮಹತ್ವದ ವಿಷಯಗಳಲ್ಲಿ ಕೆಲವು ಸಲ ಯಾವುದೇ ಕಲೆಗಳ ಪ್ರದರ್ಶನ ಸಂದರ್ಭದ ಹಿಂದಿನ ಆಶಯಗಳಲ್ಲಿ ಕಲೆಗಳು ಆ ಭಾಗದ ಮೂಲ ಸಂಸ್ಕೃತಿಯೊಂದರ ಕಡೆಗೆ ಬೆರಳು ಮಾಡುತ್ತದೆ. ಇತಿಹಾಸದ ಹಲವು ಕಾಲಘಟ್ಟಗಳಲ್ಲಿ ನಡೆದಿರಬಹುದಾದ ಸಾಂಸ್ಕೃತಿಕ ಸಂಘರ್ಷಗಳ ಕಡೆಗೆ ನಮ್ಮ ಗಮನ ಸೆಳೆಯುತ್ತವೆ.[೨] ಸಾಂಸ್ಕೃತಿಕ ಸಂಘರ್ಷಗಳ ನಡುವೆ ಒಲವಿನ ಸಾಮರಸ್ಯವನ್ನು ಸಹ ಈ ಚಿತ್ರಕಲೆಯು ಹುಟ್ಟುಹಾಕುವಲ್ಲಿ ತನ್ನ ಪಾತ್ರ ವಹಿಸಿದೆ. ಅಲ್ಲದೆ ಅಂದಿನ ಜನರ ಸಾಂಸಾರಿಕ ಜೀವನ, ನಡತೆ, ಕಟ್ಟುಪಾಡು, ಪಂಥಗಳು, ವೃತ್ತಿವಾರು ವರ್ಗೀಕರಣ ಇವುಗಳಿಗೆ ಕನ್ನಡಿಯಂತೆ ಚರಿತ್ರೆಯ ಕದ ತೆರೆಯಲು ಅವುಗಳ ಭಾವಾಭಿವ್ಯಕ್ತ ರೂಪ ಚಿತ್ರಕಲೆಯಾಗಿದ್ದು ಈ ಎಲ್ಲದರ ಎತ್ತರ ಹುಡುಕುವ ಪ್ರಯತ್ನಗಳು ಈ ಅಧ್ಯಯನದಲ್ಲಿವೆ.

---

೦೧. ಡಾ. ಎಸ್. ಸಿ. ಪಾಟೀಲ : ವರ್ಣಸಂಚಯ, ಪು-೧

೦೨. ಹಿ.ಚಿ. ಬೋರಲಿಂಗಯ್ಯ (ಸಂ.) : ಕರ್ನಾಟಕ ಕಲೆಗಳ ಕೋಶ, ಪು-೨

ಪ್ರಸ್ತುತ ಈ ಅಧ್ಯಯನದಿಂದ ನಮ್ಮ ನಾಡಿನ ಜೈನಧರ್ಮ ಹಾಗೂ ಜೈನ ಚಿತ್ರ ಪರಂಪರೆಯನ್ನು ಶೋಧಿಸುವ ಹಾಗೆ ಕನ್ನಡಿಗರಲ್ಲಿಯ ಕಲಾಭಿಮಾನ, ಕಲಾಭಿರುಚಿ, ಜೈನರ ಸಾಂಸ್ಕೃತಿಕ ಜೀವನ, ಕಲಾತ್ಮಕ ಬದುಕುಗಳ ಪ್ರತಿಬಿಂಬವಾಗಿರುವ ಜೈನ ಕಲೆಯ ಕುರಿತಾಗಿ ಬೆಳಕು ಚೆಲ್ಲವು ನಿರ್ದಿಷ್ಟ ಒಲವು ಈ ಸಂಶೋಧನೆಯಲ್ಲಿದೆ. ಜಾಗತಿಕ ಸಮರದಲ್ಲಿರುವ ನಮ್ಮ ಸಮುದಾಯಕ್ಕೆ ಹಿಂದಿನ ಪರಂಪರೆಯನ್ನು ಮರೆತು ಸಾಗುತ್ತಿರುವುದರಿಂದ ಈ ಚಿತ್ರಪರಂಪರೆಯು ಅಳಿವಿನಂಚಿಗೆ ತಲುಪಿದ್ದು ಇದರ ಸಂಶೋಧನೆಯಿಂದ ಬೆಳಕು ಚೆಲ್ಲಿ ಸಮುದಾಯಕ್ಕೆ ನಮ್ಮ ಹಿಂದಿನ ಪರಂಪರೆಯ ಮಹತ್ವವನ್ನು ತೆರೆದಿಡುವ ಅವಶ್ಯಕತೆ ಮಹತ್ವದ್ದಾಗಿದೆ. ಪ್ರಸ್ತುತ ಲಭ್ಯವಿರುವ ಜೈನ ಧರ್ಮದ ಭಿತ್ತಿ ಚಿತ್ರಗಳು, ಹಸ್ತಪ್ರತಿ ಚಿತ್ರಗಳು ಹಾಗೂ ಕಾಗದದ ಮೇಲಿನ ಚಿತ್ರಗಳ ಮೂಲ ಸ್ಥಳಗಳಿಗೆ ತೆರಳಿ ಅವುಗಳನ್ನು ಛಾಯಾಗ್ರಹಣ ಚಿತ್ರೀಕರಣಗಳ ಮೂಲಕ ಇವುಗಳ ದಾಖಲೀಕರಣ ಮಾಡಲಾಗಿದ್ದು ಕರ್ನಾಟಕವನ್ನು ವ್ಯಾಪ್ತಿಯಾಗಿರಿಸಿಕೊಂಡು ಅಧ್ಯಯನ ಮಾಡಲಾಗಿದೆ.

ತನ್ನ ವಿಚಾರ ಹಾಗೂ ಭಾವನೆಗಳನ್ನು ಅಭಿವ್ಯಕ್ತಿಸುವ ಚಮತ್ಕಾರವೇ ಕಲೆ.[೩] ಇದರ ಪೂರ್ವದಲ್ಲಿ ಮಾನವನು ತನ್ನ ಮನದ ತುಮುಲಗಳನ್ನು ಹೊರಹಾಕಲು ಕಷ್ಟದ ದಿನಗಳಿದ್ದವು. ಕಾಲಾನುಪರಿಸ್ಥಿತಿಗೆ ಒಗ್ಗುವ ಮಾನವನು ಮೊದಮೊದಲು ತನ್ನ ಮನದ ತುಮುಲಗಳನ್ನು ಸಂಜ್ಞೆಗಳ ಮೂಲ ವ್ಯವಹರಿಸಲು ಪ್ರಾರಂಭಿಸಿದನು. ದಿನಕಳೆದಂತೆ ಕಲ್ಲುಬಂಡೆಗಳ ಮೇಲೆ ಗೀರುವ, ಕುಟ್ಟುವುದರಿಂದ ಚಿತ್ರಗಳನ್ನು ಹಾಗೂ ವರ್ಣದ್ರವದ ಮೂಲಕ ಚಿತ್ರ ರಚಿಸಿ ತನ್ನ ಅನಿಸಿಕೆಗಳನ್ನು ಅಭಿವ್ಯಕ್ತಪಡಿಸಲು ಪ್ರಾರಂಭಿಸಿದನು. ಈ ದಾಖಲೆಗಳು ನಮಗೆ ಅವರ ವಿಚಾರಗಳು, ನಂಬಿಕೆಗಳು ಮತ್ತು ಸೌಂದರ್ಯೋಪಾಸನೆಯ ಬೆಳವಣಿಗೆಯಂತಹ ಆಂತರಿಕ ವಿಷಯಗಳನ್ನು ತಿಳಿಸಿಕೊಡುತ್ತವೆ. ಅಲ್ಲದೇ ಆ ಕಾಲದ ಸಾಮಾಜಿಕ, ಧಾರ್ಮಿಕ ಜೀವನದ ಬಗ್ಗೆ ಹಾಗೂ ಸಮಕಾಲೀನ ಪ್ರಾಣಿವರ್ಗ, ಸಸ್ಯವರ್ಗಗಳ ಕುರಿತು ತಿಳಿದುಕೊಳ್ಳುವ ಮಹತ್ವದ ಚಿತ್ರ ಲಿಪಿಗಳಾಗಿವೆ.[೪] ಆ ಕಾಲದ ಪಳಯುಳಿಕೆಗಳು ನಮಗೆ ಸರಿಯಾದ ಮಾಹಿತಿಯನ್ನು ಒದಗಿಸುವಲ್ಲಿ ಸಫಲವಾಗದಿದ್ದಾಗ ಅವರು ರಚಿಸಿದ ಭಿತ್ತಿಚಿತ್ರಗಳೇ ನಮಗೆ ಮೂಲ ಆಕರಗಳಾಗಿ ಅಂದಿನ ನಾಗರೀಕತೆಯ ಹೆಜ್ಜೆ ಗುರುತುಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ. ಅನುಭವ ಅಭಿವ್ಯಕ್ತಿಗಳ ಕಾರಣಕ್ಕೆ ಹುಟ್ಟುದ ಕಲೆಯು ಮುಂದುವರೆದು ಅವರ ಮನೋರಂಜನಾ ಪರಂಪರೆಯನ್ನು ಸೇರಿತು. ಕಲೆಯು ಹುಟ್ಟುತ್ತಾ ಒಂದೇ ಮಗ್ಗುಲಾದರೆ ಬೆಳೆಯುತ್ತಾ ರೆಂಬೆ ಕೊಂಬೆಗಳನ್ನೊಡೆದು ನಮ್ಮ ಸಂಸ್ಕೃತಿ ಸಂಸ್ಕಾರದ ಅಧ್ಯಯನಕ್ಕೆ ಮೂಲ ಆಕರವಾಗಿದೆ.

---

೦೩. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ, ಪು–೩

೦೪. Yashodhar Mathpal : Pre-Historic Rock Paintings of Bhimbetka, pno.1

ಅಧ್ಯಯನದ ಉದ್ದೇಶ

ಯಾವುದೇ ನಾಡಿನ ಅಥವಾ ದೇಶದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ನೆಲೆಗಳನ್ನು ಐತಿಹಾಸಿಕವಾಗಿ ಅಭ್ಯಾಸಿಸಬೇಕಾದರೆ ಮೂಲ ಆಕರ ಸಾಮಗ್ರಿಯಾಗಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಪ್ರಮುಖ ಸಾಕ್ಷಾಧಾರಗಳಾಗಿರುತ್ತದೆ. ಯಾವುದೇ ಧರ್ಮದ ಸಾಂಸ್ಕೃತಿಕ ಭಾಗವಾಗಿರುವ ಚಿತ್ರಕಲೆಯು ಆ ಧರ್ಮದ ನಿಲುವು, ಜನಜೀವನ ವ್ಯವಸ್ಥೆ, ಆಚಾರ–ವಿಚಾರಗಳ ಬಗ್ಗೆ ಪೂರಕ ಮಾಹಿತಿಯನ್ನು ಒದಗಿಸುತ್ತದೆ.

ಕ್ರಿಸ್ತಪೂರ್ವದಿಂದಲೂ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿರುವ ಜೈನ ಧರ್ಮವು ಕಲೆ ಮತ್ತು ಸಾಹಿತ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಕಲೆ ಮತ್ತು ಧರ್ಮವು ಕಲೆ ಮತ್ತು ಸಾಹಿತ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದೆ. ಕರ್ನಾಟಕದಲ್ಲಿ ಕಲೆ ಮತ್ತು ವಾಸ್ತುಶಿಲ್ಪ ಅಭಿವೃದ್ಧಿಗೆ ಜೈನರ ಕೊಡುಗೆ ಅಮೋಘವಾದದ್ದು, ಗಂಗರ, ಕದಂಬರ, ಚಾಲುಕ್ಯರ, ಹೊಯ್ಸಳರ ಹಾಗೂ ವಿಜಯನಗರ ಅರಸರ ಮತ್ತು ಮೈಸೂರು ಒಡೆಯರ ಕಾಲದಲ್ಲಿ ಜೈನರ ಕಲೆಗೆ ಅಧಿಕ ಮನ್ನಣೆ ದೊರೆಯಿತು. ಇದೇ ಸಮಯದಲ್ಲಿ ಜೈನ ಬಸದಿಗಳು, ಮಂದಿರಗಳು ನಿರ್ಮಾಣವಾದವು ಹಾಗೂ ಸಾಹಿತ್ಯ ಚಿತ್ರಕಲೆಗೆ ಅಧಿಕ ಪ್ರೋತ್ಸಾಹ ದೊರೆಯಿತು. ಇಂತಹುದರ ಅಧ್ಯಯನದಿಂದಾಗಿ ಭಿತ್ತಿಚಿತ್ರಗಳ ಮತ್ತು ಹಸ್ತಪ್ರತಿಗಳ ವಿವಿಧ ಶೈಲಿಯ ಪ್ರಭಾವ, ಪ್ರೇರಣೆ ಇತಿಹಾಸವನ್ನು ಇಂತಹ ಅಧ್ಯಯನಗಳಿಂದ ತಿಳಿಯಬಹುದಾಗಿದೆ. ಸೂಕ್ಷ್ಮ ಹಾಗೂ ವ್ಯವಸ್ಥಿತ ಅಧ್ಯಯನದಿಂದ ಆ ಕಲೆಗೆ ಒದಗಿಬರುವ ಆಪತ್ತು, ವಿಪತ್ತು, ಶ್ರೇಷ್ಠತೆಯ ಜೊತೆಗೆ ಈ ಧರ್ಮ ಚಿತ್ರಗಳು ನಮ್ಮ ಸಂಸ್ಕೃತಿ ಕೊಟ್ಟ ಕೊಡುಗೆಯನ್ನು ನಮ್ಮ ಕಲಾಪ್ರಪಂಚಕ್ಕೆ ಮನವರಿಕೆ ಮಡಿಕೊಡುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ಜೈನಧರ್ಮದ ಇತಿಹಾಸವನ್ನು ಕೆದಕುತ್ತಾ ಹೋದರೆ ಜೈನರು ಅನೇಕ ಮಠಮಂದಿರ ಹಾಗೂ ಬಸದಿಗಳ ನಿರ್ಮಾಣವನ್ನು ಮಾಡಿದ್ದಾರೆ. ಅಂತೆಯೇ ಧವಳ, ಜಯದವಳ, ಮಹಾದವಳ ಹಾಗೂ ಪ್ರತಿಷ್ಠಾ ತಿಳಕ, ತ್ರಿಲೋಕಾಸಾರ ಮತ್ತು ಮಹಾಪುರಾಣ, ಭರತೇಶ ವೈಭವ ಮುಂತಾದ ಹಸ್ತಪ್ರತಿಗಳು ಕರ್ನಾಟಕದಲ್ಲಿ ರಚನೆಗೊಂಡು ನೋಡಲು ಸಿಗುತ್ತವೆ. ಈ ಹಸ್ತಪ್ರತಿಗಳಲ್ಲಿರುವ ಚಿತ್ರಗಳ ಬಗ್ಗೆ ವಿಶೇಷ ಅಧ್ಯಯನ ನಡೆದದ್ದು ಕಂಡುಬರುವುದಿಲ್ಲ. ಕರ್ನಾಟಕದ ಸಮಗ್ರ ಚಿತ್ರಕಲೆಯ ಅಭ್ಯಾಸವಾಗಬೇಕಾದರೆ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಿದ್ದ ಜೈನರ ಕಾಲದ ಹಸ್ತಪ್ರತಿಯ ಚಿತ್ರಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಹಸ್ತಪ್ರತಿ ಹಾಗೂ ಭಿತ್ತಿಪರಂಪರೆಯಲ್ಲಿ ತನ್ನದೇ ಆದ ಪ್ರಭುತ್ವವನ್ನು ಸಾಧಿಸಿರುವ ಜೈನಕಲೆಯ ವಸ್ತು ವಿಷಯ, ಸಂಯೋಜನೆ, ವರ್ಣಗಾರಿಕೆ, ಬಣ್ಣಗಳ ಬಳಕೆ, ತಂತ್ರ, ಶೈಲಿ ಹಾಗೂ ಪ್ರಭಾವ

ಪ್ರೇರಣೆಯನ್ನು ಸೂಕ್ಷ್ಮವಾಗಿ ಗ್ರಹಿಸುವ, ತಾತ್ವಿಕವಾಗಿ ವಿವೇಚಿಸುವ, ವಿವರಣಾತ್ಮಕವಾಗಿ ವಿಶ್ಲೇಷಿಸುವ ಆಶಯವನ್ನು ಈ ಅಧ್ಯಯನದಿಂದ ಪ್ರಸ್ತುತ ಪಡಿಸುವ ಹಂಬಲವನ್ನು ಹೊಂದಲಾಗಿದೆ.

ಜೈನಧರ್ಮದ ಕುರಿತು ಹಲವಾರು ಅಧ್ಯಯನಗಳು ಇಲ್ಲಿಯವರೆಗೆ ನಡೆದಿವೆ. ಜೈನಧರ್ಮದ ಹಸ್ತಪ್ರತಿ ಹಾಗೂ ಭಿತ್ತಿಚಿತ್ರಗಳನ್ನು ದೃಶ್ಯಕಲೆಯ ತಳಹದಿಯ ಮೇಲೆ ವಿವೇಚಿಸುವ ಪ್ರಯತ್ನಗಳಾಗದಿರುವುದು ವಿಷಾದನೀಯ. ದೃಶ್ಯ ಕಲಾ ನೆಲೆಯಲ್ಲಿ ಹಲವಾರು ಬಿಡಿ ಬಿಡಿಯ ಅಧ್ಯಯನಗಳಾಗಿದ್ದು, ತುಂಡು ಬರಹಗಳು, ಪತ್ರಿಕಾ ಲೇಖನಗಳನ್ನು ಬಿಟ್ಟರೆ ಮಹಾಸಂಶೋಧನಾ ಪ್ರಬಂಧಗಳ ಮಟ್ಟಿಗೆ ಬೆಳಕು ಚೆಲ್ಲುವ ಪ್ರಯತ್ನಗಳಾಗಿಲ್ಲ. ಆದ ಕಾರಣ 'ಕರ್ನಾಟಕ ಜೈನ ಚಿತ್ರ ಪರಂಪರೆ' ಎಂಬ ಶೀರ್ಷಿಕೆಯನ್ನಿಟ್ಟುಕೊಂಡು ಕರ್ನಾಟಕದಲ್ಲಿಯ ಹಸ್ತಪ್ರತಿಗಳ ಹಾಗೂ ಭಿತ್ತಿ ಚಿತ್ರಗಳ ಸಮಗ್ರ ಅಧ್ಯಯನವನ್ನು ಮಾಡುವ ಹಾಗೂ ಜೈನರು ಕರ್ನಾಟಕದ ಕಲಾವಲಯಕ್ಕೆ ನೀಡಿದ ಕಲಾ ಕಾಣಿಕೆಯನ್ನು ಸಂಪೂರ್ಣವಾಗಿ ವಿವೇಚಿಸುವ ಸದುದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಜೈನಧರ್ಮವನ್ನು ಚಾರಿತ್ರಿಕವಾಗಿ ಗಮನಿಸಿದಾಗ ಕದಂಬರಿಂದ ಮೈಸೂರು ಒಡೆಯರ ಕಾಲದವರೆಗೆ ನಮ್ಮ ನಾಡಿನಲ್ಲಿ ಜೈನಧರ್ಮದ ಪರಂಪರೆ ಬೆಳೆದುಬಂದಿದೆ. ಕರ್ನಾಟಕವು ಹೆಚ್ಚು ಜೈನಧರ್ಮ ಕ್ಷೇತ್ರದ ನೆಲೆಗಳನ್ನು ಹೊಂದಿರುವ ರಾಜ್ಯವಾಗಿದೆ. ಕರ್ನಾಟಕದಲ್ಲಿ ಜೈನಚಿತ್ರ ಪ್ರಕಾರಗಳು ಅಧಿಕವಾಗಿದ್ದು, ಶೈಲಿ, ವಿನ್ಯಾಸ ಮತ್ತು ವಸ್ತು ವಿಷಯಗಳು ವೈವಿಧ್ಯತೆಯಿಂದ ಕೂಡಿವೆ. ಈ ವೈವಿಧ್ಯತೆಗೆ ಪ್ರಮುಖ ಕಾರಣ ಆಯಾ ಪ್ರದೇಶದ ಸಾಂಸ್ಕೃತಿಕ ಪರಂಪರೆ ಮತ್ತು ಭೌಗೋಳಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಹಿನ್ನೆಲೆಗಳು ಕಾರಣವೆನಿಸಬಹುದು. ದಕ್ಷಿಣ ಕರ್ನಾಟಕದ ಶ್ರವಣಬೆಳಗೊಳ, ಮೂಡಬಿದರೆ, ಕಾರ್ಕಳ ಮುಂತಾದವು ವಿಶೇಷವಾಗಿದ್ದು, ಕರ್ನಾಟಕದ ವ್ಯಾಪ್ತಿಗೆ ಈ ಅಧ್ಯಯನ ಸೀಮಿತಗೊಳಿಸಿಕೊಂಡಿರುವುದರಿಂದ ಸಾಂದರ್ಭಿಕವಾಗಿ ಇತರೆಡೆಯ ಭಿತ್ತಿ ಚಿತ್ರಗಳನ್ನು ಹಾಗೂ ಹಸ್ತಪ್ರತಿಗಳನ್ನು ಗಮನಿಸಿ ಕರ್ನಾಟಕ ಸಾಂಸ್ಕೃತಿಕ ಲೋಕಕ್ಕೆ ಜೈನ ಚಿತ್ರಕಲೆಯ ಮಹತ್ವವೇನು ಎಂಬುದನ್ನು ತಿಳಿಸಿಕೊಡುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಇದುವರೆಗೂ ಚಿತ್ರಕಲಾ ಇತಿಹಾಸದ ಪುಟಗಳನ್ನು ಸೇರದ ಅನೇಕ ಜೈನ ಚಿತ್ರಕಲಾ ಸಂಗತಿಗಳು, ಚಿತ್ರ ನೆಲೆಗಳು, ವಸ್ತು ವಿಷಯಗಳು ಕರ್ನಾಟಕ ವ್ಯಾಪ್ತಿಯಲ್ಲಿದ್ದು ಇವುಗಳನ್ನು ಪ್ರಸ್ತುತ ಅಧ್ಯಯನದ ಮುಖೇನ ಇಲ್ಲಿಯವರೆಗೆ ಅನ್ವೇಷಣೆಯಾಗಿರುವ ಹಾಗೂ ಆಗದಿರುವ ಜೈನ ಚಿತ್ರಗಳ ನೆಲೆಗಳ ಪ್ರಾಥಮಿಕ ದಾಖಲೀಕರಣವನ್ನು ಮಾಡುವ ಉದ್ದೇಶವನ್ನು ಈ ಅಧ್ಯಯನ ಹೊಂದಿದೆ.

ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರೆಯಬಹುದಾದ ಭಿತ್ತಿಚಿತ್ರಗಳು ಹಾಗೂ ಹಸ್ತಪ್ರತಿ ಚಿತ್ರಗಳ ನೆಲೆಗಳನ್ನು ಆಧಾರವಾಗಿಟ್ಟುಕೊಂಡು ವಿಭಜಿಸಿ ವಿವರಿಸುವ ಹಾಗೂ ಇವರುಗಳ

ವಿಶೇಷತೆಗಳನ್ನು ತಿಳಿಯುವ ಉದ್ದೇಶವನ್ನು ಈ ಅಧ್ಯಾಯದ ಮುಖೇನ ಪ್ರಸ್ತುತಪಡಿಸುವ ಉದ್ದೇಶವನ್ನು ಹೊಂದಲಾಗಿದೆ.

ಜೈನಧರ್ಮದ ನೆಲೆಗಳಲ್ಲಿ ದೊರೆಯುವ ಭಿತ್ತಿ ಹಾಗೂ ಹಸ್ತಪ್ರತಿ ಚಿತ್ರಗಳ ಉದ್ದೇಶ, ವಸ್ತುವಿಷಯ, ಶೈಲಿ, ಪ್ರಭಾವ ಹಾಗೂ ಪ್ರೇರಣೆ, ಸಂರಕ್ಷಣೆಯ ಸಮಗ್ರ ತುಲನಾತ್ಮಕ, ತಾರ್ಕಿಕ ವಿಶ್ಲೇಷಣೆಯನ್ನು ಮಾಡುವ ಪ್ರಯತ್ನವನ್ನು ಈ ಅಧ್ಯಯನದ ಮೂಲಕ ಹೊಂದಲಾಗಿದೆ. ಇದುವರೆಗೂ ಈ ವಿಷಯದ ಮೇಲಾದ ಸಂಶೋಧನೆಯ ಪ್ರಕಟಿತ ಹಾಗೂ ಅಪ್ರಕಟಿತ ಲೇಖನ, ಶೋಧಗಳ, ಧೃಡ ಮಾಹಿತಿ ಅನುಸಾರ ಆಯಾ ನೆಲಗಳ ಚಿತ್ರಗಳಲ್ಲಿಯ ಸಾಂಸ್ಕೃತಿಕ, ವೈಚಾರಿಕ ಹಾಗೂ ಕಲೆಯ ಸತ್ವಗಳನ್ನು ವಿಮರ್ಶಿಸಿ ವಿಶ್ಲೇಷಿಸುವ ಬದ್ಧತೆಯನ್ನು ಈ ಅಧ್ಯಯನವು ಹೊಂದಿದೆ. ಇಷ್ಟೇ ಅಲ್ಲದೆ ಇಲ್ಲಿವರೆಗೆ ಪ್ರಸ್ತುತ ಅಧ್ಯಯನದ ಕುರಿತಾಗಿ ಬಂದ ಪ್ರಕಟಿತ ಲೇಖನಗಳನ್ನು, ಪುಸ್ತಕಗಳನ್ನು, ಅಪ್ರಕಟಿತ ಮಹಾ ಪ್ರಬಂಧಗಳನ್ನು ತೌಲನಿಕವಾಗಿ ಮರುಚಿಂತನೆಯನ್ನು ಮಾಡುವ ಸದುದ್ದೇಶವನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

'ಕರ್ನಾಟಕ ಜೈನ ಚಿತ್ರ ಪರಂಪರೆ' ಎಂಬ ಶೀರ್ಷಿಕೆಯ ಈ ಸಂಶೋಧನಾ ಪ್ರಬಂಧವು ಪ್ರಸ್ತುತ ಒಟ್ಟು ಎಂಟು ಅಧ್ಯಾಯಗಳನ್ನಾಗಿ ವಿಂಗಿಡಿಸಿಕೊಂಡಿದ್ದು ಪ್ರತಿಯೊಂದು ಅಧ್ಯಾಯವನ್ನು ಸವಿಸ್ತಾರವಾಗಿ, ತೌಲನಿಕ, ತರ್ಕ, ವಿಮರ್ಶೆ, ಸೈದ್ಧಾಂತಿಕ ನಿಲುವುಗಳ ಒಂದು ನಿಕೃಷ್ಟ ಸಂಶೋಧನಾ ಬರಹ ಇದಾಗಿದ್ದು, ಪ್ರತಿಯೊಂದು ಅಧ್ಯಾಯಗಳಲ್ಲಿ ಚರ್ಚೆಗೊಂಡ ಸಂಗತಿಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿವರಿಸಲಾಗಿದೆ.

ಮೊದಲನೇ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತಾದ ಈ ಅಧ್ಯಾಯದಲ್ಲಿ ಕರ್ನಾಟಕ ಜೈನ ಚಿತ್ರಕಲಾ ಪರಂಪರೆಯ ಚಿತ್ರಕಲೆಯ ಉದ್ದೇಶಗಳನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಯಾವ ಕಾರಣಕ್ಕಾಗಿ ಈ ಅಧ್ಯಯನ ಮಹತ್ವದ್ದಾಗಿದೆ ಎಂಬುದನ್ನು ತಿಳಿಸುತ್ತ ಉದ್ದೇಶಗಳನ್ನು ಚರ್ಚಿಸಲಾಗಿದೆ. ಹಾಗೆಯೇ ಈ ಅಧ್ಯಯನದ ಸ್ವರೂಪದ ಕುರಿತು ಬೇರೆ ಬೇರೆ ಅಧ್ಯಾಯಗಳ ಸ್ಥೂಲ ನೋಟವನ್ನು ಕಟ್ಟಿಕೊಡಲಾಗಿದೆ. ಹಾಗೂ ಪ್ರಸ್ತುತ ಅಧ್ಯಯನದ ಕುರಿತು ಈ ಹಿಂದೆ ನಡೆದ ವಿದ್ವಾಂಸರ ಅಧ್ಯಯನಗಳ ಸ್ಥೂಲ ಸಮೀಕ್ಷೆಯನ್ನು ಮಾಡಲಾಗಿದೆ. ಹಾಗೆಯೇ ಈ ಅಧ್ಯಯನದ ವ್ಯಾಪ್ತಿಯನ್ನು ಸಹ ಸ್ಪಷ್ಟಪಡಿಸಲಾಗಿದೆ. ಜೊತೆಗೆ ಈ ಸಂಶೋಧನಾಧ್ಯಯನಕ್ಕೆ ಬಳಸಿದ ಸಂಶೋಧನೆಯ ವಿಧಾನಗಳನ್ನು ಸಹ ಸ್ಥೂಲವಾಗಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯವು ಕರ್ನಾಟಕ ಜೈನ ಚಿತ್ರಕಲೆಯ ಸಾಹಿತ್ಯ, ಐತಿಹಾಸಿಕ ನೆಲೆ-ಹಿನ್ನೆಲೆ ತಳಹದಿಯನ್ನು ಕುರಿತು ಚರ್ಚಿಸುವ ಸಂಗತಿಯಾಗಿದ್ದು, ಜೈನ ಸಾಹಿತ್ಯದ ಮಹಾಗ್ರಂಥಗಳಲ್ಲಿನ

ಜೈನ ಚಿತ್ರಕಲೆಯ ಉಲ್ಲೇಖವನ್ನು ಹಾಗೂ ಜೈನ ಚಿತ್ರಕಲೆಯ ಉಲ್ಲೇಖವನ್ನು ಹಾಗೂ ಜೈನ ಚಿತ್ರಕಲೆ ಇತಿಹಾಸವನ್ನು ಸಾಹಿತ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಈ ಎರಡನೇ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಮೂರು ಜೈನ ಭಿತ್ತಿ ಚಿತ್ರಕಲೆಯ ಕುರಿತಾಗಿದ್ದು, ಜೈನ ಬಸದಿ ಮತ್ತು ಮಠಗಳು ಹಾಗೂ ಜೈನ ಶ್ರಾವಕರ ಮನೆಗಳಲ್ಲಿಯ ಭಿತ್ತಿಚಿತ್ರಗಳ ಕುರಿತಾಗಿ ಈ ಅಧ್ಯಯನದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜೈನ ಹಸ್ತಪ್ರತಿ ಚಿತ್ರಕಲೆಯ ಕುರಿತಾಗಿ ವಿವೇಚಿಸಲಾಗಿದ್ದು, ಕರ್ನಾಟಕದ ಜೈನ ಮಠಗಳಲ್ಲಿಯ ಸಚಿತ್ರ ಹಸ್ತಪ್ರತಿಗಳ ತಾಂತ್ರಿಕ ಅಂಶಗಳು, ಆಕಾರಗಳು, ರೇಖಾ ವಿನ್ಯಾಸ, ನಿಲುವು, ಬಣ್ಣ ಹಾಗೂ ಸಂಕೇತಗಳನ್ನು ದೃಶ್ಯಾತ್ಮಕ ನೆಲೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದು ಜೈನ ಸಂಕೀರ್ಣ ಚಿತ್ರಕಲೆ ಎಂದಾಗಿದ್ದು ಈ ಅಧ್ಯಾಯದಲ್ಲಿ ಜೈನಧರ್ಮದ ಸಂಕೀರ್ಣ ಮಾಧ್ಯಮದ ಚಿತ್ರಕಲೆಯ ಕುರಿತಾಗಿರುವುದರಿಂದ ತೀರ್ಥಂಕರರ, ಯಕ್ಷ-ಯಕ್ಷಿಣಿಯರ ಚಿತ್ರಪಟ, ಕಾಗದ ಮೇಲಿನ ಜಾಮೀತಿಕ ಚಿತ್ರಗಳು, ವರ್ಣ ಮೂರ್ತಿ ಚಿತ್ರಗಳು ಹಾಗೂ ಮುದ್ರಿತ ಜೈನ ಗ್ರಂಥಗಳ ಚಿತ್ರಗಳನ್ನು ಕುರಿತಾಗಿದೆ.

ಅಧ್ಯಾಯ ಆರು ಜೈನ ಚಿತ್ರಕಲೆಯ ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ ಮತ್ತು ಗುಣಲಕ್ಷಣಗಳು ಇದರ ಕುರಿತಾಗಿದ್ದು, ಜೈನ ಚಿತ್ರಕಲೆಯ ತಾಂತ್ರಿಕ ಅಂಶಗಳನ್ನೊಳಗೊಂಡ ಆಕಾರಗಳ ರೇಖಾ ವಿನ್ಯಾಸ, ನಿಲುವು, ಶೈಲಿಯ ಪ್ರಭಾವ, ಪ್ರೇರಣೆ, ಚಿತ್ರಕಲೆಯ ತಂತ್ರಗಾರಿಕೆ ಹಾಗೂ ಅವುಗಳ ಗುಣಲಕ್ಷಣಗಳ ಕುರಿತಾಗಿದೆ.

ಅಧ್ಯಾಯ ಏಳು ಜೈನ ಚಿತ್ರಕಲೆಯ ಸ್ಥಿತಿಗತಿ, ಆಪತ್ತು-ವಿಪತ್ತು ಮತ್ತು ಸಂರಕ್ಷಣೋಪಾಯಗಳ ಕುರಿತಾಗಿದ್ದು ಈ ಪ್ರಸ್ತುತ ಅಧ್ಯಾಯದಲ್ಲಿ ಜೈನ ಚಿತ್ರಕಲೆಗೆ ಬಂದೊಗುವ ಆಪತ್ತುಗಳ ವಿಧಗಳು, ಪರ್ಯಾಯ ವ್ಯವಸ್ಥೆ, ಸಂರಕ್ಷಣೋಪಾಯಗಳ ಕುರಿತಾಗಿ ಅಧ್ಯಯನ ಮಾಡಲಾಗುವುದು.

ಅಧ್ಯಾಯ ಎಂಟು ಸಮಾರೋಪವಾಗಿದ್ದು ಈ ಅಧ್ಯಾಯದಲ್ಲಿ ಮೇಲಿನ ಏಳೂ ಅಧ್ಯಾಯಗಳ ಸಂಶೋಧನಾ ಫಲವಾಗಿ ಕಂಡುಕೊಂಡ ಫಲಿತಗಳ ವಿವರಣೆ, ಮೌಲಿಕವಾದ ಅಂಶಗಳ ವಿಶ್ಲೇಷಣೆಯ ವಿವರಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಇಲ್ಲಿಯವರೆಗೆ ನಡೆದ ಸಂಶೋಧನ ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನೆಯ ಅಧ್ಯಯನ ಪ್ರಾರಂಭಗೊಂಡಿರುವುದು ತೊಂಭತ್ತರ ದಶಕದಿಂದೀಚೆಗೆ, ಬಹಳಷ್ಟು ತಡವಾಗಿ ದೃಶ್ಯಕಲೆಗಳ ಕುರಿತು ಸಂಶೋಧನಾ ಅಧ್ಯಯನ

ವಿಶೇಷವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಫಿಲ್., ಪಿಎಚ್.ಡಿಯಂತಹ ಪದವಿಯ ಹಿನ್ನೆಲೆಯಲ್ಲಿ ಪ್ರಾರಂಭವಾಗಿರುವುದು ಕಂಡುಬರುತ್ತದೆ. ಇಷ್ಟು ತಡವಾಗಿ ಈ ಕ್ಷೇತ್ರದಲ್ಲಿ ಸಂಶೋಧನೆ ನಡೆಯಲು ಮುಖ್ಯಕಾರಣ ಚಿತ್ರಕಲೆಯ ಅಧ್ಯಯನದ ಕೋರ್ಸ್‌ಗಳು ಕರ್ನಾಟಕದಲ್ಲಿ ಎಸ್.ಎಸ್.ಎಲ್.ಸಿ. ಬೋರ್ಡ್‌ನಲ್ಲಿ ನಡೆಯುತ್ತಿದ್ದವು.

ವಿಶೇಷವಾಗಿ ಈ ಎಲ್ಲಾ ಕೋರ್ಸ್‌ಗಳು ಡಿಪ್ಲೋಮಾ ಹಂತಕ್ಕೆ ಸೀಮಿತವಾಗಿದ್ದವು. ಈ ಕೋರ್ಸ್‌ಗಳನ್ನು ಮುಗಿಸಿದ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರಾಗಿ ನೇಮಕಗೊಳ್ಳುತ್ತಿದ್ದರು. ಇನ್ನುಳಿದವರು ಹವ್ಯಾಸಿ ಚಿತ್ರಕಲಾವಿದರಾಗಿ, ಕಮರ್ಶಿಯಲ್ ಆರ್ಟಿಸ್ಟಾಗಿ ವೃತ್ತಿಜೀವನವನ್ನು ನಡೆಸಿಕೊಂಡು ಬರುತ್ತಿದ್ದರು. ಈ ಐದು ವರ್ಷದ ಡಿಪ್ಲೋಮಾ ಪಾಸಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗೆ ಸೇರಲು ಅವಕಾಶವಿರುತ್ತಿರಲಿಲ್ಲ. ಅವರು ಪದವಿ ತರಗತಿಗೆ ಸೇರಲೇಬೇಕೆಂದರೆ ಒಂದು ವರ್ಷದ ಬ್ರಿಡ್ಜ್‌ಕೋರ್ಸ್‌ನ್ನು ಕಡ್ಡಾಯವಾಗಿ ಮಾಡಿಕೊಂಡಲ್ಲಿ ಮಾತ್ರ ಸ್ನಾತಕೋತ್ತರ ಹಂತಕ್ಕೆ ಹೋಗಲು ಅವಕಾಶವಿದ್ದ ಕಾರಣ ಬಹುಪಾಲು ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆಯಲು ಸಾಧ್ಯವಾಗುತ್ತಿರಲಿಲ್ಲ.

ಇನ್ನು ಸ್ನಾತಕೋತ್ತರ ಹಂತದಲ್ಲಿ ದೃಶ್ಯಕಲೆ ಅಧ್ಯಯನಕ್ಕೆ ಕರ್ನಾಟಕದ ಯಾವ ವಿಶ್ವವಿದ್ಯಾಲಯಗಳಲ್ಲಿಯೂ ಸ್ವತಂತ್ರವಾದ ದೃಶ್ಯಕಲಾ ಅಧ್ಯಯನದ ವಿಭಾಗಗಳು ಪ್ರಾರಂಭಗೊಳ್ಳಲಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಮುಖ್ಯವಾಗಿ ಹಿಂದುಳಿಯಲು ಕಾರಣವಾಯಿತು. ಪದವಿಯ ಹಂತದಲ್ಲಿ ಬೆರಳೆಣಿಕೆಯಷ್ಟು ಲಲಿತಕಲಾ ಮಹಾವಿದ್ಯಾಲಯಗಳು ಪ್ರಾರಂಭಗೊಂಡಿದ್ದು, ಅವು ಹೆಚ್ಚಾಗಿ ಪದವಿಹಂತಕ್ಕೆ ಮಾತ್ರ ಸೀಮಿತಗೊಂಡು ಕಾರ್ಯನಿರ್ವಹಿಸಿವೆ. ಅಲ್ಲಿ ಸ್ನಾತಕೋತ್ತರ ದೃಶ್ಯಕಲೆಗಳ ಅಧ್ಯಯನಕ್ಕೆ ಅವಕಾಶಗಳು ಲಭ್ಯವಾಗದೇ ಇರುವುದು ಇನ್ನೊಂದು ಪ್ರಮುಖ ಕಾರಣವಾಗಿದೆ ಎನ್ನಬಹುದು.

ಧಾರವಾಡ, ಗದಗ, ಗುಲಬರ್ಗಾ, ಮೈಸೂರು, ದಾವಣಗೆರೆ ಹಾಗೂ ಬೆಂಗಳೂರು ಈ ಕೆಲವು ಸ್ಥಳಗಳಲ್ಲಿ ಸ್ನಾತಕೋತ್ತರ ದೃಶ್ಯಕಲಾ ಪದವಿ ಕೋರ್ಸ್‌ಗಳು ಪ್ರಾರಂಭಗೊಂಡರೂ ಈ ಕೋರ್ಸ್‌ಗಳು ಪ್ರಾಯೋಗಿಕತೆಗೆ ಹೆಚ್ಚು ಮಹತ್ವ ಕೊಟ್ಟ ಕಾರಣವಾಗಿ ಹಾಗೂ ಅಲ್ಲಿ ಇದ್ದುದು ಈ ಕ್ಷೇತ್ರದಲ್ಲಿ ದೃಶ್ಯಕಲೆಗಳ ಶಿಕ್ಷಣವೆಂದರೆ ಕೇವಲ ಪ್ರಾಯೋಗಿಕವಾದ ಕಲೆಗಳ ಅಧ್ಯಯನ ಎಂಬ ಪ್ರಧಾನ ದೃಷ್ಟಿಕೋನವು ಈ ಹಂತದಲ್ಲಿ ಪ್ರಮುಖವಾಗಿತ್ತು. ಹೀಗಾಗಿ ಈ ಕ್ಷೇತ್ರದಲ್ಲಿ ಸಂಶೋಧನಾ ಪ್ರಜ್ಞೆಯ ಕೊರತೆಯಿಂದಾಗಿ ಕೇವಲ ಸ್ನಾತಕೋತ್ತರ ಪದವಿಗಳನ್ನುಮಾತ್ರ ವಿದ್ಯಾರ್ಥಿಗಳು ಪಡೆದುಕೊಳ್ಳುವಂತಾಯಿತು. ಸ್ನಾತಕೋತ್ತರ ನಂತರದ ಎಂ.ಫಿಲ್, ಪಿಎಚ್.ಡಿ. ಯಂತಹ ಅಧ್ಯಯನಗಳಿಗೆ ಇಲ್ಲಿ ಅವಕಾಶವಿಲ್ಲದಂತಾಗಿ ಈ ಕ್ಷೇತ್ರದ ಸಂಶೋಧನೆ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆಯಲಿಲ್ಲ.

ಈ ಪರಂಪರೆ ತೊಂಭತ್ತರ ದಶಕದವರೆಗೂ ಮುಂದುವರೆದುಕೊಂಡು ಬಂದಿತು. ತೊಂಭತ್ತರ ದಶಕದ ನಂತರದಲ್ಲಿ ೧೯೯೭ರಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ದೃಶ್ಯಕಲಾ ವಿಭಾಗದಲ್ಲಿ ಎಂ.ಫಿಲ್., ಪಿಎಚ್.ಡಿ ಸಂಶೋಧನ, ಅಧ್ಯಯನ ಪ್ರಾರಂಭಗೊಳ್ಳುವುದರ ಮೂಲಕ ಈ ವಾತಾವರಣ ಸ್ವಲ್ಪ ಬದಲಾಗಿ ಸ್ನಾತಕೋತ್ತರ ಹಂತದಲ್ಲಿ ಸಂಶೋಧನಾಧ್ಯಯನಕ್ಕೆ ಅವಕಾಶ ದೊರೆಯಿತು. ಇಲ್ಲಿ ಸ್ನಾತಕೋತ್ತರ ಹಂತದಲ್ಲಿ ಪ್ರಾಯೋಗಿಕತೆಗೆ ಮತ್ತು ಸಿದ್ಧಾಂತ ಪತ್ರಿಕೆಗಳಿಗೆ ಸಮಾನಾವಕಾಶ ಸಿಕ್ಕ ಕಾರಣ ದೃಶ್ಯಕಲಾ ಸಂಶೋಧನೆಯ ಹೊಸಪರಂಪರೆಗೆ ಈ ವಿಶ್ವವಿದ್ಯಾಲಯ ಹೊಸದಾರಿಯನ್ನು ಹಾಕಿಕೊಟ್ಟಿತು.

ನಂತರದಲ್ಲಿ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೃಶ್ಯಕಲಾ ಸಂಶೋಧನೆಯ ಅಧ್ಯಯನಕ್ಕೆ ಅವಕಾಶಗಳು ದೊರಕಿವೆ. ಈ ಕ್ಷೇತ್ರದಲ್ಲಿ ಸಂಶೋಧನಾಧ್ಯಯನವು ಈಗ ವಿಶ್ವವಿದ್ಯಾಲಯ ಮಟ್ಟದಲ್ಲಿ ಇನ್ನುಳಿದ ವಿಷಯಗಳಂತೆ ದೃಶ್ಯಕಲೆಗಳ ಸಂಶೋಧನೆಗೆ ಪ್ರಾಧಾನ್ಯ ಸಿಕ್ಕ ಕಾರಣವಾಗಿ ಈಗ ಸಾಕಷ್ಟು ವಿದ್ಯಾರ್ಥಿಗಳು, ಅಧ್ಯಾಪಕರು ತಮ್ಮನ್ನು ದೃಶ್ಯಕಲಾ ಕ್ಷೇತ್ರದ ಸಂಶೋಧನಾಧ್ಯಯನದಲ್ಲಿ ತೊಡಗಿಸಿಕೊಳ್ಳಲು ಕಾರಣವಾಗಿದೆ. ಹೀಗೆ ತೊಂಭತ್ತರ ದಶಕದಿಂದ ಪ್ರಾರಂಭವಾದ ದೃಶ್ಯಕಲಾ ಅಧ್ಯಯನದ ಸ್ಥೂಲವಾದ ನೋಟವನ್ನು ಇಲ್ಲಿ ನೋಡಬಹುದಾಗಿದೆ. ಮುಖ್ಯವಾಗಿ ಎಂ.ಫಿಲ್. ಪದವಿಗಾಗಿ, ಪಿಎಚ್.ಡಿ. ಪದವಿಗಾಗಿ ನಡೆಸಿದ ಅಧ್ಯಯನಗಳು ಹಾಗೂ ಡಿ.ಲಿಟ್ ಪದವಿಗಾಗಿ ಸಂಶೋಧನಾ ಅಧ್ಯಯನ ಪ್ರಾರಂಭವಾಗಿದ್ದು, ಅವುಗಳಲ್ಲಿ ಇಲ್ಲಿ ೧. ಪಿಎಚ್.ಡಿ. ಪ್ರಬಂಧಗಳು ೨. ಎಂ.ಫಿಲ್. ಪ್ರಬಂಧಗಳು ೩. ಡಿ.ಲಿಟ್ ಪ್ರಬಂಧಗಳು ಎಂದು ವಿಂಗಡಿಸಿ ನೋಡಬಹುದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಯ ಕುರಿತು ಡಾ. ಎಸ್. ಸಿ. ಪಾಟೀಲ ಅವರು ೧೯೮೩ರಲ್ಲಿ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ–ಒಂದು ಅಧ್ಯಯನ**"[೫] ಎಂಬ ಕಿರು ಸಂಶೋಧನ ಪ್ರಬಂಧವನ್ನು ಸ್ನಾತಕೋತ್ತರ ಶಿಕ್ಷಣ ಪದವಿಯ ಅಂಶಿಕ ಅವಶ್ಯಕತೆಗಾಗಿ ೧೯೮೩ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಸಲ್ಲಿಸಿದ್ದು, ಇದು ದೃಶ್ಯಕಲಾ ಕ್ಷೇತ್ರದಲ್ಲಿ, ವಿಶ್ವವಿದ್ಯಾಲಯ ಹಂತದಲ್ಲಿ ಕಲಾವಿದರೊಬ್ಬರು ದೃಶ್ಯಕಲೆಯಲ್ಲಿ ನಡೆಸಿದ ಪ್ರಥಮ ಚಿತ್ರಕಲಾ ಶಿಕ್ಷಣದ ಕಿರು ಸಂಶೋಧನಾ ಅಧ್ಯಯನವಾಗಿದೆ.

೧೯೮೭ರಲ್ಲಿ ಡಾ. ಚೂಡಾಮಣಿ ನಂದಗೋಪಾಲರ **ಡ್ಯಾನ್ಸ್ ಆಂಡ್ ಅದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿಂಗ್ಸ್**[೬] ಎಂಬ ಪಿಹೆಚ್.ಡಿ ಮಹಾಪ್ರಬಂಧವು ಮೈಸೂರು ವಿಶ್ವವಿದ್ಯಾಲಯದಿಂದ ಬಂದಿದೆ. ಇಲ್ಲಿ ವಿಶೇಷವಾಗಿ ನೃತ್ಯವನ್ನು ಪ್ರಮುಖವಾಗಿ ಅಧ್ಯಯನಕ್ಕೆ

---

೦೫. ಎಸ್. ಸಿ. ಪಾಟೀಲ : ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ೧೯೮೩.

೦೬. ಡಾ. ಚೂಡಾಮಣಿ ನಂದಗೋಪಾಲ: "ಡ್ಯಾನ್ಸ್ ಅಂಡ್ ಆದರ್ ಫೈನ್ ಆರ್ಟ್ಸ್ ಇನ್ ಕರ್ನಾಟಕ ಸ್ಕಲ್ಪಚರ್ ಅಂಡ್ ಪೇಂಟಿ–ಂಗ್ಸ್" ಮೈಸೂರು ವಿಶ್ವವಿದ್ಯಾಲಯ, ಮೈಸೂರು. ೧೯೮೭

ಒಳಪಡಿಸಲಾಗಿದ್ದು, ಪೂರಕವಾಗಿ ಚಿತ್ರಕಲೆಯ ಕುರಿತು ಪ್ರಸ್ತಾಪಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಿಂದ "ಡಾ. ಬಿ. ಕೆ. ಹಿರೇಮಠರ **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೭] ಎಂಬ ಪಿಎಚ್.ಡಿ. ಪ್ರಬಂಧ ಬಂದಿದ್ದು, ಇದರಲ್ಲಿ ಸಹ ಚಿತ್ರಕಲೆಯ ಕುರಿತು ಒಂದೆರಡು ಅಧ್ಯಾಯಗಳು ಪ್ರಾಸಂಗಿಕವಾಗಿ ಚರ್ಚೆಗೊಂಡಿವೆ. ಆದರೆ ಇವರ ಮುಖ್ಯವಾದ ಅಧ್ಯಯನವು ಕನ್ನಡ ಹಸ್ತಪ್ರತಿಗಳ ಕುರಿತ ಅಧ್ಯಯನವಾಗಿದೆ. ಇವು ಪ್ರಾರಂಭಿಕ ಹಂತದಲ್ಲಿ ನಡೆದ ಒಂದೆರಡು ಸಣ್ಣ ಪ್ರಯತ್ನಗಳಾಗಿವೆ.

೧. ಪಿಹೆಚ್.ಡಿ. ಮಹಾಪ್ರಬಂಧಗಳು

ಚಿತ್ರಕಲೆಯನ್ನೇ ಕುರಿತು ಕರ್ನಾಟಕದಲ್ಲಿ ಸಂಶೋಧನಾಧ್ಯಯನವು ಪೂರ್ಣಪ್ರಮಾಣದಲ್ಲಿ ಕಂಡುಬಂದಿರುವುದು ೧೯೯೧ರಲ್ಲಿ. ಇಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕ ಜನಪದ ಚಿತ್ರಕಲೆ**[೮] ಈ ಮಹಾಪ್ರಬಂಧವನ್ನು ಡಾ. ಎಸ್. ಸಿ. ಪಾಟೀಲರು ಸಿದ್ಧಪಡಿಸಿದ್ದು ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ರಲ್ಲಿ ಡಾ. ಅ. ಲ. ನರಸಿಂಹನ್ ಅವರು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ **ಕರ್ನಾಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು**[೯], ೧೯೯೭ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲಾ ಚಿತ್ರಗಳು**[೧೦], ಕನ್ನಡ ವಿಶ್ವವಿದ್ಯಾಲಯಕ್ಕೆ, ೧೯೯೭ರಲ್ಲಿ ಡಾ. ಪುಷ್ಪಾ ದ್ರಾವಿಡ ಇವರು ಮಂಡಿಸಿದ **ಅನಿವಾಸಿ ಭಾರತೀಯ ಕಲಾವಿದ ದಿ.ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು**[೧೧], ೨೦೦೧ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ**[೧೨], ೨೦೦೨ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕ ಜನಪದ ಶಿಲ್ಪಕಲೆ : ಒಂದು ಅಧ್ಯಯನ**[೧೩], ಡಾ.

---

೦೭. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ., ಧಾರವಾಡ. ೧೯೮೭

೦೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ. ೧೯೯೧.

೦೯. ಡಾ. ಅ. ಲ. ನರಸಿಂಹನ್ : ಕರ್ನಾಟಕ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೮.

೧೦. ಡಾ. ಸಂಪದಾ ಭಟ್ : ಹಿಂದೂಸ್ಥಾನಿ ಸಂಗೀತ ಮತ್ತು ರಾಗಮಾಲಾ ಚಿತ್ರಗಳು, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೧೯೯೮.

೧೧. ಡಾ. ಪುಷ್ಪಾ ದ್ರಾವಿಡ : ಅನಿವಾಸಿ ಭಾರತೀಯ ಕಲಾವಿದ ದಿ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು. ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೯೭

೧೨. ಡಾ. ಯಾದಪ್ಪ ಪರದೇಶಿ :ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ : ಒಂದು ಅಧ್ಯಯನ. ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೧.

೧೩. ಡಾ. ಶಿವಾನಂದ ಬಂಟನೂರು : ಕರ್ನಾಟಕ ಜನಪದ ಶಿಲ್ಪಕಲೆ–ಒಂದು ಅಧ್ಯಯನ. ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೨.

ಗಿರೀಶ ಅವರ **ಬುಡಕಟ್ಟು ಚಿತ್ರಕಲೆ**[೧೪], ೨೦೦೨ರಲ್ಲಿ ಡಾ. ಲಕ್ಷ್ಮೀದೇವಿ ಗವಾಯಿಯವರ **ಕಲಾವಿದ ಎಂ.ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ**[೧೫], ಡಾ. ಶಂಕ್ರಪ್ಪ ಕೋಲ್ಕಾರ್ ಅವರ **ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ**[೧೬], ಡಾ. ಸೌಮ್ಯಾ ಅವರ **ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್**[೧೭], ಡಾ. ಪ್ರಮಿಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್**[೧೮], ೨೦೦೩ರಲ್ಲಿ ಡಾ. ವೀಣಾ ಶೇಖರ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦ –೧೮೨೦)**[೧೯], ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ : ಒಂದು ಅಧ್ಯಯನ**[೨೦], ಡಾ. ಎಸ್.ಸಿ.ಪಾಟೀಲರು ಕರ್ನಾಟಕ ವಿ.ವಿ.ಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಎಟ್ ಸ್ಕೂಲ್ ಲೇವಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೇಷಲ್ ರೆಫರನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್**[೨೧], ಇದು ಡಾ. ಎಸ್. ಸಿ. ಪಾಟೀಲ ಅವರ ಎರಡನೆಯ ಪಿಹೆಚ್.ಡಿ ಮಹಾಪ್ರಬಂಧವಾಗಿದೆ. ೨೦೦೪ರಲ್ಲಿ ಡಾ. ವಿ.ಎಮ್.ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ : ಒಂದು ಅಧ್ಯಯನ (೧೪೦೦–೧೮೦೦)**[೨೨], ಡಾ. ಶಿವಕುಮಾರ. ಜಿ. ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು**[೨೩], ಡಾ. ಪಿ. ಗೌರೀಶ ಅವರ **ಮೈಸೂರು ಜಿಲ್ಲೆಯ ಜನಪದ**

---

೧೪. ಡಾ. ಗಿರೀಶ : ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ ಹಂಪಿ, ೨೦೦೨.

೧೫. ಡಾ. ಲಕ್ಷ್ಮಿದೇವಿ ಗವಾಯಿ : ಕಲಾವಿದ ಎಂ. ಎ.ಚೆಟ್ಟಿಯವರ ಜೀವನ– ಕಲಾಕೃತಿಗಳು : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೨.

೧೬. ಡಾ. ಶರಣಪ್ಪ ಕೋಲ್ಕಾರ : ಕೊಪ್ಪಳ–ಹಂಪಿ ಪ್ರದೇಶದ ಪ್ರಾಗೈತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ೨೦೦೨.

೧೭. ಡಾ. ಸೌಮ್ಯಾ : ಯಂತ್ರಾ ದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫರೆನ್ಸ್ ಟು ಕಾಂಟೆಂಪರರಿ ತಾಂತ್ರಿಕ ಆರ್ಟಿಸ್ಟ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೮. ಡಾ. ಪ್ರಮಿಳಾ ಲೋಚನ : ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್‌ಮೆಂಟ್ ಆಫ್ ರಾಗಮಾಲಾ ಆಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೨.

೧೯. ಡಾ. ವೀಣಾ ಶೇಖರ ಮಂಡಿಸಿದ ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦–೧೮೨೦), ಪಿಹೆಚ್.ಡಿ. ಮಹಾಪ್ರಬಂಧ, ಬೆಂಗಳೂರು ವಿ.ವಿ., ೨೦೦೩.

೨೦. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ : ಕಲಾವಿದ ಆರ್.ಎಮ್.ಹಡಪದ : ಒಂದು ಅಧ್ಯಯನ, ಪಿಹೆಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ೨೦೦೩.

೨೧. ಡಾ. ಎಸ್.ಸಿ. ಪಾಟೀಲ : ಎ ಕ್ರಿಟಿಕಲ್ ಅನಾಲಿಸಿಸ್ ಆಫ್ ಎಜ್ಯುಕೇಶನ್ ಎಟ್ ಸ್ಕೂಲ್ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ್ ಆಂಡ್ ಪೇಂಟಿಂಗ್, ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿ.ವಿ. ಧಾರವಾಡ. ೨೦೦೨.

೨೨. ಡಾ. ಎಂ.ವ್ಹಿ. ಬಾಗಾಯತ್ : ಕರ್ನಾಟಕದ ಮುಸ್ಲಿಂ ಅರಸರ ಕಾಲದ ಚಿತ್ರಕಲೆ – ಒಂದು ಅಧ್ಯಯನ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. – ೨೦೦೪

೨೩. ಡಾ. ಜಿ. ಶಿವಕುಮಾರ : ಕನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು. ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ೨೦೦೪.

ಚಿತ್ರಕಲೆ[೨೪], ೨೦೦೫ರಲ್ಲಿ ಡಾ. ಶಶಿಕಲಾ ಹೂಗಾರ ಅವರ **ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ**[೨೫], ಡಾ. ಶಿವಪ್ರಕಾಶ ತುಕ್ಕಣ್ಣವರ ಅವರ **ಕರ್ನಾಟಕ ರಥ ಶಿಲ್ಪಕಲೆ**[೨೬], ಡಾ. ಎಚ್. ಎನ್. ಚಿತ್ರಗಾರ ಅವರ **ಕರ್ನಾಟಕ ಹಸ್ತಪ್ರತಿ ಚಿತ್ರಕಲೆ**[೨೭], ಡಾ. ಎಸ್.ವಿ.ವೆಂಕಟೇಶಯ್ಯ ಅವರ **ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ**[೨೮], ೨೦೦೬ರಲ್ಲಿ ಡಾ. ವಿಶ್ವೇಶ್ವರಿ ತಿವಾರಿ ಅವರ **ರಂಗೋಲಿ ಕಲೆ**[೨೯], ೨೦೦೭ರಲ್ಲಿ ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ ಅವರ **ಸುರಪುರ ಶೈಲಿಯ ಚಿತ್ರಕಲೆ ಒಂದು ಅಧ್ಯಯನ**[೩೦], ಡಾ. ಗೀತಾಂಜಲಿ ಬಿ. ಆರ್. ಅವರ **ಐತಿಹಾಸಿಕ ದೀಪಸ್ತಂಭಗಳು**[೩೧], ಡಾ. ರಾಠೋಡ್ ಅವರ **ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ**[೩೨], ೨೦೦೮ರಲ್ಲಿ ಡಾ. ಮೋಹನ್‌ರಾವ್ ಬಿ. ಪಂಚಾಳ ಅವರ **ಚಿತ್ರ ಕಲಾವಿದ ಡಾ. ಎಸ್.ಎಮ್.ಪಂಡಿತ್**[೩೩], ಡಾ. ವಿಶ್ವನಾಥ ಎ.ಎಸ್. ಅವರ **ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು**[೩೪], ಡಾ. ರವೀಂದ್ರ ಎಸ್. ಕಮ್ಮಾರ ಅವರ **ಕಲಾವಿದ ವಿ.ಬಿ. ಹಿರೇಗೌಡರ್– ಬದುಕು ಮತ್ತು ಕಲಾಕೃತಿಗಳು**[೩೫], ಡಾ. ಪ್ರೇಮಾನಂದ ಟಿ. ಲಕ್ಕಣ್ಣನವರ ಅವರ **ಕರ್ನಾಟಕದ ದೃಶ್ಯಕಲಾ ಸಾಹಿತ್ಯ– ಒಂದು ವೈಚಾರಿಕ ಅಧ್ಯಯನ,**[೩೬] ಡಾ. ಜಿ. ಲಕ್ಷ್ಮೀಪತಿ ಅವರ **ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ,**[೩೭] ಡಾ. ಮಂಟಗಿ ಅವರ **ಧನಂಜಯ ಶಿಲ್ಪಿಯವರ**

---

೨೪. ಡಾ. ಪಿ. ಗೌರೀಶ : ಮೈಸೂರು ಜಿಲ್ಲೆಯ ಜಾನಪದ ಚಿತ್ರಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಮೈ.ವಿ.ವಿ.,ಮೈ. ೨೦೦೪.

೨೫. ಡಾ. ಶಶಿಕಲಾ ಹೂಗಾರ : ಕರ್ನಾಟಕ ತೊಗಲುಗೊಂಬೆ ಚಿತ್ರಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಕ.ವಿ.ವಿ., ಹಂಪಿ–೨೦೦೪

೨೬. ಡಾ. ಶಿವಪ್ರಕಾಶ ಎಲ್. ತುಕ್ಕಣ್ಣವರ : ಕರ್ನಾಟಕ ರಥ ಶಿಲ್ಪಕಲೆ, (ಅ.ಪ್ರ. ಪಿಎಚ್.ಡಿ. ಮ.ಪ್ರ.), ಕ.ವಿ.ವಿ., ಹಂಪಿ–೨೦೦೪

೨೭. ಡಾ. ಎಸ್.ವಿ. ವೆಂಕಟೇಶಯ್ಯ : ಅಜಂತಾ ಗುಹೆಯ ವರ್ಣಚಿತ್ರಗಳಲ್ಲಿ ವಾಸ್ತು ಅಂಶಗಳು : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೫.

೨೮. ಡಾ. ಎಚ್.ಎನ್.ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ – ಕನ್ನಡ ವಿ.ವಿ. ಹಂಪಿ–೨೦೦೫.

೨೯. ಡಾ. ವಿಶ್ವೇಶ್ವರಿ ತಿವಾರಿ : ರಂಗೋಲಿ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೬

೩೦. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ಸುರಪುರ ಶೈಲಿಯ ಚಿತ್ರಕಲೆ : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೭.

೩೧. ಡಾ. ಗೀತಾಂಜಲಿ ಬಿ.ಆರ್. : ಕರ್ನಾಟಕದ ಐತಿಹಾಸಿಕ ದೀಪಸ್ತಂಭಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ, ಹಂಪಿ–೨೦೦೭.

೩೨. ಡಾ. ಲಕ್ಷ್ಮಣಸಿಂಗ್ ಆರ್. ರಾಠೋಡ : ಅನ್ವಯಿಕ ಕಲೆ – ಹಿಂದಿನಿಂದ ಇಂದಿನವರೆಗೆ, ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿ.ವಿ., ಮೈಸೂರು–೨೦೦೭.

೩೩. ಡಾ. ಮೋಹನ್ ಪಂಚಾಳ : ಕಲಾವಿದ ಎಸ್.ಎಮ್. ಪಂಡಿತ, ಬದುಕು ಮತ್ತು ಕಲೆ, ಪಿಎಚ್.ಡಿ. ಮ.ಪ್ರ, ಗು.ವಿ.ವಿ, ಕಲಬುರಗಿ–೨೦೦೮.

೩೪. ಡಾ. ವಿಶ್ವನಾಥ ಎ.ಎಸ್. ಕರಾವಳಿ ಕರ್ನಾಟಕದ ಯಕ್ಷಗಾನ ಮುಖವರ್ಣಿಕೆ ಹಾಗೂ ವೇಷಭೂಷಣಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ- ೨೦೦೮.

೩೫. ಡಾ. ರವೀಂದ್ರ ಎಸ್. ಕಮ್ಮಾರ : ಕಲಾವಿದ ವಿ.ಬಿ.ಹಿರೇಗೌಡರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ- ೨೦೦೮.

೩೬. ಡಾ. ಪಿ.ಟಿ. ಲಕ್ಕಣ್ಣನವರ : ಕರ್ನಾಟಕದ ಚಿತ್ರಕಲಾ ಸಾಹಿತ್ಯ - ಒಂದು ವೈಚಾರಿಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ-೨೦೦೮.

೩೭. ಡಾ. ಲಕ್ಷ್ಮೀಪತಿ ಜಿ. : ದಕ್ಷಿಣ ಕರ್ನಾಟಕದ ಜನಪದ ಶಿಲ್ಪಕಲೆ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ., ಹಂಪಿ- ೨೦೦೮.

ಜೀವನ ಮತ್ತು ಕಲೆ – ಒಂದು ಅಧ್ಯಯನ,[೩೮] ಡಾ. ರೆಹಮಾನ್ ಪಟೇಲ್ ಅವರ **ಕರ್ನಾಟಕದ ಬಿದರಿ ಕಲೆ– ಒಂದು ಅಧ್ಯಯನ– ವಿಶೇಷವಾಗಿ ಬೀದರ್ ಜಿಲ್ಲೆಯನ್ನು ಅನುಲಕ್ಷಿಸಿ,**[೩೯] ೨೦೧೦ರಲ್ಲಿ ಡಾ. ಸುನಿತಾ ಪಾಟೀಲ್ ಅವರ **ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು,**[೪೦] ಡಾ. ನಿಂಗಪ್ಪ ಎಂ. ಅಂಗಡಿಯವರ **ಗಾಜಿನ ಮೇಲಿನ ಚಿತ್ರಗಳು : ಒಂದು ಅಧ್ಯಯನ,**[೪೧] ಡಾ. ಕಿಶೋರ್ ಎನ್. ದಾಟನಾಳ್ ಅವರ **ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳು : ಒಂದು ಅಧ್ಯಯನ.**[೪೨] ೨೦೧೧ರಲ್ಲಿ ಡಾ. ಕಾಶಿನಾಥ ಡಿ. ವಡ್ಡರ ಅವರ **ಶಾಂತಿನಿಕೇತನದ ಭಿತ್ತಿಚಿತ್ರಗಳು,**[೪೩] ಡಾ. ಸತೀಶಕುಮಾರ ವಲ್ಲ್ಯೇಪೂರೆ ಅವರ **ಜೆ. ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು,**[೪೪] ಡಾ. ಶಂಕ್ರಪ್ಪ ಎಂ. ಕುಂದಗೋಳ ಅವರ **ಕರ್ನಾಟಕದ ಗಂಜೀಫಾ ಚಿತ್ರಕಲೆ,**[೪೫] ೨೦೧೨ರಲ್ಲಿ ಡಾ. ಭಾರತಿ ಮರವಂತಿ ಅವರ **ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ,**[೪೬] ಡಾ. ಕಾಮಾಕ್ಷಿ ಸಿ. ಸೊಪ್ಪಣ ಅವರ **ಕರ್ನಾಟಕದ ಬಟ್ಟೆ ಮಾಧ್ಯಮದ ಚಿತ್ರಕಲೆ,**[೪೭] ಡಾ. ಪರಶುರಾಮ ಪಿ. ಅವರ **ಕರ್ನಾಟಕದ ಕಲಾಗ್ಯಾಲರಿಗಳು ಒಂದು ವಿಶ್ಲೇಷಣಾತ್ಮಕ ಅಧ್ಯಯನ,**[೪೮] ಡಾ. ಷಾಹಿದ್ ಪಾಷಾ ಅವರ **ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು.**[೪೯] ೨೦೧೩ರಲ್ಲಿ ಡಾ. ಬಿ. ಎಲ್ ಲಮಾಣಿ ಅವರ **ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ,**[೫೦] ಡಾ. ರೇಣುಕಾ ಮಾರ್ಕಾಂಡೆಯವರ

---

೩೮. ಡಾ. ಮಂಟಗಿ : ಧನಂಜಯ ಶಿಲ್ಪಿಯವರ ಜೀವನ ಮತ್ತು ಕಲೆ – ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ – ೨೦೦೯

೩೯. ಡಾ. ರೆಹಮಾನ ಪಟೇಲ : ಕರ್ನಾಟಕದ ಬಿದ್ರಿಕಲೆ–ಒಂದು ಅಧ್ಯಯನ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–೨೦೦೯

೪೦. ಡಾ. ಸುನಿತಾ ಪಾಟೀಲ : ವಿಜಯ ಸಿಂಧೂರ ಅವರ ಕಲಾಕೃತಿಗಳ ಒಳನೋಟಗಳು, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ., ಹಂಪಿ–೨೦೧೦

೪೧. ಡಾ. ನಿಂಗಪ್ಪ ಎಂ. ಅಂಗಡಿ : ಗಾಜೀನ ಮೇಲಿನ ಚಿತ್ರಗಳು–ಒಂದು ಅಧ್ಯಯನ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ. ಹಂಪಿ–೨೦೧೦

೪೨. ಡಾ. ಕಿಶೋರ ಎನ್. ದಾಟನಾಳ : ಕಲಾವಿದ ಶಂಕರ ಪಾಟೀಲರ ಜೀವನ ಮತ್ತು ಕಲಾಕೃತಿಗಳ ಒಂದು ಅಧ್ಯಯನ, (ಅ.ಪ್ರ. ಪಿಎಚ್.ಡಿ. ಮ.ಪ್ರ), ಕನ್ನಡ ವಿ.ವಿ. ಹಂಪಿ – ೨೦೧೦.

೪೩. ಡಾ. ಕಾಶಿನಾಥ ಡಿ. ವಡ್ಡರ : ಶಾಂತಿನಿಕೇತನದ ಭಿತ್ತಿಚಿತ್ರಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ವಿ., ಕಲಬುರಗಿ–೨೦೧೧

೪೪. ಡಾ. ಸತೀಶಕುಮಾರ ವಲ್ಲ್ಯೇಪೂರೆ : ಜೆ.ಜೆ. ಕಲಾಶಾಲೆಯ ಪ್ರಾತಿನಿಧಿಕ ಕಲಾವಿದರು, ಪಿಎಚ್.ಡಿ. ಮ.ಪ್ರ., ಗು.ವಿ.ವಿ., ಕಲಬುರಗಿ–೨೦೧೧.

೪೫. ಡಾ. ಶಂಕರ ಕುಂದಗೋಳ : ಕರ್ನಾಟಕದ ಗಂಜೀಫಾ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೧

೪೬. ಡಾ. ಭಾರತಿ ಮರವಂತಿ : ಕರಾವಳಿ ಕರ್ನಾಟಕದ ರಂಗೋಲಿ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ ಮೈಸೂರು ವಿ.ವಿ. ೨೦೧೨

೪೭. ಡಾ. ಕಾಮಾಕ್ಷಿ ಸಿ. ಸೊಪ್ಪಣ : ಕರ್ನಾಟಕ ಬಟ್ಟೆ ಮಾಧ್ಯಮದ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೮. ಡಾ. ಪರಶುರಾಮ ಪಿ. : ಕರ್ನಾಟಕದ ಕಲಾಗ್ಯಾಲರಿಗಳು – ಒಂದು ವಿಶ್ಲೇಷಣಾತ್ಮಕ ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೪೯. ಡಾ. ಶಾಹಿದ್ ಪಾಷಾ : ಕಲಾವಿದ ಎ. ಎ. ಆಲಮೇಲಕರ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨

೫೦. ಡಾ. ಬಿ.ಎಲ್. ಲಮಾಣಿ : ಚಿತ್ರಕಲಾ ಕ್ಷೇತ್ರಕ್ಕೆ ಗದಗ ಜಿಲ್ಲೆಯ ಕೊಡುಗೆ, (ಅ.ಪ್ರ. ಪಿಎಚ್.ಡಿ. ಮ.ಪ್ರ) ಕ.ವಿ.ವಿ. ಹಂಪಿ. ೨೦೧೩

ಕರ್ನಾಟಕದ ವೈಷ್ಣವಪರಂಪರೆಯ ಚಿತ್ರಕಲೆ,[೫೧] ಡಾ. ಶಶಿಕಲಾ ನಂದನಗೌಡ ಅವರ **ಕರ್ನಾಟಕದ ಹುದುಗು ಕಲೆ,**[೫೨] ಡಾ. ಕೃಷ್ಣೇಗೌಡ ಹೆಚ್. ಎನ್ ಅವರ **ಕರ್ನಾಟಕದ ಬೌದ್ಧ ಚಿತ್ರಕಲೆ,**[೫೩] ಡಾ. ಬಿ. ಎಂ. ಪಾಟೀಲ ಅವರ **ಕರ್ನಾಟಕದ ವೀರಶೈವಪರಂಪರೆಯ ಚಿತ್ರಕಲೆ,**[೫೪] ಡಾ. ಕೃಷ್ಣವೇಣಿ ಅವರ **ಬಳ್ಳಾರಿ ಜಿಲ್ಲೆಯ ಚಿತ್ರಕಲೆ,**[೫೫] ಡಾ. ರವಿ ವಸಾರಾಮ ನಾಯಕ ಅವರ **ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು,**[೫೬] ಡಾ. ಮಹಾಂತೇಶ ಎಂ. ಪಲದಿನ್ನಿ ಅವರ **ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು,**[೫೭] ಡಾ.ಪಿ.ಬಿ.ಗವಾನಿ ಅವರ **ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ,**[೫೮] ಡಾ. ಸುಚಿತ್ರಾ ಜಿ. ಲಿಂಗದಳ್ಳಿ ಅವರ **ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು,**[೫೯] ಡಾ. ಬಸವಯ್ಯ ಗವಿಮಠ ಅವರ **ಬಾಗಲಕೋಟ ಜಿಲ್ಲೆಯ ಚಿತ್ರಕಲೆ,**[೬೦] ಸುಬ್ಬಯ್ಯ ಮಹಾದೇವಯ್ಯ ನೀಲಾ ಅವರ **ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು – ಒಂದು ಅಧ್ಯಯನ,**[೬೧] ೨೦೧೫ರಲ್ಲಿ ಜ್ಯೋತಿ ಎಸ್. ವೈಧ್ಯ ಅವರ **ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ,**[೬೨] ಪರಮಶಿವಂ ಅವರ **ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ**[೬೩], ೨೦೧೬ರಲ್ಲಿ **ಅಶೋಕ ಎಸ್. ಶಟಕಾರ ಅವರ ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು**[೬೪], ೨೦೧೭ರಲ್ಲಿ ಬಸವರಾಜ ಅನಗವಾಡಿ ಅವರ **ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ,**[೬೫] ಸಂತೋಷಕುಮಾರ

---

೫೧. ಡಾ. ರೇಣುಕಾ ಮಾರ್ಕಂಡೆ : ಕರ್ನಾಟಕದ ವೈಷ್ಣವ ಪರಂಪರೆಯ ಚಿತ್ರಕಲೆ, ಪಿಎಚ್.ಡಿ. ಮ.ಪ್ರ, ಕ.ವಿ.ಹಂಪಿ. ೨೦೧೩

೫೨. ಡಾ. ಶಶಿಕಲಾ ನಂದನಗೌಡ : ಕರ್ನಾಟಕದ ಹುದುಗುಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೩. ಡಾ. ಕೃಷ್ಣೇಗೌಡ ಹೆಚ್. ಎನ್ : ಕರ್ನಾಟಕದ ಬೌದ್ಧಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೪. ಡಾ. ಬಿ. ಎಂ. ಪಾಟೀಲ : ಕರ್ನಾಟಕದ ವೀರಶೈವ ಪರಂಪರೆಯ ಚಿತ್ರಕಲೆ, ಪಿಎಚ್.ಡಿ. ಮ.ಪ್ರ, ಕ.ವಿ.ಹಂಪಿ. ೨೦೧೩

೫೫. ಡಾ. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಚಿತ್ರಕಲೆ, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೬. ಡಾ. ರವಿ ವಸಾರಾಮ ನಾಯಕ : ಕರ್ನಾಟಕದ ಲಂಬಾಣಿ ಕರಕುಶಲ ಕಲೆಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ.ಹಂಪಿ. ೨೦೧೩

೫೭. ಡಾ. ಮಹಾಂತೇಶ ಎಂ. ಪಲದಿನ್ನಿ : ಬಾದಾಮಿ ಚಾಲುಕ್ಯರ ಕಾಲದ ಶಿಲ್ಪಗಳು, ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೩

೫೮. ಡಾ. ಪಿ.ಬಿ. ಗವಾನಿ : "ಕರ್ನಾಟಕದ ವಸ್ತುಸಂಗ್ರಹಾಲಯಗಳಲ್ಲಿನ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕ.ವಿ. ಹಂಪಿ. ೨೦೧೩

೫೯. ಡಾ. ಸುಚಿತ್ರಾ ಜಿ. ಲಿಂಗದಳ್ಳಿ : "ಕಲಾವಿದ ವಿ.ಟಿ.ಕಾಳೆ ಅವರ ಬದುಕು ಮತ್ತು ಕಲಾಕೃತಿಗಳು", ಪಿಎಚ್.ಡಿ. ಮಹಾ-ಪ್ರಬಂಧ, ಕ.ವಿ.ಹಂಪಿ. ೨೦೧೩

೬೦. ಡಾ. ಬಸವಯ್ಯ ಗವಿಮಠ : "ಬಾಗಲಕೋಟ ಜಿಲ್ಲೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೧೩

೬೧. ಡಾ. ಸುಬ್ಬಯ್ಯ ಮಹಾದೇವಯ್ಯ ನೀಲಾ : "ಶರಣಬಸವೇಶ್ವರರ ಕುರಿತು ರಚಿಸಿದ ವರ್ಣಚಿತ್ರಗಳು ಒಂದು ಅಧ್ಯಯನ", ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೩

೬೨. ಡಾ. ಜ್ಯೋತಿ ಎಸ್. ವೈಧ್ಯಾ : "ಉತ್ತರಕನ್ನಡ ಜಿಲ್ಲೆಯ ಚಿತ್ರಕಲೆ", ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫

೬೩. ಡಾ. ಪರಮಶಿವಂ : ಫೋಕ್ ಪೆಯಿಂಟಿಂಗ್ಸ್ ಆಫ್ ಆಂಧ್ರಪ್ರದೇಶ, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೫

೬೪. ಡಾ. ಅಶೋಕ ಶಟಕಾರ : ಡಾ. ಜೆ. ಎಸ್. ಖಂಡೇರಾವ್ ಬದುಕು ಮತ್ತು ಕಲಾಕೃತಿಗಳು, ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೬

೬೫. ಡಾ. ಬಸವರಾಜ ಅನಗವಾಡಿ : ಬಸವಣ್ಣನವರ ಕುರಿತ ವರ್ಣಚಿತ್ರಕಲೆ ವಿಶ್ಲೇಷಣಾತ್ಮಕ ಅಧ್ಯಯನ, ಪಿಎಚ್.ಡಿ. ಮಹಾ-ಪ್ರಬಂಧ, ಕ.ವಿ.ವಿ. ಹಂಪಿ, ೨೦೧೭

ಎಂ. ನಾಗರಾಳ ಅವರ **ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)**[೬೬], ಜೈರಾಜ ಅವರ **ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ**[೬೭] ಇವು ದೃಶ್ಯಕಲೆಗಳ ಕುರಿತು ಬಂದ ಪಿಎಚ್.ಡಿ. ಮಹಾಪ್ರಬಂಧಗಳಾಗಿವೆ. ಅನೇಕ ಜನ ವಿದ್ಯಾರ್ಥಿಗಳು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಈಗ ದೃಶ್ಯಕಲಾ ಕ್ಷೇತ್ರದಲ್ಲಿ ಸಂಶೋಧನಾಧ್ಯಯನ ಕೈಗೊಂಡಿದ್ದಾರೆ.

೨. ಡಿ. ಲಿಟ್ ಮಹಾಪ್ರಬಂಧಗಳು

ಕನ್ನಡ ವಿಶ್ವವಿದ್ಯಾಲಯದ ಲಲಿತಕಲಾ ನಿಕಾಯದಲ್ಲಿ ಮೊದಲಬಾರಿಗೆ ದೃಶ್ಯಕಲೆಗಳಿಗೆ ಸಂಬಂಧಿಸಿದಂತೆ ಡಿ.ಲಿಟ್. ಸಂಶೋಧನಾ ಅಧ್ಯಯನಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ಹೊರಬಂದ ಡಿ.ಲಿಟ್. ಪ್ರಬಂಧಗಳು ಹೀಗಿವೆ. ೨೦೦೧ರಲ್ಲಿ ದೇವದಾಸ ಕಳಸದ ಇವರ **ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ,**[೬೮] ೨೦೦೫ರಲ್ಲಿ ಬಂದ ಆನಂದ ಪೂಜಾರರ **ಕರಾವಳಿಯ ಕಾವಿ ಚಿತ್ರಕಲೆ**[೬೯] ಡಿ.ಎ. ಉಪಾಧ್ಯ ಅವರ **ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ,**[೭೦] ೨೦೧೦ರಲ್ಲಿ ಎಮ್.ಎಸ್. ಮೂರ್ತಿ ಅವರ **ಮಕ್ಕಳ ಮನಸ್ಸಿನ ಚಿತ್ರಗಳು,**[೭೧] ೨೦೧೩ರಲ್ಲಿ ಜಿ. ಎಸ್. ಭೂಸಗೊಂಡ ಅವರ **ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್. ಕೋಟ್ಯಾಳಕರ - ಒಂದು ಅಧ್ಯಯನ,**[೭೨] ಹೀಗೆ ಹಲವು ಡಿ.ಲಿಟ್ ಮಹಾಪ್ರಬಂಧಗಳು ಹೊರಬಂದಿವೆ. ಈ ಡಿ.ಲಿಟ್. ಅಧ್ಯಯನಕ್ಕೆ ಯಾವುದೇ ರೀತಿಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಗಳ ಅವಶ್ಯಕತೆ ಇರುವುದಿಲ್ಲ. ಆಯಾ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರ ತಜ್ಞತೆಯನ್ನೇ ಮುಖ್ಯವಾಗಿ ಪರಿಗಣಿಸಿ, ಕನ್ನಡ ವಿಶ್ವವಿದ್ಯಾಲಯವು ತಜ್ಞರಿಂದ ಪ್ರಸ್ತಾವನೆಯನ್ನು ಪರಿಶೀಲಿಸಿ, ಇಂಥಹ ಅಧ್ಯಯನಕ್ಕೆ ಅವಕಾಶವನ್ನು ನೀಡುತ್ತಾ ಬಂದಿದೆ. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಇಂತಹ ಡಿ.ಲಿಟ್. ಸಂಶೋಧನ ಅಧ್ಯಯನಕ್ಕೆ ಅವಕಾಶವಿರುವುದು ಗಮನಾರ್ಹ ಅಂಶವಾಗಿದೆ.

---

೬೬. ಸಂತೋಷಕುಮಾರ ಎಂ. ನಾಗರಾಳ : ಕರ್ನಾಟಕದ ಪ್ರಾಗೈತಿಹಾಸಿಕ ಚಿತ್ರಕಲೆ (ಉತ್ತರಕರ್ನಾಟಕವನ್ನು ಅನುಲಕ್ಷಿಸಿ), ಪಿಎಚ್.ಡಿ. ಮಹಾಪ್ರಬಂಧ, ಗು.ವಿ.ಗುಲ್ಬರ್ಗಾ. ೨೦೧೭

೬೭. ಜೈರಾಜ : ಕನ್ನಡ ಗ್ರಂಥಗಳ ರಕ್ಷಾಪುಟ ಚಿತ್ರಕಲೆ, ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೧೭

೬೮. ಡಾ. ದೇವದಾಸ ಕಳಸದ : ಕರ್ನಾಟಕದ ರಂಗಭೂಮಿ, ರಂಗಸಜ್ಜಿಕೆ ಮತ್ತು ಪ್ರಸಾಧನ ಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ ೨೦೦೧

೬೯. ಡಾ. ಆನಂದ ಪೂಜಾರ : ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೫.

೭೦. ಡಾ. ಡಿ.ವಿ. ಉಪಾಧ್ಯ : ವಾಸ್ತು-ಶಿಲ್ಪ-ಚಿತ್ರಕಲೆಯ ಹಿನ್ನೆಲೆಯಲ್ಲಿ ದೃಶ್ಯಕಲೆಗಳ ತೌಲನಿಕ ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ - ೨೦೦೫

೭೧. ಡಾ. ಎಂ.ಎಸ್. ಮೂರ್ತಿ: ಮಕ್ಕಳ ಮನಸ್ಸಿನ ಚಿತ್ರಗಳು, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೭೨. ಡಾ. ಜಿ. ಎಸ್. ಭೂಸಗೊಂಡ: ಚಿತ್ರಕಲಾವಿದ ಚಂದ್ರವರ್ಮ ಬಿ. ಆರ್ ಕೋಟ್ಯಾಳಕರ - ಒಂದು ಅಧ್ಯಯನ, ಡಿ.ಲಿಟ್ ಮಹಾಪ್ರಬಂಧ, ಕನ್ನಡ ವಿ.ವಿ. ಹಂಪಿ, ೨೦೧೦

೩. ಎಂ.ಫಿಲ್. ಅಧ್ಯಯನಗಳು

ಕರ್ನಾಟಕದಲ್ಲಿ ಮೊದಲಬಾರಿಗೆ ಎಂ.ಫಿಲ್. ಸಂಶೋಧನಾ ಅಧ್ಯಯನವು ಪ್ರಾರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ, ಇದೊಂದು ಗಮನಾರ್ಹ ಅಂಶವಾಗಿದೆ. ಈಗ ಕನ್ನಡ ವಿಶ್ವವಿದ್ಯಾಲಯದಲ್ಲಿ ಮಾತ್ರ ಎಂ.ಫಿಲ್. ಸಂಶೋಧನಾ ಅಧ್ಯಯನ ನಡೆಯುತ್ತಿದೆ. ಹೀಗೆ ನಡೆದು ಬಂದ ಎಂ.ಫಿಲ್. ಸಂಶೋಧನಾ ಅಧ್ಯಯನಗಳು ಹೀಗಿವೆ. ೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ **ಚಿತ್ರಕಲಾವಿದ ಜೆ.ಎಸ್.ಖಂಡೇರಾವ : ಒಂದು ಅಧ್ಯಯನ,**[೭೩] ೨೦೦೩ರಲ್ಲಿ ಎ.ಎಸ್. ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು,**[೭೪] ೨೦೦೫ರಲ್ಲಿ ಸಿ.ಡಿ. ಜಟ್ಟೆಣ್ಣನವರ ಅವರ **ಎಂ.ವಿ. ಮಿಣಜಗಿಯವರ ಜೀವನ ಮತ್ತು ಕಲಾಬದುಕು,**[೭೫] ಶಂಕರ ಕುಂದಗೋಳರ **ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು,**[೭೬] ೨೦೦೬ ರಲ್ಲಿ ಸುಚಿತ್ರಾ ಲಿಂಗದಳ್ಳಿಯವರ **ವಿಜಯನಗರದ ಭಿತ್ತಿಚಿತ್ರಕಲೆ,**[೭೭] ರಾಜಕುಮಾರ ಎಸ್. ಕಾಳೆ ಅವರ **ಔಂಧ್ ಗ್ಯಾಲರಿ,**[೭೮] ಕುರಿತು. ೨೦೦೭ರಲ್ಲಿ ಜಿತೇಂದ್ರ ಜಿ. ಕೋತಳಿಕರ ಅವರ **ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು,**[೭೯] ಬಿ.ಎಂ. ಪಾಟೀಲರ **ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು,**[೮೦] ಉಮೇಶ ಎ.ಎಸ್. **ಕರ್ನಾಟಕ ಜೈನ ಚಿತ್ರಕಲೆ,**[೮೧] ರವಿ ವಸಾರಾಮ ನಾಯಕರ **ಕಿನ್ನಾಳ ಕಲೆ,**[೮೨] ಶಶಿಕಾಂತ ಬಸರಿಕಟ್ಟಿಯವರ **ಕಲಘಗಿಯ ಚಿತ್ರಕಲೆ,**[೮೩] ಶೈಲಾ ಬರಡೋಲರ **ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು,**[೮೪] ಎಂಬ ಪ್ರಬಂಧಗಳು ಹೊರಬಂದಿವೆ. ೨೦೦೮ರಲ್ಲಿ ಕೃಷ್ಣವೇಣಿ **ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೮೫] ಯೋಗೀಶ ಹೆಚ್. **ಚಿತ್ರದುರ್ಗ**

---

೭೩. ಮಲ್ಲಿಕಾರ್ಜುನ ಬಾಗೋಡಿ : ಚಿತ್ರಕಲಾವಿದ ಜೆ.ಎಸ್.ಖಂಡೇರಾವ ಒಂದು ಅಧ್ಯಯನ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೨.

೭೪. ಎ.ಎಸ್. ವಿಶ್ವನಾಥ : ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣಗಳು, ಎಂ.ಫಿಲ್. ಪ್ರ, ಕನ್ನಡ ವಿ.ವಿ. ಹಂಪಿ – ೨೦೦೩

೭೫. ಸಿ.ಡಿ. ಜಟ್ಟೆಣ್ಣವರ: ಎಂ.ವಿ.ಮಿಣಜಗಿ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ.ಹಂಪಿ–೨೦೦೫.

೭೬. ಶಂಕರ ಕುಂದಗೋಳ : ಡಿ.ವಿ. ಹಾಲಭಾವಿಯವರ ಜೀವನ ಮತ್ತು ಕಲಾಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೦೬

೭೭. ಸುಚಿತ್ರಾ ಲಿಂಗದಳ್ಳಿ : ವಿಜಯನಗರದ ಭಿತ್ತಿಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೬

೭೮. ರಾಜಕುಮಾರ ಎಸ್. ಕಾಳೆ : ಔಂದ ಗ್ಯಾಲರಿ ಎಂ.ಫಿಲ್ ಪ್ರಬಂಧ, ಗು.ವಿ.ಗು - ೨೦೦೭

೭೯. ಜಿತೇಂದ್ರ ಜಿ. ಕೋತಳಿಕರ : ಕಲಾವಿದ ವಿದ್ಯಾಭೂಷಣರ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಗು.ವಿ.ಗು - ೨೦೦೭

೮೦. ಬಿ.ಎಂ. ಪಾಟೀಲ : ನಿಪ್ಪಾಣಿ ವಾಡೆಯ ಭಿತ್ತಿ ಚಿತ್ರಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೧. ಉಮೇಶ ಎ.ಎಸ್. : ಕರ್ನಾಟಕ ಜೈನ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೨. ರವಿ ನಾಯಕ : ಕಿನ್ನಾಳ ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೩. ಶಶಿಕಾಂತ ಬಸರಿಕಟ್ಟಿ : ಕಲಘಟಗಿಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೪. ಶೈಲಾ ಬರಡೋಲ : ಸಂತ ಕಲಾವಿದ ಶುಭಾರಾಯರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೭

೮೫. ಕೃಷ್ಣವೇಣಿ : ಬಳ್ಳಾರಿ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

ಜಿಲ್ಲೆಯ ಚಿತ್ರಕಲೆ[೮೬] ಮಹಾಕೂಟೇಶ್ವರಗೌಡ ಪಾಟೀಲ **ಬೆಳಗಾವಿ ಜಿಲ್ಲೆಯ ಚಿತ್ರಕಲೆ,**[೮೭] ಸುರೇಶ ಬಡಿಗೇರರ **ಕನ್ನಡ ವಿಶ್ವವಿದ್ಯಾಲಯದ ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ,**[೮೮] ಸಂತೋಷಕುಮಾರ ಕುಲಕರ್ಣಿ ಅವರ **ದಾವಣಗೆರೆ ಜಿಲ್ಲೆಯ ಚಿತ್ರಕಲೆ,**[೮೯] ಜಯರಾಜ ಚಿಕ್ಕಪಾಟೀಲರ **ಕರ್ನಾಟಕದ ಜಾಹೀರಾತುಗಳಲ್ಲಿಸಾಂಸ್ಕೃತಿಕ ನೆಲೆಗಳು,**[೯೦] ಮಹೇಶ ಉಮತಾರ ಅವರ **ಬಿ.ಪಿ. ಬಾಯಿರಿ ಕಲೆ ಮತ್ತು ಕಲಾ ಸಾಹಿತ್ಯ,**[೯೧] ಗಿರಿಜಾ ಬಿರಾದಾರರ **ವಿಜಾಪೂರ ಜಿಲ್ಲೆಯ ಚಿತ್ರಕಲೆ,**[೯೨] ಬಸಯ್ಯ ಗವಿಮಠ ಅವರ **ಬಾಗಲಕೋಟೆ ಜಿಲ್ಲೆಯ ಚಿತ್ರಕಲೆ,**[೯೩] ಕೃಷ್ಣಗೌಡ ಹೆಚ್.ಎನ್. ಅವರ **ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ,**[೯೪] ಮಹಾಂತೇಶ ಪಲದಿನ್ನಿ ಅವರ **ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು,**[೯೫] ಮತ್ತು ೨೦೦೯ ರಲ್ಲಿ ಕಾಂತರಾಜ ಅವರ **ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ,**[೯೬] ರಂಗಸ್ವಾಮಿ ಅವರ **ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ,**[೯೭] ಶ್ಯಾಮ ತಾ. ಜಮಾದಾರ ಅವರ **ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು,**[೯೮] ೨೦೧೦ ರಲ್ಲಿ ಭಾನುಮತಿ ಕೆ.ಎಲ್. ಅವರ **ಚಿತ್ರಕಲಾವಿದ ಎಂ.ಜಿ. ವಾಚೇದಮಠ ಬದುಕು ಮತ್ತು ಕಲಾಕೃತಿಗಳು,**[೯೯] ದಿನೇಶ ಬಿ. ಅವರ **ಚನ್ನಪಟ್ಟಣದ ಚಿತ್ತಾರ ಗೊಂಬೆಗಳು,**[೧೦೦] ವಾದಿರಾಜ ಎ. ಅವರ **ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು,**[೧೦೧] ಚಿಂತಾಮಣಿ ಅವರ **ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ.**[೧೦೨] ೨೦೧೨ರಲ್ಲಿ ಮಲ್ಲಿಕಾರ್ಜುನ ಕೆ.ಜಿ. ಅವರ **ಕೆ.ಕೆ. ಹೆಬ್ಬಾರರ ಕಲೆ ಮತ್ತು**

---

೮೬. ಯೋಗೀಶ ಹೆಚ್. : ಚಿತ್ರದುರ್ಗ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೮೭. ಮಹಾಕೂಟೇಶ್ವರಗೌಡ ಪಾಟೀಲ : ಬೆಳಗಾವಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೮೮. ಸುರೇಶ ಬಡಿಗೇರ : ಕನ್ನಡ ವಿ.ವಿ. ಸಂಗ್ರಹದ ಹಸ್ತಪ್ರತಿಗಳ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೮೯. ಸಂತೋಷಕುಮಾರ ಕುಲಕರ್ಣಿ : ದಾವಣಗೆರೆ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೯೦. ಜಯರಾಜ ಚಿಕ್ಕಪಾಟೀಲ : ಕರ್ನಾಟಕದ ಜಾಹೀರಾತುಗಳಲ್ಲಿ ಸಾಂಸ್ಕೃತಿಕ ನೆಲೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೯೧. ಮಹೇಶ ಉಮತಾರ : ಬಿ.ಪಿ. ಬಾಯಿರಿ : ಕಲೆ ಮತ್ತು ಕಲಾಸಾಹಿತ್ಯ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೯೨. ಗಿರಿಜಾ ಬಿರಾದಾರ : ವಿಜಾಪೂರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೯೩. ಬಸಯ್ಯ ಗವಿಮಠ : ಬಾಗಲಕೋಟ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೯೪. ಕೃಷ್ಣೇಗೌಡ ಹೆಚ್.ಎನ್.: ಕರ್ನಾಟಕದಲ್ಲಿ ಟಿಬೇಟಿಯನ್ನರ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೮

೯೫. ಮಹಾಂತೇಶ ಪಲದಿನ್ನಿ : ಕರ್ನಾಟಕದ ಲಜ್ಜಾಗೌರಿ ಶಿಲ್ಪಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೮

೯೬. ಕಾಂತರಾಜ : ಸಿಬಿ ದೇವಾಲಯದ ಭಿತ್ತಿ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೦೯

೯೭. ರಂಗಸ್ವಾಮಿ : ಚಿತ್ರಕಲಾವಿದ ರುಮಾಲೆ ಚನ್ನಬಸಯ್ಯನವರ ಬದುಕು ಮತ್ತು ಕಲೆ, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೦೯

೯೮. ಶ್ಯಾಮ ತಾ. ಜಮಾದಾರ : ಕಲಾವಿದ ಸಿ.ಎನ್. ಪಾಟೀಲರ ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೦೯

೯೯. ಭಾನುಮತಿ ಕೆ.ಎಲ್. : ಚಿತ್ರಕಲಾವಿದ ಎಂ.ಜಿ. ವಾಚೇದಮಠ : ಬದುಕು ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ – ೨೦೧೦

೧೦೦. ದಿನೇಶ ಬಿ. : ಚನ್ನಪಟ್ಟಣದ ಚಿತ್ತಾರ ಗೊಂಬೆಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ–೨೦೧೦

೧೦೧. ವಾದಿರಾಜ ಎ. : ಕಲಾವಿದ ಎಲ್. ಶಿವಲಿಂಗಪ್ಪನವರ ಜೀವನ ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕನ್ನಡ ವಿ.ವಿ. ಹಂಪಿ– ೨೦೧೦

೧೦೨. ರೇವಣಪ್ಪ ಚಿಂತಾಮಣಿ : ಕರ್ನಾಟಕದ ಚಿತ್ರಕಲೆಯಲ್ಲಿ ದಶಾವತಾರದ ಕಲ್ಪನೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ. ೨೦೧೦

ಬದುಕು,[೧೦೩] ರಾಜೀವ್. ಎಂ.ವೈ ಅವರ **ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು,**[೧೦೪] ರಾಘವೇಂದ್ರ ಅವರ **ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ,**[೧೦೫] ವೈಶಾಲಿ ಕೆ. ಕಾಂಬಳೆ ಅವರ **ಬೀದರ ಜಿಲ್ಲೆಯ ಚಿತ್ರಕಲೆ,**[೧೦೬] ಶಶಿಕಲಾ ಜಿ.ವಿ. ಅವರ **ಕರ್ನಾಟಕದ ವ್ಯಂಗ್ಯ ಚಿತ್ರಕಲೆ,**[೧೦೭] ಎನ್.ಜಿ. ಅಂಬರೀಶ್ ಅವರ **ಕರ್ನಾಟಕದ ಆಧುನಿಕ ಭಿತ್ತಿಚಿತ್ರ / ಶಿಲ್ಪಕಲೆ,**[೧೦೮] ಸುರೇಂದ್ರನಾಥ ಡಿ.ಆರ್. ಅವರ **ಕರಾವಳಿ ಕರ್ನಾಕಟದ ಕ್ರೈಸ್ತಚಿತ್ರಕಲೆ,**[೧೦೯] ಶ್ವೇತಾ ಡಿ.ಎಸ್. ಅವರ **ರಾಜ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ,**[೧೧೦] ಮಹಾದೇವಪ್ಪ ಸಣತಂಗಿಯವರ **ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ**[೧೧೧]. ೨೦೧೩ರಲ್ಲಿ ದಯಾನಂದ ಕೋಳಿ ಅವರ **ಕೊಪ್ಪಳ ಜಿಲ್ಲೆಯ ಚಿತ್ರಕಲೆ,**[೧೧೨] ಸವಿತಾ ಬಡಿಗೇರ ಅವರ **ಧಾರವಾಡ ಜಿಲ್ಲೆಯ ಚಿತ್ರಕಲೆ,**[೧೧೩] ಹೇಮಂತಕುಮಾರ ಅವರ **ಮೈಸೂರು ಜಿಲ್ಲೆಯ ಚಿತ್ರಕಲೆ,**[೧೧೪] ಬಸವರಾಜ ಕಲೆಗಾರ ಅವರ **ಯಾದಗಿರಿ ಜಿಲ್ಲೆಯ ಚಿತ್ರಕಲೆ**[೧೧೫], ೨೦೧೪ರಲ್ಲಿ ಡಿ. ಕೆ. ಕೀರ್ತಿವರ್ಮ ಅವರ **ಕೆ ರಾಮಚಂದ್ರನ್‌ರವರ ಕಲೆ ಮತ್ತು ಬದುಕು,**[೧೧೬] ವಿಶ್ವನಾಥ್ ಹೆಚ್. ಹಂಡಿ ಅವರ **ಕೆ. ವಿ. ಸುಬ್ರಹ್ಮಣ್ಯ ಅವರ ದೃಶ್ಯಕಲಾ ಸಾಹಿತ್ಯ,**[೧೧೭] ಗಾಯತ್ರಿ ಮಂತ ಅವರ **ಪಿ. ಎಸ್. ಕಡೇಮನಿಯವರ ಕಲೆ ಮತ್ತು ಬದುಕು,**[೧೧೮] ಎಲ್. ಟಿ. ಮಂಜುಳಾಬಾಯಿ ಅವರ **ಕೆ. ಜ್ಞಾನೇಶ್ವರ್‌ರವರ ಕಲೆ ಮತ್ತು ಬದುಕು,**[೧೧೯] ಸಾವಿತ್ರಿ ಟೆಂಕಲಿ ಅವರ **ಎಂ. ಆರ್. ಬಾಳೇಕಾಯಿಯವರ ಕಲೆ ಮತ್ತು ಬದುಕು,**[೧೨೦] ಖಾದರ್‌ಶಾಬ್ ಇ. ಗುಳೇದಗುಡ್ಡ ಅವರ **ಬಹುಮುಖ ಕಲಾಸಾಧಕ ವಿ.ಜಿ. ಅಂದಾನಿ,**[೧೨೧] ಮಾಯಾದೇವಿ ಮಮ್ಮಾ ಅವರ **ಎ. ಎಸ್. ಪಾಟೀಲ್‌ರವರ ಕಲೆ ಮತ್ತು ಬದುಕು,**[೧೨೨]

---

೧೦೩. ಮಲ್ಲಿಕಾರ್ಜುನ ಕೆ.ಜಿ. : ಕೆ.ಕೆ. ಹೆಬ್ಬಾರರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೪. ರಾಜೀವ ಎಂ.ವೈ. : ಕೆ. ವೆಂಕಟಪ್ಪನವರ ಜೀವನ ಮತ್ತು ಕಲಾಕೃತಿಗಳು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೫. ರಾಘವೇಂದ್ರ : ಕೊಪ್ಪಳ ಜಿಲ್ಲೆಯ ಪ್ರಾಗೈತಿಹಾಸಿಕ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೬. ವೈಶಾಲಿ ಕೆ. ಕಾಂಬಳೆ : ಬೀದರ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೭. ಶಶಿಕಲಾ ಜಿ.ವಿ. : ಕರ್ನಾಟಕದ ವ್ಯಂಗ್ಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೮. ಎನ್. ಜಿ. ಅಂಬರೀಶ್ : ಕರ್ನಾಟಕದ ಅಧುನಿಕ ಭಿತ್ತಿಚಿತ್ರ/ಶಿಲ್ಪಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೦೯. ಸುರೇಂದ್ರನಾಥ ಡಿ. ಆರ್. : ಕರಾವಳಿ ಕರ್ನಾಟಕದ ಕ್ರೈಸ್ತಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೧೦. ಶ್ವೇತಾ ಡಿ. ಎಸ್. : ರಾಜಾ ರವಿವರ್ಮನ ಕಲಾಕೃತಿಗಳಲ್ಲಿನ ಸ್ತ್ರೀ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೧೧. ಮಹಾದೇವಪ್ಪಸಣತಂಗಿ : ಕರ್ನಾಟಕದ ದೃಶ್ಯಕಲೆಯಲ್ಲಿ ಗಣೇಶ ಚಿತ್ರಣ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೨
೧೧೨. ದಯಾನಂದ ಕೋಳಿ : ಕೊಪ್ಪಳ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩
೧೧೩. ಸವಿತಾ ಬಡಿಗೇರ : ಧಾರವಾಡ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩
೧೧೪. ಹೇಮಂತಕುಮಾರ : ಮೈಸೂರು ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩
೧೧೫. ಬಸವರಾಜ ಕಲೆಗಾರ : ಯಾದಗಿರಿ ಜಿಲ್ಲೆಯ ಚಿತ್ರಕಲೆ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೩
೧೧೬. ಡಿ. ಕೆ. ಕೀರ್ತಿವರ್ಮ : ಕೆ. ರಾಮಚಂದ್ರನ್ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪
೧೧೭. ವಿಶ್ವನಾಥ ಹೆಚ್. ಹಂಡಿ : ಸುಬ್ರಹ್ಮಣ್ಯಂ ಅವರ ದೃಶ್ಯಕಲಾ ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪
೧೧೮. ಗಾಯತ್ರಿ ಮಂತ : ಪಿ. ಎಸ್. ಕಡೇಮನಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪
೧೧೯. ಎಲ್. ಟಿ. ಮಂಜುಳಾಬಾಯಿ : ಕೆ. ಜ್ಞಾನೇಶ್ವರ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪
೧೨೦. ಸಾವಿತ್ರಿ ಟೆಂಕಲಿ : ಎಂ. ಆರ್. ಬಾಳೇಕಾಯಿ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪
೧೨೧. ಖಾದರ್‌ಶಾಬ್ ಇ.ಗುಳೇದಗುಡ್ಡ: ಬಹುಮುಖ ಕಲಾಸಾಧಕ ವಿ.ಜಿ.ಅಂದಾನಿ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ.೨೦೧೪
೧೨೨. ಮಾಯಾದೇವಿ ಮಮ್ಮಾ : ಎ. ಎಸ್. ಪಾಟೀಲ ಅವರ ಕಲೆ ಮತ್ತು ಬದುಕು, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

ರಾಜಪ್ಪ ಹೆಚ್. ಅವರ **ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ**[೧೨೩] ಈ ಎಂ.ಫಿಲ್ ಪ್ರಬಂಧಗಳು ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿವೆ.

ಗುಲ್ಬರ್ಗಾ ವಿ.ವಿ, ಬೆಂಗಳೂರು ವಿ.ವಿ, ಕರ್ನಾಟಕ ವಿ.ವಿ., ಮೈಸೂರು ವಿ.ವಿ., ಬೆಂಗಳೂರಿನ ಜೈನ ಡೀಮ್ಡ್ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಪದವಿಗಾಗಿ ಅನೇಕ ಸಂಶೋಧನಾ ವಿದ್ಯಾರ್ಥಿಗಳು ಅಧ್ಯಯನದಲ್ಲಿ ನಿರತರಾಗಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯಗಳ ಬಿ.ಎಫ್.ಎ. (ಬ್ಯಾಚ್ಯುಲರ್ ಆಫ್ ಫೈನ್ ಆರ್ಟ್ಸ್ – ಡಿಗ್ರಿ), ಬಿ.ವಿ.ಎ. (ಬ್ಯಾಚ್ಯುಲರ್ ಆಫ್ ವಿಜ್ಯುವಲ್ ಆರ್ಟ್ಸ್ – ಡಿಗ್ರಿ) ಐದು ವರ್ಷಗಳ ದೃಶ್ಯಕಲೆಯ ಡಿಪ್ಲೊಮಾ ಪದವಿ ಹಾಗೂ ಸ್ನಾತಕೋತ್ತರ ಹಂತದಲ್ಲಿ ಸುಮಾರು ೨೦೦೦ಕ್ಕೂ ಹೆಚ್ಚಿನ ಲಘುಶೋಧ ಪ್ರಬಂಧಗಳು ರಚನೆಗೊಂಡಿವೆ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು, ಈ ಸಂಶೋಧನಾ ಪ್ರಕಾರವು ದೃಶ್ಯಕಲಾ ಕ್ಷೇತ್ರದಲ್ಲಿ ಅನಿವಾರ್ಯ ಅಧ್ಯಯನವಾಗಿ ಬೆಳೆಯುತ್ತಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆಗಳು ತೀವ್ರವಾಗಿ ಮುನ್ನಡೆಯುತ್ತಲಿದ್ದು, ಭವಿಷ್ಯತ್ತಿನಲ್ಲಿ ಕಲಾಕ್ಷೇತ್ರವು ಸಂಶೋಧನಾತ್ಮಕವಾಗಿ, ಸದೃಢವಾಗಿ ಮುನ್ನಡೆಯುತ್ತಲಿರುವುದು ದೃಶ್ಯಕಲಾ ಕ್ಷೇತ್ರದಲ್ಲಾದ ಬಹುದೊಡ್ಡ ಬದಲಾವಣೆ ಎಂದರೆ ತಪ್ಪಾಗಲಾರದು.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಸಮೀಕ್ಷೆ

೧೯೫೨ರಲ್ಲಿ ಮಿರ್ಜಿ ಅಣ್ಣಾರಾಯ ಅವರ **"ಜೈನಧರ್ಮ"**[೧೨೪] ಕೃತಿಯಲ್ಲಿ ಜೈನ ಧರ್ಮದ ಕಲೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಇವರದೇ ಅನುವಾದದ ಮತ್ತೊಂದು ಕೃತಿ ೧೯೭೧ರಲ್ಲಿ **"ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ"**[೧೨೫] ಎಂಬುದರಲ್ಲಿ ಜೈನ ಚಿತ್ರಕಲೆಯ ಕಲೆ, ಸಂಸ್ಕೃತಿ, ವಾಸ್ತುಶಿಲ್ಪ, ಶಿಲ್ಪ ಹೀಗೆ ಹಲವು ವಿಷಯಗಳ ಕುರಿತು ಚರ್ಚೆಯಾಗಿವೆ. ಇದೇ ಅವಧಿಯಲ್ಲಿ ಎಸ್. ಎಂ. ಶಿರಹಟ್ಟಿ ಅವರು **"ಚಿತ್ರಕಲೆ (ಭಾಗ–೧)"**[೧೨೬] ಎಂಬ ಚಿಕ್ಕ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಇಲ್ಲಿ ಜೈನ ಚಿತ್ರಕಲೆಯ ಕುರಿತು ಮಾಹಿತಿಗಳು ದೊರೆಯುತ್ತವೆ.

೧೯೭೨ರಲ್ಲಿ ಬಿ. ಪಿ. ಬಾಯಿರಿ ಅವರ **"ಭಾರತೀಯ ಚಿತ್ರಕಲೆ"**[೧೨೭] ಕೃತಿಯಲ್ಲಿ ಮತ್ತು ೧೯೭೫ರಲ್ಲಿ ಡಾ. ಶಿವರಾಮ ಕಾರಂತರ ಬರೆದ **"ಕರ್ನಾಟಕದಲ್ಲಿ ಚಿತ್ರಕಲೆ"**[೧೨೮] ಎಂಬ ಕೃತಿಯಲ್ಲಿ

೧೨೩. ರಾಜಪ್ಪ ಹೆಚ್. : ಬಾಗೂರು ಮಾರ್ಕಂಡೇಯ ಅವರ ಚಿತ್ರಕಲೆ ಮತ್ತು ಸಾಹಿತ್ಯ, ಎಂ.ಫಿಲ್ ಪ್ರಬಂಧ, ಕ.ವಿ.ವಿ. ಹಂಪಿ, ೨೦೧೪

೧೨೪. ಮಿರ್ಜಿ ಅಣ್ಣಾರಾಯ : ಜೈನಧರ್ಮ, ಶಾಂತಿ ಸೇವಾಸದನ, ಸೇಡಬಾಳ, ೧೯೫೨

೧೨೫. ಮಿರ್ಜಿ ಅಣ್ಣಾರಾಯ(ಅನು): ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ. ಶಾಂತಿ ಸೇವಾಸದನ, ಸೇಡಬಾಳ,೧೯೭೧

೧೨೬. ಎಸ್. ಎಂ. ಶಿರಹಟ್ಟಿ : ಚಿತ್ರಕಲೆ (ಭಾಗ–೧), ವಿಜಯಕಲಾ ಮಂದಿರ, ೧೯೭೧

೧೨೭. ಬಿ. ಪಿ. ಬಾಯಿರಿ : ಭಾರತೀಯ ಚಿತ್ರಕಲೆ, ಸಮಾಜ ಪುಸ್ತಕಾಲಯ, ಧಾರವಾಡ. ೧೯೭೨

೧೨೮. ಡಾ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ. ಪ್ರಸಾರಾಂಗ. ಮೈಸೂರು ವಿಶ್ವವಿದ್ಯಾಲಯ. ಮೈಸೂರು. ೧೯೭೫

ಕರ್ನಾಟಕದ ಜೈನ ಚಿತ್ರಕಲಾ ನೆಲೆಗಳಾದ ಮೂಡಬಿದರೆ, ಧರ್ಮಸ್ಥಳ, ಶ್ರವಣಬೆಳಗೊಳ ಮುಂತಾದ ಕಡೆಗಳಲ್ಲಿ ಜೈನ ಚಿತ್ರಕಲೆಯ ಕುರಿತು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ.

೧೯೭೬ರಲ್ಲಿ ಹಂಪ ನಾಗರಾಜಯ್ಯನವರು **"ಯಕ್ಷ-ಯಕ್ಷಿಯರು"**[೧೨೯] ಎಂಬ ಕೃತಿಯನ್ನು ಬರೆದಿದ್ದಾರೆ. ಇಲ್ಲಿ ಜೈನ ಧರ್ಮದ ಪರಂಪರೆಯಲ್ಲಿ ಯಕ್ಷ-ಯಕ್ಷಿಯರ ಕುರಿತು ಮತ್ತು ಅವರ ಕುರಿತು ರಚಿಸಿರುವ ಚಿತ್ರಗಳ ಕುರಿತು ಚರ್ಚಿಸಿದ್ದಾರೆ.

೧೯೮೮ರಲ್ಲಿ ಡಾ. ಸಿಂದಗಿ ರಾಜಶೇಖರ ಅವರ **"ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ"**[೧೩೦] ಎಂಬ ಕೃತಿಯಲ್ಲಿ ಕರ್ನಾಟಕದಲ್ಲಿ ಆಳಿದ ಎಲ್ಲ ರಾಜಮನೆತನ, ಧರ್ಮದ ಹಿನ್ನೆಲೆಯಲ್ಲಿ ನಿರ್ಮಾಣಗೊಂಡ ವಾಸ್ತುಶಿಲ್ಪ ಮತ್ತು ಚಿತ್ರಕಲೆಯ ಕುರಿತು ಚರ್ಚಿಸುವ ಸಂದರ್ಭದಲ್ಲಿ ಜೈನ ಧರ್ಮದ ವಾಸ್ತುಶಿಲ್ಪ ಮತ್ತು ಚಿತ್ರಕಲೆಯ ಬಗ್ಗೆ ವಿವರಿಸಿದ್ದಾರೆ.

೧೯೯೩ರಲ್ಲಿ ಪಿ. ಅರ್. ತಿಪ್ಪೇಸ್ವಾಮಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಬಂದ **"ಚಿತ್ರಕಲಾ ಪ್ರಪಂಚ"**[೧೩೧] ಕೃತಿಯಲ್ಲಿ ಕರ್ನಾಟಕದ ಜೈನ ಚಿತ್ರಕಲೆಗೆ ಸಂಬಂಧಿಸಿದ ಹಲವು ಲೇಖನಗಳನ್ನು ಒಂದೆಡೆಗೆ ಸಂಗ್ರಹಿಸಿದ್ದಾರೆ. ಮತ್ತು ಧವಳ ಗ್ರಂಥಗಳ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ. ಇದೇ ಅವಧಿಯಲ್ಲಿ ಡಾ. ದೇವರಕೊಂಡಾರೆಡ್ಡಿಯವರ **"ಶ್ರವಣಬೆಳಗೊಳದ ಬಸದಿಗಳು : ವಾಸ್ತುಶಿಲ್ಪ"**[೧೩೨] ಕೃತಿಯಲ್ಲಿ ಜೈನ ಚಿತ್ರಕಲಾ ನೆಲೆಯಾದ ಶ್ರವಣಬೆಳಗೊಳದ ವಾಸ್ತುಶಿಲ್ಪದೊಂದಿಗೆ ಚಿತ್ರಕಲೆಯ ಕುರಿತು ಇಲ್ಲಿ ಸಮೀಕ್ಷಿಸಿದ್ದಾರೆ.

೧೯೯೩ರಲ್ಲಿ ಡಾ. ಎಸ್. ಸಿ. ಪಾಟೀಲರವರ **"ಕರ್ನಾಟಕದ ಜನಪದ ಚಿತ್ರಕಲೆ"**[೧೩೩] ಕೃತಿಯಲ್ಲಿ ಜೈನ ಭಿತ್ತಿಚಿತ್ರಕಲೆಯ ಕುರಿತು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ೧೯೯೫ರಲ್ಲಿ ಬಿ. ಪಿ. ಬಾಯಿರಿ ಅವರ **"ಜಾಗತಿಕ ಚಿತ್ರಕಲೆ"**[೧೩೪] ಕೃತಿಯಲ್ಲಿ, ೧೯೯೬ರಲ್ಲಿ ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರ **"ಕರ್ನಾಟಕದ ಸಂಸ್ಕೃತಿ ಸಮೀಕ್ಷೆ"**[೧೩೫], ೧೯೯೮ರಲ್ಲಿ ಡಾ. ಅ.ಲ. ನರಿಸಿಂಹನ್ ಅವರ **"ಕರ್ನಾಟಕ ಭಿತ್ತಿಚಿತ್ರ ಪರಂಪರೆ"**[೧೩೬], ೨೦೦೨ರಲ್ಲಿ ಡಾ. ನಾಗರಾಜಯ್ಯ ಹಂಪನವರ **"Indra in**

---

೧೨೯. ಹಂಪ ನಾಗರಾಜಯ್ಯ : ಯಕ್ಷ-ಯಕ್ಷಿಯರು, ಚಂದ್ರಸಾಗರ ವರ್ಣಿ ಗ್ರಂಥಮಾಲೆ, ಬೆಂಗಳೂರು. ೧೯೭೬

೧೩೦. ಡಾ. ಸಿಂದಗಿ ರಾಜಶೇಖರ : ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಶನ್, ಧಾವಾಡ. ೧೯೮೮

೧೩೧. ಪಿ. ಆರ್. ತಿಪ್ಪೇಸ್ವಾಮಿ (ಪ್ರಸಂ.) : ಚಿತ್ರಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೩

೧೩೨. ಡಾ. ದೇವರಕೊಂಡಾರೆಡ್ಡಿ : ಶ್ರವಣಬೆಳಗೊಳದ ಬಸದಿಗಳು : ವಾಸ್ತುಶಿಲ್ಪ, ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ. ೧೯೯೩

೧೩೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ವೀರಶೈವ ಲಿಂಗಾಯ ಅಧ್ಯಯನ ಸಂಸ್ಥೆ, ಗದಗ-ಡಂಬಳ. ೧೯೯೩

೧೩೪. ಬಿ. ಪಿ. ಬಾಯಿರಿ : ಜಾಗತಿಕ ಚಿತ್ರಕಲೆ, ಸಮಾಜ ಪುಸ್ತಕಾಲಯ, ಧಾರವಾಡ. ೧೯೯೫

೧೩೫. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿಪ್ರಕಾಶನ, ಮೈಸೂರು. ೧೯೯೬

೧೩೬. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೮

Jaina Iconography"[೧೩೭] ಈ ಕೃತಿಯಲ್ಲಿ ಜೈನ ಚಿತ್ರಕಲೆ ಮತ್ತು ವಾಸ್ತುಶಿಲ್ಪದ ಕುರಿತು, ೨೦೦೩ರಲ್ಲಿ ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ ಅವರ ಸಂಪಾದನೆಯಲ್ಲಿ ಬಂದ **"ನಿಜದ ನೆಲೆ"**[೧೩೮] ಕೃತಿಯಲ್ಲಿ ಜೈನ ಧರ್ಮದ ಹಸ್ತಪ್ರತಿ ಚಿತ್ರಕಲೆ, ಮತ್ತು ಸಾಹಿತ್ಯದ ಕುರಿತು, ೨೦೦೫ರಲ್ಲಿ ಡಾ. ಎಚ್. ಎನ್. ಚಿತ್ರಗಾರ ಅವರ **"ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ"**[೧೩೯] ಪಿಎಚ್.ಡಿ ಮಹಾಪ್ರಬಂಧದಲ್ಲಿ, ೨೦೦೬ರಲ್ಲಿ ಎನ್. ಮರಿಶಾಮಾಚಾರ್ ಅವರ **"ದೃಶ್ಯಕಲಾ"**[೧೪೦] ಮುಂತಾದ ಗ್ರಂಥಗಳಲ್ಲಿ ಜೈನ ಧರ್ಮದ ಇತಿಹಾಸ, ಚಿತ್ರಕಲೆ, ಅವರ ಕೊಡುಗೆಗಳ ಕುರಿತು ಸಂಕ್ಷಿಪ್ತವಾಗಿ ವಿವರಣೆಗಳು ನಮಗೆ ದೊರೆಯುತ್ತವೆ.

೨೦೦೭ರಲ್ಲಿ ಉಮೇಶ ಅವರು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ **"ಕರ್ನಾಟಕದ ಜೈನ ಚಿತ್ರಕಲೆ"**[೧೪೧] ಪ್ರಬಂಧದಲ್ಲಿ ಕರ್ನಾಟಕದ ಜೈನ ಚಿತ್ರಕಲೆಯ ಕುರಿತು ಸ್ಥೂಲವಾಗಿ ಅಧ್ಯಯನ ಮಾಡಿದ್ದಾರೆ. ಇದೇ ಅವಧಿಯಲ್ಲಿ ಪ್ರೊ. ನಾಗರಾಜಯ್ಯ ಹಂಪನವರ **"Morphology of Jaina Architecture"**[೧೪೨] ಎಂಬ ಕೃತಿ ಮತ್ತು ಇವರದೇ ಮತ್ತೊಂದು ಕೃತಿ **"Specturm of Sarasvati : Srutadevi"**[೧೪೩] ೨೦೦೯ರಲ್ಲಿ ಎಂಬ ಆಂಗ್ಲ ಕೃತಿಗಳಲ್ಲಿ ಜೈನ ಚಿತ್ರ ಮತ್ತು ಶಿಲ್ಪಕಲೆಯ ಕುರಿತು ಸ್ಥೂಲವಾಗಿ ವಿವರಿಸಿದ್ದಾರೆ.

ಹೀಗೆ ಈ ಮೇಲಿನಂತೆ ಜೈನ ಚಿತ್ರಕಲೆಯ ಕುರಿತು ಹಲವು ಗ್ರಂಥಗಳು ಬಂದರೂ ಚಿತ್ರಕಲೆಯ ಕುರಿತು ಸಮಗ್ರವಾಗಿ ಇದುವರೆಗೂ ಅಧ್ಯಯನ ನಡೆದಿರುವುದಿಲ್ಲ. ಈ ಕೊರತೆಯನ್ನು ಮನಗಂಡು ಪ್ರಸ್ತುತ ವಿಷಯವನ್ನು ಕೈಗೆತ್ತಿಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವ್ಯಾಪ್ತಿ

'ಕರ್ನಾಟಕ ಜೈನ ಚಿತ್ರಕಲಾ ಪರಂಪರೆ' ಎಂಬ ಶೀರ್ಷಿಕೆಯೊತ್ತ ಈ ಮಹಾಪ್ರಬಂಧದ ವ್ಯಾಪ್ತಿಯನ್ನು ಕರ್ನಾಟಕಕ್ಕೆ ಸೀಮಿತಗೊಳಿಸಲಾಗಿದ್ದು, ಎಲ್ಲೆಲ್ಲಿ ಜೈನ ಚಿತ್ರಗಳು ಕಂಡುಬರುವ

---

೧೩೭ Dr. Nagarajaiah, Hampa : Indra in Jaina Iconography, Sri Siddhantakeerthi Grantthamale, Shivamogga. 2002

೧೩೮. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದನೆಲೆ, ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ, ಬಾಗಲಕೋಟ. ೨೦೦೩

೧೩೯. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೫

೧೪೦. ಎನ್ ಮರಿಶಾಮಾಚಾರ್ : ದೃಶ್ಯಕಲಾ, ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು. ೨೦೦೬

೧೪೧. ಉಮೇಶ : ಕರ್ನಾಟಕದ ಜೈನ ಚಿತ್ರಕಲೆ, ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕನ್ನಡ ವಿ.ವಿ. ಹಂಪಿ. ೨೦೦೭

೧೪೨. Prof. Nagarajaiah, Hampa : Morphology of Jaina Architecture, National Institute of Prakrit Studies and Research, Shravanabelagola. 2007

೧೪೩. Prof. Nagarajaiah, Hampa : Specturm of Sarasvati : Srutadevi, National Institute of Prakrit Studies and Research, Bahubali Prakrit Vidyapith, Shravanabelagola. 2009

ಅಥವಾ ಸಂಗ್ರಹಗೊಂಡಿರುವ ಜೈನ ಕ್ಷೇತ್ರಗಳನ್ನು ಮಾತ್ರ ನನ್ನ ಸಂಶೋಧನಾ ಕ್ಷೇತ್ರ ಕಾರ್ಯವ್ಯಾಪ್ತಿಯಲ್ಲಿ ಅಳವಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಜೈನ ಧರ್ಮದ ಇತಿಹಾಸವು ತ್ರೇತಾಯುಗದಿಂದಲೇ ಪ್ರಾರಂಭವಾಗುತ್ತದೆ. ಆದಿನಾಥ ವೃಷಭೇಂದ್ರನಿಂದಿಡಿದು ಮಹಾವೀರರವರೆವಿಗೂ ತನ್ನ ವೈಚಾರಿಕ, ಸಾಮಾಜಿಕ ಸಾಂಗತ್ಯದಿಂದ ತನ್ನ ಅಹಿಂಸಾ ಸಿದ್ಧಾಂತವನ್ನು ಜಗತ್ತಿನ ಮನುಕುಲಕ್ಕೆ ಸಾರುತ್ತಾ ಬಂದಿರುವ ಈ ಧರ್ಮದ ಪರಂಪರೆಯೂ ಪುರಾತನವಾಗಿದೆ. ಈ ಕುರಿತಂತೆ ಈ ಧರ್ಮದ ನೆಲೆಗಳಲ್ಲಿ ಹಾಗೂ ಧರ್ಮ ಗ್ರಂಥಗಳಲ್ಲಿ ಕಂಡುಬರುವ ಚಿತ್ರಗಳ ಸಂಗ್ರಹವಿರುವ ಪ್ರದೇಶಗಳಾದ ಶ್ರವಣಬೆಳಗೊಳದ ಶ್ರೀಮಠ, ಮೂಡಬಿದರೆಯ ಜೈನಮಠ, ತೆಪ್ಪದ ಬಸದಿ ಮತ್ತು ಕಾರ್ಕಳದ ಚತುರ್ಮುಖ ಬಸದಿಯ ಬಳಿ ಚಂದ್ರಪ್ರಭಾ ಸ್ವಾಮಿಯವರ ಜೈನ ಮಠ, ಬಜಗೋಳಿಯ, ನಾರಾವಿ, ನಲ್ಲೂರು, ಜೈನ ಶ್ರಾವಕ ಸುಬ್ಬಯ್ಯ ಶಾಸ್ತ್ರಿಗಳ ಮನೆ, ನೆಲ್ಲಿಕಾರಿನ ಜೈನ ಪೇಟೆಯಲ್ಲಿರುವ ಪಂಡಿತರ ಮನೆ ಹಾಗೂ ನಾರಾವಿ, ನಲ್ಲೂಕು, ಹೊಯ್ಸಳರ ಕಾಲದಲ್ಲಿ ರಚಿತವಾದ ಜೈನ ದೇವಾಲಯಗಳಾದ ಚಿಕ್ಕಮಗಳೂರು ಬಳಿಯ ಅಂಗಡಿಯ ವಾಸಂತಿಕ ದೇವಾಲಯ, ಬೆಂಗಳೂರು ವಿಶ್ವವಿದ್ಯಾಲಯದ ಹಸ್ತಪ್ರತಿ ಭಂಡಾರ, ಕರ್ನಾಟಕ ವಿ.ವಿ. ಧಾರವಾಡ, ಕನ್ನಡ ವಿ.ವಿ. ಹಂಪಿ, ಶಿವಯೋಗಿ ಮಂದಿರ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರ ಇತ್ಯಾದಿ ನೆಲೆಗಳನ್ನೊಳಗೊಂಡಿದೆ. ಹೀಗೆ ಕರ್ನಾಟಕವನ್ನು ಮೂಲ ನೆಲೆಗಳಾಗಿ ಇಟ್ಟುಕೊಂಡು ಮೇಲೆ ಹೆಸರಿಸಲಾದ ಜೈನ ಚಿತ್ರ ನೆಲಗಳನ್ನು ನನ್ನ ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಂಡು ಪೂರಕವಾಗಿ ಖಾಸಗಿ ಹಾಗೂ ಸರ್ಕಾರಿ ಸ್ವಾಮ್ಯದ ಸಂಗ್ರಹಾಲಯಗಳಲ್ಲಿರುವ ಜೈನ ಚಿತ್ರಗಳನ್ನು ಸಹ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಅಧ್ಯಯನ ನಡೆಸಲಾಗಿದೆ.

ಅಧ್ಯಯನದ ವಿಧಾನ

ಪ್ರಸ್ತುತ ಈ ಮಹಾಪ್ರಬಂಧದ ರಚನೆಗೆ ಎರಡು ರೀತಿಯ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿ (Primary Sources)

೨. ಆನುಷಂಗಿಕ ಆಕರ ಸಾಮಗ್ರಿ (Secondary Sources)

ಈ ಎರಡೂ ಮೂಲಗಳಿಂದಲೂ ಪ್ರಸ್ತುತ ಪ್ರಬಂಧಕ್ಕೆ ನೆರವಾಗುವ ವಿಷಯ ಸಂಗ್ರಹಣೆಯನ್ನು ಮಾಡಲಾಗಿದೆ.

೧. ಮೂಲ ಆಕರ ಸಾಮಗ್ರಿ

ಯಾವುದೇ ನಾಡಿನ ಪ್ರದೇಶಗಳ ಕಲೆ, ಇತಿಹಾಸ, ಸಂಸ್ಕೃತಿಗಳನ್ನು ತಿಳಿಯಲು ಆ ಪ್ರದೇಶದ ಕ್ಷೇತ್ರ ಕಾರ್ಯ ಬಹುಮುಖ್ಯವಾದ ಸಂಗತಿಯಾಗಿರುತ್ತದೆ. ಈ ಪ್ರಕ್ರಿಯೆಯಿಂದ ಮೂಲ

ಆಕರ ಸಾಮಗ್ರಿಯನ್ನು ಸಂಗ್ರಹಿಸಲು ಸುಲಭವಾಗಿರುತ್ತದೆ. ಈ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿ ಜೈನ ಧರ್ಮಕ್ಕೆ ಸಂಬಂಧಿಸಿದ ಭಿತ್ತಿ ಚಿತ್ರಗಳ ಹಸ್ತ ಚಿತ್ರಗಳು, ಪಟ ಚಿತ್ರಗಳು, ಕಾಗದದ ಮೇಲಿನ ಚಿತ್ರಗಳು ಹಾಗೂ ಮುಖ್ಯ ಗ್ರಂಥಗಳಲ್ಲಿಯ ಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಕ್ಷೇತ್ರ ಕಾರ್ಯ ಮಾಡುವ ಸಂದರ್ಭದಲ್ಲಿ ಸಂದರ್ಶನ, ಛಾಯಾಚಿತ್ರ, ಚಲನಚಿತ್ರಗಳ ಸಂಗ್ರಹಣೆ ಹಾಗೂ ಜೈನ ಶ್ರಾವಕರ ಮನೆ, ಮಠ, ಬಸದಿ, ದೇವಾಲಯಗಳು ಹಾಗೂ ಜೈನ ಹಸ್ತಪ್ರತಿ ಸಂಗ್ರಹಾಲಯಗಳಿಗೆ, ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಲ್ಲಿಯೂ ಛಾಯಾಗ್ರಹಣ ಹಾಗೂ ಸಂದರ್ಶನಗಳನ್ನು ಪ್ರಸ್ತು ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಸಂದರ್ಶನ :– ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಹಲವು ಮುಖ್ಯ ಜೈನ ಕ್ಷೇತ್ರಗಳಲ್ಲಿಯ ವಿಧ್ವಾಂಸರ ಸಂದರ್ಶವನ್ನು ಮಾಡಲಾಗಿದ್ದು ಜೈನ ಬಸದಿಯ ಇತಿಹಾಸ, ಮಹತ್ವ, ಪುರಾಣಗಳ ಉಲ್ಲೇಖ ಹಾಗೂ ರಾಜ ಮನೆತನಗಳು ಜೈನ ಧರ್ಮಕ್ಕೆ ನೀಡಿದ ಪ್ರೋತ್ಸಾಹ, ಕಾಳಜಿ ಹಾಗೂ ಮಹತ್ವದ ಕುರಿತಂತೆ ಚರ್ಚಿಲಾಗಿರುವುದಲ್ಲದೇ ಜೈನ ಚಿತ್ರಕಲೆಯ ಪರಂಪರೆಯನ್ನು ಅನುಸರಿಸಿ, ಪೋಷಿಸಿ ಆಚರಿಸಿದ ಹಲವು ಮಾಹಿತಿ–ಗಳನ್ನು ಸಂದರ್ಶನಗಳ ಮುಖೇನ ಸಂಗ್ರಹಿಸಲಾಗಿದೆ. ಇಷ್ಟೇ ಅಲ್ಲದೆ ಜೈನ ಚಿತ್ರಕಲೆಯಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಹೊಂದಿರುವ ನಾಡಿನ ಪ್ರಮುಖ ವಿದ್ವಾಂಸರ ಸಂದರ್ಶನವನ್ನು ಅವರಿದ್ದಲ್ಲಿಯೇ ತೆರಳಿ ಅವರಿಂದ ಪ್ರಮುಖ ಅಂಶಗಳನ್ನು ಸಂಗ್ರಹಿಸಲಾಗಿದ್ದು ದೂರವಾಣಿ ಹಾಗೂ ಅಂತರ್ಜಾಲದ ಮೂಲಕವೂ ವಿಧ್ವಾಂಸರೊಂದಿಗೆ ನಿಕಟವಾದ ಸಂಪರ್ಕ ಸಾಧಿಸಿ ಪ್ರಸ್ತುತ ಅಧ್ಯಯನಕ್ಕೆ ಲಭ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಛಾಯಾಚಿತ್ರಣ :– ಜೈನ ಧರ್ಮಕ್ಕೆ ಸಂಬಂಧಿಸಿದ ಹಸ್ತಪ್ರತಿ ಚಿತ್ರಗಳು, ಭಿತ್ತಿಚಿತ್ರಗಳು, ಕಾಗದದ ಚಿತ್ರಗಳು, ಪಟ ಚಿತ್ರಗಳು ಹೀಗೆ ಮೂಲ ನೆಲೆಗಳ ಮೂಲ ಆಕರಗಳಾದ ಈ ಸಂಪನ್ಮೂಲಗಳನ್ನು ಛಾಯಾಚಿತ್ರ ಮಾಧ್ಯಮದ ಮುಖೇನ ಅವುಗಳನ್ನು ಪ್ರತಿಮಾಡಿ ಸಂಗ್ರಹಿಸಲಾಗಿದ್ದು, ಇದಕ್ಕೆ ಅವುಗಳ ಮೂಲ ನೆಲಗಳಾದ ಜೈನ ಬಸದಿಗಳು, ಜೈನ ದೇವಾಲಯಗಳು, ಜೈನ ಮಠಗಳು, ಜೈನ ಶ್ರಾವಕರ ಮನೆಗಳು, ವಸ್ತು ಸಂಗ್ರಹಾಲಯಗಳು, ಹಸ್ತಪ್ರತಿ ಸಂಗ್ರಹಾಲಯಗಳು ಹಾಗೂ ಹಸ್ತಪ್ರತಿ ಭಂಡಾರಗಳು, ವಿಶ್ವವಿದ್ಯಾಲಯಗಳು, ಹಸ್ತಪ್ರತಿ ಹೊಂದಿದ ಇತರೆ ಪುಟಗಳು ಹೀಗೆ ಎಲ್ಲಾ ಮೂಲ ನೆಲೆಗಳಿಗೂ ಸಂದರ್ಶನವನ್ನು ನೀಡಿ ಅಲ್ಲಿ ಸಿಗುವ ಮೂಲ ಆಕರಗಳ ಛಾಯಾಚಿತ್ರ ಸಹಾಯದಿಂದ ಇವುಗಳನ್ನು ಪ್ರತಿ ಮಾಡಿಕೊಂಡು ಪ್ರಸ್ತುತ ಈ ಸಂಶೋಧನೆಗೆ ಅನುಕೂಲಕರವಾಗುವಂತೆ ಬಳಸಿಕೊಳ್ಳಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ

ಪ್ರಸ್ತುತ ಜೈನ ಚಿತ್ರ ಪರಂಪರೆ ಸಂಶೋಧನೆಗೆ ಪೂರಕವಾಗುವ ಆನುಷಂಗಿಕ ಆಕರಗಳಾದ ಸಂಶೋಧನಾ ಮಹಾಪ್ರಬಂಧಗಳು, ಪ್ರಕಟಿತ–ಅಪ್ರಕಟಿತ ಸಾಹಿತ್ಯ ಕೃತಿಗಳು, ಶಾಸನ ಸಂಪುಟಗಳು, ನಿಘಂಟುಗಳು, ವಿಶ್ವಕೋಶಗಳು, ಗ್ಯಾಝಿಟೀಯರ್‌ಗಳು, ಅನುವಾದ ಗ್ರಂಥಗಳು, ಹಸ್ತಪ್ರತಿಗಳು, ಸಂಶೋಧನಾ ಲೇಖನಗಳು, ಪತ್ರಿಕೆಗಳು, ಸಂಪಾದನಾ ಗ್ರಂಥಗಳು, ಜೈನ ಚಿತ್ರಗಳಿಗೆ ಸಂಬಂಧಪಟ್ಟಂತಹ ಲೇಖನಗಳು, ವಿಶ್ವವಿದ್ಯಾಲಯಗಳ ಗ್ರಂಥಾಲಯಗಳು, ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು ಅಲ್ಲಿ ದೊರೆತ ಪ್ರಮುಖ ಗ್ರಂಥಗಳನ್ನು ಅಭ್ಯಾಸ ಮಾಡಿ, ನಕಲು ಪ್ರತಿ ಮಾಡಿ ಸಂಶೋಧನೆಗೆ ಸಂಬಂಧಿಸಿದ ಮಾಹಿತಿಗಳನ್ನು ಗ್ರಂಥಗಳಲ್ಲಿ ಅಡಿ ಟಿಪ್ಪಣಿಯೊಂದಿಗೆ ಬಳಸಿಕೊಳ್ಳಲಾಗಿದೆ. ಇಷ್ಟೇ ಅಲ್ಲದೆ ಜೈನ ಚಿತ್ರಗಳಿಗೆ ಸಂಬಂಧಿಸಿದ ಹಲವಾರು ಮಾಹಿತಿಯನ್ನು ಅಂತರ್ಜಾಲದಲ್ಲಿ ಹುಡುಕಾಡಿ ಅಲ್ಲಿಂದಲೂ ಸಹ ಚಿತ್ರಗಳನ್ನು ಹಾಗೂ ಉಪಯುಕ್ತ ಮಾಹಿತಿಯನ್ನು ಸಂಗ್ರಹ ಮಾಡಿಕೊಂಡು ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

卐卐卐

ಅಧ್ಯಾಯ : ಎರಡು

ಜೈನ ಚಿತ್ರಕಲೆಯ ನೆಲೆ-ಹಿನ್ನೆಲೆ, ವರ್ಗೀಕರಣ

ಅಧ್ಯಾಯ : ಎರಡು

ಜೈನ ಚಿತ್ರಕಲೆಯ ನೆಲೆ-ಹಿನ್ನೆಲೆ, ವರ್ಗೀಕರಣ

ಭಾರತವು ಸರ್ವಧರ್ಮ ಸಮನ್ವಯ ಸಾರುವ ವಿಶ್ವದ ಏಕೈಕ ದೇಶ. ಇಂತಹ ಪುಣ್ಯ ಭೂಮಿಯಲ್ಲಿ ಹಲವಾರು ಧರ್ಮಗಳು ಟಿಸಿಲೊಡೆದು ಗಿಡವಾಗಿ, ಮರವಾಗಿ ತನ್ನದೇ ಆದ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರಗಳ ತತ್ವಾಂಕುರಗಳನ್ನು ಜನಸಾಮಾನ್ಯರಿಗೆ ಹಂಚಿ ಅವರನ್ನು ಸನ್ಮಾರ್ಗದಲ್ಲಿ ನಡೆಸುವ ಸದುದ್ದೇಶವನ್ನು ಸಾಮಾನ್ಯವಾಗಿ ಎಲ್ಲಾ ಧರ್ಮಗಳು ಹೊಂದಿವೆ. ಅವುಗಳಲ್ಲಿ ವಿಶೇಷ ಎಂಬಂತೆ ಜೈನ ಧರ್ಮವು ಇತರ ಧರ್ಮಗಳಿಂದ ಭಿನ್ನವಾಗಿ ಎರಡು ಕಾರಣಗಳಿಂದ ತನ್ನನ್ನು ತಾನು ಗುರುತಿಸಿಕೊಳ್ಳುತ್ತದೆ. ಮೊದಲನೆಯದು ಈ ಧರ್ಮ ಪ್ರತಿಪಾದಿಸುವ ಸ್ಯಾದ್ವಂದ ಸಿದ್ಧಾಂತ. ಎರಡನೆಯದು ಅಹಿಂಸೆ. "ಅಹಿಂಸಾ ಪರಮೋಧರ್ಮ" ಎನ್ನುವ ಧ್ಯೇಯವಾಕ್ಯವನ್ನು ಧ್ಯೇಯವಾಕ್ಯವಾಗಿ ಪ್ರತಿಪಾದಿಸುವ ಈ ಧರ್ಮವು ಅಹಿಂಸೆ, ಸತ್ಯ, ಆಶ್ತೇಯ, ಅಪರಿಗ್ರಹ, ಬ್ರಹ್ಮಚರ್ಯ ಎಂದು ಐದು ಪಂಚಾಣುವ್ರತಗಳಾಗಿವೆ. ಎಲ್ಲಾ ಜೀವಿಗಳು ಸಮಾನ. ಅವುಗಳಲ್ಲಿ ಉಚ್ಚ, ನೀಚವೆಂಬ ಕಲ್ಪನೆಯೇ ಹಿಂಸೆಯ ಮೂಲ ಎಂದು ಪ್ರತಿಪಾದಿಸುತ್ತದೆ.

ಪ್ರಾರಂಭದಿಂದಲೂ ವೈದಿಕ ಸಂಸ್ಕೃತಿಯನ್ನು ಪ್ರಶ್ನಿಸುವುದರ ಮೂಲ ಋಣಾತ್ಮಕವಾಗಿ ಪ್ರತಿಕ್ರಿಯಿಸುತ್ತಾ ಪರ್ಯಾಯ ಸಂಸ್ಕೃತಿಯನ್ನು ಹುಟ್ಟು ಹಾಕಿದ ಜೈನಧರ್ಮ ಶ್ರವಣ ಪರಂಪರೆಯಿಂದ ಬಂದುದು. ಅವೈದಿಕ ಧೋರಣೆಯ ಶ್ರವಣ ಪರಂಪರೆ ಮತ್ತು ಶ್ರವಣ ಪರಂಪರೆಯ ಟಿಸಿಲುಗಳಾದ ಬೌದ್ಧ, ಲೋಕಾಯುತ, ಸಾಂಕ್ಯ, ಅಜೀವಕ ಮುಂತಾದ ಪಂಥಗಳಿಗಿಂತ ಹೆಚ್ಚು ಪ್ರಾಚೀನತೆಯನ್ನು ಮತ್ತು ಪ್ರಾಮುಖ್ಯತೆಯನ್ನು ಪಡೆದಂತಹ ಧರ್ಮ ಜೈನಧರ್ಮ. ಇಲ್ಲಿಯವರೆಗೂ ನಡೆದ ಸಂಶೋಧನೆಗಳಿಂದ ಈ ಮಾತು ಋಜುವಾತಾಗಿದೆ. ವೇದ, ಉಪನಿಷತ್, ಮಹಾಭಾರತ ಮತ್ತು

ಪುರಾಣಗಳಲ್ಲಿ ಕಾಣುವ ವಾತಾರಶನ ಮುನಿಗಳ ಮತ್ತು ವೃಷಭನ ಉಲ್ಲೇಖಗಳು, ಹರಪ್ಪಾ, ಮೊಹೆಂಜೋದಾರೋ ಉತ್ಖನದಲ್ಲಿ ಸಿಕ್ಕ ಮೂರ್ತಿಗಳು ಜೈನಧರ್ಮದ ಪ್ರಾಚೀನತೆಯನ್ನು ಸಾರುತ್ತಿವೆ. ೨೪ ಜನ ತೀರ್ಥಂಕರರಲ್ಲಿ ಈಗಾಗಲೇ ೨೩ನೆಯ ತೀರ್ಥಂಕರ ಪಾರ್ಶ್ವನಾಥ ಮತ್ತು ೨೪ ನೆಯ ತೀರ್ಥಂಕರ ಮಹಾವೀರ ಐತಿಹಾಸಿಕ ಪುರುಷರೆಂಬುದಾಗಿ ವಿದ್ವಾಂಸರ ಸಂಶೋಧನೆಗಳಿಂದ ದೃಢಪಟ್ಟಿದೆ.[೧]

ಹೀಗೆ ೨೪ ತೀರ್ಥಂಕರರ ಮೂಲ ಪುರಾಣಗಳ ಇತಿಹಾಸವನ್ನು ಶೋಧಿಸುವುದಾದರೆ ಮೊದಲ ತೀರ್ಥಂಕರ ಆದಿನಾಥನಿಂದ ಪ್ರಾರಂಭಗೊಳ್ಳುವ ಜೀನಧರ್ಮದ ಚರಿತ್ರೆ ನಂತರ ೨೩ ಜನ ತೀರ್ಥಂಕರರಿಂದ ಪ್ರವರ್ತಿತವಾಗುತ್ತದೆ. ಅದರಲ್ಲಿ ೨ನೇ ತೀರ್ಥಂಕರ ಅಜಿತನಾಥ, ೪ನೆಯವರಾದ ಅಭಿನಂದನನಾಥ, ೫ನೆಯವರಾದ ಸುವತಿನಾಥ ಅಯೋಧ್ಯೆಯಲ್ಲಿಯೂ, ೩ನೆಯವರಾದ ಸಂಭವನಾಥ ಶ್ರವಾಸ್ತಿ ನಗರದಲ್ಲಿಯೂ, ೬ನೆಯರಾದ ಪದ್ಮಪ್ರಭ ಕೌಸಂಬಿಯಲ್ಲಿಯೂ, ೭ನೆಯವರಾದ ಸುಪಾರ್ಶ್ವನಾಥ, ೨೩ನೆಯ ಪಾರ್ಶ್ವನಾಥ ಇವರು ವಾರಣಾಸಿಯಲ್ಲಿಯೂ, ೮ನೆಯವರಾದ ಚಂದ್ರಪ್ರಭ ಚಂದ್ರಪುರಿಯಲ್ಲಿ, ೯ನೆಯವರಾದ ಪುಷ್ಪದಂತೆ ಕಾಂಕದಿಯಲ್ಲಿ, ೧೦ನೆಯ ತೀರ್ಥಂಕರನಾದ ಶೀತಲನಾಥನ ಜನ್ಮವು ಬದ್ದಲಪುರ, ೧೧ನೆಯವರಾದ ಶ್ರೇಯಂತ ಶಾರನಾಥದಲ್ಲಿ, ೧೨ನೆಯ ತೀರ್ಥಂಕರ ವಾಸುಪೂಜ್ಯ ಚಂಪಾಪುರದಲ್ಲಿ, ೧೩ ನೆಯ ತೀರ್ಥಂಕರ ಮಿಮಲನಾಥ ಕಂಪಿಲಾನಗರದಲ್ಲಿ, ೧೫ ನೆಯ ತೀರ್ಥಂಕರ ಧರ್ಮನಾಥ ರತ್ನಪುರಿಯಲ್ಲಿ, ೧೬ನೆಯ ತೀರ್ಥಂಕರ ಶಾಂತಿನಾಥ, ೧೭ನೆಯ ತೀರ್ಥಂಕರ ಕುಂದುನಾಥ, ೧೮ನೆಯ ತೀರ್ಥಂಕರ ಅರನಾಥ ಇವರ ಜನನವು ಹಸ್ತಿನಾಪುರದಲ್ಲಿ, ೧೯ನೆಯ ಮಲ್ಲಿನಾಥ ಮತ್ತು ೨೧ ನೆಯ ನೇಮಿನಾಥ ಮಿಥಲಾ ನಗರದಲ್ಲಿ, ೨೦ ನೆಯ ಮುನಿಸುವ್ರತ ರಾಜಗೃಹದಲ್ಲಿ ಹುಟ್ಟಿದರು. ಇವರಲ್ಲಿ ಧರ್ಮನಾಥ, ಅರನಾಥ, ಕುಂದುನಾಥರ ಜನನವು ಕುರುವಂಶದಲ್ಲಾಯಿತು. ಮುನಿಸುವ್ರತನು ಹರಿವಂಶದಲ್ಲಿ, ಉಳಿದವರು ಇಕ್ವಾಕು ವಂಶದಲ್ಲಿ ಜನಿಸದಿರು. ಇವರಲ್ಲಿ ವಾಸು ಪೂಜ್ಯರು ಚಂಪಾಪುರದಲ್ಲಿ ಉಳಿದವರು ಸಮ್ಮೇದಗಿರಿಯಲ್ಲಿ ಮೋಕ್ಷ ಹೊಂದಿದರು. ಶಾಂತಿನಾಥ, ಕುಂದುನಾತ, ಅರನಾಥರು ಪರಿಷ್ತ್ರಯಿಸುವ ಮೊದಲು ಚಕ್ರವರ್ತಿಗಳಾಗಿಯೂ ಬಾಳಿದರು. ವಾಸುಪೂಜ್ಯ, ಮಲ್ಲಿ, ನೇಮಿ, ಪಾರ್ಶ್ವ ವರ್ಧಮಾನರು ಮದುವೆಯಾಗಲಿಲ್ಲ. ಉಳಿದವರು ಆಗಿದ್ದರು ಎಂದು ಅಭಿಪ್ರಾಯಪಡಲಾಗಿದೆ.[೨] ಹೀಗೆ ೨೪ ತೀರ್ಥಂಕರರ ಮೂಲ ನೆಲೆ ಮತ್ತು ಅವರ ವಂಶಾವಳಿಯನ್ನು ಸಂಕ್ಷಿಪ್ತವಾಗಿ ಇತಿಹಾಸ ಹಿನ್ನೆಲೆಯಲ್ಲಿ ವಿವೇಚಿಸಬಹುದಾಗಿದೆ.

---

೦೧. ಡಾ. ಕೆ. ಶಾರದಾ : ಜೈನ ಸಂಸ್ಕೃತಿ. ಪು-೨

೦೨. ಅದೇ., ಪು-೩

೨೪ ಜನ ತೀರ್ಥಂಕರರಿಂದ ಪ್ರವರ್ತಿತವಾದ ಜೈನ ಧರ್ಮದ ಸಿದ್ಧಾಂತಗಳನ್ನು ಸಾರ ಸಂಗ್ರಹ ರೂಪವಾಗಿ ಒಂದು ಶ್ಲೋಕದಲ್ಲಿ ಹೀಗೆ ಹಿಡಿದಿಡಬಹುದು. ಜೈನಧರ್ಮದ ಅರ್ಥವನ್ನೆಲ್ಲ ಒಳಗೊಂಡ ಕೆಳಗಿನ ಪದ್ಯ ಮಹಾವೀರನ ಪ್ರಥಮ ಗಣಧರ ಇಂದ್ರ ಮತ್ತು ಪಾರ್ಶ್ವರ ಗಣಧರ ಗೌತಮರ ಮಧ್ಯೆ ನಡೆದ ಸಂವಾದವನ್ನು ಒಳಗೊಂಡಿದೆ.

ತ್ರೈ ಕಾಲ್ಯಂ ದ್ರವ್ಯಷಟ್ಕಂ ನವಪದಸಹಿತಂ ಜೀವಷಟ್ಕಾಯ ಲೇಶ್ಯಾ:
ಪಂಚಾನ್ನೇಚಾಸ್ತಿಕಾಯ ವ್ರತ ಸಮಿತಿ ಗತಿ ಜ್ಞಾನ ಚಾರಿತ್ರ್ಯ ಭೇದಾಃ
ಇತ್ಯೇತಿನ್ಮೋಕ್ಷ ಮೂಲಂ ತ್ರಿಭಜವದ ಮಹಿತ್ವಃ ಪ್ರೋಕ್ತನು ಮಹದ್ಭಿರಿಶ್ವೇಃ
ಪ್ರತ್ಯೇತಿ ಶ್ರಧ್ಧಧಾತಿ ಸ್ಪೃಶತ ಸಮಿತಿಯಾನ

ಈ ಮೇಲಿನ ಶ್ಲೋಕದ ಗೂಡಾರ್ಥವನ್ನು ಭೇದಿಸಿ ವಿಸ್ತೃತವಾಗಿ ಈ ಕೆಳಕಂಡಂತೆ ವಿವರಿಸಲಾಗಿದೆ.

೦೧. **ತ್ರಿಕಾಲಗಳು :** ಭೂತ, ಭವಿಷ್ಯತ್, ವರ್ತಮಾನಗಳು

೦೨. **ಷಟ್ ದ್ರವ್ಯಗಳು** : ಜೀವ, ಅಜೀವ, ಧರ್ಮ, ಅಧರ್ಮ, ಆಕಾಶ, ಕಾಲ ಇವು ಆರು ದ್ರವ್ಯಗಳು.

೦೩. **ನವಪದ ಸಹಿತಂ :** ಜಿವ, ಅಜೀವ, ಅಸ್ತ, ಬಂಧ, ಸಂವಹರ, ನಿರ್ಜರ, ಮೋಕ್ಷ, ಪಾಪ, ಪುಣ್ಯ ಎಂಬ ಒಂಭತ್ತು ಪದಾರ್ಥಗಳು.

೦೪. **ಜೀವ ಕಾರ್ಯಗಳು :** ಪೃಥ್ವಿ, ಜಲ, ಅಗ್ನಿ, ವಾಯು, ವನಸ್ಪತಿ, ತ್ರಸ

೦೫. **ಆರು ಲೇಶ್ಯಗಳು :** ಕೃಷ್ಣ, ನೀಲ, ಕಪೋತ, ಪೀತ, ಪದ್ಮ, ಶುಕ್ಲ.

೦೬. **ಪಂಚಾಸ್ತಿಕಾಯಗಳು** : ಜೀವ, ಅಜೀವ, ಧರ್ಮ, ಅಧರ್ಮ, ಆಕಾಶ.

೦೭. **ಪಂಚವ್ರತ :** ಅಹಿಂಸಾ, ಸತ್ಯ, ಅಚಾರ್ಯ, ಬ್ರಹ್ಮಚರ್ಯ, ಅಪರಿಗ್ರಹ.

೦೮. **ಪಂಚ ಸಮಿತಿಗಳು** : ಈಯರ, ಭಾಷ, ಏಕ್ಷಣ, ಆದಾನ, ನಿಕ್ಷೇಪಣಾ, ಉತ್ಸರ್ಗ.

೦೯. **ಪಂಚ ಗತಿಗಳು** : ದೇವ, ನಾರಕ, ಮನುಷ್ಯ, ತಿರ್ಯಂಚ ಮತ್ತು ಸಿದ್ಧ.

೧೦. **ಪಂಚಜ್ಞಾನಗಳು** : ಮತಿ, ಶೃತಿ, ಅವಧಿ ಮನಃ ಪರ್ಯಾಯ ಕೇವಲ ಜ್ಞಾನ.

೧೧. **ಪಂಚತಂತ್ರ :** ಸಾಮಾಯಿಕ ಛೇದೋಪಸ್ಥಾನ, ಪರಿಹಾರ ವಿಶುದ್ಧಿ, ಸೂಕ್ಷ್ಮ ಸಂಪರಾಯ ಯಧಾಖ್ಯಾತ ಇದು ಜೈನ ದರ್ಶನದ ಒಂದು ನೀಲ ನಕಾಶೆ.[೩]

೦೩. ಡಾ. ಕೆ. ಶಾರದಾ : ಜೈನ ಸಂಸ್ಕೃತಿ. ಪು–೫

ಹೀಗೆ ಮೇಲೆ ನಾವು ನೋಡಲಾದ ಮಹಾವೀರನ ಪ್ರಥಮ ಗಣಧರ ಇಂದ್ರ ಮತ್ತು ಪಾರ್ಶ್ವಕ ಗಣಧರ ಗೌತಮರ ಮಧ್ಯೆ ನಡೆದ ಸಂವಾದವನ್ನು ಒಳಗೊಂಡ ಪದ್ಯದ ವಿಸ್ತೃತ ರೂಪವನ್ನು ವಿವೇಚಿಸಲಾಗಿದೆ.

ಮುಂದುವರಿದಂತೆ ತೀರ್ಥಂಕರ ತೀರ್ಥರೂಪದ ಬೋಧನೆಗಳನ್ನು ಹೀಗೆ ಸಂಗ್ರಹಿಸಬಹುದು. ಸೃಷ್ಟಿ, ಸ್ಥಿತಿ, ಲಯಗಳನ್ನು ಮತ್ತು ಅದರ ಕಾರಣಕರ್ತರನ್ನು ಒಪ್ಪದ ಜೈನಧರ್ಮ ಹಿಂದುತ್ವದ ಪರಿಕಲ್ಪನೆಯನ್ನೇ ನಿರಾಕರಿಸುತ್ತದೆ. ಹಾಗಾಗಿ ದೇವರ ಅವತಾರದಲ್ಲಿ ನಂಬಿಕೆಯಿಲ್ಲ. ಸೃಷ್ಟಿಕರ್ತನನ್ನು ತಿರಸ್ಕರಿಸುವ ಜೈನಧರ್ಮ ಆತ್ಮದ ಅಸ್ತಿತ್ವವನ್ನು ನಿರಾಕರಿಸುವುದಿಲ್ಲ. ಪುನರ್‌ಜನ್ಮದಲ್ಲಿಯೂ ನಂಬಿಕೆ ಇಡುತ್ತದೆ. ವ್ಯಕ್ತಿ, ಪೂಜೆಯನ್ನು ತಿರಸ್ಕರಿಸುವ ಜೈನಧರ್ಮ ವ್ಯಕ್ತಿಯ ಮೌಲ್ಯಗಳನ್ನು ಆರಾಧಿಸುತ್ತದೆ. ಪುರುಷ ಪ್ರಯತ್ನಕ್ಕೆ ಪ್ರಾಮುಖ್ಯತೆಯನ್ನು ಕೊಡುವ ಜೈನಧರ್ಮ ಮನುಷ್ಯ ಸಾಧನೆಯ ಮೂಲಕ ದೈವತ್ವಕ್ಕೇರಬಲ್ಲವೆಂಬುದನ್ನು ನಂಬುತ್ತದೆ. ಚೈತನ್ಯ ಸ್ವರೂಪಿಯಾದ ಜೀವ ಅಮರ ಬಂಧನಕ್ಕೆ ಸಿಲುಕುವುದರ ಮೂಲಕ ಶುಭ, ಆಶುಭ ಕರ್ಮಗಳಿಗೆ ಒಳಗಾಗುತ್ತಿದೆ. ಹುಟ್ಟು ಸಾವುಗಳ ಪರಿಭ್ರಮಣೆಯಿಂದ ಮುಕ್ತವಾಗಬಯಸುವ ಜೀವ ಈ ಶುಭ–ಅಶುಭಗಳ ಕರ್ಮಗಳನ್ನು ನಿರ್ಜರೆಯ ಮೂಲಕ ಬಿಡುಗೆ ಹೊಂದಿ ಮುಕ್ತನಾಗಬಲ್ಲನೆಂಬುದನ್ನು ಸಾರುತ್ತದೆ. ಚೇತನವು (ಜೀವ) ಸಾಧನೆಯ ಹಾದಿಯಲ್ಲಿ ರತ್ನತ್ರಯಗಳಾದ ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯಗಳನ್ನು ಅಳವಡಿಸಕೊಳ್ಳಬೇಕೆಂದು ಹೇಳುತ್ತದೆ. ಇವೆಲ್ಲವುಗಳಿಗಿಂತ ಮುಖ್ಯವಾಗಿ ಪಂಚಾಣುವ್ರತಗಳೆಂದರೆ ಅಹಿಂಸೆ, ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಇವು ವ್ಯಕ್ತಿತ್ವವನ್ನು ರೂಪಿಸುವ ಸಾಧನೆಗಳೆಂದು ತಿಳಿಸುತ್ತದೆ.[೧೪] ಈ ಎಲ್ಲಾ ಐತಿಹಾಸಿಕ ಹಾಗೂ ತಾತ್ವಿಕ ಹಿನ್ನೆಲೆಗಳ ಕಾರಣದಿಂದಾಗಿ ಜೈನಧರ್ಮವು ಸನಾತನ ಧರ್ಮವೆಂದೆನಿಸಿಕೊಂಡಿದೆ. ಅಲ್ಲದೆ ತನ್ನ ಆದರ್ಶ ಹಾಗೂ ನಿಲವುಗಳನ್ನು ಸ್ವಸ್ತ ಸಮಾಜದ ನಿರ್ಮಾಣಕ್ಕಾಗಿ ದಿನಂಪ್ರತಿ ಚಲನೆಯಲ್ಲಿ ಸಾಗುತ್ತಾ ಪರಂಪರೆಯನ್ನು ಕಟ್ಟಿಕೊಂಡಿದೆ.

ಜೈನೇತ್ತರ ಸಾಹಿತ್ಯದಲ್ಲಿ ಜೈನ ಪರಂಪರೆಗೆ ಪುಷ್ಟಿ ನೀಡುವ ಗ್ರಂಥಗಳಿದ್ದು, ಅದರಲ್ಲಿ ಶ್ರೀಮದ್ಭಾಗವತದ ಹೆಸರು ಉಲ್ಲೇಖನೀಯವಾಗಿದೆ. ಅದರ ಐದನೆಯ ಸ್ಕಂದದ ೨–೬ ಅಧ್ಯಾಯಗಳಲ್ಲಿ ಋಷಭದೇವನ ಸುಂದರ ವರ್ಣನೆಯಿಂದ ಅದರ ವಿವರ ಹೀಗಿದೆ:– ಮಾನವ ಸಂಖ್ಯೆಯು ಬೆಳೆಯದೇ ಇದ್ದಾಗ ಬ್ರಹ್ಮನು ಸ್ವಯಂಭೂ ಮನು ಹಾಗೂ ಸತ್ಯರೂಪಾ ಇವರನ್ನು ಉತ್ಪನ್ನ ಮಾಡಿದನು. ಇವರಿಗೆ ಪ್ರಿಯವ್ರತ ಎಂಬ ಮಗನು ಜನಿಸದಿನು. ಪ್ರಿಯವ್ರತನ ಮಗನು ಅಗ್ನೀಧ್ರನೆಂಬವನು. ಆಗ್ನೀಧ್ರನ ಮನೆಯಲ್ಲಿ ನಾಭಿಯು ಜನ್ಮವೆತ್ತಿದನು. ನಾಭಿಯು ಮರುದೇವಿಯನ್ನು ಮದುವೆಯಾದನು. ಇವರಿಗೆ ಋಷಭದೇವರನು ಜನಿಸದಿನು. ಋಷಭದೇವನಿಗೆ ಇಂದ್ರನು ಕೊಟ್ಟ

೧೪. ಡಾ. ಕೆ. ಶಾರದಾ : ಜೈನ ಸಂಸ್ಕೃತಿ, ಪು–೬

ಜಯಂತಿ ಎಂಬ ಸ್ತ್ರೀಯ ಹೊಟ್ಟೆಯಿಂದ ನೂರು ಜನ ಮಕ್ಕಳು ಜನಿಸದಿರು. ಇವರಲ್ಲಿ ಭರತನು ಹಿರಿಯನು. ಈ ಹಿರಿಯ ಮಗನಿಗೆ ರಾಜ್ಯಪದವನ್ನು ಒಪ್ಪಿಸಿ ಋಷಭನು ಸನ್ಯಾಸ ಸ್ವೀಕರಿಸಿದನು. ಆಗ ಇವನು ದಿಗಂಬರನಾಗಿದ್ದನು. ಇವರ ಹತ್ತಿರ ದೇಹವನ್ನುಳಿದು ಬೇರೆ ಏನೂ ಇರಲಿಲ್ಲ. ಮೌನವಾಗಿರುತ್ತಿದ್ದನು. ನಗ್ನರೂಪದಲ್ಲಿ ವಿಹರಿಸುತ್ತಿದ್ದನು. ಯಾರಾದರೂ ಮೈಮೇಲೆ ಉಗಳಿದರೂ, ಹೊಡೆದರೂ, ಕಲ್ಲು ಹೊಡೆದರೂ ಅತ್ತ ಅವನು ಲಕ್ಷ್ಯ ಕೊಡುತ್ತಿರಲಿಲ್ಲ. ಈ ಶರೀರವು 'ಅಸತ್' ಪದಾಥದ ಮನೆಯಿದೆ ಎಂದು ಭಾವಿಸಿ ಅಹಂಕಾರ-ಮಮಕಾರಗಳನ್ನು ತ್ಯಜಿಸಿ ಒಬ್ಬನೇ ಸಂಚರಿಸುತ್ತಿದ್ದನು. ಅವನ ಸುಂದರ ದೇಹವು ಮಲಿನವಾಗಿದ್ದಿತು. ಈ ಪ್ರಕಾರ ಕೈವಲ್ಯವತಿ ಭಗವಾನ್ ಋಷಭದೇವನು ನಿರಂತರ ಪರಮಾನಂದವನ್ನು ಅನುಭವಿಸುತ್ತಾ ಅನೇಕ ದೇಶಗಳಲ್ಲಿ ತಿರುಗಾಡುತ್ತಾ ಕೊಂಕ, ವೆಂಕ, ಕುಟಕ, ದಕ್ಷಿಣ ಕರ್ನಾಟಕ ದೇಶದಲ್ಲಿ ತನ್ನ ಇಚ್ಛೆಯಿಂದ ಬಂದನು. ಅಲ್ಲಿ ಕುಟಕಾಚಲ ಪರ್ವತದ ಉಪವನದಲ್ಲಿ ವಿಹರಿಸುತ್ತಾ ಇದ್ದನು. ಆಗ ಅರಣ್ಯಕ್ಕೆ ಒಮ್ಮೆ ಬೆಂಕಿ ಹತ್ತಿದಾಗ ಅದರಲ್ಲಿ ಪ್ರವೇಶಿಸಿ ತನ್ನನ್ನು ತಾನು ಸುಟ್ಟುಕೊಂಡುಬಿಟ್ಟನು.[೦೫] ಹೀಗೆ ಋಷಭೇಂದ್ರರ ಪುರಾಣದ ಐತೀಯವನ್ನು ನಾವಿಲ್ಲಿ ಕಾಣಬಹುದಾಗಿದೆ.

ಮಥುರೆಯ ಹತ್ತಿರ ನೆಲವನ್ನು ಅಗಿಯುವಾಗ ಡಾಕ್ಟರ್ ಪುಹರರನಿಗೆ ಒಂದು ಜೈನ ಶಿಲಾಲೇಖ ದೊರೆಯಿತು. ಅದು ಸುಮಾರು ಎರಡು ಸಾವಿರ ವರ್ಷ ಪ್ರಾಚೀನ ಕಾಲದ್ದಾಗಿದೆ. ಅದರ ಮೇಲೆ ಇಂಡೋ ಸಿಥಿಯನ್ (Indo-Sythian) ರಾಜನಾದ ಕನಿಷ್ಕ ಹುವಷ್ಕ ಮತ್ತು ವಸುದೇವನ ಸಂಪತ್ತು ಇದೆ. ಇದರಲ್ಲಿ ಭಗವಾನ್ ಋಷಭದೇವನ ಪೂಜೆಗಾಗಿ ದಾನ ಕೊಡುವ ಉಲ್ಲೇಖವಿದೆ. ಇಷ್ಟೇ ಅಲ್ಲದೆ ಈ ಶಿಲಾಲೇಖಕ್ಕಿಂತ ಪ್ರಾಚೀನವೂ, ಮಹತ್ವಪೂರ್ಣವೂ ಆದ ಶಿಲಾಲೇಖವು ಖಂಡಗಿರಿ ಉದಯಗಿರಿ (ಓಡಿಸಾ) ಯ ಆನೆ ಗುಹೆಯಲ್ಲಿ ಸಿಕ್ಕಿದೆ. ಇದನ್ನು ಜೈನ ಸಾಮ್ರಾಟ್ ಖಾರವೇಲನು ಬರೆಸಿದ್ದಾನೆ. ಇದು ೨೧೦೦ ವರುಷಗಳ ಹಿಂದನದಿದೆ[೦೬] ಎಂಬುದು ಪುರಾತತ್ವ ಇತಿಹಾಸಜ್ಞರ ಅಭಿಪ್ರಾಯವಾಗಿದೆ.

ಭಾರತ ಹಾಗೂ ಪಾಶ್ಚಾತ್ಯ ವಿಧ್ವಾಂಸರುಗಳು ಈ ವಿಷಯದ ಕುರಿತಾಗಿ ಹಲವು ಅಭಿಮತಗಳನ್ನು ಹಂಚಿಕೊಂಡಿದ್ದಾರೆ. 'ಡಾ||ಯಕೋಬಿಯರವರು' ಹೇಳುವ ಹಾಗೆ ಪಾರ್ಶ್ವನಾಥನು ಜೈನಧರ್ಮದ ಸ್ಥಾಪಕನೆನ್ನುವುದಕ್ಕೆ ಯಾವ ಆಧಾರಗಳು ಇಲ್ಲ. ಜೈನ ಪರಂಪರೆಯ ಪ್ರಥಮ ತೀರ್ಥಂಕರ ಋಷಭದೇವನನ್ನು ಜೈನ ಧರ್ಮದ ಸಂಸ್ಥಾಪಕನೆಂದು ಸ್ವೀಕರಿಸುವುದರಲ್ಲಿ ಒಮ್ಮತವಿದೆ. ಈ ಮಾರ್ಗದಲ್ಲಿ ಐತಿಹಾಸಿಕ ಸತ್ಯವಿರುವ ಸಂಭವವಿದೆ ಎಂದು ಅಭಿಪ್ರಾಯಿಸಿದರೆ ಭಾರತೀಯ

---

೦೫. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೧೪

೦೬. ಅದೇ., ಪು-೨೨

ದಾರ್ಶನಿಕ 'ಸರ್ ರಾಧಾಕೃಷ್ಣನ್'ರೂ ಈ ವಿಷಯದ ಕುರಿತಾಗಿ ಜೈನ ಪರಂಪರೆಯು ಋಷಭದೇವನಿಂದ ತಮ್ಮ ಧರ್ಮದ ಉತ್ಪತ್ತಿಯಾದುದನ್ನು ಹೇಳುತ್ತದೆ. ಇವನು ಬಹಳ ಶತಮಾನಗಳ ಹಿಂದೆಯೇ ಆಗಿದ್ದಾನೆ. ಇಸ್ವಿ ಸನ್ ಪೂರ್ವದಲ್ಲಿ ಮೊದಲನೆಯ ಶತಮಾನದಲ್ಲಿ ಪ್ರಥಮ ತೀರ್ಥಂಕರರ ಋಷಭದೇವನ ಪೂಜೆ ನಡೆಯುತ್ತಿದ್ದಿತು. ಜೈನಧರ್ಮವು ವರ್ಧಮಾನ ಮತ್ತು ಪಾರ್ಶ್ವನಾಥ ಇವರಿಗಿಂತಲೂ ಮೊದಲು ಪ್ರಚಲಿತವಾಗಿತ್ತೆಂಬುದರಲ್ಲಿ ಏನೂ ಸಂಶಯವಿಲ್ಲ. ಯಜುರ್ವೇದಲ್ಲಿ ಋಷಭದೇವ, ಅಜಿತನಾಥ ಮತ್ತು ಅಸಿಷ್ಟನೇಮಿ ಈ ಮೂವರು ತೀರ್ಥಂಕರರ ನಾಮಗಳ ಉಲ್ಲೇಖವಿದೆ. ಭಾಗವತ-ಪುರಾಣವೂ ಋಷಭದೇವನು ಜೈನಧರ್ಮದ ಸಂಸ್ಥಾಪಕನೆನ್ನುವ ಮಾತಿಗೆ ಸಮರ್ಥನೆ ನೀಡುತ್ತದೆ[೭] ಎಂಬುದು ವಿಧ್ವಾಂಸರ ಅಭಿಮತವಾಗಿದ್ದು ಜೀನ ಪರಂಪರೆಯ ಶೋಧ ಪುರಾವೆಗಳ ಮಹತ್ವದ ಅಂಶಗಳನ್ನು ಬಿಚ್ಚಿಡುತ್ತವೆ.

ಭಾರತ ಜೈನ ಪರಂಪರೆಯನ್ನು ನಾವು ನೋಡುವುದಾದರೆ ಈ ಧರ್ಮ ಪರಂಪರೆಯು ಪುರಾಣಗಳ ಕಾಲಕ್ಕೆ ಸೇರುವುದು. ಇದಕ್ಕೆ ಪೂರಕವಾಗಿ ಪ್ರಮುಖ ಪೂರಕ ದಾಖಲೆಗಳು ಹಿಂದೂ ಧರ್ಮದ ಮಹಾಗ್ರಂಥಗಳಲ್ಲಿ ದೊರೆತಿರುವುದನ್ನು ನಾವಿಲ್ಲಿ ಕಾಣಬಹುದು. ಇದರ ಜೊತೆ ಭಾರತದ ಇತಿಹಾಸವನ್ನು ನೋಡುವುದಾದರೆ ಜೈನ ಪರಂಪರೆ ಭಾರತದುದ್ದಗಲಕ್ಕೂ ತನ್ನ ವ್ಯಾಪ್ತಿಯನ್ನು ಚಾಚಿಕೊಂಡಿದ್ದು ಹಲವಾರು ಸಾಮ್ರಾಜ್ಯ, ಸಂಸ್ಥಾನಗಳು, ಜೈನಧರ್ಮದ ಪೋಷಕರಾಗಿ ಜೈನ ಕಲೆ, ಸಾಹಿತ್ಯಕ್ಕೆ ಆಶ್ರಯದಾತರಾಗಿ ತಮ್ಮ ಹಿರಿಮೆಯನ್ನು ಮೆರೆದ ರಾಜಮನೆತನಗಳಿವೆ. ಅವುಗಳಲ್ಲಿ ಭಾರತದ ನಾನಾ ರಾಜ್ಯಗಳಲ್ಲಿ ಇಂದಿಗೂ ನಾವು ಅವುಗಳ ಕುರುಹುಗಳನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖವಾಗಿ ಬಿಹಾರ, ಬಂಗಾಳ, ಗುಜರಾತ್, ಕಳಿಂಗ ಪ್ರಾಂತ್ಯ, ತಮಿಳುನಾಡು ಹಾಗೂ ಕರ್ನಾಟಕ ಹೀಗೆ ಉತ್ತರ ಭಾರತ ಹಾಗೂ ದಕ್ಷಿಣ ಭಾರತದಲ್ಲಿ ಎರಡೂ ಭಾಗದಲ್ಲಿಯೂ ಚಿತ್ರಕಲೆಯನ್ನು ಕಾಣಬಹುದಾಗಿದೆ.

ಉತ್ತರ ಹಿಂದುಸ್ತಾನದಲ್ಲಿ ಜೈನಧರ್ಮದ ಕೇಂದ್ರ ಸ್ಥಳವೆಂದು ಮಥುರೆಯನ್ನು ಇಲ್ಲಿ ಮೊದಲು ಉಲ್ಲೇಖಿಸಲಿಕ್ಕೆ ಬೇಕು. ಅಲ್ಲಿ ದೊರೆತ ಲೇಖವು ಕ್ರಿಸ್ತ. ಪೂರ್ವ ಎರಡನೆಯ ಶತಮಾನದಿಂದ ಕ್ರಿ.ಶ. ಐದನೆಯ ಶತಮಾನದವರೆಗೆ ನಡೆದಿರುತ್ತದೆ. ಆ ರೀತಿಯಲ್ಲಿ ಅದು ಬಹಳ ಪ್ರಾಚೀನವಾಗಿದೆ. ಇದರಿಂದ ಮಥುರಾ ನಗರವು ಬಹುಕಾಲದವರೆಗೆ ಜೈನಧರ್ಮದ ಕೇಂದ್ರಸ್ಥಾನವಾಗಿತ್ತೆಂಬುದು ಗೊತ್ತಾಗುತ್ತದೆ. ಅಲ್ಲದೆ ಜೈನಧರ್ಮದ ಇತಿಹಾಸದ ಮೇಲೆಯೂ ಈ ಲೇಖದಿಂದ ಪ್ರಕಾಶ ಬೀಳುವಂತಿದೆ. ಇದರಿಂದ ಜೈನಧರ್ಮದ ಸಿದ್ಧಾಮತವೂ ವ್ಯವಸ್ಥೆಯು ಅತಿ ಪ್ರಾಚೀನವಾಗಿದೆ ಎಂಬುದು ಕಂಡು ಬರುತ್ತದೆ. ಇದಲ್ಲದೆ ಉತ್ತರ ಭಾರತದಲ್ಲಿ ಉಜ್ಜಯಿನಿಯು ಇನ್ನೊಂದು ಜೈನಧರ್ಮದ ಪ್ರಸಿದ್ಧ ಕೇಂದ್ರ ಸ್ಥಾನವಾಗಿದೆ. ಇದರು ಸಂಪ್ರತಿ ರಾಜನ ರಾಜಧಾನಿಯಾಗಿದ್ದಿತು. ಅವನು ಜೈನಧರ್ಮಕ್ಕೆ

೦೭. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೨೪

ದೊಡ್ಡ ಆಶ್ರಯದಾತನಾಗಿದ್ದನು. ಜೈನಗ್ರಂಥಗಳಲ್ಲಿ ಈ ಪಟ್ಟಣದ ವರ್ಣನೆಗಳು ಹಲವು ಕಡೆಗೆ ಸಿಕ್ಕುತ್ತವೆ[೧೮] ಎಂಬುದು ವಿಧ್ವಾಂಸರ ಶೋಧವಾಗಿದೆ.

ಉತ್ತರ ಭಾರತದಲ್ಲಿ

ಉತ್ತರಭಾರತದಲ್ಲಿ ಜೈನಧರ್ಮವು ಉನ್ನತಾವಸ್ಥೆಯಲ್ಲಿ ಇತ್ತೆಂದು ಖಂಡಿತವಾಗಿ ಹೇಳಲಿಕ್ಕೆ ಸಾಧ್ಯವಿದೆ ಮತ್ತು ಅನೇಕ ರಾಜರು ಜೈನಧರ್ಮಕ್ಕೆ ಆಶ್ರಯವನ್ನು ಕೊಟ್ಟಿದ್ದುಂಟು. ಉದಾಹರಣೆಗಾಗಿ ಹರ್ಷವಧನನ್ನು ಪ್ರಸಿದ್ಧನೂ, ಪ್ರತಾಪಿಯೂ ಆತ ರಾಜನಾಗಿದ್ದನು. ಉತ್ತರ ಭಾರತವನ್ನೆಲ್ಲಾ ಆಳುತ್ತಿದ್ದನು. ಅವನು ಪ್ರಯಾಗದಲ್ಲಿ ಐದು ವರ್ಷಗಳವರೆಗೆ ಧಾರ್ಮಿಕ ಉತ್ಸವವನ್ನು ಜರುಗಿಸಿದ್ದನು. ಅದರಲ್ಲಿ ಜೈನಧರ್ಮದ ಮಹಾಪುರುಷರಿಗೂ ಆದರ ಸತ್ಕಾರ ಮಾಡಿದ್ದನು[೧೯] ಎಂಬ ಉಲ್ಲೇಖಗಳಿದ್ದು ಸಂಪೂರ್ಣವಾಗಿ ಉತ್ತರ ಹಿಂದೂಸ್ಥಾನದಲ್ಲಿಯೂ, ಮಧ್ಯ ಭಾರತದಲ್ಲಿಯೂ ಎಲ್ಲ ಪ್ರದೇಶಗಳಲ್ಲಿ ಸಿಕ್ಕಿರುವ ಜೈನಧರ್ಮದ ಗುರುಗಳು ಇದಕ್ಕೆ ಸಾಕ್ಷ್ಯವಾಗಿದೆ.

ಡಾ॥ ಫುಹರ್‌ಸಾಹೇಬರು ಹೇಳುವ ಪ್ರಕಾರವಾಗಿ ಸಹೇರ ಮಹೇರದಲ್ಲಿ ಉತ್ಖನ ಮಾಡಿದಾಗ ಜೈನ ಪರಂಪರೆಗೆ ಪೂರಕವಾಗಿ ಹಲವಾರು ಮಾಹಿತಿಗಳು ದೊರೆಯುತ್ತವೆ. ಸಹೇರ ಮಹೇರವು ಹನ್ನೊಂದನೆಯ ಶತಮಾನದಲ್ಲಿ ಶ್ರವಸ್ತಿನಗರವಾಗಿತ್ತು. ಆ ಕಾಲದಲ್ಲಿ ಇಲ್ಲಿ ಜೈನಧರ್ಮವು ಉತ್ತುಂಗ ಶಿಖರದಲ್ಲಿತ್ತು. ಉತ್ಖನನ್ನ ಸಂದರ್ಭದಲ್ಲಿ ತೀರ್ಥಂಕರರ ಅನೇಕ ಮೂರ್ತಿಗಳ ಅವಶೇಷಗಳು ಸಿಕ್ಕಿದ್ದು ಅವುಗಳ ಮೇಲೆ ಸಂವತ್ ೧೧೧೨ ರಿಂದ ೧೧೩೩ರ ವರಗಿನವೆಂದು ಕೆತ್ತಲಾಗಿವೆ. ಸುಹೃದ್ಧಜನು ಶ್ರಾವಸ್ತಿಯ ಜೈನ ರಾಜದಲ್ಲಿ ಕೊನೆಯವನು. ಅವನು ಗಜನೀ ಮಹಮ್ಮದನ ಕಾಲದಲ್ಲಿ ಇದ್ದನು. ಇದಲ್ಲದೆ 'ಏರವಾ' ಎಂಬ ಸ್ಥಳದಲ್ಲಿಯೂ ಜೈನರ ಪ್ರಾಚೀನ ಗುರುತುಗಳು ನೋಡಲಿಕ್ಕೆ ಸಿಕ್ಕುತ್ತವೆ. ಈ ಸ್ಥಳದ ವಿಷಯಕ್ಕೆ ಡಾ॥ ಫುಹರ್‌ರು ಹೀಗೆ ಹೇಳಿದ್ದಾರೆ "ಒಂದು ಕಾಲದಲ್ಲಿ ಇಲ್ಲಿ ಜೈನರ ಪ್ರಸಿದ್ಧ ನಗರವಾದ ಅಲಭಿಯು ಇತ್ತು" ಗ್ವಾಲ್ಹೇರದ ಕೋಟೆಯಲ್ಲಿರುವ ವಿಶಾಲ ಜೈನಮೂರ್ತಿಗಳೂ, ಅಲ್ಲಿಯ ಪ್ರಾಚೀನ ರಾಜಮನೆತನಗಳೂ ಜೈನ ಧರ್ಮದೊಡನೆ ಇಟ್ಟುಕೊಂಡ ಸಂಬಂಧವನ್ನು ಸೂಚಿಸುತ್ತವೆ. ಉತ್ತರಭಾರತದಲ್ಲಿ ಜೈನರಾಜರ ಹೆಸರನ್ನು ನಾವು ಎತ್ತಿ ತೋರಿಸುವಂತಿರದಿದ್ದರೂ ಅನೇಕ ಅರಸು ಜೈನಧರ್ಮದ ಬೆಳವಣಿಗೆಗೆ ಸಹಾಯಕ ರಾಗಿದ್ದರೆಂಬುದನ್ನು ಒತ್ತಿ ಹೇಳುವಂತಿದೆ.

ಬಿಹಾರದಲ್ಲಿ

ಬಿಹಾರದಲ್ಲಿ ಜೈನಧರ್ಮ ಪಸರಿಕೆ ಉತ್ತುಂಗದಲ್ಲಿತ್ತು. ಕಾರಣ ಈ ಭೂಮಿಯು ಭಗವಾನ್

---

೧೮. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೯೩

೧೯. ಅದೇ.

ಮಹಾವೀರರ ಜನ್ಮಭೂಮಿ, ತಪೋಭೂಮಿ, ನಿರ್ವಾಣ ಭೂಮಿ ಹಾಗೂ ಕಾರ್ಯರಂಗವೂ ಆಗಿದೆ. ಭಗವಾನ್ ಮಹಾವರರು ಸ್ವತಃ ರಾಜಮನೆತನದವರಾದ ಕಾರಣ ಇವರು ಇದ್ದ ಕಾಲದಲ್ಲಿ ಹಾಗೂ ಇವರ ನಂತರ ಕಾಲದಲ್ಲಿಯೂ ಅನೇಕ ರಾಜಮನೆತನಗಳು ಹಾಗೂ ಅವುಗಳ ಸಾಮಂತ ರಾಜರುಗಳು ಜೈನ ಪರಂಪರೆಗೆ ತಮ್ಮದೇ ಆದಂತಹ ಕೊಡುಗೆಗಳನ್ನು ನೀಡಿದ್ದಾರೆ. ಅವರಲ್ಲಿ ಮುಖ್ಯವಾಗಿ ಚೇಟಕ ರಾಜ, ಶ್ರೇಣಿಕ ರಾಜ, ಅಶೋಕ, ಚಂದ್ರಗುಪ್ತ ಅಲ್ಲದೆ ನಂದವಂಶ, ಮೌರ್ಯ ಸಾಮ್ರಾಟರುಗಳು ಬಿಹಾರದಲ್ಲಿ ಜೈನಧರ್ಮಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಬಿಹಾರದಲ್ಲಿಯ ಜೈನ ಅರಸರುಗಳು ಅವರ ಕಾಲಾವಧಿಯಲ್ಲಿ ಜೈನ ಪರಂಪರೆಯನ್ನು ತನ್ನ ಸಾಮ್ರಾಜ್ಯವನ್ನು ಹೊರತುಪಡಿಸಿ ಬೇರೆ ಬೇರೆ ಕಡೆಗಳಿಗೂ ಹಬ್ಬಲು ಪ್ರಯತ್ನಿಸಿದರು. ಅವರಲ್ಲಿ ಚೇಟರಾಜನು ಭಗವಾನ್ ಮಹಾವೀರನ ಭಕ್ತರಾಗಿದ್ದನು. ತನ್ನ ಮಕ್ಕಳನ್ನು ಸಿಂಧು, ಅವಂತಿ, ಕೌಶಾಂಬಿ, ಚಂಪಾ ಮತ್ತು ಮಗಧ ಇತ್ಯಾದಿ ದೇಶಗಳ ರಾಜರಿಗೆ ಕೊಟ್ಟು ಮದುವೆ ಮಾಡಿ ಅಲ್ಲಿಯೂ ಸಹ ಧರ್ಮಪ್ರಚಾರಕ್ಕೆ ಅನುವು ಮಾಡಿಕೊಂಡನು. ಅದೇ ರೀತಿ ಶ್ರೇಣಿಕರಾಜ ಭಾರತ ಇತಿಹಾಸದಲ್ಲಿಯೇ ಮಗಧರಾಜ್ಯ ಕಂಡ ಶ್ರೇಷ್ಟ ದೊರೆ ಎಂದು ಪ್ರಸಿದ್ಧನಾಗಿದ್ದ ಬಿಂಬಸಾರನನ್ನು ಜೈನ ಸಾಹಿತ್ಯದಲ್ಲಿ ಶ್ರೇಣಿಕನೆಂದು ಅತಿ ಪ್ರಸಿದ್ಧನಾಗಿದ್ದನು. ಮೊದಮೊದಲು ಈತನು ಭಗವಾನ್ ಬುದ್ಧನ ಭಕ್ತನಾಗಿದ್ದ. ಈತ ತನ್ನ ಹೆಂಡತಿಯ ಜೈನ ಧರ್ಮೀಯ ಆಚರಣೆಯನ್ನು ಕಂಡು ಜೈನ ಸಂಸ್ಕಾರಕ್ಕೆ ಮನಸೋತು ಜೈನ ಪರಂಪರೆಯನ್ನು ಅನುಸರಿಸಿ ಪಸರಿಸುವ ಕಾರ್ಯದಲ್ಲಿ ತೊಡಗಿದನು.

ಚಂದ್ರಗುಪ್ತ ಮೌರ್ಯ ಸಾಮ್ರಾಜ್ಯದ ತೇಜೋ ತಿಲಕ ಜೈನ ಧರ್ಮೀಯನಾಗಿದ್ದ. ಇತನು ಮಗಧ ಪ್ರಾಂತದಲ್ಲಿ ಸಾಮ್ರಾಟನಾಗಿದ್ದನು. ಒಮ್ಮೆ ಹನ್ನೆರಡು ವರ್ಷಗಳ ಕಾಲ ತನ್ನ ಸಾಮ್ರಾಜ್ಯ ಭೀಕರ ಬರಗಾಲಕ್ಕೆ ತುತ್ತಾಗಿ ನಲುಗುತ್ತಿದ್ದುದನ್ನು ಕಂಡು ತನ್ನ ಮಗನಿಗೆ ಪಟ್ಟ ಕಟ್ಟಿ ತನ್ನ ಜೈನ ಗುರುಗಳಾದ ಜೈನಾಚಾರ್ಯ ಭದ್ರಬಾಹುವಿನೊಡನೆ ದಕ್ಷಿಣಭಾರತಕ್ಕೆ ಬಂದನು. ಹಾಗೂ ಇಲ್ಲಿಯೇ ಬಹುಕಾಲ ತಪಸ್ಸು ಮಾಡಿದನು ಎಂಬುದಕ್ಕೆ ಜೈನರ ಅತಿ ಪ್ರಾಚೀನ ಗ್ರಂಥವಾದ 'ತಿಲೋಯಪಣ್ಣತ್ತಿ' ಯಲ್ಲಿ ಉಲ್ಲೇಖವಿದೆ. "ಮುಕುಟಧಾರಿ ರಾಜರಲ್ಲಿ ಚಂದ್ರಗುಪ್ತನು ಕೊನೆಯದಾಗಿ ಜೀನದೀಕ್ಷೆ ತೆಗೆದುಕೊಂಡನು. ಅವನ ತರುವಾಯ ಮುಕುಟವನ್ನು ಧರಿಸಿದ ರಾಜರಾರೂ ಜಿನದೀಕ್ಷೆಯನ್ನು ಹೊಂದಲಿಲ್ಲ" ಎಂಬ ಮಾಹಿತಿ ಐತಿಹಾಸಿಕ ಪುಷ್ಟಿ ನೀಡುವುದು. ಹರಿಷೇಣಾಚಾರ್ಯರು ವಿರಚಿತದ (ಕ್ರಿ.ಶ. ೯೨೧) ಬೃಹತ್ಕಥಾಕೋಶದಲ್ಲಿ ಅಂತಿಮ ಶೃತಕೇವಲಿ ಶ್ರೀ ಭದ್ರಬಾಹುವಿಗೆ ಚಂದ್ರಗುಪ್ತನೆಂಬ ಶಿಷ್ಯನಿದ್ದ ಬಗೆ ಉಲ್ಲೇಖವಿದೆ. ಕ್ರಿ.ಶ. ೧೫೧೮ರಲ್ಲಿ ರಾಜ ನಂದಿಯೂ ತನ್ನ ಭದ್ರಬಾಹು ಚರಿತ್ರೆಯಲ್ಲಿ ಇದೇ ವಿಷಯವನ್ನು ಉಲ್ಲೇಖಿಸುತ್ತಾನೆ. ಇವಿಷ್ಟೇ ಅಲ್ಲದೆ ಕ್ರಿ.ಶ. ೧೬೭೦ರಲ್ಲಿ ಚಿದಾನಂದ ಕವಿಯ ಕನ್ನಡದಲ್ಲಿ ರಚಿಸಿದ ಮುನಿವಂಶಭ್ಯುದಯ ಕಾವ್ಯದಲ್ಲೂ, ಕ್ರಿ.ಶ. ೧೮೩೯ರಲ್ಲಿ ದೇವಚಂದ್ರ ರಚಿಸಿದ

ರಾಜಾವಳೀ ಕಥೆ, ಆರಾಧನಾ ಕಥಾಕೋಶ ಮತ್ತು ಪುಣ್ಯಸ್ರವ ಕಥಾಕೋಶ ಮೊದಲಾದ ಗ್ರಂಥಗಳಲ್ಲಿ ಚಂದ್ರಗುಪ್ತನ ಉಲ್ಲೇಖವನ್ನು ಕಾಣಬಹುದಾಗಿದೆ.

ಅಶೋಕ ಚಕ್ರವರ್ತಿ ಮೌರ್ಯ ಸಾಮ್ರಾಜ್ಯದ ಅರಸು ಚಂದ್ರಗುಪ್ತ ಮೌರ್ಯನ ಮೊಮ್ಮಗ, ತನ್ನ ತಾತನಂತೆ ಪರಾಕ್ರಮಿಯೂ, ಧಾರ್ಮಿಕ ನಿಷ್ಠನು ಆಗಿದ್ದನು. ಮೊದಲು ಅಶೋಕನು ಜೈನ ಧರ್ಮೀಯನಾಗಿದ್ದು ನಂತರ ಬೌದ್ಧ ಧರ್ಮಕ್ಕೆ ಸೇರಿದನು ಎನ್ನುವುದು ಇತಿಹಾಸ. ಆದರೆ ಪ್ರೊ. ಕರ್ನ್ ಅವರ ಪ್ರಕಾರ ರಾಜಪ್ರಜ್ಞೆಯಲ್ಲಿಯೂ, ಆಮಧಪ್ರಭಾವನೆಯಲ್ಲಿಯೂ ಬೌದ್ಧ ಧರ್ಮಕ್ಕಿಂತ ಜೈನ ಧರ್ಮದ ಪ್ರಾಬಲ್ಯವೇ ಹೆಚ್ಚಾಗಿ ಕಾಣುತ್ತದೆ ಎಂದು ಸೃಷ್ಟಿಸಿದ್ದಾನೆ. ಇದಲ್ಲದೆ ಅಶೋಕನು ಅಹಿಂಸೆಯ ವಿಷಯಕ್ಕೆ ಹಾಕಿದ ನಿಯಮವು ಬೌದ್ಧ ಧರ್ಮದ ಗ್ರಂಥಗಳಿಗಿಂತ ಜೈನಗ್ರಂಥದಲ್ಲಿ ಇರುವ ನಿಯಮಕ್ಕೆ ನಿಟವರ್ತಿಯಾಗಿದೆ ಎಂಬುದು ವಿಧ್ವಾಂಸರ ಅಭಿಪ್ರಾಯವಾಗಿತ್ತು.

ಬಂಗಾಳದಲ್ಲಿ

ಜೈನ ಧರ್ಮದ ಪವಿತ್ರ ಮತ್ತು ಅಧಿಸ್ಥಾನಗಳು ಮಗಧ ಮತ್ತು ಪಶ್ಚಿಮ ಬಂಗಾಳದ ಪ್ರಾಂತಗಳೆಂದು ಕೆಲವು ವಿಧ್ವಾಂಸರು ಹೇಳುತ್ತಾರೆ. ಒಂದು ಕಾಲದಲ್ಲಿ ಬಂಗಾಲದೊಳಗೆ ಬೌದ್ಧಧರ್ಮಕ್ಕಿಂತ ಜೈನ ಧರ್ಮವೇ ಹೆಚ್ಚು ಪ್ರಚಲಿತದಲ್ಲಿತ್ತು. ಪಶ್ಚಿಮ ಬಂಗಾಳದಲ್ಲಿರುವ 'ಸರಾಕ' ಜಾತಿಯ ಜನರು ಪ್ರಾಚೀನ ಕಾಲದ ಜೈನಶ್ರಾವಕರಾಗಿದ್ದರೆಂಬುದನ್ನು ಅವರ ಈಗಿನ ಜೀವನ ಕ್ರಮದಿಂದ ತಿಳಿಯುತ್ತದೆ. ಪೂರ್ವ ಬಂಗಾಳದ ಫರಿದಪುರ ಜಿಲ್ಲೆಯಲ್ಲಿ ಕ್ರಿ.ಶ. ೧೯೪೦ರಲ್ಲಿ ದೊರೆ ಜೈನಮೂರ್ತಿಯುಬ ೨ ಅಡಿ, ೩ ಇಂಚು ಎತ್ತರವಾಗಿದ್ದು ಸುಂದರವಾಗಿದೆ. ಬಂಗಾಳದ ಕೆಲವು ಭಾಗಗಳಲ್ಲಿ ದೊಡ್ಡ ದೊಡ್ಡ ಜೈನ ಮೂರ್ತಿಗಳು ಭೈರವನ ಹೆಸರಿನಿಂದ ಪೂಜಿಸಲ್ಪಡುತ್ತವೆ. ಬಾಂಕುಡಾ, ಮಾನಭೂಮ[೧೦] ಇತ್ಯಾದಿ ಸ್ಥಳಗಳಲ್ಲಿ ಈ ಆಚರಣೆಯನ್ನು ನಾವು ಇಂದಿಗೂ ಕಾಣಬಹುದಾಗಿದ್ದು ಇವು ಜೈನಧರ್ಮದ ಬಂಗಾಳದ ಕುರುಹುಗಳಾಗಿವೆ.

ಗುಜರಾತಿನಲ್ಲಿ

ಪ್ರಾಚೀನ ಕಾಲದಿಂದಲೂ ಜೈನಧರ್ಮದ ಸಂಬಂಧವು ಗುಜರಾತ್ ಪ್ರಾಂತದೊಡನೆ ಇದೆ. ಇದೇ ಅಲ್ಲದೆ ೨೨ನೆಯ ತೀರ್ಥಂಕರರಾದ ಭಗವಾನ್ ನೇಮಿನಾಥರು ಇದೇ ಪ್ರಾಂತ ಗಿರಿನಾರ ಪರ್ವತದ ಮೇಲೆ ನಿರ್ವಾಣ್ ಹೊಂದಿದರು ಎಂದು ವಿದ್ವಾಂಸರ ಅಭಿಪ್ರಾಯ. ಕ್ರಿ.ಶ. ೫ನೇ ಶತಮಾನದಲ್ಲಿ ಶ್ವೇತಾಂಬರ ಸಂಘದವರು ಎಲ್ಲರೂ ಸೇರಿ ತಮ್ಮ ಆಗಮ ಗ್ರಂಥಗಳನ್ನು ವ್ಯವಸ್ಥೆಗೊಳಿಸಿ ಬರೆದಿಟ್ಟರು. ದಕ್ಷಿಣ ಭಾರತದಲ್ಲಿ ದಿಗಂಬರ ಪಂಥವು ಪ್ರಬಲವಾಗಿದ್ದಂತೆ ಗುಜರಾತಿನಲ್ಲಿ

೧೦. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೯೨

ಶ್ವೇತಾಂಬರ ಪಂಥವು ಪ್ರಬಲವಾಗಿದೆ. ಗುಜರಾತ್‌ನ ಅನೇಕ ರಾಜಮನೆತನಗಳು ಜೈನಧರ್ಮವನ್ನು ಅವಲಂಬಿಸಿದ್ದವು. ರಾಷ್ಟ್ರಕೂಟರೂ ಕೆಲವು ದಿನ ಗುಜರಾತನ್ನು ಶಿಲಾಲೇಖದಲ್ಲಿ ಪ್ರಥಮ ಅಮೋಘವರ್ಷನ ಪ್ರಶಂಸೆಯಿದೆ. ಗುಜರಾತನ್ನು ಆಳಿದ ಕರ್ನಾಟಕ ರಾಜನಿವನು. ಇವನ ಗುರುವಾದ ಜಿನಸೇನಾಚಾರ್ಯ ತನ್ನ 'ಜಯಧವಲ' ಟೀಕೆಯ ಪ್ರಶಸ್ತಿಯಲ್ಲಿ ಅಮೋಘವರ್ಷನ ಉಲ್ಲೇಕವನ್ನು 'ಗುರ್ಜರ ನರೇಂದ್ರ' ಎಂಬ ಹೆಸರಿನಿಂದ ಮಾಡಲಾಗಿದೆ.[೧೧] ರಾಷ್ಟ್ರಕೂಟರ ತರುವಾಯ ಗುಜರಾತನ್ನು ಪಶ್ಚಿಮ ಚಾಲಿಕ್ಯರು ಆಕ್ರಮಣ ಮಾಡಿದರು. ಇವರನ್ನು ಒಬ್ಬ ಜೈನ ಸಾಧುವು ಮಾರ್ಗದರ್ಶಿಸಿ ಜೈನಧರ್ಮವನ್ನು ಪೋಷಿಸಿದರು.

ತಮಿಳುನಾಡಿನಲ್ಲಿ

ಪಲ್ಲವರ ತಾಯಿನಾಡಾಗಿದ್ದ ತಮಿಳುನಾಡಿಗೆ ಭಗವಾನ್ ನೇಮಿನಾಥನು ಬಂದಿದ್ದ ಉಲ್ಲೇಖವನ್ನು ನಾವು ನೋಡಬಹುದಾಗಿದ್ದು ಚೋಳರು, ಪಾಂಡ್ಯರು ಸಹ ಜೈನಧರ್ಮಕ್ಕೆ ಆಶ್ರಯವಿತ್ತು ಪೋಷಿಸಿದರು. ಇದಕ್ಕೆ ಪುಷ್ಠಿಯಂತೆ ಪಾಂಡ್ಯರ ರಾಜಧಾನಿಯಾಗಿದ್ದ ಮಧುರೆಯು ದಕ್ಷಿಣಭಾರತದಲ್ಲಿ ಜೈನ ಕೇಂದ್ರವಾಗಿತ್ತು. ಈ ಪಾಂಡ್ಯರ ನಾಡಿನಲ್ಲಿಯೇ ಉತ್ತರಭಾರತದಲ್ಲಿ ಬರಗಾಲ ಬೀಳಲು ಎಂಟು ಸಾವಿರ ಜೈನಮುನಿಗಳು ಬಂದು ನಿಂತಿದ್ದರೆಂದು ತಮಿಳು ಗ್ರಂಥವಾದ 'ನಾಲಿಡಿಯರ' ಸಂಬಂಧದ ಕತೆಯು ಹೇಳುವುದು.

ಏಳನೆಯ ಶತಮಾನದಲ್ಲಿ ಚೀನಾದಿಂದ ಭಾರತಕ್ಕೆ ಪ್ರವಾಸ ಬಂದ ಹುಯೆನ್‌ತ್ಸಾಂಗನು ಕಂಚಿಯಲ್ಲಿ ಜೈನರು ವ್ಯಾಪಿಸಿರುವುದರ ಉಲ್ಲೇಖಿಸುತ್ತಾನೆ. ಸರ್ ವಾಲ್ಟರ್ ಇಟಲಿಯನ್‌ರವರ ಪ್ರಕಾರ ತಮಿಳು ದೇಶದ ಪ್ರತಿಯೊಂದು ಅಂಗದಲ್ಲಿ ಜೈನರು ಮುಖ್ಯ ಭಾಗವಹಿಸಿದ್ದರು. ದಕ್ಷಿಣದ ಕಲಾಕೌಶಲ್ಯಗಳ ಮೇಲೆ ಜೈನರ ಪ್ರಭಾವವು ತುಂಬಾ ಇದೆ. ಆದರೆ ಅದಕ್ಕೂ ಹೆಚ್ಚು ತಮಿಳು ಸಾಹಿತ್ಯದ ಮೇಲಿದೆ[೧೨] ಎಂದು ಪ್ರತಿಪಾದಿಸುತ್ತಾರೆ.

ಕರ್ನಾಟಕದಲ್ಲಿ

ಕರ್ನಾಟಕವು ಸರ್ವಧರ್ಮಗಳ ಸಂಗಮದಂತೆ ಇಲ್ಲಿಯ ಜನರು ಎಲ್ಲರೊಂದಿಗೆ ಬೆರೆತು ಅವರಲ್ಲಿ ಒಬ್ಬರಾಗಿ ಬದುಕಿ ಬಾಳಿರುವ ಜನರು ಸಾಮಾನ್ಯವಾಗಿ ಕರುನಾಡಿನವರಾದ ನವು ಹೊಂದಾಣಿಕೆಯ ಸ್ವಭಾವದವರಾದ್ದರಿಂದ ನಮ್ಮಲ್ಲಿ ನಮ್ಮನ್ನು ಅರಸಿಬಂದವರೇ ಹೆಚ್ಚು. ತ್ರೇತಾಯುಗದ ರಾಮನಿಂದಿಡಿದು ಇಂದಿನ ಟಿಬೇಟಿಯನ್ನರವರೆಗೂ ಎಲ್ಲರೂ ನಮ್ಮಲ್ಲಿ ಆಶ್ರಯ ಸಹಾಯ ಬಯಸಿಬಂದವರೇ ಹೆಚ್ಚು. ಇನ್ನು ಇದೇ ರೀತಿ ಜೈನ ಧರ್ಮೀಯರೂ ಸಹ ನಮ್ಮನ್ನು ಅರಸಿ

೧೧. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೯೫

೧೨. ಅದೇ., ಪು-೧೦೧

ಬಂದವರೇ ಆಗಿರುವವರು. ಇವರಿಗೆ ಕರುನಾಡು ಸಾಮಾನ್ಯನಿಂದಿಡಿದು ಅರಸನವರೆಗೆ ಎಲ್ಲಾ ಬಗೆಯ ಮರ್ಯಾದೆಗಳನ್ನು ನೀಡಿ ಗೌರವಿಸಿದೆ. ಹಲವು ರಾಜಮನೆತನಗಳು ಈ ಧರ್ಮವನ್ನು ಪಾಲಿಸುತ್ತ ಈ ಧರ್ಮ ಪರಂಪರೆಗೆ ನೀರುಣಿಸಿ ಬೆಳೆಸಿದೆ. ಅವುಗಳಲ್ಲಿ ಬಹುಮುಖ್ಯವಾಗಿ ಗಂಗರು, ಹೊಯ್ಸಳರು, ರಾಷ್ಟ್ರಕೂಟರು, ಚಾಲುಕ್ಯರು, ಕಲಚೂರಿಯರು, ಸೌದತ್ತಿಯ ಕಟ್ಟರು, ವಿಜಯನಗರ ಸಾಮ್ರಾಜ್ಯದವರು ಹಾಗೂ ಸಾಮಂತ ರಾಜಮನೆತನಗಳಾದ ಶಾಂತರಸರು, ಸೇವವಾರು, ಸಾಳುವರು, ಚೆಂಗಾಳ್ವರು ಹಾಗೂ ಕೊಂಗಾಳ್ವರು ಹೀಗೆ ಹತ್ತು ಹಲವು ರಾಜ ಮನೆತನಗಳು ಜೈನರಿಗೆ ರಾಜಾಶ್ರಯ ನೀಡಿವೆ.

ಹದಿನೈದನೆಯ ಶತಮಾನದ ಒಂದು ಶಾಸನದಲ್ಲಿ ಕವಿಯು ಕರ್ನಾಟಕವನ್ನು ಹೀಗೆ ಬಣ್ಣಿಸಿದ್ದಾನೆ.

ಜಿನಧರ್ಮಾವಾಸಮಾದತ್ತ ಮಳವಿನಯದಾಗಾರಮಾದತ್ತು ಪದ್ಮಾ

ಸನವಿಪ್ರಾ ಪದ್ಮಮಾದತ್ತಿತಿವಿಶದ ಯಶೋಧಾಮಮಾದತ್ತು ವಿದ್ಯಾ

ಧನಜನ್ಮಸ್ಥಾನಮಾದತ್ತಸಮ ತರಳ ಗಂಭೀರ ಸದ್ಗೇಹಮಾದ

ತ್ತೇನಿಸಲ್ಕಿಂತುಳ್ಳ ನಾನಾ ಮಹಿಮೆಯೊಒಳೆಸೆಗುಂ ಚಾರುಕರ್ಣಾಟದೇಶಂ

ಈ ವರ್ಣನೆಯು ಕವಿಕಲ್ಪಿತವಲ್ಲ. ಇದರಲ್ಲಿ ಎಷ್ಟೋ ಪಾಲು ಸತ್ಯವಾಗಿದೆ. ಜೈನಧರ್ಮವು ಕ್ರಿಸ್ತಶಕ ಪೂರ್ವದಿಂದಲೂ ಕರ್ನಾಟಕದಲ್ಲಿ ಪ್ರಚಲಿತವಿತ್ತು. ಈ ಪ್ರಾಂತವು ದಿಗಂಬರ ಸಂಪ್ರದಾಯಕ್ಕೆ ಪ್ರಾಚೀನ ಕಾಲದಿಂದಲೂ ಮುಖ್ಯ ಸ್ಥಾನವಾಗಿದೆ. ಶ್ರವಣಬೆಳಗೊಳಗದ ಒಂದು ಶಾಸನದಲ್ಲಿ ಉತ್ತರದಿಂದ ದಕ್ಷಿಣ ದೇಶಕ್ಕೆ ಸಂಘಸಹಿತ ಬಂದ ಭದ್ರಬಾಹುಸ್ವಾಮಿಗಳು ಅವರ ಶಿಷ್ಯನಾದ ಚಂದ್ರಗುಪ್ತಮೌರ್ಯನೂ ಕಟವಪ್ರ ಅಥವಾ ಕಳ್ವಪ್ಪು (ಚಂದ್ರಗಿರಿ) ಎಂಬ ಬೆಟ್ಟದಲ್ಲಿ ಸಲ್ಲೇಖನಾ ವ್ರತದಿಂದ ಸಮಾಧಿಯನ್ನು ಹೊಂದಿದರೆಂದು ಹೇಳಿದೆ. ಈ ಸೀಮೆಯಲ್ಲಿ ಮೌರ್ಯ ಸಾಮ್ರಾಜ್ಯದ ತರುವಾಯ ಆಂಧ್ರ ವಂಶದವರು ರಾಜ್ಯವಾಳಿದರು. ಆಂಧ್ರರ ರಾಜರಿಂದಲೂ ಜೈನಧರ್ಮಕ್ಕೆ ಆಶ್ರಯ ದೊರೆತಂತೆ ತೋರುತ್ತದೆ. ಆಂಧ್ರದ ನಂತರ ಕದಂಬರು, ಪಲ್ಲವರು ಕರ್ನಾಟಕವನ್ನಾಳಿದರು. ಕದಂಬರ ಅನೇಕ ಶಿಲಾಶಾಸನಗಳು ದೊರೆತಿವೆ. ಅವುಗಳಲ್ಲಿ ಹಲವು ಜೈನರಿಗೆ ದಾನಕೊಟ್ಟ ಸಂಗತಿಯನ್ನು ವಿವರಿಸುತ್ತವೆ. ಈ ರಾಜವಂಶದ ಧರ್ಮವು ಜೈನವಾಗಿದ್ದಿತು. ಬನವಾಸಿಯ ಪ್ರಾಚೀನ ಕದಂಬರೂ, ಚಾಲುಕ್ಯರೂ ಪಲ್ಲವರ ನಂತರ ತುಳುವ ದೇಶದ ಮೇಲೆ ರಾಜ್ಯ ಮಾಡಿದವರು ನಿಸ್ಸಂದೇಹವಾಗಿ ಜೈನರಿದ್ದರೆಂದು ಗೊತ್ತಾಗುತ್ತದೆ. ಪ್ರಾಚೀನ ಪಲ್ಲವರೂ ಜೈನರಾಗಿದ್ದಿರುವ ಸಂಭವವಿದೆ. ಕದಂಬರಂತೆ ಕರ್ನಾಟಕ ಚಾಲುಕ್ಯರೂ ಜೈನಧರ್ಮದ ಮುಖ್ಯ ಆಶ್ರಯದಾತರಾಗಿದ್ದರು.[೧೩]

---

೧೩. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೧೦೨

ಕರ್ನಾಟಕದಲ್ಲಿ ಜೈನಧರ್ಮದ ಅನುಯಾಯಿಗಳ ಹಾಗೂ ಜೈನಧರ್ಮದ ಚಟುವಟಿಕೆಗಳ ಕೇಂದ್ರವಾಗಿ ಬಸದಿಗಳು, ಮಠಗಳು ಕಾರ್ಯನಿರ್ವಹಿಸಿವೆ. ಜೈನಧರ್ಮಕ್ಕೆ ಸಂಬಂಧಿಸಿದ ಮೂರ್ತಿ ಶಿಲ್ಪ, ವಾಸ್ತು ಶಿಲ್ಪ, ಸಾಹಿತ್ಯ, ಚಿತ್ರಕಲೆ ಮುಂತಾದವು ಹೆಚ್ಚಲಾರಂಭಿಸಿದವು. ಜೈನ ಧರ್ಮವನ್ನು ಭೋದಿಸಿದ ತೀರ್ಥಂಕರರು ದೈವತ್ವವನ್ನು ಪಡೆದ ಮಾನವರಾದರು. ಕಾಲಕ್ರಮದಲ್ಲಿ ದೇವರು ಪುರುಷರಾಗಿ ದೇವರಂತೆ ಆರಾಧಿಸಲ್ಪಡುವ ವ್ಯಕ್ತಿಗಳಾದರು. ಈ ತೀರ್ಥಂಕರರಿಗಾಗಿ ದೇವಾಲಯಗಳು ನಿರ್ಮಾಣಗೊಂಡವು. ಜೈನಮುನಿಗಳ ವಾಸಕ್ಕೆ ಈ ದೇವಾಲಯಗಳು ಬಳಕೆಯಾಗತೊಡಗಿದಂತೆ ಆ 'ವಸತಿ'ಗಳು 'ಬಸದಿ'ಗಳಾದವು. ಶಾಸನಗಳಲ್ಲಿರುವ ಮಾಹಿತಿಗಳನ್ನು ನೋಡಿದರೆ ಜೈನ ಮುನಿಗಗಳಿಗಾಗಿಯೂ ಆಲಯಗಳನ್ನು ನಿರ್ಮಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಸಂಸ್ಕೃತದ 'ವಸತಿ'ಯು ಬಸದಿಯೆಂಬ ರೂಪವನ್ನು ಪಡೆದುಕೊಂಡಿದೆ.[೧೪] ಕೊಪ್ಪಳ, ಸ್ತಿವನಿಧಿ ಪಲಾಸಿಕ, ಬಾಬಾನಗರ, ವಿಜಯಪುರ, ಮುಳಗುಂದ, ಲಕ್ಷ್ಮೇಶ್ವರ, ಮುಳಖೇಡ, ಸೇಳಬಾಳ ಮುಂತಾದವು ಉತ್ತರ ಕರ್ನಾಟಕದ ಸ್ಥಳಗಳಾಗಿವೆ. ಶ್ರವಣಬೆಳಗೋಳ ಹೊಂಬುಜ, ಮೂಡಬಿದರೆ, ಕಾರ್ಕಳ, ವೇಣೂರು, ಧರ್ಮಸ್ಥಳ, ಸಿಂಹನಗದ್ದೆ ಮುಂತಾದ ದಕ್ಷಿಣಕನ್ನಡ ಜಿಲ್ಲೆಯ ಸ್ಥಳಗಳು ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲಿಯೇ ಸುಮಾರು ಎರಡು ನೂರಕ್ಕಿಂತಲೂ ಹೆಚ್ಚು ಜಿನ ಬಸದಿಗಳಿರುವುದು ಗಮನಾರ್ಹವಾಗಿದೆ.[೧೫]

ಚಂದ್ರಗುಪ್ತಮೌರ್ಯ ಹಾಗೂ ಭದ್ರಬಾಹು ಬಂದರು ಎಂಬುದು ಇತಿಹಾಸ. ಇವರ ನಂತರದಲ್ಲೂ ಜೈನ ಪರಂಪರೆಯು ಕರ್ನಾಟಕದಲ್ಲಿ ದೀರ್ಘವಾಗಿ ಸಾಗಿತು. ಅದಕ್ಕೆ ಪುಷ್ಟಿ ನೀಡುವಂತೆ ಕರ್ನಾಟಕದ ಅಸಂಖ್ಯಾತ ಜೈನ ನೆಲೆಗಳು ಕರ್ನಾಟಕದಲ್ಲಿ ಪ್ರಮುಖವಾಗಿ ಜೈನ ನೆಲೆಗಳನ್ನು ಗಮನಿಸುವುದಾದರೆ ಶ್ರವಣಬೆಳಗೊಳ ಮತ್ತು ಕೊಪ್ಪಳಗಳು ಶ್ರವಣಬೆಳಗೊಳವನ್ನು ಹೊರುತಪಡಿಸಿದರೆ ಕಾರ್ಕಳ, ಮೂಡಬಿದರೆ, ಕೊಪ್ಪಳವು ಜೈನ ಪ್ರಮುಖ ನೆಲೆಯಾಗಿದ್ದು, ಇಂದು ಜೈನರ ದಕ್ಷಿಣಕಾಶಿಯೆಂದೇ ಪ್ರಸಿದ್ಧಿಯಾಗಿದೆ. ಇಲ್ಲಿನ ಜೈನ ಸ್ಮಾರಕ ವಿಶೇಷಗಳು, ನಿಸಿದಿ ಕಲ್ಲುಗಳು, ಶಾಸನಗಳು ಮೊದಲಾದವರು ಹಿಂದಿನ ಜೈನಧರ್ಮದ ಕುರುಹುಗಳಾಗಿ ನಿಂತಿವೆ. ಸ್ಥಳೀಯ ಹೇಳಿಕೆಯ ಪ್ರಕಾರ ಕೊಪ್ಪಳದಲ್ಲಿ ೭೭೨ ಬಸದಿಗಳಿದ್ದವು. ಅಂತೆಯೇ ಇದನ್ನು ಬಸದಿಗಳ ಬೀಡು ಎಂದು ಕರೆಯಲಾಗಿತ್ತು. ಕೊಪ್ಪಳವನ್ನು ಶಾಸನ ಸಾಹಿತ್ಯಗಳಲ್ಲಿ ಕೂಪಣ, ಕೊಪಣನಗರ, ಕೊಪಣತೀರ್ಥ, ಆದಿತೀರ್ಥ, ಮಹಾತೀರ್ಥ ಕೊಪಣಾಚಲ ಇನ್ನು ಮುಂತಾಗಿ ಕರೆಯಲಾಗಿದೆ. ಕೊಪ್ಪಳ ಪ್ರದೇಶದಲ್ಲಿ ಕ್ರಿ.ಶ. ೮–೯ನೇ ಶತಮಾನದ ಹೊತ್ತಿಗೆ ಜೈನಧರ್ಮ ಬಲವಾಗಿ ಬೇರೂರಿದ್ದಿತು. ೯–೧೦ನೆಯ ಶತಮಾನದ ಅನೇಕ ಶಾಸನ ಹಾಗೂ ನಿಸಿದಿ ಕಲ್ಲುಗಳು ಈ ಕುರಿತು ಪುಷ್ಟಿ ನೀಡುತ್ತದೆ.

೧೪. ಡಾ. ಎಸ್. ಡಿ. ಶೆಟ್ಟಿ : ಜೈನ ಬಸದಿಗಳು, ಪು–೩

೧೫. ಉಮೇಶ ಎಸ್. : ಕರ್ನಾಟಕದ ಜೈನ ಚಿತ್ರಕಲೆ, ಪು–೧೩

ರಾಷ್ಟ್ರಕೂಟ ಅರಸರ ಆಳ್ವಿಕೆಯಲ್ಲಿ ಕೊಪ್ಪಳದಲ್ಲಿ ಜೈನಧರ್ಮ ಪ್ರಬಲವಾಗಿದ್ದಿತು. ಇವರು ಶೈವಧರ್ಮದ ಜೊತೆಗೆ ಜೈನಧರ್ಮಕ್ಕೂ ವಿಶೇಷ ಪ್ರೋತ್ಸಾಹ ನೀಡಿದ್ದರು. ಅಂತೆಯೇ ಇವರ ಆಳ್ವಿಕೆಯಲ್ಲಿ ಅಧೀನರಾಗಿ ಅಧಿಕಾರದಲ್ಲಿದ್ದಾಗ ಗಂಗ ಅರಸು ಮನೆತನದ ಅನೇಕರು ಈ ಪ್ರದೇಶದ ಆಡಳಿತವನ್ನು ನೋಡಿಕೊಂಡಿದ್ದರು. ಈ ವೇಳೆ ಕೊಪ್ಪಳದಲ್ಲಿ ಅನೇಕ ಬಸದಿಗಳನ್ನು ಕಟ್ಟಿಸಿ ಕೊನೆಯ ಕಾಲದಲ್ಲಿ ಜಿನದೀಕ್ಷೆ ಪಡೆದು ಮರಣ ಹೊಂದಿ ಹಲವು ನಿಸದಿ ಶಾಸನಗಳು ದೊರೆತಿವೆ. ಗಂಗ ಬೂತುಗನಿಗೆ ಮೂರನೆಯ ಕೃಷ್ಣನು ಕ್ರಿ.ಶ. ೯೩೯ ರಲ್ಲಿ ಎಡೆಬರೆ, ಬೆಳ್ವಲ, ಮಾಶವಾಡಿ, ಕುಕನೂರು, ಕೆಳವಾಡಿ ಮೊದಲಾದ ಪ್ರದೇಶಗಳನ್ನು ನೀಡಿದ್ದನು. ಈ ಅವಧಿಯಲ್ಲಿ ಇವನು ಅನೇಕ ಜೀನಾಲಯಗಳನ್ನು ಕಟ್ಟಿಸಿರುವ ಸಾಧ್ಯತೆಯಿದೆ. ಗಂಗರಾಜ ಬೂತುಗನ ಪತ್ನಿ ಪದ್ಮಬ್ಬೆ, ಗಂಗ ಎರೆಯಂಗನ ಮಗಳಾದ ಗೋನಂಬೆ ಕಂತಿ ಮಾರಸಿಂಗನ ತಂಗಿಯರಾದ ಜೆಬ್ಬರಸಿ ಮತ್ತು ಚಂದಿಬ್ಬರಸಿ ಮೊದಲಾದವರು ಕೊಪ್ಪಳಕ್ಕೆ ಬಂದು ಸುಗತಿ ಹೊಂದಿದ್ದರು.[೧೬]

ಕೊಪ್ಪಳದಲ್ಲಿ ಅನೇಕ ಬಸದಿಗಳಿದ್ದವು. ಶಾಸನಗಳಲ್ಲಿ ಕಂಡುಬರುವಂತೆ ಜಯಧೀರ ಜೀನಾಲಯ, ಪುಷ್ಪದಂತ ತೀರ್ಥಂಕರರ ಸೌಧ, ಕುಶ ಜೀನಾಲಯ, ಶಾಂತಲದೇವಿ ಬಸದಿ, ಚಂದ್ರನಾಥ ಬಸದಿ, ನೇಮಿನಾಥ ಬಸದಿ, ಶಾಂತನಾಥ ಬಸದಿ, ಕಲ್ಯಾಣಕೀರ್ತಿ ಬಸದಿ, ಸಿಂಹನಂದಿ ಬಸದಿ, ತೀರ್ಥದ ಬಸದಿ, ತಿಮ್ಮಾಬರಸಿಯ ಬಸದಿ, ತೆಂಕಲರಸಿಯ ಬಸದಿ ಇನ್ನು ಮುಂತಾದ ಬಸದಿಗಳಿದ್ದವು. ಆದರೆ ಈಗ ಉಳಿದಿರುವ ಪ್ರಮುಖ ಬಸದಿಯೆಂದರೆ ಪಾರ್ಶ್ವನಾಥ ತೀರ್ಥಂಕರ ಪಂಚಕೂಟ ಬಸದಿ. ಇದನ್ನು ಹೊರತುಪಡಿಸಿ ಹೇಳುವುದಾದರೆ ಅನೇಕ ಜೀನಾಲಯಗಳು ದೇವಾಲಯಗಳಾಗಿ ಮಾರ್ಪಾಡು ಹೊಂದಿರುವುದನ್ನು ಕೊಪ್ಪಲದಲ್ಲಿ ಕಾಣಬಹುದು. ಕೊಪ್ಪಳದ ಗವಿಮಠ, ವೆಂಕಟರಮಣ, ಬಾಲಕೃಷ್ಣನ, ಅಮೃತೇಶ್ವರ ಮೊದಲಾದ ದೇವಾಲಯಗಳು ಹಿಂದೆ ಜೈನರ ತಾಣಗಳಾಗಿದ್ದವು. ಆದರೆ ಕಾಲಾನಂತರ ರಾಜರ ಪ್ರೋತ್ಸಾಹ ಕುಂಠಿತವಾದಂತೆ ಈ ಪ್ರದೇಶದಲ್ಲಿ ಜೈನಧರ್ಮವು ಕ್ಷೀಣಿಸಿ ಜಿನಾಲಯಗಳು ದೇವಾಲಯಗಳಾಗಿ ಪರಿವರ್ತನೆ–ಗೊಂಡಿರಬಹುದು ಎಂಬುದು ವಿಧ್ವಾಂಸರ ತರ್ಕವಾಗಿದೆ. ಕೊಪ್ಪಳ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಜೈನಧರ್ಮದ ಅಸ್ತಿತ್ವವಿದ್ದುದು ಅವಶೇಷಗಳಿಂದ ಕಂಡುಬಂದಿದೆ. ಅಂಟರಠಾಣ, ಮುಧೋಳ, ಯಲಬುರ್ಗಾ, ಮಂಡಲಗಿರಿ, ರಾಜೂರ, ಕಮ್ಮಟದುರ್ಗ, ಆನೆಗೊಂದಿ ಮೊದಲದೆಡೆ ಶಾಸನಗಳು ನಿಸದಿ ಕಲ್ಲುಗಳು ದೊರೆತಿವೆ.

ಅಂಟರಠಾನದಲ್ಲಿ ಇತ್ತೀಚಿಗೆ ಅನಂತನಾಥನ ಮೂರ್ತಿ ದೊರೆತಿದ್ದು ಇಲ್ಲಿ ಬಸದಿಯಿತ್ತು ಎಂಬುದನ್ನು ದೃಢಪಡಿಸಿದೆ. ಅಂತೆಯೇ ಆನೆಗೊಂದಿ ಕಮ್ಮಟದುರ್ಗಗಳಲ್ಲಿ ಜಿನಾಲಯಗಳನ್ನು

೧೬. ಡಾ. ಕಲ್ಲಿನಾಥ್ ಎಸ್. ಕಾತ್ರಾಳೆ : ಕರ್ನಾಟಕ ಪ್ರಾಚೀನ ಜೈನ ಬಸದಿಗಳ ಕೋಶ, ಪು-೯

ಇಂದಿಗೂ ಕಾಣಬಹುದು. ಮುಧೋಲವು ಪ್ರಮುಖ ಪ್ರಾಚೀನ ಅಗ್ರಹಾರವಾಗಿದ್ದು ಇಲ್ಲಿ ಸುಮಾರು ಐದೂವರೆ ಅಡಿ ಎತ್ತರದ ಬೃಹತ್ ಗಾತ್ರದ ಜೈನ ತೀರ್ಥಂಕರ ಶಿಲ್ಪ ದೊರೆತಿದೆ. ಇದು ಅಲ್ಲಿದ್ದ ಜೈನಧರ್ಮದ ಅಸ್ತಿತ್ವಕ್ಕೆ ಸಾಕ್ಷಿ. ರಾಜೂರಿನ ಶಾಸನದಲ್ಲಿ ಬಸದಿಯೊಂದಕ್ಕೆ ದಾನವನ್ನು ನೀಡಿದ ವಿವರವಿದೆ. ಮಂಡಲಗಿರಿಯಲ್ಲಿ ಜಿನ ಬಿಂಬವಿರುವ ನಿಸದಿ ಕಲ್ಲು ದೊರೆತಿದೆ. ಕೊಪ್ಪಳ ಮೂಲದ ಜೈನ ಕೇಂದ್ರವಾಗಿದ್ದು, ಇದರ ಪ್ರಭಾವದಿಂದ ಜಿಲ್ಲೆಯ ಹಲವು ಭಾಗಗಳಲ್ಲಿ ಜೈನಧರ್ಮ ಪಸರಿಸಿದ್ದನ್ನು ಕಾಣಬಹುದು.[೧೭] ಇದೇ ಅಲ್ಲದೆ ಇತ್ತೀಚೆಗೆ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲ್ಲೂಕಿನ ಕಸಬಳಗಿಯ ಶಾಲಾ ಆವರಣದಲ್ಲಿ ಅಗೆಯುತ್ತಿರುವಾಗ ಬೃಹತ್ ಗಾತ್ರದ ಪಾರ್ಶ್ವನಾಥ ತೀರ್ಥಂಕರರ ಮೂರ್ತಿ ದೊರೆತಿದೆ. ಇದು ೧೧ನೇ ಶತಮಾನದ್ದಾಗಿದೆ ಎಂಬುದು ವಿಧ್ವಾಂಸರ ಅಭಿಪ್ರಾಯ.

ಐತಿಹಾಸಿಕ ಕಾಲದಲ್ಲಿ ಬರುವ ಉಪಲಬ್ಧವಿರುವ ಭಾರತೀಯ ಚಿತ್ರಗಳಲ್ಲಿ ಎಲ್ಲಕ್ಕೂ ಪ್ರಾಚೀನತಮವಾದುದು ಜೈನಮತಕ್ಕೆ ಸಂಬಂಧಿಸಿದ ಚಿತ್ರವಾಗಿದೆ. ಮಧ್ಯ ಹಿಂದೂಸ್ತಾನದ ಸರಗುಜಾ ಜಿಲ್ಲೆಯಲ್ಲಿ ಜೋಗೀಮಾರಾ ಎಂಬ ಹೆಸರಿನ ಗುಹೆ ಇದೆ. ಇದರಲ್ಲಿ ಇರುವ ಲೇಖನದ ಲಿಪಿಯು ಕ್ರಿಪೂ. ಮೂರನೆಯ ಶತಮಾನದ್ದು ಎಂದು ಡಾ॥ ಬ್ಲಾಕ್ ಅವರ ಮತವಿದೆ. ಕೆಲವು ವಿಧ್ವಾಂಸರು ಸ್ವಲ್ಪ ಇತ್ತೀಚಿನ ಕಾಲದ್ದಿರಬೇಕೆಂದು ಸೂಚಿಸುವರು. ಈ ಗುಹೆಯ ಸೆರೆಯಲ್ಲಿಯೇ ಸೀತಾಬೋಂಗಾ ಗುಹೆಯಿದೆ. ಇದೊಂದು ನಾಟ್ಯಶಾಲೆಯಾಗಿದೆ. ಮೊದಲನೆಯ ಜೋಗಿಮಾರಾ ಗುಹೆಯು ಈ ನಾಟ್ಯಗೃಹದ ನಟಿಗಳ ವಿಶ್ರಾಮಗೃಹ ಎಂದು ತಿಳಿಯಲಾಗುತ್ತದೆ.

ಇತ್ತೀಚೆಗೆ ಅಲ್ಲಿಯ ಲೇಖನದ ಅರ್ಥ ಹೆಚ್ಚಿದುದರಿಂದ ಅದು ವರುಣಗೃಹ ಎಮದೂ ಆ ವರುಣನ ಸೇವೆಗೆಂದು ಇರುವ ಓರ್ವ ದೇವದರ್ಶಿನಿಯು ಅಲ್ಲಿ ಇರುತ್ತಿದ್ದಳೆಂದೂ ಗೊತ್ತಾಗುತ್ತದೆ. ಈ ಗುಹೆಯಲ್ಲಿ ಆ ಕಾಲದ ಹಾಗೂ ಅದಸರ ತರುವಾಯದ ಕಾಲದ ಚಿತ್ರಗಳು ಇರುತ್ತವೆ. ಇವುಗಳ ಸುಂದರ ರೇಖೆಗಳು ಬಹು ಕಲಾವಂತಿಕೆಯಿಂದ ಕೂಡಿದುದಾಗಿದೆ.[೧೮]

ಗುಪ್ತ ಕಾಲವು ಭಾರತೀಯ ಸಂಸ್ಕೃತಿಯ ಸ್ವರ್ಣಯುಗವಾಗಿದೆ. ಅಜಂತಾ ಗುಹೆಯೊಳಗಿನ ಭಿತ್ತಿ ಚಿತ್ರಗಳಲ್ಲಿ ಹಲವು ಆ ಕಾಲದಲ್ಲಿ ಬರೆದವುಗಳಾಗಿವೆ. ಆ ಚಿತ್ರಗಳು ಭಾರತದ ಚಿತ್ರಗಳಲ್ಲಷ್ಟೇ ಅಲ್ಲ, ಜಗ್ಗಿನ ಚಿತ್ರಗಳಲ್ಲಿಯೇ ಅಮೂಲ್ಯ ರತ್ನಗಳೆನಿಸುತ್ತವೆ. ಅವುಗಳಲ್ಲಿ ಜೈನಸಾಧುವಿನ ಚಿತ್ರವೊಂದಿದೆ. ಅದೊಂದೇ ಆ ಕಾಲದ ಉಪಲಬ್ಧ ಜೈನ ಚಿತ್ರವಾಗಿದೆ. ಇದು ಕ್ರಿ.ಶ. ೩೨೦ರಿಂದ ೬೦೦ರ ನಡುವಿನ ಅವಧಿಯಲ್ಲಿ ಬರೆದುದಾಗಿದೆ. ಅನಂತರ ಮದ್ರಾಸ್ ವಿಭಾಗದ ತಂಜಾವರದ ನೆರೆಯಲ್ಲಿ ಇರುವ ಪುದುಕೋಟೆಯ ಸೀಮೆಯಲ್ಲಿ ಸಿತ್ತನವಾಸಲ ಎಂಬ ಸ್ಥಳವಿದೆ. ಅಲ್ಲಿ ಪಲ್ಲವರಾಜನಾದ

೧೭. ಡಾ. ಕಲ್ಲಿನಾಥ್ ಎಸ್. ಕಾತ್ರಾಳೆ : ಕರ್ನಾಟಕ ಪ್ರಾಚೀನ ಜೈನ ಬಸದಿಗಳ ಕೋಶ, ಪು-೧೦

೧೮. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೫೩೩

ಮೊದಲನೆಯ ಮಹೇಂದ್ರವರ್ಮನೂ (ಸು. ಕ್ರಿ.ಶ. ೬೦೦ ರಿಂದ ೬೨೫) ಅವನ ಮಗನಾದ ನರಸಿಂಹವರ್ಮನೂ (ಸು. ಕ್ರಿ.ಶ. ೬೨೫ ರಿಂದ ೬೫೦) ತೋಡಿಸಿದ ಗುಹಾಮಂದಿರಗಳಿವೆ. ಈಗ ಹತ್ತಿಪ್ಪತ್ತು ವರುಷಗಳ ಹಿಂದೆ ಆ ಮಂದಿರಗಳಲ್ಲಿ ಕೆಲವು ಚಿತ್ರಗಳ ಶೋಧವಾಯಿತು. ಇವುಗಳ ಶೈಲಿಯೂ ಅಜಂತಾದಂತೆಯೇ ಇದೆ. ಇವುಗಳಲ್ಲಿ ಕುಣಿಯುವ ಸ್ತ್ರೀಯ ಕೆಲವು ಭಂಗಿಗಳಿವೆ. ಅವಳ ಭಾವ, ಭಂಗಿ, ಹಸ್ತ, ಆಕೃತಿ, ಅಲಂಕಾರಗಳು ಬಹಳ ಸಜೀವವೂ ಪ್ರೇಕ್ಷಣೀಯವೂ ಆಗಿವೆ. ಅಲ್ಲಿಯೇ ಇನ್ನೊಂದು ಮಗ್ಗುಲಿಗೆ ಸ್ತ್ರೀ-ಪುರುಷರ ಯುಗ್ಮವೊಂದಿದೆ. ಪುರುಷನನ್ನು ಮೆಚ್ಚಿ ನೋಡುತ್ತಿರುವ ಸ್ತ್ರೀಯ ಮುಖಭಾವವು ತುಂಬ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಸಂಭ್ರಾಂತ ಮಹಿಳೆಯ ಚಿತ್ರವದು. ಇದು ಮಹೇಂದ್ರವರ್ಮ ಹಾಗೂ ಅವನ ರಾಣಿಯ ಚಿತ್ರವಿರಬೇಕೆಂದು ಕೆಲವು ಅನುಮಾನಿಸುತ್ತಾರೆ. ಈ ಗುಹೆಗಳ ಮೇಲ್ ವಾಸಿನ ಮೇಲೆ ಒಂದು ಕಮಲವನವನ್ನು ಚಿತ್ರಿಸಲಾಗಿದೆ. ಅದರಲ್ಲಿ ಮೀನು, ಮೊಸಳೆ, ಆನೆ, ಕೋಣ, ಹಂಸ ಇತ್ಯಾದಿ ಜಲಪ್ರೇಮಿಯಾದ ಪ್ರಾಣಿ-ಪಕ್ಷಿಗಳ ಚಿತ್ರ ಬಹಳ ಸುಂದರವಾಗಿದೆ. ಇದರಲ್ಲಿ ಹೂ ಕೊಯ್ಯುವ ದಿವ್ಯಪುರುಷನ ಆಕೃತಿಯಿದೆ. ಇಲ್ಲಿಯ ಹಲವು ಚಿತ್ರಗಳು ಜೈನಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ[೧೯] ಎಂಬ ವಿಧ್ವಾಂಸರ ಅಭಿಪ್ರಾಯವಾಗಿದೆ.

ಇದೇ ರೀತಿ ವೇರೂಳಿನ ಭಿತ್ತಿಚಿತ್ರಗಳಲ್ಲಿಯೂ ಕೆಲವು ಜೈನ ಚಿತ್ರಗಳಿವೆ. ವೇರೂಳಿನ ಚಿತ್ರಕಲೆಯಲ್ಲಿ ಅಜಂತೆಯ ಪರಂಪರೆಯೇ ಮುಂದುವರಿದಂತಿದೆ. ಆದರೂ ತುಂಬ ವ್ಯತ್ಯಾಸಗಳಿವೆ. ವೇರೂಳಿನ ಕಲೆಯಲ್ಲಿ ಅವನತಿಯು ಕಂಡುಬರುತ್ತದೆ. ಆಕಾಶದ ಚಿಹ್ನೆಯನ್ನು ಚಿತ್ರಿಸಲಿಕ್ಕೆಂದು ಬರೆದ ಮೋಡದ ತುಂಡುಗಳಲ್ಲಿ ಅಜಂತೆಯಲ್ಲಿಯ ಸೌಂಧರ್ಯವಿಲ್ಲ. ಅದರಂತೆ ವ್ಯಕ್ತಿಗಳ ಅಲಂಕಾರ ಗಳಲ್ಲಿಯೂ ಚೆಲುವು ಇಲ್ಲ. ಇವುಗಳಿಗಿಂತ ಒಡೆದು ತೊರುವ ಕೊರೆತೆಯೆಂದರೆ ಚಿತ್ರಗಳಲ್ಲಿಯ ವ್ಯಕ್ತಿಗಳ ಅಂಗಾಂಗಗಳಲ್ಲಿ ಪ್ರಮಾಣ ಬದ್ಧತೆಯಿಲ್ಲ. ಮೂಗು ಉದ್ದ, ಹುಬ್ಬಿನಲ್ಲಿ ಹೆಚ್ಚಿನ ಕೊಂಕು, ಇವು ಕಲೆಯ ಗ್ರಾಸವನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಮಧ್ಯಕಾಲದಲ್ಲಿ (ಕ್ರಿ.ಶ. ೬೦೦ ರಿಂದ ೧೦೦೦ ವರೆಗೆ) ಮೂಗುಗಳನ್ನು ಉದ್ದವಾಗಿ ಚಿತ್ರಿಸುವುದೊಂದು ಕಲೆಯ ರೀತಿಯೇ ಆಗಿದ್ದಂತೆ ತೋರುತ್ತದೆ. ಅದರ ಪರಿಣಾಮವೂ ಮೂರ್ತಿ ಕಲೆಯ ಮೇಲೆಯೂ ಆದದ್ದುಂಟು. ಕ್ರಿ.ಶ. ಹನ್ನೊಂದು, ಹನ್ನೆರಡನೆಯ ಶತಮಾನದಲ್ಲಿ ಭಾರತದ ರಾಜನೈತಿಕ ದೃಷ್ಟಿಕೋನದಲ್ಲಿ ಬಹಳ ಬದಲಾವಣೆಯು ಉಂಟಾಯಿತು. ಸಂಸ್ಕೃತಿ ಅವನತಿಗೂ ಆರಂಭವಾಯಿತು. ಅದರ ಪರಿಣಾಮವು ಚಿತ್ರಕಲೆಯ ಮೇಲೆಯೂ ಆಗದಿರಲಿಲ್ಲ. ಹನ್ನೆರಡನೆಯ ಶತಮಾನದಿಂದ ಸುಮಾರು ಹದಿನೈದನೆಯ ಶತಮಾನದವರೆಗಿನ ಚಿತ್ರಗಾರರು ಕಲೋಪಾಸಕರಾಗಿಯೇ ವ್ಯವಸಾಯಿಗಳಾಗಿದ್ದಂತೆ ತೋರುತ್ತದೆ. ಇಂಥವು ಅವಸರದಲ್ಲಿ ಬರೆದ ಅಪಭ್ರಂಶ ಚಿತ್ರಶೈಲಿಯು ನಮಗೆ ಎಲ್ಲಡೆಗೂ ನೋಡಲಿಕ್ಕೆ ಸಿಕ್ಕುತ್ತದೆ. ಬಂಗಾಲ-ಬಿಹಾರಗಳನ್ನುಳಿದು

೧೯. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೫೩೪

ಭಾರತದ ಎಲ್ಲಾ ಕಡೆಗೂ ಚಿತ್ರಕಲೆಯು ತುಂಬಾ ಅವನತಿ ಸ್ಥಿತಿಯಲ್ಲಿತ್ತು[೨೦] ಎಂಬ ಮಾತುಗಳು ಭಾರತೀಯ ಜೈನ ಚಿತ್ರಕಲೆಯ ಅಧ್ಯಯನದಿಂದ ತಿಳಿದು ಬರುವುದು.

ಈ ಕಾಲದ ಚಿತ್ರಶೈಲಿಗೆ ಒಂದೂಕಾಲು ಕನ್ನಡ ಶೈಲಿಯೆಂದು ಹೇಳಬಹುದು. ಏಕೆಂದರೆ ಆಗಿನ ಚಿತ್ರಗಳಲ್ಲಿನ ವ್ಯಕ್ತಿಗಳ ಮುಖದ ಮೇಲೆಲ್ಲಾ ಒಂದೂ ಕಾಲು ಕಣ್ಣಗಳು ಇರುತ್ತಿದ್ದವು. ಎರಡನೆಯ ಕಣ್ಣಿನ ಭಾಗವನ್ನು ಗಲ್ಲದ ಮೇಲೆ ಸ್ಪಷ್ಟವಾಗಿ ಮೂಡಿಸುತ್ತಿದ್ದರು. ಅದೂ ಸ್ವಲ್ಪಭಾಗವು ಕಪಾಲಗಿಂತ ಮುಂದೆ ಹಾಯ್ದಂತೆ ಇರುವುದು. ಹೀಗಿದ್ದು ಈ ಚಿತ್ರಗಳ ರೇಖೆಗಳಲ್ಲಿ ಒಂದು ತರದ ಬೆಡಗು ಇರುವುದರಿಂದ ಇವುಗಳನ್ನು ಹಲವಾರು ಒಳ್ಳೆಯವರೆಂದು ಹೇಳುತ್ತಾರೆ. ಇಂಥ ಚಿತ್ರಗಳಲ್ಲಿ ಬರುವ ಹಳ್ಳ, ಹೊಳೆ, ಮಳೆ ಮೋಡ, ಗುಡ್ಡ, ಪರ್ವತಗಳ ಆಕೃತಿಗಳಲ್ಲಿಯೂ ಕಲೆಯು ಪೂರ್ಣ ಕೆಳತರಗತಿಗೆ ಮುಟ್ಟಿದ್ದನ್ನು ಕಾಣುತ್ತೇವೆ. ಇಷ್ಟೇ ಅಲ್ಲ ಯೋಗ್ಯ ಬಣ್ಣಗಳ ಕೊರತೆಯೂ ಇದೆ. ಆಕೃತಿಗಳ ಸೀಮಾಂತರೇಖೆಗಳು ಮಸಿಯಿಂದ ಬರೆಯಲ್ಪಟ್ಟು ದಪ್ಪವಾಗಿದೆ. ಆದ್ದರಿಂದ ಕಲೆಯ ಕಳೆಯಲ್ಲಿ ಕೊರತೆಯಾಗಿದೆ. ಈ ಶೈಲಿಯ ಬಹಳಷ್ಟು ಚಿತ್ರಗಳು ಶ್ವೇತಾಂಬರ ಜೈನ ಸಂಪ್ರದಾಯದ ಗ್ರಂಥಗಳಲ್ಲಿ ನೋಡಲಿಕ್ಕೆ ಸಿಕ್ಕುತ್ತವೆ. ಕ್ರಿ.ಶ. ೧೦೦೦ ರಿಂದ ೧೪೫೦ ರವರೆಗೂ ಇಂಥ ಗ್ರಂಥಗಳು ತಾಳೆಯೋಲೆಯ ಮೇಲೆ ಬರೆದವುಗಳು ಆಗಿವೆ. ಮುಂದೆ ಸುಮಾರು ವರ್ಷಗಳವರೆಗೆ ಕಾಗದದ ಮೇಲೆ ಬರೆಯಲಾಗಿದೆ. ಅದರ ಮುಂದಿನ ಕಾಲದ ಗ್ರಂಥಗಳಲ್ಲಿ ಚಿತ್ರಗಳಿಲ್ಲ. ಸುಮಾರು ಐದುನೂರು ವರ್ಷಗಳ ಈ ಕಾಲಾವಧಿಯಲ್ಲಿ ಭಾರತದ ಎಲ್ಲಾ ಭಾಗದಲ್ಲಿಯೂ ಜೈನರು ಪ್ರಬಲರಾಗಿದ್ದರಿಂದ ಚಿತ್ರಗ್ರಂಥಗಳು ವಿಫುಲವಾಗಿ ದೊರೆಯುತ್ತವೆ.[೨೧]

ಅನೇಕ ಜನ ಜೈನ ಸಿರಿವಂತರು ಸಚಿತ್ರಶಾಸ್ತ್ರ, ಅಂಗಸೂತ್ರ, ನಿಶೀಥಚೂರ್ಣಿ, ಉತ್ತರಾಧ್ಯನ ಸೂತ್ರ, ಸಚಿತ್ರ ಪುರಾಣ, ನೇಮಿ ಪುರಾಣ, ತ್ರಿಷಷ್ಠಿ, ಶಲಾಕಾ ಪುರಾಣ, ಕಥಾರತ್ನಸಾಗರಗಳನ್ನು ಬರೆಸಿ ಹಂಚುತ್ತಿದ್ದರು, ದಾನ ಕೊಡುತ್ತಿದ್ದರು. ಜೈನ ಗ್ರಂಥಗಳಲ್ಲದೆ ಗೀತಗೋವಿಂದ, ಬಾಲಗೋಪಾಲ ಸ್ತುತಿ, ದುರ್ಗಾಸಪ್ತಶತಿ ಇತ್ಯಾದಿ ಗ್ರಂಥಗಳಲ್ಲಿಯೂ ಈ ಕಾಲದ ಅಪಭ್ರಂಶ ಶೈಲಿಯ ಚಿತ್ರಗಳು ನೋಡಲಿಕ್ಕೆ ಸಿಕ್ಕುತ್ತವೆ. ಇತ್ತೀಚೆಗೆ ಗುಜರಾರಿನಲ್ಲಿ 'ವಸಂತ ವಿಲಾಸ' ಎಂಬ ಸಂಸ್ಕೃತ ಕಾವ್ಯವೊಂದು ಅರಿವೆಯ ಮೇಲೆ ಬರೆದದ್ದು ದೊರೆತಿದೆ. ಅದನ್ನು ಅಹಮದಾಬಾದಿನಲ್ಲಿ ಕ್ರಿ.ಶ. ೧೪೫೧ ರಲ್ಲಿ ಲಿಪಿ ಮಾಡಲಾಗಿದೆ. ಅದರಲ್ಲಿಯೂ ಕೆಲವು ಚಿತ್ರಗಳಿವೆ. ಅವೂ ಈ ಯುಗಧರ್ಮವನ್ನು ಮೀರಿ ನಿಂತವುಗಳಲ್ಲ. ಹದಿನೈದನೆಯ ಶತಮಾನದ ತರುವಾಯ ಭಾರತೀಯ ಸಂಸ್ಕೃತಿಯಲ್ಲಿ ಒಂದು ಹೊಸ ಯುಗವು ಆರಂಭವಾಯಿತು. ಇದು ಎಲ್ಲಾ ಕಲೆಗಳ ಮೇಲೆ ಪರಿಣಾಮವನ್ನು

೨೦. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೫೩೪

೨೧. ಅದೇ., ಪು-೫೩೫

ಉಂಟುಮಾಡಿದಂತೆ ಚಿತ್ರಕಲೆಯ ಮೇಲೂ ಮಾಡಿತು. ಚಿತ್ರಕಲೆಯಲ್ಲಿ ಹೊಸ ಜೀವವು ಬಂದಿತು. ಆ ಕಳೆಗೊಂಡ ಚಿತ್ರಶೈಲಿಗೆ ಈಗ ರಾಜಸ್ಥಾನಿ ಶೈಲಿ ಎಂದು ಹೆಸರು. ಅಂದಿನ ಕಾಲದ ಜೈನ ಚಿತ್ರಗಳೆಲ್ಲವೂ ಇದೇ ಶೈಲಿಯಲ್ಲಿದೆ. ಅಕ್ಬರನು ಭಾರತದ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಲು ಯತ್ನಿಸಿದನು. ಅದರ ಒಂದು ಮುಖ್ಯ ಅಂತವು ಚಿತ್ರಕಲೆಯ ಪುನರುದ್ಧಾರವೂ ಆಗಿದೆ. ಅಲ್ಲಿಯವರೆಗೆ ಭಾರತದ ಪ್ರಾಚೀನ ಚಿತ್ರ ಸಂಪ್ರದಾಯವೊಂದು ಕಾಶ್ಮೀರದಲ್ಲಿ ಜೀವಂತವಾಗಿದ್ದಿತು. ಅದಕ್ಕೆ ಇರಾನಿ ಚಿತ್ರಕಲೆಯ ಮೆರುಗನ್ನು ಕೊಟ್ಟ ಅಕ್ಬರನೊಂದು ಚಿತ್ರಕಲೆಯಲ್ಲಿ ಹೊಸ ಶೈಲಿಯನ್ನು ಆರಂಭಿಸಿದನು. ಅದು ಮುಂದೆ ಮೊಗಲ್‌ಶೈಲಿಯೆಂದು ಪ್ರಸಿದ್ಧವಾಯಿತು.[೨೨] ಇದನ್ನು ಜೈನರು ಸ್ವೀಕರಿಸಿ ಬೆಳೆಸಿದರು.

ಕಲ್ಕತ್ತೆಯ ಪ್ರಸಿದ್ಧ ಸಿರಿವಂತರೂ, ಕಲಾಪ್ರೇಮಿಗಳು ಆದ ಶ್ರೀ ಬಹದ್ದೂರಸಿಂಹ ಸಿಂಘೀ ಅವರ ಮಹುಮೌಲ್ಯ ಸಂಗ್ರಹದಲ್ಲಿ 'ಶೀಲಭದ್ರ ಚರಿತ' ಎಂಬ ಜೈನ ಗ್ರಂಥವಿದೆ. ಇದರಲ್ಲಿ ಮೊಗಲ್‌ಶೈಲಿಯ ಚಿತ್ರಗಳಿವೆ. ಇವುಗಳನ್ನು ಕ್ರಿ.ಶ. ೧೬೨೪ರಲ್ಲಿ ಶಾಲಿವಾಹನ ಎಂಬ ಚಿತ್ರಕಾರನು ಆಗ್ರಾದಲ್ಲಿ ಬರೆದಿದ್ದಾನೆ. ಇದೇ ಕಲಾವಿದನು ಕ್ರಿ.ಶ. ೧೬೧೦ರಲ್ಲಿ ಬರೆದು ಚಿತ್ರಪಟವೂ ಒಂದು ಇದೆ. ಇವು ಜೈನ ಚಿತ್ರಕಲೆಯ ಅಮೂಲ್ಯ ರತ್ನಗಳಾಗಿವೆ. ಪೂರ್ವಭಾರತದಲ್ಲಿ ೧೮-೧೯ನೇ ಶತಮಾನದವರೆಗೂ ರಾಜಸ್ತಾನಿ ಸಂಪ್ರದಾಯದ ಚಿತ್ರಕಲೆಯೂ ಜೈನರಲ್ಲಿ ರೂಢವಾಗಿದ್ದಿತು. ಇಂಥ ಚಿತ್ರಗಳು ಜೈನಶ್ರಾವಕರು ವರ್ಷಾಕಾಲದಲ್ಲಿ ಮುನಿಗಳಿಗೆ ಬರೆದುಕೊಟ್ಟ ಕ್ಷಮಾಪತ್ರಗಳಲ್ಲಿ ನೋಡಲಿಕ್ಕೆ ಸಿಗುತ್ತದೆ. ಕೈಗೊಂಡ ವ್ರತಕ್ಕೆ ತಪ್ಪಿ ನಡೆದುದಕ್ಕಾಗಿ ಬರೆದುಕೊಟ್ಟ ಕ್ಷಮಾಪತ್ರಗಳಾದರೂ ಅವು ಚಿತ್ರಕಲೆಯ ಪ್ರಗತಿಯ ನಿದರ್ಶನಪತ್ರಗಳಂತಿವೆ. ಈ ಎಲ್ಲಾ ಸಾಧ್ಯತೆಗಳ ಜೈನ ಕಲಾವಿದರಿಂದ ಆದ ಪರಿಶ್ರಮಗಳಾಗಿದ್ದು[೨೩] ಇದಕ್ಕೆ ಪೂರಕವಾಗಿ ರಾಜರು, ರಾಜಮಮನೆತನದವರು, ಮಂತ್ರಿವರ್ಗ, ಶ್ರೀಮಂತ ವರ್ಗ, ಅಧಿಕಾರಿ ವರ್ಗಗಳ ಕಲೋಪಾಸನೆಯೂ ಸಹ ಜೈನ ಚಿತ್ರ ಪರಂಪರೆಗೆ ಪೂರಕ ಸಾಕ್ಷಿಯಾಗಿವೆ.

ಕರ್ನಾಟಕದ ಇತಿಹಾಸವನ್ನು ಬೆತಕುತ್ತಾ ಹೋದಂತೆಲ್ಲಾ ಹೊಸ ಹೊಸ ವಿಷಯಗಳು ಅನ್ವೇಷಣೆಗೆ ದಾರಿ ತೆರೆಯುತ್ತಾ ಹೋಗುತ್ತದೆ. ಅದೇ ರೀತಿಯಲ್ಲಿ ಭಿತ್ತಿಚಿತ್ರ ಹಾಗೂ ಪಟಚಿತ್ರಗಳ ಬಗ್ಗೆ ಚಿತ್ರಕಲೆಯ ಪಾರಿಭಾಷಿಕ ಶಬ್ದಗಳ ಬಗ್ಗೆ ಚಿತ್ರಕಲಾವಿದರ ಬಗ್ಗೆ ಅನೇಕ ಸಂಗತಿಗಳು ಜೈನ ಯುಗದಲ್ಲಿ ಕವಿಗಳಲ್ಲಿ ದೊರೆಯುವುದರಿಂದ ಅವರು ಲಲಿತಕಲೆಗಳನ್ನು ಕುರಿತು ಅಭ್ಯಾಸ ಮಾಡಿದಂತೆ ಕಂಡು ಬರುತ್ತದೆ. ಜಿನಸೇನಾಚಾರ್ಯರ ಮಹಾಪುರಾಣದಲ್ಲಿಯೇ ಲಲಿತಾಂಗ ಶ್ರೀಮತಿಯರಿಗೆ ಸಂಬಂಧಿಸಿದ ಕಥೆಯಲ್ಲಿ ಪಟಚಿತ್ರದಲ್ಲಿ ರಚಿಸುತ್ತಿದ್ದ ಸಂಗತಿಗಳ ಬಗ್ಗೆ ಪ್ರಿಯಕರನನ್ನು ಹುಡುಕಲು

೨೨. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು-೫೩೬

೨೩. ಅದೇ., ಪು-೫೩೭

ಜೈನ ಬಸದಿಯ ಮುಂದೆ ಪಟಚಿತ್ರಗಳನ್ನು ಹರಡಿ ಜನರಾಡುವ ಮಾತುಗಳನ್ನು ಕೇಳಲು ದೂತಿಯೊಬ್ಬಳು ಇದ್ದ ಬಗ್ಗೆ, ಚಿತ್ರ ನೋಡಿದ ಜನರು ನಾನಾ ವಿವಿಧ ಟೀಕೆಗಳನ್ನು ಮಾಡುವ ಬಗ್ಗೆ ವಿಸ್ತಾರವಾಗಿ ಬಂದಿದೆ. ಇಲ್ಲಿಂದಲೇ ತನ್ನ ಆದಿಪುರಾಣಕ್ಕೆ ವಿಷಯ ಸಂಗ್ರಹಿಸಿದ ಪಂಪ ಈ ಚಿತ್ರಪಟ ಸಂಗ್ರಹವನ್ನೂ ಮೂಲಕ್ಕೆ ಸಾಕಷ್ಟು ಹತ್ತಿರವಾಗಿ ಬಳಸಿಕೊಂಡಿದ್ದಾನೆ. ಒಂದೆರಡು ಸಣ್ಣ ಬದಲಾವಣೆಗಳೂ ಗಣನೀಯವಾಗಿವೆ. ಮಹಾಪುರಾಣದಲ್ಲಿ ಪಂಡಿತೆ ಹೋದ ಜಿನಮಂದಿರವೂ ಭಿತ್ತಿಚಿತ್ರಗಳಿಂದ ತುಂಬಿತ್ತು. ಜಿನಸೇನಾಚಾರ್ಯರು ಈ ಭಿತ್ತಿಚಿತ್ರಗಳನ್ನು ಕುರಿತು ನಾನಾ ವರ್ಣಸಂಕರಗಳಿಂದ ಕೂಡಿದ ಚಿತ್ರವೂ ಅಂತೆಯೇ ನಾನಾ ವರ್ಣ, ಜಾತಿ, ಸಂಕರಗಳಿಂದ ಹುಟ್ಟಿದ ಗಣಿಕೆಯಂತೆ ಶೋಭಿಸುತ್ತಿತ್ತು ಎಂದಿದ್ದು ಪ್ರಾಯಶಃ ಪಂಪನಿಗೆ ಜಿನಮಂದಿರದ ಚಿತ್ರಗಳು 'ಗಣಿಕೆ' ಗೆ ಹೋಲಿಸಿದ್ದು ಔಚಿತ್ಯವೆನಿಸಲಾರದು ಅಥವಾ ಆತನ ಕಾಲದಲ್ಲಿ ಬಸದಿಯಲ್ಲಿ ಚಿತ್ರಗಳು ಇಲ್ಲದೆ ಆತ ನೋಡದೇ ಹೋಗಿದ್ದು ಆದಿಪುರಾಣದಲ್ಲಿ ಬಸದಿಯ ಭಿತ್ತಿ ಚಿತ್ರಗಳ ವರ್ಣನೆಯನ್ನು ಬಿಟ್ಟು ಪಂಡಿತೆ ಚೈತ್ಯಾಲಯದ ಕೆಲಸದ ಪಟ್ಟಸಾಲೆಯ ಮುಂದೆ ಚಿತ್ರಪಟವನ್ನು 'ಏರಿ'ಸುತ್ತಾಳೆ. ಆದರೆ ಜಿನಸೇನರ ಪಂಡಿತೆ ಚಿತ್ರಪಟವನ್ನು ಹರಡುತ್ತಾಳೆ[೨೪] ಎಂಬುದು ಪಂಪನ ಅಭಿಮತವಾಗಿದೆ.

ಇನ್ನು ಜೈನಶಾಸ್ತ್ರಗ್ರಂಥಗಳಲ್ಲಿ ಬರುವ ಪಂಚಸ್ಥಾನಗಳು, ಮಿಶ್ರವರ್ಣ, ಆರು ತರಹ ಅಣ್ಕೆ (ಲೇಪನ ಕ್ರಿಯೆ) ವಿದ್ಧ ಪದ್ಧತಿಗಳು (ಭಾವಚಿತ್ರ ರಚನೆಯ ಪ್ರಭೇದಗಳು) ಇತ್ಯಾದಿಗಳಲ್ಲದೆ ಚಿತ್ರ, ಚಿತ್ರಾರ್ಧ, ಚಿತ್ರಭಾಸಗಳನ್ನು ಹಾಗೂ ರಸಚಿತ್ರ ಧೂಳಿಚಿತ್ರಗಳನ್ನು ಸಹ ಪ್ರಸ್ತಾಪಿಸಿದೆ. ಇವು ಕ್ರಮವಾಗಿ ಶಿಲ್ಪ, ಉಬ್ಬು ಶಿಲ್ಪ ಚಿತ್ರಕಲೆ ಹಾಗೂ ದ್ರವರೂಪದ ಮತ್ತು ಪುಡಿ ರೂಪದ ರಂಗೋಲೆಗಳಾಗಿದ್ದು ಈ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಇಲ್ಲಿಯ ಹಾಗೂ ಇನ್ನಿತರ ಚಿತ್ರಕಲೆಗೆ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳನ್ನು ಅಗ್ಗಳ (ಕ್ರಿ.ಶ. ೧೧೮೯) ಬಳಸಿಕೊಂಡಿದ್ದಾನಲ್ಲದೆ ಶಾಸ್ತ್ರಗ್ರಂಥಗಳಲ್ಲಿ ಬರುವ ನವಸ್ಥಾನಗಳನ್ನು (ಋಜು ಅಥವಾ ಅರ್ಧಋಜು ಇತ್ಯಾದಿ); ಮಾನದ್ವಯ (ಅಯಾಮ ವಿಸ್ಥಾರ), ಜನ್ಮಪರಂಪರೆ (ಭೂತ, ಭವನ, ಭಾವಿ) ಐದು ಅಂಕುರ ಪ್ರಪಂಚ, ಹನ್ನೆರಡು ಅವಯವ ಪ್ರಕಾರ ಎಂಟು ಬಗೆಯ ಪತ್ರ ಇತ್ಯಾದಿ ಚಿತ್ರಕಲೆಗೆ ಸಂಬಂಧಿಸಿದ ಹಲವಾರು ಪದಗಳನ್ನು ಪ್ರಯೋಗಿಸಿದ್ದಾರೆ. ಈ ಎರಡರ ಕೆಲವು ಪಾರಿಭಾಷಿಕ ಶಬ್ದಗಳನ್ನು ಮುಂದೆ ೧೫೦೯ ರಲ್ಲಿ ಇನ್ನೊಬ್ಬ ಜೈನ ಕವಿ ಋನೇ ಮಂಗರಸ ಬಳಸಿಕೊಂಡಿದ್ದಾನೆ.[೨೫] ಇಷ್ಟೇ ಅಲ್ಲದೆ ಜೈನ ಕಾವ್ಯಗಳಲ್ಲಿ ಚೇರಘಟ್ಟಿ ಎಂಬ ಚಿತ್ರಕಲಾವಿದನೊಬ್ಬನ ಪ್ರಸ್ತಾಪ ಬಂದಿದ್ದು, ಅದು ವಿಧ್ವಾಂಸರ ಗಮನ ಸೆಳೆದಿದೆಯಲ್ಲದೆ ಆತನ ಚಿತ್ರಕಲಾ ನೈಪುಣ್ಯಕ್ಕೆ ಸಂಬಂಧಿಸಿದಂತೆ ಹಲವಾರು ವಿವರಗಳು ಕಾವ್ಯಗಳಲ್ಲಿ ದೊರೆಯುತ್ತವೆ.

ಐತಿಹಾಸಿಕ ದಾಖಲೆಗಳ ಪ್ರಕಾರವಾಗಿ ಮೊದಮೊದಲು ಜೈನ ಪರ ಚಿತ್ರವು ರಾಜಸ್ಥಾನದಲ್ಲಿ

೨೪. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೫೯

೨೫. ಅದೇ., ಪು-೬೦

೧೦೬೦ರಲ್ಲಿ ರಚಿತವಾದ ಓಘನಿರ್ಯುಕ್ತಿಯಲ್ಲಿರುವ ಚಿತ್ರಗಳ ಮೇಲೆ ಅಜಂತ ಹಾಗೂ ಎಲ್ಲೋರದ ಮೊದಲ ಚಿತ್ರಗಳ ಪ್ರಭಾವ ಬಿದ್ದಿದೆಯೆಂದು ತಿಳಿಸುವ ಸರಯುದೋಸಿ ಅವರು ಮುಂದಿನ ಮೂರು ಶತಮಾನಗಳು ತಾಳೆ ಅಥವಾ ಭೂರ್ಜ್ವ ಪತ್ರಗಳ ಮೇಲೆ ಕೆಲವು ಚಿತ್ರಗಳು ಹಾಗೂ ಓಲೆಗರಿ ಪುಸ್ತಕದ ಮೇಲಿನ ಮರದ ಹಲಗೆಯಲ್ಲಿ ಹಲವು ಜೈನ ಧಾರ್ಮಿಕ ಚಿತ್ರಗಳು ಇರುವುದಾಗಿ ತಿಳಿಸುತ್ತಾರೆ. ಪಶ್ಚಿಮ ಭಾರತದಲ್ಲಿ ೧೩೫೦ ರವರೆಗೂ ಕೆಲವೇ ಓಲೆಗರಿ ಮೇಲಿನ ಚಿತ್ರಗಳು ದೊರಕಿದ್ದು, ಮೊದಲ ಚಿತ್ರಗಳಲ್ಲಿ ರೇಖಾ ಚಿತ್ರವೇ ಪ್ರಧಾನವಾಗಿದ್ದು ಅಲ್ಲಲ್ಲಿ ತೆಳುವಾದ ಬಣ್ಣಗಳನ್ನು ಹಾಕಿದ್ದು ೧೨ನೆಯ ಶತಮಾನದ ವೇಳೆಗೆ ಭಿತ್ತಿ ಚಿತ್ರಗಳಿಗೆ ಕೆಂಪು ಅಥವಾ ಶ್ಯಾಮ ವರ್ಣವನ್ನು ಗಾಢವಾಗಿ ಲೇಪಿಸಿ ಅಂಕಗಳಂತೆ ರೂಪಿಸಿಕೊಂಡಿರುವುದು, ಕಡುಪಾದ ಹೊರರೇಖೆಯನ್ನು ಹಾಕಿರುವುದು ಕಂಡುಬರುತ್ತದೆ.

ಜೈನ ಚಿತ್ರಗಳ ಮೊದಲ ಅವಧಿಯ ಚಿತ್ರಗಳೊಂದಿಗೇ ಮೂಡಬಿದರೆಯ ಧವಳತ್ರಯಗಳ ಚಿತ್ರಗಳನ್ನು ಪರಿಗಣಿಸಬಹುದು. ಮೂಡಬಿದರೆಯ ಶ್ರೀಮಠದಲ್ಲಿ ಇರುವ ಚಿತ್ರಿತ ಧವಳತ್ರಯಗಳು ಮೊದಲಿಗೆ ಶ್ರವಣ ಬೆಳಗೊಳದಲ್ಲಿ ಇದ್ದುವೆಂದೂ ಚಾವುಂಡರಾಯನು ತನ್ನ ಗುರುಗಳಾದ ನೇಮಿಚಂದ್ರ ಸಿದ್ಧಾಂತಿಗಳಿಗಾಗಿ ಸಿದ್ಧಾಂತ ಬಸ್ತಿಯನ್ನು ಮಾಡಿಸಿ ಈ ಪುಸ್ತಕಗಳನ್ನು ಅಲ್ಲಿರಿಸಿದ್ದನೆಂದು ಹತ್ತನೆಯ ಶತಮಾನದಲ್ಲಿ ಮೂಡಬಿದರೆಗೆ ಸಾಗಿಸಿದರೆಂದೂ ಬಿ.ವಿ. ಶಿರೂರರು ತಿಳಿಸುತ್ತಾರೆ. ಆದರೆ ಪ್ರಸ್ತುತ ತಾಳೆ ಓಲೆಯಲ್ಲಿಯೇ ಇರುವ ಓಲೆ ಗ್ರಂಥ ಬರೆಸಿದವರ ಹಾಗೂ ದಾನ ಪಡೆವ ಹೆಸರುಗಳೊಂದಿಗೆ ಶಾಸನಾಧಾರವನ್ನು ಸೇರಿಸಿ ಈ ಗ್ರಂಥಗಳ ರಚನೆಯ ಕಾಲ ೧೧೧೩ ರಿಂದ ೧೧೨೦ ಎಂದು ಶಿವರಾಮ ಕಾರಂತರು ನಿರ್ಧರಿಸುತ್ತಾರೆ. ಈ ಕಾಲ ಹೊಯ್ಸಳರ ವಿಷ್ಣುವರ್ಧನನ ಕಾಲವೆಂದರೂ ಇವುಗಳ ಲಿಪಿ ಹಾಗೂ ಚಿತ್ರಗಳು ಹೊಯ್ಸಳ ಲಿಪಿ ಹಾಗೂ ಶಿಲ್ಪಗಳನ್ನು ಹೋಲುವುದೆಂದೂ ಗ್ರಂಥ ಬರೆಸಿದ ಜಾಗ ಗೆರೆಸೊಪ್ಪೆ ಎಂದೂ ಎಚ್.ಆರ್. ರಘುನಾಥಭಟ್ಟರು ಸೋದಾಹರಣೆಯಿಂದ ತಿಳಿಸುತ್ತಾರೆ. ಇನ್ನೊಂದು ಹೇಳಿಕೆಯಂತೆ ಈ ಗ್ರಂಥಗಳನ್ನು (ಧವಲ ಗ್ರಂಥಗಳು) ಕೊಲ್ಲಾಪುರದಲ್ಲಿ ಶ್ರೀ ಲಕ್ಷ್ಮೀಶನ ಬಟ್ಟಾರರ ಪಟ್ಟಾಚಾರ್ಯರ ಸಂರಕ್ಷಣೆಯಲ್ಲಿ ಮಂಗಳವಾರ ಪೇಟೆಯ ಸಿದ್ಧಾಂತ ಬಸ್ತಿಯಲ್ಲಿ ಇರಿಸಲಾಗಿತ್ತೆಂದೂ ಮುಂದೆ ಅಲ್ಲಾವುದ್ದೀನ್ ಖಿಲ್ಜಿಯ ದಾಳಿಯಲ್ಲಿ ಅವುಗಳ ಸಂರಕ್ಷಣೆಗಾಗಿ ಮೂಡಬಿದರೆಗೆ ಸಾಗಿಸಲಾಯಿತೆಂದೂ ಪಟ್ಟಾಚಾರ್ಯ ಮಠದ ಐತಿಹ್ಯ ಉಂಟು ಎಂದು ಪಿ.ಕೆ. ಭಾಗೋಜಿ ಅವರು ತಿಳಿಸುತ್ತಾರೆ. ಹೀಗೊಂದು ಧವಲಗ್ರಂಥ ಕೊಲ್ಲಾಪುರದಿಂದ ಮೂಡಬಿದರೆಗೆ ಬಂದಿರಬಹುದಾದರೂ ಅದು ಈಗ ಪ್ರಸಿದ್ಧವಾಗಿರುವ ಚಿತ್ರಿತ ಗ್ರಂಥ ಎಂದೇ ಆಗಬೇಕಾಗಿಲ್ಲ. ಪ್ರಾಯಶಃ ಚಾಲುಕ್ಯರ ಕಾಲದಲ್ಲಿಯೇ ಧವಳಗ್ರಂಥಗಳು ರಚನೆಯಾಗಿ ಅವುಗಳ ಪ್ರತಿಗಳ ಆಧಾರದಿಂದ ಪ್ರಸ್ತುತ ಮಾಘನಂದಿ ಆಚಾರ್ಯರಿಗೆ ದಾನ ನಿಡಿದ 'ಚಿತ್ರಿತ' ಪ್ರತಿಗಳನ್ನು ಬರೆಯಿಸಿರಬಹುದು.

ಇವೆಲ್ಲಕ್ಕಿಂತ ಮೂಡಬಿದರೆಯ ಸ್ಥಳ ಪರಿಚಯ ಮಾಡಿಸುವ ಕೈಪಿಡಿಯೊಂದು ಶ್ರೀಮಠದಿಂದ ಪ್ರಕಾಶಿತವಾಗಿದ್ದು ಅದರಲ್ಲಿ "ಧಾರವಾಡ ಜಿಲ್ಲೆಯ ಬಂಕಾಪುರದಿಂದ ದೇವತೆಗಳು ವೈಭವದಿಂದ ಈ ಗ್ರಂಥಗಳನ್ನು ತಂದು ಪಾರ್ಶ್ವನಾಥಸ್ವಾಮಿಯ ಸನ್ನಿಧಿಯಲ್ಲಿ ನೆಲೆಗೊಳಿಸಿದರೆಂದು ಅಲ್ಲಿಯ ಹಿರಿಯ ಶ್ರಾವಕರು ತಿಳಿಸಿದರು" ಎಂದಿದೆ. ಇವುಗಳಿಂದಾಗಿ ಮೂಲತಃ ಗೆರೆಸೊಪ್ಪೆಯಲ್ಲಿ ರಚಿತವಾಗಿದ್ದು ಕೈಯಿಂದ ಕೈ ಬದಲಾಯಿಸಿ ಹಲವಾರು ಕಡೆ ತಿರುಗಿ ಪ್ರಸ್ತುತ ಹಸ್ತಪ್ರತಿ ಅಂತಿಮವಾಗಿ ಮೂಡಬಿದರೆಗೆ ಬಂದಿರಬಹುದೆನಿಸುತ್ತದೆ.[೨೬] ಸಿ. ಶಿವರಾಮಮೂರ್ತಿ ಅವರು ಧವಳ ಗ್ರಂಥಗಳಲ್ಲಿರುವ ಸುಮಾರು ೨೦ ಚಿತ್ರಗಳನ್ನುಕೊಟ್ಟು ವಿಮರ್ಶಿಸಿದ್ದಾರೆ. ಕಾರಂತರು ಎರಡೆರಡು ಬಾರಿ ಕಂಡಿದ್ದಾರೆ. ಆದರೂ ಈ ಮೂರು ಗ್ರಂಥಗಳಿಂದ ಒಟ್ಟು ಎಷ್ಟು ಚಿತ್ರಗಳು ಇವೆಯೆಂಬುದಾಗಲೀ, ಅವುಯಾವ ಯಾವ ಕಥಾ ಸಂದರ್ಭದಲ್ಲಿ ರಚಿತವಾಗಿದೆ ಯೆಂಬುದಾಗಲೀ ತಿಳಿದು ಬರುವುದಿಲ್ಲ.

ಸಿ. ಶಿವರಾಮಮೂರ್ತಿಯವರು ಯಕ್ಷಯಕ್ಷಿಯರನ್ನು ಅವರ ವಾಹನಗಳಿಂದ ಗುರುತಿಸಿ ವಿವರಿಸುತ್ತಾರಲ್ಲದೆ ಹೊಯ್ಸಳ, ವಿಷ್ಣುವರ್ಧನ, ಶಾಂತಲೆಯರು ಈ ಗ್ರಂಥ ರಚನೆಗೆ ಕಾರಣರೆಂದು ತಿಳಿಸುತ್ತಾರೆ. ಜೈನ ಚಿತ್ರಕಲೆಯ ಆರಂಭ ಕಾಲದ ಸುಮಾರು ೩೦೦ ವರ್ಷಗಳ ಅವಧಿಯಲ್ಲಿ ರಚಿತವಾಗಿರುವ ಕೆಲವೇ ಚಿತ್ರಗಳ ಜೊತೆಯಲ್ಲಿ ಧವಳಚಿತ್ರಗಳನ್ನು ಇರಿಸಿದಾಗ ಮುಖ್ಯವಾಗಿ ಕಂಡುಬರುವ ಶೈಲಿ ವ್ಯತ್ಯಾಸ ಆ ಕಾಲಕ್ಕಾಗಲೇ 'ಜೈನ ಸರಣಿ ಚಿತ್ರಗಳು' (Jain Miniatures) ಎಂದೇ ಪ್ರಸಿದ್ಧವಾದ ಚೂಪು ಮುಖದ ತೆಳು ಆಕಾರದ, ಪಾರ್ಶ್ವನೋಟದಲ್ಲಿಯೂ ಒಂದು ಕಣ್ಣು ಹೊರಗೆ ಬಂದಂತೆ ಚಿತ್ರಿತವಾಗಿರುವ ಜೈನ ಚಿತ್ರಗಳಿಗಿಂತ ಇವು ಬೇರೆಯದೇ ಆಗಿ ಅಂತಿಮ ಚಾಲುಕ್ಯ ಹಾಗೂ ಹೊಯ್ಸಳರ ಮೊದಲ ಕಾಲದ ಶಿಲ್ಪಗಳನ್ನು ಬಹಳವಾಗಿ ಹೋಲುವುದರಿಂದ ಇದರ ರಚನೆ ಗೆರೆಸೊಪ್ಪೆ ನಾಡಿನಲ್ಲಿಯೇ ಆಗಿರಬೇಕು ಎಂಬುದು ವಿಧ್ವಾಂಸರ ಅಭಿಪ್ರಾಯವಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದ ಒಂಭತ್ತನೇ ಶತಮಾನದಲ್ಲಿ ರಚನೆಯಾದ ವಡ್ಡಾರಾಧನೆ ಗ್ರಂಥವನ್ನು ಶ್ರೀ ಡಿ.ಎಲ್. ನರಸಿಂಹಾಚಾರ್ಯರು ೧೯೪೦ ರಲ್ಲಿ ಹೊರತಂದರು. ಮೂಲತಃ ಈ ಗ್ರಂಥವು ಒಂಭತ್ತನೇ ಶತಮಾನದಲ್ಲಿ ಶಿವಕೋಟಿ ಎನ್ನುವ ಜೈನ ಸಾಹಿತಿಯಿಂದ ಈ ಗ್ರಂಥವನ್ನು ವಿರಚಿಸಲಾಗಿದೆ. ಈ ಮಹಾಗ್ರಂಥದಲ್ಲಿ ೧೬ ಜನ ಜೈನ ಯತಿಗಳ ವರ್ಣಚಿತ್ರಗಳಿದ್ದು, ಇದರೊಂದಿಗೆ ವರ್ಣವಿವರಣೆ, ತಾಳಮಾನ, ವಿನ್ಯಾಸ, ಸಂಯೋಜನೆಯನ್ನು ಸೇರಿದಂತೆ ವರ್ಣಗಳ ಕುರಿತಂತೆ ಈ ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ ಎಂದು ಡಾ॥ ಎಚ್.ಎನ್. ಚಿತ್ರಗಾರ್‌ರವರು ವಿವರಿಸುತ್ತಾರೆ. ಕ್ರಿ.ಶ. ೧೦ನೆಯ ಶತಮಾನದಲ್ಲಿ ರಚನೆಯಾದ ಸಾಹಿತ್ಯವು ಆ ಕಾಲದ ಹಸ್ತಪ್ರತಿ ಚಿತ್ರಕಲೆಯನ್ನು ತಿಳಿಸಿಕೊಡುತ್ತದೆ. ವಿದ್ವಾಂಸರ ಅಭಿಪ್ರಾಯದಂತೆ ಕ್ರಿ.ಶ. ೯೨೦ರ ಸುಮಾರಿನಲ್ಲಿ ಬದುಕಿದ್ದ

೨೬. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೬೧

ಶಿವಕೊಟ್ಯಾಚಾರ್ಯ ಬರೆದಿರುವನೆಂದು ತಿಳಿಯಲಾಗಿರುವ ವಡ್ಡಾರಾಧನೆ ಗ್ರಂಥದ ಸುಕುಮಾರಸ್ವಾಮಿ, ಕೌಶಲಸ್ವಾಮಿ, ಸನತಕುಮಾರ ಚಕ್ರವರ್ತಿ, ಸಿರಿವಿಣ್ಣ, ಗುರುದತ್ತ ಮತ್ತು ಭಟ್ಟಾರಕರಂತಹ ಕವಿಗಳ ಕಥೆಗಳಲ್ಲಿ ಚಿತ್ರರಚನೆ, ಚಿತ್ರರಚನಾ ಸಾಮಗ್ರಿ, ಚಿತ್ರಕಾರಣ ಕೌಶಲ್ಯ, ಚಿತ್ರವಿಮರ್ಶೆ ಮುಂತಾದ ಉಲ್ಲೇಖಗಳು ಕಂಡುಬರುತ್ತವೆ. ವಡ್ಡಾರಾಧನೆಯ ಸುಕೌಶಲಸ್ವಾಮಿ ಕಥೆಯಲ್ಲಿ ಸುಕೇಶನಿಯ ಕುರುಮಾಡದ ಗೋಡೆಗಳ ಮೇಲೆಲ್ಲ ಅರಸನು ಚಿತ್ತಾರಿಗರಿಂದ ಚಿತ್ರ ಬರೆಯಿಸುತ್ತಾನೆ. ಹಿಂದಿನ ಜನ್ಮದ ಘಟನೆಗಳನ್ನು ನೆನೆದು ಸುಕೇಶನಿ ಸ್ವತಃ ಚಿತ್ರ ಬರೆಯುತ್ತಾರೆ ಎಂಬ ವಿಷಯಗಳು ಹೇಳಲಾಗಿದೆ.[೨೭] ಭಾವವಿಲಸತ್ವರ್ಣ ಕ್ರಮ ವ್ಯಕ್ತಿಯಿಂದ ಪ್ರಕಟ ಮಾಡಿದ ಪೇಳ್ದ ಚಿತ್ರಕೃತಿ ಎಂಬ ಉಲ್ಲೇಖ ಕವಿರಾಜಮಾರ್ಗದಲ್ಲಿದೆ. ವಡ್ಡಾರಾಧನೆ ನವ ಯೌವನೆಯರಾದ ವಾಮರಥನ ಅಷ್ಟಕುಮಾರಿಯರು ಅಕ್ಷರಾಲೇಖ್ಯ ಗಣಿತ ಗಾಂಧರ್ವ ನೃತ್ಯ ಚಿತ್ರಕರ್ಮ ಪತ್ರಚ್ಛೇದಮೆಂದಿವು ಚಟುಷಷ್ಠ ಕೆಳಗಳೊಳಾದಮಾನುಂ ಕುಸಳೆಯರ್ ಎಂದು ಹೊಗಳಿರುವುದು ಕಂಡುಬರುತ್ತದೆ.[೨೮]

ಇದಕ್ಕೆ ಪೂರಕವಾಗುವಂತೆ ವಿಕ್ರಮಾರ್ಜುನ ವಿಜಯದಲ್ಲಿ ಕವಿ ಪಂಪ ಚಿತ್ರಕಲೆಯ ಬಗ್ಗೆ ಸಾಮಂತ ಚೂಡಾಮಣಿಯ ಮಯ್ಯ ಬಣ್ಣಂ ವಿಧಾನ್ಯನೆಂಬ ಚಿತ್ತಾರಿಯ ವರ್ಣಕ್ರಮಂಗೆಯ್ದು ಕದಳಿಗೆ ಗರ್ಭಶ್ಯಾವೆಂಬ ಬಣ್ಣದಂತಾದುದು ಎಂದು ಅರ್ಜುನನ್ನು ವರ್ಣಿಸಿರುವುದುಂಟು. ಅಂತೆಯೇ ಅರ್ಜುನನ್ನು ತನ್ನ ಬಾಲ್ಯ ಕಾಲದಲ್ಲಿ "ಚಿತ್ರಕರ್ಮ ಪತ್ರಚ್ಛೇದ ಗೃಹಗತೀ ರತ್ನ ಪರೀಕ್ಷೆಗಳೊಂ ಸರ್ವಜ್ಞಂ ಮಹೇಂದ್ರಂ ಜಾಣನಂ" ಎಂದು ಕರೆಯಿಸಿಕೊಂಡಿರುವನು.[೨೯] ಕವಿ ಪಂಪನ ಇನ್ನೊಂದು ಕೃತಿ ಆದಿಪುರಾಣ ಅದರ ಭಾವಾಬವಳಿ ಯೊಂದರಲ್ಲಿ ಪತಿಪತ್ನಿಯರು ಹಿಂದಣ ಜನ್ಮದ ಕಥೆಯನ್ನು ಚಿತ್ರರೂಪದಲ್ಲಿ ಬರೆದು ಆ ಮೂಲಕ ಮರುಜನ್ಮದಲ್ಲಿ ಒಂದುಗೂಡಿದ ಚಿತ್ರಪಟದ ಪ್ರಸ್ತಾಪವಿದೆ. ಇದನ್ನು ಗಮನಿಸದಿರೆ ಚಿತ್ರಕಲೆಯ ಮಹತ್ವ ಅರ್ಥವಾಗದಿರದು. ಪಂಪನು ಹಾಕಿಕೊಟ್ಟ ಈ ಮಾರ್ಗದಲ್ಲಿಯೇ ಅನಂತರದದ ಅನೇಕ ಜೈನ ಕವಿಗಳು ನಡೆದರು. ಪೊನ್ನ ಮಹಾಕವಿಯು ಪಂಪನ ಸಮಕಾಲೀನನಾದವನು. ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೆಯ ಕೃಷ್ಣನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದನು. ಜೈನಧರ್ಮದಲ್ಲಿ ವಿಶೇಷ ಪರಿಣಿತನಾದವನು ತನ್ನ ಕಾಲದಲ್ಲಿ ಬಹು ಗೌರವಕ್ಕೆ ಪಾತ್ರನಾಗಿದ್ದಿರಬೇಕು. ಈತನು ಭಾವಸ್ಥಿರತೆ, ರಾಮಭ್ಯುದಯ, ಶಾಂತಿ ಪುರಾಣವನ್ನೇ ದಾನ ಚಿಂತಾಮಣಿ ಅತ್ತಿಮಬ್ಬೆಯು ಸಾವಿರ ಪ್ರತಿ ಮಾಡಿಸಿ ಹಂಚಿದಳೆಂಬುದು ಸರ್ವವಿಧಿತ. ಈತ ತನ್ನ ಕಾವ್ಯವಾದ ಶಾಂತಿ ಪುರಾಣದಲ್ಲಿ ಹೀಗೆ ಚಿತ್ರಕಲೆಯನ್ನು ಕುರಿತು ಹೇಳಿಕೊಂಡಿದ್ದಾನೆ.[೩೦]

ನಯವಳವಟ್ಟೆ ಪಚ್ಚ ಸಹಕಾಱುದೊಳಿಂಗುಳಕಂ ತಳರ್ತಶೋ

೨೭. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕದ ಹಸ್ತಪ್ರತಿ ಚಿತ್ರಕಲೆ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ), ಪು-೪೭

೨೮. ಅದೇ., ಪು-೪೭

೨೯. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ(ಸಂ.) : ನಿಜದನೆಲೆ (ಡಾ. ಚೆನ್ನಕ್ಕ ಪಾವಟೆಯವರ ಲೇಖನ), ಪು-೧೦೬

೩೦. ಅದೇ., ಪು-೧೦೭

ಕೆಯೊಳರಿದಾಳ ಮುಳ್ಳಲರ್ದ ಸೆಂಪಗೆಯೋಳ್ ಕಡುಗರ್ಪುಬ್ಬೃಂಗಕೋ

ಟಿಯೊಳೆಸಿರ್ದ ನೀಲಗಿರಿ ಮಲ್ಲಿಲಯೊಳ್ ಸಮನಾಗೆ ಚೀರಘು

ಟ್ಟೆಯ ಬರೆದಿಟ್ಟ ಬನಕ್ಕಣೆಯಾಯ್ತು ಬನಂ ವಿದೇಹಿದೊಲ್ – ಶಾಂತಿ ಪುರಾಣ[೩೧]

ಶಾಂತಿ ಪುರಾಣದಲ್ಲಿ ಚಿತ್ರಕಲಾ ಉಲ್ಲೇಖವನ್ನು ಸಾಕಷ್ಟು ಕಾಣಬಹುದಾಗಿದೆ. ಇದರ ಕತೃವಾದ ಪೊನ್ನನು ರಾಷ್ಟ್ರಕೂಟರ ಚಕ್ರವರ್ತಿ ಮೂರನೇ ಕೃಷ್ಣನ ಆಸ್ಥಾನದಲ್ಲಿದ್ದ ಪೊನ್ನ ಕ್ರಿ.ಶ. ೯೫೦ರಲ್ಲಿ ಬರೆದ ಶಾಂತಿಪುರಾಣದಲ್ಲಿ ಅನೇಕ ಹಸ್ತಪ್ರತಿಗಳ ಚಿತ್ರಗಳನ್ನು ಬರೆದ ಉಲ್ಲೇಖ ದೊರೆತಿವೆ. ಮನೆಯೊಳಗೆ, ಚಿತ್ರಶಾಲೆಯೊಳಗೆ ಚಿತ್ರ ಬರೆದ ವಿವರಣೆ ಇದೆ. ಚೀರಘಟ್ಟೆ ವಿಶ್ವಕರ್ಮರೆಂಬ ಚಿತ್ರಕಲಾವಿದರ ಬಗೆಗೂ ಪಂಚವಿಧ ವರ್ಣ ಇತ್ಯಾದಿಗಳ ಕುರಿತು ಪೊನ್ನ ಪ್ರಸ್ತಾಪಿಸುತ್ತಾನೆ. ಪೊನ್ನನ ಸಮಕಾಲೀನನಾದ ರನ್ನನಿಂದ 'ಅಜಿತನಾಥ ಪುರಾಣ' ರಚನೆಗೊಂಡಿದೆ. ಪ್ರಾಚೀನ ಕರ್ನಾಟಕದ ಸಾಹಿತ್ಯದ ಮತ್ತು ಅದ್ವಿತೀಯ ಪಂಪ ಯುಗದ ಕೊನೆಯ ಕವಿ ಚಿತ್ರಕಲೆಗೆ ಹೆಚ್ಚಿನ ಮಹತ್ವ ಕೊಟ್ಟ ಪ್ರಾಕೃತ ಕವಿ ಅಭಿನವ ಪಂಪ ನಾಗಚಂದ್ರ ಹೃದಯದ ಸಾಕ್ಷಿಯಾಗಿ ಸಮಾಜವನ್ನು ಆತ್ಮಸಾಕ್ಷಿಯಾಗಿ ಸೃಷ್ಟಿಸಿದ ಕವಿಯೀತ. ತನ್ನ ಮಲ್ಲಿನಾಥ ಪುರಾಣದಲ್ಲಿ ನಿತ್ಯನೂತನ ನಿಸರ್ಗ ವರ್ಣನೆ, ಬಿಸಿಲು ಬೆಳದಿಂಗಳು, ಕತ್ತಲೆ–ಬೆಳಕು–ಸೂರ್ಯೋದಯ, ಸೂರ್ಯಾಸ್ತಗಳನ್ನು ಸೃಷ್ಟಿಯ ನಿತ್ಯ ಪರಿವರ್ತನಶೀಲ ವ್ಯಾಪಾರದ ಒಳತಿರುವುಗಳು ಹೊಸದೆನ್ನುವಂತೆ ವರ್ಣಿಸಿರುವನು. ಸೂರ್ಯೋದಯ, ಸೂರ್ಯಾಸ್ತಗಳ ನವೀನ ಮತ್ತು ಜೀವಂತ ವರ್ಣನೆಗಳು ನಾಗಚಂದ್ರನಂತಹ ಕವಿಯನ್ನು ಹೊರತುಪಡಿಸಿ ಕನ್ನಡದ ಬೇರೆ ಕವಿಗಳಲ್ಲಿ ಕಾಣುವುದು ಅಪರೂಪ.[೩೨] ಪೊನ್ನನ ಶಾಂತಿ ಪುರಾನವನ್ನು ಹೊರತುಪಡಿಸಿ ನೋಡುವುದಾದರೆ ನಾಗಚಂದ್ರನ ಮಲ್ಲಿನಾಥ ಪುರಾಣದಲ್ಲಿಯು ಜೈನಧರ್ಮದ ಚಿತ್ರಗಳನ್ನು ಕಾಣಬಹುದಾಗಿದೆ. ಜೈನ ಪುರಾಣಗಳ ಮಾಲಿಕೆಯಲ್ಲಿ ಯಾವ ಪುರಾಣದಲ್ಲಿಯೂ ಇಷ್ಟು ದಟ್ಟವಾಗಿ ಕಾಣಿಸಿಕೊಳ್ಳದ ಚಿತ್ರಕಲೆ ನಾಗಚಂದ್ರನ ಮಲ್ಲಿನಾಥ ಪುರಾಣದಲ್ಲಿ ಚಿತ್ತಾಕರ್ಷಕವಾಗಿ ಒಂದು ಕಾವ್ಯ ಕಲೆಗಟ್ಟಿ ನಿಂತಿದೆ. ನಾಗಚಂದ್ರನಲ್ಲಿ ಕಾವ್ಯ ಕಲೆಯಷ್ಟೇ ಚಿತ್ರಕಲೆಯೂ ಶ್ರೀಮಂತಿಕೆ ಪಡೆದಿದೆ. ಕಾವ್ಯದ ಒಪ್ಪಂದ ಕಡೆದಂತೆ ಪ್ರತ್ಯಂಗಗಳನ್ನು ಅನುಗೊಳಿಸುವ ಚೈತನ್ಯಶೀಲ ಕಲೆ ಕನ್ನಡ ಕವಿ ಪಂಪನಂತೆ ಅಭಿನವ ಪಂಪ ನಾಗಚಂದ್ರನಲ್ಲಿಯೂ ಕೆಲವೆಡೆ ಪ್ರತಿಫಲಿಸಿದೆ ಎಂಬುದಕ್ಕೆ ಇದು ಒಳ್ಳೆಯ ಉದಾಹರಣೆಯಾಗಿದೆ. ಇಡೀ ಕಾವ್ಯದ ಒಡಲಲ್ಲಿ ಬಣ್ಣ ಬಣ್ಣದ ಚಿತ್ರಗಳನ್ನು ಬಿಡಿಸುತ್ತ ಹೋಗಿದ್ದರೂ ಸಂಗೀತ ಮತ್ತು ನರ್ತನಗಳಂತೆ ಚಿತ್ರಪಟ ದರ್ಶನದ ಒಂದು ಹೊಸ ಪ್ರಸಂಗವನ್ನೇ ನಿರ್ಮಿಸಿಕೊಂಡಿದ್ದಾನೆ. ಇದರಿಂದ ತೀರ್ಥಂಕರ ಲೌಕಿಕ ಜೀವನದ ಕಾವ್ಯ ಮಹೋತ್ಸವದಲ್ಲಿ ಒಂದು ಪ್ರುಬುದ್ಧ ಚಿತ್ರ ಪ್ರದರ್ಶನವನ್ನೇರ್ಪಡಿಸಿದಂತಾಗಿದೆ. ಶಬ್ದ ಚಿತ್ರಗಳ

೩೧. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ(ಸಂ.) : ನಿಜದನೆಲೆ (ಡಾ. ಚೆನ್ನಕ್ಕ ಪಾವಟೆಯವರ ಲೇಖನ). ಪು–೧೦೭

೩೨. ಬಿ.ವಿ.ಕೆ. ಶಾಸ್ತ್ರೀ : ಚಿತ್ರಕಲಾ ಪ್ರಪಂಚ, ಪು–೧೭೧

ಜೊತೆ ಬಿಡಿಸಿದ ಈ ವರ್ಣ ಚಿತ್ರಗಳಿಂದಾಗಿ ಮಲ್ಲಿನಾಥ ಪುರಾಣ ಎರಡು ಕಲಾಕೃತಿಗಳ[೩೩] ಸುಂದರ ಸಂಪುಟವೆನಿಸಿದೆ.

ಕರ್ನಾಟಕದ ಜೈನ ಪರಂಪರೆಯ ಅತ್ಯುನ್ನತ ಶ್ರೇಷ್ಟ ಕಲಿಗಳು ವಿರಚಿಸಿದ ಮಹಾಪುರಾಣ–ಗಳೆಂದರೆ ಕವಿ ಪಂಪನ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಕವಿ ಜನ್ನನ ಯಶೋಧರ ಚರಿತ, ಅನಂತನಾಥಪುರಾಣ, ಕವಿ ನಾಗಚಂದ್ರನ ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣಗಳೆಂದು ಸ್ಪಷ್ಟವಾಗಿ ಹೆಸರಿಸಬಹುದು. ಪಂಪ ಯುಗಾತೀತ ಕವಿ ಪಂಪೋತ್ತರ ಯುಗದಲ್ಲಿ ಪಂಪನ ಪ್ರಭಾವವೂ ಸಾಹಿತ್ಯವಲದಯಲ್ಲಿ ಇನ್ನೂ ಪ್ರಕಾಶಮಾನವಾಗಿ ಬೆಳಗುತ್ತಿದೆ. ಪಂಪ, ಪೊನ್ನರ ತರುವಾಯ ಪ್ರಸಿದ್ಧಿಗೆ ಬಂದ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಗಳಿಸಿದವನು ಚಾವುಂಡರಾಯ (ಕ್ರಿ.ಶ. ೯೭೮). ಪಂಪನಂತೆ ಈತನೂ ಆಡಳಿತರಂಗದ ಅನುಭವವುಳ್ಳ ಕವಿ ಗಂಗಕುಲದ ರಾಜಮಲ್ಲನ (ಕ್ರಿ.ಶ. ೯೭೪–೯೮೪) ಮಂತ್ರಿಯಾಗಿಯೂ, ಸೇನಾನಿಯಾಗಿಯೂ ಪ್ರಸಿದ್ಧಿಗೆ ಬಂದಿದ್ದಲ್ಲೇ ಶ್ರವಣಬೆಳಗೊಳದಲ್ಲಿನ ಗೊಮ್ಮಟೇಶ್ವರನ ಲೋಕೋತ್ತರ ವಿಗ್ರಹವನ್ನು ನಿರ್ಮಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ. ಈತನ ಚಾವುಂಡರಾಯ ಪುರಾಣದಲ್ಲಿ ಗೊಮ್ಮಟೇಶ್ವರನ ಪ್ರತಿಮಾಶಾಸ್ತ್ರವು ಭಾವಭಂಗಿ ಧೀರೋದಾತ್ತ ನಿಲುವುಗಳು ಗೋಚರವಾಗುವಂತೆ ಕಲಾತ್ಮಕ ವಿವರಗಳು ದೊರೆಯುತ್ತವೆಯಲ್ಲದೆ ಜೈನಾಗಮನದರ್ಶನದ ತ್ರಿಲೋಕಸಾರದಲ್ಲಿ ಅಲ್ಲಲ್ಲಿ ಬರುವ ಮಾನಸ್ಥಂಭ ಚೈತಾಲ್ಯಯಗಳು, ವಿವರಣೆಯೂ ಈ ಗ್ರಂಥದಲ್ಲಿ ದೊರೆಯುವುದು. ಜೈನ ಹಸ್ತಪ್ರತಿ ಗ್ರಂಥಗಳು ಕೇವಲ ಧಾರ್ಮಿಕ ಗ್ರಂಥಗಳಾಗಿರದೇ ಕಲಾವಂತಿಕೆಯೊಂದಿಗೆ ಸಮೃದ್ಧವಾದ ಸಾಂಸ್ಕೃತಿಕವಾದ ಉನ್ನತ ಗ್ರಂಥಗಳಾಗಿವೆ ಎಂಬುದು ಗಮನಿಸಬಹುದಾದ ಅಂಶವಾಗಿದೆ.[೩೪]

ಕರ್ನಾಟಕ ಕಲಾಭಂಡಾರಕ್ಕೆ ಜೈನರು ಕೊಟ್ಟ ಕೊಡುಗೆ ತುಂಬ ವೈಭವೋಪೇತವಾಗಿದ್ದು ಕ್ರಿ.ಶ. ೧೨ನೆಯ ಶತಮಾನದಲ್ಲಿ ಕೈಬರಹದ ಚಿತ್ರಿತ ಧವಲತ್ರಯವು ಧವಲ ಜಯಧವಲ ಮತ್ತು ಮಹಾಧವಲ (ಮಹಾಬಂಧ) ಎಂಬ ಮೂರು ಪ್ರತ್ಯೇಕ ಸಂಪುಟಗಳಿಂದೊಡಗೂಡಿದ ವಿಖ್ಯಾತ ಗ್ರಂಥವಾಗಿದೆ. ಮೂಲ 'ಶಟ್ಖಂಡಾಗಮ' ಎಂಬ ಜೈನಗ್ರಂಥದ ಮೇಲೆ ವೀರಸೇನ ಬರೆದ ವ್ಯಾಖ್ಯಾನವೇ ಧವಲತ್ರಯ ಮೂಲತಃ ರಾಷ್ಟ್ರಕೂಟ ಅಮೋಘವರ್ಷನ ಕಾಲದ್ದೆಂದು ಹೇಳಲಾದ ಧವಳತ್ರಯ ಗ್ರಂಥಗಳು ಹೊಯ್ಸಳ ಕಾಲದಲ್ಲಿ (ಕ್ರಿ.ಶ. ೧೨ನೆಯ ಶತಮಾನದಲ್ಲಿ) ಗೇರುಸೊಪ್ಪೆಯಲ್ಲಿ ಸಿದ್ದಗೊಂಡಿತ್ತು ಎಂದು ತಿಳಿದು ಬರುತ್ತದೆ.[೩೫] ಗ್ರಂಥದ ಕೊನೆಯಲ್ಲಿ ಕಾಣಸಿಗುವ ಕನ್ನಡ ಉಲ್ಲೇಖವನ್ನಿಲ್ಲಿ ಗಮನಿಸಬಹುದು. ದಿಗಂಬರ ಜೈನ ಪರಂಪರೆಯಲ್ಲಿ ವರ್ಣಿಸಿರುವ ವರ್ಧಮಾನ ಮಹಾವೀರ

---

೩೩. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ(ಸಂ.) : ನಿಜದನೆಲೆ (ಡಾ. ಚೆನ್ನಕ್ಕ ಪಾವಟೆಯವರ ಲೇಖನ). ಪು–೧೦೭

೩೪. ಉಮೇಶ ಎಸ್ : ಕರ್ನಾಟಕದ ಜೈನ ಚಿತ್ರಕಲೆ (ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ). ಪು–೧೭೮

೩೫. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ(ಸಂ.) : ನಿಜದನೆಲೆ (ಡಾ. ಚೆನ್ನಕ್ಕ ಪಾವಟೆಯವರ ಲೇಖನ). ಪು–೧೦೯

ಬೋಧಿಸಿದ ಹನ್ನೆರಡು ಸಿದ್ಧಾಂತಗಳನ್ನು ಇಂದ್ರಭೂತಿ ಗೌತಮ ಕ್ರೋಢೀಕರಿಸಿದ ನಂತರ ಗುಣಧರ (ಕ್ರಿ.ಶ. ೧ನೆಯ ಶತಮಾನ) ಹಾಗೂ ಧರಸೇನ (ಕ್ರಿ.ಶ. ೧ನೆಯ ಶತಮಾನ) ಎಂಬ ಶ್ರೇಷ್ಠ ಜೈನಾಚಾರ್ಯರು ಬರೆದ ಕಷಾಯ ಪಾವುಡ ಮತ್ತು 'ಶಟ್ಖಂಡಾಗಮ್' ಎಂಬ ಗ್ರಂಥದಲ್ಲಿ ಈ ದ್ವಾದಶ ಸಿದ್ಧಾಂತಗಳಿವೆ. ಇವುಗಳಲ್ಲಿ 'ಶಟ್ಖಂಡಾಗಮ' ದ ಬಗೆಗೆ ಬರೆದ ವ್ಯಾಖ್ಯಾನವೇ ಈ 'ಧವಲಗ್ರಂಥ'ವಾಗಿದೆ. ಈ ಹಸ್ತಪ್ರತಿಗಳು ಮೂಡಬಿದಿರೆಯ ಸಿದ್ಧಾಂತ ಬಸದಿಯಲ್ಲಿರುವವು. ಈ ಗ್ರಂಥಗಳ ವಿಷಯ ನಿರೂಪಣೆ ಚಿತ್ರರಚನೆಗೆ ವಿಶಾಲವಾದ ತಾಳೆಗರೆ ಆಯ್ಕೆ ಮಾಡಿ ಅದರ ಮೇಲೆ ಚಿತ್ರಗಳನ್ನು ಬರೆಯಲಾಗಿದೆ.[೩೬]

ತಾಳೆಯೋಲೆ ಮೇಲೆ ರಚಿಸಿದ ವರ್ಣಚಿತ್ರಗಳು ತುಂಬ ಅಪರೂಪದ 'ಧವಲಾ' ಧರ್ಮಗ್ರಂಥಗಳು ಜೈನ ಮತೀಯರ ಶಾಸ್ತ್ರದಾನದ ಶ್ರೇಷ್ಠ ಉದಾಹರಣೆಗಳು 'ಧವಲಾ' ಗ್ರಂಥದ ಪ್ರತಿಯನ್ನು ದೇವಿಯಕ್ಕನೆಂಬ ಜೈನ ಮಹಿಳೆ ಶೃತ ಪಂಚಮಿಯ ವ್ರತನೋನ್ತು ಬನ್ನಿಗೆರೆಯ ಉತ್ತುಂಗ ಚೈತ್ಯಾಲಯದ ಆಚಾರ್ಯ ಶುಭಚಂದ್ರ ಸಿದ್ಧಾನ್ತ ದೇವರಿಗೆ ಜಯಧವಲ ಅಣ್ಣಶ್ರೇಷ್ಠಿಯಿಂದ ಪದ್ಮಸೇನ ಮುನೀಂದ್ರನಿಗೆ ಮಹಾಧವಲವು ಶ್ರೀಮತಿಯ ಶ್ರೀಪಂಚಮಿಯ ಉದ್ಯಾನದ ದಾಖಲೆಗಳು ದಾನವಾಗಿ ಕೊಡಬೇಕಾದ ಗ್ರಂಥಗಳನ್ನು ಉತ್ಕೃಷ್ಟ ಚಿತ್ರರಚನೆಗಳಿಂದ ಅಲಂಕಾರಣಗೊಳಿಸಿ ನೀಡಿದ್ದುದು ದಾನಿಗಳ ಧರ್ಮಶ್ರದ್ಧೆಗೆ ಕಲಾಭಿರುಚಿಗೆ ಸಾಕ್ಷಿಯೆನಿಸಿವೆ. ೧೫–೧೬ನೆಯ ಶತಮಾನಕ್ಕೆ ಸೇರಿರಬಹುದಾದ ತ್ರಿಲೋಕ ಸಾರ ಸ್ಥಂಭದ ಮೇಲಿನ ಮಂಟಪ ಇವುಗಳನ್ನು ತುಂಬ ಸ್ಪಷ್ಟವಾಗಿ ಬಿಡಿಸಲಾಗಿದೆ. ಪ್ರಸ್ತುತ ಈ ಹಸ್ತಪ್ರತಿಯು ಶ್ರವಣಬೆಳಗೊಳದ ಶ್ರೀ ಜೈನಮಠದ ಹಸ್ತಪ್ರತಿ ಭಂಡಾರದಲ್ಲಿದೆ. ಹಾಗೂ ಕೊಲ್ಲಾಪುರದ ಶ್ರೀ ಜೈನ ಮಠದ ಹಸ್ತಪ್ರತಿ ಭಂಡಾರದಲ್ಲಿದೆ. ಹಾಗೂ ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕರ ಮಠದ ಸಂಗ್ರಹದಲ್ಲಿರುವ ಶಾಂತಿಕೀರ್ತಿಯ "ಚತುರ್ವಿಂಶತಿ ತೀರ್ಥಂಕರ ಪುರಾಣ"ದ ಎರಡು ಅಪೂರ್ವ ಕಾಗದ ಹಸ್ತಪ್ರತಿಗಳು ಈ ಸಂಗ್ರಹದಲ್ಲಿನ ಪ್ರತಿಷ್ಠಾ ತಿಲಕವೂ ಕೂಡ ವಿಪುಲ ಚಿತ್ರರಚನೆಯ ಕೋಶವಾಗಿದ್ದು, ಬಸದಿಗಳಲ್ಲಿನ ಮೂರ್ತಿಗಳ ಪೂಜೆ ಸಮಾರಂಭಗಳ ವಿಧಿವಿಧಾನಗಳನ್ನು ವರ್ಣ ಚಿತ್ರರೂಪದಲ್ಲಿ ರಚಿಸಲಾಗಿದೆ. ಈ ಹಸ್ತಪ್ರತಿಗಳು ಕಾಗದ ಹಸ್ತಪ್ರತಿಗಳಾಗಿದ್ದು ಇವುಗಳ ಕಾಲಮಾನ ತಿಳಿದು ಬಂದಿಲ್ಲ. ಬಹುಶಃ ೧೨ನೆಯ ಶತಮಾನದ ನಂತರ ಈ ಹಸ್ತಪ್ರತಿಗಳ ರಚನೆಯಾಗಿರಬಹುದು.[೩೭] ಹೀಗೆ ಒಂದೆಡೆ ಭಕ್ತಿ ಸಮಯನಿಷ್ಠೆ, ಜ್ಞಾನಾರ್ಜನೆ, ಜ್ಞಾನ, ರಕ್ಷಣೆ, ಕರ್ಮೋಪಶಮನ, ಪುಣ್ಯ ಸಂಪಾದನೆ ಹಾಗೂ ದಾನದ ಹಂಬಲಗಳ ಹಿನ್ನೆಲೆಯಲ್ಲಿ ವಿರ್ಧಮಾನ ಚರಿತೆ, ಪದ್ಮಾವತಿ ಚರಿತೆ, ಧರ್ಮ ಪರೀಕ್ಷೆ, ಚಂದ್ರಪ್ರಭ ಪುರಾಣ, ಪಂಪ ರಾಮಾಯಣ, ಸನತ್ಕುಮಾರ

---

೩೬. ಉಮೇಶ ಎಸ್ : ಕರ್ನಾಟಕದ ಜೈನ ಚಿತ್ರಕಲೆ (ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ), ಪು–೧೮

೩೭ ಅದೇ., ಪು–೧೯

ಚರಿತೆ, ಚಂಪೂ ಭಾರತ, ಜ್ಞಾನ ಚಂದ್ರನ ಚರಿತೆ, ವಡ್ಡಾರಾಧನೆ, ಧನ್ಯಕುಮಾರ ಚರಿತೆ, ಜಿನದತ್ತರಾಯನ ಚರಿತೆ, ಚಂದನಾಂಬಿಕೆಯ ಕಥೆ, ನೇಮಿಜಿನೇಶ ಸಂಗತಿ, ಭರತೇಶ ವೈಭವ, ಮಹಾ ಪುರಾಣ, ನೇಮಿನಾಥ ಪುರಾಣ, ವರ್ಧಮಾನ ಪುರಾಣ, ಅನಂತರನಾಥ ಪುರಾಣ, ಪಾರ್ಶ್ವನಾಥ ಪುರಾಣ ಮುಂತಾದವುಗಳೊಂದಿಗೆ ಸಾಮಾಜಿಕ ಕೃತಿಗಳಾದ ಅನುಪ್ರೇಕ್ಷೆ, ದಶಭಕ್ತಿ, ನೋಂಪಿ ಕಥೆ, ಸಜ್ಜನ ಚಿತ್ತವಲ್ಲಭ, ಅಬ್ಧಿಕಲ್ಪ, ಪುಣ್ಯಾಶ್ರವ, ದ್ವಾರಶಾನುಪ್ರೇಕ್ಷೆ, ರತ್ನಕರಂಡಕ, ಪ್ರಾಭತಕತ್ರಯ, ಶ್ರವಕಾಚಾರ, ಪಂಚಪರಮೇಷ್ಠಿಗಳ ವ್ಯಾಖ್ಯಾನ ಮುಂತಾದವುಗಳನ್ನು ಲೌಕಿಕ ಸಂಪತ್ತನ್ನು ಹೊಂದಲು ಭರತೇಶ್ವರ ಚರಿತ್ತೆ, ಲೀಲಾವತಿ, ಶ್ರೀ ಪಾಲಚರಿತೆ, ನಾಗಕುಮಾರ ಚರಿತೆ ಮುಂತಾದ ಕೃತಿಗಳಲ್ಲಿ ಕನ್ನಡ ಕವಿಗಳ ಶ್ರದ್ಧೆ, ತಾಳ್ಮೆ, ಭಕ್ತಿ, ಪ್ರತಿಭೆ ಕಲ್ಪನೆಯಿಂದ ರಚಿಸಿದ್ದು ಗಮನಾರ್ಹವೆನ್ನಬಹುದು. ಇದರ ಜೊತೆಗೆ ಜೈನ ಸಾಹಿತ್ಯದಲ್ಲಿ ಚಿತ್ರಕಲೆಯ ವಿವರಗಳು ಕಂಡುಬಂದ ಕಾಲದಲ್ಲಿಯೇ ಜೈನರಲ್ಲಿ ಚಿತ್ರಕಲೆಯನ್ನು ರಚಿಸುವ ಪರಿಕಲ್ಪನೆ ಬೆಳೆದು ಬಂತು. ಚಿತ್ರಸಾಹಿತ್ಯ ಪೋಷಣೆ ಕುರಿತಂತೆ ಉಲ್ಲೇಖಗಳು ಸಿಕ್ಕುವುದು ವಿರಳ. ಆದರೂ ಜೈನ ಬಸದಿಗಳು ಹಾಗೂ ಮಠಗಳಲ್ಲಿನ ವರ್ಣಚಿತ್ರಗಳು ಅಲ್ಲಲ್ಲಿ ದೊರಕುವ ಹಸ್ತಪ್ರತಿಗಳಲ್ಲಿನ ಪತ್ರ ಫಲಕ ಚಿತ್ರ ರಚನೆಗಳು ಸಾಕ್ಷಿ ನುಡಿಯುತ್ತದೆ. ಒಟ್ಟಿನಲ್ಲಿ ಜೈನ ಚಿತ್ರಕಲೆ ವರ್ಣಚಿತ್ರಗಳಿಂದಾಗಿ ಚಾರಿತ್ರಿಕ ಮತ್ತು ಕಲಾಪರಂಪರೆಯ ಮೌಲ್ಯ ತಿಳಿಸುವಂತಿದೆ.[೩೮]

ಒಟ್ಟಾರೆಯಾಗಿ ಜೈನ ಧರ್ಮೀಯರ ಆಚಾರ-ವಿಚಾರ, ಆಚರಣೆ-ಸಂಸ್ಕಾರಗಳ ಸೂಕ್ಷ್ಮ ಗ್ರಹಿಕೆಯ ಹಿಂದೆ ಜೈನ ಚಿತ್ರ ಪರಂಪರೆಯ ಸುದೀರ್ಘ ಇತಿಹಾಸವನ್ನು ನಾವು ಕಾಣಬಹುದಾಗಿದೆ. ಜೈನ ಧಾರ್ಮಿಕ ಐತೀಯಗಳ ವಿವರಗಳನ್ನು ಸಾಹಿತ್ಯ ಹಾಗೂ ಇತಿಹಾಸದಿಂದಲ್ಲದೇ ಲಲಿತಕಲೆಗಳ ಮೂಲ ಆಕರಗಳು ಸಾಕ್ಷಿಯಾಗಿವೆ. ಲಲಿತಕಲೆಯ ಚಿತ್ರ ಚಿತ್ರಾರ್ಥ ಚಿತ್ರಭಾಸಗಳ ಹಿನ್ನೆಲೆಯಲ್ಲಿಯೇ ಇತಿಹಾಸಕಾರರು ತಮ್ಮ ಜೈನರ ಐತಿಹಾಸಿಕ ಕುರುಹುಗಳನ್ನು ಕಂಡುಕೊಳ್ಳಲು ಸಾಧ್ಯವಾಗಿದ್ದು ಜೈನ ಪರಂಪರೆಯ ಚರಿತ್ರೆಯನ್ನು ಅರಿಯಲು ಜೈನ ಚಿತ್ರಗಳು, ಜೈನ ಶಿಲ್ಪಗಳು ಮುಖ್ಯವಾದ ಆಧಾರಗಳಾಗಿವೆ. ಈ ಆಧಾರಗಳ ಹಿನ್ನೆಲೆಯ ಮಾಹಿತಿಯಿಂದ ಜೈನ ಇತಿಹಾಸ ಪರಂಪರೆಯನ್ನು ಕಟ್ಟಲು ಸಹಾಯಕವಾಗಿದೆ ಎಂದು ಈ ಅಧ್ಯಯನದ ಮೂಲಕ ತಿಳಿಯಬಹುದು. ಇದಕ್ಕೆ ಪೂರ್ವದಲ್ಲಿ ಚಿತ್ರ ಶಿಲ್ಪಗಳ ಐತಿಹಾಸಿಕ ಮಾಹಿತಿಯನ್ನು ತಿಳಿಯಲು ಜೈನಚಿತ್ರಗಳ ನೆಲೆ-ಹಿನ್ನೆಲೆಗಳು ಬಹುಮುಖ್ಯವಾಗಿದ್ದು ಇದರ ಸಿಂಹಾವಲೋಕನವನ್ನು ಇಲ್ಲಿ ಮಾಡಲಾಗಿರುವುದು.

ಜೈನ ಚಿತ್ರಕಲೆಯ ವರ್ಗೀಕರಣ

ಜೈನ ಧರ್ಮ ಪರಂಪರೆಯು ತನ್ನದೇಯಾದಂತಹ ಧಾರ್ಮಿಕ ಸಂಸ್ಕಾರ, ಸಂಸ್ಕೃತಿ, ಆಚರಣೆಗಳಿಂದ ವೈಚಾರಿಕೆ ವಿಶಿಷ್ಟತೆಗಳನ್ನು ಕಂಡುಕೊಂಡು ಧರ್ಮ ವೈದಿಕ ಧರ್ಮದ ಸಾಮ್ಯತೆ

---

೩೮. ಉಮೇಶ ಎಸ್ : ಕರ್ನಾಟಕದ ಜೈನ ಚಿತ್ರಕಲೆ (ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ), ಪು-೧೯

ಇದ್ದರೂಸಹ ವೈಚಾರಿಕ ಹಾಗೂ ಸಂಸ್ಕೃತಿ ಆಚರಣೆಯಲ್ಲಿ ಭಿನ್ನವಾಗಿ ಬೆಳೆದು ನಿಂತಿದೆ. ಇದರ ಪರಂಪರೆಯನ್ನು ತಿಳಿಯಲು ಸಾಹಿತ್ಯಿಕ, ಐತಿಹಾಸಿಕ ಅವಲೋಕನಗಳು ವ್ಯಾಪಕವಾದ ಜ್ಞಾನ ಭಂಡಾರದ ಸಂಪತ್ತು ಬೇಕು. ಅಂತೆಯೇ ಇದರ ನೆಲೆ ಹಿನ್ನೆಲೆಯ ಪರಿಪೂರ್ಣ ಮಾಹಿತಿಯು ಅವಶ್ಯಕವಾದುದು. ಆದರೆ ಇದರ ವ್ಯಾಪ್ತಿಯು ವಿಪುಲವಾದುದರಿಂದ ಕರ್ನಾಟಕದ ವ್ಯಾಪ್ತಿಗೆ ಸಂಕ್ಷಿಪ್ತಗೊಳಿಸಿಕೊಂಡು ಜೈನ ಚಿತ್ರಕಲಾ ಪರಂಪರೆಯ ಅಧ್ಯಯನದ ರೂಪುರೇಷೆಗಳನ್ನು ಎಣೆದು ವರ್ಗೀಕರಣ ಮಾಡಿ ಸಂಶೋಧನೆಯ ತೀರ ಮುಟ್ಟುವ ಬಯಕೆಯನ್ನು ಇಲ್ಲಿ ಹೊಂದಲಾಗಿದ್ದು, "ಕರ್ನಾಟಕ ಜೈನ ಚಿತ್ರ ಪರಂಪರೆ" ಎಂಬ ಈ ಅಧ್ಯಯನವನ್ನು ಪ್ರಮುಖವಾಗಿ ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ. ೧. ಜೈನ ಭಿತ್ತಿಚಿತ್ರಕಲೆ, ೨. ಜೈನ ಹಸ್ತಪ್ರತಿ ಚಿತ್ರಕಲೆ, ೩. ಜೈನ ಸಂಕೀರ್ಣ ಚಿತ್ರಕಲೆ ಎಂದು ವಿಭಾಗಿಸಲಾಗಿದೆ.

ಮೊದಲನೆಯ ಭಾಗದಲ್ಲಿ ಜೈನ ಭಿತ್ತಿಚಿತ್ರಕಲೆಯನ್ನು ಮೂರು ಭಾಗಗಳನ್ನಾಗಿ ವಿಭಾಗಿಸಿದ್ದು, ೧. ಜೈನ ಬಸದಿಯ ಭಿತ್ತಿ ಚಿತ್ರಗಳು, ೨. ಜೈನ ಮಠದ ಭಿತ್ತಿಚಿತ್ರಗಳು, ೩. ಜೈನ ಶ್ರಾವಕರ ಮನೆಯ ಭಿತ್ತಿಚಿತ್ರಗಳನ್ನು ಕುರಿತಾಗಿ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ೨. ಜೈನ ಹಸ್ತಪ್ರತಿ ಚಿತ್ರಕಲೆಯನ್ನು ಎರಡು ಭಾಗಗಳಾಗಿ ವಿಂಗಡಿಸಿಕೊಂಡು ೧. ತಾಳೆಗರಿಯ ಮೇಲಿನ ಚಿತ್ರಕಲೆ ಹಾಗೂ ೨. ಕಾಗದ ಹಸ್ತಪ್ರತಿ ಮೇಲಿನ ಚಿತ್ರಕಲೆ ಎಂದು ವಿಭಾಗಿಸಿಕೊಂಡು ಅಧ್ಯಾಯ ಮಾಡಲಾಗಿದೆ. ೩. ಜೈನ ಸಂಕೀರ್ಣ ಚಿತ್ರಕಲೆ ಎಂದು ವಿಂಗಡಿಸಲಾಗಿದ್ದು ಇಲ್ಲಿ ಪಟಚಿತ್ರ, ಮರಮಾಧ್ಯಮ, ಲೆಪ್ಪ ಮಾಧ್ಯಮ ಹಾಗೂ ಗಾರೆ ಮಾಧ್ಯಮ, ತಾಡಪ್ರತಿಗಳಲ್ಲಿಯ ಚಿತ್ರಗಳು ಹೀಗೆ ವರ್ಗೀಕರಿಸಿಕೊಂಡು ವಿಷಯದ ಮೂಲಗಳನ್ನು ತಲುಪುವ ವಿಭಾಗೀಯ ವರ್ಗೀಕರಣ ಇದಾಗಿದ್ದು, ಧಾರ್ಮಿಕ ಸಾಂಸ್ಕೃತಿಕ ಕಲಾ ಸಂಶೋಧನೆಯನ್ನು ಮಾಡಲಾಗಿದೆ.

卐卐卐

ಅಧ್ಯಾಯ : ಮೂರು

ಜೈನ ಭಿತ್ತಿಚಿತ್ರಕಲೆ

ಅಧ್ಯಾಯ : ಮೂರು

ಜೈನ ಭಿತ್ತಿಚಿತ್ರಕಲೆ

ಭಿತ್ತಿ ಹಾಗೂ ಚಿತ್ರ ಇವು ಬೇರೆ ಬೇರೆ ಪದಗಳಾದರೂ ವಾಕ್ಯ ಉಚ್ಚಾರಣೆಯಲ್ಲಿ ಎಷ್ಟು ಸರಾಗವಾಗಿ ಭಿತ್ತಿಚಿತ್ರ ಎಂದು ಬರುವುದೋ ಅದೇ ರೀತಿಯಲ್ಲಿ ಕಲೆಯಲ್ಲೂ ಸಹ ಭಿತ್ತಿ ಹಾಗೂ ಚಿತ್ರಕ್ಕೆ ಅಷ್ಟೇ ನಿಕಟವಾದ ಸಂಬಂಧವಿದೆ. ಭಿತ್ತಿಚಿತ್ರವನ್ನು English ನಲ್ಲಿ 'Mural Painting' ಎಂದು ಕರೆಯಲಾಗಿದೆ. ಈ 'Mural' ಶಬ್ದವು ಲ್ಯಾಟಿನ್ ಭಾಷೆಯ 'Murus' ದಿಂದ ಬಂದಿದೆ. ಈ 'Murus'ದ ಅರ್ಥವು ಗೋಡೆ (Wall) ಎಂದಾಗುವುದು.[೧] ಗೋಡೆಯ ಮೇಲೆ ಬಣ್ಣದಿಂದ ಬರೆದ ಚಿತ್ರ ಮತ್ತು ಕೆತ್ತಿ, ಕೊರೆದು ಅಂಟಿಸಿ ಹೀಗೆ ಇತರ ಯಾವುದೇ ವಿಧಾನದಿಂದ ಗೋಡೆಯ ಮೇಲೆ ರೂಪಸಿದ ಚಿತ್ರಗಳು 'Mural' ವ್ಯಾಪ್ತಿಯಲ್ಲಿ ಬರುತ್ತದೆ.[೨] ಗೋಡೆಗಳು ಮೇಲ್ಛಾವಣಿಗಳು ಮತ್ತು ಗುಹೆಗಳನ್ನು ಪ್ರೆಸ್ಕೊ, ಸೆಕ್ಕೊ, ತೈಲವರ್ಣ, ಟೆಂಪರಾ ಇಲ್ಲವೇ ಎನ್‌ಕ್ಯಾಸ್ಟಕ್ ವಿಧಾನಗಳಿಂದ ಚಿತ್ರ ರಚಿಸಿ ಅಲಂಕರಿಸುವ ವಿಧಾನವನ್ನು ಸಹ (Mural Painting) ಭಿತ್ತಿಚಿತ್ರಕಲೆ ಎಂದು ವೆಬ್‌ಸ್ಟರ್ಸ್ ನ್ಯೂ ವರ್ಲ್ಡ್ ಸೈಕ್ಲೋಪಿಡಿಯಾ ಪರಿಗಣಿಸಿದೆ.[೩] ಇದೇ ಅಲ್ಲದೆ ಕನ್ನಡ ಜಾನಪದ ವಿಶ್ವಕೋಶವು ಭಿತ್ತಿಚಿತ್ರ ಎಂದರೆ ಗೋಡೆಯ ಮೇಲೆ ಬರೆದಿರುವ ಚಿತ್ರವೆಂದು ಹೇಳಿ, ಭಿತ್ತಿ ಎಂಬುದಕ್ಕೆ ಗೋಡೆ, ಕುಡ್ಯ, ಮೂಲ, ತಳ, ಹಿನ್ನೆಲೆ ಚಿತ್ರವನ್ನು ಬರೆಯುವ ಮೂಲಾಧಾರಗಳಾದ ಬಟ್ಟೆ, ಗೋಡೆ, ಮೊದಲಾದ ಸಾಧನಗಳು ಎಂಬ ಅರ್ಥವನ್ನು ಕೊಟ್ಟಿದೆ.[೪] ಈ ರೀತಿಯಾಗಿ ವಿದ್ವಾಂಸರ ವ್ಯಾಖ್ಯಾನಗಳನ್ನು ಪರಿಗಣಿಸಿ ಮಾತನಾಡುವುದಾದರೆ ಗೋಡೆಯ ಅಥವಾ ಚತ್ತುಗಳ ಮೇಲೆ ಅಂಟಿಸಿದ ಅಥವಾ

೦೧. Jayanth Chakravarthy : Techniques in Indian Mural Paintings, p.no.12

೦೨. David Crystal : The Cambridge Encyclopedia, p.no-822

೦೩. Websters New World Encyclopedia, p.no.772

೦೪. ಡಾ. ಚಂದ್ರಶೇಖರ ಕಂಬಾರ (ಸಂ.) : ಜನಪದ ವಿಶ್ವಕೋಶ ಭಾಗ-೩, ಪು-೨೫೨

ಲೇಪಿಸಿದ ಅಂಶವನ್ನು ಭಿತ್ತಿ ಅನ್ನುವುದಾದರೆ ಅದರ ಮೇಲೆ ರಚಿಸುವ, ಮೂಡಿಸುವ ಕ್ರಿಯೆಯನ್ನು ಚಿತ್ರ ಎಂದು ಕರೆಯಬಹುದಾಗಿದೆ. ಇವೆರಡನ್ನು ಭಿತ್ತಿಚಿತ್ರ ಎಂದು ಕರೆಯಬಹುದು.

ಭಿತ್ತಿ ಚಿತ್ರಕಲೆಯ ಕುರಿತಾಗಿ ನಿಖರ ಕಾಲಮಾನವನ್ನು ಸ್ಪಷ್ಟಪಡಿಸುವುದು ಕಷ್ಟಸಾಧ್ಯದ ವಿಷಯ. ಆದರೆ ಚಿತ್ರಕಲೆಯನ್ನು ಮಾತ್ರ ಮೊದಲು ಭಿತ್ತಿ ಅಂದರೆ ಆಸು ಬಟ್ಟೆ ರಕ್ಷಣಾ ಬಂಡೆಗಳ ಮೇಲೆ ಮನೋರಂಜನೆ ಹಾಗೂ ವ್ಯವಹಾರಿಕ ಮಾಧ್ಯಮಕ್ಕೆ ಈ ಕಲೆಯನ್ನು ಭಿತ್ತಿಗಳ ಮೇಲೆ ರಚಿಸುತ್ತಿದ್ದ ಎಂದು ಊಹಿಸಬಹುದು. ಈ ಹಿನ್ನೆಲೆಯಲ್ಲಿ ಶಿಲಾಶ್ರಯ ಬಯಲು ಬಂಡೆಗಳ ಮೇಲೆ ಶಿಲಾ ಗುಹೆಗಳಲ್ಲಿ ಮನೆ, ಮಠಮಾನ್ಯ, ದೇವಾಲಯ, ಅರಮನೆ, ಚರ್ಚು, ಮಸೀದಿ, ಸಮಾಧಿ ಮುಂತಾದ ಕಡೆಗಳ ಗೋಡೆ, ಮೇಲ್ಛಾವಣೆ, ಜಂತಿ, ತೊಲೆ, ಬೋಡಿದಗೆ, ಕಂಬ ಬಾಗಿಲು, ಕಿಟಕಿ, ಕಮಾನು, ಕಟ್ಟಡದ ಯಾವುದೇ ಭಾಗದಲ್ಲಿ ಚಿತ್ರ ರಚಿಸಿ ಅವುಗಳನ್ನು ಅಲಂಕರಿಸುವ ವಿಧಾನವನ್ನು ಭಿತ್ತಿ ಚಿತ್ರಕಲೆ ಎಂದು ಪರಿಗಣಿಸಬಹುದಾಗಿದೆ. ಪುರಾತನ ವರ್ಣಭಿತ್ತಿಗಳು ಇದುವರೆಗೆ ತಿಳಿದುಬಂದಂತೆ ನೈರುತ್ಯ ಯೂರೋಪಿನಲ್ಲಿ ಕಂಡುಬರುತ್ತವೆ. ಇವು ಹಿಮಯುಗ ಕಾಲಕ್ಕೆ ಸೇರಿದ್ದು. ಹಿಮಯುಗ ಕಾಲದ ಚಿತ್ರಗಳಿರುವ ಸುಮಾರು ಸಾವಿರ ಸ್ಥಳಗಳನ್ನು ಈವರೆಗೆ ದಕ್ಷಿಣ ಯೂರೋಪಿನಲ್ಲಿ ಸಂಶೋಧಿಸಲಾಗಿದೆ.[೫]

ಪ್ರಾಗೈತಿಹಾಸಿಕ ಕಾಲದ ಮಾನವರು ಶಿಲಾಶ್ರಯದಲ್ಲಿ ವರ್ಣಚಿತ್ರಗಳು ಮತ್ತು ಬಯಲು ಬಂಡೆಗಳ ಮೇಲೆ ಕುಟ್ಟಿ ಗೀಚಿ ರಚಿಸಿದ ವರ್ಣರಹಿತ ಚಿತ್ರಗಳು ಜಗತ್ತಿನ ಅನೇಕ ಕಡೆಗಳಲ್ಲಿ ಕಂಡುಬಂದಿದ್ದು, ಇವು ಭಿತ್ತಿಚಿತ್ರಕಲೆಯ ಪ್ರಾರಂಭಿಕ ಹಂತವನ್ನು ಪ್ರತಿನಿಧಿಸುತ್ತವೆ. ಇಂತಹ ಪುರಾತನ ಚಿತ್ರಗಳು ಸ್ಪೇನಿನ ಪಸೇಗಾ, ಅಲ್ತಮೇರಾ, ಫ್ರಾನ್ಸ್‌ನ ಲಾಮೌತ್, ಫಂಡ್-ಡಿ ಗಾಮ್ ಲಾಗ್ರೀಜ್ ಅಲ್ಲದೇ ಆಸ್ಟ್ರೇಲಿಯಾ, ಆಫ್ರಿಕಾ ಮುಂತಾದ ಪ್ರದೇಶಗಳಲ್ಲಿವೆ. ಹಾಗೆಯೇ ಭಾರತದ ಮಧ್ಯಪ್ರದೇಶದ ಭಿಂಬೇಟ್ಕಾ, ಪಹಾರ್‌ಘರ್, ಆಡಮ್‌ಘರ್, ಜೈ ಮಹದೇವ ಬೆಟ್ಟ, ರಾಮಘಾಟ್ ಬೆಟ್ಟರ್, ಜೋಗಿಮಾರ ಗುಹೆಗಳಲ್ಲಿ ಪ್ರಾಗೈತಿಹಾಸಿಕ ಮಾನವರು ರಚಿಸಿದ ಭಿತ್ತಿಚಿತ್ರಗಳಿವೆ.

ಅಂತೆಯೇ ಭಾರತದ ವೈವಿಧ್ಯಮಯ ರಾಜ್ಯವಾದ ನಮ್ಮ ಕರ್ನಾಟಕದಲ್ಲಿಯೂ ಪ್ರಾಗೈತಿಹಾಸಿಕ ಕಾಲದ ಶಿಲಾಶ್ರಯ ಭಿತ್ತಿಚಿತ್ರಗಳು ಕಂಡು ಬರುತ್ತವೆ. ಅದರಲ್ಲೂ ಉತ್ತರ ಕರ್ನಾಟಕದ ಭಾಗದಲ್ಲಿ ಇಂತಹ ಚಿತ್ರಗಳು ವಿಫುಲ ಸಂಖ್ಯೆಯಲ್ಲಿ ದೊರಕಿದೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ಸಮೀಪದ ಅರೆಗುಡ್ಡ, ಹರೇಗುಡ್ಡ, ಸಿಡ್ಲಿಫಡಿ, ಸೀತಿಡೋಣಿ, ಬೆಳಗಾಂವ ಜಿಲ್ಲೆಯ ರಾಮದುರ್ಗ ಸಮೀಪದ ಮೇಗುಂಡೇಶ್ವರ ದೇವಾಲಯದ ಬಳಿಯ ಗುಡ್ಡದಲ್ಲಿ ಅಲ್ಲದೇ ಕೊಪ್ಪಳದ ಗುಡ್ಡದಲ್ಲಿ, ಇದೇ

೦೫. Yashodhar Mathpal : Pre-Historic Rock Paintings of Bhimbetka, p.no.10

ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹಿರೇಬೆನಕಲ್, ಅಂಜನಹಳ್ಳಿ, ತಿಮ್ಮಲಾಪುರ, ಚಿಕ್ಕರಾಮಪುರ, ಲಿಂಗಸೂರು ತಾಲ್ಲೂಕಿನ ಪಿಕ್ಕಿಹಾಳ, ಮಸ್ಕಿ, ತಾವರೆಗೇರಾ, ರಾಯಚೂರು ತಾಲ್ಲೂಕಿನ ತೊಗಲಗುಡ್ಡ, ಕಲ್ಲೂರು, ಹೊಸಪೇಟೆ ಬಳಿಯ ಹಂಪಿ, ಹಳಕುಂಡಿ, ಬೆಳಗಲ್, ಬಳ್ಳಾರಿ ಸಮೀಪದ ಕುರುಗೋಡು[೦೬] ಚಿತ್ರದುರ್ಗದ ಬೆಟ್ಟ ಸಾಲು, ಮೊಳಕಾಲ್ಮೂರು ಇನ್ನೂ ಮುಂತಾದ ಕಡೆಗಳಲ್ಲಿ ಕಂಡುಬಂದಿರುವ ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳು ಆ ಕಾಲದ ಜನರ ಜೀವನ ವಿಧಾನ, ಆಚಾರ-ವಿಚಾರ ತಿಳಿಸುವುದರ ಜೊತೆಗೆ ಅವರ ಕಲಾಜೀವನವನ್ನು ಪ್ರತಿನಿಧಿಸುತ್ತದೆ. ಅಲ್ಲದೆ ಬೆಟ್ಟ-ಗುಡ್ಡಗಳಲ್ಲಿ ವಾಸಿಸುತ್ತಿದ್ದ ಪ್ರಾಗೈತಿಹಾಸಿಕ ಮಾನವರು ರಚಿಸುತ್ತಿದ್ದ ಭಿತ್ತಿ ಚಿತ್ರಕಲೆಯ ಸ್ವರೂಪ ಈ ರೀತಿಯಾದರೆ, ನಾಗರೀಕತೆ ಬೆಳೆದಂತೆ ಮಾನವರು ವ್ಯವಸಾಯ ಯೋಗ್ಯವಾದ ಬಯಲು ಪ್ರದೇಶಕ್ಕೆ ಬಂದು ನೆಲೆಸಿದರು. ನಂತರ ಅವರು ರಚಿಸುತ್ತಿದ್ದ ಭಿತ್ತ ಚಿತ್ರ ರಚನೆಯ ಸ್ವರೂಪ ಬದಲಾಯಿತು. ಈ ಹೊತ್ತಿಗೆ ಉದ್ದ ಅಗಲಗಳೆಂಬ ಪ್ರಮಾಣಗಳು, ಕಟ್ಟುಪಾಡುಗಳು, ನೀತಿನಿಯಮಗಳು, ಚಿತ್ರವನ್ನು ಹೀಗೆಯೇ ಬರೆಯಬೇಕೆಂಬ ವಿಧಿ-ವಿಧಾನಗಳು[೦೭] ಬೆಳೆದು ಬಂದವು. ಇಂತಹ ಚಿತ್ರಗಳು ಆ ಕಾಲದಲ್ಲಿ ಆತ ನಿರ್ಮಿಸಿದ ಮನೆ, ಅರಮನೆ, ಸಮಾಧಿ, ದೇವಾಲಯ ಮುಂತಾದ ವಾಸ್ತು ರಚನೆಯಲ್ಲಿ ಕಂಡುಬಂದಿದ್ದನ್ನು ನಾವಿಲ್ಲಿ ಕಾಣಬಹುದಾಗಿದೆ.

ಕ್ರಿ.ಪೂ. ೩೦೦೦ ವರ್ಷಗಳ ಪೂರ್ವದಲ್ಲಿಯೇ ಈಜಿಪ್ಟಿನ ಪ್ರಧಾನ ವ್ಯಕ್ತಿಗಳ ಸಮಾಧಿಗಳಲ್ಲಿ, ದೇಗುಲ ಹಾಗೂ ಅರಮನೆಗಳಲ್ಲಿ ವರ್ಣಚಿತ್ರಗಳು ರಚನೆಯಾಗಿದ್ದು ತಿಳಿದು ಬರುವುದು. ಕ್ರಿ.ಪೂ. ೧೬೦೦ ರ ಸುಮಾರಿನಲ್ಲಿ ಗ್ರೀಕ್ ದೇಶದಲ್ಲಿಯೂ ಭಿತ್ತಿಚಿತ್ರಗಳನ್ನು ರಚಿಸಲಾಗಿತ್ತು. ಇಲ್ಲಿನ ಪ್ರಾಚೀನ ಸ್ಮಾರಕಗಳಲ್ಲಿ ಈ ಕಾಲದ ಭಿತ್ತಿ ಚಿತ್ರಗಳಿವೆ. ಹಾಗೆಯೇ ಕ್ರಿ.ಪೂ. ೭೦೦ರಿಂದ ೨೫೦೦ರ ಅವಧಿಯಲ್ಲಿ ಶ್ರೇಷ್ಟತೆಯನ್ನು ಮೆರೆದು ರೋಮ್ ನಾಗರೀಕತೆಗೆ ಸಂಬಂಧಿಸಿದ ಭಿತ್ತಿ ಚಿತ್ರಗಳು ರೋಮ್, ಸಿಸಿಲಿ, ನೇಪಲ್ಸ್ ಹಾಗೂ ವಾಂಪೆಗಳಲ್ಲಿ ಸಿಕ್ಕಿವೆ. ಇವುಗಳಲ್ಲದೇ ಮಧ್ಯ ಅಮೇರಿಕಾ, ಇಟಲಿ, ಜಪಾನ್ ಮುಂತಾದ ಕಡೆಗಳಲ್ಲಿ ಪ್ರಾಚೀನ ಭಿತ್ತಿಚಿತ್ರಗಳು ಕಂಡುಬಂದಿವೆ. ಕ್ರಿ.ಶ. ಆರಂಭದ ಹೊತ್ತಿಗೆ ಜಪಾನಿನ ಅರಮನೆಗಳು, ದೇವಾಲಯಗಳು, ವಿಹಾರಧಾಮಗಳು, ಮನೆ ಹಾಗೂ ಇತರ ಸೌಧಗಳು ಮರದಿಂದ ನಿರ್ಮಿಸುತ್ತಿದ್ದು, ಅವುಗಳ ಗೋಡೆಗಳ ಮೇಲೆ ಭಿತ್ತಿ ಚಿತ್ರ ರಚನೆ ಮಾಡುತ್ತಿದ್ದರು. ಕ್ರಿ.ಶ. ೩೦೦ರ ಸುಮಾರಿಗೆ ಬೆಂಜೆಂಟೈನಾದ ಚರ್ಚುಗಳಲ್ಲಿ ಕ್ರಿಸ್ತನ ಮತ್ತು ಕ್ರೈಸ್ತ ಸಂತರ ಭಿತ್ತಿ ಚಿತ್ರಗಳನ್ನು ರಚಿಸುತ್ತಿದ್ದರು.

ಚೀನಾದಲ್ಲಿ ಕ್ರಿ.ಶ. ೩೫೦ರ ವೇಳೆಗೆ ಅಲ್ಲಿನ ಟುನ್‌ಹ್ವಾಂಗ್ ಪ್ರದೇಶದಲ್ಲಿ ಶಿಲೆಯಲ್ಲಿ ಗುಹಾಲಯಗಳನ್ನು ಕೊರೆದು ಅವುಗಳಲ್ಲಿ ಬೌದ್ಧ ಧಾರ್ಮಿಕ ಚಿತ್ರಗಳನ್ನು ರಚಿಸಿದ್ದು ತಿಳಿದು

೦೬. ಅ. ಸುಂದರ : ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆ, ಪು-೨೬

೦೭. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ - ಒಂದು ಅಧ್ಯಯನ. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು-೨೮

ಬರುವುದು. ಅಂತೆಯೇ ಶ್ರೀಲಂಕಾದ ಸಿಗೇರಿಯಾ ಶಿಲಾಗುಹೆಗಳಲ್ಲಿ ಕ್ರಿ.ಶ. ೫ನೇ ಶತಮಾನಕ್ಕೆ ಸೇರಿದ ಭಿತ್ತಿಚಿತ್ರಗಳಿಗೆ ಕ್ರಿ.ಶ. ೮ನೇ ಶತಮಾನದಲ್ಲಿ ಲೆಬನಾನ್‌ದಲ್ಲಿರುವ ಡಮಾಸ್ಕಸ್ ಪೂರ್ವಭಾಗದಲ್ಲಿರುವಂತಹ ಪ್ರಾಚೀನ ಕಾಲದ ಪ್ರಾಂಗಣ ಒಂದನ್ನು ಮುಸ್ಲಿಮರು ತಮ್ಮ ಮಸೀದಿಯಾಗಿ ಪರಿವರ್ತಿಸಿ ಅದರ ಅಲಂಕಾರಕ್ಕಾಗಿ ನಿಸರ್ಗ ದೃಶ್ಯಗಳು, ಹೂ ಬಳಿಯ ನಕ್ಷೆಗಳನ್ನು ಅದರಲ್ಲಿ ರಚನೆ ಮಾಡಿದ್ದಾರೆ. ಇವುಗಳಲ್ಲದೇ ಇಂಗ್ಲೇಂಡಿನ ಇಗರ್ಜಿಗಳಲ್ಲಿಯೂ ಕ್ರಿ.ಶ. ೮ನೇ ಶತಮಾನದ ಭಿತ್ತಿಚಿತ್ರಗಳು ರಚನೆಯಾಗಿವೆ. ಇಂಡೋನೇಷಿಯಾದ ಪ್ರಾಂಬನನ್ ಎಂಬ ಶಿಲಾ ದೇವಾಲಯದಲ್ಲಿ ಕ್ರಿ.ಶ. ೯ನೇ ಶತಮಾನದ ಭಿತ್ತಿ ಚಿತ್ರಗಳನ್ನು ನಾವು ಕಾಣಬಹುದು.

ಇವೇ ಅಲ್ಲದೆ ಕ್ರಿ.ಶ. ೧೦ನೇ ಶತಮಾನದಲ್ಲಿ ಕ್ರಿಶ್ರಿಯನ್ನರು ಕ್ರೈಸ್ತ ಇಗರ್ಜಿ ಮತ್ತು ಸನ್ಯಾಸಿಮಠಗಳಲ್ಲಿ ಭಿತ್ತಿಚಿತ್ರ ರಚಿಸುತ್ತಿದ್ದರು. ಜರ್ಮನಿಯಲ್ಲಿ ಕ್ರಿ.ಶ. ೧೧ ರಿಂದ ೧೨ನೇ ಶತಮಾನದಲ್ಲಿ ಭವ್ಯವಾದ ಮತ್ತು ವಿಶಾಲವಾದ ಚರ್ಚುಗಳಲ್ಲಿ ಭಿತಿಚಿತ್ರ ರಚನೆಯನ್ನು ಮಾಡಲಾಗಿದೆ. ಕ್ರಿ.ಶ. ೧೫ನೇ ಶತಮಾನದಲ್ಲಿ ಯೂರೋಪಿನಲ್ಲಿ ಮತ್ತೆ ಹೆಚ್ಚಾಗಿ ಭಿತ್ತಿ ಚಿತ್ರ ರಚನೆಯಾಗಿದ್ದು ಕಂಡು ಬರುತ್ತದೆ. ರೋಮ್‌ನ ಸಿಸ್ಟೇನ್ ಚಾಪೆಲ್, ಬೆಲ್ಜಿಯಂನ ಫ್ಲೇಮೇಲ್, ಮಿಲಾನಿನ ಮೇರಿಯಾ ಡೆಲ್‌ಗ್ರೇಜ್, ಚರ್ಚುಗಳಲ್ಲದೇ ಇನ್ನೂ ಅನೇಕ ಕಡೆಗಳಲ್ಲಿ ಈ ಕಾಲದ ಭಿತ್ತಿ ಚಿತ್ರಗಳಿವೆ. ಕ್ರಿ.ಶ. ೧೬ ನೇ ಶತಮಾನದ ಭಿತ್ತಿ ಚಿತ್ರಗಳು ರೋಮ್ ನಗರದ ಕೆಂಟರೆಲಿ ಚೇಪ್, ವೆಟಿಕನ್ ಗುರುಮನೆಯಲ್ಲಿ, ಇಟಲಿಯ ಸಾನ್‌ಮಾಗಿಯೋ ಎಂಬಲ್ಲಿನ ಚರ್ಚೊಂದರಲ್ಲಿ, ಸ್ಪೇನಿನ ಇಗರ್ಜಿಯಲ್ಲಿ, ಜರ್ಮನಿಯ ಚರ್ಚ್‌ಗಳಲ್ಲಿ ಕಂಡುಬರುತ್ತವೆ. ಕ್ರಿ.ಶ. ೧೭ನೇ ಕೆಥೆಡ್ರಿಲ್, ರೋಮ್ ನಗರದ ಗೇಸು ಚರ್ಚುಗಳಲ್ಲಿ ಅಲ್ಲದೇ ಇನ್ನೂ ಅನೇಕ ಕಡೆಗಳಲ್ಲಿ ರಚಿಸಲಾಗಿದೆ. ಕ್ರಿ.ಶ. ೧೮ನೇ ಶತಮಾನದಲ್ಲಿ ರಶಿಯಾದ ಸಾರ್ವಜನಿಕ ಭವನಗಳು, ವಿಶ್ವ ವಿದ್ಯಾಲಯಗಳು, ಇಗರ್ಜಿಗಳು ಭಿತ್ತಿಚಿತ್ರಗಳಿಂದ ಅಲಂಕರಿಸಲ್ಪಟ್ಟಿವೆ. ಈ ಕಾಲದ ಭಿತ್ತಿ ಚಿತ್ರಗಳು ಸ್ಪೇನಿನ ಸಾಂಟಿಯಾಗೋ ನಗರದ ಚರ್ಚೊಂದಲ್ಲಿಯೂ ರಚನೆಯಾಗಿವೆ. ಕ್ರಿ.ಶ. ೧೯ನೇ ಶತಮಾನದ ಭಿತ್ತಿಚಿತ್ರಗಳು ವೆನಿಸ್ ನಗರದ ಚರ್ಚೊಂದರಲ್ಲಿ ರಚನೆಯಾಗಿವೆಯಲ್ಲದೇ ನಾರ್ವೆ ದೇಶದ ಓಸ್ಲೋ ವಿಶ್ವವಿದ್ಯಾಲಯದಲ್ಲಿ ಕ್ರಿ.ಶ. ೨೦ನೇ ಶತಮಾನದ ಭಿತ್ತಿಚಿತ್ರಗಳು ಕಂಡು ಬರುತ್ತವೆ. ಹೀಗೆ ಪ್ರಪಂಚದಾದ್ಯಂತ ಭಿತ್ತಿಚಿತ್ರಕಲೆ ಪ್ರಾಚೀನ ಕಾಲದಿಂದ ಬೆಳೆದು ಬಂದಿವೆ.

ಭಾರತ

ಭಾರತದಲ್ಲಿಯೂ ಅತ್ಯಂತ ಪುರಾತನ ಕಾಲದಿಂದಲೇ ಭಿತ್ತಿಚಿತ್ರಕಲೆ ಕಂಡುಬರುತ್ತದೆ. ಮಧ್ಯಪ್ರದೇಶದ ಭಿಂಬೇಟ್ಕಾ ಪ್ರದೇಶದಲ್ಲಿ ಕ್ರಿ.ಪೂ.೨೫೦೦ ವರ್ಷಗಳಷ್ಟು ಪುರಾತನವಾದ ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳಿವೆ.[೮] ಇದೇ ರಾಜ್ಯದ ರಾಮಘಡ ಬೆಟ್ಟದ ಜೋಗಿಮಾರ ಗುಹೆಗಳಲ್ಲಿ ಕ್ರಿ.ಪೂ. ೧೦೦೦೦

೦೮. Yashodhar Mathpal : Pre-Historic Rock Paintings of Bhimbetka, p.no.29

ವರ್ಷಗಳಷ್ಟು ಹಿಂದಿನ ಚಿತ್ರಗಳಿವೆ. ಇವುಗಳಲ್ಲದೇ ಭಾರತದ ಅನೇಕ ಕಡೆಗಳಲ್ಲಿ ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳು ಕಂಡುಬಂದಿವೆ. ಸುಮಾರು ಕ್ರಿ.ಪೂ. ೫೦೦೦ ವರ್ಷಗಳ ಹಿಂದಿನ ಸಿಂಧೂ ನಾಗರೀಕತೆಯ ಕಾಲದಲ್ಲಿ ಜನರು ತಮ್ಮ ವಾಸ್ತುಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುತ್ತಿದ್ದರು. ಅಲ್ಲದೇ ವೇದಗಳಲ್ಲಿ ಮೊದಲನೆಯದಾದ ಋಗ್ವೇದಲ್ಲಿ ಭಿತ್ತಿಚಿತ್ರಕಲೆಯ ಪ್ರಸ್ತಾವ ಬರುತ್ತದೆ.[೯] ರಾಮಾಯಣ, ಮಹಾಭಾರತಗಳಲ್ಲೂ ಭಿತ್ತಿ ಚಿತ್ರಗಳಿಂದ ಅಲಂಕರಿಸಲಾದ ಅರಮನೆಗಳ ವರ್ಣನೆ ಬರುತ್ತದೆ. ಕ್ರಿ.ಪೂ. ೩೨೨ರ ಸುಮಾರಿನಲ್ಲಿ ಮೌರ್ಯರ ಕಾಲದಲ್ಲಿ ಕೌಟಿಲ್ಯನಿಂದ ವಿರಚಿತ ಅರ್ಥಶಾಸ್ತ್ರ ಗ್ರಂಥದಲ್ಲಿ ಭಿತ್ತಿ ಚಿತ್ರ ಕಲೆಯ ಉಲ್ಲೇಖವಿದೆ. ಕ್ರಿ.ಪೂ. ೨ನೇ ಶತಮಾನಕ್ಕೆ ಸೇರಿದ ಚಿತ್ರಗಳು ಓರಿಸ್ಸಾ ರಾಜ್ಯದ ಉದಯಗಿರಿ ಮತ್ತು ಖಾಂಡಗಿರಿ ಗುಹೆಗಳಲ್ಲಿವೆ. ಕ್ರಿ.ಪೂ. ೧೫೧೦ ರಿಂದ ಕ್ರಿ.ಶ. ೧೦೦ರ ಅವಧಿಯಲ್ಲಿ ರಚನೆಯಾದ ಭಿತ್ತಿ ಚಿತ್ರಗಳು ಮಹಾರಾಷ್ಟ್ರದ ಕಾರ್ಲ, ಕೊಂಡಾನೆ, ನಾಸಿಕ್, ಬೇಡ್ಸ್, ಭಾಜ ಗುಹೆಗಳಲ್ಲಿ ಕಂಡು ಬರುವುದನ್ನು[೧೦] ನಾವಿಲ್ಲಿ ನೆನೆಯಬಹುದು.

ಮಹಾರಾಷ್ಟ್ರದ ಕೆನ್ಹೇರಿ ಮತ್ತು ಅಜಂತಾ ಗುಹೆಗಳಲ್ಲಿ ಕ್ರಿ.ಪೂ. ೧೦೦೦ ರಿಂದ ಕ್ರಿ.ಶ. ೮ನೇ ಶತಮಾನದವರೆಗಿನ ಭಿತ್ತಿಚಿತ್ರಗಳು ಕಂಡುಬರುತ್ತವೆ. ಕ್ರಿ.ಶ. ೩ನೇ ಶತಮಾನದ ಚಿತ್ರಗಳು ಇದೇ ರಾಜ್ಯದ ಜನ್ನಾರ ಪಟ್ಟಣದ ಬಳಿ ಇರುವ ತಳಜಾ ಗುಹೆಗಳಲ್ಲಿ ಕಂಡುಬಂದಿದೆ. ಕ್ರಿ.ಶ. ೪ನೇ ಶತಮಾನದ ಚಿತ್ರಗಳು ಮಹಾರಾಷ್ಟ್ರದ ಎಲೆಫೆಂಟಾ ನಡುಗಡ್ಡೆಯಲ್ಲಿನ ಗುಹೆಗಳಲ್ಲಿ ಮತ್ತು ಗ್ವಾಲಿಯರ್ ಸಮೀಪದ ಭಾಗ್ ಗುಹೆಗಳಲ್ಲಿ ಕಂಡು ಬರುತ್ತವೆ. ಕ್ರಿ.ಶ. ೬ನೇ ಶತಮಾನದ ಚಿತ್ರಗಳು ಮಹಾಬಲಿಪುರಂನಲ್ಲಿರುವ ಪಲ್ಲವರ ಕಾಲದ ಪಂಚಶಿಲಾ ರಥಗಳಲ್ಲಿ ರಚನೆಯಾಗಿದೆ. ಕ್ರಿ.ಶ. ೭ನೇ ಶತಮಾನದ ಓರಿಸ್ಸಾ ರಾಜ್ಯದ ಸೀತಾಭಿಂಜಿ, ಮಹಾರಾಷ್ಟ್ರದ ಘಿಥಲ್‌ಕೋರಂ ಗುಹೆಗಳಲ್ಲಿ, ತಮಿಳುನಾಡಿನ ಕಂಚೀಪುರದ ಕೈಲಾಸನಾಥ ದೇವಾಲಯದಲ್ಲಿ, ಆಂಧ್ರಪ್ರದೇಶದ ಊರೊಂದರ ಗುಹೆಗಳಲ್ಲಿ ಕಂಡುಬಂದಿವೆ. ಕ್ರಿ.ಶ. ೮ನೇ ಶತಮಾನದ ಚಿತ್ರಗಳು ತಮಿಳುನಾಡಿನ ಕಂಚಿಪುರದ ವೈಕುಂಠ ಪೆರುಮಾಳ್ ದೇವಾಲಯದಲ್ಲಿ, ಸಿತ್ತ್ ನಿವಾಸಲ್ ಗುಹೆಗಳಲ್ಲಿ ರಚಿಸಿವೆ. ಕ್ರಿ.ಶ. ೯ನೇ ಶತಮಾನದ ಚಿತ್ರಗಳು ತಮಿಳುನಾಡಿನ ಉತ್ತರ ಮೇರೂರುದಲ್ಲಿನ ಸುಂದರ ಪೆರುಮಾಳ್ ದೇವಾಲಯ, ಮಧುರೈ ಜಿಲ್ಲೆಯ ಕಾರ್ತಿಕೇಯ ದೇವಾಲಯಗಳಲ್ಲಿ ರಚನೆಯಾಗಿವೆ.

ಕ್ರಿ.ಶ. ೧೦ನೇ ಶತಮಾನದ ಭಿತ್ತಿ ಚಿತ್ರಗಳು ತಮಿಳುನಾಡಿನ ನಾರ್ಥಾಮಲ್ಯೆಯಲ್ಲಿರುವ ವಿಜಯಾಲಯ ಚೋಳೇಶ್ವರ ದೇವಾಲದಯಲ್ಲಿವೆ. ಕ್ರಿ.ಶ. ೧೧ ನೇ ಶತಮಾನದ ಭಿತ್ತಿ ಚಿತ್ರಗಳು ಬಿಹಾರದ ನಲಂದಾದಲ್ಲಿ, ಓರಿಸ್ಸಾದ ಪುರಿಯ ಜಗನ್ನಾಥ ದೇವಾಲಯದಲ್ಲಿ ಕಂಡುಬರುತ್ತವೆ.

೦೯. J. C. Nagpal : Mural Paintings in India, p.no.147

೧೦. Ferguson J. and Burges J : Cave temple of India, p.no.84

ಕ್ರಿ.ಶ. ೧೨ನೇ ಶತಮಾನದ ಚಿತ್ರಗಳು ಜಮ್ಮು-ಕಾಶ್ಮೀರದ ಲಡಾಕ್‌ದಲ್ಲಿರುವ ಅಲ್ಚೀ ಮತ್ತು ಹೇಮಿಸ್ ಬೌದ್ಧ ಮಠಗಳಲ್ಲಿ ಹಿಮಾಚಲ ಪ್ರದೇಶದ ಸ್ಪಿಟೀ ಕೊಳ್ಳದ ಬೌದ್ಧ ಗೋಂಪ್ಯಗಳಲ್ಲಿ, ಆಂಧ್ರದ ಪಿಲ್ಲ ಮರಿಯ ನರಸಿಂಹ ದೇವಾಲಯದಲ್ಲಿ ಇರುತ್ತವೆ. ಕ್ರಿ.ಶ. ೧೪ನೇ ಶತಮಾನದ ಚಿತ್ರಗಳು ಕೇರಳದ ತಿರುವನಂತಪುರಂನಲ್ಲಿರುವ ಪದ್ಮನಾಭಸ್ವಾಮಿ ದೇವಾಲಯಗಳಲ್ಲಿವೆ. ಕ್ರಿ.ಶ. ೧೫ನೇ ಶತಮಾನದ ಭಿತ್ತಿ ಚಿತ್ರಗಳು ರಾಜಸ್ಥಾನದ ಕೊಟಾ ಜಿಲ್ಲೆಯ ಇಂದರ್‌ಘರ್ ಅರಮನೆ, ಕರೌಲೀ ತಾಲ್ಲೂಕಿನ ಮಹಾರಾಜಗೋಪಾಲನ ಅರಮನೆ, ತಮಿಳುನಾಡಿನ ವೈಕುಂಠ ಪೆರುಮಾಳ್ ದೇವಾಲಯ, ಮಧುರೈ ಮೀನಾಕ್ಷಿ ದೇವಾಲಯ ಹಾಗೂ ಇನ್ನಿತರ ಅನೇಕ ಸ್ಥಳಗಳಲ್ಲಿವೆ. ಕ್ರಿ.ಶ. ೧೬ನೇ ಶತಮಾನದ ಭಿತ್ತಿಚಿತ್ರಗಳು ಉತ್ತರಪ್ರದೇಶದ ಆಗ್ರಾ ಜಿಲ್ಲೆಯ ಅಕ್ಬರನ ಸಮಾಧಿಯಲ್ಲಿ ಚಿನ್ನಿಕಾ-ರೋಜಾ ಕಟ್ಟದಲ್ಲಿ ಇತಿಮಾನ್-ಉದ್ದಾಲ್ ಸಮಾಧಿಯಲ್ಲಿ ರಚನೆಯಾಗಿವೆ. ಇವುಗಳಲ್ಲದೇ ಇನ್ನೂ ಹಲವಾರು ಸ್ಥಳಗಳಲ್ಲಿ ಭಾರತದುದ್ದಕ್ಕೂ ಈ ಕಾಲದ ಭಿತ್ತಿಚಿತ್ರಗಳು ಕಂಡುಬರುತ್ತವೆ. ಕ್ರಿ.ಶ. ೧೭ನೇ ಶತಮಾನದ ಭಿತ್ತಿ ಚಿತ್ರಗಳು ಉತ್ತರ ಪ್ರದೇಶದ ಅಲಹಾಬಾದ್ ಜಿಲ್ಲೆಯ ಕುಶ್ರೋ ಸಮಾಧಿ, ಸುಲ್ತಾನ್-ಉಲ್-ನಿಸಾ ಬೇಗಂ ಸಮಾಧಿ, ಅಲಹಾಬಾದ್‌ನಲ್ಲಿರುವ ರಾಣಿಮಹಲ್, ದೆಹಲಿಯ ಕೆಂಪುಕೋಟೆ ಮುಂತಾದ ಕಡೆಯಲ್ಲಿವೆ.

ಕ್ರಿ.ಶ. ೧೮ನೇ ಶತಮಾನದ ಭಿತ್ತಿ ಚಿತ್ರಗಳು ಹಿಮಾಚಲ ಪ್ರದೇಶದ ಚಂಬಾದಲ್ಲಿರುವ ಅಖಂಡಚಂಡಿ ಅರಮನೆ, ದುರ್ಗಾ ದೇವಾಲಯ, ಕಾಂಗ್ರಾ ಜಿಲ್ಲೆಯ ತಿರಜಸನ್‌ಪುರದ ಗೌರೀಶಂಕರ ದೇವಾಲಯ, ಉತ್ತರಪ್ರದೇಶದ ಬರೇಲಿಯಾದಲ್ಲಿರುವ ಹಫೀಜ್‌ಉಲ್-ಮುಲ್ಕ್ ಸಮಾಧಿ, ಪಶ್ಚಿಮ ಬಂಗಾಳದ ವಿಷ್ಣುಪುರದ ರಾಧೇಶ್ಯಾಮ ದೇವಾಲಯ, ಮಹಾರಾಷ್ಟ್ರದ ಪೂನಾ ಜಿಲ್ಲೆಯ ಶನಿವಾರ ವಾಡಾ ಅರಮನೆ, ಕೇರಳದ ಕಯ್ಯಕುಲಂದಲ್ಲಿ ಕೃಷ್ಣಪುರಂ ಅರಮನೆ ಮುಂತಾದ ಕಡೆಗಳಲ್ಲಿ ಕಂಡುಬರುತ್ತದೆ. ಕ್ರಿ.ಶ. ೧೯ನೇ ಶತಮಾನದ ಭಿತ್ತಿ ಚಿತ್ರಗಳು ಹಿಮಾಚಲಪ್ರದೇಶದ ಜಂಬಾ ಜಿಲ್ಲೆಯಲ್ಲಿಯ ಚತ್ರಾರಿಯಲ್ಲಿನ ಶಕ್ತಿಮಂದಿರ, ವಜೀರ್ ಅರಮನೆ, ಕಾಂಗ್ರಾ ಜಿಲ್ಲೆಯ ಧರ್ಮತಾಲ್ ಅರಮನೆ, ಶಿಮ್ಲಾ ಜಿಲ್ಲೆಯ ಗೋಪಾಲ ದೇವಾಲಯ, ಜಮ್ಮು-ಕಾಶ್ಮೀರದ ರೇಯಾಸಿಯಲ್ಲಿನ ಗುಲಾಬಸಿಂಗ್‌ನ ಅರಮನೆ, ಗುಜರಾತ್‌ನ ತಾಂಬೇಕರ್‌ವಾಡಾ, ರಾಜಸ್ಥಾನದ ಪುಷ್ಕರ್ ಎಂಬಲ್ಲಿನ ರಂಗಜೀ ದೇವಾಲಯ, ಬ್ರಹ್ಮಪುರಿಯಲ್ಲಿನ ಪುಂಡರೀಕ್ ಹವೇಲಿ, ಪಂಜಾಬ್ ಹೋಷಿಯಾರ್ ಪುರದ ಧರ್ಮಶಾಲೆಯಲ್ಲಿ, ಅಮೃತಸರದ ಸ್ವರ್ಣ ಮಂದಿರ ಮತ್ತು ಇತರೆಡೆಗಳಲ್ಲಿ ಈ ಕಾಲದ ಭಿತ್ತಿಚಿತ್ರಗಳು ರಚನೆಯಾಗಿವೆ. ಕ್ರಿ.ಶ. ೨೦ನೇ ಶತಮಾನದ ಚಿತ್ರಗಳು ಹಿಮಾಚಲ ಪ್ರದೇಶದ ಸಿಮ್ಲಾ ಜಿಲ್ಲೆಯ ಆರ್ಕೀಯಲ್ಲಿನ ದಿವಾನ್‌ಖಾನಾದಲ್ಲಿ, ಕೇರಳದ ತ್ರಿವೇಂಡ್ರಂ(ತಿರುವನಂತಪುರಂ) ಜಿಲ್ಲೆಯ ಮಹಾದೇವ ದೇವಾಲಯಗಳಲ್ಲಿ ಕಂಡುಬರುತ್ತವೆ. ಈ ರೀತಿಯಾಗಿ ಭಾರತದ ಉದ್ದಗಲಕ್ಕೂ ಪ್ರೌಢ ಇತಿಹಾಸವಿರುವ ಪುರಾತನ ಭಿತ್ತಿಚಿತ್ರಕಲಾ ನೆಲೆಗಳಾಗಿವೆ.

ಕರ್ನಾಟಕ

ಕರ್ನಾಟಕ ಇತಿಹಾಸವನ್ನು ನಾವು ಬೆದಕುತ್ತಾ ಹೋದಂತೆ ಅತ್ಯಂತ ಪುರಾತನವಾದ ಭಿತ್ತಿ ಚಿತ್ರಗಳು ಬಾದಾಮಿ ಬಳಿಯ ಅರೆಗುಡ್ಡ, ಹಿರೇಗುಡ್ಡಗಳ ಕಲ್ಲಾಸರೆಯಲ್ಲಿ ಹಾಗೂ ರಾಮದುರ್ಗದ ಬಳಿಯಲ್ಲಿರುವ ಮೇಗುಂಡೇಶ್ವರ ದೇವಾಲಯದ ಪಕ್ಕದಲ್ಲಿರುವ ಖಾಜೀ ಗುಡ್ಡದಲ್ಲಿ ಕಂಡುಬರುತ್ತವೆ. ಇವರು ಕ್ರಿ.ಪೂ. ೪೦೦೦ ವರ್ಷಗಳಷ್ಟು ಪುರಾತನವಾಗಿವೆ[೧೧] ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಕ್ರಿ.ಪೂ. ೨೦೦೦ ವರ್ಷಗಳ ಹಿಂದಿನ ಚಿತ್ರಗಳು ಕೊಪ್ಪಳ, ಗಂಗಾವತಿ ತಾಲೂಕಿನ ಹಿರೇಬೆನಕಲ್, ಅಂಜನಹಳ್ಳಿ, ತಿಮ್ಮಲಾಪುರ, ಬಂದಿಹರ್ಲಾಪುರ, ರಾಯಚೂರು ತಾಲ್ಲೂಕಿನ ತೊಗಲಗುಡ್ಡ ಮತ್ತು ಕಲ್ಲೂರು, ಶಿರಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ, ಹಂಪಿ, ಹಳಕುಂಡಿ, ಕರುಗೊಡಿ ಮುಂತಾದ ಕಡೆಗಳಲ್ಲಿವೆ. ಕ್ರಿ.ಪೂ. ೧೨೦೦ ವರ್ಷಗಳ ಹಿಂದಿನ ಚಿತ್ರಗಳು ಹುನಗುಂದ ತಾಲ್ಲೂಕಿನ ಐಹೊಳೆ, ಕೊಪ್ಪಳ, ಗಂಗಾವತಿ, ಬಿಳಿಬಾವಿ, ಹಿರೇಬೆನಕಲ್, ಮಲ್ಲಾಪುರ, ಚಿತ್ರದುರ್ಗ, ಇಂದುರ್ಗಿ, ವೆಂಕಟಾಪುರ, ಪಿಕ್ಕಿಹಾಳ ಪ್ರದೇಶಗಳಲ್ಲಿವೆ.

ಕರ್ನಾಟಕ ಪ್ರಾಗೈತಿಹಾಸ ಕಾಲದ ಭಿತ್ತಿ ಚಿತ್ರಗಳು ಇವಾದರೆ, ಶಿಷ್ಟ ಪರಂಪರೆಯ ಭಿತ್ತಿ ಚಿತ್ರಗಳ ಬೆಳವಣಿಗೆಯನ್ನು ಸಾಮಾನ್ಯವಾಗಿ ಬಾದಾಮಿಯಲ್ಲಿ ವೈಷ್ಣವ ಗುಹೆಯ ಚಿತ್ರಗಳಿಂದ ಪ್ರಾರಂಭಿಸುವುದು ವಾಡಿಕೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಬಾದಾಮಿ ಚಾಲುಕ್ಯರ ಕಾಲಕ್ಕಿಂತಲೂ ಮೊದಲಿನ ಭಿತ್ತಿಚಿತ್ರಗಳು ಕರ್ನಾಟಕದಲ್ಲಿ ಕಂಡುಬರುತ್ತವೆ ಎನ್ನಬಹುದು. ಬಾದಾಮಿಯ ಸುತ್ತಲಿನ ಬೆಟ್ಟಗಳಲ್ಲಿ ಸುಮಾರು ನಾಲ್ಕೈದು ಕಡೆಗಳಲ್ಲಿ ಶಿಲಾಶ್ರಯದಲ್ಲಿ ಒಂದೇ ವರ್ಣದಿಂದ ರಚಿಸಿದ ಶಿಷ್ಟ ಪರಂಪರೆ ಚಿತ್ರಗಳು ಕಂಡು ಬಂದಿದ್ದು[೧೨] ಇವು ಚಾಲುಕ್ಯರ ಅವಧಿಗಿಂತಲೂ ಮೊದಲಿನ ಚಿತ್ರಗಳೆಂದು ಹೇಳಬಹುದಾಗಿದೆ. ಇಲ್ಲಿ ಬಂಡೆಗೆ ಮೊದಲು ಹಳದಿ ವರ್ಣವನ್ನು ಲೇಪಿಸಿ ಅದರ ಮೇಲೆ ಕೆಂಪು ವರ್ಣದಿಂದ ರೇಖಾ ಪ್ರಧಾನವಾದ ಚಿತ್ರಗಳನ್ನು ರಚಿಸಲಾಗಿದೆ. ಬಾದಾಮಿಯ ಚಾಲುಕ್ಯರ ಕಾಲದಲ್ಲಿ ರಚನೆಯಾದ ಚಿತ್ರಗಳು ಬಾದಾಮಿಯ ವೈಷ್ಣವ ಗುಹೆ, ಐಹೊಳೆಯ ರಾವಣಫಡಿ ಹಾಗೂ ಅಜಂತಾ ಗುಹೆಗಳಲ್ಲಿ ಸಹ ನಾವು ನೋಡಬಹುದಾಗಿದೆ.

ಕ್ರಿ.ಶ. ೮ ರಿಂದ ೧೦ನೇ ಶತಮಾನದವರೆಗೆ ಆಳ್ವಿಕೆ ನಡೆಸಿದ ರಾಷ್ಟ್ರಕೂಟರ ಕಾಲದಲ್ಲಿಯೂ ಭಿತ್ತಿಚಿತ್ರಗಳ ರಚನೆಯಾಗಿದ್ದು, ಇಂದಿಗೂ ಕರ್ನಾಟಕದ ಹೊರಗಿನ ಮಹಾರಾಷ್ಟ್ರದ ಎಲ್ಲೋರ ಗುಹೆಗಳಲ್ಲಿ ರಚನೆಯಾಗಿರುವುದು ನಾವು ಕಾಣಬಹುದು. ತದನಂತರದಲ್ಲಿ ಹೊಯ್ಸಳರ ಕಾಲದಲ್ಲಿಯೂ

---

೧೧. ಅ. ಸುಂದರ : ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆ, ಪು-೨೨

೧೨. ಡಾ. ಯಾದವಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು-೨೮

ಚಿತ್ರ ರಚನೆಯಾಗಿರುವುದನ್ನು ನಾವು ಅಲ್ಲಲ್ಲಿ ಸ್ವಲ್ಪಮಟ್ಟಿಗೆ ಕಾಣಬಹುದಾಗಿದೆ. ಮೂಡಬಿದರೆಯ ಜೈನ ಬಸದಿ (ಕ್ರಿ.ಶ. ೧೧೧೩) ಶ್ರವಣಬೆಳಗೊಳದ ಬೆಟ್ಟದ ಮೇಲಿನ ಬಸದಿ (ಕ್ರಿ.ಶ. ೧೧೧೮) ಗಳಲ್ಲಿ ಹೊಯ್ಸಳರ ದೊರೆ ವಿಷ್ಣುವರ್ಧನ ಕಾಲದ ಚಿತ್ರಗಳಾಗಿದ್ದು, ಚಿಕ್ಕನಹಳ್ಳಿಯ ಕಲ್ಲೇಶ್ವರ ದೇವಾಲಯ (ಕ್ರಿ.ಶ. ೧೧೭೦) ರಲ್ಲಿ ಒಂದನೇ ನರಸಿಂಹನ ಕಾಲದಲ್ಲಿಯ ಚಿತ್ರಗಳೆಂದು ಗುರುತಿಸಲಾಗಿದೆ. ಕ್ರಿ.ಶ. ೧೩ನೇ ಶತಮಾನದ ಭಿತ್ತಿ ಚಿತ್ರಗಳು ಶ್ರವಣಬೆಳಗೊಳದ ಶಾಂತಿನಾಥ ಬಸದಿಯಲ್ಲಿವೆ. ಕ್ರಿ.ಶ. ೧೪ನೇ ಶತಮಾನದ ಚಿತ್ರಗಳು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬೈಲಮರ್ಚೇಡ್ ಗ್ರಾಮದ ಹತ್ತಿರವಿರುವ ಕಾಟಮಯ್ಯನ ಗುಂಡು ಎಂಬ ಗುಡ್ಡದಲ್ಲಿವೆ.[೧೩] ಇವು ಕುದುರೆ ಸವಾರರ ಮತ್ತು ದನಗಳ ಚಿತ್ರಗಳನ್ನೊಳಗೊಂಡಿವೆ.

ಕ್ರಿ.ಶ. ೧೪ನೇ ಶತಮಾನದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದ ವಿಜಯನಗರ ದೊರೆಗಳು ಕರ್ನಾಟಕ ಭಿತ್ತಿಚಿತ್ರ ಪರಂಪರೆಗೆ ಮಹತ್ವದ ಕೊಡುಗೆ ಕೊಟ್ಟಿದ್ದಾರೆ. ಸುಮಾರು ಎರಡು ಶತಮಾನಗಳವರೆಗೆ ಆಳಿದ ಇವರ ಕಾಲದಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯ, ವಿಠಲ ದೇವಾಲಯ, ಆನೆಗೊಂದಿಯ ಮಠ, ಆಂಧ್ರಪ್ರದೇಶದ ಲೇಪಾಕ್ಷಿ, ಕಾಳಹಸ್ತಿ, ಪೆನುಗೊಂಡ, ಚಿಪ್ಪಟಗಿರಿ ಮುಂತಾದವುಗಳಲ್ಲಿ ಮಾತ್ರವಲ್ಲದೇ ತಮಿಳುನಾಡಿನ ತಿರುವಣ್ಣಾಮಲೈದಲ್ಲಿ, ಕಂಚಿಯ ವರದರಾಜ್ ದೇವಾಲಯ, ಶ್ರೀರಂಗಂ ಸಮೀಪದ ತಿರುವಲ್ಲರೈನಲ್ಲಿ, ತಿರುನಲ್ವೇಲಿ ಜಿಲ್ಲೆಯ ತಿರುಪ್ಪಡಿ, ಮರದೂರ್, ಚೆಂಗಲ್‌ಪೇಟೆ ಜಿಲ್ಲೆಯ ಕಾಂಚೀಪುರದ ವೈಕುಂಠ ಪೆರುಮಾಳ್ ದೇವಾಲಯ, ತಿರುಪರಕುಂಡ್ರಮ್‌ದಲ್ಲಿನ ವರ್ಧಮಾನ್ ದೇವಾಲಯ, ಮಧುರೈ ದೇವಾಲಯ, ಉತ್ತರ ಆರ್ಕಾಟ್ ಜಿಲ್ಲೆಯ ತಿರುಣ್ಣಾಮಲೈದ ಅರುಣಾಚಲೇಶ್ವರ ದೇವಾಲಯ, ತಿರುವಲೈನ ಜೈನ ದೇವಾಲಯ ಇವುಗಳಲ್ಲದೇ ತಿರುವಲ್ಲಿಮಲೈ, ವೆಲ್ಲೂರು, ಚಿದಂಬರಂ, ಶ್ರೀರಂಗಂ, ಅದಮಾನ್ ಕೋಟೈ ಮುಂತಾದ ಸ್ಥಳಗಳಲ್ಲಿಯೂ ವಿಜಯನಗರ ಕಾಲದ ಭಿತ್ತಿ ಚಿತ್ರಗಳು ರಚನೆಯಾಗಿವೆ. ಇವರ ಜೊತೆ ಜೊತೆಗೆ ಆಳ್ವಿಕೆ ಪ್ರಾರಂಭಿಸಿದ ಮುಸ್ಲಿಮರು ಕರ್ನಾಟಕದ ಭಿತ್ತಿ ಚಿತ್ರಕಲೆಗೆ ತನ್ನದೇ ಆದ ಪ್ರಾತಿನಿಧ್ಯವನ್ನು ನೀಡಿದ್ದಾರೆ. ಗುಲಬರ್ಗಾ, ಬೀದರ್, ವಿಜಾಪುರಗಳಲ್ಲಿ ಆಡಳಿತ ನಡೆಸಿದ ಇವರು ತಮ್ಮ ಧಾರ್ಮಿಕ ಹಿನ್ನೆಲೆಯಲ್ಲಿ ಈ ಕಲಾ ಪ್ರಕಾರವನ್ನು ಬೆಳೆಸಿದ್ದಾರೆ. ಕ್ರಿ.ಶ. ೧೫ನೇ ಶತಮಾನದ ಭಿತ್ತಿ ಚಿತ್ರಗಳು ಬೀದರಿನ ರಂಗಣ್ ಮಹಲ್, ಟರ್ಕಿಶ್ ಮಹಲ್ ಮತ್ತು ಬೀದರಿನ ಸಮೀಪದ ಅಸ್ತೂರಿನ ಸಮಾಧಿ ಭವನಗಳಲ್ಲಿ ಕಂಡುಬರುತ್ತದೆ. ಕ್ರಿ.ಶ. ೧೬ನೇ ಶತಮಾನದ ಭಿತ್ತಿ ಚಿತ್ರಗಳು ಹಂಪೆಯ ವಿರೂಪಾಕ್ಷ ದೇವಾಲಯ, ಕನಕಗಿರಿಯ ಕನಕಾಚಲಪತಿ ದೇವಾಲಯ, ಆನೆಗೊಂಡಿಯ ಹುಚ್ಚಪ್ಪಯ್ಯ ಮಠ, ಗುಲಬರ್ಗಾದ ಬಂದೇ ನವಾಜ್ ದರ್ಗಾ, ವಿಜಾಪುರ ಸಮೀಪದ ಕುಮಟಗಿರಿಯ ನೀರಿನ ಕೊಳಗಳಲ್ಲಿವೆ. ಕ್ರಿ.ಶ. ೧೭ನೇ ಶತಮಾನದ

೧೩. ಅ. ಸುಂದರ : ಕರ್ನಾಟಕದ ಪ್ರಾಗೈತಿಹಾಸಿಕ ಕಾಲದ ಚಿತ್ರಕಲೆ, ಪು-೨೬

ಭಿತ್ತಿಚಿತ್ರಗಳು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿರುವ ಶ್ರೀ ತೇರುಮಲ್ಲೇಶ್ವರ ದೇವಾಲಯದಲ್ಲಿವೆ. ಕ್ರಿ.ಶ. ೧೮ನೇ ಶತಮಾನದ ಚಿತ್ರಗಳು ಶ್ರವಣಬೆಳಗೊಳದ ಮಠದಲ್ಲಿವೆ. ತುಮಕೂರಿನ ಸಮೀಪದಲ್ಲಿರುವ ಸೀಬಿಯ ನರಸಿಂಹ ದೇವಾಲಯ, ಶ್ರೀರಂಗಪಟ್ಟದ ದರಿಯಾದೌಲತ್ ಮುಂತಾದ ಕಡೆಗಳಲ್ಲಿಯೂ ನಾವು ಭಿತ್ತಿಚಿತ್ರ ಪರಂಪರೆಯನ್ನು ಕಾಣಬಹುದಾಗಿದೆ.

ಮುಂದುವರೆದಂತೆ ಕ್ರಿ.ಶ. ೧೯ನೇ ಶತಮಾನದ ಭಿತ್ತಿಚಿತ್ರಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬರುತ್ತವೆ. ಚಾಮರಾಜನಗರದ ಬಳಿಯ ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ, ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ, ತುಮಕೂರಿನ ಬಳಿಯ ಸಿರಾದ ರೇವಣಸಿದ್ದೇಶ್ವರ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯ, ಮೈಸೂರಿನ ಜಗನ್ಮೋಹನ ಬಂಗಲೆ, ಕೃಷ್ಣಸ್ವಾಮಿ ದೇವಾಲಯ, ವೆಂಕಟರಮಣ ದೇವಾಲಯಗಳಲ್ಲಿ ರಚನೆಯಾಗಿವೆ. ಇವುಗಳಲ್ಲದೇ ಚನ್ನಪಟ್ಟಣ ತಾಲ್ಲೂಕಿನ ನಲ್ಲಪ್ಪನ ಅರಮನೆ, ನಾಗಮಂಗಲ ಸೌಮ್ಯಕೇಶವ ದೇವಾಲಯ, ಕೊಳ್ಳೇಗಾಲದ ಪರಿವಾರದ ಚಾವಡಿ ಕುಲಗುಣ ಬಸವೇಶ್ವರ ದೇವಾಲಯ, ಮಡಿಕೇರಿ ಅರಮನೆ, ಕಾರ್ಕಳದ ಜೈನಮಠದ ಜಗೋಳಿಯ ಅಪ್ಪಾಯಿ ಬಸದಿ, ಹಾಸನದ ದೊಡ್ಡ ಬಸದಿ, ಮೂಡಿಗೆರೆ ವಸ್ತಾರೆ ಪದ್ಮಾವತಿ ದೇವಾಲಯ, ರಾಯಚೂರಿನ ಖಾಜಿನಗೌಡ ಮನೆ, ಸುರಪುರ ಅರಮನೆ, ಮಹಲಿಂಗಪುರದ ಮಠ, ಅಮ್ಮಿನಭಾವಿಯ ಹಿರೇಮಠ, ನಿಪ್ಪಾಣಿಯ ವಾಡೆ, ನವಲಗುಂದದ ವಿರಕ್ತ ಮಠ, ನಿಪ್ಪಾಣಿಯ ಜೈನ ಬಸದಿ, ಗುಳೇದಗುಡ್ಡದ ಹೊಸಮನಿ ಗೌಡರ ಮನೆ, ನರಗುಂದದ ಬಾಬಾ ಸಾಹೇಬನ ಮನೆ, ನವಲಗುಂದದ ಮಠದಲ್ಲಿ ಮುಂತಾದ ಅನೇಕ ಸ್ಥಳಗಳಲ್ಲಿ ಈ ಕಾಲದ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ.

ಕ್ರಿ.ಶ. ೨೦ನೇ ಶತಮಾನದ ಭಿತ್ತಿ ಚಿತ್ರಗಳು ಮೇಲುಕೋಟೆಯ ವೈಷ್ಣವ ಮಠ, ಯಲ್ಲಾದಹಳ್ಳಿಯ ಲಕ್ಷ್ಮೀ ದೇವಾಲಯ, ಮಂಗಳೂರಿನ ಸೇಂಟ್ ಅಲಾಯಿಸನ್ ಚರ್ಚ್, ಕುಲಶೇಖರ ಚರ್ಚ್, ಜಪ್ಪೋ ಚರ್ಚ್, ಬಂಟ್ವಾಳದ ಅಗರಾರಾ ಚರ್ಚ್, ತ್ಯಾಮಗೊಂಡ್ಲುವಿನ ಲಕ್ಷ್ಮೀ ದೇವಾಲಯ, ಉಡುಪಿಯ ಅಷ್ಟಮಠಗಳು, ಧರ್ಮಸ್ಥಳದ ಮಠ ಹೀಗೆ ಮುಂತಾದೆಡೆಗಳಲ್ಲಿ ೨೦ನೇ ಶತಮಾನದ ಭಿತ್ತಿಚಿತ್ರಗಳನ್ನು ಸಹ ಕಾಣಬಹುದಾಗಿದೆ.

ಸಾಹಿತ್ಯ ಕೃತಿಗಳಲ್ಲಿ ಭಿತ್ತಿಚಿತ್ರಕಲೆಯ ಉಲ್ಲೇಖಗಳು

ಕ್ರಿ.ಶ. ೧೧ನೇ ಶತಮಾನದಲ್ಲಿ ಅಗ್ಗಳದೇವನಿಂದ ವಿರಚಿತ ಚಂದ್ರಪ್ರಭ ಪುರಾಣದಲ್ಲಿ ನಾಟ್ಯಶಾಲೆಯ ಗೋಡೆಗಳ ಮೇಲೆ ರಚನೆಯಾದ ಭಿತ್ತಿಚಿತ್ರಗಳ ಉಲ್ಲೇಖಗಳಿವೆ. ಕ್ರಿ.ಶ. ೧೨ ನೇ ಶತಮಾನದ ವಚನಕಾರರು ತಮ್ಮ ವಚನಗಳಲ್ಲಿ ಸಾಂದರ್ಭಿಕವಾಗಿ ಭಿತ್ತಿಚಿತ್ರಗಳ ಬಗ್ಗೆ ವಿವರಿಸಿದ್ದಾರೆ.

ಬಸವಣ್ಣನವರ ವಚನಗಳಲ್ಲಿ , ಅಲ್ಲಮಪ್ರಭುವಿನ ಬೆಡಗಿನ ವಚನಗಳಲ್ಲಿ ಅಲ್ಲದೇ ಇನ್ನೂ ಅನೇಕ ವಚನಕಾರರು ಭಿತ್ತಿ ಚಿತ್ರಕಲೆಯ ಉಲ್ಲೇಖ ಮಾಡಿದ್ದಾರೆ.[೧೪] ರತ್ನಾಕರವರ್ಣಿಯ 'ಭರತೇಶ ವೈಭವ' ಕೃತಿಯಲ್ಲಿ ನಾಟ್ಯಶಾಲೆಯ ಭಿತ್ತಿ ಚಿತ್ರಗಳ ಬಗೆಗೆ, ಅವುಗಳ ವಿಷಯವಸ್ತು, ಗೋಡೆಯ ನುಣುಪು ಮುಂತಾದವುಗಳನ್ನು ವಿವರಿಸಲಾಗಿದೆ. ಸರ್ವಜ್ಞ ಕವಿಯ ಭಿತ್ತಿಚಿತ್ರದಲ್ಲಿ ತತ್ವತಾ ನೆರೆದಿಹುದೇ ಎಂದು ಉಪಮೇಯಯಿಂದ ಹೇಳಿದ್ದಾನೆ.

ವಿದ್ಯಾರಣ್ಯರ 'ಪಂಚದರಿ' ಕೃತಿಯಲ್ಲಿ ಭಿತ್ತಿ ಚಿತ್ರರಚನೆಯ ಹಂತಗಳನ್ನು ವಿವರಿಸಲಾಗಿದೆ. ಆಧಾರ ಸಂಸ್ಕರಣೆಯ ದೌಕ್, ಭಿತ್ತಿಯನ್ನು ನಿರ್ಮಿಸುವ ಘಟ್ಟಿತ, ಇದ್ದಿಲಿನಿಂದ ರೇಖಾಕೃತಿಯನ್ನು ಬರೆಯುವ ಲಾಂಛಿತ ರೇಖಾ ಚಿತ್ರಗಳನ್ನು ವರ್ಣದಿಂದ ಪೂರ್ಣಗೊಳಿಸುವ ರಜಿಂತ ಎಂಬ ಹಂತಗಳು ಇಲ್ಲಿ ಹೇಳಲ್ಪಟ್ಟಿವೆ. ಅಷ್ಟಾಧ್ಯಾಯ ಕೃತಿಯಲ್ಲಿ ಭಿತ್ತಿ ಚಿತ್ರ ರಚನೆಯಲ್ಲಿ ಪಶು, ಪಕ್ಷಿ, ಹೂಬಳ್ಳಿ, ಗಿಡ, ನದಿ, ಪರ್ವತ ಮುಂತಾದವುಗಳನ್ನು ಸಾಂಕೇತಿಕ ಅರ್ಥದಲ್ಲಿ ಚಿತ್ರಿಸುವ ವಿಧಾನ ಹೇಳಲ್ಪಟ್ಟಿದೆ. ಭರತನ 'ನಾಟ್ಯಶಾಸ್ತ್ರ' ಗ್ರಂಥದಲ್ಲಿ ನಾಟ್ಯ ಶಾಲೆಯಲ್ಲಿ ಚಿತ್ರಗಳನ್ನು ರಚಿಸುವ ವಿಧಾನವಿದೆ. ಅಲ್ಲದೇ ನೈಸರ್ಗಿಕ ವರ್ಣಗಳು, ಅವುಗಳ ಅನುಕರಣೆ, ವರ್ಣಮಿಶ್ರಣ ಪದ್ಧತಿ ಮುಂತಾದವುಗಳ ವಿವರಣೆಗಳನ್ನು ಹೇಳಲಾಗಿದೆ. ಕಾಳಿದಾಸನ 'ಮೇಘದೂತ' ಕೃತಿಯಲ್ಲಿ ಅರಮನೆಯ ಗೋಡೆಗಳ ಮೇಲೆ ಬರೆದ ಭಿತ್ತಿ ಚಿತ್ರಗಳು, ಅವುಗಳ ವಸ್ತು ವಿಷಯ, ಮನೆಗಳನ್ನು ಭಿತ್ತಿಚಿತ್ರಗಳಿಂದ ಅಲಂಕರಿಸುವುದು[೧೫] ಮುಂತಾದ ಕಾಡುಪ್ರಾಣಿಗಳಲ್ಲದೇ ಸ್ತ್ರೀಯರ ಚಿತ್ರಗಳನ್ನು ರಚಿಸಿ ಅವುಗಳಿಗೆ ಬಣ್ಣ ತುಂಬಿರುವಂತಹ ಸಂಗತಿಗಳನ್ನು ಹೇಳಲಾಗಿದೆ. ವಾತ್ಸಾಯನನ 'ಕಾಮಸೂತ್ರ' ಕೃತಿಯಲ್ಲಿ ಚಿತ್ರ ಕಲೆಯನ್ನು ಆಲೇಖ್ಯ ಎಂದು ಹೆಸರಿಸಲಾಗಿದೆಯಲ್ಲದೆ ವಿಶ್ರಾಂತಿ ಕೋಣೆ, ಮಲಗುವ ಕೋಣೆಗಳಲ್ಲಿ ಬರೆಯಬಹುದಾದ ಚಿತ್ರಗಳ ಬಗೆಗೆ ವಿವರಗಳಿವೆ. ಬೃಹತ್ ಸಂಹಿತಾ ಮತ್ತು ಮತ್ಸ್ಯಪುರಾಣ ಕೃತಿಗಳಲ್ಲಿ ಸಾಂದರ್ಭಿಕವಾಗಿ ಭಿತ್ತಿ ಚಿತ್ರಗಳ ಉಲ್ಲೇಖಗಳನ್ನು ಸಹ ಕಾಣಬಹುದಾಗಿದೆ.

ಗರುಡಪುರಾಣ ಮತ್ತು ಅಗ್ನಿ ಪುರಾಣಗಳಲ್ಲಿ ಭವನ ನಿರ್ಮಾಣ ಮತ್ತು ಆ ಭವನಗಳನ್ನು ಭಿತ್ತಿ ಚಿತ್ರಗಳಿಂದ ಅಲಂಕರಿಸುವ ರೀತಿನೀತಿಗಳನ್ನು ಸೂಚಿಸಲಾಗಿದೆ. ಹಾಗೆಯೇ ಹರಿವಂಶಪುರಾಣದಲ್ಲಿ ಅರಮನೆಯ ಚಿತ್ರಶಾಲೆಗಳು, ಅವುಗಳ ಗೋಡೆಯಲ್ಲಿನ ಚಿತ್ರಗಳು ವಿವರಿಸಲ್ಪಟ್ಟಿವೆ. ಸ್ಕಂದಪುರಾಣ ಮತ್ತು ಪದ್ಮಪುರಾಣಗಳು ರೇಖಾಚಿತ್ರ, ವರ್ಣಚಿತ್ರಗಳ ವಿವರ ಕೊಡುತ್ತವೆ. ಮೇದಿನಿಕೋಶ ಎಂಬ ಗ್ರಂಥವು ಭಿತ್ತಿ ಚಿತ್ರಗಳಲ್ಲಿ ಉಪಯೋಗಿಸುವ ಮಿಶ್ರವರ್ಣಗಳ ಕುರಿತು ವಿವರಿಸುತ್ತದೆ.[೧೬] ಬಾಣನ

೧೪. ಡಾ. ಎಸ್. ಸಿ. ಪಾಟೀಲ : ಕರ್ನಾಟಕ ಜನಪದ ಚಿತ್ರಕಲೆ, ಪು-೪೮

೧೫. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು-೧೨೭

೧೬. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೧೧೮

ಕಾದಂಬರಿಯಲ್ಲಿ ರಾಜಭವನ ಮತ್ತು ಚಿತ್ರಶಾಲೆಗಳಲ್ಲಿನ ಭಿತ್ತಿಚಿತ್ರಗಳನ್ನು ವರ್ಣಿಸಲಾಗಿದೆ. ಅಲ್ಲದೇ ರೇಖಾಚಿತ್ರ, ವರ್ಣಚಿತ್ರ ಮತ್ತು ನೀಲಿ, ಹಳದಿ, ಕೆಂಪು, ಬಿಳಿ, ಕಪ್ಪು ಎಂಬ ಪಂಚವರ್ಣಗಳ ವಿವರಗಳು ಹೇಳಲ್ಪಟ್ಟಿವೆ.

ಹರ್ಷಚರಿತ ಕೃತಿಯಲ್ಲಿ ಅರಮನೆಯ ಭಿತ್ತಿ ಚಿತ್ರಗಳು, ಅವುಗಳ ವರ್ಣವಿನ್ಯಾಸ, ಚಿತ್ರರಚನೆಗೆ ಬಳಸುವ ವಿವಧ ಬಗೆಯ ಮಿಶ್ರವರ್ಣಗಳನ್ನು ಕುರಿತಾಗಿ ಚರ್ಚಿಸಲಾಗಿದೆ. ದಶಕುಮಾರ ಚರಿತ್ರೆಯಲ್ಲಿ ರಾಜಕುಮಾರರು ಕಡ್ಡಾಯವಾಗಿ ಚಿತ್ರಕಲೆಯನ್ನು ಕಲಿಯಬೇಕೆಂದು ಹೇಳಿದ್ದಾರೆ. ದಾಮೋದರಗುಪ್ತನ 'ಕುಟ್ಟನಿಮೀತ' ಕೃತಿಯಲ್ಲಿ ರಾಜವಂಶದ ವನಿತೆಯೂ ಸಹಿತ ಚಿತ್ರಕಲೆಯಲ್ಲಿ ಪಾರಂಗತರಾಗಿರಬೇಕೆಂದು ತಿಳಿಸಿದೆ.[೧೭] ಧನಪಾಲನ 'ತಿಲಕ ಮಂಜರಿ' ಗ್ರಂಥದಲ್ಲಿ ರಸಚಿತ್ರ, ಧೂಳಿಚಿತ್ರ ಮತ್ತು ಭಾವಚಿತ್ರಗಳೆಂಬ ಪ್ರಬೇಧಗಳನ್ನು ಹೇಳಿದ್ದು, ಭಿತ್ತಿಚಿತ್ರ ರಚನೆಯಲ್ಲಿ ಇವುಗಳನ್ನು ರಚಿಸುವ ವಿವರಣೆಗಳನ್ನು ಇಲ್ಲಿ ಕೊಡಲಾಗಿದೆ. ಸೋಮದೇವನ ಕಥಾಸರಿತ್ಸಾಗರ ಕೃತಿಯು ಚಿತ್ರಕಲೆಯ ಅನೇಕ ವಿಷಯಗಳನ್ನು ಒಳಗೊಂಡಿದೆ. ರಾಜಭವನ, ಆಸ್ಥಾನ ನೃತ್ಯಶಾಲೆಗಳಲ್ಲಿನ ಭಿತ್ತಿಚಿತ್ರಗಳು, ರಾಜಕುಮಾರ, ಕುಮಾರಿಯರು ಕಲಿಯುವ ಚಿತ್ರಕಲಾ ವಿದ್ಯೆ, ಭಿತ್ತಿಚಿತ್ರ ಕಲಾವಿದರಿಗೆ ಕೊಡಲಾಗುತ್ತಿದ್ದ ಉಂಬಳಿ, ಚಿತ್ರಕಲಾ ಸ್ಪರ್ಧೆ ಮುಂತಾದ ಅನೇಕ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಶ್ರೀಹರ್ಷನ 'ನೈಷಧ ಚರಿತ' ಕೃತಿಯು ಭಿತ್ತಿ ಚಿತ್ರಕಲೆಯ ವಿವರಗಳನ್ನು ಸ್ಥೂಲವಾಗಿ ತಿಳಿಸುತ್ತದೆ. ರಾಜರ ಆಸ್ಥಾನ, ಅಂತಃಪುರ, ನಾಟ್ಯಶಾಲೆ ಮುಂತಾದವುಗಳ ಗೋಡೆಗಳ ಮೇಲೆ ಬರೆಯುವ ಚಿತ್ರಗಳ ಬಗೆಗಿನ ವಿವರ ಇಲ್ಲಿದೆ. ಅಲ್ಲದೇ ಗೋಡೆಯಲ್ಲಿ ಬರೆಯುವ ಸಚಿತ್ರ, ಅಚಿತ್ರ, ಮಿರ್ಶರ, ಲೇಪಕ ಎಂಬ ಚಿತ್ರ ರಚನೆಯ ವಿಧಾನಗಳನ್ನು ಹೇಳಿದೆ. ಇವುಗಳಲ್ಲದೇ ಮಾನಸಾರ ಕಾವ್ಯ ಪ್ರಕಾಶ, ಪ್ರಶ್ನೆ ವ್ಯಾಕರಣ ಸೂತ್ರ, ತ್ರಿಷಷ್ಠ ಶಲಕಾಪುರು, ನಾನಾರ್ಥವರ್ಣ, ಸಂಕ್ಷೇಪ ಆಚಾರಾಂಗ ಸೂತ್ರ, ಮಹಾವಂಶ ವಿನಯಪಿಜಕ ಮುಂತಾದ ಗ್ರಂಥಗಳಲ್ಲಿಯೂ ಸಾಂದರ್ಭಿಕವಾಗಿ ಭಿತ್ತಿಚಿತ್ರಗಳ ಉಲ್ಲೇಖಗಳನ್ನು ಕಾಣಬಹುದಾಗಿದೆ.

ಈ ಮೇಲಿನ ಸಾಹಿತ್ಯ ಕೃತಿಗಳಲ್ಲಿ ಮಾತ್ರವಲ್ಲದೇ ಕೆಲವು ಪ್ರಾಚೀನ ಕನ್ನಡ ಗ್ರಂಥಗಳಲ್ಲಿಯೂ ಭಿತ್ತಿ ಚಿತ್ರಕಲೆಯ ಉಲ್ಲೇಖಗಳು ಕಂಡು ಬರುತ್ತವೆ. ಕನ್ನಡದ ಪ್ರಾಚೀನ ಕೃತಿಯಲ್ಲಿ ಒಂದಾದ ಕವಿರಾಜಮಾರ್ಗದಲ್ಲಿ ಭಿತ್ತಿಚಿತ್ರಕಲೆ ಉಲ್ಲೇಖವು ಉಪಮೇಯ ರೂಪದಲ್ಲಿದೆ. 'ವಡ್ಡರಾಧನೆ' ಗ್ರಂಥದಲ್ಲಿ ಗೋಡೆಗಳ ಮೇಲೆ, ಮರದ ಹಲಗೆಯ ಮೇಲೆ ಬರೆಯುವ ಭಿತ್ತಿಚಿತ್ರಗಳನ್ನು ವಿವರಿಸಲಾಗಿದೆ. ಅಲ್ಲದೇ ರಾಜಕುಮಾರ, ರಾಜಕುಮಾರಿಯರು ರಚಿಸುವ ಚಿತ್ರಗಳ ಪರಿಗಳನ್ನು ಹೇಳಲಾಗಿದೆ.

---

೧೭. .... : ....

'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಭಿತ್ತಿ ನುಣುಪು, ಚಿತ್ರ ರಚನಾಕ್ರಮ, ವರ್ಣವಿನ್ಯಾಸ ವಿಧಾನ, ಚಿತ್ರಗಳಿಗೆ ನೆರಳು-ಬೆಳಕು ರೂಪಿಸುವ ಹಂತಗಳು, ಮಾಸಿದ ಚಿತ್ರಕಲಾಕೃತಿಗಳು ಮುಂತಾದ ಅನೇಕ ವಿಷಯಗಳು ಕುರಿತಾದ ಮಾಹಿತಿ ಇದೆ. 'ಆದಿಪುರಾಣ' ದಲ್ಲಿ ಚಿತ್ರಶಾಲೆಯ ಗೋಡೆಗಳ ಮೇಲೆ ರಚಿಸುವ ಚಿತ್ರಗಳು ಅವುಗಳ ರೇಖೆ, ವರ್ಣಕ್ರಮ, ಚಿತ್ರರಚನೆಯ ಆಯಾಮಗಳು, ಚಿತ್ರದ ಒಟ್ಟು ರಸಭಾಗಗಳಂತಹ ವಿವರಣೆಗಳು ಹೇಳಲ್ಪಟ್ಟಿವೆ. ಪೊನ್ನನು ತನ್ನ 'ಶಾಂತಿಪುರಾಣ' ಕೃತಿಯಲ್ಲಿ ಅರಮನೆ ಹಾಗೂ ಚಿತ್ರಶಾಲೆಗಗಳ ಗೋಡೆಗಳ ಮೇಲೆ ಬರೆಯುವ ಭಿತ್ತಿ ಚಿತ್ರಗಳು, ಅವುಗಳಿಗೆ ಬಳಸುವ ಪಂಚರ್ಣಗಳು, ಚಿತ್ರಕಲಾವಿದರಾದ ಚೀರಘಟ್ಟಿ, ವಿಶ್ವಕರ್ಮರ ಬಗೆಗೆ ಹೇಳಿದ್ದಾನೆ. ಒಂದನೇ ನಾಗವರ್ಮನ 'ಕರ್ನಾಟಕ ಕಾದಂಬರಿ' ಕೃತಿಯ ಚಿತ್ರಶಾಲೆ, ನಾಟ್ಯಶಾಲೆಗಳ ಭಿತ್ತಿ ಚಿತ್ರಗಳನ್ನು ಇವರಿಸುತ್ತದೆ. ಚಿತ್ರ ರಚಿಸುವ ವಿಧಾನ, ಚಿತ್ರದ ಬಗೆಗಳು, ಚಿತ್ರಕಲಾವಿದ, ಚಿತ್ರದ ವಿಷಯವಸ್ತುಗಳ ಕುರಿತಾಗಿ ಇಲ್ಲಿ ಮಾಹಿತಿ ಇದೆ. ನಾಗಚಂದ್ರನು 'ರಾಮಚಂದ್ರ ಪುರಾಣ' ದಲ್ಲಿ ಚಿತ್ರ ಭಿತ್ತಿ ಅದರ ಮೇಲೆ ಮೊದಲಿಗೆ ರಚಿಸುವ ರೇಖಾಕೃತಿ, ವರ್ಣವಿನ್ಯಾಸಕ್ರಮ, ವರ್ಣ ತಯಾರಿಸಿಕೊಳ್ಳುತ್ತಿದ್ದ ಮೂಲಧಾತುಗಳ ಬಗೆಗೆ ಹೇಳಿದ್ದಾನೆ. ಹಾಗೆಯೇ ಈತನ 'ಮಲ್ಲಿನಾಥ ಪುರಾಣ'ದಲ್ಲಿ ಚಿತ್ರಗಳ ವಿಮರ್ಶೆಗಳಂತಹ ವಿಷಯಗಳನ್ನು ಗ್ರಂಥಗಳಲ್ಲಿ ಹೇಳಲಾಗಿದೆ.

'ಧರ್ಮಾಮೃತ' ಎಂಬ ಕೃತಿಯಲ್ಲಿ ನಯಸೇನನು ಭಿತ್ತಿ ಚಿತ್ರ ಹಾಗೂ ಪಟಚಿತ್ರದ ಕುರಿತಾಗಿ ವಿವರಿಸಿದ್ದಾನೆ. ಭಿತ್ತಚಿತ್ರ ರಚನೆ, ಆ ಚಿತ್ರ ರಚನೆಯ ಕುಂಚಗಳು, ಕುಂಚಗಳಿಗೆ ಉಪಯೋಗಿಸುವ ಕೂದಲುಗಳು, ಕಟ್ಟಿಗೆಯ ಬಗೆ ಮತ್ತು ಚಿತ್ರಗಳಿದ್ದ ಮನೆ, ಚಿತ್ರಕ್ಕೆ ವಿಮರ್ಶೆ ಬರೆಯುವ ಚಿತ್ರಜ್ಞ ಮುಂತಾದ ವಿಷಯಗಳ ಕುರಿತು ಬಸವಣ್ಣ, ಮಧುವಯ್ಯ, ಭಂಡಾರಿ ಶಾಂತರಸ, ಅಂಬಿಗರ ಚೌಡಯ್ಯ ಮುಂತಾದವರ ವಚನಗಳಲ್ಲಿ ಸ್ಥೂಲ ಮಾಹಿತಿಗಳು ದೊರೆಯುತ್ತವೆ. ರಾಘವಾಂಕನ 'ಸಿದ್ಧರಾಮಚರಿತ'ದಲ್ಲಿ ವಿವಾಹ ಗೃಹದಲ್ಲಿ ಗೋಡೆಯ ಮೇಲೆ ಬರೆಯುವ ವಿಶಿಷ್ಟ ಚಿತ್ರಗಳನ್ನು ಪ್ರಸ್ತಾಪಿಸಲಾಗಿದೆ. ಹಾಗೆಯೇ ಕುಮಾರವ್ಯಾಸನ ಉದ್ಯೋಗಪರ್ವದಲ್ಲಿ ಚಿತ್ರ ಕಲಾವಿದರು, ದೇವರಾಜನ ಸೊಬಗಿನ ಕೃತಿಯಲ್ಲಿ ಭಿತ್ತಿಚಿತ್ರ ಕಲೆಗಾರರು, ಅವರ ವಾಸದ ಕೇರಿ, ಕನಕದಾಸರ 'ಮೋಹನ ತರಂಗಿಣಿ' ಯಲ್ಲಿ ವೇಶ್ಯಾಗೃಹ ಗೋಡೆಯ ಮೇಲಿನ ಚಿತ್ರಗಳನ್ನು ವಿವರಿಸಲಾಗಿದೆ. ವಿರುಪಾಕ್ಷ ಪಂಡಿತನ 'ಚನ್ನಬಸವಪುರಾಣ'ದಲ್ಲಿ ಭಿತ್ತಿಚಿತ್ರ ಕುಶಲತೆ, ಕರ್ಣಪಾರ್ಯನ 'ನೇಮಿನಾಥ ಪುರಾಣ'ಗಳಲ್ಲಿ ಭಿತ್ತಿ ಹಾಗೂ ಪಟಗಳಲ್ಲಿನ ಚಿತ್ರಗಳು, ಜನ್ನನ 'ಯಶೋಧಚರಿತ' ಮತ್ತು 'ಅನಂತನಾಥಪುರಾಣ'ಗಳಲ್ಲಿ ಭಿತ್ತಿಚಿತ್ರಗಳಲ್ಲಿನ ಬೊಂಬೆಗಳು, ಚಿತ್ರದ ವಿನ್ಯಾಸ, ಅಂಡಯ್ಯನ 'ಕಬ್ಬಿಗರ ಕಾವ್ಯ' ದಲ್ಲಿ ಧೂಳಿ ಚಿತ್ರ, ರಸಚಿತ್ರದ ವಿಧಗಳು, ಚಾಂಡರಸನ 'ಅಭಿನವ ದಶಕುಮಾರಚರಿತೆ' ಯಲ್ಲಿ ಭಿತ್ತಿಚಿತ್ರಕ್ಕೆ ಬಣ್ಣ ಮಾಡುವ ವಿಧಾನ, ಮಾಸಿದ ಚಿತ್ರ, ಷಡಕ್ಷರದೇವನ 'ರಾಜಶೇಖರಮಾಸ'ದಲ್ಲಿ ಚಿತ್ರಶಾಲೆಗಳಲ್ಲಿ

ಬರೆಯುವ ಭಿತ್ತಿಚಿತ್ರಗಳು, ಅವುಗಳ ವರ್ಣವಿನ್ಯಾಸ, ಮಠದ ಫಲಕದ ಮೇಲಿನ ಚಿತ್ರಕೃತಿಗಳು ಮತ್ತು ಚಿತ್ರಕಾರರ ಬಗೆಗೆ ಪ್ರಸ್ತಾಪ ಮಾಡಲಾಗಿದೆ.

ಶಾಸನಗಳಲ್ಲಿ ಭಿತ್ತಿ ಚಿತ್ರಕಲೆಯ ಉಲ್ಲೇಖಗಳು

ಕ್ರಿ.ಶ. ೭೪೯ರ ಶಾಸನವೊಂದು ಸರ್ವಕಲಾನ್ತಳ್ವಾತಿ ಚಿತ್ರಕಲಾಬಿಜ್ಞೇನ ವಿಶ್ವಕರ್ಮಾಚಾರ್ಯ ಎಂದಿದೆ. ಕ್ರಿ.ಶ. ೧೦೮೨ರ ಒಂದು ಶಾಸನ ಕಂಟದ ಬೊಮ್ಮನ ಮಗನಾದ ಅಯ್ಯಣ ವಿಶ್ವಕರ್ಮನಿಗೂ ಮಿಗಿಲೆಂದು ಹೇಳುತ್ತದೆ. ಶ್ರವಣಬೆಳಗೊಳದ ಬಸದಿಯೊಂದಲ್ಲಿರುವ ಶಾಸನವು "ದಕ್ಷಿಣ ಬೆಳ್ಗೊಳ ಉತ್ರ ಕೋಶದಲ್ಲಿ ಬಹುಚಿತ್ರ ಭಿತ್ತಿಯಂ ನೋಡಿದರಂ ಮನಂಗೊಳಿಸುವ ಬಸದಿ" ಗಳನ್ನು ಕಟ್ಟಿಸಿದಂತೆ ಉಲ್ಲೇಖಿಸಿದೆ. ಹಾಸನದ ಬಳಿಯ ಜಕ್ಕನಹಳ್ಳಿಯ ಬಳಿ ದೊರೆತಿರುವ ಒಂದು ಶಾಸನದಲ್ಲಿ ಜಕ್ಕನ ಕಾಳೇಶ್ವರ ದೇವಾಲಯದಲ್ಲಿ ಮಾಲಿಗೆ ಗೋಡೆ ಹಾಗೂ ಕಂಬಗಳನ್ನು ಒಂದನೇ ಬಲ್ಲಾಳನ ಹೆಗ್ಗಡೆ ಕಾಳಿಮಯ್ಯನು ಚಿತ್ರರಚನೆ ಮಾಡಿ ಅಲಂಕರಿಸಿದನು ಎಂದು ತಿಳಿಸುತ್ತದೆ. ಕೃಷ್ಣರಾಜಪೇಟೆ ಸಮೀಪದ ಕ್ರಿ.ಶ. ೧೧೧೬ರ ಶಾಸನವೊಂದು ದೇವರ ಪ್ರತಿಷ್ಠೆ ಮಾಡಿಸಿದ ವಿಶ್ವಕರ್ಮ ನಟರಾಜಚಾರ್ಯನ ಪುತ್ರ ಲೋಹಕರ್ಮ, ಶಿಲಾಕರ್ಮ, ರತ್ನಕರ್ಮ, ಕಾಷ್ಟ ಕರ್ಮ, ಚಿತ್ರಕರ್ಮದಲ್ಲಿ ಹಸ್ತ ಕುಶಲತೆಯುಳ್ಳವನಾಗಿದ್ದನು ಎಂದು ತಿಳಿಸುತ್ತದೆ.

ಭಿತ್ತಿ ಸಿದ್ಧತಾ ವಿಧಾನ

ಭಿತ್ತಿಚಿತ್ರ ರಚನೆಯಲ್ಲಿ ಭಿತ್ತಿ ಸಿದ್ಧತೆ ಮಾಡುವುದು ಅತ್ಯಂತ ಪ್ರಮುಖ ಹಂತವಾಗಿದೆ. ಅದಕ್ಕಾಗಿಯೇ ಭಿತ್ತಿ ಸಿದ್ಧತೆಗೆ ಪ್ರಾಚೀನರು ಹೆಚ್ಚು ಮಹತ್ವ ಕೊಡುತ್ತಿದ್ದರು. ವಿವಿಧ ವಸ್ತುಗಳನ್ನು ಉಪಯೋಗಿಸಿ ಭಿತ್ತಿಯನ್ನು ನಿರ್ಮಿಸಲಾಗುತ್ತದಲ್ಲದೇ ಬೇರೆ ಬೇರೆ ಪ್ರಕಾರದ ಭಿತ್ತಿಗಳನ್ನು ಸಿದ್ದಗೊಳಿಸಲಾಗುತ್ತದೆ. ಭಿತ್ತಿ ಸಿದ್ದತೆಗೊಳಿಸುವ ಕ್ರಿಯೆಯು ಒಂದೇ ಹಂತದಲ್ಲಿ ಪೂರ್ಣಗೊಳ್ಳದೇ ಅನೇಕ ಹಂತಗಳಲ್ಲಿ ನಡೆಯುತ್ತದೆ. ಭಿತ್ತಿ ನಿರ್ಮಾಣ ಕ್ರಿಯೆಯನ್ನು ಭಾರತೀಯ ಪ್ರಾಚೀನ ಗ್ರಂಥಗಳಲ್ಲಿ ವಿವರಿಸಲಾಗಿದೆ. ವಿಷ್ಣು ಧರ್ಮೋತ್ತರ ಪುರಾಣ, ಶಿಲ್ಪರತ್ನ, ಮಾನಸೋಲ್ಲಾಸ, ಶಿವತತ್ವ ರತ್ನಾಕರ, ಅಪರಾಚಿತ ಪುಟ ಸಮರಾಂಗಣ, ಸೂತ್ರಧಾರ ಮುಂತಾದ ಗ್ರಂಥಗಳಲ್ಲಿ ಭಿತ್ತಿ ಸಿದ್ಧತೆಯ ಬಗೆಗೆ ಮಾಹಿತಿ ಇದೆ. ಭಿತ್ತಿ ಸಿದ್ಧತಾ ವಿಧಾನವನ್ನು ಮೂರು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗುವುದು. ಒಂದನೆಯದು ಭಿತ್ತಿ, ಎರಡನೆಯದು ಭಿತ್ತಿ ಸಿದ್ಧತಾ ಹಂತ, ಮೂರನೆಯದು ಭಿತ್ತಿಯ ಭಿನ್ನಮಾಧ್ಯಮಗಳು ಎಂದು ಇವುಗಳನ್ನು ನಾವು ವಿಸ್ತೃತವಾಗಿ ಗಮನಿಸುವುದಾದರೆ,

ಭಿತ್ತಿ

ಕನ್ನಡ ಜಾನಪದ ವಿಶ್ವಕೋಶದಲ್ಲಿ ಹೇಳಿರುವಂತೆ ಭಿತ್ತಿ ಚಿತ್ರ ಎಂದರೆ ಗೋಡೆಯ ಮೇಲೆ

ಬರೆಯುವ ಚಿತ್ರವೆಂದು ಹೇಳಲಾಗಿದ್ದು, ಭಿತ್ತಿ ಎಂಬುದಕ್ಕೆ ಗೋಡೆ, ಕುಡ್ಯ, ಮೂಲ ತಳ, ಹಿನ್ನೆಲೆ ಎಂದೆಲ್ಲ ಹೇಳಲಾಗಿದೆ. ಹಲವು ರೀತಿಯಲ್ಲಿ ಭಿತ್ತಿ ತಯಾರಿಯನ್ನು ಮಾಡಲಾಗುವುದು ಅಲ್ಲದೆ ಬೇರೆ ಬೇರೆ ಅಂಶಗಳಲ್ಲಿ ಹಾಗೂ ಅಂಕಗಳಲ್ಲಿ ಸಿದ್ಧತೆ ಮಾಡಲಾಗುವುದು. ಅವುಗಳಲ್ಲಿ ಪ್ರಮುಖವಾಗಿ ಭಾರತೀಯ ಭಿತ್ತಿಚಿತ್ರ ಇತಿಹಾಸದಲ್ಲಿ ಪ್ರಮುಖವಾಗಿ ಭಾರತೀಯ ಭಿತ್ತಿಚಿತ್ರ ಇತಿಹಾಸದಲ್ಲಿ ಪ್ರಮುಖವಾಗಿ ಮೂರು ಪ್ರಕಾರದ ಭಿತ್ತಿಗಳನ್ನು ಗುರುತಿಸಬಹುದು ಎಂದು ವಿದ್ವಾಂಸರು ಅಭಿಪ್ರಾಯಿಸುತ್ತಾರೆ.

೧. ಮಣ್ಣಿನ ಭಿತ್ತಿ (Mud Ploster)

೨. ಗಾರೆ ಭಿತ್ತಿ (Lime ploster ground)

೩. ಮರದ ಭಿತ್ತಿ

೧. ಮಣ್ಣಿನ ಭಿತ್ತಿ (Mud Ploster)

ಮಣ್ಣಿನ ಭಿತ್ತಿ ರಚಿಸುವ ವಿಧಾನವು ಈಜಿಪ್ಟಿನಲ್ಲಿ ಕ್ರಿ.ಪೂ. ೩೫೦೦ ವರ್ಷಗಳಿಗೂ ಪೂರ್ವದಲ್ಲಿ ಬಳಕೆಯಲ್ಲಿತ್ತು. ಭಾರತದ ಪ್ರಾಚೀನ ಮತ್ತು ಕೆಲವು ಮಧ್ಯಯುಗೀನ ಭಿತ್ತಿ ಚಿತ್ರಗಳಲ್ಲಿ ಈ ವಿಧಾನ ಬಳಕೆಗೊಂಡಿದೆ. ಮಣ್ಣಿನ ಭಿತ್ತಿ ರಚಿಸುವ ವಿಧಾನವು ಕ್ರಿ.ಶ. ೬ನೇ ಶತಮಾನದವರೆಗೂ ಹೆಚ್ಚಾಗಿ ಬಳಕೆಯಲ್ಲಿತ್ತು ಎಂಬ ವಿವರ ದೊರೆಯುತ್ತವೆ. ಮಣ್ಣಿನ ಭಿತ್ತಿ ನಿರ್ಮಾಣಕ್ಕೆ ಮೂರು ವಿಧದ ಮಣ್ಣು ಉಪಯೋಗಿಸಬಹುದೆಂದು ಕಾಶ್ಯಪ ಶಿಲ್ಪಶಾಸ್ತ್ರ ಹೇಳುತ್ತದೆ.

೧. ಜಾಂಗಲ   ೨. ಅನುರೂಪ   ೩. ಸಮ್ಮಿಶ್ರ

೧. ಜಾಂಗಲ : ಸುಲಭವಾಗಿ ಅಗೆಯಲು ಸಾಧ್ಯವಾದ ಬಹುಗಟ್ಟಿಯಾದ ಭೂಮಿಯಿಂದ ಅಗೆದು ತೆಗೆದ ಮಣ್ಣಿಗೆ ಜಾಂಗಲವೆಂದು ಹೆಸರು.

೨. ಅನುರೂಪ : ಸಣ್ಣ ಮರಳು ಬೆರೆತಿದ್ದು ಹೆಚ್ಚಿನ ಶ್ರಮವಿಲ್ಲದೇ ಅಗೆಯಲು ಬರುವಂತಹ ಭೂಮಿಯಲ್ಲಿ ಹಳ್ಳವು ಮೂರುಮೊಳ ಆಳವಾಗಿದ್ದರೂ ಭೂಮಿಯು ಮನೋಹರವಾಗಿದ್ದರೆ ಅಲ್ಲಿ ಸಿಗುವ ಮಣ್ಣಿಗೆ ಅನುರೂಪವೆಂದು ಕರೆಯುವರು.

೩. ಸಮ್ಮಿಶ್ರ : ಈ ಎರಡೂ ಬಗೆಯ ಮಣ್ಣು ಬೆರೆತಿದ್ದರೆ ಅದನ್ನು ಸಮ್ಮಿಶ್ರವೆಂದು ಹೇಳುತ್ತಾರೆ.[೧೮]

ಮಣ್ಣಿನ ಭಿತ್ತಿಯನ್ನು ಗೋಡೆಗಳ ಮೇಲೆ ನಿರ್ಮಿಸುವಾಗ ಪದರವಾಗಿ ಮೇಲಿಂದ ಮೇಲೆ

೧೮. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–

ಲೇಪಿಸಲಾಗುವುದು. ಕಾರಣ ಹಂತಹಂತವಾಗಿ ಲೇಪಿಸುವುದರಿಂದ ಬಿಗಿ ಬರುತ್ತದೆ ಎಂದು ಅಲ್ಲದೆ ಮಣ್ಣಿನ ಭಿತ್ತಿ ಜೊತೆಗೆ ನಾರಿನ ಪದಾರ್ಥಗಳಾದ ತೆಂಗಿನ ನಾರು, ಹುಲ್ಲು, ಕೂದಲು, ಮರದ ತೊಗಟೆಯ ತೆಳು ಪದರುಗಳು ಇತ್ಯಾದಿ. ಅಲ್ಲದೆ ಮಣ್ಣು ಮೆದುವಾಗಲೆಂದು ಮಣ್ಣಿನ ಜೊತೆಗೆ ಸಗಣಿಯನ್ನು ಸಹ ಮಿಶ್ರಣ ಮಾಡಲಾಗುವುದು. ಆದರೆ ಇದಕ್ಕೆ ಈ ಪ್ರಕ್ರಿಯೆಯಿಂದಾಗಿ ಭವಿಷ್ಯ ಇರುವುದಿಲ್ಲ. ಕಾರಣ ಸಗಣಿಯು ಒಂದು ಸಾವಯವ ಪದಾರ್ಥ. ಆದ್ದರಿಂದ ಇದು ಕ್ರಿಮಿಕೀಟಗಳಿಗೆ ಸುಲಭ ಆಹಾರವಾಗಿ ದೊರಕುವುದರಿಂದ ಭಿತ್ತಿಯು ತನ್ನ ಆಯುಷ್ಯವನ್ನು ಕಳೆದುಕೊಂಡು ಶಕ್ತಿಹೀನವಾಗುತ್ತದೆ ಎಂದು ಜೆ.ಸಿ. ನಾಗಪಾಲ್‌ರವರು ಅಭಿಪ್ರಾಯಿಸುತ್ತಾರೆ.

೨. ಗಾರೆ ಭಿತ್ತಿ (Lime ploster ground)

ಮಧ್ಯಯುಗದ ಸುಮಾರಿಗೆ ಭಾರತದಲ್ಲಿ ಮಣ್ಣಿನ ಭಿತ್ತಿಯ ತನ್ನ ಪ್ರಭಾವವನ್ನು ಕಳೆದುಕೊಂಡು ಅಂದಿನ ಕಲಾವಿದರು ಗಾರೆ ಭಿತ್ತಿ ಕ್ರಮವನ್ನು ಅನುಸರಿಸತೊಡಗಿದರು. ಇದರ ಪ್ರಭಾವವಾಗಿ ಭಾರತದಲ್ಲಿ ಆಗ್ರಾದಲ್ಲಿನ ಮೊಗಲ್ ಕಟ್ಟಡಗಳಲ್ಲಿ ದೆಹಲಿಯ ಅರಬ್-ಕಿ-ಸರಾಯ್ ಕಟ್ಟದಲ್ಲಿನ ಭಿತ್ತಿಚಿತ್ರಗಳು ಗಾರೆ ಭಿತ್ತಿಯ ಮೇಲೆ ರಚನೆಯಾಗಿವೆ.[೧೯] ಕರ್ನಾಟಕದಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯ, ಕನಕಗಿರಿಯ ಕನಕಾಚಲಪತಿ ದೇವಾಲಯ, ಬಿಜಾಪುರದ ಅರಸ್‌ಮಹಲ್, ಮೂಡಬಿದರೆಯ ಜೈನಮಠ, ಶ್ರವಣಬೆಳಗೊಳದ ಜೈನಮಠ, ಹಿರಿಯೂರು ಹಾಗೂ ಸೀಬಿಯ ದೇವಾಲಯಗಳಲ್ಲಿಯೂ ನಾವು ಗಾರೆ ಭಿತ್ತಿ ಚಿತ್ರಗಳನ್ನು ಕಾಣಬಹುದಾಗಿದೆ. ಗಾರೆ ಭಿತ್ತಿ ರಚನೆಯಲ್ಲಿ ಸುಣ್ಣವು ಪ್ರಮುಖ ವಸ್ತು. ಅದರೆ ಜೊತೆಗೆ ಮರಳು, ಕಲ್ಲಿನ ಪುಡಿ, ವಜ್ರಸರಿ, ಲೋಳೆಸರ, ಬೆಲ್ಲ, ಬೆಲ್ದೆಹಣ್ಣು ಅಂಟು ಹೀಗೆ ವಿವಿಧ ರೀತಿಯಲ್ಲಿ ಪದಾರ್ಥಗಳನ್ನು ಬಳಸಲಾಗುವುದು.[೨೦] ಮುಖ್ಯವಾಗಿ ಜಿಪ್ಸಮ್ ಇಲ್ಲವೆ ಮಾರ್ಬಲ್ ಕಲ್ಲಿನ ಪುಡಿಯನ್ನು ಭಿತ್ತಿ ರಚನೆಗಾಗಿ ಬಳಸಿದರೂ ಅದರ ಜೊತೆಗೆ ಸೂಕ್ಷ್ಮವಾದ ಮರಳು, ಅಂಟು ದ್ರಾವಕ, ಕಲ್ಲಿನ ಪುಡಿ ಹೀಗೆ ವಿವಿಧ ಪೂರಕ ವಸ್ತುಗಳನ್ನು ಇದರಲ್ಲಿ ಸೇರಿಸಲಾಗುವುದು.[೨೧] ಭಾರತೀಯ ಪುರಾತನ ಗ್ರಂಥವಾದ ಮಾನಸೋಲ್ಲಾಸ ಗ್ರಂಥದಲ್ಲಿಯೂ ಸಹ ಇದರ ಕುರಿತಾಗಿ ಹೇಳಾಗಿದ್ದು, ಚಂದಿರನ ಹಾಗೆ ಹೊಳೆಯುವ ನೀಲಗಿರಿ ಬೆಟ್ಟದಲ್ಲಿ ಮಾತ್ರ ದೊರೆಯುವ ಬಿಳಿದಾದ ಕಲ್ಲಿನ ಪುಡಿಯನ್ನು ಉಪಯೋಗಿಸಬೇಕೆಂದು ಈ ಗ್ರಂಥದಲ್ಲಿ ಹೇಳಲಾಗಿದೆ.

೩. ಮರದ ಭಿತ್ತಿ

ಮಣ್ಣಿನ ಭಿತ್ತಿ ಹಾಗೂ ಗಾರೆ ಭಿತ್ತಿಯ ಹಾಗೆ ಮರದ ಭಿತ್ತಿಯೂ ಸಹ ಒಂದು ಮಾಧ್ಯಮವಾಗಿದೆ. ಇದರ ಸಿದ್ಧತೆಯೂ ಸಹ ಮೇಲೆ ಹೇಳಿದಂತಿದ್ದು, ಕೊಂಚ ಬದಲಾವಣೆಗಳನ್ನು

೧೯. S. Paramasivan : An Investigation in to the Methods of Mural Paintings, p.no.23
೨೦. ಅದೇ.
೨೧. Jayanth Chakravarthy : Techniques in Indian Mural Paintings, p.no.26

ಇಲ್ಲಿ ಕಾಣಬಹುದಾಗಿದೆ. ಮರದ ಮಾಧ್ಯಮದ ಮೇಲೆ ಭಿತ್ತಿಯನ್ನು ನಿರ್ಮಿಸುವಾಗ ಅದನ್ನು ಮೊದಲಿಗೆ ಸಂಸ್ಕರಣೆ ಮಾಡುತ್ತಾರೆ. ಆ ಮೇಲೆ ಉಸುಕ, ಕಪ್ಪೆಚಿಪ್ಪು, ಶಂಕಚೂರ್ಣ, ಸುಣ್ಣ, ಜಿಗುಟಾದ ಬಿಳಿಮಣ್ಣು, ನಾರುಪದಾರ್ಥ ಮತ್ತು ಯೋಗ್ಯ ಅಂಟುದ್ರಾವಕಗಳನ್ನು ಬಳಸಿಕೊಂಡು ತಯಾರಿಸಿದ ಭಿತ್ತಿಯ ಲೇಪನವನ್ನು ಮರದ ಫಲಕದ ಮೇಲೆ ಹಂತ ಹಂತವಾಗಿ ಲೇಪಿಸುತ್ತಾರೆ. ನಂತರ ಅದು ಒಣಗಿ ಸೇರುವವರೆಗೂ ಅದನ್ನು ಗಾಳಿಯಲ್ಲಿ ಬಿಡಲಾಗುವುದು. ಅಂಟು ಪದಾರ್ಥಗಳ ದ್ರಾವಣವು ಗಟ್ಟಿಯಾದ ಮೇಲೆ ಆ ಮರದ ಹಲಗೆಗಳು ಚಿತ್ರ ರಚಿಸಲು ಸಿದ್ಧವಾಗುತ್ತವೆ.

ಭಿತ್ತಿ ಸಿದ್ಧತಾ ಹಂತಗಳು

ಭಿತ್ತಿ ಸಿದ್ಧತಾ ಹಂತಗಳು ಚಿತ್ರ ರಚನೆಯ ಪೂರ್ವದಲ್ಲಿ ನಡೆದರೂ ಸಹ ಈ ಕ್ರಿಯೆಯೂ ಸಹ ಬಹು ಮುಖ್ಯ ಪಾತ್ರ ವಹಿಸುತ್ತದೆ. ಈ ಕ್ರಿಯೆಯು ಒಂದೇ ಹಂತದಲ್ಲಿ ಪೂರ್ಣಗೊಳ್ಳದೆ ಆಧಾರ ಸಂಸ್ಕರಣೆಗೊಳಿಸುವುದರಿಂದ ಹಿಡಿದು ಚಿತ್ರ ರಚನೆಗಾಗಿ ಭಿತ್ತಿಯನ್ನು ಸಜ್ಜುಗೊಳಿಸುವವರೆಗೆ ಮುಖ್ಯವಾಗಿ ನಾಲ್ಕು ಹಂತಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಆಧಾರ ಸಂಸ್ಕರಣ ಹಂತ

೨. ಮಿಶ್ರಣ ಲೇಪನ ಹಂತ

೩. ಭಿತ್ತಿ ನುಣುಪುಗೊಳಿಸುವ ಹಂತ

೪. ಹಿನ್ನೆಲೆ ಲೇಪನದ ಹಂತ

೧. ಆಧಾರ ಸಂಸ್ಕರಣಾ ಹಂತ

ಆಧಾರವೆಂದರೆ ತಳಹದಿಯ ಮೇಲ್ಮೈ. ನಾವು ಚಿತ್ರ ರಚನೆಯ ಪೂರ್ವದಲ್ಲಿ ಯಾವ ಮಾಧ್ಯಮ ಮೇಲೆ ಚಿತ್ರರಚಿಸಲು ಸಿದ್ಧಪಡಿಸಿಕೊಳ್ಳುತ್ತೇವೋ ಅದನ್ನು ಆಧಾರವೆಂದು ಕರೆಯಲಾಗುವುದು. ಕಲ್ಲು ಗೋಡೆಯ ಮೇಲೆ, ಇಟ್ಟಿಗೆ ಗೋಡೆಯ ಮೆಲೆ, ಮರದ ಲೋಹದ ಫಲಕ ಹಾಗೂ ಗಾಜುಗಳ ಮೇಲೆ ಭಿತ್ತಿಚಿತ್ರ ರಚಿಸಲು ಸಿದ್ಧಗೊಳಿಸುವುದನ್ನು ಆಧಾರವೆಂತಲು, ವಿಷ್ಣು ಧರ್ಮೋತ್ತರ ಪುರಾಣವು ಮಿಶ್ರಣ ಲೇಪನಕ್ಕಿಂತ ಮೊದಲು ಗೋಡೆಯ ಸಮತಟ್ಟು ತಿಳಿಸಿ ಅದಕ್ಕಾಗಿ ಲಿಂಗಸೂತ್ರವನ್ನು ಉಪಯೋಗಿಸಲು ತಿಳಿಸುತ್ತದೆ. ಸಮರಾಂಗಣ ಸೂತ್ರಧಾರವು ಮಿಶ್ರಣ ಲೇಪಿಸುವ ಮೊದಲು ಗೋಡೆಯನ್ನು ಬಿಸಿ ನೀರು ಹಾಗೂ ಸುಣ್ಣದ ನೀರಿನಿಂದ ತೊಳೆದು ಸಂಸ್ಕರಿಸಲು ಹೇಳಲಾಗಿದೆ.

ಸಮರಾಂಗಣ ಸೂತ್ರಧಾರ ಗ್ರಂಥದಲ್ಲಿ ಹೇಳಲಾದ ಆಧಾರ ಸಂಸ್ಕರಣ ಇವನ್ನು ಜಯಂತ ಚಕ್ರವರ್ತಿಯವರು ಇಟ್ಟಿಗೆ ಗೋಡೆಯ ಮೇಲೆ ಮಿಶ್ರಣ ಲೇಪಿಸುವ ಮೊದಲು ಹೈಡ್ರೋಕ್ಲೋರಿಕ್

ಆಸಿಡ್‌ನಿಂದ ಮಿಶ್ರಣವನ್ನು ಗೋಡೆಗೆ ಎರಚಬೇಕು. ನಂತರ ಬಿಸಿನೀರು, ಆಮೇಲೆ ತಣ್ಣೀರು ಉಪಯೋಗಿಸಿ ಗೋಡೆಯನ್ನು ತೊಳೆಯಬೇಕು. ಹೀಗೆ ತೊಳೆಯುವಾಗ ಗೋಡೆಯಲ್ಲಿನ ಇಟ್ಟಿಗೆಗಳ ಗುಣಮಟ್ಟ ಸರಿ ಇರದೇ ಅವು ಅಲ್ಲಲ್ಲಿ ಪುಡಿಯಾಗಿ ಉದುರಿ ತಗ್ಗುಗಳಾದರೆ ಆ ತಗ್ಗುಗಳನ್ನು ಸುಣ್ಣ ಹಾಗೂ ಮರಳುಗಳ ಗಾರೆ ಮಿಶ್ರಣದಿಂದ ತುಂಬಿ ಸರಿಪಡಿಸಬೇಕು. ಅಲ್ಲಲ್ಲಿ ಪೂರ್ತಿ ಉದುರಿ ಹೋಗುವ ಇಟ್ಟಿಗೆಗಳಿದ್ದರೆ ಅವುಗಳನ್ನು ಸುತ್ತಿಗೆ ಉಳಿಯಿಂದ ಒಡೆದು ತೆಗೆದು ಆ ಸ್ಥಳದಲ್ಲಿ ಒಳ್ಳೆಯ ಗುಣಮಟ್ಟದ ಇಟ್ಟಿಗೆಯನ್ನು ಕೂರಿಸಬೇಕು. ಈ ರೀತಿ ಸಂಸ್ಕರಿಸಿದ ಇಟ್ಟಿಗೆಯ ಗೋಡೆಗೆ ಭಿತ್ತಿಯ ಮಿಶ್ರಣ ಲೇಪನ ಮಾಡಬೇಕು ಎಂದು ಹೇಳುತ್ತಾರೆ.[೨೨]

೨. ಮಿಶ್ರಣ ಲೇಪನ ಹಂತ

ಮಿಶ್ರಣ ಲೇಪನ ಹಂತದ ಕುರಿತಾಗಿ ವಿಷ್ಣುಧರ್ಮೋತ್ತರ ಪುರಾಣ, ಕಶ್ಯಪನ ಶಿಲ್ಪಶಾಸ್ತ್ರ, ಶಿಲ್ಪ ರತ್ನ, ಸುಧಾಲೇಪನ ವಿಧಾನ ಎಂಬ ಗ್ರಂಥಗಳಲ್ಲಿ ವಿಸ್ತೃತವಾಗಿ ವಿವರಿಸಲಾಗಿದೆ. ಭಿತ್ತಿ ಸಿದ್ಧತಾ ವಿಧಾನದಲ್ಲಿ ಮಹತ್ವದ ಹಂತ ಇದಾಗಿದ್ದು, ವಿವಿಧ ರೀತಿಯಲ್ಲಿ ಬಗೆ ಬಗೆ ಪದಾರ್ಥಗಳನ್ನು ಸೇರಿಸಿ ಹದವಾದ ಮಿಶ್ರಣ ತಯಾರಿಸಿ ಲೇಪನವನ್ನು ತಯಾರಿಸಲಾಗುವುದು. ವಿಷ್ಣುಧರ್ಮೋತ್ತರ ಪುರಾಣದ ಗ್ರಂಥದಲ್ಲಿ ಭಿತ್ತಿಯ ಮಿಶ್ರಣ ಲೇಪನ ತಯಾರಿಕಾ ಹಂತದ ಕುರಿತಾಗಿ ಸವಿಸ್ತಾರವಾಗಿ ಹೇಳಾಗಿದ್ದು ಈ ಕೆಳಕಂಡಂತಿದೆ. ಮೂರು ಪ್ರಕಾರದ ಇಟ್ಟಿಗೆ ಪುಡಿಯನ್ನು ತೆಗೆದುಕೊಂಡು ಅದಕ್ಕೆ ಅಷ್ಟೇ ಪ್ರಮಾಣದ ಜೇಡಿ ಮಣ್ಣು ಬೆರೆಸಿ, ಅದಕ್ಕೆ ಮತ್ತು ಮೂರು ಪ್ರಮಾಣದಷ್ಟು ಗುಗ್ಗಳು, ಜೇನಿನ ಮೇಣ, ಅತಿಮಧುರ, ಬೆಲ್ಲ ಕಾಕಂಬಿ, ಕುಸುಂಬ ಎಂಬ ಗಂದಿಗರ ಸರಕು ಇವುಗಳನ್ನು ಸೇರಿಸಿ ಮಿಶ್ರಣ ಮಾಡುವುದು. ಈ ಮಿಶ್ರಣಕ್ಕೆ ಸುಣ್ಣದ ಪುಡಿಯನ್ನು ೧/೩ ಭಾಗದಷ್ಟು ಸೇರಿಸಿ ಉರಿಯಲ್ಲಿ ಕಾಯಿಸಬೇಕು. ಬಿಲ್ವಪತ್ರೆ ಕಾಯಿ ಜಜ್ಜಿದ ಅಂಟನ್ನು ಸೇರಿಸುವುದು. ಆಮೇಲೆ ಕಪ್ಪುಪಾಟೀಕಲ್ಲು ಇದರ ಪುಡಿಯನ್ನು ಹಾಕಿ ಆ ಮಿಶ್ರಣಕ್ಕೆ ಅವಶ್ಯಕತೆ ಇದ್ದಷ್ಟು ಪ್ರಮಾಣದಲ್ಲಿ ನುಸಿ ಮರಳನ್ನು ನೀರು ಹಾಕಿ ಒಟ್ಟು ಮಿಶ್ರಣವನ್ನು ಕುದಿಸಬೇಕು. ಈ ಹದಮಾಡಿದ ಮಿಶ್ರಣವನ್ನು ನೀರಿನಲ್ಲಿಯೇ ಒಂದು ತಿಂಗಳ ಕಾಲ ನೆನೆಯಾಕಿ ಪಕ್ವವಾಗುವಂತೆ ಮಾಡಬೇಕು. ಈ ಮಿಶ್ರಣವು ಚೆನ್ನಾಗಿ ಹದವಾಗಿ ನೆನೆದ ನಂತರ ಜಾಗ್ರತೆಯಿಂದ ಹೊರತೆಗೆದು ಗೋಡೆಗೆ ಹಂತ ಹಂತವಾಗಿ ಮೇಲ್ಮೈ ಸಮತಟ್ಟಾಗಿ ನುಣುಪಾಗುವಂತೆ ಮೇಲಿಂದ ಮೇಲೆ ಲೇಪಿಸುತ್ತಾ ಬರಬೇಕೆಂದು ವಿಷ್ಣುಧರ್ಮೋತ್ತರ ಪುರಾಣದಲ್ಲಿನ ಉಲ್ಲೇಖವಾಗಿದೆ.[೨೩]

---

೨೨. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–

೨೩. Priyabala Shah : Vishnudharmottara, Vol-III, Chapter-40, Shloka 1 to 11

ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ಮಿಶ್ರಣ ತಯಾರಿಕೆ ಬಗೆಗೆ ಈ ರೀತಿ ಹೇಳಿದೆ. ನದಿ ತೀರ ಇಲ್ಲವೇ ಕೆರೆಯ ದಂಡೆಯ ಬಳಿಯ ಜಿಗುಟಾದ ಮಣ್ಣು ತೆಗೆದುಕೊಂಡು ಅದಕ್ಕೆ ಮರದ ಅಂಟು, ವಿವಿಧ ಸಸ್ಯಗಳ ರಸ, ಕಲ್ಲಿನ ಪುಡಿ, ತೆಂಗಿನ ನಾರು, ಗುಗ್ಗುಳು, ಕಾಳ, ಸರ್ಜರಸ, ಬೆಲ್ಲದ ಕಾಯಿ ಮುಂತಾದವುಗಳನ್ನು ನಿರ್ಧಿಷ್ಟ ಪ್ರಮಾಣದಲ್ಲಿ ಬೆರೆಸಿ ಮಿಶ್ರಣ ತಯಾರಿಸಬೇಕೆಂದು[೨೪] ಸವಿಸ್ತಾರವಾದ ವಿಧಾನ ಹೇಳಿದೆ. ಶಿಲ್ಪರತ್ನ ಗ್ರಂಥದಲ್ಲಿ ಸುಣ್ಣ, ಕಪ್ಪೆ ಚಿಪ್ಪು, ಶಂಖದ ಪುಡಿ, ಜೇನು ಬೆಲ್ಲ, ಉಸುಕು, ಬಾಳೆ ತಿರುಳು ಮುಂತಾದವುಗಳನ್ನು ಬೆರಸಿ ಮಿಶ್ರಣ ತಯಾರಿಸಲು ತಿಳಿಸಿದೆ.[೨೫] ಶಿಲ್ಪರತ್ನ ಗ್ರಂಥದಲ್ಲಿ ಹೇಳಿದ ಮಿಶ್ರಣ ತಯಾರಿಕೆಯ ವಿಧಾನ ಹೀಗಿದೆ. ಕಪ್ಪೆ ಚಿಪ್ಪು, ಶಂಖ ಗಳನ್ನು ಸುಟ್ಟು ಪುಡಿಮಾಡಬೇಕು. ಈ ಪುಡಿಗೆ ೧/೪ ಭಾಗದಷ್ಟು ಜೇನು ಬೆಲ್ಲ ಮತ್ತು ಉಸುಕು ಸೇರಿಸುವುದು ನಂತರ ಈ ಮಿಶ್ರಣಕ್ಕೆ ಕಳಿತ ಬಾಳೆಹಣ್ಣು ಬೆರೆಸಿ ಕಿವುಚಿ ಪೇಸ್ಟಿನ ಹಾಗೆ ಮಾಡಿಕೊಳ್ಳಬೇಕು. ಇಡೀ ಮಿಶ್ರಣವನ್ನು ಬೆಂಕಿಯಲ್ಲಿ ಕಾಯಿಸಿ ಪಾತ್ರೆಯೊಂದರಲ್ಲಿ ಹಾಕಿ ಮೂರು ತಿಂಗಳು ನೆನೆ ಇಡಬೇಕು. ಅದು ಸರಿಯಾಗಿ ನೆನೆದಾಗಿ ಹೊರತೆಗೆದು ಚೆನ್ನಾಗಿ ನಾದಿಕೊಳ್ಳಬೇಕು. ಜೇನು ಬೆಲ್ಲದೊಂದಿಗೆ ಬೆರೆಸಿಕೊಂಡ ಈ ಮಿಶ್ರಣವನ್ನು ಗೋಡೆಗೆ ಲೇಪಿಸಬೇಕು ಎಂಬುದಾಗಿ ಮಾಹಿತಿಯನ್ನು ನೀಡಿದೆ.[೨೬] ಇವುಗಳಲ್ಲದೇ ಇನ್ನೂ ಅನೇಕ ಪ್ರಾಚೀನ ಗ್ರಂಥಗಳು ಭಿತ್ತಿ ಮಿಶ್ರಣ ತಯಾರಿಕೆ ಮಾಹಿತಿ ನೀಡುತ್ತವೆ.

೩. ಭಿತ್ತಿ ನುಣುಪುಗೊಳಿಸುವ ಹಂತ

ಭಿತ್ತಿ ಸಿದ್ಧತಾ ವಿಧಾನದಲ್ಲಿ ಮೂರನೆಯ ಹಂತ ಇದಾಗಿದೆ. ಮಿಶ್ರಣ ಲೇಪನ ಮಾಡಿ ಸಿದ್ಧಗೊಳಿಸಿದ ಭಿತ್ತಿಯ ಮೇಲೆ ಒಮ್ಮೆಲೇ ಚಿತ್ರ ರಚನೆ ಮಾಡುವುದಿಲ್ಲ. ಅದನ್ನು ಸಮತಟ್ಟುಗೊಳಿಸಿ, ನುಣುಪಾಗಿ ತಿದ್ದಿ ನಂತರ ಚಿತ್ರ ಬರೆಯಲಾಗುತ್ತದೆ. ಪ್ರಾಚೀನ ಗ್ರಂಥಗಳು ಕೂಡಾ ಭಿತ್ತಿ ನುಣುಪುಗೊಳಿಸುವ ಈ ಹಂತದ ಬಗೆಗೆ ವಿವರಿಸಿವೆ. ವಿಷ್ಣುಧರ್ಮೋತ್ತರದಲ್ಲಿ ಭಿತ್ತಿ ಸಮತಟ್ಟು ಮಾಡಿ ನುಣುಪುಗೊಳಿಸಲು ಎರಡು ವಿಧಾನ ಹೇಳಿದೆ.[೨೭] ಮೊದಲನೇ ವಿಧಾನದಲ್ಲಿ ಬಿಳಿಯಾದ ಮಣ್ಣು, ಸರ್ಜರಸ, ಎಣ್ಣೆ ಇವುಗಳನ್ನು ಬೆರೆಸಿದ ಮಿಶ್ರಣವನ್ನು ಭಿತ್ತಿಗೆ ಲೇಪಿಸಿ ಉಜ್ಜಬೇಕು ಎಂದಿದೆ. ವಿಷ್ಣುಧರ್ಮೋತ್ತರ ಹೇಳಿದ ಇನ್ನೊಂದು ವಿಧಾನವೆಂದರೆ ಕಲ್ಲುಹರಳುಗಳಿಂದ ಮುಕ್ತವಾದ, ನಯವಾದ ಮರಳು ತೆಗೆದುಕೊಂಡು ಅದಕ್ಕೆ ಮಣ್ಣು, ಕಾಕುವ ಮತ್ತು ಬೀನ್ ಬೀಜಗಳು, ಹತ್ತಿಗಿಡದ ರಸ, ಬಿಲ್ವಪತ್ರೆ ಕಾಯಿ ಅಂಟು ಬೆರೆಸಿಕೊಂಡು ಲೇಪಿಸಬೇಕು ಎನ್ನುವ ವಿವರಣೆ[೨೮] ಇದೆ. ಇವುಗಳಲ್ಲದೇ

೨೪. ಜಿ. ಜ್ಞಾನಾನಂದ (ಅನು) : ಕಾಶ್ಯಪ ಶಿಲ್ಪಶಾಸ್ತ್ರ, ಅಧ್ಯಾಯ-೮೬, ಪು-೬೪೮-೬೫೦

೨೫. Ganpathy T Shastri (edt) : Shilparatna, Vol-I, Chapter-40, Shloka-15 to 24

೨೬. G K. Gondekhar (edt) : Manasollasa, Vol-III, Chapter-1, Shloka 14 to 15

೨೭. Priyabala Shah : Vishnudharmottara, Vol-III, Chapter-40, Shloka 1 to 11

೨೮. Ganpathy T Shastri (edt) : Shilparatna, Vol-I, Chapter-46, Shloka-28 to 34

ಮಾನಸೋಲ್ಲಾಸ, ಸಮರಾಂಗಣ ಸೂತ್ರಧಾರ, ಕಶ್ಯಪ ಶಿಲ್ಪಶಾಸ್ತ್ರ ಮುಂತಾದ ಗ್ರಂಥಗಳು ಭಿತ್ತಿ ನುಣುಪುಗೊಳಿಸುವ ಕ್ರಿಯೆಯನ್ನು ಕುರಿತು ವಿವರಿಸಿವೆ.

೪. ಹಿನ್ನೆಲೆ ಲೇಪನ ಹಂತ

ಭಿತ್ತಿ ಸಿದ್ಧತೆಯು ಪೂರ್ಣವಾಗಬೇಕಾದರೆ ಹಿನ್ನೆಲೆ ಲೇಪನ ಕಾರ್ಯ ಮುಗಿದಾಗಲೇ ಎನ್ನಬಹುದು. ಈ ಹಿನ್ನೆಲೆ ಲೇಪನದ ಮೇಲೆಯೇ ಚಿತ್ರರಚನೆ ಮಾಡಬೇಕಾಗುವುದರಿಂದ ಪ್ರಾಚೀನರು ಇದಕ್ಕೆ ಹೆಚ್ಚಿನ ಗಮನ ಕೊಡುತ್ತಿದ್ದರು. ಅನೇಕ ಪ್ರಾಚೀನ ಗ್ರಂಥಗಳು ಹಿನ್ನೆಲೆ ಲೇಪನವನ್ನು ಹೇಗೆ ಮಾಡಬೇಕು ಎನ್ನುವುದರ ಕುರಿತಾಗಿ ವಿವರಣೆ ನೀಡಿದೆ. ವಿಷ್ಣು ಧರ್ಮೋತ್ತರವು[೨೯] ಹಿನ್ನೆಲೆ ಲೇಪನಕ್ಕೆ ಸುಣ್ಣ ಮತ್ತು ಕಂದು ಮಣ್ಣು ಮಿಶ್ರ ಮಾಡಿ ಲೇಪಿಸಬೇಕೆಂದು ತಿಳಿಸುತ್ತದೆ. ಸಮರಾಂಗಣ ಸೂತ್ರಧಾರ ಗ್ರಂಥವು[೩೦] ಹೇಳುವ ವಿವರಣೆ ಹೀಗಿದೆ. ಕಲ್ಲು ಹರಳುಗಳಿಂದ ಮುಕ್ತವಾದ ಬಿಳಿ ಮಣ್ಣು ತೆಗೆದುಕೊಂಡು ಅದನ್ನು ಶೋಧಿಸಿ ಅದಕ್ಕೆ ಮಾರ್ಬಲ್ ಕಲ್ಲಿನ ಪುಡಿ, ಕಲ್ಲುಸಕ್ಕರೆ ಕೂಡಿಸುವುದು. ನಂತರ ಶಾಲ್ಮಲ, ಅಶೋಕ, ಕಾಕುಭ ಮುಂತಾದ ವಿವಿಧ ರೀತಿಯ ಗಿಡಗಳಿಂದ ಸಂಗ್ರಹಿಸಿದ ಅಂಟನ್ನು ಬೆರೆಸುವುದು. ಈ ಮಿಶ್ರಣ ಕಲಕುವಾಗ ಜೇನು ಮೇಣ ಬೆರೆಸಿಕೊಂಡು ಭಿತ್ತಿಗೆ ಲೇಪಿಸಬೇಕು. ಇದರಿಂದ ನುಣುಪಾದ ಗಟ್ಟಿಯಾದ ಹಿನ್ನೆಲೆ ತಯಾರಾಗುತ್ತದೆ ಎನ್ನಲಾಗಿದೆ.

ಶಿಲ್ಪರತ್ನ ಗ್ರಂಥದ ಪ್ರಕಾರ ಬಿಳಿ ಕಲ್ಲಿನ ಪುಡಿ, ಶಂಖ ಚೂರ್ಣ, ಬಿಳಿ ಮಣ್ಣು, ಅತ್ಯಲ್ಪ ಪ್ರಮಾಣದ ಸುಣ್ಣ ಇವುಗಳೊಂದಿಗೆ ಅಂಟು ಬೆರೆಸಿ ಲೇಪಿಸಬೇಕೆಂದಿದೆ. ಇದರಿಂದ ಸ್ವಚ್ಛ ಬಿಳಿಯಾದ ನುಣುಪಾದ ಹಿನ್ನೆಲೆ ತಯಾರಾಗುತ್ತದೆ. ಶಿಲ್ಪರತ್ನ ವಿಷ್ಣುಧರ್ಮೋತ್ತರ ಮತ್ತು ಮಾನಸೋಲ್ಲಾಸ ಗ್ರಂಥಗಳು ಹಿನ್ನೆಲೆಗೆ ಲೇಪನದ ಬಗ್ಗೆ ಹೇಳಿವೆ. ಸಮರಾಂಗಣ ಸೂತ್ರಧಾರವು[೩೧] ಭಿತ್ತಿ ತಯಾರಿಕೆಯ ಕೊನೆಯ ಹಂತವಾಗಿ ಹಿನ್ನೆಲೆ ಲೇಪನವನ್ನು ಹೇಳಿದ್ದು, ಇದಕ್ಕಾಗಿ ಒಂದು ಅಧ್ಯಾಯವನ್ನೇ ಅದು ಮೀಸಲಿರಿಸಿದೆ. ಈ ಗ್ರಂಥದಲ್ಲಿ ಲೇಪನ ಕರ್ಮ ಮೃತ್ತಿಕ ನಿರ್ಣಯ ಇದಕ್ಕೆ ಹೇಳಲಾಗಿದೆ.

ಪರಿಕರಗಳು

ಭಿತ್ತಿ ಚಿತ್ರ ರಚನೆಯಲ್ಲಿ ಬಳಕೆಗೊಳ್ಳುವ ಪರಿಕರಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು.

೧. ಭಿತ್ತಿ ತಯಾರಿಕೆ ಪರಿಕರಗಳು.

೨. ಭಿತ್ತಿ ಚಿತ್ರ ರಚನಾ ಪರಿಕರಗಳು.

೩. ಭಿತ್ತಿ ಸಿದ್ಧತಾ ಪರಿಕರಗಳು.

---

೨೯. V. S. Agarwal (edt) : Samarangana Sutradhara, Chapter-72, Shloka 1 to 9

೩೦. G K. Gondekhar (edt) : Manasollasa, Vol-I, Chapter-46, Shloka 35 to 37

೩೧. V. S. Agarwal (edt) : Samarangana Sutradhara, Chapter-72, Shloka 1 to 12

ಭಿತ್ತಿ ಸಿದ್ಧತೆಗೊಳಿಸಲು ಹಲವು ಬಗೆಯ ಪರಿಕರಗಳ ಅವಶ್ಯಕತೆ ಇದ್ದು ಪ್ರಾಚೀನ ಗ್ರಂಥಗಳಲ್ಲಿ ಈ ಬಗ್ಗೆ ಮಾಹಿತಿ ದೊರಕುತ್ತದೆ. ಬೇರೆ ಬೇರೆ ಬಗೆಯ ಭಿತ್ತಿ ಸಿದ್ಧಗೊಳಿಸಲು ಬೇರೆ ಬೇರೆ ಬಗೆಯ ಪರಿಕರಗಳು ಬಳಕೆಯಾಗುತ್ತಿದ್ದು, ಇಲ್ಲಿ ಭಿತ್ತಿ ಸಿದ್ಧತೆಯ ಒಟ್ಟು ಪರಿಕರಗಳನ್ನು ಸ್ಥೂಲವಾಗಿ ಹೆಸರಿಸಲಾಗಿದೆ. ಮಣ್ಣು, ಕಲ್ಲಿನಪುಡಿ, ಮರಳು, ಸುಣ್ಣ, ನಾರು ಪದಾರ್ಥ, ಶಂಖಚೂರ್ಣ, ಕಪ್ಪೆಚಿಪ್ಪಿನ ಪುಡಿ, ಇಟ್ಟಿಗೆ ಪುಡಿ, ವಜ್ರಲೇಪ, ಮರದಂಟು, ವಿವಿಧ ಗಿಡದ ರಸಗಳು, ಬಾಳೆ ಹಣ್ಣು, ಕಾಕಂಬಿ ಮುಂತಾದವುಗಳಲ್ಲದೇ ಬುಟ್ಟಿ, ತ್ಯಾಪಿ, ಪೊರಕೆಯಂತಹ ಅನೇಕ ಸಾಧನಗಳು ಬಳಕೆಗೊಳ್ಳುತ್ತವೆ.[೩೨] ಈ ಮೇಲಿನ ಕೆಲವು ಪರಿಕರಗಳನ್ನು ಬಳಸಿಕೊಂಡು ಭಿತ್ತಿಯನ್ನು ನಿರ್ಮಿಸಲಾಗುವುದು.

೨. ಭಿತ್ತಿ ಚಿತ್ರ ರಚನಾ ಪರಿಕರಗಳು

ಭಿತ್ತಿ ಸಿದ್ಧತೆಯನ್ನು ಮಾಡಿಕೊಂಡ ನಂತರ ಚಿತ್ರ ರಚನೆಯನ್ನು ಪ್ರಾರಂಭ ಮಾಡಬೇಕಾದಾಗ ಅನೇಕ ಬಗೆಯ ಪರಿಕರಗಳು ಬೇಕಾಗುತ್ತವೆ. ಇವುಗಳನ್ನು ಭಿತ್ತಿಚಿತ್ರ ರಚನಾ ಪರಿಕರಗಳೆಂದು ಕರೆಯಬಹುದಾಗಿದೆ. ಭಿತ್ತಿಚಿತ್ರ ರಚನೆಗೆ ಬೇಕಾಗುವ ಮುಖ್ಯ ಪರಿಕರಗಳು ಈ ಕೆಳಗಿನಂತಿವೆ.

೧. ಸೀಸದ ಕಡ್ಡಿ

೨. ಬಣ್ಣ

೩. ಅಂಟು ದ್ರಾವಕ

೪. ಬಣ್ಣ ಮಿಶ್ರಗೊಳಿಸುವ ತಟ್ಟೆ

೫. ಕುಂಚಗಳು

೧. ಸೀಸದ ಕಡ್ಡಿ (ವರ್ತಿಕಾ) : ಭಿತ್ತಿಯ ಮೇಲೆ ವರ್ಣ ಚಿತ್ರ ರಚಿಸುವ ಪೂರ್ವದಲ್ಲಿ ಇದ್ದಿಲು, ಕಡ್ಡಿಯಂತಹ ಸಾಧನದಿಂದ ರೇಖಾ ಕೃತಿಗಳನ್ನು ರಚಿಸಿಕೊಳ್ಳುತ್ತಿದ್ದರು. ಈ ಸಾಧನಕ್ಕೆ ಅವರು ವರ್ತಿಕಾ ಎಂದು ಕರೆಯುತ್ತಿದ್ದರು. ಇದನ್ನು ನಮ್ಮ ಇಂದಿನ ಸೀಸದ ಕಡ್ಡಿ (ಪೆನ್ಸಿಲ್)ಗೆ ಹೋಲಿಸಬಹುದು. ವರ್ತಿಕಾಗಳನ್ನು ತಯಾರಿಸುವ ಕುರಿತಾಗಿ ಪ್ರಾಚೀನ ಗ್ರಂಥಗಳಲ್ಲಿ ವಿವರಗಳಿವೆ. ವಿಷ್ಣುಧರ್ಮೋತ್ತರದಲ್ಲಿ[೩೩] ಬಿಳಿ ಖಡುವಿನ ಪುಡಿ ಮತ್ತು ಕಪ್ಪು ಕಲ್ಲಿನ ಪುಡಿಯನ್ನು ಮಿಶ್ರಮಾಡಿ ಕಣಕದ ಹಾಗೆ ಮಾಡಿಕೊಂಡು ಅವುಗಳಿಂದ ಕಡ್ಡಿಗಳನ್ನು ತಯಾರಿಸಿ ಅವುಗಳನ್ನು ಬೆಂಕಿಯಲ್ಲಿ ಸುಟ್ಟು ಉಪಯೋಗಿಸಬೇಕೆಂದು ಹೇಳಿದೆ. "ಸಮರಾಂಗಣ ಸೂತ್ರಧಾರ"[೩೪]ವು ನದಿ ದಂಡೆ, ಕೊಳದ

---

೩೨. Jayanth Chakravarthy : Techniques in Indian Mural Paintings, p.no.37

೩೩. C. Sivramamurthi : Chitrasutra of The Vishnudharmottara, p.no.61

೩೪. ಜಿ. ಎ. ಕಲ್ಲೂರ : ಬಣ್ಣಗಳು ಮತ್ತು ಬಣ್ಣ ಹಾಕುವ ಕಲೆ, ಪು-೯

ದಂಡೆ, ಬಾವಿಯ ದಂಡೆ, ಅರಣ್ಯದಲ್ಲಿಯ ಮಣ್ಣುಗಳನ್ನು ತೆಗೆದುಕೊಂಡು ಅದಕ್ಕೆ ಅಕ್ಕಿ ಗಂಜಿ ಬೆರೆಸಿ ನಾದಿಕೊಳ್ಳಬೇಕು. ನಂತರ ಇದರಿಂದ ಕಡ್ಡಿಗಳನ್ನು ಮಾಡಿಕೊಂಡು ಅವುಗಳನ್ನು ಒಣಗಿಸಿ ಸುಟ್ಟು ಉಪಯೋಗಿಸಬೇಕೆಂದು ತಿಳಿಸುತ್ತದೆ. ಮಾನಸೋಲ್ಲಾಸವು[೩೫] ದೀಪದ ಕಪ್ಪು ಮತ್ತು ಕುದಿಸಿದ ಅಕ್ಕಿ ಗಂಜಿಯನ್ನು ಮಿಶ್ರಣಗೊಳಿಸಿ ನಾದಿಕೊಂಡು ಕಡ್ಡಿಗಳನ್ನು ಮಾಡಿಕೊಂಡು ಒಣಗಿಸಿ ಉಪಯೋಗಿಸಲು ಸೂಚಿಸುತ್ತದೆ. ಇದರಿಂದ ಇದ್ದಲಿನ ಹಾಗೆ ಕಪ್ಪಾದ ಗೆರೆಗಳು ಮೂಡುತ್ತವೆ. ಈ ಬಗೆಯ 'ವರ್ತಿಕಾ' ಕಡ್ಡಿಯನ್ನು ಬಳಸಬಹುದಾಗಿದೆ. ಇವುಗಳಲ್ಲದೇ ಇನ್ನೂ ಅನೇಕ ವಿಧಾನಗಳು ವರ್ತಿಕಾ ತಯಾರಿಕೆ ಬಗೆಗೆ ಪ್ರಾಚೀನ ಗ್ರಂಥಗಳಲ್ಲಿ ಹೇಳಲ್ಪಟ್ಟಿವೆ.

೧. ಪ್ರಾಣಿ ಮೂಲ ಬಣ್ಣಗಳು

೨. ಸಸ್ಯ ಮೂಲ ಬಣ್ಣಗಳು

೩. ಖನಿಜ ಮೂಲ ಬಣ್ಣಗಳು

೪. ಲೋಹ ಮೂಲ ಬಣ್ಣಗಳು

೫. ರಾಸಾಯನಿಕ ಬಣ್ಣಗಳು

೧. ಪ್ರಾಣಿ ಮೂಲ ಬಣ್ಣಗಳು : ಪ್ರಾಣಿಗಳ ಮೂಲದಿಂದ ನಿರ್ಮಾಣವಾದ ಬಣ್ಣಗಳು ಈ ಗುಂಪಿನವುಗಳಾಗಿವೆ. ಭಿತ್ತಿ ಚಿತ್ರಗಳಲ್ಲಿ ಇವುಗಳ ಬಳಕೆಯ ಬಗೆಗೆ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲವಾದರೂ ಪ್ರಾಗೈತಿಹಾಸಿಕ ಭಿತ್ತಿ ಚಿತ್ರ ಕಲಾವಿದರು ಪ್ರಾಣಿಗಳ ರಕ್ತವನ್ನು ವರ್ಣ ಮಾಧ್ಯಮವಾಗಿ ಬಳಸಿರುವುದನ್ನು ಕೆಲವು ವಿದ್ವಾಂಸರು ಗುರುತಿಸಿದ್ದಾರೆ.[೩೬]

೨) ಸಸ್ಯ ಮೂಲ ಬಣ್ಣಗಳು : ಪ್ರಾಚೀನ ಭಿತ್ತಿ ಚಿತ್ರ ಕಲಾವಿದರು ಕೆಲವು ಗಿಡಗಳ ಹೂ, ಎಲೆ, ಹಣ್ಣು, ಬೀಜ, ಕಾಂಡ, ಚಿಗುರೆಲೆ ಮತ್ತು ಬೇರುಗಳಿಂದ ಬಣ್ಣ ತಯಾರಿಸಿಕೊಳ್ಳುತ್ತಿದ್ದರೆಂಬ[೩೭] ವಿವರಗಳು ದೊರೆಯುತ್ತವೆ. ಇಂಡಿಗೋ ಸಸ್ಯದಿಂದ ನೀಲಿ, ಬರ್ಚಗಿಡದಿಂದ ಹಳದಿ, ಮ್ಯಾಡರ್ ಎಂಬ ಸಸ್ಯದಿಂದ ಕೆಂಪು ಬಣ್ಣಗಳನ್ನು ಪ್ರಾಚೀನರು ತಯಾರಿಸುತ್ತಿದ್ದ ಬಗೆಗೆ ತಿಳಿದುಬರುತ್ತದೆ[೩೮]. ಬಾಳಿಕೆ ಮತ್ತು ಹೊಳಪಿನ ದೃಷ್ಟಿಯಿಂದ ಖನಿಜ ಮೂಲದ ಬಣ್ಣಗಳಿಗಿಂತ ಇವರು ಬೇಗ ಮಸುಕಾಗುವುದರಿಂದ ಇವುಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಿರಬಹುದು.

---

೩೫. Jayanth Chakravarthy : Techniques in Indian Mural Paintings, p.no.58

೩೬. Stella Kramrish (edt) : Vishnudharmottara, Vol-III, Chapter-27, Shloka 3

೩೭. G K. Gondekhar (edt) : Manasollasa, Vol-I, Chapter-46, Shloka 156

೩೮. Ganpathy T Shastri (edt) : Shilparatna, Vol-I, Chapter-40, Shloka-27

೩. ಖನಿಜ ಮೂಲ ಬಣ್ಣಗಳು : ಭೂಮಿಯಿಂದ ದೊರೆಯುವ ಕಲ್ಲು, ಮಣ್ಣು ಬೇರೆ ಬೇರೆ ಅದಿರುಗಳಿಂದ ಪಡೆಯುವ ಬಣ್ಣಗಳು ಖನಿಜ ಮೂಲ ಬಣ್ಣಗಳಾಗಿವೆ. ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳಲ್ಲಿ ಕೆಂಪು, ಹಳದಿ, ಬಿಳಿ ಮುಂತಾದ ವರ್ಣಗಳನ್ನು ಖನಿಜ ಮೂಲದಿಂದ ತಯಾರಿಸಿಕೊಳ್ಳಲಾಗಿದೆ. ಅಲ್ಲದೇ ಭಾರತದ ಅಜಂತಾ, ಎಲ್ಲೋರ, ಸಿತ್ತನಿವಾಸಲ್, ಭಾಗ್, ಕರ್ನಾಟಕದ ಬಾದಾಮಿ, ಹಂಪಿ, ಮೂಡಬಿದರೆ ಮುಂತಾದ ಕಡೆಗಳಲ್ಲಿ ರಚನೆಯಾದ ಭಿತ್ತಿಗಳಲ್ಲಿ ಖನಿಜ ಮೂಲ ಬಣ್ಣಗಳು ಬಳಕೆಯಾಗಿವೆ[೩೯] ಎಂಬುದಾಗಿ ತಿಳಿದುಬರುತ್ತದೆ.

೪. ಲೋಹ ಮೂಲದ ಬಣ್ಣಗಳು : ಪ್ರಾಚೀನರು ಕೆಲವು ಲೋಹಗಳಿಂದ ಬಣ್ಣ ಪಡೆದು ಭಿತ್ತಿ ಚಿತ್ರಗಳಿಗೆ ಲೇಪಿಸುತ್ತಿದ್ದರು. ಲೋಹಗಳನ್ನು ಸಂಸ್ಕರಿಸುವ ವಿಧಾನದಿಂದ ಪಡೆದ ವರ್ಣಗಳನ್ನು ಭಿತ್ತಿ ಚಿತ್ರಗಳಿಗೆ ಉಪಯೋಗಿಸುತ್ತಿದ್ದರಲ್ಲದೆ ಲೋಹವನ್ನು ತೆಳುವಾದ ಹಾಳೆಯಾಗಿ ಮಾಡಿಕೊಂಡು ಅವಶ್ಯವಿದ್ದಲ್ಲಿ ಕತ್ತರಿಸಿ ಅಂಟಿಸುತ್ತಿದ್ದರು. ಇಲ್ಲವೇ ಪುಡಿ ಮಾಡಿಕೊಂಡು ಅಥವಾ ಕರಗಿಸಿ ದ್ರವ ರೂಪದಲ್ಲಿ ಉಪಯೋಗಿಸುತ್ತಿದ್ದರು. ಪ್ರಾಚೀನರು ಚಿತ್ರಣಕ್ಕಾಗಿ ಬಣ್ಣ ತಯಾರಿಸಲು ಬಳಸುತ್ತಿದ್ದ ಲೋಹಗಳಲ್ಲಿ ಬಂಗಾರ, ಬೆಳ್ಳಿ, ತಾಮ್ರ, ಅಭ್ರಕ, ಸೀಸ, ಸತುವುಗಳು ಪ್ರಮುಖವಾಗಿವೆ.[೪೦]

೫. ರಾಸಾಯನಿಕ ಬಣ್ಣಗಳು : ಪ್ರಾಚೀನ ಭಿತ್ತಿಚಿತ್ರ ಕಲಾವಿದರು ಬಣ್ಣ ಪಡೆಯುತ್ತಿದ್ದ ಮೂಲಗಳು ಈ ತೆರನಾಗಿದ್ದರೆ, ಈ ಮೂಲಗಳಿಂದ ಪಡೆದ ವೈವಿಧ್ಯ ಬಣ್ಣಗಳನ್ನು ಚಿತ್ರಗಳಿಗೆ ಉಪಯೋಗಿಸುತಿದ್ದರು. ಅನೇಕ ಬಗೆಯ ವರ್ಣ ಛಾಯೆಗಳನ್ನು ಪ್ರಾಚೀನರು ಬಳಸುತ್ತಿದ್ದರೂ ಬಿಳಿ, ಕಪ್ಪು, ಕೆಂಪು, ಹಸಿರು, ಹಳದಿ ಎಂಬ ಪಂಚವರ್ಣಗಳನ್ನು ಮೂಲ ವರ್ಣಗಳೆಂದು ಪರಿಗಣಿಸುತ್ತಿದ್ದರು. ಇವೇ ಪಂಚವರ್ಣಗಳನ್ನೇ ಮೂಲ ವರ್ಣಗಳೆಂದು ಕರೆದು ಅವುಗಳ ಮಿಶ್ರಣದಿಂದ ಬೇರೆ ರೀತಿಯ ಮಿಶ್ರಣಗಳನ್ನು ಪಡೆಯಬೇಕೆಂದು ತಿಳಿಸುತ್ತದೆ. ವಿಷ್ಣುಧರ್ಮೋತ್ತರ,[೪೧] ಮಾನಸೋಲ್ಲಾಸ,[೪೨] ಶಿಲ್ಪರತ್ನ,[೪೩] ಕಶ್ಯಪ ಶಿಲ್ಪಶಾಸ್ತ್ರ[೪೪] ಮುಂತಾದ ಗ್ರಂಥಗಳು ಬಿಳಿ, ಕಪ್ಪು, ಕೆಂಪು, ಹಸಿರು, ಹಳದಿ ವರ್ಣಗಳನ್ನೇ ಮೂಲ ಬಣ್ಣಗಳೆಂದು ಹೆಸರಿಸಿವೆ.

ಬಿಳಿ : ಭಿತ್ತಿ ಚಿತ್ರಗಳ ರಚನೆಯಲ್ಲಿ ತುಂಬಾ ಮಹತ್ವದ ಬಣ್ಣವಾಗಿರುವುದರಿಂದಲೇ ಶಾಸ್ತ್ರಗ್ರಂಥಗಳು ಮೂಲ ವರ್ಣಗಳಲ್ಲಿ 'ಬಿಳಿ' ಯನ್ನು ಗುಂಪಿನ ಮೊದಲ ಸ್ಥಾನದಲ್ಲಿಯೇ ಯಾವಾಗಲೂ ಹೆಸರಿಸುತ್ತಾ ಬಂದಿವೆ.

---

೩೯. ಜಿ. ಜ್ಞಾನಾನಂದ (ಅನು) : ಕಾಶ್ಯಪ ಶಿಲ್ಪಶಾಸ್ತ್ರ, ಅಧ್ಯಾಯ-೮೮, ಪಟು-೬೫೮

೪೦. G K. Gondekhar (edt) : Manasollasa, Vol-I, Chapter-1, Shloka 137

೪೧. Ganpathy T Shastri (edt) : Shilparatna, Vol-I, Chapter-46, Shloka-28

೪೨. V. S. Agarwal (edt) : Samarangana Sutradhara, Chapter-72, Shloka 34

೪೩. Stella Kramrish (edt) : Vishnudharmottara, Vol-III, Chapter-40, Shloka 3

೪೪. Jayanth Chakravarthy : Techniques in Indian Mural Paintings, p.no.46

ಬಿಳಿ ಬಣ್ಣವನ್ನು ತಯಾರಿಸುವ ಬಗೆಗೂ ಶಾಸ್ತ್ರ ಗ್ರಂಥಗಳು ವಿವರಣೆ ನೀಡಿವೆ. ಮಾನಸೋಲ್ಲಾಸ[೪೫] ಮತ್ತು ಶಿಲ್ಪರತ್ನಗಳು[೪೬] ಬಿಳಿಯನ್ನು ಬಿಳಿಕಲ್ಲು, ಬಿಳಿ ಮಣ್ಣು, ಸುಣ್ಣ ಮತ್ತು ಕೊಲೈನ್ ಎಂಬ ಖನಿಜದಿಂದ ತಯಾರಿಸಿಕೊಳ್ಳಬೇಕೆಂದು ತಿಳಿಸುತ್ತವೆ. ಅಂತೆಯೇ ಸಮರಾಂಗಣ ಸೂತ್ರಧಾರವೂ[೪೭] ಬಿಳಿ ಕಲ್ಲಿನಿಂದ ತೇಯ್ದು ಬಣ್ಣ ಮಾಡಿಕೊಳ್ಳಬೇಕೆಂದು ಸೂಚಿಸುತ್ತದೆ. ವಿಷ್ಣುಧರ್ಮೋತ್ತರವು[೪೮] ಶಂಖದ ಪುಡಿ ಮತ್ತು ಕಪ್ಪೆ ಚಿಪ್ಪಿನ ಪುಡಿಯಿಂದ ಬಿಳಿ ಬಣ್ಣ ತಯಾರಿಸಲು ಹೇಳಿದೆ. ಹೀಗೆ ಅನೇಕ ಗ್ರಂಥಗಳು ಬಿಳಿ ಬಣ್ಣದ ಬಗೆಗೆ ಮಾಹಿತಿ ನೀಡುತ್ತವೆ. ಬಿಳಿ ವರ್ಣದಲ್ಲಿ ಒಂದೇ ಹೊಳಪಿರದೆ ಅನೇಕ ತರಹದ ಬಿಳಿ ವರ್ಣಗಳಿವೆ. ಗಂಧದ ಬಿಳಿ, ಶರದೃತುವಿನ ಬಿಳಿ, ಚಂದಿರನ ಬಿಳಿ, ಬಂಗಾರದ ಬಿಳಿ ಮುಂತಾದ ಅನೇಕ ವೈವಿಧ್ಯಗಳಿವೆ ಎಂದೂ ವಿಷ್ಣುಧರ್ಮೋತ್ತರ ವಿವರಿಸಿದೆ.

ಕಪ್ಪು : ಕಪ್ಪು ವರ್ಣವು ಭಾರತೀಯ ಭಿತ್ತಿ ಚಿತ್ರಗಳಲ್ಲಿ ವಿವಿಧ ರೀತಿಯಿಂದ ಬಳಕೆಗೊಂಡಿದೆ. ಕಪ್ಪು ವರ್ಣವನ್ನು ಚಿತ್ರಗಳಿಗೆ ಹೊರರೇಖೆ ಎಳೆಯಲು, ಕೂಡಲು, ಚಿತ್ರಿಸಲು, ಕಣ್ಣುಗಳನ್ನು ಚಿತ್ರಿಸಲು, ವರ್ಣಗಳನ್ನು ದಟ್ಟಗೊಳಿಸಿಕೊಳ್ಳಲು, ನಕ್ಷೆಗಳನ್ನು ಚಿತ್ರಿಸಲು ಹೀಗೆ ವಿವಿಧ ಬಗೆಯಲ್ಲಿ ಬಳಸಲಾಗಿದೆ. ಕಪ್ಪು ವರ್ಣವನ್ನು ಸಾಮಾನ್ಯವಾಗಿ ಕಾಡಿಗೆ, ಮಸಿ ಮತ್ತು ಕಪ್ಪು ಪಾಟೀ ಕಲ್ಲಿನಿಂದ ಪಡೆಯುತ್ತಿದ್ದರೆಂದು[೪೯] ಅಭಿಪ್ರಾಯವಿದೆ. ಮಾನಸೋಲ್ಲಾಸ[೫೦] ಗ್ರಂಥ ದೀಪದ ಕಪ್ಪಿನಿಂದ ಕಪ್ಪು ಬಣ್ಣ ತಯಾರಿಸಲು ತಿಳಿಸಿದ್ದಾರೆ. ಶಿಲ್ಪರತ್ನ[೫೧] ಮತ್ತು ವಿಷ್ಣುಧರ್ಮೋತ್ತರ[೫೨]ಗಳು ಇದರ ಜೊತೆಗೆ ಪಾಟೀ ಕಲ್ಲನ್ನು ತೇಯ್ದು ವರ್ಣ ತಯಾರಿಸಿಕೊಳ್ಳಲು ಸೂಚಿಸಿವೆ.

ಕಪ್ಪು ವರ್ಣದಲ್ಲಿ ಸಹಿತ ಪ್ರಾಚೀನರು ವಿವಿಧ ಛಾಯೆಯ ಕಪ್ಪುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ನೀಲ, ಶ್ಯಾಮಲ, ಕಾಲ, ಕೃಷ್ಣವೆಂಬ ಕಪ್ಪುವರ್ಣದ ಬಗೆಗಳನ್ನು ಕಾಶ್ಯಪ ಶಿಲ್ಪಶಾಸ್ತ್ರ[೫೩] ಗ್ರಂಥದಲ್ಲಿ ಹೇಳಿದ್ದಾರೆ. ವಿಷ್ಣುಧರ್ಮೋತ್ತರದಲ್ಲಿ[೫೪] ಕಾಡುಕೋಣದ ಕಪ್ಪು, ಮಂಗನ ಮುಖದ ಕಪ್ಪು, ನೀರು ತುಂಬಿದ ಮೋಡದ ಕಪ್ಪು ಮುಂತಾದ ಅನೇಕ ಬಗೆಯ ಕಪ್ಪು ವರ್ಣಗಳನ್ನು ಹೇಳಲಾಗಿದೆ.

---

೪೫. G. K. Gondekhar (edt) : Manasollasa, Vol-I, Chapter-1, Shloka 157

೪೬. Ganpathy T Shastri (edt) : Shilparatna, Vol-I, Chapter-46, Shloka-47

೪೭. Stella Kramrish (edt) : Vishnudharmottara, Vol-III, Chapter-40, Shloka 38

೪೮. ಜಿ. ಜ್ಞಾನಾನಂದ (ಅನು) : ಕಾಶ್ಯಪ ಶಿಲ್ಪಶಾಸ್ತ್ರ, ಅಧ್ಯಾಯ-೮೮, ಪು-೬೫೮

೪೯. C. Sivramamurthi : Chitrasutra of The Vishnudharmottara, p.no.59

೫೦. Jayanth Chakravarthy : Techniques in Indian Mural Paintings, p.no.48

೫೧. Ganpathy T Shastri (edt) : Shilparatna, Vol-I, Chapter-46, Shloka-115

೫೨. ಜಿ. ಜ್ಞಾನಾನಂದ (ಅನು) : ಕಾಶ್ಯಪ ಶಿಲ್ಪಶಾಸ್ತ್ರ, ಅಧ್ಯಾಯ-೮೮, ಪು-೬೫೯

೫೩. G. K. Gondekhar (edt) : Manasollasa, Vol-I, Chapter-1, Shloka 158

೫೪. H. Olden Burg : Harsha Charit, p.no. 297

ಕೆಂಪು ವರ್ಣ : ಪ್ರಾರಂಭಿಕ ಭಿತ್ತಿ ಚಿತ್ರಗಳಾದ ಪ್ರಾಗೈತಿಹಾಸಿಕ ಬಂಡೆ ಭಿತ್ತಿ ಚಿತ್ರಗಳಲ್ಲೇ ಕೆಂಪುವರ್ಣ ಉಪಯೋಗಗೊಂಡಿದೆ. ಪ್ರಾಗೈತಿಹಾಸಿಕ ಭಿತ್ತಿಚಿತ್ರಗಳಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಕೆಂಪು ವರ್ಣ ಬಳಕೆಗೊಂಡಿದೆ. ವಿವಿಧ ರೀತಿಯಲ್ಲಿ ವರ್ಣ ಛಾಯೆಗಳುಳ್ಳ ಕೆಂಪುಗಳನ್ನು ಪ್ರಾಚೀನರು ಉಪಯೋಗಿಸುತ್ತಿದ್ದರು. ಪ್ರಾಗೈತಿಹಾಸಿಕ ಕಾಲದಲ್ಲಿ ಸ್ವಾಭಾವಿಕವಾಗಿ ದೊರೆಯುವ ಕಬ್ಬಿಣದ ಆಕ್ಸೈಡ್, ಮ್ಯಾಂಗನೀಸ್, ಹೆಮಟೈಟ್‌ಗಳಂತಹ ಅದಿರುಗಳಿಂದ ಕೆಂಪು ವರ್ಣ ಪಡೆಯುತಿದ್ದರು. ಕೆಂಪು ವರ್ಣವನ್ನು ತಯಾರಿಸುವ ಕುರಿತಾಗಿ ಶಿಲ್ಪಶಾಸ್ತ್ರಗಳು ವಿವರಣೆ ನೀಡುತ್ತವೆ. ಶಿಲ್ಪರತ್ನವು[೫೫] ಗೈರಿಕಾ ಎಂಬ ಕೆಂಪು ಮಣ್ಣಿನ ಗಟ್ಟಿಯಿಂದ ಕೆಂಪು ವರ್ಣ ತಯಾರಿಸಬೇಕೆಮದು ಹೇಳುತ್ತದೆ. ಕಾಶ್ಯಪ ಶಿಲ್ಪಶಾಸ್ತ್ರವು[೫೬] ಹಳದಿ ಬಣ್ಣದ ಕಲ್ಲನ್ನು ಕುಟ್ಟಿ ಪುಡಿ ಮಾಡಿ ಅದಕ್ಕೆ ತೆಂಗಿನ ಕಾಯಿಯ ನೀರು ಬೆರೆಸಿ ಬೆಂಕಿಯಲ್ಲಿ ಕಾಯಿಸುವುದರಿಂದ ಕೆಂಪು ವರ್ಣ ತಯಾರಾಗುತ್ತದೆಂದು ತಿಳಿಸುತ್ತದೆ. ಮಾನಸೋಲ್ಲಾಸವು[೫೭] ಸಹಿತ ಕೆಂಪು ಮಣ್ಣಿನಿಂದ ಕೆಂಪು ವರ್ಣ ಪಡೆಯಲು ಸೂಚಿಸುತ್ತದೆ. ಹೀಗೆ ಹಲವಾರು ಗ್ರಂಥಗಳು ಕೆಂಪುವರ್ಣ ತಯಾರಿಕೆಯ ಬಗೆಗೆ ವಿವರಿಸಿವೆ. ಕೆಂಪು ವರ್ಣದಲ್ಲಿ ಬಂದೂಕ, ಹೂವಿನ ಕೆಂಪು, ಕುಂಕುಮದ ಕೆಂಪು, ರಕ್ತದ ಕೆಂಪು, ಘುಟಕೀ ಹೂವಿನ ಕೆಂಪು, ಮಂದಾರ ಹೂಗಳ ಕೆಂಪು, ಮಂಜಿಸ್ತ ಕೆಂಪು, ಸೂರ್ಯೋದಯದ ಕೆಂಪು ಹೀಗೆ ವಿವಿಧ ಬಗೆಗಳಿವೆ ಎಂದು ಹರ್ಷ ಚರಿತದಲ್ಲಿ[೫೮] ಹೇಳಲಾಗಿದೆ.

ನೀಲಿ : ನೀಲಿ ವರ್ಣವನ್ನು ಖನಿಜ ಮತ್ತು ಸಸ್ಯ ಮೂಲಗಳೆರಡರಿಂದಲೂ ಪಡೆಯುತ್ತಿದ್ದರು ಎಂಬ ಬಗ್ಗೆ ವಿವರಗಳು ಸಿಗುತ್ತವೆ. ಇಂಡಿಗೋ ಎಂಬ ಸಸ್ಯದಿಂದ ನೀಲಿ ವರ್ಣ ಪಡೆಯುವುದು ಭಾರತದಲ್ಲಿ ಪ್ರಾಚೀನ ಕಾಲದಲ್ಲೇ ಕೂಡಿಯಲಿ[೫೯] ಪ್ರಕೃತಿಯಲ್ಲಿ ದೊರೆಯುವ 'ರಾಜಾವರ್ತ' ವೆಂಬ ನೀಲಿ ಕಲ್ಲಿನಿಂದ ನೀಲಿವರ್ಣ ಪಡೆಯುವುದು ಪ್ರಮುಖ ವಿಧಾನವಾಗಿತ್ತಲ್ಲದೇ ಅಜಂತಾ ಮತ್ತಿತರೆ ಭಾರತೀಯ ಭಿತ್ತಿಚಿತ್ರಗಳಲ್ಲಿ ಇದರಿಂದ ತಯಾರಿಸಿದ ನೀಲಿ ಹೆಚ್ಚಾಗಿ ಬಳಕೆಗೊಂಡಿದೆ ಎಂಬ ಅಭಿಪ್ರಾಯವಿದೆ.[೬೦]

ಹಳದಿ : ಹಳದಿ ವರ್ಣವೂ ಸಹಿತ ಕೆಂಪುವರ್ಣದ ಹಾಗೆ ಪ್ರಾಚೀನ ಕಾಲದಿಂದಲೂ ಭಿತ್ತಿಚಿತ್ರಗಳಲ್ಲಿ ಬಳಕೆಯಾಗುತ್ತ ಬಂದಿದೆ. ಪ್ರಾಚೀನ ಶಾಸ್ತ್ರ ಗ್ರಂಥಗಳೂ ಹಳದಿ ವರ್ಣದ ಬಗೆಗೆ

---

೫೫. ಜಿ. ಎ. ಕಲ್ಲೂರ : ಬಣ್ಣಗಳು ಮತ್ತು ಬಣ್ಣ ಹಾಕುವ ಕಲೆ, ಪು–೮

೫೬. Motichandra : Jain Miniature Painting form Western India, p.no.82

೫೭. Priyabala Shah : Vishnudharmottara, Vol-III, Chapter-40, Shloka 13 to 16

೫೮. Ganpathy T Shastri (edt) : Shilparatna, Vol-I, Chapter-46, Shloka-29

೫೯. Yashodhar Mathpal : Pre-Historic Rock Paintings of Bhimbetka, p.no.189

೬೦. Priyabala Shah : Vishnudharmottara, Vol-III, Chapter-92, Shloka 8 to 9

ವಿವರ ನೀಡುತ್ತದೆ. ವಿಷ್ಣುಧರ್ಮೋತ್ತರವು[೬೧] ಹಳದಿ ಬಣ್ಣಕ್ಕಾಗಿ ಹರಿದಾಳವನ್ನು ಉಪಯೋಗಿಸಬೇಕು ಎನ್ನುತ್ತದೆ. ಶಿಲ್ಪರತ್ನವು[೬೨] ಕಾಡಿನಲ್ಲಿ ಬೆಳೆಯುವ ಒಂದು ರೀತಿಯ ಸಸ್ಯದಿಂದ ಹಳದಿ ವರ್ಣ ಪಡೆಯಲು ಹೇಳಿದೆ. ಹೀಗೆ ಹಲವಾರು ಪ್ರಕಾರದಲ್ಲಿ ಹಳದಿ ವರ್ಣ ತಯಾರಿಸುವ ವಿವರಗಳು ಗ್ರಂಥದಲ್ಲಿ ದೊರೆಯುತ್ತದೆ. ಹಳದಿ ವರ್ಣಗಳಲ್ಲೂ ಹಲವು ಬಗೆಯ ಛಾಯೆಗಳನ್ನು ಪ್ರಾಚೀನ ಗ್ರಂಥಗಳಲ್ಲಿ ಹೇಳಿದೆ. ಸ್ವರ್ಣ, ಪಿರಂತ, ಪೀತ, ಹರಿತ ಎಂಬ ವಿಧಗಳನ್ನು ಕಾಶ್ಯಪ ಶಿಲ್ಪಶಾಸ್ತ್ರದಲ್ಲಿ ಹೇಳಲಾಗಿದೆ. ಮೇಲೆ ಹೇಳಲಾದ ಈ ಪಂಚವರ್ಣಗಳ ಮಿಶ್ರಣದಿಂದ ಬೇರೆ ಬೇರೆ ವರ್ಣಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಮಿಶ್ರ ಬಣ್ಣಗಳ ಬಗೆಗೆ ಹಲವಾರು ವಿವರಣೆಯು ಪ್ರಾಚೀನ ಗ್ರಂಥಗಳಲ್ಲಿವೆ. ಯಾವ ಯಾವ ಬಣ್ಣಗಳನ್ನು ಸೇರಿಸಿದರೆ ಯಾವ ಬಣ್ಣ ಬರುತ್ತದೆ ಎಂಬ ಸವಿಸ್ತಾರವಾದ ವಿವರಣೆಗಳನ್ನು ನಮ್ಮ ಪ್ರಾಚೀನ ಗ್ರಂಥಗಳಿಂದ ತಿಳಿಯಬಹುದಾಗಿದೆ.

೩. ಅಂಟು ದ್ರಾವಕಗಳು

ಪ್ರಾಚೀನ ಭಿತ್ತಿ ಚಿತ್ರ ಕಲಾವಿದರು ತಮ್ಮ ಚಿತ್ರಗಳಿಗಾಗಿ ವರ್ಣ ತಯಾರಿಸಿಕೊಳ್ಳುವಾಗ ಕೆಲವು ಬಗೆಯ ಅಂಟು ದ್ರಾವಕಗಳನ್ನು ಬಣ್ಣದಲ್ಲಿ ಬೆರೆಸುತ್ತಿದ್ದರು. ಈ ಅಂಟುಗಳು ವರ್ಣವು ಉದುರದಂತೆ ಗಟ್ಟಿಯಾಗಿ ಬಂಧಿಸುವ ಕೆಲಸ ಮಾಡುತ್ತವಾದ್ದರಿಂದ ಇವುಗಳಿಗೆ ವರ್ಣಬಂಧಕಗಳೆಂದೂ ಕರೆಯುತ್ತಾರೆ. ಭಿತ್ತಿ ಚಿತ್ರಗಳ ವರ್ಣ ತಯಾರಿಕೆಯಲ್ಲಿ ಉಪಯೋಗಿಸುವ ಅಂಟು ದ್ರಾವಕಗಳನ್ನು ಎರಡು ಬಗೆಯಲ್ಲಿ ವಿಂಗಡಿಸಬಹುದು.

೧. ಪ್ರಾಣಿಜನ್ಯ ಅಂಟು ದ್ರಾವಕಗಳು

೨. ಸಸ್ಯಜನ್ಯ ಅಂಟು ದ್ರಾವಕಗಳು

೧. ಪ್ರಾಣಿಜನ್ಯ ಅಂಟು ದ್ರಾವಕಗಳು : ಪ್ರಾಣಿಗಳ ಮೂಲದಿಂದ ಪಡೆಯುವ ಅಂಟುಗಳು ಈ ಗುಂಪಿನವುಗಳಾಗಿವೆ. ಪ್ರಾಣಿಜನ್ಯ ಅಂಟು ದ್ರಾವಕಗಳನ್ನು ವರ್ಣಚಿತ್ರಕ್ಕೆ ಬಳಸಿರುವುದು ಪ್ರಾಗೈತಿಹಾಸಿಕ ಕಾಲದಲ್ಲಿಯೇ ಕಂಡುಬರುತ್ತದೆಯಲ್ಲದೇ ಪ್ರಾಣಿಗಳ ರಕ್ತ, ಕೊಬ್ಬು, ಎಲುಬಿನೊಳಗಿನ ಜಿಗುಟು ಪದಾರ್ಥಗಳನ್ನು ಈ ಅವಧಿಯಲ್ಲಿ ವರ್ಣಬಂಧಕಗಳಾಗಿ ಉಪಯೋಗಿಸಲಾಗಿದೆ ಎಂದು ವಿದ್ವಾಂಸರು[೬೩] ಅಭಿಪ್ರಾಯ ಪಡುತ್ತಾರೆ. ಪ್ರಾಚೀನ ಗ್ರಂಥಗಳಲ್ಲಿಯೂ ಪ್ರಾಣಿಜನ್ಯ ಅಂಟುದ್ರಾವಕದ ಬಗೆಗೆ ವಿವರಗಳಿವೆ. ವಿಷ್ಣುಧರ್ಮೋತ್ತರವು[೬೪] ಗೂಳಿಯ ಕೋಡು, ಕಾಡೆಮ್ಮೆಯ ಕೋಡು, ಆಡಿನ

೬೧. Jayanth Chakravarthy : Techniques in Indian Mural Paintings, p.no.60

೬೨. Yashodhar Mathpal : Pre-Historic Rock Paintings of Bhimbetka, p.no.186

೬೩. ಅದೇ., ಪು-೮೯

೬೪. Ganpathy T Shastri (edt) : Shilparatna, Vol-I, Chapter-46, Shloka-57 to 58

ಚರ್ಮ, ಕಾಡೆಮ್ಮೆ ಮತ್ತು ಆಕಳ ಚರ್ಮಗಳಿಂದ ವಜ್ರ ಲೇಪ ತಯಾರಿಸಿ ಅಂಟು ದ್ರಾವಕ ಮಾಡಿಕೊಳ್ಳಬೇಕೆಂದು ತಿಳಿಸುತ್ತದೆ. ಇದೇ ವಿಧಾನವನ್ನು ಶಿಲ್ಪರತ್ನವೂ ಹೇಳಿವೆ[೬೫] ಭಿತ್ತಿಚಿತ್ರ ರಚನೆಯಲ್ಲಿ ವಜ್ರಲೇಪವನ್ನು ಸಾಮಾನ್ಯವಾಗಿ ಎಲ್ಲ ಪ್ರಾಚೀನ ಗ್ರಂಥಗಳೂ ಹೇಳುವುದು. ಇವುಗಳಲ್ಲದೇ ಹಾಲಿನ ಕೆನೆ, ಮೊಟ್ಟೆ ಲೋಳೆ ಮುಂತಾದವುಗಳಿಂದಲೂ ವರ್ಣಕ್ಕಾಗಿ ಅಂಟುಗಳನ್ನು ಪಡೆಯಲಾಗುತ್ತದೆ[೬೬] ಎಂಬುದಾಗಿ ತಿಳಿದುಬರುತ್ತದೆ.

೨. ಸಸ್ಯಜನ್ಯ ಅಂಟು ದ್ರಾವಕಗಳು : ಭಿತ್ತಿಚಿತ್ರಣಕ್ಕಾಗಿ ಪ್ರಾಣಿಜ್ಯನ ಅಂಟುಗಳನ್ನು ಉಪಯೋಗಿಸಿದಂತೆಯೇ ಸಸ್ಯಜನ್ಯ ಅಂಟುಗಳನ್ನು ಪ್ರಾಚೀನರು ಉಪಯೋಗಿಸಿದ್ದಾರೆ. ಸಸ್ಯಗಳಿಂದ ಅತ್ಯಂತ ಸುಲಭವಾಗಿ ಮತ್ತು ಸಹಜವಾಗಿ ಇದು ದೊರೆಯುವುದರಿಂದ ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಚಿತ್ರಣಕ್ಕಾಗಿ ಬಳಸಿರುವ ಸಾಧ್ಯತೆ ಇದೆ. ಸಸ್ಯಗಳಿಂದ ಸ್ವಾಭಾವಿಕವಾಗಿ ಇವುಗಳನ್ನು ಪಡೆಯುತ್ತಿದ್ದರೂ ಕೆಲವು ಸಂದರ್ಭಗಳಲ್ಲಿ ಸಸ್ಯದ ಕಾಂಡಗಳಿಗೆ ಗಾಯ ಮಾಡಿ ಇಲ್ಲವೇ ಸಸ್ಯದ ಕಾಯಿ, ಹಣ್ಣು, ಎಲೆ, ಹೂ ಮುಂತಾದವುಗಳನ್ನು ಜಜ್ಜಿ ಅದರಿಂದಲೂ ಅಂಟುಗಳನ್ನು ಪಡೆಯುತ್ತಿದ್ದರು.

೪. ಬಣ್ಣ ಮಿಶ್ರಣ ಮಾಡುವ ಬಟ್ಟೆ

ಚಿತ್ರಣಕ್ಕಾಗಿ ಬಣ್ಣವನ್ನು ಮಿಶ್ರ ಮಾಡಿಕೊಳ್ಳಲು ತಟ್ಟೆಯಂತಹ ಸಾಧನ ಅವಶ್ಯಕತೆ ಇದೆ. ಪ್ರಾಗೈತಿಹಾಸಿಕ ಚಿತ್ರ ಕಲಾವಿದರು ಬಂಡೆಗಳ ತಗ್ಗು, ಎಲುಬಿನ ಟೊಳ್ಳು, ಎಲೆಗಳ ಡೊಣ್ಣೆಗಳಲ್ಲಿ ಬಣ್ಣ ಕಲಸಿಕೊಂಡ ಕುರುಹುಗಳು ಕಂಡುಬರುತ್ತವೆ.[೬೭] ನಂತರದಲ್ಲಿ ತೆಂಗಿನ ಚಿಪ್ಪು, ಮಣ್ಣಿನ ಪಾತ್ರೆ, ಲೋಹದ ಪಾತ್ರೆಗಳನ್ನು ಬಳಸುವುದು ತಿಳಿದು ಬರುತ್ತದೆ. ಈಗಲೂ ಹಳ್ಳಿಗಾಡಿನಲ್ಲಿ ತೆಂಗಿನ ಚಿಪ್ಪು, ಮಣ್ಣಿನ ಬಟ್ಟಲುಗಳಲ್ಲಿ ಬಣ್ಣ ಕಲಸಿಕೊಂಡು ಚಿತ್ರಣ ಮಾಡುತ್ತಾರೆ.

೫. ಕುಂಚಗಳು

ವರ್ಣಚಿತ್ರ ರಚನೆಗೆ ಕುಂಚವು ಅತ್ಯವಶ್ಯಕವಾಗಿದೆ. ಕಲಾವಿದರು ಕಾಲದಿಂದ ಕಾಲಕ್ಕೆ ಅನೇಕ ಬಗೆಯ ಕುಂಚಗಳನ್ನು ಬಳಸುತ್ತಾ ಬಂದಿದ್ದಾರೆ. ಪ್ರಾಗೈತಿಹಾಸಿಕ ಭಿತ್ತಿ ಚಿತ್ರ ಕಲಾವಿದರು ಪ್ರಾಣಿಗಳ ಕೂದಲು, ಗಿಡದ ಟೊಂಗೆಯನ್ನು ಜಜ್ಜಿ ಎಳೆಯಾಗಿ ಮಾಡಿದ ಸಾಧನ, ಹುಲ್ಲಿನ ಗರಿಕೆ ಮುಂತಾದವುಗಳಿಂದ ಮಾತ್ರವಲ್ಲದೆ ನಮ್ಮ ಕೈ ಬೆರಳಿನಿಂದಲೂ ಬಣ್ಣ ಲೇಪಿಸುವುದನ್ನು[೬೮] ವಿದ್ವಾಂಸರು ಗುರುತಿಸಿದ್ದಾರೆ.

---

೬೫. G K. Gondekhar (edt) : Manasollasa, Vol-II, Chapter-1, Shloka 145 to 148

೬೬. V. S. Agarwal (edt) : Samarangana Sutradhara, Chapter-73, Shloka 12 to 14

೬೭. Jayanth Chakravarthy : Techniques in Indian Mural Paintings, p.no.13

೬೮. J. C. Nagpal : Mural Paintings in India, p.no.18

ಪ್ರಾಚೀನ ಗ್ರಂಥಗಳೂ ಕುಂಚಗಳ ಕುರಿತಾಗಿ ವಿವರಣೆ ಕೊಡುತ್ತವೆ. ಶಿಲ್ಪರತ್ನವು[೧೯] ಸೂಕ್ಷ್ಮ, ಮಧ್ಯಮ, ವಿಶಾಲ ಎಂಬ ಮೂರು ಬಗೆಯ ಕುಂಚಗಳನ್ನು ಹೇಳಿ ಅವುಗಳನ್ನು ಅನುಕ್ರಮವಾಗಿ ಕಾಡು ಇಲಿಯ ಬಾಲ, ಆಡಿನ ಹೊಟ್ಟೆಯ ಬುಡದ ಕೂದಲು, ಕರುವಿನ ಕಿವಿಯ ಕೂದಲುಗಳಿಂದ ನಿರ್ಮಿಸಬೇಕೆಂದು ತಿಳಿಸುತ್ತಾರೆ. ಮಾನಸೋಲ್ಲಾಸವು[೨೦] ಸೂಕ್ಷ್ಮ, ಸ್ಥೂಲ, ಮಧ್ಯಮ ಎಂಬ ಕುಂಚದ ಬಗೆಗಳನ್ನು ಹೇಳಿ ಅವುಗಳನ್ನು ಯಾವ ರೀತಿ ತಯಾರಿಸಿಕೊಳ್ಳಬೇಕೆಂಬುದರ ವಿವರಣೆ ಕೊಡುತ್ತದೆ. ಸಮರಾಂಗಣ ಸೂತ್ರಧಾರ[೨೧]ವು ಕುರ್ಚ, ಹಸ್ತಕುರ್ಚ, ಭಾಸ ಕುರ್ಚ, ಕಲ್ಲು ಕುರ್ಚ, ವರ್ತಿನಿ ಕುರ್ಚ ಎಂಬ ಐದು ಬಗೆಯ ಕುಂಚಗಳನ್ನು ಹೇಳುತ್ತಲೇ ಅವುಗಳನ್ನು ಯಾವ ಮೂಲದಿಂದ ಹೇಗೆ ತಯಾರಿಸಿಕೊಳ್ಳಬೇಕೆಂದೂ ತಿಳಿಸುತ್ತದೆ. ಇವುಗಳಲ್ಲದೇ ಇನ್ನೂ ಅನೇಕ ಬಗೆಯ ವಿವರಣೆಗಳು ಕುಂಚದ ಬಗೆಗೆ ಪ್ರಾಚೀನ ಗ್ರಂಥಗಳಲ್ಲಿವೆ. ಬೇರೆ ಬೇರೆ ಕೆಲಸಗಳಿಗೆ ಮತ್ತು ವರ್ಣಗಳಿಗೆ ಬೇರೆ ಬೇರೆ ಕುಂಚಗಳನ್ನು ಬಳಸಬೇಕೆಂದೂ ಹೇಳಲಾಗಿದೆ.

ಭಿತ್ತಿಚಿತ್ರ ರಚನಾ ವಿಧಾನ

ಭಿತ್ತಿ ಚಿತ್ರ ರಚನಾಕಾರರು ಒಂದೇ ಬಾರಿಗೆ ಚಿತ್ರ ರಚನೆಯನ್ನು ಮುಕ್ತಾಯಗೊಳಿಸದೇ ಹಂತ ಹಂತವಾಗಿ ಚಿತ್ರ ರಚನೆ ಮಾಡುತ್ತಿದ್ದರು. ಅಲ್ಲದೆ ಬೇರೆ ಬೇರೆ ವಿಧಾನಗಳಿಂದಲೂ ಚಿತ್ರ ರಚಿಸುತ್ತಿದ್ದರೆಂಬುದು ತಿಳಿದು ಬರುತ್ತದೆ. ಭಿತ್ತಿ ಚಿತ್ರ ರಚನೆಯ ಒಟ್ಟು ಪ್ರಕ್ರಿಯೆಯನ್ನು ಮುಖ್ಯವಾಗಿ ಎರಡು ಹಂತಗಳಲ್ಲಿ ವಿಭಾಗಿಸಬಹುದು.

೧. ಭಿತ್ತಿ ಚಿತ್ರ ರಚನಾ ಪೂರ್ವದ ಮೊದಲ ಹಂತ

೨. ಭಿತ್ತಿ ಚಿತ್ರ ರಚನಾ ದ್ವಿತೀಯ ಹಂತ

೧. ಭಿತ್ತಿ ಚಿತ್ರ ರಚನಾ ಪೂರ್ವದ ಮೊದಲ ಹಂತ : ಚಿತ್ರಗಳ ಪ್ರಮಾಣ, ಅಳತೆ ವಿಧಾನ, ಸೂತ್ರಗಳು, ನವಸ್ಥಾನಗಳು, ಚಿತ್ರದ ಷಡಂಗಗಳು ಹೀಗೆ ಚಿತ್ರ ರಚನೆ ಪೂರ್ವದಲ್ಲಿ ಕಲಾವಿದರು ಗಮನಿಸತಕ್ಕ ಅಂಶಗಳು ಇದರಲ್ಲಿ ಒಳಗೊಳ್ಳುತ್ತವೆ. ಪ್ರಾಚೀನರು ಪ್ರತಿಯೊಂದು ಚಿತ್ರಗಳನ್ನೂ ಅಳತೆ ಮತ್ತು ಪ್ರಮಾಣ ಬದ್ಧವಾಗಿ ರಚಿಸುತ್ತಿದ್ದುದು ಕಂಡು ಬರುತ್ತದೆ. ದೇವತಾ ಚಿತ್ರಗಳ ಪ್ರಮಾಣವೇನು? ಮನುಷ್ಯ ಚಿತ್ರಗಳ ಪ್ರಮಾಣವೇನು ? ಪ್ರಾಣಿ ಪಕ್ಷಿಗಳ ಅಳತೆಗಳೇನು ? ಎಂಬ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ವಿವರಣೆಗಳಿವೆ.

---

೧೯. Ganpathy T Shastri (edt) : Shilparatna, Vol-I, Chapter-46, Shloka 57 to 58

೨೦. G. K. Gondekhar (edt) : Manasollasa, Vol-III, Chapter-1, Shloka 145 to 148

೨೧. V. S. Agarwal (edt) : Samarangana Sutradhara, Chapter-73, Shloka 12 to 14

೨. ಭಿತ್ತಿ ಚಿತ್ರ ರಚನಾ ದ್ವಿತೀಯ ಹಂತ : ಭಿತ್ತಿ ಚಿತ್ರ ರಚನಾ ಪೂರ್ವದಲ್ಲಿ ಕಲಾವಿದನು ಗಮನಿಸದಿಂತಹ ಅಂಶಗಳಿಗನುಸಾರವಾಗಿ ಚಿತ್ರ ರಚನೆ ಮಾಡುವುದು ಈ ಹಂತದಲ್ಲಿ ನಡೆಯುತ್ತದೆ. ಪ್ರಾಚೀನ ಭಿತ್ತಿ ಚಿತ್ರ ಕಲಾವಿದರು ಚಿತ್ರ ರಚನೆ ಮಾಡುವಾಗ ಒಂದೇ ಹಂತದಲ್ಲಿ ಪೂರ್ಣಗೊಳಿಸದೇ ವಿವಿಧ ಹಂತದಲ್ಲಿ ಪೂರ್ಣಗೊಳಿಸುತ್ತಿದ್ದರು. ಪ್ರಾಚೀನ ಶಾಸ್ತ್ರಗ್ರಂಥಗಳಲ್ಲಿ ಸಹಿತ ಭಿತ್ತಿಚಿತ್ರ ರಚನೆಯ ಹಂತಗಳ ಬಗೆಗೆ ವಿವರಗಳಿವೆ. ವಿಷ್ಣುಧರ್ಮೋತ್ತರ, ಪಂಚದಶಿ, ಸಮರಾಂಗಣ ಸೂತ್ರಧಾರ, ಮಾನಸೋಲ್ಲಾಸ ಮುಂತಾದ ಗ್ರಂಥಗಳು ಚಿತ್ರ ರಚನಾ ಹಂತಗಳ ಕುರಿತಾಗಿ ವಿವರಿಸುತ್ತವೆ. ಈ ಗ್ರಂಥಗಳ ಪ್ರಕಾರ ಭಿತ್ತಿಚಿತ್ರ ರಚನೆಯಲ್ಲಿ ಪ್ರಾಚೀನರು ಪ್ರಮುಖವಾಗಿ ಆರು ಹಂತಗಳನ್ನೂ ಅನುಸರಿಸುತ್ತಿದ್ದರೆಂದು ಹೇಳಬಹುದು. ಅವು ಹೀಗಿವೆ.

೧. ಇದ್ದಿಲಿನಿಂದ ರೇಖಾಕೃತಿ ಬರೆಯುವ ಲೇಖ್ಯ ಕರ್ಮಹಂತ

೨. ವರ್ಣ ರಹಿತ ರೇಖೆ ಎಳೆಯುವ ರೇಖಾ ಕರ್ಮಹಂತ

೩. ವರ್ಣಲೇಪಿಸುವ ವರ್ಣ ಕರ್ಮಹಂತ

೪. ವರ್ಣ ವೈವಿಧ್ಯತೆ ರೂಪಿಸುವ ವರ್ತನ ಕರ್ಮ ಹಂತ

೫. ಚಿತ್ರಕ್ಕೆ ಹೊರ ರೇಖೆ ಎಳೆಯುವ ಲೇಖನ ಕರ್ಮ ಹಂತ

೬. ಚಿತ್ರಕ್ಕೆ ಕಳೆಕಟ್ಟುವ ದ್ವಿಕ ಕರ್ಮಹಂತ

೧. ಲೇಖ್ಯ ಕರ್ಮ : ಭಿತ್ತಿಯ ಮೇಲೆ ಸೀಸದ ಕಡ್ಡಿ ಇಲ್ಲವೇ ಇದ್ದಿಲಿನಿಂದ ರೇಖಾಕೃತಿಗಳನ್ನು ಮೊದಲು ರಚಿಸುವ ಹಂತ ಇದಾಗಿದೆ. ಚಿತ್ರಕಾರರನ್ನು ತನ್ನ ಮನದಲ್ಲಿ ಕಲ್ಪಿಸಿಕೊಂಡ ದೃಶ್ಯ ಸಂಯೋಜನೆಯನ್ನು ಭಿತ್ತಿಯ ಮೇಲೆ ಮೂಡಿಸುವ ಕ್ರಿಯೆ ಇಲ್ಲಿ ನಡೆಯುತ್ತದೆ. ಯಾವ ಚಿತ್ರ ಎಲ್ಲಿ ಬರಬೇಕು? ಯಾವ ಚಿತ್ರ ದೊಡ್ಡದು? ಯಾವ ಚಿತ್ರ ಸಣ್ಣದು? ಹೇಗೆ ಆಕೃತಿಗಳನ್ನು ಸಂಯೋಜನೆಗಳಿಸಬೇಕು? ಎಂದು ಮೊದಲು ಮನಸ್ಸಿನಲ್ಲಿ ಕಲ್ಪಿಸಿಕೊಂಡು ನಂತರ ರೇಖಾಕೃತಿ ಚಿತ್ರಿಸಲು ತೊಡಗುತ್ತಾನೆ. ಈ ಹಂತವು ನೇರವಾಗಿ ಮನಸ್ಸಿನ ಜೊತೆಗೆ ಸಂಬಂಧ ಹೊಂದಿರುವುದರಿಂದ ಭಿತ್ತಿ ಚಿತ್ರ ರಚನೆಯಲ್ಲಿ ಈ ಹಂತವನ್ನು ಮಹತ್ವದ ಹಂತವೆಂದು ಪರಿಗಣಿಸುತ್ತಿದ್ದರು ಈ ರೇಖಾಕೃತಿಗಳು ಕಲಾವಿದನ ಅನಿಸಿಕೆಯಂತೆ ಮೂಡಿ ಬರದಿದ್ದರೆ, ಅವುಗಳನ್ನು ಅಳಿಸಿ ಮತ್ತೆ ಬರೆಯುತ್ತಿದ್ದರು. ಅದಕ್ಕಾಗಿಯೇ ಅಳಿಸಲು ಅನುಕೂಲವಾಗುವಂತೆ ಪ್ರಥಮ ರೇಖೆಗಳನ್ನು ಯಾವಾಗಲೂ ಇದ್ದಿಲು ಅಥವಾ ಕಪ್ಪು ಕಡ್ಡಿಗಳಿಂದ ರಚಿಸುತ್ತಿದ್ದರು.

೨. ರೇಖಾ ಕರ್ಮ : ಸೀಸದ ಕಡ್ಡಿ ಇಲ್ಲವೇ ಇದ್ದಲಿನಿಂದ ಪ್ರಥಮ ಹಂತದ ರೇಖಾಚಿತ್ರ ರಚಿಸಿದ ನಂತರ ಅದರಲ್ಲಿರುವ ತಪ್ಪು ತಡೆಗಳನ್ನು ಸರಿಪಡಿಸಿಕೊಂಡು ಇದ್ದಿಲಿನಿಂದ ರಚಿಸಿದ

ರೇಖೆಯ ಮೇಲೆ ಮತ್ತು ಕುಂಚದಿಂದ ವರ್ಣ ರೇಖೆ ಎಳೆಯುವ ಹಂತ ಇದಾಗಿದೆ. ರೇಖಾಕರ್ಮದ ಈ ವರ್ಣ ರೇಖೆಗಳನ್ನು ಕೆಂಪು ಇಲ್ಲವೇ ಕಂದುಗೆಂಪು ವರ್ಣದಿಂದ ಎಳೆಯಬೇಕೆಂದು ಪ್ರಾಚೀನ ಗ್ರಂಥಗಳು ಹೇಳುತ್ತವೆ.

೩. **ವರ್ಣ ಕರ್ಮ :** ಕೆಂಪು ಬಣ್ಣ ಉಪಯೋಗಿಸಿ ಚಿತ್ರಗಳ ಹೊರರೇಖೆಗಳನ್ನು ಕುಂಚದಿಂದ ಎಳೆದ ನಂತರ ಅವಶ್ಯವಿದ್ದಲ್ಲಿ ಉಚಿತವಾದ ವರ್ಣಗಳನ್ನು ಚಿತ್ರಗಳಿಗೆ ಲೇಪಿಸುವ ಹಂತ ಇದಾಗಿದೆ. ಈ ವರ್ಣಲೇಪನ ಹಂತ ಮಹತ್ವದ್ದಾಗಿದ್ದು ಕಲಾವಿದನ ವರ್ಣಜ್ಞಾನವನ್ನು ಒರೆಗೆ ಹಚ್ಚುವ ಘಟ್ಟವಾಗಿದೆ. ಯಾವ ಚಿತ್ರಕ್ಕೆ ಯಾವ ವರ್ಣ ಲೇಪಿಸಬೇಕು? ಗಡಸು ವರ್ಣಗಳಾವುವು? ಯಾವ ವರ್ಣ ಕೂಡಿಸಿದರೆ ಯಾವ ವರ್ಣ ತಯಾರಾಗುವುದು? ಯಾವ ವರ್ಣದ ಗುಣಧರ್ಮವೇನು? ಮುಂತಾದ ಎಲ್ಲಾ ಸಂಗತಿಗಳನ್ನು ಅರಿತುಕೊಂಡು ವರ್ಣ ಲೇಪಿಸುವ ಹಂತ ಇದಾಗಿದೆ.

೪. **ವರ್ತನ ಕ್ರಮ :** ವರ್ತನ ಎಂಬುದು ಸಂಸ್ಕೃತ ಪದವಾಗಿದ್ದು ವರ್ತಿಸುವ ರೀತಿ ಎಂದಾಗುವುದು. ಆದರೆ ಇಲ್ಲಿ ವರ್ಣವು ವರ್ತಿಸುವ ರೀತಿಯನ್ನು ಅರಿತುಕೊಂಡು ಕಲಾವಿದ ಚಿತ್ರಣ ಮಾಡಬೇಕಾಗುವುದು. ವರ್ಣವನ್ನು ದಪ್ಪವಾಗಿ ಲೇಪಿಸಿದಾಗ ಒಂದು ರೀತಿ, ತೆಳುವಾಗಿ ಲೇಪಿಸಿದಾಗ ಒಂದು ರೀತಿಯ ಛಾಯೆ ಕಂಡುಬರುವುದು. ಒಂದು ವರ್ಣ ಬೇರೊಂದು ವರ್ಣದೊಂದಿಗೆ ಬೆರೆತಾಗ ಬೇರೊಂದು ವರ್ಣಛಾಯೆ ಉಂಟಾಗುವುದು. ಒಂದು ವರ್ಣ ಲೇಪನದ ಮೇಲೆ ಇನ್ನೊಂದು ವರ್ಣ ಲೇಪಿಸಿದಾಗ ಬೇರೆಯದೇ ಹೊಳಪು ಕಂಡುಬರುವುದು. ಚಿತ್ರಕ್ಕೆ ನೆರಳು ಬೆಳಕು ಕೊಡಲು ಆರಂಭಿಸಿದಾಗ ವರ್ಣಕ್ಕೆ ಕಪ್ಪು ಬಿಳುಪುಗಳನ್ನು ಸೇರಿಸಿ ದಟ್ಟ ಇಲ್ಲವೇ ತೆಳು ಮಾಡಿ ಕೊಳ್ಳಬೇಕಾಗುವುದು. ಹೀಗೆ ಆಯಾ ಸಂದರ್ಭಗಳಲ್ಲಿ ವರ್ಣಗಳ ಗುಣ ತಿಳಿದುಕೊಂಡು ಕಲಾವಿದನು ಚಿತ್ರಗಳಿಗೆ ವರ್ಣ ಲೇಪನ ಮಾಡಬೇಕಾಗುವುದು. ಈ ಹಂತದಲ್ಲಿ ವರ್ಣ ಲೇಪಿಸುತ್ತ ಚಿತ್ರಣವನ್ನು ಮುಕ್ತಾಯ ಹಂತಕ್ಕೆ ತರಲಾಗುವುದು.

೫. **ಲೇಖನ ಕರ್ಮ :** ಒಂದು ಚಿತ್ರಕ್ಕೆ ಕೊನೆಯದಾಗಿ ಹೊರ ರೇಖೆ ಎಳೆಯುವ ಹಂತವಾಗಿದೆ. ಮುಕ್ತಾಯದ ಹೊರ ರೇಖೆಗಳೇ ಚಿತ್ರದ ಗುಣಮಟ್ಟವನ್ನು ನಿರ್ಧರಿಸುವುದರಿಂದ ಕಲಾವಿದನು ಇಲ್ಲಿ ಹೆಚ್ಚು ಎಚ್ಚರಿಕೆ ವಹಿಸಬೇಕಾಗುವುದು. ಪ್ರಬುದ್ಧ ಕಲಾವಿದನು ಮಾತ್ರ ಉತ್ತಮವಾದ, ನಿಖರವಾದ, ಜೀವಂತಿಕೆಯಿಂದ ಕೂಡಿದ ಹೊರ ರೇಖೆ ಎಳೆಯಬಲ್ಲನು. ಚಿತ್ರದ ಕೊನೆಗೆ ಎಳೆಯುವ ಹೊರ ರೇಖೆಯನ್ನು ಕೆಂಪು ಮಿಶ್ರಿತ ಕಪ್ಪು ಇಲ್ಲವೇ ಕಪ್ಪು ವರ್ಣಗಳಿಂದ ಎಳೆಯಬೇಕೆಂದು ಪ್ರಾಚೀನ ಗ್ರಂಥಗಳಲ್ಲಿ ವಿವರಣೆ ಕಾಣಬಹುದಾಗಿದೆ.

೬. **ದ್ವಿಕ ಕರ್ಮ :** ಚಿತ್ರಕ್ಕೆ ಮುಕ್ತಾಯದ ಹೊರ ರೇಖೆ ಎಳೆದ ನಂತರ ಕಲಾವಿದನು ಮತ್ತೊಮ್ಮೆ ಇಡೀ ಚಿತ್ರವನ್ನು ವೀಕ್ಷಿಸಿ ಅವಶ್ಯವಿದ್ದಲ್ಲಿ ಹೆಚ್ಚಿನ ಪ್ರಕಾಶ ಮತ್ತು ದಟ್ಟತೆಗಳನ್ನು (High

Light Depth) ಚಿತ್ರಕ್ಕೆ ಕೊಡಬೇಕಾಗುವುದು. ಅಲ್ಲದೇ ಚಿತ್ರದ ಹೊರ ರೇಖೆಯನ್ನು ಚೆನ್ನಾಗಿ ವೀಕ್ಷಿಸಿ ಮಸುಕಾದಲ್ಲಿ ಮತ್ತೊಮ್ಮೆ ಹೊರ ರೇಖೆಯನ್ನು ಈ ಹಂತದಲ್ಲಿ ಎಳೆಯಬೇಕಾಗುವುದು. ದ್ವಿಕ ಕರ್ಮ ಎಂದರೆ ಮತ್ತೊಮ್ಮೆ ಮಾಡುವುದು ಎಂಬುದಾಗುವುದು. ಅಂದರೆ ಈಗಾಗಲೇ ಕಾಣಿಸಿದ ಚಿತ್ರಕ್ಕೆ ಕೊನೆಯದಾಗಿ ಅವಶ್ಯವಿದ್ದಲ್ಲಿ ವರ್ಣಲೇಪಿಸಿ ಚಿತ್ರ ಮುಕ್ತಾಯಗೊಳಿಸುವ ಹಂತ ಇದಾಗಿದೆ. Finishing Touch ಎಂದು ಇದನ್ನು ಹೆಸರಿಸಬಹುದಾಗಿದೆ.

ಈ ರೀತಿ ಹಂತ ಹಂತವಾಗಿ ಚಿತ್ರಿಸಲಾಗುವ ಭಿತ್ತಿಚಿತ್ರ ರಚನೆಯ ತಾಂತ್ರಿಕ ವಿಧಾನಗಳಲ್ಲಿ ಮುಖ್ಯವಾಗಿ ಎರಡು ವಿಧಾನಗಳು ಗಮನಾರ್ಹವಾಗಿವೆ. ಅವು ಈ ಕೆಳಗಿನಂತಿವೆ.

೧. ಭಿತ್ತಿಪತ್ರ ರಚನಾ ವಿಧಾನಗಳು : ಭಿತ್ತಿಚಿತ್ರ ರಚನೆಯಲ್ಲಿ ಅನುಸರಿಸುವ ತಾಂತ್ರಿಕ ವಿಧಿವಿಧಾನಗಳಿಂದ ಭಿತ್ತಿಚಿತ್ರ ರಚನಾವಿಧಾನವನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಬಹುದು.

೧. ಭಿತ್ತಿ ಹಸಿ ಇರುವಾಗ ಚಿತ್ರ ರಚಿಸುವ ವಿಧಾನ (Fresco - buon)

೨. ಭಿತ್ತಿ ಒಣಗಿದ ನಂತರ ಚಿತ್ರ ರಚಿಸುವ ವಿಧಾನ (Fresci-Seccio)

೧. ಭಿತ್ತಿ ಹಸಿ ಇರುವಾಗ ಚಿತ್ರಿಸುವ ವಿಧಾನ : ಈ ವಿಧಾನದಲ್ಲಿ ಭಿತ್ತಿ ಇನ್ನೂ ಹಸಿ ಇರುವಾಗಲೇ ಚಿತ್ರವನ್ನು ಪೂರ್ಣಗೊಳಿಸಬೇಕಾಗುವುದು. ಪ್ರಾರಂಭಿಕ ರೇಖಾ ಚಿತ್ರಗಳಿಂದ ಹಿಡಿದು ವರ್ಣ ಲೇಪಿಸಿ ಚಿತ್ರಕ್ಕೆ ಹೊರ ರೇಖೆಯನ್ನು ಎಳೆಯುವ ಎಲ್ಲಾ ಕ್ರಮಗಳೂ ಭಿತ್ತಿ ಹಸಿ ಇರುವಾಗಲೇ ಮುಕ್ತಾಯಗೊಳಿಸಬೇಕಾಗಿರುವುದರಿಂದ ಕಲಾವಿದರು ಇಲ್ಲಿ ಹೆಚ್ಚು ಜಾಗೃತರಾಗಿರಬೇಕಾಗುತ್ತದೆ. ಒಂದು ದಿನದಲ್ಲಿ ಎಷ್ಟು ಚಿತ್ರಣ ಸಾಧ್ಯವೋ ಅಷ್ಟೇ ಅಳತೆಗೆ ಭಿತ್ತಿಯನ್ನು ಲೇಪಿಸುವುದು. ಇಲ್ಲವೇ ಮರುದಿನಕ್ಕೆ ಹಸಿ ಇರುವಂತೆ ನೋಡಿಕೊಳ್ಳಬೇಕಾಗುವುದು. ಈ ವಿಧಾನವು ಕ್ರಿ.ಶ. ೧೩೦೦ ರ ಸುಮಾರಿಗೆ ಇಟಲಿಯಲ್ಲಿ ಪ್ರಖ್ಯಾತವಾಗಿತ್ತು. ಭಾರತದಂತಹ ಉಷ್ಣವಲಯದ ಪ್ರದೇಶಕ್ಕೆ ಈ ವಿಧಾನ ತಕ್ಕದ್ದಲ್ಲವೆಂದೂ ಹಾಗಾಗಿ ಭಾರತದ ಪ್ರಾಚೀನ ಭಿತ್ತಿಚಿತ್ರಗಳು ವಿಧಾನವನ್ನು ಅನುಸರಿಸಲಿಲ್ಲವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.

೨. ಭಿತ್ತಿ ಒಣಗಿದ ನಂತರ ಚಿತ್ರ ರಚಿಸುವ ವಿಧಾನ : ಲೇಪಿಸಿದ ಗಾರೆಯು ಒಣಗಿದ ನಂತರ ಅದರ ಮೇಲೆ ಹಿನ್ನೆಲೆ ಲೇಪನ ಕೊಟ್ಟು ಚಿತ್ರ ರಚನೆ ಮಾಡಲಾಗುತ್ತದೆ. ಭಾರತದಲ್ಲಿನ ಭಿತ್ತಿಚಿತ್ರಗಳು ಸಾಮಾನ್ಯವಾಗಿ ಇದೇ ವಿಧಾನದಿಂದ ರಚಿಸಿವೆ ಎಂಬುದಾಗಿ ಅಭಿಪ್ರಾಯವಿದೆ. ಭಿತ್ತಿ ಹಸಿ ಇರುವಾಗ ಚಿತ್ರ ರಚನೆ ಮಾಡಿದರೆ ವರ್ಣವು ಭಿತ್ತಿಯ ಆಳಕ್ಕೆ ಇಳಿದು ಅಳಿಸಲಾರದಂತಹ

ಚಿತ್ರಗಳು ನಿರ್ಮಾಣವಾಗುತ್ತವೆ. ಇದರಿಂದ ವರ್ಣ ಉದುರು ಬೀಳುವುದು, ಚಕ್ಕಳಿಯಾಗಿ ಕಳಚಿ ಬೀಳುವುದು, ಹಿನ್ನೆಲೆ ಲೇಪನ ಹಾರಿ ಹೋಗುವುದು ಕಡಿಮೆಯಾಗುತ್ತವೆ. ಆದರೆ ಒಣಗಿದ ಭಿತ್ತಿಯ ಮೇಲೆ ಚಿತ್ರ ರಚನೆ ಮಾಡಿದಾಗ ಈ ಮೇಲಿನ ತೊಂದರೆಗಳು ಕಾಣಿಸಿಕೊಳ್ಳುತ್ತವೆ ಎಂದು ವಿಧ್ವಾಂಸರು ಅಭಿಪ್ರಾಯಿಸುತ್ತಾರೆ.

ಕನ್ನಡ ಮೊದಲ ಜೈನ ಕಾವ್ಯಗಳಲ್ಲಿ ಕಂಡು ಬರುವಷ್ಟು ಜೈನ ಚಿತ್ರಕಲೆಯ ಅಂಶ ಕರ್ನಾಟಕ ಭಿತ್ತಿ ಚಿತ್ರಗಳಲ್ಲಿ ಕಂಡುಬರುವುದಿಲ್ಲ. ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ ಕಲ್ಯಾಣಿ ಚಾಲುಕ್ಯ ಹಾಗೂ ಹೊಯ್ಸಳರ ಜೈನ ದೇವಾಲಯಗಳು ಶಿಲ್ಪಕ್ಕೆ ಪ್ರಸಿದ್ಧವಿದ್ದು ಚಿತ್ರಕಲೆಗೆ ಸೂಕ್ತವಾಗಿಲ್ಲದೇ ಇರುವುದು ಒಂದು ಕಾರಣವಾದರೆ, ಇಟ್ಟಿಗೆ, ಗಾರೆಗಳಲ್ಲಿ ರಚಿತವಾಗಿರಬಹುದಾದ ಜೈನ ಬಸದಿ ಇತ್ಯಾದಿ ಧಾರ್ಮಿಕ ಕೇಂದ್ರಗಳು ಕಾಲದ ಆಘಾತದಲ್ಲಿ ನಾಶವಾಗಿರಬಹುದು. ಭಿತ್ತಿಚಿತ್ರ ಹಾಗೂ ಪಟಚಿತ್ರಗಳ ಬಗ್ಗೆ ಚಿತ್ರಕಲೆಯ ಪಾರಿಭಾಷಿಕ ಶಬ್ದಗಳ ಬಗ್ಗೆ, ಚಿತ್ರ ಕಲಾವಿದರ ಬಗ್ಗೆ, ಅನೇಕ ಸಂಗತಿಗಳು ಜೈನ ಯುಗದ ಕವಿಗಳಲ್ಲಿ ದೊರೆಯುವುದರಿಂದ ಅವರು ಲಲಿತ ಕಲೆಗಳನ್ನು ಕುರಿತು ಅಭ್ಯಾಸ ಮಾಡಿದಂತೆ ಕಂಡುಬರುತ್ತವೆ.

ಜೈನ ಭಿತ್ತಿ ಚಿತ್ರಗಳಿಗೆ ಪುಷ್ಟಿ ನೀಡುವ ಸಂಗತಿಗಳು ಹಲವಿದೆ. ಮಹಾಪುರಾಣದಲ್ಲಿ ಪಂಡಿತೆ ಹೋದ ಜಿನ ಮಂದಿರವೂ ಭಿತ್ತಿ ಚಿತ್ರಗಳಿಂದ ತುಂಬಿತ್ತು. ಜಿನಸೇನಾಚಾರ್ಯರು ಈ ಭಿತ್ತಿ ಚಿತ್ರಗಳನ್ನು ಕುರಿತು "ನಾನಾ ವರ್ಣ ಸಂಕರಗಳಿಂದ ಕೂಡಿದ ಚಿತ್ರವು ಅಂತೆಯೇ ನಾನಾ ವರ್ಣ-ಜಾತಿ-ಸಂಕರಗಳಿಂದ ಹುಟ್ಟಿದ ಗಣಿಕೆಯಂತೆ ಶೋಭಿಸುತ್ತಿತ್ತು" ಎಂದಿದ್ದು ಪ್ರಾಯಶಃ ಪಂಪನಿಗೆ ಜಿನಮಂದಿರದ ಚಿತ್ರಗಳು ಗಣಿಕೆಗೆ ಹೋಲಿಸಿದ್ದು ಔಚಿತ್ಯವೆನಿಸಲಾರದು. ಇದೇ ಅಲ್ಲದೆ ಜೈನ ಕಾವ್ಯಗಳಲ್ಲಿ ಚಿರಗಟ್ಟ ಎಂಬ ಚಿತ್ರಕಲಾವಿದನೊಬ್ಬನ ಪ್ರಸ್ತಾಪ ಬಂದಿದ್ದು, ಅದು ವಿಧ್ವಾಂಸರ ಗಮನ ಸೆಳೆದಿದೆಯಲ್ಲದೇ ಆತನ 'ಚಿತ್ರಕಲಾ ನೈಪುಣ್ಯಕ್ಕೆ' ಸಂಬಂಧಿಸಿದಂತೆ ಹಲವಾರು ವಿವರಗಳು ಕಾವ್ಯಗಳಲ್ಲಿ ದೊರೆಯುತ್ತವೆ[೨೨] ಎಂಬುದು ವಿಧ್ವಾಂಸರ ಅಭಿಪ್ರಾಯ. ಇದರ ಪೂರಕ ಅಂಶಗಳಾಗಿರಿಸಿಕೊಂಡು ಜೈನ ಭಿತ್ತಿ ಚಿತ್ರಗಳ ಅಧ್ಯಯನವನ್ನು ನಾವು ಮಾಡಬಹುದಾದರೆ ಈ ಕೆಳಗಿನಂತೆ ಮುಂದುವರೆಯಬಹುದು.

ಕರ್ನಾಟಕವು ಜೀನ ಸಾಧುಗಳಿಗೆ ಕಲ್ಪವೃಕ್ಷದ ಸಮಾನವಾಗಿ ನಿಲ್ಲುತ್ತದೆ. ಕಾರಣ ಇಲ್ಲಿಯ ಸಂಸ್ಕೃತಿ-ಸಂಸ್ಕಾರ, ಧಾರ್ಮಿಕ ಹೊಂದಾಣಿಕೆ, ಕೊಡುಕೊಳ್ಳುವಿಕೆ, ಜನಜೀವನ, ಬಂಧುತ್ವ ಸಮಾನತೆಗಳು ಭಾರತದಲ್ಲಿ ಇನ್ಯಾವ ಪ್ರದೇಶಗಳಲ್ಲಿಯೂ ಸಿಗಲಾರದು. ತಗ್ಗಿನ ಕಡೆ ನೀರು

೨೨. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೬೦

ಹರಿಯುವಂತೆ ತಗ್ಗುವ, ಬಾಗುವ ಮನುಷ್ಯರೆಡೆ ಜಿನರು ಆಗಮಿಸಿದರು. ಬಂದು ಹಲವಾರು ಬಸದಿಗಳನ್ನು, ಜೈನ ಮಠಗಳನ್ನು ಸ್ಥಾಪಿಸಿದರು. ಇವರ ಜೊತೆ ಜೊತೆಗೆ ನಡೆದು ಬಂದ ಜೈನ ಶ್ರಾವಕರೂ ಸಹ ಅಲ್ಲಲ್ಲಿ ಉಳಿದು ಹಂಚಿಹೋದರು. ಈ ಸಮೀಕ್ಷೆಯಲ್ಲಿ ನೋಡುವುದಾದರೆ ಕರ್ನಾಟಕದಾದ್ಯಂತ ಜೈನ ಮಠ, ಬಸದಿ ಹಾಗೂ ಶ್ರಾವಕ ಮನೆಗಳುಳಿದವೆ ಹೊರತು ಅದರಲ್ಲಿಯ ಚಿತ್ರಗಳು ಸಂಪೂರ್ಣವಾಗಿ ಉಳಿಯಲಿಲ್ಲ. ಕಾರಣ ಮತಾಂಧತೆ, ಮೌಢ್ಯ, ಮಾನಸಿಕ ವಿಕೃತತೆ, ಪ್ರಕೃತಿ ವಿಕೋಪಗಳು ಕಾರಣವಾಗಿರಬಹುದು. ಉಳಿದಂತೆ ಕರಾವಳಿಯ, ಮಲೆನಾಡಿನ ಹಲವೆಡೆಗಳಲ್ಲಿ ಜೈನ ಭಿತ್ತಿ ಚಿತ್ರಗಳನ್ನು ನಾವು ನೋಡಬಹುದು. ಕರ್ನಾಟಕದಲ್ಲಿ ಕಂಡುಬರುವ ಭಿತ್ತಿ ಚಿತ್ರಗಳನ್ನು ಮುಖ್ಯವಾಗಿ ಮೂರು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

೧. ಬಸದಿಗಳಲ್ಲಿರುವ ಭಿತ್ತಿ ಚಿತ್ರಗಳು

೨. ಜೈನ ಮಠಗಳಲ್ಲಿನ ಭಿತ್ತಿ ಚಿತ್ರಗಳು

೩. ಜೈನ ಶ್ರಾವಕರ ಮನೆಗಳಲ್ಲಿರುವ ಭಿತ್ತಿ ಚಿತ್ರಗಳು

೧. ಬಸದಿಗಳಲ್ಲಿರುವ ಭಿತ್ತಿ ಚಿತ್ರಗಳು

ಮೂಲ ಜೈನ ಕೇಂದ್ರಗಳಾದ ಶ್ರವಣಬೆಳಗೊಳ ಹಾಗೂ ಮೂಡಬಿದರೆಯಲ್ಲಿ ಬಸದಿಗಳಿದ್ದು, ಇಲ್ಲಿಯ ಬಸದಿಗಳಲ್ಲಿ ಜೈನ ಚಿತ್ರಗಳ ಕುರುಹುಗಳನ್ನು ನಾವೀಗ ಅಲ್ಪಸ್ವಲ್ಪವಾಗಿ ಕಾಣಬಹುದಾಗಿದೆ. ಅವುಗಳಲ್ಲಿ ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿಯ ಚಾಮುಂಡರಾಯ ಬಸದಿ ಇದನ್ನು ನೇಮಿನಾಥ ಬಸದಿ ಎಂದೂ ಕರೆಯುತ್ತಾರೆ. ಇದೇ ಚಿಕ್ಕ ಬೆಟ್ಟದಲ್ಲಿಯ ಕತ್ತಲ ಬಸದಿ, ಪಾರ್ಶ್ವನಾಥ ಬಸದಿ, ದಾನ ಶಾಲಾ ಬಸದಿಗಳು ಶ್ರವಣಬೆಳಗೊಳದಲ್ಲಿದ್ದರೆ ಮೂಡಬಿದರೆಯ ಅಮ್ಮನವರ ಬಸದಿ ಹಾಗೂ ಲೆಪ್ಪದ ಬಸದಿಗಳಲ್ಲಿ ಪುರಾತನ ಚಿತ್ರಗಳ ಚಹರೆಗಳನ್ನು ಕಾಣಬಹುದಾಗಿದೆ.

೧. ಚಾಮುಂಡರಾಯ ಬಸದಿ (ನೇಮಿನಾಥ ಬಸದಿ)

ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿರುವ ನೇಮಿನಾಥ ಬಸದಿಯನ್ನು ತಲಕಾಡು ಗಂಗರ ಸೇನಾಧಿಪತಿಯಾದ ಚಾಮುಂಡರಾಯನು ಕಟ್ಟಿಸಿದನು. ನೋಡಲು ಬಹು ಸುಂದರವಾದ ಬಸದಿ ಇದಾಗಿದ್ದು ದ್ರಾವಿಡಶೈಲಿಯ ಸುಂದರವಾದ ಕಟ್ಟಡ ಇದಾಗಿದೆ. ಈ ಬಸದಿಯ ಗರ್ಭಗೃಹ, ನವರಂಗ ಹಾಗೂ ಮುಖ ಮಂಟಪವನ್ನು ಹೊಂದಿದ್ದು, ಇದರ ಅಂತರಾಳ ಮತ್ತು ಗರ್ಭಗೃಹ ಗೋಡೆಗಳು ಬಹು ದಪ್ಪವಾಗಿದೆ. ಈ ಬಸದಿಯು ನೋಡಲು ಆಯತಾಕಾರದಲ್ಲಿದ್ದು, ಚಾವಣಿಯು ದಪ್ಪ ಕಲ್ಲುಗಳ ಭಾರ ತಡೆಯಲು ಕೆಳಗಿನಿಂದ ಗೋಡೆಗಳನ್ನು ಸದೃಢವಾಗಿ ನಿರ್ಮಿಸಲಾಗಿದೆ.

ಈ ಬಸದಿಯ ಮುಂಭಾಗದ ಎರಡೂ ಕಡೆಗಳಲ್ಲಿಯೂ ತಳಭಾಗದಲ್ಲಿ ಚಾಮುಂಡರಾಯ ಮಾಡಿಸಿದ್ದ ಎಂಬ ವಾಕ್ಯಗಳ ಶಾಸನವಿದ್ದು, ಶಾಸನಶಾಸ್ತ್ರ ವಿದ್ವಾಂಸರು ಈ ಶಾಸನವು ಕ್ರಿ.ಶ. ೧೧ನೇ ಶತಮಾನಕ್ಕೆ ಸೇರಿದ್ದವುಗಳು ಎಂಬು ಅಭಿಪ್ರಾಯಿಸಿದ್ದಾರೆ. ಈ ಬಸದಿಯ ನವರಂಗದ ಮುಚ್ಚಿಗೆಯಲ್ಲಿ ಅಗಲವಾದ ವೃತ್ತಾಕಾರದ ಪದ್ಮವಿದ್ದು, ಅದರ ಮಧ್ಯಭಾಗವನ್ನು ವೃತ್ತಾಕಾರವಾಗಿದ್ದು ಕೆತ್ತನೆಗಳಿಲ್ಲದಾಗಿದೆ. ಬಹುಶಃ ಚಿತ್ರಿಸಲು ಈ ಭಾಗವನ್ನು ಹೀಗೆ ಖಾಲಿ ಬಿಟ್ಟಿರಬಹುದು ಎಂಬ ಅಭಿಪ್ರಾಯವನ್ನು ಡಾ॥ದೇವಕೊಂಡಾರೆಡ್ಡಿಯವರು ತಮ್ಮ 'ಶ್ರವಣಬೆಳಗೊಳದ ಬಸದಿಗಳ ವಾಶ್ತುಶಿಲ್ಪ' ಎಂಬ ಗ್ರಂಥದಲ್ಲಿ ಉಲ್ಲೇಖಿಸುತ್ತಾರೆ. ಈ ಬಸದಿಯ ನವರಂಗದಲ್ಲಿ ಅಲ್ಲಲ್ಲಿ ರೇಖಾವಿನ್ಯಾಸದ ಬಣ್ಣ ಚಿತ್ರಗಳ ಚಹರೆ ಬಿಂಬ ಗೋಚರಿಸುವಂತೆ ಗೋಚರಿಸಿದರೂ ತುಂಬಾ ಮುಸುಕು ಮುಸುಕಾಗಿದೆ. ಕೆಲವು ಭಾಗಗಳಲ್ಲಿ ರೇಖೆಯ ವಿನ್ಯಾಸದ ಕರುಹುಗಳು ಕಂಡರೂ ಸಹ ಸ್ಪಷ್ಟವಾಗಿಲ್ಲ. ಈ ಎಲ್ಲಾ ಸಾಕ್ಷ್ಯಗಳಿಂದ ಈ ಬಸದಿಯೂ ಭಿತ್ತಿ ಚಿತ್ರಗಳ ನೆಲೆಯಾಗಿತ್ತು ಎಂಬ ಅಭಿಪ್ರಾಯಕ್ಕೆ ಬರಬಹುದಾಗಿದೆ.

೨. ಕತ್ತಲ ಬಸದಿ

ಈ ಬಸದಿಯನ್ನು ಹೊಯ್ಸಳರಾಜನಾದ ವಿಷ್ಣುವರ್ಧನನ ದಂಡನಾಯಕನಾಗಿದ್ದ ಗಂಗರಾಜನು ಕ್ರಿ.ಶ. ೧೧೧೮ರಲ್ಲಿ ತನ್ನ ತಾಯಿಯಾದ ಪೋಚವ್ವೆಯ ನೆನಪಿಗಾಗಿ ಕಟ್ಟಿಸಿದನು ಎಂಬುದು ಇಲ್ಲಿಯ ಶಾಸನಗಳು ಸೂಚಿಸುತ್ತವೆ. ಆದರೆ ಈ ಬಸದಿಯು ಒಂಭತ್ತು ಅಥವಾ ಹತ್ತನೇ ಶತಮಾನಕ್ಕೆ ಸೇರಿದ್ದು. ಕಾರಣ ಈ ಬಸದಿಯ ಒಳರಚನೆ ಹಾಗೂ ರಚನಾ ವಿನ್ಯಾಶವನ್ನು ಸೂಕ್ಷ್ಮವಾಗಿ ತರ್ಕಕ್ಕೆ ಈಡು ಮಾಡಿದರೆ ಇದು ಸರಿಸುಮಾರು ಕ್ರಿ.ಶ. ೯೫೦ರಲ್ಲಿ ನಿರ್ಮಾಣವಾಗಿರಬಹುದೆಂಬುದು ಅ.ಸುಂದರರವರ ವಾದವಾಗಿದೆ. ವಾಸ್ತವವಾಗಿ ಈ ಬಸದಿಯು ಕತ್ತಲೆಯಿಂದ ಕೂಡಿದ್ದರಿಂದ ಇದನ್ನು ಕತ್ತಲೆ ಬಸದಿ ಎಂದು ಕರೆಯಲಾಗಿದೆ. ಆದರೆ ಈಗ ಸ್ವಲ್ಪ ಪ್ರಮಾಣದ ಬೆಳಕಿನ ಆಸ್ವಾದನೆ ದೊರಕುವಂತಾಗಿದೆ. ಬಸದಿಯ ಗರ್ಭಗೃಹವು ತೆರೆದ ಅಂತರಾಳವನ್ನು ಹೊಂದಿದ್ದು ನೋಡಲು ಸಾಧಾರಣ ಗರ್ಭಗೃಹದಂತೆ ಗೋಚರಿಸುವುದು. ವಿಶಾಲವಾದ ನವರಂಗವಿದ್ದು ಗರ್ಭಗೃಹದ ಸುತ್ತಲೂ ಪ್ರದಕ್ಷಿಣಾಪಥವನ್ನು ನಾವಿಲ್ಲಿ ಕಾಣಬಹುದು. ನವರಂಗದ ಮಧ್ಯದಲ್ಲಿನ ನಾಲ್ಕು ಕಂಬಗಳನ್ನು ಬಿಟ್ಟು ಸುತ್ತಲಿನ ೧೨ ಕಂಬಗಳಲ್ಲಿ ಗೋಡೆ ಕಡೆಯ ಎಂಟು ಕಂಬಗಳ ಮೂಲ ರಚನೆಯಲ್ಲಿ ಮೇಲಿನ ಕಂಬಗಳಂತಿದ್ದರೂ ಪಾದದಿಂದ ಕಂಬದ ಬೊಂದಿಗೆಯವರೆಗೆ ೧೬ ಮೂಲೆಗಳಿಂದ ಕೂಡಿದ್ದು, ಸುಂದರ ವ್ಯಾಸವನ್ನು ಹೊಂದಿದೆ. ಮೇಲಿನ ಮುಚ್ಚಾಳವೂ ೧೬ ಮೂಲೆಯಲ್ಲಿದೆ. ನವರಂಗ ಮಧ್ಯದಲ್ಲಿನ ನಾಲ್ಕು ಪ್ರಧಾನ ಗಂಗರ ಕೆಲವು ಅಪರೂಪದ ಮಾದರಿಗಳಾಗಿವೆ. ನವರಂಗ ಮಧ್ಯ ಇರುವ ಮುಚ್ಚಿಗೆಯಲ್ಲಿ ಅಗಲವಾದ ಪದ್ಮವಿದ್ದು ಪದ್ಮದ ಮಧ್ಯಭಾಗದ ಅಗಲವಾಗಿ ಚಪ್ಪಟೆಯಾಗಿದೆ.

ಬಹುಶಃ ಇದರಲ್ಲಿ ಜಿನ ಚಿತ್ರವನ್ನೋ, ಧರಣೇಂದ್ರನ ಚಿತ್ರವನ್ನೋ ರಚಿಸಲು ಬಿಟ್ಟಿರಬೇಕೆಂದು ಊಹಿಸಬಹುದಾಗಿದೆ. ಸುತ್ತಲೂ ಎರಡೂ ಸುತ್ತಿನ ಪದ್ಮದಳಗಳಿಂದ ಅಲಂಕರಿಸಲಾಗಿದೆ. ಮುಚ್ಚಿಗೆಯಲ್ಲಿ ಹಸಿರು, ನಸುಗೆಂಪು, ಬಿಳಿ ಬಣ್ಣವನ್ನು ಬಳಸಿ ರಚಿಸಿದ ರೇಖಾ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ.[೨೩]

ಅಲ್ಲದೆ ಅಲ್ಲಲ್ಲಿ ಬಿದ್ದು ಹೋಗಿರುವ ಕಡೆಯಲ್ಲಿ ಒಳಪದರ ಹೊಯ್ಸಳರ ಕಾಲದ ವಿನ್ಯಾಸಗಳು ಕಂಡುಬರುತ್ತವೆ. ಮೇಲಿನ ಪದರದ ವಿನ್ಯಾಸದ ಚಿತ್ರಗಳು ಸುಮಾರು ನೂರು ವರ್ಷಗಳ ಹಿಂದೆ ಮೈಸೂರು ಮನೆತನದ ದೇವೀರಮ್ಮಣ್ಣಿ ಹಾಗೂ ಕೆಂಪಮ್ಮಣ್ಣಿ ಬಸ್ತಿಯನ್ನು ಪುನರುತ್ಥಾನ ಮಾಡಿದ ಕಾಲದಲ್ಲಿ ಬರೆಯಿಸಿರಬೇಕು. ಆದರೆ ಈ ಬಸದಿಯಲ್ಲಿ ಅಲ್ಲಲ್ಲಿ ಮಾತ್ರ ಕೆಲವು ಬಣ್ಣಗಳ ತುಣುಕುಗಳನ್ನು ಕಾಣಬಹುದು. ಈ ಚಿತ್ರಗಳ ಕುರಿತು ಡಾ॥ ದೇವರಕೊಂಡಾರೆಡ್ಡಿ ಹಾಗೂ ಡಾ॥ ಅ.ಲ. ನರಸಿಂಹನ್‌ರವರು ವಿಶಾಲವಾಗಿರುವ ನವರಂಗದಲ್ಲಿ ೧೬ ಕಂಬಗಳ ಮೇಲೆ ಚಿತ್ರಗಳು ಇರುವುದಾಗಿ ಸ್ಪಷ್ಟಪಡಿಸುತ್ತಾರೆ.[೨೪]

೩. ಪಾರ್ಶ್ವನಾಥ ಬಸದಿ

ಈ ಬಸದಿಯನ್ನು ಕಮಠ ಪಾರ್ಶ್ವನಾಥ ಬಸದಿ ಅಥವಾ ಪಾರ್ಶ್ವನಾಥ ಬಸದಿ ಎಂತಲೂ ಕರೆಯುತ್ತಾರೆ. ಶ್ರವಣಬೆಳಗೊಳಸದ ಚಂದ್ರಗಿರಿ ಚಿಕ್ಕಬೆಟ್ಟದ ಎದುರಿಗೆ ಈ ಕಟ್ಟಡವನ್ನು ನಿರ್ಮಿಸಲಾಗಿದೆ. ಈ ಬಸದಿಯಲ್ಲಿ ಗರ್ಭಗೃಹ ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಗರ್ಭಗೃಹ ಒಳಗೆ ೧೫ ಅಡಿ ಎತ್ತರದ ಪಾರ್ಶ್ವನಾಥನ ಬಳಪದ ಕಲ್ಲಿನ ವಿಗ್ರಹವನ್ನು ಸಹ ನಾವಿಲ್ಲಿ ಕಾಣಬಹುದು. ಇಲ್ಲಿಯ ಶಾಸನದ ಪ್ರಕಾರ ಈ ಬಸದಿಯನ್ನು ಧಾಮನಂದಿ ತ್ರೈವಿದ್ಯ ದೇವರ ಶಿಷ್ಯರಾದ ದಿನಕೀರ್ತಿದೇವರು ನಿರ್ಮಿಸಿದರು ಎಂಬುದು ತಿಳಿದು ಬರುವ ಸಂಗತಿ. ಅಲ್ಲದೆ ಇಲ್ಲಿಯ ನವರಂಗದ ಕಲ್ಲುಕಟ್ಟು ಮತ್ತು ನೃತ್ಯ ಮಂಟಪವನ್ನು ಕ್ರಿ.ಶ. ೧೧೯೫ರ ಸುಮಾರಿನಲ್ಲಿ ಪಟ್ಟಣಸ್ವಾಮಿ ನಾಗದೇವರು ಮಾಡಿಸಿರುತ್ತಾರೆ ಎಂದು ಡಾ॥ ದೇವರ ಕೊಂಡಾರೆಡ್ಡಿಯವರು ಶ್ರವಣ ಬೆಳಗೊಳದ ಬಸದಿಗಳ ವಾಸ್ತುಶಿಲ್ಪದಲ್ಲಿ ಉಲ್ಲೇಖಿಸಿದ್ದಾರೆ.

ಈ ಬಸದಿಯಲ್ಲಿ ನವರಂಗವು ಚೌಕಾಕಾರವಾಗಿದ್ದು ನಾಲ್ಕೂ ಮೂಲೆಗಳಲ್ಲಿ ಜತಿಗಳನ್ನು ಕಾಣಬಹುದಾಗಿದೆ. ಮಧ್ಯ ಹೊಯ್ಸಳರ ಕಾಲಕ್ಕೆ ಸೇರಿದ ಎತ್ತರವಾದ ಹಾಗೂ ದಪ್ಪನಾದ ದುಂಡಗಿನ ಕೃತಿಗಳಿದ್ದು ಈ ಕಂಬಗಳಲ್ಲಿ ಪೀಠ ಚೌಕಾಕಾರವಾಗಿದ್ದು ವೃತ್ತಾಕಾರದ ಮಧ್ಯೆ ಎಡೆಕಟ್ಟುಗಳಿಂದ ಕೂಡಿದ ಶಲಾಕ, ಎಡೆಕಟ್ಟು, ಘಂಟಾ ಕುಂಭ, ಮುಚ್ಚಳ ಫಲಕವಿದೆ. ಬಸದಿಯ ಅಂತರಾಳ ಗೋಡೆಯಲ್ಲಿ ಧರಣೇಂದ್ರ ಮತ್ತು ಪದ್ಮಾವತಿಯರ ಬಣ್ಣದ ರೇಖಾಚಿತ್ರಗಳಿದ್ದು, ಈಗ ಅವು

೨೩. ಡಾ. ದೇವರಕೊಂಡಾರೆಡ್ಡಿ : ಶ್ರವಣಬೆಳಗೊಳದ ಬಸದಿಗಳ ವಾಸ್ತುಶಿಲ್ಪ, ಪು-೨೭

೨೪. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ, ಪು-೬೦

ಮುಸುಕಾಗಿವೆ. ಅವನ್ನು ಬಿಡಿಸಿರುವ ರೀತಿ, ಕಿರೀಟ ವಿನ್ಯಾಸ ಇವುಗಳನ್ನು ಗಮನಿಸಿದಾಗ ಅವು ಹೊಯ್ಸಳರ ಕಾಲಕ್ಕೆ ಸೇರುತ್ತವೆ.[೨೫] ಆದರೆ ಈ ಚಿತ್ರಗಳನ್ನು ಗುರುತಿಸಲು ತುಂಬಾ ಕಷ್ಟ ಸಾಧ್ಯವಾಗಿದ್ದು ಇನ್ನು ಕೆಲವು ದಿನಗಳಲ್ಲಿ ಇವು ಕಾಣದೇ ಇದ್ದರೂ ಅಚ್ಚರಿಯಿಲ್ಲ. ತೀರ ಮುಸುಕು ಮುಸುಕಾಗಿ ಈ ಚಿತ್ರಗಳನ್ನು ಇಂತಹುದೇ ಚಿತ್ರ ಹಾಗೂ ಈ ಕಾಲಮಾನಕ್ಕೆ ಸೇರಿದ್ದವೂ ಎಂಬುದು ಸಹ ಕಷ್ಟದ ವಿಷಯ.

೪. ದಾನ ಶಾಲಾ ಬಸದಿ (ಪಂಚ ಪರಮೇಷ್ಠಿ)

ದಾನಶಾಲಾ ಬಸದಿಯು ಹಿಂದೆ ಮಠವಾಗಿದ್ದಿರಬಹುದೆಂಬುದು ವಿಧ್ವಾಂಸರ ಅಭಿಪ್ರಾಯ. ಈ ಬಸದಿಯೂ ನೋಡಲು ಆಯತಾಕಾರವಾಗಿದ್ದು ಒಳಭಾಗದಲ್ಲಿ ೧೦ ಕಂಬಗಳಿದ್ದು ಹೊರಭಾಗದಲ್ಲಿ ೪ ಕಂಬಗಳನ್ನು ಕಾಣಬಹುದು. ಈ ಬಸದಿಯು ಹೊಯ್ಸಳರ ಕಾಲಕ್ಕೆ ಜೀರ್ಣೋದ್ಧಾರ–ವಾಗಿದ್ದಿರಬಹುದು. ಈ ಬಸದಿಯಲ್ಲಿ ಪಂಚ ಪರಮೇಷ್ಠಿಗಳ ಶಿಲ್ಪವಿರುವ ಶಿಲೆ ಇದೆ. ಗರ್ಭಗೃಹಕ್ಕೆ ಬಳಸಿರುವ ಬಾಗಿಲವಾಡ ಸುಮಾರು ನಾಲ್ಕು ಅಡಿ ಎತ್ತರವಾಗಿದ್ದು, ಶಾಖೆಯನ್ನು ಪ್ರಧಾನವಾಗಿ ಹೊಂದಿವೆ. ಹೊರಗಡೆಯ ಇಳಿಜಾರು ಕಟ್ಟಡಕ್ಕೆ ಬಳಸಿರುವ ಕಂಬಗಳು ಚರುತಸ್ರ–ಅಷ್ಟಾಸ್ರವಾಗಿವೆ. ಕೆಲವು ಕಂಬಗಳು ಚೌಕ ವೃತ್ತಾಕಾರವಾಗಿವೆ. ಈ ಬಸದಿಯ ಮುಚ್ಚಿಗೆಯಲ್ಲಿ ಬಣ್ಣದ ರೇಖಾಚಿತ್ರಗಳ ವಿನ್ಯಾಸ ಮುಸುಕು ಮುಸುಕಾಗಿ ಕಾಣಬರುತ್ತವೆ.[೨೬] ಆದರೆ ಈ ಚಿತ್ರಗಳು ಸಹ ತೀರ ಮುಸುಕು ಮುಸುಕಾಗಿರುವುದರಿಂದ ಈ ರೇಖಾ ವಿನ್ಯಾಸಗಳ ವಿವರಣೆ ಕಷ್ಟಸಾಧ್ಯವಾಗಿದೆ.

೫. ಲೆಪ್ಪದ ಬಸದಿ

ದಕ್ಷಿಣದ ಜೈನಕಾಶಿ ಎಂದು ಮೂಡಬಿದರೆಯನ್ನು ಕರೆಯುತ್ತಾರೆ. ಕಾರಣ ಇಲ್ಲಿಯ ವೈವಿಧ್ಯಮಯವಾದ ಹಾಗೂ ವಿಶೇಷವಾಗಿರುವ ೧೮ ಸುಂದರ ಜೈನ ಬಸದಿಗಳು ಇಷ್ಟೇ ಅಲ್ಲದೇ ಈ ಎಲ್ಲಾ ಜೈನ ಬಸದಿಗಳು ಕಲೆ ಮತ್ತು ವಾಸ್ತು ಶಿಲ್ಪ ದೃಷ್ಟಿಯಿಂದಲೂ ಗಮನ ಸೆಳೆಯುತ್ತವೆ. ಈ ಬಸದಿಗಳು ಸರಿಸುಮಾರು ೧೫ ರಿಂದ ೧೬ನೇ ಶತಮಾನದ ಆಸುಪಾಸಿನಲ್ಲಿ ರಚನೆಯಾಗಿರ–ಬಹುದೆಂಬುದು ಜೈನ ವಿದ್ವಾಂಸರ ಅಭಿಪ್ರಾಯ. ಈ ಎಲ್ಲಾ ೧೮ ಬಸದಿಗಳಲ್ಲಿ ತನ್ನದೇ ಆದ ಸ್ವವೈಶಿಷ್ಟ್ಯವನ್ನು ಹೊಂದಿರುವ ಈ ಲೆಪ್ಪದ ಬಸದಿಯು ಗರ್ಭಗೃಹದ ಒಳಗೆ ಭಿತ್ತಿಯ ಮೇಲೆ ಪಂಚವರ್ಣಗಳನ್ನು ಬಳಸಿ ರಚಿಸಿರುವ ಭಿತ್ತಿ ಚಿತ್ರಗಳದ್ದು ಒಂದು ಅಂಕಣದಲ್ಲಿ ಪದ್ಮಾಸನ ಭಂಗಿಯಲ್ಲಿ ಸಾಲಾಗಿ ಕುಳಿತಿರುವ ತೀರ್ಥಂಕರರು, ಇನ್ನೊಂದು ಕಡೆ ಓರ್ವ ಸ್ತ್ರೀಯು ಮಲಗಿದಂತೆ ಚಿತ್ರಿಸಲಾಗಿದ್ದು

೨೫. ಎಸ್. ಉಮೇಶ : ಕರ್ನಾಟಕದ ಜೈನ ಚಿತ್ರಕಲೆ (ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ), ಪು–

೨೬. ಡಾ. ದೇವರಕೊಂಡಾರೆಡ್ಡಿ : ಶ್ರವಣಬೆಳಗೊಳದ ಬಸದಿಗಳ ವಾಸ್ತುಶಿಲ್ಪ, ಪು–೬೨

ಆಕೆಯ ಪಕ್ಕದಲ್ಲಿ ಕೆಲವು ಸ್ತ್ರೀಯರು ನಿಂತಿರುವಂತೆ ತೋರಿಸಲಾಗಿದೆ. ಬಹುಶಃ ಈಕೆ ಚಂದ್ರನಾಥಜಿನನ ಮಾತೆಯಾಗಿದ್ದು ಇದು ಗರ್ಭಾವತರಣ ಕಲ್ಯಾಣಕ್ಕೆ ಸಂಬಂಧಿಸಿದ ಚಿತ್ರವಾಗಿರಬೇಕು. ಚಿತ್ರಗಳು ಮುಸುಕಾಗಿರುವುದರಿಂದ ವಿವರಗಳು ಸ್ಪಷ್ಟವಿಲ್ಲ[೭೭] ಎಂಬುದಾಗಿ ಶ್ರೀಎಸ್.ಡಿ. ಶೆಟ್ಟಿಯವರು ತಮ್ಮ 'ಚಂದ್ರಪ್ರಭ' ಪುಸ್ತಕದಲ್ಲಿ ಲೆಪ್ಪದ ಬಸದಿಯ ಭಿತ್ತಿಚಿತ್ರಗಳನ್ನು ಕುರಿತಂತೆ ಉಲ್ಲೇಖಿಸಿದ್ದಾರೆ. ಇದಲ್ಲದೆ ಈ ಬಸದಿಯಲ್ಲಿ ಜೈನ ಗುರುಗಳನ್ನು ಹೊರತುಪಡಿಸಿ ಅನ್ಯರಿಗೆ ಪ್ರವೇಶವು ಅಸಾಧ್ಯವಾದುದರಿಂದ ಇವುಗಳನ್ನು ನೋಡಲು ಅಸಾಧ್ಯವಾಗಿದೆ. ಆದರೆ ಜೈನ ಧರ್ಮೀಯರೂ ಆದ ಎಸ್.ಡಿ. ಶೆಟ್ಟಿರವರ ಈ ಲೇಖನ ನನ್ನ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿದೆ.

೬. ಅಮ್ಮನವರ ಬಸದಿ

ಅಮ್ಮನವರ ಬಸದಿಯು ಮೂಲಸ್ವಾಮಿ ಶಾಂತಿನಾಥ ತೀರ್ಥಂಕರರು ಈ ಬಸದಿಯು ಒಂದು ರೀತಿಯಲ್ಲಿ ವಿಶಿಷ್ಟವಾಗಿದ್ದು ಇನ್ನು ಹಿರೇ ಬಸದಿ ಎಂದು ಸಹ ಕರೆಯಲಾಗುವುದು. ಈ ಬಸದಿಯು ಮೂಲತಃ ಮುನಿಗಳಿಗೆ ಆಶ್ರಯಕ್ಕಾಗಿ, ಚಾತುರ್ಮಾಸ್ಯಗಳ ವಸತಿಗಾಗಿ ನಿರ್ಮಿತವಾದ ಈ ಬಸದಿಯು ಜೈನ ಧರ್ಮೀಯರ ಅಧ್ಯಯನ, ಅಧ್ಯಾಪನ, ವಾಚನ, ಚಿಂತನ-ಮಂತನ, ಲೇಖನ ಧರ್ಮರದ ಶ್ರವಣಾದಿಗಳಿಗೆ ಹಾಗೂ ಧರ್ಮದ ಪ್ರಚಾರದ ಕಾರ್ಯವನ್ನು ನಿರ್ವಹಿಸುವ ಕೇಂದ್ರವಾಗಿ ಪರಿವರ್ತನೆಯಾಗಿದೆ. ಆದರೆ ಪೂರ್ವದಲ್ಲಿ ಈ ಬಸದಿಯಲ್ಲೂ ಚಿತ್ರಗಳಿದ್ದವು ಎಂಬ ಉಲ್ಲೇಖವನ್ನು ಶ್ರೀ. ಎಸ್.ಡಿ. ಶೆಟ್ಟಿಯವರು ಮಾಡುತ್ತಾರೆ. ತಮ್ಮ 'ಚಂದ್ರಪ್ರಭ' ಗ್ರಂಥದಲ್ಲಿ ಅಮ್ಮನವರ ಬಸದಿಯ ಗರ್ಭಗೃಹದಲ್ಲಿ ಗೋಡೆಯ ಮೇಲೂ ಭಿತ್ತಿ ಚಿತ್ರಗಳಿದ್ದವು. ಆದರೆ ಕಾಲಾನುಸಂದರ್ಭಗಳ ನಡುವೆ ಇವುಗಳ ಮೇಲೆ ಬಣ್ಣಸುಣ್ಣಗಳನ್ನು ಬಳಿದ ಕಾರಣ ಅಮೂಲ್ಯ ಭಿತ್ತಿಚಿತ್ರಗಳು ನಾಶವಾಗಿದೆ ಎಂಬ ವಿಷಾದದ ಸಂಗತಿಯು ಜೈನ ಚಿತ್ರಕಲಾ ಪರಂಪರೆಗೆ ತುಂಬಲಾರದ ನಷ್ಟವಾಗಿದೆ.

೨. ಜೈನ ಮಠಗಳಲ್ಲಿನ ಭಿತ್ತಿಚಿತ್ರಗಳು

ಮಠಗಳ ಪರಂಪರೆಯು ಇಂದು ನೆನ್ನೆಯದಲ್ಲ. ಪುರಾತನ ಕಾಲದಿಂದಲೂ ನಡೆದುಬಂದ ಸಾಂಸ್ಕೃತಿಕ ಸಂಘರ್ಷಗಳ ಸಂಗತಿ. ಮಠಗಳು ಯಾವುದಾದರೊಂದು ಮತ-ಧರ್ಮಗಳ ಆಚಾರ-ವಿಚಾರ ಸಂಸ್ಕಾರ ಧೋರಣೆಗಳಿಗೆ ಅರ್ಥಪೂರ್ಣ ಉದಾಹರಣೆಗಳಾಗಿವೆ. ಇವುಗಳನ್ನು ಹೊರತುಪಡಿಸಿ ಸಮಕಾಲೀನ ಕೆಲವು ಮಠಗಳು ಜಾತಿಯ ಹೆಸರಿನಲ್ಲಿ ಅರ್ಥವನ್ನು ಅನರ್ಥಗೊಳಿಸುವ ಮಠಗಳ ಅಪಮೌಲ್ಯತೆಗೆ ಕಾರಣವಾಗಿರುವುದು ವಿಷಾಧನೀಯ. ಇವುಗಳನ್ನು ಹೊರತುಪಡಿಸಿ ಅಧ್ಯಯನಗಳ ದೃಷ್ಟಿಯಲ್ಲಿ ನೋಡುವುದಾದರೆ ಜೈನ ಮಠಗಳು ತನ್ನದೇ ಆದಂತಹ ಸಾಂಸ್ಕೃತಿಕ, ಅಹಿಂಸಾ

---

೭೭ ಡಾ. ಎಸ್. ಡಿ. ಶೆಟ್ಟಿ : ಚಂದ್ರಪ್ರಭಾ, ಪು-೧೭೨

ಮೌಲ್ಯಗಳ ಹೆಸರು ಮಾಡಿವೆ. ಆದ ಕಾರಣ ಜೈನರಲ್ಲಿ ಕಲೆಯು ಇಂದಿಗೂ ಪ್ರಸ್ತುತ. ಜೈನರು ಸಾಹಿತ್ಯಕ್ಕೆ ಎಷ್ಟರಮಟ್ಟಿಗೆ ಪ್ರಧಾನ್ಯತೆ ನೀಡಿದರೋ ಅಷ್ಟೇ ಮೌಲ್ಯವನ್ನು ಕಲೆಗೆ ನೀಡುತ್ತಿದ್ದರು ಎಂಬುದಕ್ಕೆ ಜೈನ ಮಠಗಳಲ್ಲಿ ಇಂದಿಗೂ ಕಾಣಬಹುದಾದ ಭಿತ್ತಿಚಿತ್ರಗಳು ಸಾಕ್ಷಿಯಾಗಿವೆ.

ಜೈನ ಮಠಗಳಲ್ಲಿ ಜೈನ ಅಧ್ಯಯನ ಅಧ್ಯಾಪನ, ಲೇಖನ, ವಾಚನ ಇವುಗಳಲ್ಲದೆ ಕಲೆ, ಕಲೆಯ ಮಹತ್ವ ಮತ್ತು ಅವಶ್ಯಕತೆಗಳ ಕುರಿತಾಗಿಯೂ ಅಧ್ಯಯನ ನಡೆಸಲಾಗುತ್ತಿರುವುದರಿಂದಲೆ ಈ ಮಠಗಳಲ್ಲಿ ಪುರಾತನ ಕಾಲದ ಜೈನ ಚಿತ್ರಗಳಿಗೆ ಯಾವ ವಿಪತ್ತುಗಳು ಬಾರದೆ ಕಾದಿರಿಸಿಕೊಂಡು ಬಂದಿರುವುದು ನಾವಿಲ್ಲಿ ಶ್ಲಾಘನೀಯ ಸಂಗತಿಯಾಗಿ ನೆನೆಯಬಹುದು. ಇನ್ನೂ ನಮಗೆ ಭಿತ್ತಿ ಚಿತ್ರಗಳು ಲಭ್ಯವಿರುವ ಜೈನ ಮಠಗಳಾದ ಶ್ರವಣಬೆಳಗೊಳದ ಜೈನಮಠ, ಮೂಡಬಿದರೆಯಲ್ಲಿಯ ಜೈನ ಮಠ ಹಾಗೂ ಕಾರ್ಕಳದ ಜೈನ ಮಠಗಳಲ್ಲಿ ಇಂದಿಗೂ ನಾವು ಜೈನ ಭಿತ್ತಿ ಚಿತ್ರಗಳನ್ನು ನೋಡಬಹುದಾಗಿದೆ.

೧. ಶ್ರವಣಬೆಳಗೊಳದ ಜೈನರ ಶ್ರೀಮಠ

ದಕ್ಷಿಣ ಭಾರತದ ಜೈನರ ಸ್ವರ್ಗವೆ ಆಗಿರುವ ಶ್ರವಣಬೆಳಗೊಳವು ಹಾಸನ ಜಿಲ್ಲೆಯ ಚೆನ್ನರಾಯ ಪಟ್ಟಣ ತಾಲ್ಲೂಕಿನ ಒಂದು ಸಾಂಸ್ಕೃತಿ ಹಾಗೂ ಜೈನರ ಮೂಲ ಧಾರ್ಮಿಕ ಕ್ಷೇತ್ರ ಈ ಶ್ರವಣಬೆಳಗೊಳ. ಇಲ್ಲಿರುವ ಜೈನ ಮಠವನ್ನೇ ಶ್ರೀ ಮಠದ ಎಂದು ಕರೆಯಲಾಗಿದೆ. ಈ ಮಠದ ಬಸದಿಯು ೧೮ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡಿದೆ. ಆದರೆ ಚಾವುಂಡರಾಯನೇ ಇಲ್ಲಿಯ ಮಠವನ್ನು ಸ್ಥಾಪಿಸಿ ತನ್ನ ಗುರುಗಳಾದ ಶ್ರೀ ನೇಮಿಚಂದ್ರ ಸಿದ್ಧಾಂತ ದೇವರನ್ನು ಪ್ರತಿಷ್ಠಾಪಿಸಿದರು ಎಂಬುದು ಇತಿಹಾಸ. ತೆರೆದ ಪ್ರಾಂಗಣವಿದ್ದು ಈಗ ಅವನ್ನು ಮುಚ್ಚಿದ್ದು ಒಂದು ಮಹಡಿಯನ್ನೂ ಕಟ್ಟಲಾಗಿದೆ. ಮಠದಲ್ಲಿ ಸಾಲಾಗಿ ಮೂರು ಗರ್ಭಗೃಹಗಳಿದ್ದು ಅವುಗಳಲ್ಲಿ ಭಕ್ತರು ದಾನ ಮಾಡಿದ ಪ್ರತಿಮೆಗಳು ಸಾಲು ಸಾಲು ಇದ್ದು ದಾನಿಗಳ ಹೆಸರುಗಳನ್ನು ಅವುಗಳ ಮೇಲೆ ಕೆತ್ತಿಸಲಾಗಿದೆ. ಗೋಡೆಗಳ ಮೇಲೆ ಸುಂದರ ಭಿತ್ತಿ ಚಿತ್ರಗಳಿದ್ದು ಮುಮ್ಮಡಿ ಕೃಷ್ಣರಾಜ ಒಡೆಯರ್ ದರ್ಬಾರು, ಪಂಚಪರಮೇಷ್ಠಿಗಳು, ನೇಮಿನಾಥರು, ಅನೇಕ ಯಕ್ಷ-ಯಕ್ಷಿಯರು, ಪಾರ್ಶ್ವನಾಥರ ಮವಸರಣ, ಮುನಿಗಳು ವಾಸಿಸುತ್ತಿದ್ದ ಅಡವಿಗಳು, ಷಡ್ಲೇಷ್ಯಂ ಇತ್ಯಾದಿ ಇತ್ಯಾದಿಗಳನ್ನು ಮುಖ್ಯವಾಗಿ ನಾವಿಲ್ಲಿ ಕಾಣಬಹುದಾಗಿದೆ.

ಕಾವ್ಯವೊಂದರಲ್ಲಿ ಚಿತ್ರಗಳ ಬಗ್ಗೆ ಉಲ್ಲೇಖ ಬಂದಿದ್ದು ಇಲ್ಲಿಯ ಚಿತ್ರಗಳ ಕಾಲ ನಿರ್ಣಯಕ್ಕೆ ಸಹಾಯಕವಾಗುತ್ತದೆ. ಶ್ರವಣಬೆಳಗೊಳದ ಚಿತ್ರದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಚಿತ್ರವೂ ಇರುವುದರಿಂದ ೧೯ನೇ ಶತಮಾನದ ಮಧ್ಯಭಾಗವೆಂದು ಆರ್. ನರಸಿಂಹಾಚಾರ್ ಅವರು ಅಭಿಪ್ರಾಯ

ಪಡುತ್ತಾರೆ. ಬಹುಜನ ಅಭಿಪ್ರಾಯವೂ ಇದೇ ಆಗಿದೆ. ಆದರೆ ಅನಂತ ಕವಿಯ ಗೊಮ್ಮಟೇಶ್ವರ ಚರಿತ್ರೆಯಲ್ಲಿ ಶ್ರವಣಬೆಳಗೊಳದ ಶ್ರೀಮಠವನ್ನು ವರ್ಣಿಸುತ್ತ "ಅರವತ್ತ ಮೂರು ಶಲಾಕ ಪುರಷ ಸಚರಿತ ಚಿತ್ರವಿಚಿತ್ರ ಗುರುಭಾವಚಿತ್ರ ಶ್ರೀರಂಗಪಟ್ಟಣದ ವಿಸ್ತಾರ ಚಿತ್ರಬರೆದಿಹುದಲ್ಲಿ" ಎಂದು ಅಲ್ಲಿಯ ಚಿತ್ರಕಲೆಯ ಬಗ್ಗೆ ಹೇಳುತ್ತದೆ. ಈಗ ಅಲ್ಲಿ ಮಂಟಪದ ಕೈಸಾಲೆಯಲ್ಲಿ ಪಾರ್ಶ್ವನಾಥ ಹಾಗೂ ನಾಗಕುಮಾರನ ಕಥೆಗೆ ಸಂಬಂಧಿಸಿದ ಚಿತ್ರಗಳಿವೆ.

ಒಳಗಿನ ಕೋಣೆಗಳಲ್ಲಿ ಹಲವಾರು ಶಲಾಕ ಪುರುಷರಲ್ಲದೆ ಜೈನರ, ಜೈನ ಲೋಕ ಕಲ್ಪನೆಯ ಕೆಲವು ಅಮೂರ್ತ ಚಿತ್ರಗಳಿವೆ. ಅಲ್ಲದೆ ಈಗ ಲೋಹದ ವಿಗ್ರಹಗಳ ಪ್ರದರ್ಶನಕ್ಕಾಗಿ ದೊಡ್ಡ ಅಳತೆಯ ಗಾಜಿನ ಕಿಟಕಿಗಳು ಹಾಕಿರುವಲ್ಲಿ ಬಾಹುಬಲಿಗೆ ಸಂಬಂಧಿಸಿದ ಚಿತ್ರಗಳು ಇದ್ದು ೧೯೩೫ರ ವೇಳೆಯಲ್ಲಿ ಕೀಳಿಸಿ ಕಿಟಕಿ ಇಡಿಸಲಾಯಿತು. ಇನ್ನೊಂದು ಬದಿಯಲ್ಲಿ ವಿಸ್ತಾರವಾದ ಜಾತ್ರೆಯ ಚಿತ್ರವಿದೆ. ಶ್ರೀರಂಗಪಟ್ಟಣದ ತೇರು ಮತ್ತು ಜಾತ್ರೆಯ ಬಗ್ಗೆ ಕಂಠೀರವ ನರಸರಾಜ ವಿಜಯದಲ್ಲಿ ಹಲವು ಅಧ್ಯಾಯಗಳಲ್ಲಿ ವಿಸ್ತಾರವಾಗಿ ಬಂದಿದೆ. ಈ ಎಲ್ಲಾ ಕಾರಣಗಳಿಂದ ಅನಂತಕವಿ "ವಿಸ್ತರ ಚಿತ್ರ ಬರೆದಿಹುದಿಲ್ಲಿ" ಎಂದು ಹೇಳಿರುವುದು. ಈಗ ಶ್ರೀಮಠದಲ್ಲಿ ಕಂಡುಬರುವ ಚಿತ್ರಗಳೇ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದ್ದರಿಂದ ಸಂಪಾದಕರು ಅನಂತಕವಿಯ ಕಾಲ ೧೭೮೦ ಎಂದಿದ್ದು ಕನಿಷ್ಠ ಅದೇ ಚಿತ್ರ ರಚನೆಯ ಕಾಲವೂ ಆಗುತ್ತದೆ. ಕಾವ್ಯದ ಕೊನೆಯಲ್ಲಿ ಬರುವ ಪದ್ಯವೊಂದು ೧೮೫೩ ಕ್ರಿ.ಶ. ಎಂದು ಹೇಳುವುದು ದೋಷವೆಂದು ಸಂಪಾದಕರು ಹೇಳಿದ್ದು, ಭಿತ್ತಿಯಲ್ಲಿರುವುದು ಮುಮ್ಮಡಿಯವರದೇ ಚಿತ್ರ ಎಂದು ಒಪ್ಪಿದರೆ ಅನಂತ ಕವಿಯ ಕಾಲವನ್ನೇ ೧೮೫೩ಕ್ಕೆ ಹಾಕಲಡ್ಡಿಯಿಲ್ಲ[೭೮] ಎಂಬುದು ಅ.ಲ. ನರಸಿಂಹನ್‌ರ ಅಭಿಮತ.

ಶ್ರವಣಬೆಳಗೊಳದ ಶ್ರೀಮಠವು ಪಶ್ಚಿಮಾಭಿಮುಖವಾಗಿದ್ದು ಪೂರ್ವದಿಕ್ಕಿನಿಂದ ಪ್ರವೇಶವಿದೆ. ಮೆಟ್ಟಿಲನ್ನು ಹತ್ತಿ ಒಳಗಡೆ ನಡೆದರೆ ಪಶ್ಚಿಮ, ಉತ್ತರ, ಪೂರ್ವ ಹಾಗೂ ದಕ್ಷಿಣಕ್ಕೆ ಒಟ್ಟು ನಾಲ್ಕು ದಿಕ್ಕುಗಳಲ್ಲಿಯೂ ಚಿತ್ರಗಳನ್ನು ಕಾಣಬಹುದಾಗಿದೆ. ಈ ಚಿತ್ರಗಳ ಕಾಲಮಾನದ ಕುರಿತಂತೆ ಸಣ್ಣ ದ್ವಂದ್ವಗಳಿವೆ. ಕ್ರಿ.ಶ. ೧೭೮೦ ಅಥವಾ ಕ್ರಿ.ಶ. ೧೮೫೩ ಎಂಬುವ ಎರಡು ರೀತಿಯ ವಾದಗಳನ್ನು ಇಲ್ಲಿ ಉಲ್ಲೇಖ ಮಾಡಲಾಗಿದೆ. ಇನ್ನು ಈ ಚಿತ್ರಗಳ ಕುರಿತಾಗಿ ಈಗಾಗಲೇ ಸುಮಾರು ಅಧ್ಯಯನಗಳು ನಡೆದಿದ್ದು, ಅವುಗಳಲ್ಲಿ ಮುಖ್ಯವಾಗಿ ಶಿವರಾಮ ಕಾರಂತರು, ಅ.ಲ. ನರಸಿಂಹನ್‌ರವರು, ಡಾ॥ ಎಸ್.ಡಿ. ಶೆಟ್ಟಿಯವರು, ಡಾ॥ ಸಿಂಧಗಿ ರಾಜಶೇಖರ್, ಡಾ॥ ಎಸ್.ಸಿ. ಪಾಟೀಲ್‌ರವರು, ಬಿ.ವಿ.ಕೆ. ಶಾಸ್ತ್ರಿ, ಪಿ.ಆರ್. ತಿಪ್ಪೇಸ್ವಾಮಿಯವರು ಹಾಗೂ ಮಿರ್ಜಿ ಅಣ್ಣಾರಾಯ, ಎಸ್. ಉಮೇಶ್‌ರವರು ಈಗಾಗಲೇ ಶ್ರೀಮಠದ ಭಿತ್ತಿ ಚಿತ್ರಗಳ ಕುರಿತಾಗಿ ಅಧ್ಯಯನ ನಡೆಸಿದ್ದಾರೆ.

---

೭೮. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ.

ಈ ಚಿತ್ರಗಳಲ್ಲಿ ನಾವು ಮೂರು ಭಾಗಗಳಾಗಿ ಮಾಡಿ ಅಧ್ಯಯನ ಮಾಡಬಹುದು. ೧. ಧಾರ್ಮಿಕ ಚಿತ್ರಗಳು, ೨. ಐತಿಹಾಸಿಕ ಚಿತ್ರಗಳು ಹಾಗೂ ೩. ವಿನ್ಯಾಸಗಳು ಎಂದು ಮುರು ವಿಭಾಗಗಳನ್ನಾಗಿ ಒಂದೊಂದಾಗಿ ವಿವರಣೆ ಮಾಡಬಹುದು.

೧. ಧಾರ್ಮಿಕ ಭಿತ್ತಿ ಚಿತ್ರಗಳು

೨. ಐತಿಹಾಸಿಕ ಭಿತ್ತಿ ಚಿತ್ರಗಳು

೩. ವಿನ್ಯಾಸಗಳು

೧. ಧಾರ್ಮಿಕ ಭಿತ್ತಿಚಿತ್ರಗಳು

ಧಾರ್ಮಿಕ ಭಿತ್ತಿ ಚಿತ್ರಗಳ ಅಧ್ಯಯನದಲ್ಲಿ ೨೪ ತೀರ್ಥಂಕರರು ಅವರ ಜಾತಕ ಕತೆಗಳು, ಜನ್ಮ ಜನ್ಮದ ದ್ವೇಷ, ಅಷ್ಟಮಂಗಲಗಳು, ಶುಭ ಕನಸುಗಳು, ಶುಭ ಸೂಚಕಗಳು, ಯಕ್ಷ-ಯಕ್ಷಿಣಿಯರು, ಮುನಿಗಳು, ಪಂಚ ಪರಮೇಷ್ಠಿ, ಸಮವಸ್ರಣ, ನೇಮಿನಾಥರು, ಪಾರ್ಶ್ವನಾಥರು, ಆರು ಲೇಹ್ಯಗಳು ಹೀಗೆ ಇನ್ನು ಹಲವಾರು ವಿಷಯಗಳ ಕುರಿತಾಗಿ ಇಲ್ಲಿ ಅಧ್ಯಯನ ಮಾಡಬಹುದು. ಈ ಮಠದ ಎಡಭಾಗದ ಗೋಡೆಯ ಬದಿಯಿಂದ ಕ್ರಮವಾಗಿ ಪಶ್ಚಿಮದ ಗೋಡೆ, ಉತ್ತರ, ಪೂರ್ವ ಹಾಗೂ ದಕ್ಷಿಣ ಗೋಡೆಯಲ್ಲಿರುವ ಒಟ್ಟು ನಾಲ್ಕು ದಿಕ್ಕಿನ ಗೋಡೆಯ ಮೇಲೆ ಚಿತ್ರಗಳಿದ್ದು ಸಂಪೂರ್ಣವಾಗಿ ಎಲ್ಲವನ್ನು ಇಲ್ಲಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗುವುದು.

೧. ಎಡಭಾಗದ ಪಶ್ಚಿಮ ಗೋಡೆಯ ಚಿತ್ರಗಳು

೨. ಉತ್ತರದ ಗೋಡೆಯ ಚಿತ್ರಗಳು

೩. ಪೂರ್ವದ ಗೋಡೆಯ ಚಿತ್ರಗಳು

೪. ದಕ್ಷಿಣದ ಗೋಡೆಯ ಚಿತ್ರಗಳು

೫. ಬಲಭಾಗದ ಪಶ್ಚಿಮ ಗೋಡೆಯ ಚಿತ್ರಗಳು

೧. ಎಡ ಭಾಗದ ಪಶ್ಚಿಮಗೋಡೆಯ ಚಿತ್ರಗಳು

ಶ್ರೀ ಮಠವನ್ನು ಪ್ರವೇಶಿಸಿದಾಗ ನಮಗೆ ಎಡಬದಿಯಲ್ಲಿ ಪಶ್ಚಿಮ ಗೋಡೆಯಮೇಲೆ ಕಾಣುವ ಭಿತ್ತಿ ಚಿತ್ರಗಳ ಕುರಿತಾಗಿ ಕೆಳಗಿನಂತೆ ವಿವೇಚಿಸಬಹುದು. ಎಡಭಾಗದ ಪಶ್ಚಿಮ ಗೋಡೆ ಹಾಗೂ ಉತ್ತರ ಗೋಡೆಯಲ್ಲಿ ಪಾರ್ಶ್ವನಾಥ ಪೂರ್ವ ಜನ್ಮ ಜನ್ಮಾಂತರಗಳ ಕುರಿತಾಗಿರುವ ಚಿತ್ರಗಳನ್ನು ನಾವಿಲ್ಲಿ ಕಾಣಬಹುದು. ೨೪ ತೀರ್ಥಂಕರರಲ್ಲಿ ಭಗವಾನ್ ವೃಷಭನಾಥರು ಮೊದಲಿಗರು ಶ್ರೀ

ವರ್ಧಮಾನರು ಕೊನೆಯವರು, ಎಲ್ಲರೂ ಆಯಾ ಕಾಲದಲ್ಲಿ ಮಾಡಿಹೋದ ಧರ್ಮದ ಪುನರುತ್ಥಾನ ಮಾಡುತ್ತಾ ಲೋಕ ಕಲ್ಯಾಣಕರವಾದ ಅಹಿಂಸಾ ಧರ್ಮಭೋಧೆಯನ್ನು ಮಾಡಿದ್ದಾರೆ.

ಭಾಗವಾನ್ ಮಹಾವೀರರಿಗಿಂತ ಮೊದಲಿನವರು ಇವರ ೨೩ನೇ ತೀರ್ಥಂಕರೇ ಭಗವಾನ್ ಪಾರ್ಶ್ವನಾಥ ಸ್ವಾಮಿಯವರು ಇವರ ಜೀವನ ಚರಿತ್ರೆಯು ಬಹು ಕುತೂಹಲಕಾರಿಯೂ ರೋಮಾಂಚನಕಾರಿಯೂ ಪರಿಣಾಮಕಾರಿಯಾದ ಭಾವಗಳಿಂದ ವರ್ಣಿತವಾಗಿದೆ ಕರ್ಮ ವ್ಯಾಪಾರ ಎಂತಹುದು, ಧರ್ಮ ಅಧರ್ಮಗಳಿಂದ ಆಗುವ ಪರಿಣಾಮವೇನು ? ಕೋಪಿಷ್ಠ-ಸಹನಾಶೀಲ ಇವರ ಏಳು-ಬೀಳುರ್ಗಳೇನು ಎಂಬುದು ಈ ತೀರ್ಥೇಶನ ಚರಿತ್ರೆಯಿಂದ ತಿಳಿಯುತ್ತದೆ. ಶ್ರೀ ಪಾರ್ಶ್ವನಾಥ ಜನ್ಮಜನ್ಮಾಂತರಗಳ ಪುರಾಣದ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದ್ದು ಇದರ ಕುರಿತಾಗಿಯೇ ಶ್ರವಣಬೆಳಗೊಳದ ಶ್ರೀ ಮಠದಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದು ಚಿತ್ರವಿಮರ್ಶೆಯ ಪೂರ್ವದಲ್ಲಿ ಪುರಾಣದ ಐತೀಯನ್ನು ಅರಿಯುವುದು ಉಚಿತವೆನಿಸುವುದು ನಂತರ ಚಿತ್ರದ ರಚನೆ, ವಿನ್ಯಾಸ, ವರ್ಣಗಾರಿಕೆ ಸೌಮ್ಯತೆಯ ಕುರಿತಂತೆ ವಿವೇಚಿಸಬಹುದು.

ಪಾರ್ಶ್ವನಾಥರು ಪೂರ್ವಕ ಜನ್ಮದ ಪ್ರಥಮದಲ್ಲಿ ಜನನ ಮರಣಗಳ ಪುರಾಣವನ್ನು ತಿಳಿಯುವುದಾದರೆ. ಪೌದನಪುರವೆಂಬ ರಾಜ್ಯವಿತ್ತು ಅಲ್ಲಿ ಅರವಿಂದನೆಂಬ ಅರಸನಿದ್ದ ಆತನ ಮಂತ್ರಿ ವಿಶ್ವಭೂತಿ ಪ್ರಜಾನುರಾಗಿಯಾಗಿ ರಾಜನ ಹಿತವನ್ನು ಸಾಧಿಸಿಕೊಂಡು ಧರ್ಮ ಪಾರಾಯಣನಾಗಿ ಬಾಳಿ ರಾಜ್ಯದ ಕಲ್ಯಾಣವನ್ನು ಸಾಧಿಸಿದ ಈತನಿಗೆ ಅನುರೂಪಳಾದ ಅಮಂಧರಿ ಎಂಬ ಪತ್ನಿಯಿದ್ದಳು. ಈ ದಂಪತಿಗಳಿಗೆ ಕಮಠನೂ, ಮರುಭೂತಿಯೂ ಮಕ್ಕಳಾಗಿ ಹುಟ್ಟಿದರು. ಕಮಠ ಮಹಾದುಷ್ಟ ಮುಂಗೋಪಿ, ದೌರ್ಜನ್ಯಕಾರಿ, ಸ್ವಾರ್ಥಪರ, ಜೂಜುಗಾರ ಹಾಗೂ ವಿಷಯಲಂಪಟನಾಗಿ ತಂದೆ ತಾಯಿಗಳ ಹೆಸರಿಗೆ ಕಳಂಕ ತರುತ್ತಿದ್ದನು. ಮರುಭೂತಿಯಾದರೋ ದಯಪರವಾಗಿ ಧರ್ಮಾನು-ರಾಗಿಯಾಗಿ ಗುರು ಹಿರಿಯರಿಗೆ ತಗ್ಗಿಬಗ್ಗಿ ವಿನಯದಿಂದ ನಡೆದು ಕಮಠನ ನಡತೆಯಿಂದ ನೊಂದ ತನ್ನ ತಂದೆ ತಾಯಿಗಳ ಮನಸ್ಸಿಗೆ ಸಂತೋಷವನ್ನುಂಟು ಮಾಡುತ್ತಿದ್ದನು ಕಮಠನಿಗೆ ವಾರುಣಿಯೊಡನೆ ವಿವಾಹವಾಯಿತು. ಮರಭೂತಿ ವಸುಂಧರೆ ಎಂಬುವಳನ್ನು ವರಿಸಿದನು.[೮೦] ಈಗೆ ಪಾರ್ಶ್ವನಾಥರ ಜನ್ಮ ಪ್ರಾರಂಭದ ಪ್ರಥಮದಲ್ಲಿ ಕಮಠ ಮತ್ತು ಮರುಭೂತಿ ಎಂಬ ಸಹೋಧರತ್ವದಿಂದ ಪ್ರಾರಂಭವಾಗಿ ಒಂದು ಸಾತ್ವಿಕ ಮತ್ತೊಂದು ರಜೋಗುಣಗಳಾಗಿ ಪ್ರಾರಂಭವಾಗಿ ಒಂದು ಸಾತ್ವಿಕ ಮತ್ತೊಂದು ರಜೋಗುಣಗಳಾಗಿ ಜನ್ಮ ಜನ್ಮದಲ್ಲಿಯೂ ಇವುಗಳ ತಿಕ್ಕಾಟದಿಂದ ಸಾತ್ವಿಕ ಮನುಷ್ಯನಾದ ಮರುಭೂತಿಯು ದೈವತ್ವಹೊಂದಿ ಪಾರ್ಶನಾಥನಾಗಲು ಹಲವು ಜನ್ಮಗಳೇ ಬೇಕಾದವು ಇದರ ಕುರಿತು ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

೭೯. ಡಾ. ಅ. ಲ. ನರಸಿಂಹನ್ : ಕರ್ನಾಟಕ ಭಿತ್ತಿಚಿತ್ರ ಪರಂಪರೆ,

೮೦. ಅದೇ.

ಚಿತ್ರ–೧. ರಾಜ ಸಭೆಯಲ್ಲಿ ವಿಶ್ವಭೂತಿ ಮತ್ತು ಮಕ್ಕಳು

ಎಡಭಾಗದ ಪಶ್ಚಿಮ ಗೋಡೆಯ ಮೇಲೆ ಮೇಲಿನಿಂದ ಪ್ರಥಮ ಸಾಲಿನ ಮೊದಲ ಚಿತ್ರವಾಗಿದ್ದು ಇಲ್ಲಿ ಪೌದನ ಪುರದ ಅರಸರಾದ ಅರವಿಂದರನ್ನು ಆ ನಾಡಿನ ಮಂತ್ರಿಯಾದ ವಿಶ್ವಭೂತಿಯು ತನ್ನ ಮಕ್ಕಳಾದ ಕಮಠ ಮತ್ತು ಮರುಭೂತಿಯರೊಂದಿಗೆ ರಾಜ ಸಭೆಯಲ್ಲಿ ಬೇಟಿಯಾಗುತ್ತಿರುವ ದೃಶ್ಯವಾಗಿದ್ದು ಇಲ್ಲಿ ಶ್ವೇತವರ್ಣ ವಸ್ತ್ರದಾರಿಯಾಗಿ ಕಿರೀಟಧರಿಸಿ ಸಿಂಹಾಸನದಲ್ಲಿ ಎಡಗೈಯಲ್ಲಿ ಹೂವನ್ನು ಹಿಡಿದು ಬಲಗೈಯಲ್ಲಿ ಏನನ್ನೋ ನೀಡುವ ಭಂಗಿಯಲ್ಲಿದ್ದು ಬಲಗಾಲನ್ನು ಚಾಚಿಕೊಂಡು ಬಲಗಾಲನ್ನು ಕೆಳಗೆ ಜಾರಿರುವುದು ವಿಶ್ವಭೂತಿಯು ತನ್ನ ಎರಡೂ ಕೈಯಿಂದ ರಾಜನಿಂದ ಏನನ್ನೋ ಪಡೆಯುತ್ತಿರುವಂತೆ ಹಾಗೂ ಅವರ ಹಿಂಬದಿಯಲ್ಲಿ ಮರುಭೂತಿ ವಿಶ್ವಭೂತಿಯ ಭುಜದ ಮೇಲೆ ಕೈ ಇರಿಸಿರುವಂತೆ ಅವನ ಹಿಂದೆ ಕಮಠ ತನ್ನ ಬಲಗೈಯನ್ನು ಎತ್ತಿರುವಂತೆ ರಾಜನ ಹಿಂಬದಿಯಲ್ಲಿ ಮೂರುಜನ ನಿಂತಿರುವಂತೆ ತೋರುವುದು. ವರ್ಣ ಮತ್ತು ರೇಖಾ ವಿನ್ಯಾಸವನ್ನು ನೋಡುವುದಾದರೆ ಇಲ್ಲಿರುವ ಎಲ್ಲಾ ವ್ಯಕ್ತಿಗಳು ನಸುಗೆಂಪು ವರ್ಣದವರಾಗಿದ್ದು ಬಿಳಿ, ಕಂದು, ಗಾಢನೀಲಿ ವಸ್ತ್ರಗಳನ್ನು ಧರಿಸಿದ್ದಾರೆ. ಹಿಂಬದಿಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದ್ದು ವಿಶೇಷವಾಗಿ ಗಾಜಿನ ಹಣತೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಅರಮನೆಯ ಕಮಾನು ಹಾಗೂ ಅರಮನೆಯ ಹೊರ ಗೋಡೆಯ ವಿನ್ಯಾಸವನ್ನು ಇಲ್ಲಿ ತೋರಿಸಲಾಗಿರುವುದು. ಅರಸರು, ಮಂತ್ರಿಗಳು ಹಾಗೂ ಅವರ ಮಕ್ಕಳು ಧರಿಸಿರುವ ಆಭರಣಗಳು ಸಿಂಹಾಸನದ ರೇಖಾ ಮತ್ತು ವರ್ಣವಿನ್ಯಾಸ ಬಣ್ಣಗಳ ಬಳಕೆ ಮನ ಮೋಹಕವಾಗಿದ್ದು ಉತ್ತಮ ಸಂಯೋಜನೆ ಇದಾಗಿದೆ.

ಚಿತ್ರ–೨. ಮರುಭೂತಿಯನ್ನು ಮಂತ್ರಿ ಮಾಡುತ್ತಿರುವ ದೃಶ್ಯ

ಮರುಭೂತಿಯ ತಂದೆಯಾದ ವಿಶ್ವಭೂತಿಯು ತನ್ನ ತಲೆಯಲ್ಲಿ ನೆರೆಗೂದಲಿರುವುದನ್ನು ಕಂಡು ಚಿಂತಾಕ್ರಾಂತನಾಗಿ ಆತ್ಮೋನ್ನತಿಯನ್ನು ಮರೆತ ಮೂಢನಾದೆನೆಂದು ತನ್ನನ್ನು ತಾನೇ ನಿಂದಿಸಿಕೊಂಡು ತಪೋಭಿಮುಖನಾದನು. ಇದಕ್ಕೆ ಮೊದಲು ತನ್ನ ಮಂತ್ರಿ ಪದವಿಯನ್ನು ಅರ್ಹನಾದ ಮರಭೂತಿಗೆ ಕೊಟ್ಟು ಮಹಾರಾಜನ ಅನುಮತಿಯನ್ನು ಪಡೆದು ತಾನು ತಪಕ್ಕೆ ನಡೆದನು. ಈ ಕಥೆಯ ಸಾರಾನುಸಾಸರ ಇಲ್ಲಿ ಭಿತ್ತಿ ಚಿತ್ರವಿದು. ಪಶ್ಚಿಮ ಗೋಡೆಯ ಮೇಲಿನ ಸಾಲ ಎರಡನೆಯ ಚಿತ್ರ ಇದಾಗಿದೆ. ಇಲ್ಲಿ ಅರಸ ಅರವಿಂದರನ್ನು ವಿಶ್ವಭೂತಿಯು ಭೇಟಿಯಾಗಿ ತನ್ನ ಪರಿಸ್ಥಿತಿಯನ್ನು ವಿವರಿಸಿ ತನ್ನ ಬದಲು ತನ್ನ ಎರಡನೇ ಮಗನಾದ ಮರುಭೂತಿಯನ್ನು ಮಂತ್ರಿ ಮಾಡಿ ತಾನು ವೈರಾಗ್ಯದಿಂದ ತಪಕ್ಕೆ ನಡೆಯುವ ಭಿನ್ನಹವನ್ನು ರಾಜರ ನಡುವೆ ಅಂಚಿಕೊಳ್ಳುವ ದೃಶ್ಯ ಇದಾಗಿದೆ.

ಮೊದಲ ಚಿತ್ರದಂತೆ ಇಲ್ಲಿಯೂ ಸಹ ರಾಜ ಸಭೆಯಾಗಿದ್ದು ಅರಸನಿಂದ ರಾಜನು ಎದ್ದು

ನಿಂತು ವಿಶ್ವಭೂತಿಗೆ ಬಲಗೈಯಿಂದ ಅಸ್ತು ಮಾಡುತ್ತಿರುವುದನ್ನು ನಾವಿಲ್ಲಿ ಕಾಣಬಹುದಾಗಿದ್ದು ವಿಶ್ವಭೂತಿಯು ಅದನ್ನು ಸ್ವೀಕರಿಸುತ್ತಿರುವನು ಹಿಂದಿಯಲ್ಲಿ ನಾಲ್ಕು ಜನ ಹಾಗೂ ಮುಂಬದಿಯಲ್ಲಿ ನಾಲ್ಕು ಜನರಿರುವರು. ಹಿನ್ನೆಲೆಯಲ್ಲಿ ಸುವರ್ಣ ವರ್ಣದ ಕಮಾನು ಅದಕ್ಕೆ ಜೋತುಬಿದ್ದ ಗಾಜಿನ ತೂಗುದೀಪ ಅದರ ಹಿನ್ನಲೆಯಲ್ಲಿ ಕಮಾನು ಅದಕ್ಕೆ ತೂಗುಬಿದ್ದ ಹೂವಿನ ಬಳ್ಳಿಗಳು ಇದರ ಹಿಂದೆ ಕೆಂಪು ವರ್ಣವಿದ್ದು ಕಮಾನು ಸ್ತಂಭಗಳಿಗೆ ಗಾಜಿನ ದೀಪಗಳಿಂದ ಅಲಂಕರಿಸಲಾಗಿದೆ. ಚಿತ್ರದಲ್ಲಿಯೂ ಎಲ್ಲರೂ ಸಾಮಾನ್ಯವಾಗಿ ನಸುಗೆಂಪು ವರ್ಣದಿಂದ ಕೂಡಿದ್ದು ಅರಸನನ್ನು ಎಲ್ಲರಿಗಿಂತ ಎತ್ತಿರವಾಗಿ ತೋರಿಸಲಾಗಿದೆ. ಅಲ್ಲದೆ ಮೊದಲ ಚಿತ್ರದ ಮುಂದುವರೆದ ಭಾಗ ಇದಾಗಿದ್ದು ವಸ್ತ್ರ ವಿನ್ಯಾಸ ರೇಖಾ ವಿನ್ಯಾಸಗಳಲ್ಲಿ ಬಹುತೇಕ ಸಾಮ್ಯತೆಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ವಸ್ತ್ರ ವಿನ್ಯಾಸವು ಹಾಗೂ ರಾಜ ಸಭಿಕರು ಧರಿಸಿರುವ ಪೇಟ, ರುಮಾಲುಗಳು ಮೈಸೂರು ಅರಸರ ವಸ್ತ್ರ ಶೈಲಿಯನ್ನು ಹೋಲುತ್ತದೆ. ಅಲ್ಲದೆ ಹಿನ್ನೆಲೆಯಲ್ಲಿ ಗಾಜಿನ ದೀಪಗಳು, ಮರದ ಸ್ತಂಭಗಳು, ಗೋಪುರ ಕಮಾನುಗಳು ಮೈಸೂರಿನ ಪುರಾತನ ಅರಮನೆಯನ್ನು ನೆನಪಿಸುವ ಮಾದರಿಯಲ್ಲಿದೆ.

ಚಿತ್ರ-೩. ಅರವಿಂದರು ಹಾಗೂ ಮರುಭೂತಿ ಯುದ್ಧಕ್ಕೆ ಹೊರಟ ದೃಶ್ಯ

ಶ್ರೀ ಮಠದ ಪಶ್ಚಿಮದ ಎಡಗೋಡೆಯ ಮೇಲಿರುವ ಮೊದಲ ಸಾಲು ಹಾಗೂ ಮುಂದುವರೆದು ಎರಡನೆಯ ಸಾಲಿನಲ್ಲಿ ಈ ದೃಶ್ಯವನ್ನು ನಾವು ಕಾಣಬಹುದು. ಚಿತ್ರ ವಸ್ತುವಿಷಯದ ಹಿನ್ನೆಲೆ ವಿಶ್ವಭೂತಿಯು ಮಗನಿಗೆ ಮಂತ್ರಿ ಪಟ್ಟವನ್ನು ಕಟ್ಟಿದ ಮೇಲೆ ಇತ್ತ ಮರುಭೂತಿ ಮಂತ್ರಿಯಾಗಿ ರಾಜ್ಯದ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾ ತನ್ನ ಮನೆಯ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿದ್ದನು. ಕಮಠದಿನ ದಿನಕ್ಕೂ ಕೆಡುತ್ತಲೇ ಇದ್ದ. ಆತನಿಂದ ಯಾರೊಬ್ಬರಿಗು ಸುಖವಿರಲಿಲ್ಲ. ಮರುಭೂತಿ ತನ್ನಣ್ಣನಾದ ಕಮಠನನ್ನು ಪೂಜ್ಯನೆಂದೇ ತಿಳಿದುಕೊಂಡು ಗೌರವಿಸುತ್ತಿದ್ದನು. ತಂದೆ ಸತ್ತನಂತರ ತನಗೆ ಹಿರಿಯನಾಗಿರುವ ಕಮಠನನ್ನೇ ತಂದೆಯೆಂದು ತಿಳಿದು ವಿಧೇಯತೆಯಿಂದ ನಡೆದುಕೊಳ್ಳುತ್ತಿದ್ದನು.

ವಿಶ್ವಭೂತಿ ಮಂತ್ರಿಯಾಗಿರುವ ತನಕ ಪರರಾಯರು ಅಂಜಿಕೆಯಿಂದ ತೆಪ್ಪಗಿದ್ದರು. ಮರುಭೂತಿ ಮಂತ್ರಿಯಾದ ಮೇಲೆ ಅವರೆಲ್ಲ ಚೇತರಿಸಿಕೊಂಡು ಪೌದನಪುರವನ್ನು ಮುತ್ತಲು ಹೊಂಚು ಹಾಕುತ್ತಿದ್ದರು. ಮಹಾರಾಜನಾದ ಅರಂವಿದ ಮುದುಕ ಮಂತ್ರಿ ಮರುಭೂತಿ ಹುಡುಗ ಎಂದು ನಿರ್ಲಕ್ಷ್ಯದಿಂದ ವಜ್ರವೀರನೆಂಬ ರಾಜ ಕಾಲ್ಕೆರೆದು ಕದನಕ್ಕೆ ಬಂದನು ಈ ಸಂದರ್ಭದಲ್ಲಿ ಮರುಭೂತಿ ತನ್ನ ಕರ್ತವ್ಯವನ್ನರಿತುಕೊಂಡು ಸಮರಕ್ಕೆ ಸಿದ್ದನಾಗಿ ತನ್ನ ತಾಯಿಯನ್ನು ಅಣ್ಣನನ್ನು ಸಂಧಿಸಿ ಭಕ್ತಿಯಿಂದ ಅವರಿಬ್ಬರಿಗೂ ನಮಸ್ಕರಿಸಿ ಆಶೀರ್ವಾದವನ್ನು ಪಡೆದನು. ಅಣ್ಣನನ್ನು ಕುರಿತು "ಅಣ್ಣಾ

ನೀನು ನನಗೆ ತಂದೆಯ ಸಮಾನ" ತಂದೆಯ ತಮ್ಮನು ನಿಶ್ಚಿಂತನನ್ನಾಗಿರಿಸಿ ನನ್ನ ಮೇಲೆ ರಾಜ್ಯದ ಭಾರವನ್ನು ಹೊರಿಸಿದರು. ತಾವು ಹಿರಿಯರು ಆದ್ದರಿಂದ ಹಾಯಾಗಿ ಮನೆಯ ಕಡೆ ನೋಡಿಕೊಂಡಿರಿ. ಈಗ ತಾವೇ ನನ್ನನ್ನು ಆಶೀರ್ವದಿಸಿ ಸಮರಕ್ಕೆ ಕಳುಹಿಸಿಕೊಡಿ ತಮ್ಮ ಆಶೀರ್ವಾದವೇ ನನಗೆ ವಜ್ರಕವಚ ! ಎಂದು ಮರುಭೂತಿ ನುಡಿದು ಅಣ್ಣನಿಗೆ ಮಂತ್ರಿ ಪದವಿಕೊಟ್ಟು ಸೈನ್ಯ ಸಮೇತ ಯುದ್ದರಂಗಕ್ಕೆ ಮಹಾರಾಜನೊಡನೆ ತಾನು ಹೋದನು ಇದಾದ ನಂತರ ವಜ್ರವೀರನೊಂದಿಗೆ ಅರಂವಿದರು ಹಾಗೂ ಮರುಭೂತಿ ಯುದ್ಧವಾಡುತ್ತಿರುವ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ. ಪಶ್ಚಿಮಗೋಡೆಯ ಮೇಲಿನ ಸಾಲಿನಲ್ಲಿ ಈ ದೃಶ್ಯವಿದ್ದು ಮುಂದುವರೆದು ಎರಡನೆ ಸಾಲಿಗೂ ಇದು ಮುಂದುವರೆಯುತ್ತದೆ. ಈ ಚಿತ್ರದ ಪ್ರಾರಂಭದಲ್ಲಿ ಕಮಾನಿನ ಗೋಪುರವಿದ್ದು, ಅರಮನೆಯ ದ್ವಾರಬಾಗಿಲನ್ನು ಇದು ನೆನಪಿಸುತ್ತದೆ ಈ ದ್ವಾರ ಬಾಗಿಲಿಂದ ರಾಜರು ಸಾಮಂತರು ಸೇನಾಧಿಪತಿಗಳು ಮಂತ್ರಿಗಳು ವಿಶೇಷ ರಾಜಭಟರು ಸೇರಿದಂತೆ ಕಾಲಾಳು, ಅಶ್ವದಳ, ಗಜದಳ ಹಾಗು ಒಂಟೆಯನ್ನೇರಿ ಯುದ್ದಕ್ಕೆ ತೆರಳುತ್ತಿರುವುದು ಈ ದೃಶ್ಯದಲ್ಲಿ ಕಂಡುಬರುತ್ತದೆ.

ರಾಜರು ಸಾಮಂತ ರಾಜರು ರಾಜ ಪರಿವಾರದವರು ಮಂತ್ರಿ ವರ್ಗ ಇವರುಗಳು ಪಲ್ಲಕ್ಕಿ ಹಾಗುರಥವನ್ನೇರಿ ಸಾಗುತ್ತಿರುವುದು ಈ ದೃಶ್ಯದಲ್ಲಿದೆ ವಿಶೇಷವಾಗಿ ಗಮನಿಸಿಸುವುದಾದರೆ ಈ ಸೈನ್ಯದಲ್ಲಿ ತುಪಾಕಿಗಳನ್ನಿಡಿದು ಸಾಗುತ್ತಿರುವ ಯೋಧರನ್ನು ಸಹ ನಾವಿಲ್ಲಿ ಕಾಣಬಹುದಾಗಿದೆ. ಈ ಮೇಲಿನ ಸಾಲಿನ ಯುದ್ಧದ ದೃಶ್ಯದಲ್ಲಿ ಹಿನ್ನೆಲೆಯನ್ನು ಗಾಢ ಹಸಿರು ವರ್ಣದಿಂದ ಚಿತ್ರಿಸಿದ್ದು ಆನೆಗಳು ಕುದುರೆಗಳನ್ನು ಕೆಂಪು ಮಿಶ್ರಿತ ಕಂದು ವರ್ಣದಿಂದ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ಎಲ್ಲರು ಒಂದೇ ರೀತಿಯ ವಸ್ತ್ರ ಶೈಲಿಯನ್ನು ಒಂದಿದ್ದು ಕೆಂಪು ಹಸಿರು ತಿಳಿಗೆಂಪು ವಸ್ತ್ರಗಳನ್ನು ಇವರು ಧರಿಸಿದ್ದು ಮಹಾರಾಜರು ಗಜದ ಮೇಲೆ ಹೋಗುತ್ತಿರುವುದನ್ನು ಕಾಣಬಹುದಾಗಿದ್ದರೂ ಸಹ ಚಿತ್ರಕ್ಕೆ ಒದಗಿ ಬಂದ ವಿಪತ್ತಿನಿಂದ ಆ ಭಾಗದ ಭಿತ್ತಿ ಚಿತ್ರದ ಚಕ್ಕಳಿಯು ಬಿದ್ದು ಹೋಗಿರುತ್ತದೆ. ಇಲ್ಲಿ ರಾಜರು ಕಿರೀಟದಾರಿಯಾಗಿದ್ದು ಹೂವನ್ನಿಡಿದು ಅಂಬಾರಿಯ ಮೇಲೆ ಸಾಗುತ್ತಿದ್ದು ಇವರ ಹಿಂಬದಿಯಲ್ಲಿ ಚಾಮರವಿಡಿದು ಕೂತಿರುವ ವ್ಯಕ್ತಿಯನ್ನು ಕಾಣಬಹುದು. ವಿಶೇಷವಾಗಿ ಈ ಭಿತ್ತಿ ಚಿತ್ರದಲ್ಲಿ ಗಮನಿಸಬಹುದಾದ ಐತಿಹಾಸಿಕ ಅಂಶವೆಂದರೆ ತುಪಾಕಿಗಳನ್ನು ಹಿಡಿದು ಸಾಗುತ್ತಿರುವ ಯೋಧರು ಹಾಗು ಅವರ ಸೊಂಟದಲ್ಲಿ ಕಟ್ಟಲಾಗಿರುವ ತುಪಾಕಿಯ ಮದ್ದು ಗುಂಡುಗಳ ಚೀಲವನ್ನು ಕಾಣಬಹುದಾಗಿದ್ದು ಇವರುಗಳ್ಯಾರು ಪೈಜಾಮದಂತಹ ಕೆಳ ವಸ್ತ್ರವನ್ನು ಧರಿಸದೆ ಇರುವುದು ಗೋಚರಿಸುತ್ತದೆ. ಆದುದರಿಂದ ಇವರನ್ನು ಆಂಗ್ಲ ಯೋಧರು ಎಂದು ಊಹಿಸಬಹುದಾಗಿದೆ .ಈ ಚಿತ್ರವನ್ನು ಬರೆದ ಕಾಲಮಾನ ೧೪ನೇ ಶತಮನದ ಆಸುಪಾಸಾಗಿದ್ದು ಮೈಸೂರು ಅರಸರ ಆಶ್ರಯದಲ್ಲಿ ಆದ ಕಲಾಕೃತಿಗಳಾಗಿರುವ ಕಾರಣ ಅದೇ ಕಾಲಮಾನದ ಕಲಾವಿದ ರಚಿಸಿರುವ ಚಿತ್ರಗಳು

ಇವಾಗಿರುವುದರಿಂದ ಅಂದಿನ ಕಾಲಮಾನಕ್ಕೆ ತಕ್ಕಂತೆ ಜನಜೀವನ ವಸ್ತ್ರವಿನ್ಯಾಸ ಬಳಕೆಯ ವಸ್ತ್ರಗಳು ಹಾಗು ಇವರ ನಡುವಿನ ವ್ಯತ್ಯಾಸಗಳು ಇಲ್ಲಿ ಗೋಚರವಾಗುತ್ತವೆ. ಇದೇ ಚಿತ್ರದ ಮುಂದುವರೆದ ಭಾಗವಾದ ಎರಡನೇ ಸಾಲಿನಲ್ಲಿ ಸೈನಿಕರು ಕುದುರೆಯನ್ನು ಏರಿ ಸಾಗುತ್ತಿರುವುದು ಧ್ವಜಗಳನ್ನು ಹಿಡಿದು ನಡೆಯುತ್ತಿರುವುದು ರಾಜರು ಈಟಿಯನ್ನು ಎಸೆಯುತ್ತಿರುವುದು ಅದನ್ನು ಮತ್ತೊಬ್ಬ ಗಿಡುಗವನ್ನು ಹಿಡಿದಿರುವುದು ರಾಜರಿಗೆ ಛತ್ರಿ ಚಾಮರವನ್ನು ಹಿಡಿದಿರುವುದು ಇಲ್ಲಿ ವಿಶೇಷವಾಗಿ ಕಾಣಬಹುದಾಗಿದೆ.

ಅರಸರನ್ನು ಹೊರತುಪಡಿಸಿ ಇನ್ಯಾರ ಕಾಲುಗಳಲ್ಲು ಪಾದರಕ್ಷೆಗಳು ಕಂಡು ಬರುವುದಿಲ್ಲ. ಸೂಕ್ಷ್ಮವಾಗಿ ಕೆಳಸಾಲಿನ ಚಿತ್ರಗಳ ನೋಡುವುದಾದದರೆ ಇಲ್ಲಿಯ ಯೋಧರು ಮುಸ್ಲಿಮರಂತೆ ಕಾಣುವರು. ಇವರ ಕೈಯಲ್ಲಿ ಕತ್ತಿ, ಈಟಿ, ಬರ್ಚಿ, ಗುರಾಣಿಗಳನ್ನು ಹಿಡಿದಿದ್ದು ಓರ್ವ ವ್ಯಕ್ತಿಯ ಕೈಲಿ ಬಿಳಿಯ ಗಿಡುಗ ಬಂದು ಹಿಡಿದಿರುವುದನ್ನು ಕಾಣಬಹುದಾಗಿದೆ. ಈ ರೀತಿ ವಾಯುವ್ಯದಿಂದ ದಾಳಿ ಮಾಡಿದ ಮುಸ್ಲಿಮರು ಈ ತಂತ್ರ ವಿದ್ಯೆಯನ್ನು ಯುದ್ದ ಕಾಲದಲ್ಲಿ ಪ್ರಯೋಗಿಸುತ್ತಿದ್ದರು. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣ ತೋರಿಸಿದ್ದು ಅರಸರ ಹಿನ್ನೆಲೆಯನ್ನು ಹಸಿರು ವರ್ಣದಿಂದ ತೋರಿಸಲಾಗಿದೆ ವರ್ಣಗಾರಿಕೆ, ತಂತ್ರಗಾರಿಕೆ, ವಿನ್ಯಾಸ ಶೈಲಿ ಭಾವೋತ್ಪ್ರೇಕ್ಷೆ ಬಹು ನೈಜವೆನಿಸುವ ಕಲಾಕೃತಿ ಇದಾಗಿದೆ. ಮುಂದುವರೆದ ಭಾಗದಲ್ಲಿ ಆನೆಗಳ ಸಾಲಿದ್ದು ಮಹಾರಾಜರಾದ ಅರವಿಂದರು ಗಜದ ಅಂಬಾರಿಯನ್ನು ಏರಿ ಸಾಗುತ್ತಿರುವುದು ಇವರ ಮುಂಭಾಗದಲ್ಲಿ ಯುದ್ದವನ್ನು ಗೆದ್ದ ಸಂಭ್ರಮಾಚರಣೆ ಪ್ರಯುಕ್ತವಾಗಿ ಗಜದ ಮೇಲೆ ಅವರ ನಾಡಧ್ವಜವನ್ನು ಹಿಡಿದು ಸಾಗುತ್ತಿರುವುದು ಖಡ್ಗ, ಗುರಾಣಿಗಳನ್ನು ಹಿಡಿದು ಪಥಸಂಚಲನ ನಡೆಸುತ್ತಿರುವ ಯೋಧರನ್ನು ಕಾಣಬಹುದು ಸೂಕ್ಷ್ಮವಾಗಿ ಈ ಚಿತ್ರವನ್ನು ವಿವೇಚಿಸುವುದಾದರೆ ಅರವಿಂಧರ ಭಾವಚಿತ್ರವನ್ನು ಟಿಪ್ಪುವಿಗೆ ಹೋಲಿಸಿ ಕಲಾವಿದನು ಚಿತ್ರಿಸಿದಂತೆ ತೋರುತ್ತದೆ. ಇದಕ್ಕೆ ಪೂರಕ ಸಾಕ್ಷಿಯಾಗಿ ಅರಸರ ಪೇಟ ಹಾಗೂ ಅಂಬಾರಿಯ ಮೇಲೆ ಹಾಸಿರುವ ಹುಲಿಯ ಚರ್ಮ ಇದಕ್ಕೆ ಪುಷ್ಠಿ ನೀಡುತ್ತದೆ. ಈ ಎಲ್ಲಾ ಐತಿಹಾಸಿಕ ಘಟನೆಗಳನ್ನು ಜೈನ ಪುರಾಣದ ಕಥೆಗಳಿಗೆ ಹೋಲುವಂತೆ ಆ ಕಾಲದ ಕಲಾವಿದರು ಅಲ್ಲಿಯ ಸ್ವಾಭಾವಿಕವಾಗಿ ಕಾಣುವ ಅಂಶಗಳನ್ನು ಇಟ್ಟುಕೊಂಡು ಚಿತ್ರ ರಚನೆ ಮಾಡಿರುವುದು ಉಲ್ಲೇಖಾರ್ಹ.

ಚಿತ್ರ-೪. ಅರವಿಂದರು ಕಮಠ ಹಾಗು ಮರುಭೂತಿಯೊಂದಿಗೆ ಸಂವಾದ

ಯುದ್ದದಲ್ಲಿ ಎದುರಾಳಿಯೊಡನೆ ಧೈರ್ಯವಾಗಿ ಹೋರಾಡಿದುದರಿಂದ ಅರವಿಂದರಿಗೆ ಜಯಲಕ್ಷ್ಮಿ ಒಲಿದಳು. ಗೆಲುವನ್ನು ಕಂಡು ಸಂತಸದಿಂದ ರಾಜನು ಮಂತ್ರಿಯೂ ಪಾದನ ಪೌರಕ್ಕೆ

ಹಿಂದಿರುಗಿದರು. ಇದರ ಪೂರ್ವದಲ್ಲಿ ಅರವಿಂದ ರಾಜನು ಮರಭೂತಿ ಮಂತ್ರಿಯೂ ಸಮರಕ್ಕೆ ನಡೆದ ನಂತರ ಕಮಠನು ತಾನೇತಾನಾಗಿ ಸ್ವೇಚ್ಛಾಪನಾಗಿ ವರ್ತಿಸಿ ಅರಮನೆಯಲ್ಲೂ ಅನೇಕ ದೌರ್ಜನ್ಯ ಕೃತ್ಯಗಳನ್ನು ಮಾಡಿ, ರಾಜ್ಯದಲ್ಲೂ ನೀಚ ಕೃತ್ಯಗಳೆನ್ನೆಸಗಿದನು. ಬಾಹ್ಯ ಶತ್ರುಗಳನ್ನು ಗೆಲ್ಲುವ ಆತುರದಲ್ಲಿ ಗೋಮುಖ ವ್ಯಾಘ್ರವನ್ನು ಪ್ರಜಾಪರಿಪಾಲನೆಗೆ ನೇಮಿಸಿದಂತಾಯಿತು. ವಿಷಯ ಲಂಪಟನಾಗಿದ್ದ ಕೈಗೆ ಅಧಿಕಾರ ಸೂತ್ರಗಳೂ ದೊರೆತು ದ್ರವ್ಯರಾಶಿಯೂ ಸಿಕ್ಕಿ ಅವನ ವಿಷಯ ವಾಸನೆಗೆ ಅಡೆತಡೆಯಿಲ್ಲದಂತಾಯಿತು. ನಾನಾ ವ್ಯಸನಕ್ಕೆ ಸಿಕ್ಕಿದ ಕಮಠ ಸದಾ ಜೂಜಿನಲ್ಲಿ ಮಗ್ನಾಗಿ ಪರನಾರಿಯರ ಶೀಲವನ್ನು ಕೆಡಿಸುತ್ತಾ, ತನ್ನ ವಿಷಯ ಲಂಪಟತನಕ್ಕೆ ನೆರವಾಗುವವರಿಗೆ ಹೇರಳವಾಗಿ ದ್ರವ್ಯವನ್ನು ಚೆಲ್ಲುತ್ತಾ, ಪರಮ ನೀಚನಾಗಿ ಬಾಳಿದ ಈ ವಿಷಯದ ಕುರಿತಾಗಿ ಅರಮನೆಯ ಸಭಿಕರು ರಾಜ ಪರಿವಾರದವರು, ಜನಸಾಮಾನ್ಯರು ರಾಜರ ಬಳಿ ಕಮಠನ ವಿರುದ್ಧ ದೂರುಗಳನ್ನು ತಂದರು ಇದರ ಸಲುವಾಗಿ ಅರವಿಂದ ಮಹಾರಾಜನು ಕಮಠ ಹಾಗು ಮರುಭೂತಿಯನ್ನು ಅರಮನೆಯ ನ್ಯಾಯಮಂಟಪಕ್ಕೆ ಕರೆಸಿ ವಿಚಾರಣೆ ನಡೆಸಿ ತೀರ್ಪು ನೀಡುತ್ತಿರುವ ಸನ್ನಿವೇಶದ ದೃಶ್ಯ ಇದಾಗಿದೆ.

ಈ ದೃಶ್ಯವು ಅತ್ಯತ್ತಮ ಸಂಯೋಜನೆಯಾಗಿದ್ದು ಇಲ್ಲಿ ಅರವಿಂದರು ಹಾಗೂ ಕಮಠ ಮತ್ತು ಮರುಭೂಮಿ ಎದುರು ಬದುರಾಗಿ ಕುಳಿತಿದ್ದು ಅರಸರ ಹಿಂದೆ ನಾಲ್ಕು ಜನರಿದ್ದು ಕೊನೆಯವನು ದ್ವಾರವನ್ನು ಕಾಯುವ ದ್ವಾರಪಾಲಕನಾಗಿದ್ದು ಕೈಯಲ್ಲಿ ನೀಳವಾದ ಕತ್ತಿಯೊಂದನ್ನು ಹಿಡಿದು ನಿಂತಿದ್ದಾನೆ ಇನ್ನೋರ್ವ ಕೈಯಲ್ಲಿ ಚಾಕುವನ್ನಿಡಿದು ಛತ್ರಿಯೊಂದಿಗೆ ನಿಂತಿದ್ದಾನೆ. ಇವನ ಮುಂಭಾಗದಲ್ಲಿ ಮತ್ತೋರ್ವನು ಗಾಳಿ ಬಿಸುವ ಚಾಮರನ್ನಿಡಿದು ನಿಂತಿದ್ದು ಇವನ ಮುಂಭಾಗದಲ್ಲಿ ಮತ್ತೋರ್ವನು ಕುಬ್ಜನಂತೆ ಕಿರಿಯದಾಗಿ ಕಲಾವಿದನು ಚಿತ್ರಿಸಿದ್ದಾನೆ. ಇಲ್ಲಿ ಮಹಾರಾಜರು ಬಲಗೈನ್ನು ಎತ್ತಿ ಚಿನ್ಮುದ್ರೆಯನ್ನು ಹಿಡಿದಂತೆ ಆದೇಶವನ್ನು ಮಾಡುತ್ತಿದ್ದು ಕಮಠ ಮರುಭೂತಿಯರು ಅದನ್ನು ಕೈಯಮುಗಿದು ಆಲಿಸುತ್ತಿರುವುದು ಈ ದೃಶ್ಯದಲ್ಲಿ ಕಂಡುಬರುತ್ತದೆ ಇವರ ಹಿಂಬದಿಯಲ್ಲಿ ಮೂವರಿದ್ದು ಕೊನೆಯಲ್ಲಿ ಧಾಂಡಿಗನೊಬ್ಬ ಕತ್ತಿಯನ್ನಿಡಿದು ಧ್ವಾರಪಾಲಕನಂತೆ ನಿಂತಿರುವುದು ಮತ್ತೋರ್ವ ಕೈಯನ್ನು ಎತ್ತಿ, ಎಡಗೈಯಲ್ಲಿ ಕತ್ತಿಯನ್ನು ಕೆಳಮುಖವಾಗಿ ಹಿಡಿದು ನಿಂತಿದ್ದು ಹೊಗಳು ಭಂಟನಂತೆ ತೋರುತ್ತದೆ.

ಈ ದೃಶ್ಯಗಳಲ್ಲಿ ಮುಖ್ಯವಾಗಿ ಗಮನಿಸಲೇ ಬೇಕಾದ ಕೆಲವು ಅಂಶಗಳಿದ್ದು ಸೂಕ್ಷ್ಮವಾಗಿ ಗಮನಿಸಿದಾಗ ಅವುಗಳ ಅರಿವು ನಯವಾಗುತ್ತವೆ. ಈ ಸನ್ನಿವೇಶ ಅರಮನೆಯ ಹೊರಭಾಗದಲ್ಲಿ ನಡೆದಿರಬಹುದು ಎಂಬ ಸಂಗತಿಯು ಹಿನ್ನೆಲೆಯಲ್ಲಿ ಗಾಡ ಹಸಿರು ವರ್ಣವನ್ನು ಲೇಪಿಸಿರುವುದರಿಂದ ತಿಳಿದುಬರುತ್ತದೆ. ಮಂಟಪದ ಕಂಬಗಳನ್ನು ಗಮನಿಸಿದಾಗ ಇದು ಮರದ ಕಂಬದಂತೆ ತೋರುವುದು

ಮಂಟಪದ ಮೇಲೆ ನೀರು ನಿಲ್ಲದಂತೆ ಅರ್ಧ ಚಂದ್ರಾ ಕೃತಿಯನ್ನು ಮಂಟಪದ ಮಧ್ಯಭಾಗದಲ್ಲಿ ಮಾಡಿದ್ದಾರೆ. ನೋಡುಗನ ಎಡಭಾಗದ ಮಂಟಪವನ್ನು ಎರಡಂತ್ತಸ್ತಿನ ಕಟ್ಟಡವಾಗಿದೆ ಇದನ್ನು ಹತ್ತಲು ಮೆಟ್ಟಿಲುಗಳನ್ನು ಸಹ ಇಲ್ಲಿ ಕಾಣಬಹುದಾಗಿದೆ. ಮೇಲಿನಿಂದ ಹೊರಭಾಗದ ವೀಕ್ಷಣೆಯನ್ನು ಮಾಡಲು ಚಾವಣಿಯನ್ನು ನಿರ್ಮಿಸಿರುವುದು ಈ ಚಿತ್ರದಲ್ಲಿ ಕಂಡು ಬರುತ್ತದೆ. ಕೆಳಭಾಗದಲ್ಲಿ ಕಮಾನಿನ ಗೋಡೆ ಇದ್ದು ಅದರ ಮೇಲೆ ಹೂ ಬಳ್ಳಿ ವಿನ್ಯಾಸದ ಭಿತ್ತಿಚಿತ್ರಗಳನ್ನು ಸಹ ಇಲ್ಲಿ ಕಾಣಬಹುದು ಇದೂ ಸಹ ಮೊಘಲರ ಪ್ರಭಾವವನ್ನು ಕಟ್ಟಡಗಳು ಮೈಸೂರು ಚಿತ್ರಕಲೆಯ ಪ್ರಭಾವವನ್ನು ಇಲ್ಲಿ ಕಾಣಬಹುದಾಗಿದೆ ರೇಖಾವಿನ್ಯಾಸವನ್ನು ನೋಡಿದರೆ ಸೂಕ್ಷ್ಮವಾದ ರೇಖಾವರ್ಣನೆ ಇಲ್ಲಿ ಮಾಡಲಾಗಿದ್ದು ಇಲ್ಲಿಯೂ ಚಿತ್ರಕ್ಕೆಂದು ಕುಂದು ಬರದಂತೆ ಎಚ್ಚರವಹಿಸಿ ಔಚಿತ್ಯ ಪೂರ್ಣವಾಗಿದೆ ಎಳೆಯಲಾಗಿದೆ ವರ್ಣಗಾರಿಕೆಯೂ ಸಹ ಉತ್ತಮ ಹೊಂದಾಣಿಕೆಯಾಗಿದ್ದು ಇಲ್ಲಿ ಕೆಂಪು, ಬಿಳಿ ಹಸಿರು ಗಾಡನೀಲಿ, ಗಾಡ ಹಸಿರು ಕಂದು ವರ್ಣಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಚಿತ್ರ–೫. ಕಮಠನು ಸ್ತ್ರೀಯರೊಂದಿಗೆ ಪಗಡೆಯಾಡುತ್ತಿರುವುದು

ಅಧಿಕಾರದ ಅಮಲಿನಲ್ಲಿ ತೊಳಲಾಡುತ್ತಿದ್ದ ಕರ್ಮನು ನಾನಾ ವ್ಯಸನಕ್ಕೆ ಸಿಕ್ಕಿ ತಾನೂ ಸಹಾ ಜೂಜಿನಲ್ಲಿ ಮಗ್ನನಾಗಿ ಪರನಾರಿಯರ ಶೀಲವನ್ನು ಕೆಡಿಸುತ್ತಾ ತನ್ನ ವಿಷಯ ಲಂಪಟತನಕ್ಕೆ ನೆರವಾಗುವವರಿಗೆ ಹೇರಳವಾಗಿ ದ್ರವ್ಯಗಳನ್ನು ಚೆಲ್ಲುತ್ತಾ ಪರಮ ನೀಚನಾಗಿ ಬಾಳಿದನಲ್ಲದೆ ಸದಾ ವೇಶ್ಯೆಯರ ಗೃಹದಲ್ಲಿಯೇ ತನ್ನ ದಿನದ ಅವಧಿಯನ್ನು ಕಳೆಯಲಾರಂಭಿಸಿದ ಅದರ ಸಾಕ್ಷೀಭೂತವಾಗಿ ಈ ಚಿತ್ರವನ್ನು ನಾವಿಲ್ಲಿ ಕಾಣಬಹುದಾಗಿದೆ.

ಈ ಚಿತ್ರದಲ್ಲಿ ಕಮಠನು ನಾಲ್ಕು ಜನ ಸ್ತ್ರೀಯರೊಂದಿಗೆ ಪಗಡೆಯಾಡುತ್ತ ತನ್ನ ಕಾಯನ್ನು ಸರಿಸುತ್ತಿರುವ ದೃಶ್ಯ ನೋಡುಗನ ಎಡಗಡೆ ಕಮಠ ಕುಳಿತಿದ್ದು ತನ್ನ ಬಲಗಾಲನ್ನು ಚಾಚಿ ಎಡಗಾಲನ್ನು ಮಡಿಚಿಕೊಂಡು ಎಡಗೈಯನ್ನು ಗೋಡೆಯ ಮೇಲೆ ಇರಿಸಿಕೊಂಡು ಬಲಗೈಯಿಂದ ದಾಳವನ್ನು ನಡೆಸುತ್ತಿರುವುದು ಕಂಡು ಬರುತ್ತದೆ. ಅವನ ಮುಂದಿರುವ ಸ್ತ್ರೀಯೂ ಗಾಡ ಹಸಿರು ಸೀರೆಯನ್ನು ಹುಟ್ಟು ಸುಕಾಸನದಲ್ಲಿ ಕೂತು ಬಲಗೈಯಿಂದ ದಾಳವನ್ನು ನಡೆಸುತ್ತಿರುವುದು ಅವಳ ಹಿಂದಿನ ಸ್ತ್ರೀ ಬಿಳಿ ಸೀರೆಯನ್ನು ಧರಿಸಿ ಆಭರಣ ಕಚಿತಳಾಗಿ ತನ್ನ ಬಲಗೈಯನ್ನು ಮೇಲೆತ್ತಿ ರಾಜನ ಬಳಿ ನೋಡುತ್ತಾಳೆ ಅವಳ ಹಿಂಬದಿಯ ಸ್ತ್ರೀಯೂ ಸಹ ಕೆಂಪು ಸೀರೆಯನ್ನು ಧರಿಸಿದ್ದು ಬಲಗೈಯನ್ನು ಎತ್ತಿ ಅದರ ತೋರು ಬೆರಳಿನ ಮೇಲೆ ಕೆಂಪು ಗಿಳಿಯನ್ನು ಕೂರಿಸಿ ಕೊಳ್ಳುವ ರೀತಿಯಲ್ಲಿ ಕಲಾವಿದನು ಚಿತ್ರಿಸಿದ್ದಾನೆ ಇವಳ ಹಿಂಬದಿಯ ಸ್ತ್ರಿಯು ಇವರಿಗೆ ಬೆನ್ನುಮಾಡಿ ಕುಳಿತಿದ್ದು ಯಾರನೋ ನೀರಿಕ್ಷಿಸುವ ರೀತಿಯಲ್ಲಿ ಬಾಯಿಯ ಮೇಲೆ ಬಲಗೈ ತೋರು ಬೆರಳನ್ನು ಇಟ್ಟುಕೊಂಡು ದ್ವಾರಬಾಗಿಲಿನ

ಕಡೆಗೆ ಯಾರಾದರು ಬಂದರೂ ಎಂಬ ರೀತಿಯಲ್ಲಿ ನೋಡುವ ರೀತಿಯಲ್ಲಿ ಕಲಾವಿದನು ಚಿತ್ರವನ್ನು ರಚಿಸಿದ್ದಾರೆ. ಈ ಸನ್ನಿವೇಶವು ಯಾವುದೋ ಒಂದು ಖಾಸಗಿ ಜಾಗದಲ್ಲಿ ನಡೆಯುವಂತೆ ತೋರುವುದು. ಭಾಗಶಃ ವೇಶ್ಯೆಯರ ಗೃಹವಿರಬಹುದು ಅಥವ ಕವಠನ ಖಾಸಗಿ ಜಾಗವಿರಬಹುದು ಕಾರಣ ಇದು ನೋಡಲು ಮೊದಲ ಮಹಡಿಯಂತೆ ತೋರುಹುದು ಈ ಕಟ್ಟಡದ ಮುಂದಿನ ಚಾವಣಿಯನ್ನು ತೆರೆದುಬಿಟ್ಟಿದ್ದು ಇಲ್ಲಿಂದ ಹೊರಾಂಗಣ ದೃಶ್ಯವನ್ನು ನೋಡಬಹುದಾಗಿದೆ ಇದರ ಹಿಂಬದಿಯಲ್ಲಿ ಹಸಿರು ವಣವಿದ್ದು ಮರಗಿಡಗಳಿರಬಹುದು ಈ ಹೊರಮಹಡಿಯಿಂದ ಕಮಠನು ಒಂದು ಕೈಯನ್ನು ಹೊರಗೆ ಬಿಟ್ಟುಕೊಂಡಿದ್ದು ಹೊರೆಯಾಗಿ ಕುಳಿತಿದ್ದಾನೆ ನೆಲಕ್ಕೆ ಕೆಂಪು ಜಮಕಾನವನ್ನು ಹಾಸಿದ್ದು ಅವರ ಮೇಲೆ ಕುಳಿತಿರುವರು ಇದರ ಮೇಲೂ ರತ್ನಗಂಬಳಿಯ ವಿನ್ಯಾಸವಿದೆ ಇದರ ಮುಂಭಾಗದಲ್ಲಿ ಬಂಗಿಯನ್ನು ಸೇರುವ ಉಪಕರಣವನ್ನು ಇಲ್ಲಿ ಇರಿಸಲಾಗಿದ್ದು ಇವೆಲ್ಲವನ್ನು ಅಂದು ಕಾಮಾಂದ ವ್ಯಸನಿಗಳು ರಾಜ ವೈಭೋಗದವರು, ಅರಸಮನೆತನದವರು ಮಾತ್ರ ಬಳಸಬಹುದಿತ್ತು .ಪಗಡೆಯಾಡಲು ಚಿಕ್ಕದೊಂದು ಟಿಪಾಯಿ ಮಾದರಿಯ ಪೀಠವು ಇದ್ದು ಇದು ಕಮಲದಾಕಾರದಲ್ಲಿದೆ ಇದರ ಮೇಲೆ ದಾಳಗಳನ್ನು ನಾವು ಕಾಣಬಹುದಾಗಿದೆ. ಹಿನ್ನೆಲೆಯಲ್ಲಿ ಕಮಾನು ಅದರ ಬದಿಯ ಸುತ್ತಲೂ ಸುವರ್ಣ ವಿನ್ಯಾಸ ಅಲ್ಲಲ್ಲಿ ಕೆಂಪು ಗೂಡಿನಾಕೃತಿ ಮಧ್ಯ ಹಾಗು ಕೊನೆಯ ಮೂಲೆಗಳಲ್ಲಿ ವಿನ್ಯಾಸ ಇವೆಲ್ಲವನ್ನು ನಾವಿಲ್ಲಿ ಕಾಣಬಹುದಾಗಿದೆ.

ಒಟ್ಟಾರೆಯಾಗಿ ಸುಂದರ ಹಾಗೂ ಸೌಂದರ್ಯಕ್ಕೆ ಸಂಬಂಧಿಸಿದ ಚಿತ್ರವಿದ್ದಾಗಿದ್ದು ಇದರಲ್ಲಿ ಶೃಂಗಾರ ಹಾಗೂ ಸೌಂದರ್ಯಕ್ಕೆ ಹೆಚ್ಚು ಬೆಲೆ ಕೊಡಲಾಗಿದ್ದು ಅಭ್ಯಾಸವೆನಿಸುವ ಯಾವುದೊಂದು ಸಣ್ಣ ಅಂಶವನ್ನು ಕಲಾವಿದನು ಇಲ್ಲಿ ತೋರಿಸಿಲ್ಲ ವಿಷಯಕ್ಕೆ ಬೇಕಾದಷ್ಟು ಮಾತ್ರ ಔಚಿತ್ಯ ಪೂರ್ಣವಾಗಿ ಚಿತ್ರಿಸಿದ್ದಾನೆ. ಚಿತ್ರ ಸಂಯೋಜನೆಯಂತೂ ನಯನ ಮನೋಹರವಾಗಿದ್ದು ಚಿತ್ರ ವಿನ್ಯಾಸ, ರೇಖಾ ವಿನ್ಯಾಸ, ವರ್ಣಗಾರಿ ಎಲ್ಲರೂ ತಾಳಮಾನಕ್ಕೆ ತಕ್ಕಂತೆ ಸಂಯೋಜಿಸಲಾಗಿದೆ ಇಲ್ಲಿ ಹೆಚ್ಚಾಗಿ ಬಳಸಲಾಗಿರುವ ವರ್ಣಗಳು ಗಾಡ ಕೆಂಪು, ಗಾಡಹಸಿರು, ಕೆಂಪು, ತಿಳಿ ಗೆಂಪು, ಬಿಳಿ ಕಂದು, ಬೂದು ವರ್ಣನಿಲಿ, ಹಳದಿ, ಭಾದಾಮಿ ವರ್ಣ ಹೀಗೆ ವರ್ಣ ಬಳಕೆ ಮಾಡಲಾಗಿದ್ದು ಗಾಡ ಕಂದು ವರ್ಣದಿಂದ ಚಿತ್ರಗಳ ಬಾಹ್ಯ ವಿನ್ಯಾಸವನ್ನು ಇಲ್ಲಿ ರಚಿಸಲಾಗಿದೆ.

ಚಿತ್ರ–೬. ಪತ್ನಿಯನ್ನು ಶಂಕಿಸುತ್ತಿರುವ ಮರುಭೂತಿ

ಈ ಚಿತ್ರದ ಸನ್ನಿವೇಶದ ಪೂರ್ವದಲ್ಲಿಯ ಹಿನ್ನೆಲೆಯನ್ನು ಗಮನಿಸುವುದಾದರೆ ಪರಮ ನೀಚನು ಪರನಾರಿವಲ್ಲಭನು ಆಗಿದ್ದ ಕಮಠನ ಕಣ್ಣು ತನ್ನ ನಾದಿನಿಯಾ ಮರುಭೂತಿಯ ಮಡದಿಯಾ ಆದ ವಸುಂಧರೆ ಮೇಲೆ ಬಿದ್ದಿತು, ಆಕೆಯನ್ನು ತನ್ನ ಕಾಮ ಪಿಪಾಸೆಗಾಗಿ ಉಪಯೋಗಿಸಿಕೊಂಡನು

ಈ ಮಧ್ಯ ಈತನ ಪತ್ನಿಯೂ ಎಷ್ಟೋ ಬಾರಿ ಹಿತವಚನಗಳನ್ನಾಡಿದರೂ ಅದಕ್ಕೆಲ್ಲಾ ಕಿವಿಗೊಡದೆ. ಈ ಮಠ ರಾಜ್ಯಕ್ಕೂ ಅನ್ಯಾಯವೆಸಗಿ ತನ್ನ ತಮ್ಮನ ಸಂಸಾರವನ್ನು ಮುರಿದನು. ಇವನ ನೀಚ ವರ್ತನೆಗೆ ಪ್ರಜೆಗಳೆಲ್ಲ ಬೇಸತ್ತುಹೋಗಿತ್ತು. ಎಂದಿಗೆ ಮಹಾರಾಜ ತನ್ನ ಮಂತ್ರಿಯೊಡನೆ ಹಿಂದಿರುಗುವನೋ ಎಂಬ ಕಾತುರದಿಂದ ಕಾಯುತ್ತಿತ್ತು. ಅದೇ ವೇಳೆಗೆ ತಮ್ಮ ವಿಜಯ ಯಾತ್ರೆಯನ್ನು ಮುಗಿಸಿಕೊಂಡು ಪೌದನಾ ಪುರಕ್ಕೆ ಹಿಂದಿರುಗಿದ ಮರುಭೂತಿ ಹಾಗೂ ಅರವಿಂದರನ್ನು ಸಂತೋಷದಿಂದ ಬರಮಾಡಿಕೊಂಡು ಕಮಠನಿಂದ ತಾವುಂಡ ನೋವನ್ನೆಲ್ಲಾ ಹೇಳಿಕೊಂಡರು ಇದನ್ನು ಕೇಳಿ ಅವರಿಬ್ಬರಿಗೂ ಪ್ರಜೆಗಳ ಮೇಲೆ ಮರುಕವಾಯಿತು. ಗೆಲುವಿನ ಆನಂದವನ್ನೆಲ್ಲಾ ಮರೆತು ಕಮಠನ ಅನ್ಯಾಯವನ್ನು ನೆನೆದು ಅವರಿಬ್ಬರೂ ಸಂಕಟಪಟ್ಟರು. ಮರುಭೂತಿ ತನ್ನಣ್ಣ ಮಾಡಿದ ನೀಚ ಕೃತ್ಯವನ್ನು ಕೇಳಿಯೂ ಬೇಕೊಬ್ಬ ಪತ್ನಿಯನ್ನು ಮತ್ತೆ ಪಡೆಯಬಹುದು ಆದರೆ ಸಹೋದರನನ್ನು ಮತ್ತೊಮ್ಮೆ ಪಡೆಯಲು ಸಾಧ್ಯ ಪತ್ನಿಯ ನೀಚ ಕೃತ್ಯಕ್ಕೆ ಅಣ್ಣ ಬೆಂಬಗಲಿಗನಾಗಿರ-ಬಹುದು. ಈಗ ಆಕೆಯನ್ನು ತೊರೆದರೆ ನನಗೂ ನನ್ನ ಅಣ್ಣನಿಗೂ ದ್ವೇಷಕ್ಕೆ ಅವಕಾಶವಿರುವುದಿಲ್ಲ ಎಂದು ಕೊಂಡು ವಸುಂಧರೆಯ ಮೇಲೆ ಉದಾಸೀನ ಭಠಾವವನ್ನು ತಳೆದನು ಈ ದೃಶ್ಯದ ಸನ್ನಿವೇಶವನ್ನು ಇಲ್ಲಿ ಚಿತ್ರಿಸಲಾಗಿದೆ.

ಯುದ್ಧದಿಂದ ಮರಳಿದ ಮರುಭೂತಿಯ ರಾಜರೊಂದಿಗೆ ಅರಮನೆಗೆ ನಡೆದ. ಅಲ್ಲಿ ಆ ನಾಡಿನ ಪ್ರಜೆಗಳು, ಗೂಡಾಚಾರರು ಹೇಳಿದ ಮಾತುಗಳನ್ನು ಕೇಳಿ ಆಕಾಶವೇ ಕುಸಿದಂತಾದ ಮರುಭೂತಿಯು ತನ್ನ ಅಣ್ಣನ ಮೇಲಿನ ವ್ಯಾಮೋಹದಿಂದ ಮರುಗಿದನು. ಈ ಸಂಕಷ್ಟದಿಂದ ತನ್ನ ಅಣ್ಣನನ್ನು ರಕ್ಷಿಸುವ ಕುರಿತು ಆಲೋಚಿಸಿ ತನ್ನ ಪತ್ನಿಯೇ ಸರಿಯಿಲ್ಲ ನನ್ನ ಅಣ್ಣನ ತಲೆಕೆಡಿಸಿ ನನ್ನ ಅಣ್ಣನಿಂದ ಈ ಕೆಲಸಮಾಡಿದ್ದಾನೆ. ಇವಳ ಕಾಮದಾಸೆಗೆ ನನ್ನ ಅಣ್ಣ ಒತ್ತಾಯಪೂರ್ವಕವಾಗಿ ಬಲಿಯಾಗಿದ್ದಾನೆ ಎಂದು ಅರ್ಥೈಸಲು ಹೊರಟ ಮರುಭೂತಿಯು ತನ್ನ ಪತ್ನಿಯನ್ನು ಧೂಷಿಸ ತೊಡಗಿದನು. ಬೇಕಾದರೆ ಮತ್ತೊಬ್ಬ ಪತ್ನಿಯು ದೊರೆಯುತ್ತಾಳೆ ಆದರೆ ಅಣ್ಣ ದೊರೆಯುವುದಿಲ್ಲವೆಂದು ಪತ್ನಿಯೊಂದಿಗೆ ನಿಕೃಷ್ಟವಾಗಿ ಮಾತುಕತೆಯಾಡುವ ದೃಶ್ಯವಿದ್ದಾಗಿದ್ದು ಎಲ್ಲರು ಬಾಯಿಯ ಬಳಿ ಕೈಯಿರಿಸಿಕೊಂಡು ಮಾತನಾಡುವುದು ಕಂಡು ಬರುತ್ತದೆ.

ನೋಡುಗನ ಎಡಬದಿಯಲ್ಲಿ ಮೂವರು ಸ್ತ್ರೀಯರು ನಿಂತಿದ್ದು ಮರುಭೂತಿಯ ಪತ್ನಿಯಾದ ವಸುಂದರೆ ಮುಂದೆ ಕಂಡು ಬರುವಳು. ಇವಳ ಹಿಂದೆ ಸುಖಿಯರನ್ನು ಕಾಣಬಹುದು ವಸುಂದರೆಯು ಮರುಭೂತಿಯ ಮಾತುಗಳನ್ನು ಕೇಳಿ ಮರು ಮಾತನಾಡದೆ ಬಾಯಿಯ ಬಳಿ ಬಲಗೈನ್ನು ಇರಿಸಿರುವಳು. ಇವಳ ಹಿಂದಿನ ಸಖಿಯು ಕೈಯನ್ನು ಮುಂದೆ ಚಾಚಿ ಪರಿಸ್ಥಿತಿಯನ್ನು ವಿವರಿಸುವ ಪ್ರಯತ್ನವನ್ನು ಮಾಡುತ್ತಿರುವಳು. ಮರುಭೂತಿಯು ಬಲಗೈಯನ್ನು ಮುಂದೆ ಚಾಚಿ ಸುಮಧರೆಗೆ

ನೀನು ಮಾಡಿರುವ ಕೃತ್ಯದಿಂದ ಅಪಚಾರವಾಗಿದ್ದು ನಾನು ನಿನ್ನನ್ನು ತಡೆಯುತ್ತಿದ್ದೇನೆ ಎಂದು ಅವಳಿಗೆ ದೂರವಿರಲು ಗ್ರಹಿಸುತ್ತಿದ್ದಾನೆ. ಮರಭೂತಿಯು ಶ್ವೇತ ನಿಲುವಾದ ವಸ್ತ್ರವನ್ನು ಧರಿಸಿದ್ದು ಬಿಳಿ ಬಣ್ಣದ ಸೊಂಟದ ಪಟ್ಟಿಯನ್ನು ಕಟ್ಟಿದ್ದಾನೆ. ಆದರೆ ಚಾಕುವನ್ನು ಸಿಗಿಸಿಕೊಂಡಿದ್ದಾನೆ ಬಿಳಿಯ ರತ್ನಮಾಲ, ಸುವರ್ಣ ಕೊರಳ ಮಾಲ, ಪೇಟ ಅದರ ಮೇಲೆ ರತ್ನ ತಿಲಕ ಇವೆಲ್ಲವನ್ನು ಧರಿಸಿಕೊಂಡು ನೋಡಲು ನಸುಗೆಂಪು ಬಣ್ಣದಿಂದ ಕಾಣುತ್ತಿದ್ದನು. ಅವನ ಹಿಂಬದಿಯಲ್ಲಿ ಇಬ್ಬರು ರಾಜ ಪರಿವಾರದವರು ಬಾಯಿಮುಂದೆ ಕೈಯಿರಿಸಿಕೊಂಡು ಗುಸುಗುಸನೆ ಮಾತನಾಡಿಕೊಳ್ಳುತ್ತಿರುವುದು ಕಂಡು ಬರುತ್ತದೆ.

ಇದರ ಹಿನ್ನೆಲೆಯು ಕೆಂಪಾಗಿದ್ದು ಈ ಸನ್ನಿವೇಶ ಮನೆಯ ಅಥವಾ ಮರಭೂತಿಯ ಖಾಸಗಿ ಅರಮನೆಯಲ್ಲಿ ನಡೆದಿರುವಂತೆ ಕಾಣುತ್ತದೆ. ರತ್ನ ರಚಿತ ಕಂಬಗಳು, ಕಮಾನುಗಳು ಗೋಪುರ ವಿನ್ಯಾಸ ಇವೆಲ್ಲವನ್ನು ಇಲ್ಲಿ ಕಂಡು ಮೇಲ್ಮಹಡಿಗೆ ಹತ್ತಲು ಮೆಟ್ಟಿಲುಗಳನ್ನು ಇಲ್ಲಿ ಕಲಾವಿದನು ತೋರಿಸಿದ್ದು ಆದರ ಮುಖ್ಯಧ್ವಾರವನ್ನು ಇಲ್ಲಿ ಸೂಚಿಸಿದ್ದಾನೆ. ರೇಖ ವಿನ್ಯಾಸ ವರ್ಣ ವಿನ್ಯಾಸ ಎರಡು ಪ್ರಭದ್ದವಾಗಿದ್ದು ಮಂಟಪಗಳನ್ನು ನೋಡಿದಾಗ ಹಂಪಿಯ ಚಿತ್ರಗಳು ನೆನಪಾದರೆ ಮರುಭೂತಿಯ ವೇಷಭೂಷಣ, ಪೇಟವನ್ನು ಗಮನಿಸಿದಾಗ ಮೊಘಲರ ಚಿತ್ರಗಳು ನೆನಪಾಗುತ್ತವೆ. ಮೆಟ್ಟಿಲು, ಜಾಮೀತಿಕ ವಿನ್ಯಾಸಗಳು ಸಹ ಮೊಘಲರ ಹಾಗೂ ರಾಜಸ್ಥಾನಿ ಶೈಲಿಗಳ ಛಾಯೆಯನ್ನು ಬಿಂಬಿಸುತ್ತವೆ. ಆಭರಣಗಳು, ವ್ಯಕ್ತಿಗಳ ಅಂಗ ವಿನ್ಯಾಸ ಇವುಗಳು ಸೀಬಿ, ಹಿರಿಯೂರುಗಳಲ್ಲಿಯ ಚಿತ್ರಗಳನ್ನು ನೆನಪಿಸುತ್ತವೆ. ಇಲ್ಲಿ ಕೆಂಪು, ಗಾಡ ಹಸಿಸು, ಬಿಳಿ ನೀಲಿ, ಸ್ವರ್ಣ, ಬಾದಾಮಿ, ಕಂದು ಬಣ್ಣಗಳನ್ನು ಕಾಣಬಹುದು ಇದೊಂದು ಉತ್ತಮ ಸಂಯೋಜನ ಭಿತ್ತಿಚಿತ್ರವಾಗಿದೆ.

ಮರುಭೂತಿಯು ಶೋಕಿಸುತ್ತಿರುವುದು ಈ ದೃಶ್ಯದಲ್ಲಿ ಮರುಭೂತಿಯ ಯುದ್ಧದಲ್ಲಿ ಹೋರಾಡಿ ದೈಹಿಕವಾಗಿ ನೋಂದು ಪೌದನಾಪುರಕ್ಕೆ ಹಿಂದಿರುಗಿದಾಗ ಇಲ್ಲಿ ನಡೆದ ಮನಕುಲಕವ ಘಟನೆಗಳನ್ನು ಕೇಳಿ ಮಾನಸಿಕವಾಗಿ ದೈಹಿಕವಾಗಿ ಕುಂದಿ ಸೊರಗಿ ವಿಶ್ರಾಂತಿ ಗೃಹದಲ್ಲಿ ಚಿಕಿತ್ಸೆ ಪಡೆಯುತ್ತಿರುವ ದೃಶ್ಯ ಇದಾಗಿದೆ. ಈ ಚಿತ್ರದಲ್ಲಿ ಮರುಭೂತಿಯು ಸುತ್ತಲು ಉದ್ಯಾನವನ ಹೊಂದಿರುವ ವೈದ್ಯ ಶಾಲೆಯಲ್ಲಿ ಮಾನಸಿಕವಾಗಿ ಹಾಗು ದೈಹಿಕವಾಗಿ ವಿಶ್ರಾಂತಿಗೆಂದು ತೆರಳಿ ಮಂಚದ ಮೇಲೆ ಕಾಲುಗಳನ್ನು ಚಾಚಿಕೊಂಡು ತಲೆಯ ಮೇಲೆ ಕೈಇರಿಸಿ ಶೋಕಗ್ರಸ್ತನಾಗಿ ಮಲಗಿದ್ದು ದಾಸಿಯೊಬ್ಬಳು ಕೈಯಲ್ಲಿ ಔಷಧಿ ಕುಂಡವನ್ನು ಹಿಡಿದು ಕಾಲಬದಿಯಲ್ಲಿ ನಿಂತಿದ್ದು ಮರುಭೂತಿಯ ಆಪ್ತನೊಬ್ಬ ತಲೆಯ ಹಿಂದೆ ನಿಂತು ಬಲಗೈಯನ್ನು ಎತ್ತಿ ಏನನ್ನೊ ವಿವರಿಸುವ ಹಾಗೆ ಇಲ್ಲಿ ತೋರಿಸಲಾಗಿದೆ ಈ ಮೂವರ ಹಿಂಬದಿಯಲ್ಲಿ ನಾಲ್ವರು ಬಾಯಿಯ ಬಳಿ ಕೈಯನ್ನು ಇರಿಸಿಕೊಂಡು ಒಬ್ಬರಿಗೊಬ್ಬರು ಕೈಗಳನ್ನು ತೋರಿಸಿಕೊಂಡು ಕಮಠ,ಮರುಭೂತಿ, ವಸುಂಧರೆಯ ವಿಷಯಗಳನ್ನು ಕುರಿತು

ಮಾತನಾಡುತ್ತಿರುವ ದೃಶ್ಯ ಕಂಡುಬರುತ್ತದೆ. ವಿಶ್ರಾಂತಿಗೃಹ ಅಥವ ವೈದ್ಯ ಶಾಲೆಯಲ್ಲಿ ಮಲಗಿರುವ ಮರುಭೂತಿಯ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸುವುದರಿಂದ ಒಳಭಾಗದಲ್ಲಿ (ಗೃಹದ ಒಳಗೆ) ನಡೆದಿರುವ ದೃಶ್ಯದಂತಿದೆ ಹಾಗು ಇದರ ಸುತ್ತ ಹದಿನೆಂಟು ಚೌಕಗಳಿದ್ದು, ಚೌಕಗಳ ಹಿನ್ನೆಲೆಯನ್ನು ಹಸಿರು ವರ್ಣ ತೋರಿಸುವುದರಿಂದ ಇದು ಹೋರಭಾಗದ ದೃಶ್ಯವೆಂದು ಕಾತರಿಸಬಹುದು. ಈ ಹದಿನೆಂಟು ಚೌಕಗಳಲ್ಲಿ ಮರಗಳು, ಹೂವಿನ ಗಿಡಗಳನ್ನು ಕುಂಡದಲ್ಲಿ ತೋರಿಸಲಾಗಿದೆ. ಈ ಒಂದು ಅಂಶದಿಂದ ಇದೊಂದು ವೈದ್ಯ ಶಾಲೆಯಾಗಿರಬಹುದೆಂದು ಊಹಿಸಬಹುದು.

ಮರುಭೂತಿಯು ಮಲಗಿರುವ ಮಂಚವು ರತ್ನ ಖಚಿತವಾಗಿದ್ದು ಹಾಸಿಗೆಯನ್ನು ವಿನ್ಯಾಸಗೊಳಿಸಲಾಗಿದೆ. ಹಾಗು ಮಲಗಿ ಮೇಲೆ ಹೊದ್ದಿಕೊಂಡಿರುವ ಹೊದಿಕೆಯ ಮೇಲು ಹಸಿರು ಬಳ್ಳಿಗಳು, ತಿಳಿಗೆಂಪು ಹೂಗಳನ್ನು ಕಾಣಬಹುದು, ಈ ಚಿತ್ರದಲ್ಲಿ ನೇರವಾಗಿ ಮೊಘಲರ ಶೈಲಿಯು ಕಂಡು ಬರುವುದು ಹೂಬಳ್ಳಿ, ಹೂ ಕುಂಡಗಳು ಹಾಸಿಗೆ ಹೊದಿಕೆಯ ವಿನ್ಯಾಸಗಳು ಪೇಟ ರುಮಾಲುಗಳ ಶೈಲಿ ಇವುಗಳು ಮೊಘಲರ ಛಾಯೆಯನ್ನು ಎದ್ದು ತೋರಿಸುತ್ತವೆ. ಇಲ್ಲಿ ಗಾಢ ಹಸಿರು, ಕೆಂಪು, ನೀಲಿ ಹಸಿರು, ಹಳದಿ, ಬಿಳಿ ಕಂದು ಬಣ್ಣ ಇವುಗಳು ಹೆಚ್ಚಾಗಿ ಕಂಡು ಬರುತ್ತವೆ.

ಚಿತ್ರ–೭. ಕಮಠನ ಸ್ತ್ರೀ ದೌರ್ಜನ್ಯ

ಈ ದೃಶ್ಯವು ಕಮಠನ ಸ್ತ್ರೀದೌರ್ಜನ್ಯಕ್ಕೆ ಸಾಕ್ಷಿಯಾಗಿದ್ದು ತನ್ನ ನಾದಿನಿಯ ಮೇಲಿನ ಕಾಮ ಪಿಪಾಸೆಯನ್ನು ತೀರಿಸಿಕೊಳ್ಳುವ ಯತ್ನವನ್ನು ಮಾಡುತ್ತಿದ್ದು ಅವನ ಪತ್ನಿ ಕಮಠನನ್ನು ತಡೆಯುತ್ತಿದ್ದಾಳೆ ಹಿಂಬದಿಯ ಸ್ತ್ರೀ ಒಬ್ಬಳು ಈ ದೃಶ್ಯವನ್ನು ಸಹಿಸಲಾರದೆ ಕಿವಿಗಳನ್ನು ಮುಚ್ಚಿಕೊಂಡು ನಿಂತಿದ್ದು ಕಮಠನ ಉತ್ತರ ಸಹಚರನೊಬ್ಬ ಕೈ ಮುಗಿದು ಕಮಠನಿಗೆ ವಿನಂತಿಸುತ್ತಿರುವನು ಮತ್ತೊಬ್ಬ ದುಷ್ಟ ಸಹಚರನು ಬಲಗೈ ತೋರುಬೆರಳನ್ನುಎತ್ತಿ ಕಮಠನಿಗೆ ಸಹಕರಿಸುವಂತೆ ಆದೇಶಿಸುತ್ತಿದ್ದಾನೆ. ಹಿನ್ನೆಲೆಯಲ್ಲಿ ಗಾಢ ಹಸಿರಿನಿಂದ ಕೂಡಿದ ಮರಗಿಡಗಳನ್ನು ತೋರಿಸಲಾಗಿದೆ. ಈ ದೃಶ್ಯವು ಯಾವುದೋ ಒಂದು ಕಲ್ಲಿನ ಜಕಟಯ ಮೇಲೆ ನಡೆದಿದ್ದು, ಚೌಕಾಕಾರದ ಬಳಿಯ ಕಲ್ಲಿನ ಸಾಲನ್ನು ಕೆಳಭಾಗದಲ್ಲಿ ತೋರಿಸಲಾಗಿದೆ ರತ್ನಾಭರಣ ಖಚಿತರಾದ ಸ್ತ್ರೀಯರನ್ನು ತೋರಿಸಿದ್ದು ಕೆಂಪು, ಬಿಳಿ, ಹಸಿರು ಸೀರೆಗಳನ್ನು ಉಟ್ಟಿದ್ದಾರೆ. ಈ ವಸ್ತ್ರ ಶೈಲಿಯನ್ನು ಗಮನಿಸದಿರೆ ಹಳೆ ಮೈಸೂರು ಭಾಗದ ಅಥವ ಮೇಲುಕೋಟೆ ಐಯ್ಯಂಗಾರಿ ಮಹಿಳೆಯರ ಸೀರೆ ಉಡುವ ಶೈಲಿಯಿಂದಾಗಿದೆ. ಕಮಠ ಹಾಗೂ ಅವನ ಸಹಚರರ ಉಡುಪುಗಳು ಮೈಸೂರು ಭಾಗದ ಉಡುಪುಗಳ ಆದರು ಮೊಘಲರ ತಿರುರೂಪ ಚಿತ್ರಗಳಲ್ಲಿಯ ವಸ್ತ್ರ ವಿನ್ಯಾಸದ ಕುರುಹುಗಳು ಕಾಣುತ್ತವೆ. ಇಲ್ಲಿ

ಕೆಂಪು, ಗಾಡ ಹಸಿರು, ಗಾಡ ನೀಲಿ, ಬಿಳಿ, ಹಳದಿ ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ಚಿತ್ರ ಸಂಯೋಜನೆಯಂತು ಅಧ್ಬುತವಾದ ಸ್ಥಳಾವಾಕಾಶವನ್ನು ತೋರುತ್ತದೆ.

ಚಿತ್ರ-೮. ಸ್ತ್ರೀಯರೊಂದಿಗೆ ಶೃಂಗಾರದಲ್ಲಿ ತೊಡಗಿರುವ ಕಮಠ

ಕಮಠನು ಸ್ತ್ರೀಲಂಪಠನಾಗಿದ್ದು ಇವನು ಪರ ಸ್ತ್ರೀಕಾಮಿಯು ಬಹು ಸ್ತ್ರೀವಲ್ಲಭನು ಆಗಿದ್ದನು ಇದಕ್ಕೆ ಪುಷ್ಟಿನೀಡುವಂತೆ ಸಿಕ್ಕ ಅಧಿಕಾರನ್ನು ದುರುಪಯೋಗ ಪಡಿಸಿಕೊಂಡು ಮಾಡಬಾರದ ಅನಾಚಾರ, ಅನೀತಿಗಳನ್ನು ಮಾಡಿಕೊಂಡು ದ್ರವ್ಯನಾಶ ಮಾಡುತ್ತಾ ರಾಜ್ಯದ ಬೊಕ್ಕಸವನ್ನು ಖಾಲಿ ಮಾಡತೊಡಗಿದನು. ಅದರಲ್ಲಿ ಅಷ್ಟೇ ಅಲ್ಲದೇ ಇವನು ಸಾರ್ವಜನಿಕರ ನೆಮ್ಮದಿಯನ್ನು ಕೆಡಿಸುತ್ತಾ ತನ್ನ ಹುಚ್ಚಾಟಗಳಿಗೆ ರಾಜಪರಿವಾರವನ್ನು ಬಳಸಿಕೊಂಡು ರಾಜ್ಯದಲ್ಲಿ ಅಸ್ಥಿರತೆ ಉಂಟು ಮಾಡಿದನು.

ಈ ಚಿತ್ರದಲ್ಲಿ ಕಮಠನೊಂದಿಗೆ ಆರು ಜನ ಸ್ತ್ರೀಯರನ್ನು ಕಲಾವಿದನು ಸೃಷ್ಟಿಸಿದ್ದು ಕಮಠನು ಇಲ್ಲಿ ಮಧುಮಂಚದ ಪಲ್ಲಂಗವನ್ನು ಏರಿ ಸ್ತ್ರೀ ಓರ್ವಳ ಜಡೆ ಹಾಕುತ್ತಿದ್ದು ಆ ಸ್ತ್ರೀ ಎಡಗೈಯಲ್ಲಿ ಕನ್ನಡಿಯನ್ನು ಹಿಡಿದುಕೊಂಡು ಬಲಗೈಯಿಂದ ತುಟಿಗೆ ವರ್ಣಲೇಪನ ಮಾಡಿಕೊಳ್ಳುತ್ತಿದ್ದಾಳೆ ನೋಡುಗನ ಎಡಭಾಗದಲ್ಲಿರುವ ಇಬ್ಬರು ದಾಸಿಯರು ಸುಗಂಧ ದ್ರವ್ಯ, ಹೂ, ಶೃಂಗಾರ ಸಾಮಾಗ್ರಿಗಳನ್ನು ಹಿಡಿದು ಇವಳಿಗೆ ಸಹಾಯ ಮಾಡುತ್ತಿದ್ದಾರೆ. ಮಧ್ಯದಲ್ಲಿ ನಿಂತಿರುವ ಸ್ತ್ರೀ ಓರ್ವಳು ಪಾದಗಳನ್ನು ಮುಟ್ಟುತ್ತಾ ಸೇವೆ ಮಾಡುತ್ತಿರುವುದು ಹಾಗೂ ಪಾನೀಯ ಸೇವಿಸುವ ಲೋಟಗಳು ಇಲ್ಲಿ ಕಾಣಬಹುದಾಗಿದೆ. ಮಧುಮಂಚದ ಸ್ತಂಭಕ್ಕೆ ಗಾಜಿನ ದೀಪ ಹಾಗು ಹೂಗಳಿಂದ ಅಲಂಕರಿಸಲಾಗಿ. ಈ ಚಿತ್ರದಲ್ಲಿ ವಿಶೇಷವಾಗಿ ಗಮನಿಸುವುದಾದರೆ ಸ್ತ್ರೀಯು ಶೃಂಗಾರ ಮಾಡುತ್ತಿರುವುದು ಅವಳು ಹಿಡಿದಿರುವ ಕನ್ನಡಿಯಲ್ಲಿ ಪ್ರತಿಪಲಿಸುವಂತೆ ಕಲಾವಿದನು ತನ್ನ ಕಲಾಚಮತ್ಕಾರವನ್ನು ತೋರಿಸಿದ್ದಾನೆ. ಈ ಚಿತ್ರವು ಅಪ್ಪಟ ಮೈಸೂರು ಶೈಲಿಯಲ್ಲಿದ್ದು ಸೀರೆ, ಆಭರಣ ವಿನ್ಯಾಸ ಶೃಂಗಾರ ಶೈಲಿ ಸೀರೆ ಉಟ್ಟ ಶೈಲಿ, ಹಿನ್ನೆಲೆ ಸಂಯೋಜನೆ ಇವುಗಳೆಲ್ಲವು ಮೈಸೂರು ಶೈಲಿಯ ಪ್ರತೀಕವಾಗಿದೆ. ಈ ಚಿತ್ರದಲ್ಲಿ ಅಧಿಕವಾಗಿ ಕೆಂಪು, ಗಾಢ ಹಸಿರು, ಹಲದಿ, ಬಿಳಿ ಹಸಿರು ಕಂದು ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ತಾಳಮಾನ ವಸ್ತು ವಿಷಯ ಔಚಿತ್ಯಪೂರ್ಣವಾಗಿದೆ ಈ ಕಲಾಕೃತಿಗಳು ನೋಡುಗನಿಗೆ ಶೃಂಗಾರದ ರಸೋತ್ಪಾದನೆ ಮಾಡುವಲ್ಲಿ ಯಶಸ್ವಿಯಾಗಿದೆ.

ಚಿತ್ರ-೯. ಕಮಠನಿಗೆ ತಲೆ ಬೋಳಿಸಿತ್ತಿರುವ ಚಿತ್ರ

ಈ ಘಟನೆಗಳಾದ ನಂತರ ಮರುದಿನ ಮಹಾರಾಜನ ಸನ್ನಿಧಿಗೆ ಮರುಭೂತಿ ಬಂದು ನಮಸ್ಕರಿಸಿ ಮನೆಯಲ್ಲಿ ನಡೆದ ಹಗರಣವನ್ನು ತಿಳಿಸಿದನು. ಕುಪಿತನಾದ ಕಮಠನಿಗೆ ತಕ್ಕ ಶಾಸ್ತಿ

ಮಾಡಲು ಬಯಸಿದನು ಆದರೆ ಕರುಣೆಯಿಂದ ಮಾನವರ ತಪ್ಪನ್ನು ಕಂಡು ಕರಗುವ ತಾಯರುಳಾಗಿ ಮರಭೂತಿ ತನ್ನ ಅಣ್ಣನ ತಪ್ಪನ್ನು ಮುಚ್ಚಲು ಪ್ರಯತ್ನಿಸಿದನು. ಮಹಾರಾಜನು ಮರುಭೂತಿಯ ಮನವನ್ನರಿತು ನೀನು ಮೋಹಪಾಶನಾಗಿ ನಿನ್ನಣ್ಣನ ದುರ್ವರ್ತನೆಯನ್ನು ಸಹಿಸುತ್ತಿರುವೆ ಇದು ಸಲ್ಲದು ಎಂದು ನುಡಿದು ಜೂಜಿನಲ್ಲಿ ಮಗ್ನನಾಗಿದ್ದ ಕಮಠನನ್ನು ಹಿಡಿತರಿಸಿ ಇವರ ತಪ್ಪಿಗೆ ಶಾಸ್ತಿ ಮಾಡುವ ಸಲುವಾಗಿ ಕಮಠ ಹಾಗೂ ಅವನ ಆಪ್ತಸಹಚರನಾದ ಮತ್ತೊಬ್ಬ ವ್ಯಕ್ತಿಯನ್ನು ಹಿಡಿಸಿ ಅವರನ್ನು ವಿವಸ್ತ್ರಗೊಳಿಸಿ ಹಗ್ಗದಲ್ಲಿ ಕಟ್ಟಿ ಹಿಡಿದು ತಲೆಕೂದಲನ್ನು ಬೋಳಿಸುತ್ತಾ ಮೇಲಿಂದ ಇಬ್ಬರು ಯುವಕರು ಇವರ ಮೇಲೆ ಉಚ್ಚೆಯನ್ನು ಹೋಯಿಸುತ್ತಿರುವರು ಇಲ್ಲಿ ಇಬ್ಬರು ದಂಢಾಧಿಕಾರಿಗಳು ಕಮಠ ಹಾಗು ಅವನ ಸಹಚರ ಕ್ಷೌರಿಕ ಹಾಗೂ ಇಬ್ಬರು ಬಾಲಕರು ಒಟ್ಟು ಏಳು ಜನರನ್ನು ಈ ದೃಶ್ಯ ಒಳಗೊಂಡಿದೆ.

ನೋಡುಗನ ಎಡಭಾಗದಲ್ಲಿ ರಾಜಭಟನು ಕೈಯಲ್ಲಿ ಬೆತ್ತವನ್ನು ಹಿಡಿದು ಕಮಠನ ಸಹಚರನನ್ನು ಹಗ್ಗದಲ್ಲಿ ಕಟ್ಟಿ ಹಿಡಿದಿದ್ದಾನೆ. ಕೆಳಭಾಗದಲ್ಲಿ ಕಮಠನ ತಲೆಯನ್ನು ಕ್ಷೌರಿಕನು ಕತ್ತಿಯಿಂದ ಬೋಳಿಸುತ್ತಿರುವ ದೃಶ್ಯ ಹಾಗೂ ಅವನ ಹಿಂಭಾಗದಲ್ಲಿ ಮೇಜಿನ ಮೇಲೆ ನಿಂತು ಇಬ್ಬರು ವ್ಯಕ್ತಿಗಳು ತನ್ನ ಶಿಶ್ನವನ್ನು ಹಿಡಿದು ಹುಚ್ಚೆ ಹೊಯ್ಯುತ್ತಿರುವರು. ಬಲ ಭಾಗದಲ್ಲಿ ಕೆಂಪು ವಸ್ತ್ರದಾರಿಯಾದ ದಂಢಾಧಿಕಾರಿಯು ಕೈಯಲ್ಲಿ ದಂಢವನ್ನು ಹಿಡಿದು ಆದೇಶಿಸುತ್ತಿರುವನು. ಕ್ಷೌರಿಕನು ಕೆಳಭಾಗದಲ್ಲಿ ಅವನ ಉಪಕರಣಗಳನ್ನು ಕೆಳಭಾಗದಲ್ಲಿ ಚಿತ್ರಿಸಿದ್ದಾರೆ.

ಚಿತ್ರ-೧೦. ಕಮಠನನ್ನು ಕತ್ತೆಯ ಮೇಲೆ ಸವಾರಿ ಮಾಡಿಸುತಿರುವುದು

ಕಮಠನ ಅತ್ಯಾಚಾರ ಅನಾಚಾರಗಳ ಸಲುವಾಗಿ ಅವನಿಗೆ ಆದ ಶಾಸ್ತಿಯ ತರುವಾಯ ಅವನನ್ನು ಊರಿಂದ ಹೊರಗಟ್ಟುವ ಆದೇಶವನ್ನು ದಂಢಾಧಿಕಾರಿಗಳು ಮಾಡಿದ ತರುವಾಯ ಅವನನ್ನು ಕತ್ತೆ ಮೇಲೆ ಕೂರಿಸಿ ಅವರನ್ನು ಊರಿಂದ ಹೊರಗಟ್ಟುವ ದೃಶ್ಯ ಇದಾಗಿದ್ದು ಅವನ ಮೇಲೆ ಕೊಚ್ಚೆಯ ನೀರನ್ನು ಎಸೆಯುವುದು, ಮಲಮೂತ್ರವನ್ನು ಕಲಸಿ ತಲೆಯ ಮೇಲೆ ಹಾಕುವುದು ಪರಕೆಯಿಂದ ಹೊಡೆಯುವುದು, ಸಗಣಿಯನ್ನು ಎರಚುವುದು, ಯುವಕರು ನಗ್ನರಾಗಿ ನಿಂತು ತಮ್ಮ ಗುಪ್ತಾಂಗಗಳನ್ನು ತೋರಿಸುವುದು ಇವೆ ಮೊದಲಾದ ಅವಮಾನಗಳನ್ನು ಮಾಡಿ ಊರಿಂದ ಹೊರಗಟ್ಟುವ ಚಿತ್ರ ಇದಾಗಿದ್ದು, ಈ ಚಿತ್ರದಲ್ಲಿ ಹದಿಮೂರು ಜನರನ್ನು ಕಾಣಬಹುದಾಗಿದ್ದು. ಒಂದು ಕತ್ತೆಯು ಈ ಚಿತ್ರದಲ್ಲಿದೆ.

ಈ ಚಿತ್ರದಲ್ಲಿ ಇಬ್ಬರು ರಾಜ ಭಂಟರು ಸೇರಿಂದಂತೆ ಉರಿನ ಸಾರ್ವಜನಿಕರು ಈ ಕ್ರಿಯೆಯಲ್ಲಿ ತೊಡಗಿದ್ದು ಬಲ ಬದಿಯ ರಾಜಭಂಟನು ಕೋಲಿನಿಂದ ಕತ್ತೆಯನ್ನು ಒಡೆಯುವ ಪ್ರಯತ್ನದಲ್ಲಿದ್ದಾನೆ ಇನ್ನುಳಿದಂತೆ ಕಮಠನನ್ನು ಹಗ್ಗದಲ್ಲಿ ಕಟ್ಟಿ ಹಿಡಿದಿದ್ದು ಉಳಿದ ಹಲವರು

ಕೆಸರು ಮಲಮೂತ್ರಗಳನ್ನು ಕಮಠನ ಮೇಲೆ ಎಸೆಯುತ್ತಿದ್ದಾರೆ. ಈ ಚಿತ್ರದಲ್ಲಿ ಕೆಂಪು ಹಸಿರು ತಿಳಿಗೆಂಪು ಬಿಳಿ ಹಾಗೂ ಕಂದು ವರ್ಣಗಳು ಪ್ರಮುಖವಾಗಿ ಕಂಡು ಬರುತ್ತವೆ.

ಚಿತ್ರ–೧೧. ಕಮಠನಿಗೆ ಬೇಡರು ಕಲ್ಲಿನಿಂದ ಹೊಡೆದರು

ಕಮಠನನ್ನು ತಲೆಬೋಳಿಸಿ ಕತ್ತೆಯ ಮೇಲೆ ಮೆರವಣಿಗೆ ಮಾಡಿಸಿ ಊರಿಂದ ಓಡಿಸಿದ ಮೇಲೆ ಅವನು ಬೇರೆ ಬೇರೆ ಊರುಗಳಿಗೆ ಹುಚ್ಚನಂತೆ ಅಲೆದನು. ಇವನು ಹೋದಲೆಲ್ಲಾ ಅವನನ್ನು ಹೀನಾಯವಾಗಿ ಹಿಂಸಿಸಿ ಊರಿಂದ ಹೊರಗಟ್ಟುತ್ತಿದರು. ಅದೇ ರೀತಿ ಯಾವುದೋ ಒಂದು ಬೇಡರು ವಾಸಿಸುತ್ತಿದ್ದ ಗ್ರಾಮಕ್ಕೆ ಭೇಟಿ ನೀಡಿದ ಕಮಠನನ್ನು ಅಲ್ಲಿಯ ಜನರು ಗ್ರಾಮಕ್ಕೆ ಭೇಟಿ ನೀಡಿದ ಕಮಠನನ್ನು ಅಲ್ಲಿಯ ಜನರು ಕಲ್ಲಿನಿಂದ ಒಡೆದು ಉರಿನಿಂದ ಹೊರ ಓಡಿಸುತ್ತಿರುವುದು.

ಈ ಚಿತ್ರದಲ್ಲಿ ಗಡ್ಡವನ್ನು ಬಿಟ್ಟು ಯತಿಗಳಂತೆ ಸಂಚರಿಸುತ್ತಿರುವ ಕಮಠ ಹಾಗೂ ಅವನ ಸಹಚರರನ್ನು ಆ ಊರಿನ ಬೇಡ ಸಮುದಾಯದವರು ಕಲ್ಲಿನಿಂದ ಹೊಡೆದು ಓಡಿಸುತ್ತಿರುವುದು. ಒಟ್ಟಾರೆ ಇಲ್ಲಿ ಹನ್ನೊಂದು ಜನರು ಈ ಚಿತ್ರದಲ್ಲಿ ಕಾಣಿಸಿರುತ್ತಾರೆ ಎಡಭಾಗದ ಕೆಳಗೆ ಮೂವರು ಯತಿಗಳಂತೆ ಕಾಣುವ ಪುರುಷರಿದ್ದು ಅವರ ಮೇಲೆ ದಿಬ್ಬದಂತಿರುವ ಮಣ್ಣಿನ ಉಬ್ಬಿನ ಮೇಲೆ ನಿಂತ ಬಿಲ್ಲು ಬಾಣಗಳನ್ನಿಡಿದ ಮೂವರು ಬೇಡರು ಕಲ್ಲುಗಳನ್ನು ಕಮಠನ ಮೇಲೆ ಎಸೆಯುತ್ತಿರುವುದು ಕಮಠನ ಹಿಂದೆ ಬರುವ ಮತ್ತೊಬ್ಬ ಕೋಲನ್ನು ಹಿಡಿದು ಪ್ರತಿರೋಧಿಸುತ್ತಿರುವುದು ಬಲಭಾಗದಲ್ಲಿ ಇಬ್ಬರು ಸ್ತ್ರೀಯರೊಂದಿಗೆ ಸಮಾಲೋಚನೆ ನಡೆಸುತ್ತಿರುವ ಬೇಡನು ಕೈಮುಗಿದಂತೆ ಕಾಣುವ ಇನ್ನಿಬ್ಬರು ಬೇಡರನ್ನು ನಾವಿಲ್ಲಿ ಕಾಣಬಹುದಾಗಿದೆ ವಿಶೇಷವಾಗಿ ಇಲ್ಲಿಯ ಬೇಡರು ಒಂದು ಬಗೆಯ ರುಮಾಲನ್ನು ತಲೆಗೆ ಸುತ್ತಿದ್ದಾರೆ ಈ ಅಂಶವು ಈ ಅಧ್ಯಯನದಲ್ಲಿ ವಿಶೇಷವಾಗಿದೆ ಇನ್ನುಳಿದಂತೆ ಕಂದು, ಬಿಳಿ, ಕೆಂಪು ಗಾಡ ಹಸಿರು ವರ್ಣಗಳನ್ನು ಇಲ್ಲಿವೆ.

ಚಿತ್ರ–೧೨. ಕಮಠನು ಮರುಭೂತಿಯ ಮೇಲೆ ಕಲ್ಲನಾಕುತ್ತಿರುವ ದೃಶ್ಯ

ಕಮಠನು ರಾಜನಿಂದ ರಾಜ್ಯದಿಂದ ಹೊರದೂಡಿದ ನಂತರ ಇದನ್ನು ಸಹಿಸಲಾರದೆ ಮರುಭೂತಿ ಒಳಗೊಳಗೆ ನೊಂದುಕೊಂಡು ಕೊರಗಿದನು. ಕಮಠನಾದರೋ ನನ್ನ ಈ ಅವಸ್ಥೆಗೆಲ್ಲಾ ತನ್ನ ತಮ್ಮನ ಪಿತ್ತೂರಿಯೇ ಕಾರಣವೆಂದು ಒಳಗೊಳಗೇ ಕುದಿದನು. ಇಲ್ಲಿ ನಾವು ಗಮನಿಸಬೇಕಾದುದು ಮರಭೂತಿಯ ಮೋಹ, ಅಂತೆಯೇ ಕಮಠನ ದ್ವೇಷ ಇದುದರಿಂದ ತಮ್ಮ ಸಾವನ್ನು ತಾವೇ ತಂದು ಕೊಂಡರು. ಮರುಭೂತಿಯ ಮೋಹವೇ ಮರುಕವಾಗಿ ಮಾರ್ಪಾಟಾಗುವ ಮನೋಹರ ಚಿತ್ರವನ್ನು ಇವರ ಪ್ರತಿ ಚಿತ್ರದಲ್ಲೂ ಗಮನಿಸಬಹುದು. ಕಮಠ ಊರನ್ನು ತೊರೆದು ಭೂತಗಿರಿಗೆ ಬಂದು ಊರ್ಧ್ವಬಾಹುವಾಗಿ ನಿಂತು ತಪಸ್ಸನ್ನು ಮಾಡಲಾರಂಭಿಸಿದ. ಈ ಸುದ್ದಿ ಮರುಭೂತಿಗೆ

ಗೊತ್ತಾಗಿ ನಿಜವಾಗಿಯೂ ತನ್ನಣ್ಣನ ಮನಸ್ಸು ಪರಿವರ್ತನೆಗೊಂಡು ಆತ್ಮೋನ್ನತಿಯ ಮಾರ್ಗವನ್ನು ತುಳಿದನೆಂದು ಸಂತಸಗೊಂಡು ಆತನಿರುವೆಡೆಗೆ ಧಾವಿಸಿ ಸಾಷ್ಟಾಂಗವೆರಗಲು ಕಾತುರಪಟ್ಟನು. ಇದನ್ನರಿತ ಅರವಿಂದ ಮಹಾರಾಜ ಮನೆಯ ಹಾವನ್ನು ಆಚೆಗೆಸೆದುದಾಯಿತು ಮತ್ತು ಅದನ್ನರಿಸಿಕೊಂಡು ಹೋದರೆ ಅದರಿಂದ ಕೇಡೇ ವಿನಃ ಉಪಕಾರವಾಗದು ಎಂದು ಮರುಭೂತಿಗೆ ತಿಳಿಸಿದನು ಆದರೆ ಮರುಭೂತಿ ತನ್ನಣ್ಣನ ಮೇಲಿನ ಮಮತೆಯಿಂದ ಭೂತಗಿರಿಗೆ ಬಂದು ನೋಡುವಾಗ್ಗೆ ಕಮಠನಾದರೂ ದೊಡ್ಡ ಕಲ್ಲನ್ನು ಹೊತ್ತುಕೊಂಡು ನಿಂತು ತಪವೆಸಗುವುದನ್ನು ಕಂಡನು ಈ ದೃಶ್ಯವನ್ನು ಕಂಡಾಕ್ಷಣ ಮರುಭೂತಿಗೆ ಸಂಕಷ್ಟವುಕ್ಕಿ ತನ್ನಣ್ಣನ ಸ್ಥಿತಿಗೆ ಮರುಗುತ್ತಾ ಎಂತಾದರೂ ಒಡಂಬಡಿಸಿ ಆತನನ್ನು ಮನೆಗೆ ಕೊಂಡೊಯ್ಯಬೇಕೆಂದು ಯೋಚಿಸಿ ವಿನಯ ಪೂರ್ವಕವಾಗಿ ಆತನಿಗೆರಗಿ ತನ್ನ ಅಭಿಲಾಷೆಯನ್ನು ತಿಳಿಸಿದಾಗ "ಈ ಪಾಪಿ, ರಾಜನಿಂದ ನನ್ನನ್ನು ದಂಡಿಸಿ ಈಗ ಮತ್ತೆ ನಾನಿರುವೆಡೆಯನ್ನು ಕಂಡುಕೊಂಡು ಬಂದಿದ್ದಾನೆ, ಇನ್ನೇನು ತೊಂದರೆ ಕೊಡುವನೋ" ಎಂದು ಕಮಠ ಕೋಪೋದ್ರೇಕಗೊಂಡು ತಾನು ಹೊತ್ತಿದ ಬಂಡೆಯನ್ನು ತನ್ನ ಕಾಲ ಮೇಲೆ ಬಿದ್ದಿದ್ದ ಮರುಭೂತಿಯ ತಲೆಗಿಕ್ಕಿದನು ತಕ್ಷಣವೇ ಮರುಭೂತಿಯ ತಲೆಯೊಡೆದು ನುಚ್ಚುನೂರಾಯಿತು ಇಲ್ಲಿ ನಾವು ಗಮನಿಸಬೇಕಾಗಿದುದ್ದು ಮರುಭೂತಿಯ ದುರ್ಮೋಹವೂ ಕಮಠನ ಕಠೋರ ವರ್ತನೆಯನ್ನು ಅವರವರ ಮನೋವಿಕಾರಗಳು ಅವರ ಮುಂದನ ಜನ್ಮಕ್ಕೆ ಮೂಲವಾಯಿತು ಎಂದು ತಿಳಿಯಬೇಕು.

ಇದೊಂದು ಕಾಡಿನ ದೃಶ್ಯವಾಗಿದ್ದು ಈ ಭೂತಗಿರಿಯಲ್ಲಿ ಹಲವಾರು ಗುಹೆಗಳಿದ್ದು ಇಲ್ಲಿ ಹಲವಾರು ತಂತ್ರವಿದ್ಯೆ ಯಕ್ಷ ಸಾಧನೆ, ಗೋರ ತಪಸ್ಸು ವಾಮ ಮಾರ್ಗಗಳಂತಹ ಹಲವು ವಿದ್ಯೆಗಳ ಚಿತ್ರಗಳನ್ನು ಇಲ್ಲಿ ತೋರಲಾಗಿದೆ. ನೋಡುಗನ ಎಡಭಾಗದಲ್ಲಿಯ ಗಿರಿಯ ಮೇಲೆ ಕಲ್ಲನ್ನು ತಲೆಯ ಮೇಲೆತ್ತಿ ನಿಂತ ಕಮಠನು ಬಲಬದಿಯಲ್ಲಿ ತನ್ನ ತಮ್ಮನಾದ ಮರುಭೂತಿಯ ತಲೆಯ ಮೇಲೆ ಎಸೆಯುತ್ತಿರುವ ದೃಶ್ಯ ಇದಾಗಿದೆ. ಇದೊಂದು ಅರಣ್ಯದ ದೃಶ್ಯವಾದ ಕಾರಣ ಗಿಡಮರಗಳು ಕಲ್ಲು ಬೆಟ್ಟ ಗುಡ್ಡಗಳಿದು ಹೆಚ್ಚಾಗಿ ಕೆಂಪು ಗಾಡಹಸಿರು, ಕಂದು, ಬಿಳಿ ವರ್ಣಗಳನ್ನು ಇಲ್ಲಿ ಬಳಸಲಾಗಿದೆ. ಈ ಚಿತ್ರದ ಸೌಮ್ಯತೆ ಹಿರಿಯೂರಿನ ತೇರುಮಲ್ಲೇಶ್ವರ ದೇವಾಲಯಲ್ಲಿ ದೊರೆಯುತ್ತವೆ. ಇಲ್ಲಿ ಬೇಡ ಜನಾಂಗ ಕಾಡಿನಲ್ಲಿ ಬೇಟೆಯಾಡುವ ಸಂಧರ್ಭದ ದೃಶ್ಯಗಳು ಈ ಚಿತ್ರದಲ್ಲಿ ನೆನಪಾಗುತ್ತವೆ.

ಚಿತ್ರ-೧೩. ಉತ್ತರ ಗೋಡೆಯಲ್ಲಿಯ ಭಿತ್ತಿ ಚಿತ್ರಗಳು ವಜ್ರಘೋಷ ವೃತವಂತ

ಸತ್ತ ಮರುಭೂತಿ ವಲಯ ಪರ್ವತದ ಬಳಿ ವಜ್ರಘೋಷವೆಂಬ ಗಂಡಾನೆಯಾಗಿ ಹುಟ್ಟಿದ ಕಮಠನ ಪತ್ನಿಯಾದ ವಾರಣಿ ಸತ್ತು ಹೆಣ್ಣಾನೆಯಾಗಿ ಹುಟ್ಟಿದ್ದಳು, ಇತ್ತ ಕಮಠ ದುರ್ನಡತೆಯಲ್ಲಿ

ಬಾಳಿ ದುರ್ಭಾವನೆಯಿಂದ ಸತ್ತು ವಲಯ ಪರ್ವತದ ಬಳಿಯೇ ಕುಕ್ಕಟ ಸರ್ಪವಾಗಿ ಹುಟ್ಟಿದನು. (ಅವರವರ ಮನೋವಿಕಾರಗಳನ್ನು ಈ ಜನ್ಮಗಳಲ್ಲೂ ಗಮನಿಸಬಹುದು) ಅರವಿಂದ ಮಹಾರಾಜ ರಾಜ್ಯವನ್ನು ತೊರೆದು ಜನಮುನಿಯಾಗಿ ವಲಯಪರ್ವತಕ್ಕೆ ಬಂದು ತಪವೆಸಗುತ್ತಿರುಲು, ಒಂದು ದಿನ ವಜ್ರಘೋಷವೆಂಬ ಈ ಆನೆ ಮುನಿಯನ್ನು ನೋಡಿ ಕ್ಷಣ ಕಾಲ ಮದೋದ್ರೇಕದಿಂದ ಆತನಿಗೆ ಕೇಡೆಸಗಲು ಆತನೆಡೆಗೆ ನುಗ್ಗಿ ಬರುವಾಗ್ಗೆ ಅದಕ್ಕೆ ಜಾತಿ ಸ್ವರಣೆಯಾಯಿತು (ಹಿಂದಣ ಜನ್ಮದ ನೆನಪು) ತಾನ್ಯಾರೆಂಬುದನ್ನು ಈ ಮುನಿಯಾರೆಂಬುದನ್ನೂ ಅರಿತು ಮನೋವ್ಯಾಕುಲದಿಂದ ಮುನಿಗಳ ಪಾದ ಮೇಲೆ ಬಿದ್ದು ಗೋಳಾಡಿತು. ಆನೆಯನ್ನು ಕಂಡಾಕ್ಷಣ ಮುನಿಗಳು ಮರುಭೂತಿಯ ನೆನಪಾಗಿ ಜೈನಧರ್ಮವನ್ನು ಅದಕ್ಕೆ ಬೋಧಿಸಿದರು. ಕಮಠನಿಂದ ಮುಂದೂ ಕೂಡ ಮರುಭೂತಿಯಾತ್ಮಕ್ಕೆ ಆಗಬಹುದಾದ ಅಪಘಾತಗಳನ್ನು ವಿವರಿಸಿ ಎದೆಗುಂದದೆ ಎಲ್ಲಾ ಉಪಸರ್ಗಗಳನ್ನು ಸಹಿಸು ಎಂದು ಗಂಡಾನೆಯ ಕಿವಿಯಲ್ಲಿ ಓಂಕಾರ ಮಂತ್ರವನ್ನು ಹೇಳಿದರು ಇಷ್ಟಾದ ಮೇಲೆ ಆನೆಯ ಮನಸ್ಸು ತಿಳಿಯಾಯಿತು ಒಮ್ಮೆ ಈ ಗಂಡಾನೆ ಕೆಸರಿನಲ್ಲಿಳಿದು ಮೇಲೇಳಲಾರದೆ ಸಿಕ್ಕಿ ಬಿದ್ದಾಗ ಕುಕ್ಕಟ ಸರ್ಪವಾಗಿ ಅಲೆಯುತ್ತಿದ್ದ ಕಮಠನ ಕಣ್ಣಿಗೆ ಈ ಬಡಪ್ರಾಣಿ ಬೀಳಲು ತಕ್ಷಣ ಅಲ್ಲಿಗೆ ಬಂದು ಅದನ್ನು ಕಚ್ಚಿಕೊಂಡು ವಜ್ರಘೋಷ ಆನೆ ಸಧ್ಭಾವನೆಯಿಂದ ಮರಣವನ್ನಪ್ಪಿ ಸದ್ಗತಿ ಹೊಂದಿತು ಎಂಬುದು ಪುರಾಣ ಐತೀಯವಾಗಿದ್ದು, ಇದರ ಕುರಿತಾಗಿಯೂ ಇಲ್ಲಿ ಚಿತ್ರ ರಚಿಸಲಾಗಿದೆ. ಉತ್ತರ ಗೋಡೆಯ ಕಿಟಕಿ ಮೇಲಿನ ಚಾವಣಿಯ ಎಡಭಾಗದ ಎರಡು ಸಾಲುಗಳಲ್ಲಿ ಈ ಚಿತ್ರಗಳಿದ್ದು ಮರುಭೂತಿಯು ಸತ್ತು ವಜ್ರಗೋಷನಾಗಿ ಮಲಯ ಪರ್ವತದಲ್ಲಿ ವಾಸವಾಗಿದ್ದು ಒಮ್ಮೆ ಮುನಿಯೊಬ್ಬರು ಮಲೆಯಪರ್ವತದಲ್ಲಿ ತಪೋನಿರತರಾಗಿದ್ದಾಗ ವಜ್ರಗೋಷ ಸೇರಿದಂತೆ ಹಲವು ಆನೆಗಳು ಮುನಿಯ ಮೇಲೆ ಎರಗಲು ಹೋದಾಗ ವಜ್ರಘೋಷನು ಮುನಿಯನ್ನು ಕಂಡು ಪೂರ್ವಜನ್ಮದ ನೆನಪುಗಳು ಬಂದು ತನ್ನ ಅರಸನಾದ ಅರವಿಂದರಿಂದ ಇವರ ಪೂರ್ವ ಹಾಗೂ ಭವಿಷ್ಯತ್‌ಗಳನ್ನು ತಿಳಿದು ಣಮೋಕಾರ ಮಂತ್ರವನ್ನು ತಿಳಿದು ಜೈನ ಆಧ್ಯಾತ್ಮ ಒಲವು ಇಲ್ಲೇ ಮೂಡಿತು.

ಮೇಲಿನ ಸಾಲುಗಳು ಎಡದಿಂದ ಬಲಕ್ಕೆ ನಾಲ್ಕು ಆನೆಗಳು ಓಡುತ್ತಿದ್ದ ಹಿನ್ನೆಲೆಯಲ್ಲೆ ಮರಗಳನ್ನು ತೋರಿಸಲಾಯಿತು. ಇದರ ವೇಗ ಕಂಡು ಕೋತಿಯೊಂದು ಮರವನ್ನು ಹಿಡಿದು ಏರುವಂತೆ ತೋರಿಸಿದ್ದು ಮುಂದುವರೆದು ಮಂಟಪವೊಂದನ್ನು ಕೋರಿದ್ದು ಅದರ ಮುಂದೆ ಆಕಳುಗಳನ್ನು ವ್ಯಕ್ತಿಯೊಬ್ಬನು ನಿಯಂತ್ರಿಸುತ್ತಿದ್ದು ಅದರ ಮುಂದೆ ಯೋಗಿಯೊಬ್ಬರು ಗಿರಿಯ ಮೇಲೆ ಕುಳಿತಿದ್ದು ಅವರ ಮುಂದೆ ಇಬ್ಬರು ಬೇಡರು ಸೇರಿದಂತೆ ಹುಲಿಯೊಂದು ಭಕ್ತಿಯಿಂದ ನಿಂತಿದೆ. ಈ ವಜ್ರಘೋಷ ಆನೆಯು ತನ್ನ ಪೂರ್ವ ಜನ್ಮ ಹಿನ್ನೆಲೆಯನ್ನು ಯೋಗಿಯಿಂದ ಅರಿತು ಅವರಿಗೆ ತನ್ನ ಕಾಲುಗಳನ್ನು ನೆಲಕ್ಕೂರಿ ತಲೆ ಭಾಗಿ ನಮಿಸುತ್ತಿರುವ ದೃಶ್ಯವಿದು.

ಎರಡನೆ ಸಾಲಿನಲ್ಲಿ ಆನೆಗಳು ಚೇಂಕರಿಸುತ್ತ ಸೊಂಡಲುಗಳನ್ನು ಎತ್ತಿ ಸಾಗುತ್ತಿದ್ದು ಮಧ್ಯದಲ್ಲಿ ನದಿಯೊಂದು ಅಡ್ಡವಿದೆ ಆ ಬಿಳಿ ವರ್ಣದ ನದಿಯಲ್ಲಿ ಮೀನುಗಳು, ಹಾವುಗಳು ಸಂಚರಿಸುವಂತೆ ಕಲಾವಿದನು ಸೃಷ್ಟಿಸಿದ್ದಾನೆ ವಜ್ರಘೊಷ ಆನೆಯು ನದಿಯನ್ನು ದಾಟುವ ಸಂದರ್ಭದಲ್ಲಿ ನಾಗರ ಎಡೆಯನ್ನು ಹಾಗೂ ಪಕ್ಷಿಯ ದೇಹವನ್ನು ಹೊಂದಿದ ವಿಚಿತ್ರ ಪಕ್ಷಿಯೊಂದು ಕುಕ್ಕುಟ ಸರ್ಪವಾಗಿ ಹಿಂದಿನ ಜನ್ಮದ ಕಮಠನು ವಜ್ರಘೋಷನು ಬೆನ್ನ ಮೇಲೇರಿ ತಲೆಗೆ ಕಚ್ಚುತ್ತಿದ್ದು ಇನ್ನೊಂದು ಪಕ್ಷಿಯು ತನ್ನ ನಾಗರ ಎಡೆಯನ್ನು ಎತ್ತಿಕೊಂಡು ಹಾರಿ ಬರುತ್ತಿರುವಂತೆ ಚಿತ್ರದಲ್ಲಿ ಬೇಡರು ಬೇಟೆಯಾಡುತ್ತಿರುವ ದೃಶ್ಯವಿದ್ದು ಇಲ್ಲಿ ಮೊಲ ಜಿಂಕೆಗಳು ಹೆದರಿ ಹೋಡುತ್ತಿವೆ, ಹುಲಿಯೊಂದು ಆನೆಯ ಎದುರಿಗೆ ನಿಂತು ತಲೆಗೆ ಬಾಯಾಕಿ ತಿನ್ನುವಂತ್ತಿದ್ದು ಇನ್ನೊಂದು ಆನೆ ಅದನ್ನು ಪ್ರತಿರೋಧಿಸುತ್ತಿದೆ. ಇದರ ಹಿಂಬದಿಯಲ್ಲಿ ಬೇಡನೊಬ್ಬನು ತುಪಾಕಿಯಿಂದ ಈ ಹುಲಿಗೆ ಗುರಿಯಿಡುವ ದೃಶ್ಯವಿದಾಗಿದ್ದು ಬೇಡರೊಂದಿಗೆ ಇರುವ ನಾಯಿಯು ಇದನ್ನು ಕಂಡು ಬೊಗಳುತ್ತಿದೆ. ಅದರ ಪಕ್ಕದ ಪಟ್ಟಿಕೆಯಲ್ಲಿ ನರಕ ಮತ್ತು ಸ್ವರ್ಗದ ದೃಶ್ಯವಿದ್ದು ಇಲ್ಲಿ ವಜ್ರಘೊಷ ಸತ್ತು ಸ್ವರ್ಗಕ್ಕೆ ಹೋದಾಗ ಅಲ್ಲಿ ದೇವೇಂದ್ರನು ಸ್ವಾಗತ ಕಮಠನು ಕುಕುಟ ಸರ್ಪವಾಗಿ ಸತ್ತು ನರಕಕ್ಕೆ ಹೋದಾಗ ಅಲ್ಲಿ ಮನುಷ್ಯ-ಮನುಷ್ಯರು ಹೊಡೆದಾಡಿ ಕೈಕಾಲುಗಳನ್ನು ಕತ್ತರಿಸಿ ಕೊಳ್ಳುವುದು ಸರ್ಪ ಚೇಳುಗಳು ಇವರನ್ನು ಕಚ್ಚಿ ತಿನ್ನುತ್ತಿರುವ ನರಕ ದೃಶ್ಯ ಇದಾಗಿದ್ದು ಅಲ್ಲಲ್ಲಿ ಚಿತ್ರದ ಪದರುಗಳು ಮಾಸಿ ಹೋಗಿವೆ.

ಈ ಚಿತ್ರದಲ್ಲಿ ಹೆಚ್ಚಾಗಿ ಗಾಢ ಹಸಿರು, ಕೆಂಪು, ಕಂದು ಬಿಳಿ, ತಿಳಿಗೆಂಪು ವರ್ಣಗಳನ್ನೇ ಹೆಚ್ಚಾಗಿ ಬಳಸಿದ್ದು ಚಿತ್ರವು ಉತ್ತಮ ಸಂಯೋಜನೆಯಾಗಿದೆ. ಈ ಚಿತ್ರದಲ್ಲಿ ಯಥಾದರ್ಶನ ಆಯಾಮವು ನೈಜವಾಗಿ ಮೂಡಿಬಂದಿದ್ದು ಇದೊಂದು ಉತ್ತಮ ಸಂಯೋಜನೆ ಇದೇ ರೀತಿಯ ಆನೆ, ಜಿಂಕೆ, ಮೊಲಗಳು ಹಿರಿಯೂರಿನ ಶ್ರೀ ತೇರುಮಲ್ಲೇಶ್ವರ ದೇವಾಲಯದಲ್ಲಿ ಕಾಣಬಹುದು ವಿಶೇಷವೆಂದರೆ ಈ ಚಿತ್ರವು ೧೭ನೇ ಶತಮಾನದ ಸುಮಾರಿಗೆ ಆಗಿದ್ದು ಆ ಕಾಲದಲ್ಲಿ ಬೇಡರ ಕೈಯಲ್ಲೂ ಮದ್ದು, ತುಪಾಕಿಗಳಿದ್ದವು ಎಂಬುದು ಆಶ್ಚರ್ಯವಾಗುವ ಸಂಗತಿ. ಈ ಚಿತ್ರಗಳ ಮೇಲೆ ಪ್ರಾಂತೀಯ ಪ್ರಭಾವವು ಆಚಾರ ವಿಚಾರ, ಆಚರಣೆ, ಪರಿಸರ ನೇರವಾಗಿ ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ.

ಚಿತ್ರ-೧೪. ರಶ್ಮಿವೇಗನ ಜನ್ಮಾಂತರದ ದೃಶ್ಯ

ಧ್ಯಾನಾಸಕ್ತನಾಗಿ ವಜ್ರಘೋಷವೆಂಬ ಆನೆ ಸಾವನ್ನಪ್ಪಿದುದರಿಂದ ಸಗ್ಗಕ್ಕಡರಿ ಶಶೀ ಪ್ರಭನೆಂಬ ದೇವನಾಗ ಹುಟ್ಟಿತು ಸಗ್ಗಕ್ಕಡರಿ ಸುಖದಲ್ಲಿ ಶಶಿಪ್ರಭನು ಸಂಖ್ಯಾತಕಾಲ ಓಲಾಡಿ ಕೊನೆಗೆ ಪೂರ್ವವಿದೇಹದಲ್ಲಿ ವಿದ್ಯಾದ್ಗತಿ ಮಹಾರಾಜ ನರಸಿಯಾದ ವಿದ್ಯುನ್ಮಾಲೆಯ ಬಸಿರಿಂದ ರಶ್ಮಿ

ವೇಗವಾಗಿ ಹುಟ್ಟಿದನು. ಬಾಲ್ಯದಲ್ಲೇ ಈತನಿಗೆ ಆತ್ಮೋನ್ನತಿಯ ಕಡೆ ಗಮನವಾಯಿತು. ಅಷ್ಟೈಶ್ವರ್ಯತೊರೆದು ದಿಗಂಬರ ಮುನಿಯಾಗಿ ತಪವೆಸಗಿದನು, ಉಪಸರ್ಪವಾಗಿದ್ದ ಕಮಠ ಸತ್ತು ಧೂಮ ಪ್ರಭೆಯೆಂಬ ನಗರದಲ್ಲಿ ಹುಟ್ಟಿ ಬಹುಕಾಲ ನೋವುಂಡ ನಂತರ ಹಿಮಗಿರಿಯಲ್ಲಿ ಮತ್ತೆ ಹೆಬ್ಬಾವಾಗಿ ಹುಟ್ಟಿದನು. ಒಮ್ಮೆ ತಪವೆಸಗುತ್ತದ್ದ ರಶ್ಮಿವೇಗನನ್ನು ಕಂಡು ಈ ಸರ್ಪ ಕೋಪಗೊಂಡು ಅವನನ್ನು ನುಂಗಿತು. ಅದು ನುಂಗುತ್ತಿದ್ದರೂ ಕೂಡ ರಶ್ಮಿವೇಗ ಧ್ಯಾನದಿಂದ ವಿಚಲಿತನಾಗಲಿಲ್ಲ. ಆತನ ದೇಹವನ್ನೇನೋ ಈ ಸರ್ಪ ನುಂಗಿತು, ಆದರೆ ಪವಿತ್ರ ಧ್ಯಾನದಿಂದ ಆತನ ಆತ್ಮವು ದೇಹವೆಂಬ ಪಂಜರದಿಂದ ಪಾರಾಗಿ ಸ್ವರ್ಗದಲ್ಲಿ ಅಚ್ಯುತ್ತೇಂದ್ರನಾಗಿ ಹುಟ್ಟಿತು.

ಈ ಚಿತ್ರದ ಮಧ್ಯಭಾಗದಲ್ಲಿ ದೇವತೆಯಿಂದ ವಿದ್ಯುದ್ಗತಿ ಹಾಗೂ ವಿದ್ಯುನಾಲ್ಮೆಯ ವರ ಪಡೆಯುವ ದೃಶ್ಯವಿದ್ದು, ದೇವತೆಗೆ ಅಭಿಮುಖರಾಗಿ ಕುಳಿತಿರುವ ದೃಶ್ಯ ಇಲ್ಲಿ ಕಂಡುಬರುತ್ತದೆ. ದೇವತೆಯು ಪ್ರಸನ್ನನಾಗಿ ಇವರಿಗೆ ಆಶೀರ್ವದಿಸುತ್ತಿರುವುದು ಕಂಡುಬಂದರೆ, ಎರಡನೇ ಚಿತ್ರದಲ್ಲಿ ರಶ್ಮಿವೇಗನು ಹುಟ್ಟಿನಿಂದಲೇ ಆತ್ಮೋನ್ನತಿಯಕಡೆಗೆ ಒಲವವಾಗಿ ತಾನು ಜೈನ ಮುನೀಂದ್ರನಾಗಲು ಅಪೇಕ್ಷೆಯನ್ನು ದೈವದ ಮುಂದಿಡುತ್ತಿರುವ ದೃಶ್ಯ ಇದಾಗಿದೆ. ಆ ಚಿತ್ರ ಮುಂದುವರೆದು ದೇವತೆಗೆ ನಮಿಸಿ ಹೊರನಡೆಯುತ್ತಿರುವ ದೃಶ್ಯ. ಆನಂತರ ಮುಂದೆ ಜೈನ ಮುನಿಯಾಗಿ ಪದ್ಮಾಸನದಲ್ಲಿ ಕೂತು ಗಂಧರ್ವನೊಬ್ಬನಿಗೆ ಆಶೀರ್ವಚನ ನೀಡುವ ದೃಶ್ಯ ಇದಾಗಿದ್ದು ಪಕ್ಕದಲ್ಲಿ ಸ್ವರ್ಣಕಮಂಡಲವಿದೆ. ಅನಂತರ ಮರವೊಂದು ನೆರಳಾಗಿದೆ ಹಿಂಬದಿಯಲ್ಲಿ ಕಮಾನಿನ ಆಕಾರದ ದೇವಾಲಯಗಳು, ಮರಗಳು ಕಂಡುಬರುತ್ತಿವೆ. ರಶ್ಮಿವೇಗ ಮುಂದೆ ತಲೆ ಭಾಗಿ ನಿಂತ ರಾಜವರ್ಗದವರು ಕಾಣಬಹುದು ಈ ಚಿತ್ರದಲ್ಲಿ ತಲೆ ಭಾಗಿ ನಿಂತ ರಾಜ ವರ್ಗದವರು ಕಾಣಬಹುದು ಈ ಚಿತ್ರದಲ್ಲಿ ವಿಶೇಷವಾಗಿ ಯತಾರ್ದರ್ಶನ ವರ್ಣಗಾರಿಕೆ ಹಾಗೂ ರೇಖಾಸಂಯೋಜನೆ ಗಮನಿಸಬಹುದು. ಈ ಚಿತ್ರದ ಕೆಳಭಾಗದಲ್ಲಿ ಹಳದಿ ಬಣ್ಣವನ್ನು ಗಮನಿಸಬಹುದು. ಅದರ ತುಂಬ ಹೂಬಳ್ಳಿಯ ವಿನ್ಯಾಸವನ್ನು ಮಾಡಲಾಗಿದೆ. ಚಿತ್ರದ ಎಡಭಾಗದಲ್ಲಿ ಜೈನಮಂದಿರವೊಂದು ಧ್ವಜಸ್ತಂಬ ತೀರ್ಥಂಕರ ಪೀಟ, ಗೋಪುರಗಳು, ಧ್ವಜಗಳು ಹಿನ್ನೆಲೆಯಲ್ಲಿ ಮರಗಳು, ಕಮಾನಿನ ಆಕಾರದ ಚಿಕ್ಕ ದೇವಾಲಯಗಳನ್ನು ಕಾಣಬಹುದು. ಇದರ ಎದುರು ಸಾರ್ವಜನಿಕ ದೇವಾಲಯನ್ನು ಕಾಣಬಹುದು. ಇದರ ಎಡಭಾಗದಲ್ಲಿ ಪೂರ್ವಜರು ಹೋಗುತ್ತಿದ್ದ ರಶ್ಮಿವೇಗವನ್ನು ನೋಡಲು ಜನಸಾಗರ ಕೈಜಾರಿ ಹೋಗುತ್ತಿದೆ. ಇದು ಎಡಭಾಗದಲ್ಲಿ ಪೂರ್ವ ವೈರಿಯಾದ ಕಮಠ ಹೆಬ್ಬಾವಿನ ಜನ್ಮ ತಾಳಿ ತಪೋನಿರತ ರಶ್ಮಿವೇಗವನ್ನು ಕಾಲಿನಿಂದ ನುಂಗುತ್ತಿರುವ ಇಲ್ಲಿ ಹೆಬ್ಬಾವು ಗಾಢ ಕೆಂಪು ವರ್ಣವಾಗಿದ್ದು ಅದರ ಮೇಲೆ ಹಾವಿನ ಮೇಲ್ಮೈ ವಿನ್ಯಾಸವನ್ನು ಮಾಡಲಾಗಿದೆ .ತಪೋನಿರತ ರಶ್ಮಿವೇಗವನ್ನು ಕಾಲಿನಿಂದ ನುಂಗುತ್ತಿರುವ ದೃಶ್ಯ ಇಲ್ಲಿ ಚಿತ್ರದಲ್ಲಿ ಹೆಚ್ಚಾಗಿ ಕೆಂಪು ವರ್ಣವನ್ನು ಬಳಸಲಾಗಿದೆ ಹಸಿರು, ನೀಲಿ, ಬಿಳಿ ಬಣ್ಣ,

ಚಿತ್ರ-೧೫. ಅಚ್ಯುತೇಂದ್ರನ ಸ್ವರ್ಗಾವತರಣ

ರಶ್ಮಿವೇಗವನ್ನು ಸರ್ಪನುಂಗಿ ಅವನು ಲೋಕದಿಂದ ಕಾಲನಾದ ಸ್ವರ್ಗದಲ್ಲಿ ಅಚ್ಯುತೀಂದ್ರನಾಗಿ ಹುಟ್ಟಿದನು. ಬಹುಕಾಲ ಅಚ್ಯುತೇಂದ್ರನಾಗಿ ಹುಟ್ಟಿದನು.ಬಹುಕಾಲ ಅಚ್ಯುತಕಲ್ಪದಲ್ಲಿ ನಾನಾರೀತಿಯ ಸುಖವನ್ನು ಅನುಭವಿಸಿದನು. ಆದರು ಆತನ ಮನಸು ಮುಕ್ತಿ ಸುಖವನ್ನು ಬಯಸಿ ಹಾತೊರೆಯುತ್ತಿತ್ತು. ಅದೇ ಸಮಯದಲ್ಲಿ ರಶ್ಮಿವೇಗವನ್ನು ನುಂಗಿದ ವಿಷಸರ್ಪ ಸಿಡಿಲೆರಗಲು ಆ ಸರ್ಪ ಸತ್ತು ತಮಃಪ್ರತಿಭೆಯೆಂಬ ನರಕದಲ್ಲಿ ಹುಟ್ಟಿ ಆನಂತರ ಮಹಾದುಃಖವನ್ನು ಉಂಡು ಕೊನೆಯಲ್ಲಿ ಸತ್ತು ಬೇಡನಾಗಿ ಜನಿಸಿತು.

ಈ ಚಿತ್ರವು ರಶ್ಮಿವೇಗನ ಚರಿತ್ರೆಯ ಮುಂದುವರೆದ ಭಾಗವಾಗಿದ್ದು ಉತ್ತರಖಾಂಡದಲ್ಲಿ ಸ್ವರ್ಗನರಕ ಸದೃಶ್ಯ ಇಲ್ಲಿ ಕಾಣಬಹುದು. ಮೊದಲನೆಯ ಪಟ್ಟಿಯಲ್ಲಿಅಚ್ಯುತೆಂದ್ರನು ಸ್ವರ್ಗದಿಂದ ಅಚ್ಯುತಕಲ್ಪದ ನಾನಾ ಸುಖವನ್ನು ಪಡೆಯುತ್ತಿರುವ ದೃಶ್ಯವಿದೆ. ಇಲ್ಲಿ ಸುವರ್ಣ ವರ್ಣದ ಕಮಾನಿನ ಮಂಟಪವಿದ್ದು ಅಚ್ಯುತೇಂದ್ರನು ಅದರ ಮೇಲೆ ಕಳಿತು ಬೇರೆ ಗಂಧರ್ವರಿಗೆ ಅನ್ಯತಕಲ್ಪ ನೀಡುತ್ತಿರುವುದು ಹಾಗೂ ಇದರ ಮುಂಬಾಗದಲ್ಲಿ ಸುವರ್ಣ ವರ್ಣದ ಕಮಾನಿನ ದ್ವಾರವಿದ್ದು ಅದರ ಹಿನ್ನೆಲೆಯಲ್ಲಿ ಕಡುಹಸಿರು ವರ್ಣವನ್ನು ಲೇಪಿಸಲಾಗಿದೆ ಮುಂದುವರೆದು ಎರಡು ಪಟ್ಟಿಕೆಯಲ್ಲಿ ದೇವತೆಗಳು ಕೈಮುಗಿದು ಕುಳಿತಿರುವುದು ಕೆಳ ಪಟ್ಟಿಕೆಯಲ್ಲಿ ಸ್ತ್ರೀಯೊಬ್ಬಳು ನೃತ್ಯ ಮಾಡುತ್ತಿದ್ದು ಓರ್ವನು ತಾಳ ಮತ್ತೊಬ್ಬ ತಂಬೂರಿ, ಇನ್ನೊಬ್ಬ ಮೃದಂಗ ಮತ್ತೊಬ್ಬನು ಶಹನಾಯಿ ವಾದ್ಯಗಳನ್ನು ನುಡಿಸುತ್ತ ಸಂಭ್ರಮಿಸುತ್ತಿರುವ ದೃಶ್ಯ ಇದಾಗಿದೆ. ಕೆಳಭಾಗದ ನರಕದೃಶ್ಯ ಎಡಭಾಗದಲ್ಲಿ ಹೂಬಳ್ಳಿಗಳ ದೃಶ್ಯವು ಎರಡು ಪಟ್ಟಿಕೆಗಳಿದ್ದು ಬಲ ಭಾಗದ ಪಟ್ಟಿಕೆಯಲ್ಲಿ ನರಕದ ಭೋಕರ ದೃಶ್ಯಗಳನ್ನು ಇಲ್ಲಿ ಸೃಷ್ಟಿಸಲಾಗಿದೆ. ನಗ್ನರಾಗಿರುವ ಪುರುಷರುತಲೆ ಬೋಳಿಸಿ ಯಾವುದೋ ಒಂದು ದೊಡ್ಡ ಕುಂಡದಿಂದ ಏನನ್ನೋ ತೆಗೆಯುವ ರೀತಿಯಲ್ಲಿ ಸೃಷ್ಟಿಸಲಾಗಿದ್ದು ಅತಿಭೀಕರವಾದ ದೃಶ್ಯ ಇದಾಗಿದೆ. ಹಿನ್ನೆಲೆಯಲ್ಲಿ ಗಾಢ ಹಸಿರು ವರ್ಣವನ್ನು ತೋರಿಸಿದ್ದು ತಿಳಿ ಹಳದಿ ಕೆಂಪು ಮಿಶ್ರಣ ಮನುಷ್ಯರು ಹಾಗೂ ಅಶ್ವಗಳ ರುಂಡದ ಚಿತ್ರವಿದ್ದುಇವರ ಮೇಲೆ ರಶ್ಮಿ ಸುರಿಯುವ ರೀತಿಯಲ್ಲಿ ಕೆಂಪು ವರ್ಣದಿಂದ ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಈ ಚಿತ್ರಗಳಲ್ಲಿ ಗಾಢ ಹಸಿರು, ಕೆಂಪು, ಹಳದಿ, ಕಡು ಹಸಿರು, ತಿಳಿ ಕೆಂಪು, ಬಿಳಿ, ಕಂದುವರ್ಣಗಳು ಹೆಚ್ಚಾಗಿ ಕಂಡುಬರುತ್ತದೆ. ಈ ಚಿತ್ರದಲ್ಲಿಯೂ ಸಹ ಅಶ್ವಗಳ ಹಾಗು ಹೂ ಬಳ್ಳಿಗಳ ಚಿತ್ರವು ಮೊಘಲರ ಪ್ರಭಾವವನ್ನು ತೋರುತ್ತವೆ. ಅಷ್ಟೇ ಅಲ್ಲದೆ ನೃತ್ಯ ಮಡುತ್ತಿರುವ ಸ್ತ್ರೀ ಹಾಗೂ ವಾಧ್ಯಗಾರರು ಮರಾಠಿಗರೆಂದು ಅನಿಸುತ್ತದೆ.

ಚಿತ್ರ-೧೬. ವಜ್ರಣಾಬಿ ಕುರಂಗ ಬೆಡನ ವೃತ್ತಾಂತ

ಅಚ್ಯುತೇಂದ್ರನು ಬಹುಕಾಲ ಅಚ್ಯುತಕಲ್ಪದಲ್ಲಿ ನಾನಾರೀತಿಯ ಸುಖವನ್ನು ಅನುಭವಿಸಿದನು ಆದರು ಆತನ ಮನಸ್ಸು ಮುಕ್ತಿ ಸುಖವನ್ನು ಬಯಸಿ ಹಾತೊರೆಯುತ್ತಿತ್ತು. ಅಶ್ವಪುರದ ಅರಸನಾದ ವಜ್ರವಿಜಯನ ಮನೋವಲ್ಲಭೆ ವಿಜಯೇನ ಹೊಟ್ಟೆಯಲ್ಲಿ ಅಚ್ಯುತೇಂದ್ರನಆತ್ಮ ಬಂದು ನೆಲೆಸಿ ವಜ್ರನಾಭಿಯಾಗಿ ಹುಟ್ಟಿದನು. ಹರೆಯಕ್ಕೆ ಬಂದ ಮೇಲೆ ವಜ್ರನಾಭಿ ತಾನೇ ಚಕ್ರವರ್ತಿಯಾಗಿ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುತ್ತಿರಲು ಒಂದು ದಿನ ಕ್ಷೇಮಂಕರ ಭಟ್ಟರದಲ್ಲಿ ಧರ್ಮೋಪದೇಶವನ್ನು ಪಡೆದು ವಿರಾಗಿಯಾಗಿ ರಾಜ್ಯವನ್ನು ತನ್ನ ಮಗುವಿಗಿತ್ತು ಸನ್ಯಾಸಿಯಾಗಿ ತಪವ್ಯಸಗಿದನು. ಮುನಿಯನ್ನು ನುಂಗಿದ ವಿಷಸರ್ಪಕ್ಕೆ ಸಿಡಿಗೆರಗಲು ಅದು ಸತ್ತು ನರಕದುಃಖವನ್ನುಂಡು ಕೊನೆಯಲ್ಲಿ ಸತ್ತು ಕುರಂಗನೆಂಬ ಬೇಡನಾಗಿ ಹುಟ್ಟಿದನು. ಆಗಲು ಕೂಡ ಆತನ ಆತ್ಮ ಚೇತರಿಸಿಕೊಳ್ಳಲಿಲ್ಲ ಅದಾನೀಚ ಕೃತ್ಯಗಳಲ್ಲೇ ಕುರಂಗನು ತಲ್ಲೀನನಾಗಿದ್ದನು. ಅವನ ಅವಾಂತರದಿಂದ ಭೂಮಿ, ಆಕಾಶ,ನೀರು ಈ ಮೂರುಕಡೆಯ ಜೀವಿಗಳು ನಿತ್ಯವು ಸಾಯುತ್ತಿದ್ದವು. ಕುರಂಗ-ಒಂದು ದಿನ ವಜ್ರನಾಭಿ ಕುರಮಗನ ನೀಚ ಕೃತ್ಯಕ್ಕೆ ಅಂಜಲಿಲ್ಲ ಜೊತೆಗೆ ಅವನ ಮೇಲೆ ಯಾವ ಪ್ರತೀಕಾರವನ್ನು ನೆನೆಯದೇ ಪ್ರಶಂಶಚಿತ್ತನಾಗಿ ಪ್ರಾಣಬಿಟ್ಟನು. ವಜ್ರವಿಜಯನ ಹಾಗೂ ವಿಜಯೆಯ ದಂಪತಿಗಳಿಗೆ ವಜ್ರನಾಭಿ ಎಂಬ ಮಗನಾಗಿ ಹುಟ್ಟಿದ ಅಚ್ಯುತೇಂದ್ರನನ್ನು ದಂಪತಿಗಳು ಪಡೆಯುತ್ತಿರುವ ರಾಜ್ಯಭಾರ ಮಾಡುತ್ತಿರುವ ದೃಶ್ಯಗಳು ಕಳಚಿ ಹೋದಲ್ಲಿ ಇಂದ್ರನ ಐರಾವತ ಹಾಗೂ ಶ್ವೇತ ಅಶ್ವಗಳ ಚಿತ್ರವಿದ್ದು ಅದರ ಮುಂದುವರಿದ ಭಾಗದಲ್ಲಿ ಛತ್ರಿ, ಛಾಮರ ಕತ್ತಿ, ಗುರಿಗಳನ್ನು ಹಿಡಿದು ದೂತರಿದ್ದಾರೆ. ಅದರ ಪಕ್ಕದ ಅಂಕಣದಲ್ಲಿ ಬಗೆಯ ಶುಭಗಳಿವೆ. ಹೂದೋಟ, ದ್ರವ್ಯಕುಂಡಗಳು, ಹೂ ತುಂಬಿದ ಕುಂಡಗಳು ವಜ್ರಾಭರಣತುಂಬಿದ ಕುಂಡಗಳು, ವಸ್ತ್ರಗಳು ಇಲ್ಲಿ ಚಿತ್ರಸಲಾಗಿದೆ.

ಮುಂದುವರಿದು ವಜ್ರನಾಭಿಯುತನ್ನ ರಾಜ್ಯವನ್ನು ತನ್ನ ಮಗನಿಗೆ ಬಿಟ್ಟುಕೊಟ್ಟು ಕ್ಷೇಮಂತರ ಭಟ್ಟರ ಧರ್ಮೋದ್ದೇಶವನ್ನು ಪಾಲಿಸುತ್ತ ಜಿನ ಮುನಿಯಾಗಿ ಸನ್ಯಾಸತ್ವವನ್ನು ಸ್ವೀಕರಿಸಿ ದಿಂಬರನಾಗಿ ಕಾಡಿನಲ್ಲಿ ತಪಸ್ಸಿಗೆ ಕೂತ ಚಿತ್ರವಿದು. ಇಲ್ಲಿ ರಾಜವರ್ಗದವರು ಬಂದು ಅವನಿಗೆ ಪಡೆ ಮಾಡುತ್ತಿರುವುದು ಅವನು ಸುತ್ತ ಹಾವು, ಅಳಿಲು, ಹಸು, ಸಿಂಹ, ಚಿರತೆ, ನವಿಲು, ಜಿಂಕೆ, ಗಿಳಿ, ಮುಂಗುಸಿ, ಹೆಬ್ಬಾವು, ಕರಡಿ, ಈಗೆ ಕಾಡಿನ ಪ್ರಾಣಿಪಕ್ಷಿಗಳೆಲ್ಲ ಸಹೋದರ ಭಾವದಿಂದ ಮುನಿಗೆ ಶರಣೆ ಶರಣಾಗಿ ಭಾವೈಕ್ಯದ ಅಹಿಂಸ ತತ್ವ ಸಾರುವ ಚಿತ್ರ ಇದಾಗಿದೆ. ಹಿನ್ನೆಲೆಯನ್ನು ಕೆಂಪುವರ್ಣದಿಂದ ಲೇಪನ ಮಾಡಿದ್ದು ಹಿಂಬದಿಯಲ್ಲಿ ಮಂಟಪಗಳನ್ನು ತೋರಿಸಲಾಗಿದೆ. ಮುನಿಯು ಪದ್ಮಾಸನದಲ್ಲಿ ಕುಳಿತಿದ್ದು ಮರವೊಂದು ನೆರಳಾಗಿದೆ.

ಇದೇ ಚಿತ್ರದ ಮುಂದುವರೆದ ಭಾಗವಾಗಿ ಎರಡು ಪಟ್ಟಿಗಳಿದ್ದು ಮೇಲ್ಭಾಗದಲ್ಲಿ. ಗಿಡ ಮರಗಳು, ಜಿಂಕೆಗಳು, ಮಂಟಪಗಳು ಕೋತಿ, ಸಿಂಹ ಈಗೇ ಹಲವು ಪ್ರಾಣಿಗಳನ್ನು ತೋರಿಸಿದ್ದು ಕೆಳಭಾಗದಲ್ಲಿ ವಜ್ರನಾಭಿತ ಪಕ್ಕ ಕುಂತಿದ್ದು, ಇಬ್ಬರು ಬೇಡರ ಜೊತೆಗೆ ಬಂದು ವಜ್ರನಾಭಿ ಮುನಿಗೆ ಬಾಣಗಳ ಸರಮಾಲೆಯನ್ನು ಬಿಡುತ್ತಿರುವ ದೃಶ್ಯವಿದೆ. ಮುನಿಯು ಶ್ವೇತವರ್ಣನಾಗಿದ್ದು ಪದ್ಮಾಸನದಲ್ಲಿ ಹಸನ್ಮಿಖಿ ತಪೋನಿರತನಾಗಿರುವನು. ಇವನ ಕೆಳಭಾಗದಲ್ಲಿ ಹಾವು, ಜಿಂಕೆಗಳು, ಮಲಗಿದ್ದು ಇವನ ಎದುರುಗಡೆ ಕುರಂಗು ತನ್ನ ಜನ್ಮಜನ್ಮಾಂತರದ ಶತ್ರುವಾದ ವಜ್ರನಾಭಿಗೆ ಬಾಣಗಳನ್ನು ಪುಂಖಾನುಪುಂಖವಾಗಿ ಬಿಡುವಕ್ರಿಯೆಯಲ್ಲಿದ್ದು ಮತ್ತೊಬ್ಬ ತುಪಾಕಿಯನ್ನು ಹಿಡಿದು ನಿಂತಿರುವನು. ಹಿನ್ನೆಲೆಯೂ ನೀಲಿವರ್ಣವಾಗಿದ್ದು ಗಾಢ ಹಸಿರು ಮರಗಳಿದ್ದು ಬಿಳಿ ನಾಯಿಯನ್ನು ಇಲ್ಲಿ ಚಿತ್ರಿಸಲಾಗಿದೆ. ಹೀಗೆ ಐತಿಹಾಸಿಕ ಪುರಾವೆಗಳ ಪುರಾಣಗಳನ್ನು ಕಲಾವಿದರು ಭಿತ್ತಿಚಿತ್ರಗಳ ಮೂಲಕ ಸಾಕ್ಷಾತ್ಕಾರಿಸುವಲ್ಲಿ ಸಫಲರಾಗಿದ್ದು. ಇದರಿಂದ ಜೈನಚಿತ್ರ ಪರಂಪರೆ ಎಂದಿಗು ಚಿರಸ್ಥಾಹಿಯಾಗಿ ಉಳಿಯುವುದರಲ್ಲಿ ಯಾವುದೇ ಅನುಮಾನಗಳಿಲ್ಲ.

ಚಿತ್ರ-೧೭. ಆನಂದ ಮುನಿಯು ಸಿಂಹನಿಂದ ಹತನಾದ ದೃಶ್ಯಾವಳಿಗಳು

ವಜ್ರನಾಭಿಮುನಿ ನಿರ್ಮಲಾಂತರಂಗ ಧ್ಯಾನದಿಂದ ಸತ್ತು ಮಧ್ಯನುಗ್ರೈವೀಯಕವೆಂಬ ಸ್ವರ್ಗದಲ್ಲಿ ಅಹಮಿಂದ್ರ ದೇವನಾಗಿ ಹುಟ್ಟಿದನು. ಸ್ವರ್ಗದ ಸುಖವನ್ನು ಬಹುಕಾಲ ಅನುಭವಿಸಿ ಆನಂತರ ಅಲ್ಲಿಂದ ಅಚ್ಯುತನಾಗಿ ಅಯೋಧ್ಯೆಯಲ್ಲಿ ಇಕ್ಷ್ವಾಕು ವಂಶದ ವಜ್ರಬಾಹು ಮಹರಾಜನಿಗೆ ಮಗನಾಗಿ ಹುಟ್ಟಿದನು ಈ ಆನಂದನು ಮಹಾ ಮಂಡಳಿಕನಾಗಿ ರಾಜ್ಯಭಾರ ಮಾಡುತ್ತಿದ್ದನು ವಿಫಲಮತಿ ಎಂಬ ರಾಜನು ಧರ್ಮಾನುರಾಗಿ ಬಾಳುತ್ತಿದ್ದನು. ಒಮ್ಮೆ ತನ್ನ ತಲೆಯಲ್ಲಿ ನೆರೆಗೂದಲನ್ನು ಕಂಡು ಆನಂದನಿಗೆ ವೈರಾಗ್ಯ ಉದಯವಾಗಿ, ರಾಜ್ಯವನ್ನು ಮಗನಿಗಿತ್ತು, ದಿಗಂಬರ ಮುನಿಯಾಗಿ ಶುಭ ಭಾವನೆಯಿಂದ ಆರಾಧನ ಚತುಷ್ಷಯವನ್ನು ಆರಾಧಿಸಿ, ಏಕಾದಶಿಂಗ ಜ್ಞಾನವನ್ನು ಸಂಪಾದಿಸಿ, ತೀರ್ಥಂಕರನಾಗುವುದಕ್ಕೆ ಬೇಕಾದದರ್ಶನ ವಿಶುಧ್ಧಿಯೇ ಮುಂತಾದ ಶೋಡಶ ಭಾವನೆಗಳನ್ನು ಭಾವಿಸುತ್ತ ಘೋರತಪದಲ್ಲಿ ತಲ್ಲೀಲನಾದನು. ಅತ್ತ ಕೊರಂಗನೆಂಬ ಬೇಡನು ದುರ್ಬಾವನೆಯಿಂದ ಸತ್ತು ನಂತರ ನೋವುಂಡು ಅನಂತರ ಸಿಂಹನಾಗಿ ಜನಿಸದಿನು. ಅದು ಅನೇಕ ಪ್ರಣಿಗಳನ್ನು ಕೊಂದು ಪಾಪದ ಪರ್ವತವನ್ನೇರಿ ವಿಜೃಂಭಿಸುತ್ತಿತ್ತು. ಈ ಸಿಂಹ ಹಿಂದಣಭವದದ್ವೇಶವನ್ನು ನೆನೆದು ಮತ್ತೆ ಆನಂದ ಮುನಿಯ ಮೇಲೆ ಬಿದ್ದಿತು, ಆಗಲೂ ಆ ಮುನಿ ತನ್ನಧ್ಯಾನದಿಂದ ವಿಚಲಿತನಾಗದೆ ಕ್ಷಮಾಶೀಲನಾಗಿ ಆತ್ಮಧ್ಯಾನದಲ್ಲೇ ತಲ್ಲೀನನಾಗಿ ಸತ್ತು ಅನಕಲ್ಪನೆಂಬ ಸ್ವರ್ಗದಲ್ಲಿ ಅನತೇಂದ್ರನಾಗಿ ಜನಿಸದಿನು. ಈ ಸ್ವರ್ಗದಲ್ಲಿ ಬಹುಕಾಲ ಅನತೆಂದ್ರ ಅಪಾರ ಸುಖವನ್ನುಂಡು

ತಣಿದನು. ಆದರೂ ಈ ಸುಖವನ ಮನಸ್ಸಿಗೆ ಅಲ್ಪವಾಗಿ ಕಂಡು ಚಿರಸುಖವನ್ನುಣ್ಣಲೆಸಗಿ ಮುಕ್ತಿ ಹೊಂದುವ ವಿದಾನವನ್ನು ಚಿಂತಿಸುತ್ತಿದ್ದನು. ಅಯೋಧ್ಯೆಯ ಇಕ್ವಾಕು ವಂಶದ ವಜ್ರಬಾಹು ಹಾಗೂ ಅವನ ಹೆಂಡತಿಯಾದ ಪ್ರಭಂತರೆಗೂ ಆನಂದನೆಂಬ ಮಗನಾಗಿ ಹುಟ್ಟಿದ ನಂತರ ಮಹಾಮಂಡಳಿಕನಾಗಿ ರಾಜ್ಯಭಾರ ಮಾಡುತ್ತಿರುವ ದೃಶ್ಯವಿದು ಈ ದೃಶ್ಯದಲ್ಲಿ ಆನಂದನು ಎಡಗೈಯಲ್ಲಿ ಹೂವನ್ನು ಹಿಡಿದ ಸುಖಾಸನದಲ್ಲಿ ಕಿರೀಟ ವಜ್ರಾಭರಣದಾರಿಯಾಗಿ ಸುಖಾಸನದಲ್ಲಿ ಕುಳಿತಿದ್ದು ಇವನ ಸುತ್ತಲುಛತ್ರಿ ಛಾಮರಗಳನ್ನು ಹಿಡಿದು ವರ್ಣವನ್ನು ತೋರಿಸಲಾಗಿದೆ ಮುಂದಿನ ಭಾಗದಲ್ಲಿ ವಿಪುಳಮತಿ ಎಂಬ ಜಿನವಾಣಿಯು ವಾಖ್ಯಾನಕಾರನ ಧರ್ಮೋಪದೇಶವನ್ನು ಕೇಳಿ ಧರ್ಮಾನುಸಾರವಾಗಿ ಪೂರ್ವಜನ್ಮದ ತನ್ನ ಆಧ್ಯಾತ್ಮ ಶಕ್ತಿಯಿಂದ ಭೌತಿಕ ಸುಖಲೋಭಗಳನ್ನು ಬಿಟ್ಟುತನ್ನ ಮಗನಿಗೆ ರಾಜ್ಯವನಿತ್ತು ದಿಗಂಬರ ಸನ್ಯಾಸಿಯಾಗಿ ದೀಕ್ಷೆಯನ್ನು ತೊಡುತ್ತಿರುವ ಚಿತ್ರ ಇದಾಗಿದ್ದು, ಇಲ್ಲಿ ಆನಂದನ ಮಗ ಅವನ ಪತ್ನಿಯರು ಎಡಭಾಗದಲ್ಲಿ ನಿಂತಿದ್ದು ಕೈಯಲ್ಲಿ ಗಂಧದ್ರವ್ಯಗಳನ್ನು ಹಿಡಿದು ಸರ್ವಾಲಂಕರ ಭೂಷಿತರಾಗಿ ನಿಂತಿದ್ದು ಆನಂದನ ಮಗನ ದಿಗಂಬರ ಆನಂದರಿಗೆ ದ್ರವ್ಯೋದಾರಣೆ ಮಾಡುತ್ತಿರುವ ದೃಶ್ಯ ಇದಾಗಿದ್ದು ಇಲ್ಲಿ ಆನಂದನು ಶ್ವೇತವರ್ಣದಲ್ಲಿದ್ದು ಇನ್ನು ಮೂವರು ತಿಳಿಗೆಂಪು ಕಂದುವರ್ಣದಲ್ಲಿದ್ದಾರೆ ಈ ಹಿನ್ನೆಲೆಯನ್ನು ಹಸಿರು ಬಣ್ಣದಲ್ಲಿ ತೋರಿಸಿದ್ದಾರೆ.

ಚಿತ್ರ-೧೮. ರಾಜಕುಲಕ್ಕೆ ಆನಂದನ ಉಪದೇಶ

ಮುಂದಿನ ಚಿತ್ರದಲ್ಲಿ ಆನಂದರು ರಜಕುಲಕ್ಕೆ ಜನವಾಣಿಯನ್ನು ಹೇಳುತ್ತಿರುವ ದೃಶ್ಯವಿದ್ದು, ಆನಂದ ಮುನಿಗಳು ಗೋಮುಖಾಸನದಲ್ಲಿ ಕೂತು ತಮ್ಮ ಬಲಗೈಯಲ್ಲಿ ಚಿನ್ಮುದ್ರೆಯನ್ನು ಹಿಡಿದು ರಾಜಕುಲಕ್ಕೆ ಉಪದೇಶಿಸುವಂತೆ ಇಲ್ಲಿತೋರಲಾಗಿದೆ. ಸುವರ್ಣ ಮಂಟಪದಲ್ಲಿ ದಿಗಂಬರಾಗಿ ಕೂತಿರುವಆನಂದರ ಬಳಿಯಲ್ಲಿ ನವಿಲು ಗರಿಯಚಾಮರ ಕಮಂಡಲ ಹೂ ಕುಂಡಗಳಿದ್ದು ಮುಂಬದಿಯಲ್ಲಿ ರಾಜಪರಿವಾರದವರು ಕೈಮುಗಿದು ಕುಳಿಯುತ್ತಿದ್ದಾರೆ.ಇದರ ಹಿನ್ನೆಲೆಯಲ್ಲಿ ರಾಜಗೋಪುರವನ್ನು ತೋರಲಾಗಿದ್ದು ಯಕ್ಷಗಂಧರ್ವರು ಮೇಲಿಂದ ನಿಂತು ಹರಸುತ್ತಿರುವ ಹಾಗೆ ಇಲ್ಲಿ ಚಿತ್ರಿಸಲಾಗಿದೆ. ಈ ಗುಂಪಾಗಿ ಕುಂತಿರುವ ರಾಜಪರಿವಾರದ ಚಿತ್ರವನ್ನು ಗಮನಿಸಿದಾಗ ಮೊಘಲ, ಮರಾಠರ, ಹಾಗೂ ಮೈಸೂರು ಸಾಮ್ರಾಜ್ಯದ ಈ ಚಿತ್ರಗಳಲ್ಲಿ ಕಂಡುಬರುತ್ತದೆ. ಅವರ ವೇಶಭೂಷಣ, ಆಭರಣ ಶೈಲಿ, ಸಂಯೋಜನ ವಿನ್ಯಾಸ, ರೇಖಾ ಪ್ರೌಢಿಮೆ ಇವುಗಳು ಇವರ ಪ್ರಭಾವಕ್ಕೆ ಪುಷ್ಠಿ ನೀಡುತ್ತದೆ.

ಚಿತ್ರ-೧೯. ಷೋಡರ ಭಾವನೆಗಳ ಘೋರತಪ

ಆನಂದನು ದಿಗಂಬರ ಮುನಿಯಾಗಿ ಶುಭಭಾವನೆಯಿಂದ ಆರಾಧನಾಚತುಷ್ಠವನ್ನು ಆರಾಧಿಸಿ

ಏಕದಶಾಂಗಜ್ಞಾನವನ್ನು ಸಂಪಾದಿಸಿ ತೀರ್ಥಂಕರನಾಗುವುದಕ್ಕೆ ಬೇಕಾಗುವ ದರ್ಶನ ವಿಶುದ್ಧೀಯೇ ಮುಂತಾದ ಷೋಢಷ ಭಾವನೆಗಳನ್ನು ಬಾವಿಸುತ್ತ ಘೋರತಪದಲ್ಲಿ ತಲ್ಲೀನನಾದ ದೃಶ್ಯ ಇದಾಗಿದ್ದು ಇಲ್ಲಿ ನಾಲ್ಕು ವೃತ್ತಗಳ ಪರೀದಿಯಿದ್ದು ನಾಲ್ಕು ವೃತ್ತಗಳಲ್ಲೂ ಷೋಡಷ ಭಾವನೆಗಳ ಚಿತ್ರಣವಿದ್ದು ವೃತ್ತದ ಒಳಗೆ ಗೋಪುರಾಕಾರದ ಕಮಾನಿನ ಮಂಟಪವಿದ್ದು ಪದ್ಮಾಸನದಲ್ಲಿ ಕೂತು ಆನಂದನ ಷೋಡಷ ಭಾವನೆಗಳಿಂದ ಗೆದ್ದು ಬರುತ್ತಿರುವ ದೃಶ್ಯಇದಾಗಿದೆ, ಅಲ್ಲದೆ ವೃತ್ತದ ಹೊರ ಭಾಗದಲ್ಲಿ ನಾಲ್ಕು ಜೈನ ಸ್ತಂಭಗಳಿವೆ. ಒಳಗಿನಿಂದ ಮೊದಲ ವೃತ್ತದಲ್ಲಿ ದೇವತೆಗಳ ಮಂಟಪ, ಗೋಪುರ ಸಿಂಹ ಇವುಗಳ ಚಿತ್ರವಿದ್ದು ಒಳಬಂದ ಎರಡನೇ ವೃತ್ತದಲ್ಲಿ ಧ್ವಜಗಳು, ಕುಂಭಗಳು, ಮಂಟಪದವರ ಚಿತ್ರವಿದ್ದು ಮೂರನೇ ವೃತ್ತದಲ್ಲಿ ಗೋಪುರ, ಯಕ್ಷಯಕ್ಷಿಯರು ತಪೋನಿರತ ಜೈನಮುನಿಗಳು ಯಜ್ಞಕುಂಡದ ಮಾದರಿ ಮರಗಿಡಗಳನ್ನು ಕಾಣಬಹುದಾಗಿದೆ.

ಈ ಷೋಡಷ ಭಾವನೆಗಳ ಅರ್ಥವೇನೆಂದರೆ ಆತ್ಮೋನ್ನತಿಯ ಆತ್ಮ ಸಂಸ್ಕಾರದ ಉತ್ತಮವಾದ ಹಂತಗಳಾದ ಕ್ರಿಯಾ ಕಲಾಪಗಳನ್ನು ವಿಚಾರಪೂರ್ವಕ, ಭಾವನಾ ಪೂರ್ವಕವಾಗಿ ಆರಾಧಿಸಿ ಹದಿನಾರುರೀತಿಯ ಮಾರ್ಗೋಪಾಯಗಳೇ ಷೋಡಷಕಾರಣ ಭಾವನೆಗಳು ಇವುಗಳ ಭಾವನೆ, ಆಚರಣೆಗಳು ಆತ್ಮಕಲ್ಯಾಣಕ್ಕೆ ಮೋಕ್ಷಕ್ಕೆ ಮತ್ತು ತೀರ್ಥಂಕರರ ಪದವಿಗೆ ಕಾರಣಗಳಾಗಿವೆ. ಆದ್ದರಿಂದ ಇವನ್ನು ಷೋಡಷಕಾರಣ ಭಾವನೆಗಳು ಎಂದು ಹೇಳುವರು. ಮಾನವರು ಮಹಾತ್ಮನಾಗಿ ಪರಮಾತ್ಮನಾಗುವ ಪದವಿಯೆ ತೀರ್ಥಂಕರರತನ ವಾಗಲು ಈ ಅತಿಶಯವನ್ನು ಹೊಂದಲು ತಮ್ಮ ಹಿಂದಿನ ಜನ್ಮದಲ್ಲಿ ಕೇವಲಗಳ ಪಾದಮೂಲದಲ್ಲಿ ಷೋಡಷಕಾರಣ ಭಾವನೆಗಳನ್ನು ಭಾವಿಸಿ ಆರಾಧಿಸಿರಬೇಕು.

ಷೋಡಷಕಾರಣ ಭಾವನೆಗಳು ಹದಿನಾರಿದ್ದು, ಅವುಗಳು ಇಂತಿವೆ:–

೧. ದರ್ಶನವಿಶುದ್ಧಿ ೨. ವಿನಯಸಂಪನ್ನತಾ ೩. ಶೀಲವ್ರತೇಶ್ವರ ನೀತಿ ವಿಚಾರ ೪. ಅಭೀಕ್ಷಣ–ಜ್ಞಾನೋಪಯೋಗ ೫. ಸಂವೇಗ ೬. ಶಕ್ತಿತಸ್ಯಾಗ. ೭. ಶಕ್ತಿತಸ್ತಸ ೮. ಸಾಧುಸಮಾಧಿ ೯. ವೈಯ್ಯಾವೃತ್ಯ ೧೦. ಅರ್ಹದ್ಭಕ್ತಿ. ೧೧. ಆಚಾರ್ಯಭಕ್ತಿ ೧೨. ಬಹುಶ್ರುತಭಕ್ತಿ ೧೩. ಪ್ರವಚನ೧೪. ಅವಶ್ಯಕಾಪರಿಯಾಣಿ ೧೫.ಮಾರ್ಗಪ್ರಭಾವನೆ ೧೬. ಪ್ರವಚನ ವಾತ್ಸಲ್ಯ ಇಂತಿವಿಗಳ ಆರಾಧನೆ ಭಾವನೆ ಮಾಡುವುದರಿಂದ ಜೀವನಾತ್ಮನುತನ್ನ ಸಕಲ ಕರ್ಮಗಳಿಂದ ಕಾಲಾನು ಕ್ರಮದಲ್ಲಿ ಮುಕ್ತನಾಗಿ ನಿರಂಜನ ಸಿದ್ಧನಾಗುತ್ತಾನೆ.

ಚಿತ್ರ–೨೦. ಆನಂದರನ್ನು ಸಿಂಹ ಬಲಿಪಡೆಯುತ್ತಿರುವುದು

ಘೋರತಪದಲ್ಲಿ ತಲ್ಲೀನನಾದ ಆನಂದರನ್ನು ಹಿಂದಿನ ಜನ್ಮದಲ್ಲಿ ಕುರಂಗನೆಂಬ ಬೇಡನು

ದುರ್ಭಾವನೆಯಿಂದ ಸತ್ತು ನರಕದ ನೋವುಂಡ ಆನಂತರ ಮಗನಾಗಿ ಜನಿಸಿ ಅನೇಕ ಪ್ರಾಣಿಗಳನ್ನು ಕೊಂದು ಪಾಪದ ಪರ್ವತವನ್ನೇರಿ ವಿಜೃಂಭಿಸುತಿತ್ತು. ಒಮ್ಮೆ ಆನಂದ ಮುನಿಗಳನ್ನು ಕಂಡು ಪೂರ್ವದ ಹಿಂದಣ ಭವನದ ದ್ವೇಷವನ್ನು ನೆನೆದು ಆನಂದ ಮುನಿ ತನ್ನಧ್ಯಾನದಿಂದ ವಿಚಲಿತನಾಗದೆ ಕ್ಷಮಾಶೀಲನಾಗಿ ಆತ್ಮಧ್ಯಾನದಲ್ಲೇ ಅತ್ತ ಅನೇತಕವೆಂಬ ಸ್ವರ್ಗದಲ್ಲಿ ಅವನ ಮನಸ್ಸಿಗೆ ಅಲ್ಪವಾಗಿ ಕಂಡುಚಿರ ಸುಖವನ್ನುಣ್ಣಲೊಸುಗಿ ಮುಕ್ತಿ ಹೊಂದುವ ವಿಧಾನವನ್ನೆ ಚಿಂತಿಸುತ್ತಿದ್ದರು. ಈ ಚಿತ್ರದಲ್ಲಿ ಎಡಭಾಗದಲ್ಲಿ ಆನಂದ ಮುನಿಯು ಪದ್ಮಾಸನದಲ್ಲಿ ಗಿರಿಯೊಂದರ ಮೇಲೆ ಕುಳಿತಿದ್ದು ಸಿಂಹವು ಬಂದು ಎಡಭುಜವನ್ನು ಕಚ್ಚುತ್ತಿರುವ ಹಾಗೆ ತೋರಿಸಿದ್ದು ಇದರ ಮುಂಭಾಗದಲ್ಲಿ ಅಳಿಲು, ಜಿಂಕೆ, ಮೊಲ, ಹಾವು ಹೀಗೆ ನಾನಾ ಪ್ರಾಣಿಗಳು ಕುಳಿತಿದ್ದು ಹಿನ್ನೆಲೆಯಲ್ಲಿ ಮೂರು ಮರಗಳನ್ನು ತೋರಿಸಿದ್ದು ಅಲ್ಲಿ ಗಿಳಿ, ಗುಬ್ಬಿ, ನವಿಲು, ಕೊಕ್ಕರೆ, ಹದ್ದು ಹೀಗೆ ನಾನಾ ಪಕ್ಷಗಳನ್ನು ತೋರಿಸಿದ್ದು ಹಿಂಭಾಗದಲ್ಲಿ ಮೂರು ಗುಡ್ಡಗಳನ್ನು ತೋರಿಸಿ ಅದರ ಮೇಲೆ ಎರಡು ತೆಂಗಿನ ಮರದ ಆಕಾರವನ್ನು ತೋರಿಸಿ ಅಲ್ಲಿ ಚಿರತೆ, ಸಿಂಹಗಳ, ಹುಲಿಗಳು ಇರುವಂತೆ ಆಕಾರವನ್ನು ತೋರಿಸಿ ಕಲಾವಿದನು ತೋರಿಸಿದ್ದಾನೆ. ಇಲ್ಲಿಯೂ ಸಹ ಬಿಳಿ, ಗಾಡ ಹಸಿರು, ನೀಲಿ, ಕೆಂಪು, ಕೇಸರಿ, ಕಂದು ವರ್ಣಗಳೇ ಪ್ರಮುಖವಾಗಿದ್ದು ಇದೊಂದು ಉತ್ತಮ ಸಂಯೋಜನೆಯಾಗಿದೆ ಈ ಕಾಡಿನದೃಶ್ಯವ ಹಿರಿಯೂರಿನ ಭಿತ್ತಿಚಿತ್ರವನ್ನು ಹೋಲುತ್ತವೆ.

ಚಿತ್ರ–೨೧. ಅನತೇಂದ್ರನ ಸ್ವರ್ಗಾರೋಹಣ

ಈ ಚಿತ್ರದಲ್ಲಿ ಆನಂದನು ಸಿಂಹದಿಂದ ಸತ್ತನಂತರ ಆ ಸೂಕ್ಷ್ಮ ಶರೀರವು ಅನತೇಂದ್ರನಾಗಿ ಆನತಕಲ್ಪವೆಂಬ ಸ್ವರ್ಗಸುಖವನ್ನು ಉಂಡು ಈ ಬೌತಿಕ ಲೋಕದಲ್ಲಿ ಸಾದಿಸಿದ ಸದ್ಭಾವ ಅಂಶಗಳು ದೇವತೆಗಳೊಂದಿಗೆ ವಿನಿಮಯ ಮಾಡುತ್ತಿರುವ ದೃಶ್ಯ ಇದಾಗಿದೆ ಕೆಳಭಾಗದಲ್ಲಿ ನರಕದ ದೃಶ್ಯವಿದ್ದು ಅಂಗಾಗಳನ್ನು ತುಂಡರಿಸಿ ಮೊಣಚಾದ ಖಡ್ಗಗಳ ಮೇಲೆ ಬೀಳುತ್ತಿರುವ ದೃಶ್ಯ.

ಈ ಚಿತ್ರದಲ್ಲಿ ಮೊದಲಿಗೆ ಕಳಸಗೋಪುರವಿರುವ ಮಂಟಪದ ಪೀಠದ ಮೇಲೆ ಪದ್ಮಾಸನ ಸ್ಥಿತವಾಗಿ ದಿಗಂಬರ ಆನಂದ ಮೂರ್ತಿಯ ಕುಳಿತಿರುವ ದೃಶ್ಯವಿದ್ದು ಈ ಮಂಟಪಕ್ಕೆ ರೆಕ್ಕೆಗಳಿದ್ದು ಸುವರ್ಣ ಲೇಪನ ಮಾಡಲಾಗಿದೆ. ಪೀಠವನ್ನು ಮರದಿಂದ ಮಾಡಿದ್ದಾಗಿದೆ ಕಂದು ವರ್ಣದಲ್ಲಿ ತೋರಿಸಿದ್ದು ರತ್ನಗಳನ್ನು ಅದಕ್ಕೆ ಅಂಟಿಸಲಾಗಿದೆ. ಇದರ ಬಲಭಾಗದಲ್ಲಿ ಆನಂದ ಮುನಿಯು ಅನಿತೇಂದ್ರನಾಗಿ ದೇವತೆಗಳಿಗೆ ಇಹಲೋಕದ ಸಾಧನೆಯ ಫಲಾಮೃತವನ್ನು ದೇವತೆಗಳೊಂದಿಗೆ ಹಂಚಿಕೊಳ್ಳುತ್ತಿರುವುದು ಇದಾಗಿದೆ. ಇಲ್ಲಿ ಮೂರು ಗೋಪುರಗಳಿದ್ದು ಮೂರಕ್ಕು ರೆಕ್ಕೆಗಳನ್ನು ಮಾಡಲಾಗಿದ್ದು ಕಮಾನು ಆಕಾರದಲ್ಲಿ ಚಿತ್ರಿಸಲಾಗಿದೆ. ಅನತೇಂದ್ರನು ಪೀಠದ ಮೇಲೆ ಕುಳಿತಿದ್ದು

ದೇವತೆಗಳು ಅವನ ಸಮಾನರಾಗಿ ಕುಳಿತಿದ್ದಾರೆ. ಸ್ತ್ರೀ ಸೇವಕರು ಛತ್ರಿ ಛಾಮರಗಳನ್ನು ಹಿಡಿದು ಸೇವೆ ಸಲ್ಲಿಸುತ್ತಿರುವ ದೃಶ್ಯ ಇದಾಗಿದೆ ಈ ಚಿತ್ರಗಳಲ್ಲಿ ಹಳದಿ, ಕಂದು, ನೀಲಿ, ಕೆಂಪು, ಹಸಿರು, ಬಿಳಿ ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ. ಇದರ ಕೆಳಭಾಗದಲ್ಲಿ ನರಕದ ದೃಶ್ಯವಿದ್ದು ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು. ಕತ್ತಿಗಳನ್ನು ಬಿಳಿ ವರ್ಣದಲ್ಲಿ ಮತ್ತು ಅಶ್ವಗಳನ್ನು ಮನುಷ್ಯರನ್ನು ಕಂದು ಹಾಗು ನಸು ಗೆಂಪು ವರ್ಣಗಳಿಂದ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಗೋಪುರಗಳ, ಮಹಿಳೆಯರು, ದೇವರುಗಳ ಚಿತ್ರಗಳು ಸೀಬಿ ಹಾಗು ಹಂಪಿಯ ವಿರೂಪಾಕ್ಷ ಚಿತ್ರಗಳನ್ನು ಹೋಲುತ್ತವೆ.

ಚಿತ್ರ-೨೨. ವಿಶ್ವಸೇನಾ ಬ್ರಾಹ್ಮಿಲಾದೇವಿ ಕುಳಿತಿರುವ ದೃಶ್ಯ

ಅನತೇಂದ್ರನು ಆನಿತಕಲ್ಪ ಸ್ವರ್ಗದಿಂದ ಮುಕ್ತಿಹೊರಡ ಕಾಶಿಯಲ್ಲಿಯ ಉಗ್ರವಂಶ ಕಶ್ಯಪ ಗೋತ್ರದ ಉಗ್ರಸೇನನೆಂಬ ಮಹಾರಾಜನಿದ್ದು ಆತನ ಮನೋವಲ್ಲಭೆ ಭ್ರಾಹ್ಮಲಾದೇವಿ ಪತಿವೃತೆಯಾಗಿ ಪತಿಯ ಹಿತವನ್ನೆ ಸಾಧಿಸುತ್ತಿದ್ದಳು. ಇವರಿಬ್ಬರು ಕೂತು ಚರ್ಚಿಸುತ್ತಿರುವ ಚಿತ್ರ ಇದಾಗಿದ್ದು ಇಲ್ಲಿ ನೋಡುಗನ ಎಡಭಾಗದಲ್ಲಿ ರಾಜದಾಸಿಯರು ಛತ್ರಿ, ಛಾಮರಗಳನ್ನು ಹಿಡಿದು ರಾಜನಿಗೆ ವಿಧೇಯರಾಗಿ ರಾಜನು ಸುಖಾಸನದಲ್ಲಿ ಕೂತು ಕಿರೀಟ ವಜ್ರಾಭರಣ ಅಲಂಕಾರಿಯಾಗಿ ಬಲಗೈಯನ್ನು ಎತ್ತಿ ಬ್ರಹ್ಮೀಲಾದೇವಿಗೆ ಏನನ್ನೋ ಆದೇಶಿಸುವಂತಿತ್ತು. ನೋಡುಗನ ಎಡಭಾಗದ ಮೊದಲ ಪಟ್ಟಿಕೆಯಲ್ಲಿ ಇಂಧ್ರ ಶಚಿದೇವಿಯರ ಮೇಲೆ ಶಿಶು ಪಾರ್ಶ್ವನಾಥರು ಕೂತಿದ್ದು ಇವರ ಹಿನ್ನೆಲೆಯಲ್ಲಿ ಛತ್ರಿ ಛಾಮರಗಳನ್ನು ಹಿಡಿದು ನಿಂತಿರುವ ದೇವದಾಸರಗಳನ್ನು ಕಾಣಬಹುದಾಗಿದೆ. ಹಿನ್ನೆಲೆಯಲ್ಲಿ ಗಾಢನೀಲಿ ವರ್ಣದಿಂದ ಚಿತ್ರಿಸಿದ್ದು ಸುವರ್ಣ ಕಮಾನು ಹಾಗೂ ರಜತ ಗೋಪುರವನ್ನು ಇಲ್ಲಿ ಚಿತ್ರಿಸಲಾಗಿದೆ. ಮುಂದುವರೆದು ಎರಡನೇ ಅಂಕಣದಲ್ಲಿ ಇವರ ಮುಂದೆ ತಾಳ, ತಂಬೂರಿ, ಮೃದಂಗಗಳನ್ನು ಹಿಡಿದು ನೃತ್ಯ ಮಾಡುತ್ತಿರುವ ದೇವಲೋಕದ ಪುರುಷರನ್ನು ಕಾಣಬಹುದಾಗಿದ್ದು, ಇಲ್ಲಿ ಓರ್ವ ದೇವನಿಗೆ ನಾಲ್ಕು ಕೈಗಳನ್ನು ತೋರಿಸಲಾಗಿದೆ. ಇವರುಗಳನ್ನು ತಿಳಿಗೆಂಪು ವರ್ಣ, ಶ್ವೇತ ವರ್ಣಗಳ ಸಹಾಯದಿಂದ ಚಿತ್ರಿಸಿದ್ದು ನೀಲಿ, ಬಿಳಿ ಬಣ್ಣಗಳಿವೆ. ಅವರಿಗೆ ಅಭಿಮುಖವಾಗಿ ಕೂತು ಬ್ರಾಹ್ಮಿಲಾದೇವಿಯ ಸರ್ವಾಲಂಕರ ಭೂಷಿತೆಯಗಿ ಕೈಯಲ್ಲಿ ಹೂ ಹಿಡಿದುಕೂತಿದ್ದಾಳೆ. ಇದರಲ್ಲಿ ಹೆಚ್ಚು ಶೃಂಗಾರ ವಿನ್ಯಾಸಗಳಿಗೆ ಆಧ್ಯತೆ ನೀಡಿದ್ದು ಥಾಳಮಾನಗಳೀಗನುಸರವಾಗಿ ವರ್ಣವಿನ್ಯಾಸ ಯತಾದರ್ಶನಗಳೂ ಅಚ್ಚು ಕಟ್ಟಾಗಿ ಮೂಡಿಬಂದಿದೆ.

ಚಿತ್ರ-೨೩. ಬ್ರಾಹ್ಮಿಲಾದೇವಿ ವಿಸ್ವಸೇನ ಶಯನಗೃಹದಲ್ಲಿರುವುದು

ವಿಶ್ವಸೇನ ಹಾಗೂ ಬ್ರಾಹ್ಮಿಲದೇವಿ ಶಯನಗೃಹದಲ್ಲಿ ಮಲಗಿರುವ ದೃಶ್ಯ ಇದಾಗಿದ್ದು ತೀರ್ಥೇಶನಾಗುವ ಕೂಸು ಜನಿಸುವುದನ್ನು ದೇವೇಂದ್ರನು ತನ್ನ ಮಡದಿ ಶಚಿದೇವಿಯಿಂದ ಬ್ರಾಹ್ಮಿಲೆಯ ಗರ್ಭವನ್ನು ಶುಚಿಗೊಳೊಸಿದನು. ಬ್ರಾಹ್ಮೆಲೆಯ ಹದಿನಾರು ಶುಭಸ್ವಪ್ನಗಳನ್ನು ಕಾಣುವ ಪೂರ್ವದ

ಚಿತ್ರ ಇದಾಗಿದೆ. ಈ ಚಕ್ರದಲ್ಲಿ ದಂಪತಿಗಳಿಬ್ಬರು ಶಯನಗೃಹದಲ್ಲಿ ಮಲಗಿದ್ದು ಹಾಸಿಗೆ, ತಲೆದಿಂಬು, ಮಂಚ ಅದರ ಮಂಟಪ ಸುಗಂಧ ದ್ರವ್ಯಗಳು, ಪಾನೀಯಗಳು ಸಾಮ್ರಾಣಿ ಕಂಬ ಇವುಗಳನ್ನು ಮುಂಭಾಗದಲ್ಲಿ ತೋರಿಸಲಾಗಿದೆ. ಇದು ಬ್ರಹ್ಮಿಲಾದೇವಿಯು ಹದಿನಾರು ಶುಭಸ್ವಪ್ನಗಳನ್ನು ಕಾಣುವ ಶುಭ ಮುಹೂರ್ತವಾಗಿದ್ದು ಇದನ್ನು ಅರಿತ ಇಂದ್ರನು ತನ್ನ ಮಡಿಯಾದ ಶುಚಿಗೊಳಿಸುವುದು. ಈ ಚಿತ್ರದಲ್ಲಿ ಕೆಂಪು, ನೀಲಿ, ಗಾಢ ಹಸಿರು, ಬಿಳಿ, ಹಳದಿ, ಕಂದು ಈ ವರ್ಣಗಳೇ ಮೊದಲಾಗಿ ಸುಂದರ ಸಂಯೋಜನೆ ಇದಾಗಿದೆ.

ಚಿತ್ರ–೨೪. ಹದಿನಾರು ಶುಭ ಕನಸುಗಳು

ತೀರ್ಥಂಕರರ ಮಾತೆಯು ತೀರ್ಥಂಕರರು ಆಕೆಯ ಗರ್ಭಕ್ಕೆ ಬರುವ ಮುನ್ನ ಹದಿನಾರು ಶುಭ ಸ್ವಪ್ನಗಳನ್ನು ಕಾಣುತ್ತಾಳೆ. ಆನೆ, ಎರಡು ವೃಷಭಗಳೂ, ಸಿಂಹ, ಲಕ್ಷ್ಮೀ, ಎರಡು ಹೂಮಾಲೆ, ಸೂರ್ಯ, ಚಂದ್ರ, ಎರಡು ಮೀನುಗಳು, ಕಳಸ, ಸರೋವರ, ಸಮುದ್ರ, ಸಿಂಹಾಸನ, ದೇವ ವಿಮಾನ, ಹೃತ್ತ, ಹೊಗೆ ಇಲ್ಲದ ಕನಸುಗಳನ್ನು ಇಪ್ಪತ್ತನಾಲ್ಕು ತೀರ್ಥಂಕರರು ತಾಯಿಯರು ಪಡೆಯುತ್ತಾರೆ ಅಂತೆಯೇ ಬ್ರಾಹ್ಮೀದೇವಿಯು ಪಾರ್ಶ್ವನಾಥರನ್ನು ಪಡೆಯುವ ಮುನ್ನ ಈ ಹದಿನಾರು ಶುಭ ಕನಸ್ಸುಗಳನ್ನು ಹೊಂದುವ ದೃಶ್ಯ ಇದಾಗಿದ್ದು ಹದಿನಾರು ಅಂಕಣಗಳನ್ನು ಮಾಡಿ ಒಂದೊಂದಾಗಿ ಇವುಗಳನ್ನ ಇಲ್ಲಿ ಚಿತ್ರಿಸಲಾಗಿದೆ

ಚಿತ್ರ–೨೫. ಶಚಿದೇವಿ ಬ್ರಾಹ್ಮಿಲೆಯ ಗರ್ಭಾವತರಣ

ಈ ಚಿತ್ರವು ಶುಭಸ್ವಪ್ನಗಳು ಬೀಳುವ ಮುನ್ನ ನಡೆಯಲಿದ್ದು ಶಚಿದೇವಿಯು ತನ್ನ ದೈವ ಪರಿವಾರದೊಂದಿಗೆ. ಕಾಶಿಗೆ ಬಂದು ವಿಶ್ವಸೇನ ಮಹಾರಾಜನ ಮಡದಿಯಾದ ಬ್ರಾಹ್ಮೆಲೆಯ ಗರ್ಭವನ್ನು ಶುಚೊಗೊಳಿಸುವ ಸಂದರ್ಭದಲ್ಲಿ ಮೊದಲಿಗೆ ಇಂದ್ರಲೋಕದ ದ್ವಾರವನ್ನು ತೋರಿಸಲಾಗಿದ್ದು ಎರಡನೇ ಅಂಕಣದಲ್ಲಿ ಇಂದ್ರ ಸಹಚರ ದೇವತೆಗಳು ಕೈಯಲ್ಲಿ ಸುವರ್ಣ ಪಾತ್ರೆಗಳನ್ನು ಹಿಡಿದು ನಿಂತಿದ್ದು ಆರು ಜನ ಸ್ತ್ರೀಯರು ವೀಣೆವಾಧ್ಯಗಳನ್ನು ಹಿಡಿದು ಶಚಿದೇವಿಯ ಮುಂದೆ ಕುಳಿತು ನುಡಿಸುತ್ತಿರುವುದು ಶ್ವೇತವಸ್ತ್ರಧಾರಿಯಾದ ಶಚಿದೇವಿಯು ಸರ್ವವಸ್ತ್ರಾಭರಣ ಕಚಿತಳಾಗಿ ಅಭಯ ಹಸ್ತವನ್ನು ತೋರುತ್ತಾ ಪೀಠದ ಮೇಲೆ ಕುಳಿತಿದ್ದಾಳೆ.

ಹಿನ್ನೆಲೆಯಲ್ಲಿ ಸ್ವರ್ಣಗೋಪುರ, ಕಮಾನುಗಳು ಹಿಂಬದಿಯಲ್ಲಿ ಸೇವಕಿಯರು ಛತ್ರಿ, ಛಾಮರಗಳನ್ನು ನಿಂತಿರುವವರು. ಇಬ್ಬರು ಸಾಮಾನ್ಯ ಸ್ತ್ರೀಯರು ಕೈಮುಗಿದು ನಿಂತಿರುವರು. ಇದೊಂದು ಅತ್ಯುತ್ತಮ ಸಂಯೋಜನೆಯಾಗಿದ್ದು ಬಿಳಿ, ಹಳದಿ, ನೀಲಿ, ಹಸಿರು, ಕಂದು ಇವೇ ಮೊದಲಾದ ವರ್ಣಗಳೂ ಇಲ್ಲಿ ನೋಡಸಿಗುತ್ತದೆ.

ಚಿತ್ರ–೨೬. ದೇವತೆಗಳು ವಿಶ್ವಸೇನ ದಂಪತಿಗಳ ಸೇವೆ ಮಾಡುತ್ತಿರುವುದು

ಈ ಗರ್ಭಾವತರಣ ಕ್ರಿಯೆಯ ನಂತರ ದೇವತೆಗಳೆಲ್ಲಾ ಭುವಿಗೆ ಬಂದು ಬ್ರಾಹ್ಮಿಲಾದೇವಿಯ ಸೇವೆ ಮಾಡುತ್ತಿರುವುದು ದೃಶ್ಯವಿದಾಗಿದ್ದು ವಿಶ್ವಸೇನನ ಅರಮನೆಯ ದ್ವಾರದಿಂದಿಡಿದು ಅಂತಪುರದವರೆಗು ನಿಂತು ಸೇವೆ ಮಾಡುತ್ತಿರುವ ದೃಶ್ಯ ಇದಾಗಿದ್ದು ಮೊದಲಿಗೆ ಅರಮನೆಯ ಕೊನೆಯ ದ್ವಾರದಿಂದ ಚಿತ್ರಿಸಲಾಗಿದ್ದು ಮೊದಲಿಗೆ ನಾಲ್ಕು ಜನ ದೇವತೆಗಳು ವಾದ್ಯಗಳನ್ನಿಡುದು ನುಡಿಸುತ್ತಿದ್ದು ಅದರ ಮುಂಭಾಗದಲ್ಲಿ ನಾಲ್ಕು ಜನ ಸ್ತ್ರೀಯರು ನೃತ್ಯ ಮಾಡುತ್ತಿದ್ದಾರೆ. ಹಿನ್ನೆಲೆಯಲ್ಲಿ ಅರಮನೆಯ ಮುಖ್ಯದ್ವಾರದಬಾಗಿಲು ಅರಮನೆಯ ಹೊರ ಗೋಡೆಯ ಮೇಲಿನ ಗೋಪುರಗಳು, ಕಮಾನು ಮಂಟಪಗಳನ್ನು ತೋರಿಸಲಾಗಿದೆ. ಅದರ ಮುಂದುವರೆದ ಭಾಗದಲ್ಲಿ ಎಂಟು ಜನ, ದೇವತೆಗಳು, ರತ್ನಗಳನ್ನು ಹಿಡಿದು ವಿಶ್ವಸೇನ ಬ್ರಾಹ್ಮಿಲಾ ದಂಪತಿಗಳೀಗೆ ನೀಡುತ್ತಿರುವ ದೃಶ್ಯ ಇದಾಗಿದೆ. ಇದನ್ನು ರತ್ನವೃಷ್ಠಿಯ ಎಂದು ಕರೆಯಲಾಗುವುದು. ಈ ದೃಷ್ಟಿಯ ಶಿಶು ಜನನದವರೆಗು ನಡೆಯುತ್ತಾದೆ. ಇದರ ಮುಂಭಾಗದಲ್ಲಿ ವಿಶ್ವಸೇನ, ಬ್ರಾಹ್ಮೀಲಾದೇವಿಯವರು ಪೀಠದ ಮೇಲೆ ಕೂತಿರುವ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ. ನಾಲ್ಕು ಅಂಕಣಗಳಲ್ಲಿರುವ ಈ ಸಂಯೋಜನ ಚಿತ್ರವು ನೋಡಲು ಮನಮೋಹಕವಾಗಿದ್ದು ಇಲ್ಲಿ ಗಾಢ ಹಸಿರು, ನೀಲಿ, ಕೆಂಪು, ಹಳದಿ, ಬಿಳಿ, ಕಂದು ಈ ವರ್ಣಗಳೇ ಮುಖ್ಯವಾಗಿದ್ದು ಮೈಸೂರು ವಿಜಯನಗರ ಶೈಲಿಗೆ ಈ ಚಿತ್ರಗಳನ್ನು ಊಹಿಸಬಹುದಾಗಿದ್ದು ಆದರೆ ನೃತ್ಯ ಮಾಡುತ್ತಿರುವ ಸ್ತ್ರೀಯರು ಮರಾಠಿಯ ಭಿತ್ತಿ ಚಿತ್ರದ ಛಾಯೆಯನ್ನು ಸೂಚಿಸುತ್ತಾರೆ.

ಚಿತ್ರ–೨೭. ಬ್ರಾಹ್ಮೀಲಾದೇವಿಗೆ ಶಿಶುಜನನವಾದ ದೃಶ್ಯ

ಬ್ರಾಹ್ಮಿಲಾದೇವಿಗೆ ನವಮಾಸ ತುಂಬಿ ಪುಷ್ಯ ಬಹಬುಳ ಏಕಾದಶಿ ಶುಭದಿನದಲ್ಲಿ ಜನಶಿಶುವನ್ನು ಹಡೆದಳು. ಆ ಮಗುವನ್ನು ದೇವತೆಗಳು ಮೇರು ಪರ್ವತಕ್ಕೆ ಕೊಂಡೊಯ್ಯಲು ಸಿದ್ಧತೆ ನಡೆಸುತ್ತಿರುವ ದೃಶ್ಯ ಇದಾಗಿದ್ದು ಮೊದಲ ಅಂಕಣದಲ್ಲಿ ಕಮಾನು ಗೋಪುರ ಮಂಟಪದಡಿ ಚಾವಣಿಯ ಕೆಳಭಾಗದಲ್ಲಿ ಹಾಸಿಗೆಯ ಮಲಗಿರುವ ಬ್ರಾಹ್ಮಿಲಾದೇವಿಯನ್ನು ಅರಮನೆಯ ಕಿಟಕಿಯಿಂದ ಕಲಾವಿದನ ತೋರಿಸಿದ್ದಾಳೆ. ಈ ಚಿತ್ರದಲ್ಲಿ ರತ್ನಕಚಿತ ಗೋಪುರವಿದ್ದು ವಿನ್ಯಾಸಗಳುಳ್ಳ ಚಾವಣಿಯಿದ್ದು ತಲೆದಿಂಬಿನ ಮೇಲೆ ತಲೆಯಿಟ್ಟು ಬ್ರಾಹ್ಮಿಲಾದೇವಿ ಶಯನಗೃಹದಲ್ಲಿ ನವಮಾಸ ತುಂಬ ಮಲಗಿರುವಳು. ಹಿನ್ನೆಲೆಯಲ್ಲಿ ಗಾಢನೀಲಿ, ಹಸಿರು ಬಣ್ಣವನ್ನು ಬಳಸಿದ್ದರೆ ಸುವರ್ಣ ವರ್ಣ, ಬಿಳಿ, ಕೆಂಪು ರತ್ನಗಳುಳ್ಳ ಗೋಪುರ ಚಾವಣಿಗಳ ಚಿತಿಸಿದ್ದಾರೆ. ಕೆಂಪು ಕಂಬಗಳುಳ್ಳ ಕಿಟಕಿಯಿಂದ ಈ ದೃಶ್ಯ ನೋಡುವಂತೆ ಕಲಾವಿದನು ಇಲ್ಲಿ ಚಿತ್ರಿಸಿದ್ದಾರೆ. ಮುಂದಿನ ಅಂಕಣದಲ್ಲಿ ದಾಸಿಯರು ಮಗುವನ್ನು

ಅರಮನೆಯಿಂದ ಕೊಂಡೊಯ್ದು ಐರಾವತದ ಮೇಲೆ ಕೂತಿರುವ ಶಚಿದೇವಿಗೆ ನೀಡುತ್ತಿರುವ ದೃಶ್ಯವನ್ನು ಇಲ್ಲಿ ಚಿತ್ರಿಸಲಾಗಿದೆ ಈ ದೃಶ್ಯದಲ್ಲಿ ಬ್ರಾಹ್ಮೀಲಾದೇವಿಯು ಹಾಸಿಗೆಯಿಂದ ಎದ್ದು ಕುಳಿತಿದ್ದು ದೇವಲೋಕದ ದಾಸಿಯರು ಮಗುವನ್ನು ಎತ್ತುಕೊಂಡು ಮಂಟಪದಿಂದ ಹೊರನಡೆಯುತ್ತಿರುವುದು ಹೊರಭಾಗದಲ್ಲಿ ಇಂದ್ರ ಲೋಕದ ಶ್ವೇತ ಐರಾವತದ ಕಾಲುಗಳನ್ನು ಮಡಚಿ ಕೂತಿದ್ದು ಅದರ ಅಂಬಾರಿಯಲ್ಲಿ ಶಚಿದೇವಿಯು ಕೈಚಾಚಿ ಕರೆಯುತ್ತಿದ್ದು ಮಗುವು ಕೈಚಾಚಿಕೊಂಡು ಹೊಗುತ್ತಿದೆ. ಇದರ ಹಿನ್ನೆಲೆಯಲ್ಲಿ ಮೂರು ಕಮಾನುಗಳುಳ್ಳ ದೈವ ಪೀಠಗಳನ್ನು ತೋರಿಸಿದ್ದು ವಿಶೇಷತೆಯಾಗಿದೆ.

ಚಿತ್ರ–೨೮. ಐರಾವತದಲ್ಲಿ ಇಂದ್ರನು ಜಿನ ಶಿಶುವನ್ನು ಮೇರು ಪರ್ವತಕ್ಕೆ ಕೊಂಡೊಯ್ಯುವ ದೃಶ್ಯ

ಈ ದೃಶ್ಯದಲ್ಲಿ ಎಂಟು ಸೊಂಡಲುಗಳುಳ್ಳ ಶ್ವೇತ ಐರಾವತದ ಅಂಬಾರಿಯ ಮೇಲೆ ಶಚಿದೇವಿಯು ಇಂದ್ರನು ಕುಳಿತಿದ್ದು ಇಂದ್ರನು ತನ್ನ ತೊಡೆಯ ಮೇಲೆ ಜಿನಪುತ್ರನನ್ನು ಕೂರಿಸಿಕೊಂಡು ಮೇರು ಪರ್ವತಕ್ಕೆ ಕೊಂಡೊಯ್ಯುತ್ತಿದ್ದಾನೆ. ಮುಂಭಾಗದಲ್ಲಿ ದೈವ ಘೋಷಣೆ ಕೂಗುವ ಭಂಟರು ಹಿಂಬದಿಯಲ್ಲೂ ಘೋಷಣೆ ಭಂಟರು ಛಾಮರಗಳನ್ನು ಹಿಡಿದಿರುವಾ ದೇವ ಸೇವಕರುಗಳಿರುವ ಈ ಚಿತ್ರವು ವಿಸ್ಮಯವನ್ನುಂಟು ಮಾಡುತ್ತಾರೆ. ಇದರ ಮುಂಭಾಗದಲ್ಲಿ ಮೃದಂಗ ವಾಧ್ಯ ಗೋಷುಗಳನ್ನು ಹಿಡಿದು ನರ್ತಿಸುವುದು ಹನ್ನೆರಡು ಜನ ದೇವಲೋಕದ ನರ್ತಕರಿದ್ದಾರೆ. ಅದರ ಮುಂದಿನ ಅಂಕಣದಲ್ಲಿ ಹದಿನಾರು ಬಗೆಯ ವಾಹನಗಳಲ್ಲಿ ಚಲಿಸುತ್ತಿರುವ ದೇವತೆಗಳಿದ್ದಾರೆ. ಇಲ್ಲಿಯೂ ಸಹ ಅದ್ಭುತ ಸಂಯೋಜನೆ, ವರ್ಣಗಾರಿಕೆ, ವಿನ್ಯಾಸ, ಆಕಾರ ವಿದಾನಗಳು, ಕಳಪಕ್ವತೆ. ಈ ಚಿತ್ರಗಳಲ್ಲಿ ಕಂಡುಬರುತ್ತದೆ. ಈ ಚಿತ್ರಗಳು ಸೀಬಿಯ ನರಸಿಂಹ ಸ್ವಾಮಿ ದೇವಾಲಯದ ಚಿತ್ರಗಳನ್ನು ಬಿಂಬಿಸುತ್ತವೆ.

ಚಿತ್ರ–೨೯. ಜನ್ಮಾಭಿಷೇಕದ ದೃಶ್ಯ

ಮಗುವನ್ನು ಇಂದ್ರನು ಶಚಿದೇವಿಯು ಐರಾವತದಲ್ಲಿ ಮೇರು ಪರ್ವತಕ್ಕೆ ಕೊಂಡೊಯ್ದು ಪಂಡುಶಿಲೆಯ ಮೇಲೆ ಕೂರಿಸಿ ಕ್ಷೀರ ಸಾಗರದ ಜಲದಿಂದ ಹಾಡಿ ಆನಂದದಿಂದ ನರ್ತಿಸುತ್ತಿರುವುದು. ಈ ದೃಶ್ಯದಲ್ಲಿ ಮೇರು ಪರ್ವತವನ್ನು ತೋರಿಸಿದ್ದು ಅದರ ಮೇಲೆ ಪಾಂಡೂಕ ಶಿಲೆಯಿದ್ದು ಆಬಿಳೀಯ ಬೃಹತ್ ಶಿಲೆಯ ಮೇಲೆ ಜಿನಪುತ್ರನನ್ನು ಕೂರಿಸಿ ಕ್ಷೀರ ಸಾಗರದಿಂದ ಹಾಲನ್ನು ಸ್ವರ್ಣ ಕಂಭಗಳ ಮೂಲಕ ಒಬ್ಬರ ಕೈಯಿಂದ ಒಬ್ಬರಿಗೆ ಬದಲಾಯಿಸಿತ್ತಾ ಜಿನಪುತ್ರನಿಗೆ ಅಭಿಷೇಕ ಮಾಡುತ್ತಿರುವ ದೃಶ್ಯ ಇದಾಗಿದ್ದು ನೋಡುಗನ ಎಡಭಾಗದಲ್ಲಿ ಮೇರುಪರ್ವತವಿದ್ದು ಅದರಲ್ಲಿ ಅಲ್ಲಲ್ಲಿ ಗೋಪುರಗಳನ್ನು ಮಂಟಪಗಳನ್ನು ಚಿತ್ರಿಸದ್ದಾರೆ. ಅದಾಧ ಮೇಲೆ ಬಿಳಿಯ ಬಂಡೆಯಿದ್ದು

ಅದನ್ನು ಪಾಂಡು ಶಿಲೆಯೆಂದು ಕರೆಯುತ್ತಾರೆ. ಆ ಬಿಳಿಯ ಬಂಡೆಯ ಮೇಲೆ ಜಿನ ಶಿಶುವನ್ನು ಕೂರಿಸಿ ಕ್ಷೀರಪರ್ವತದಲ್ಲಿ ದೊರೆಯುವ ಆ ಬಿಳಿಯ ಹಾಲನ್ನು ಸ್ವರ್ಣ ಕುಂಭಗಳಿಂದ ತರುತ್ತಿರುವ ದೇವಲೋಕದ ಪರಿವಾರದವರು ಕಿರೀಟದಾರಿಗಾಳಿದ್ದು ಕೆಂಪು, ಬಿಳಿ, ಹಸಿರು, ಕಂದು ವಸ್ತ್ರಗಳನ್ನು ಧರಿಸಿ, ಆಭರಣಗಳನ್ನು ತೊಟ್ಟು ಕಿರೀಟಧಾರಿಗಳಾಗಿದ್ದಾರೆ. ಇವರ ಹಿನ್ನೆಲೆಯಲ್ಲಿ ನೀಲಿ, ಗಾಢ ಹಸಿರು ಬಣ್ಣಗಳನ್ನು ತೋರಿಸಲಾಗಿದ್ದು ಕ್ಷೀರ ಸಾಗರವನ್ನು ಬಿಳಿ ಬಣ್ಣದಿಂದ ತೋರಿಸಿದ್ದು ತಿಳಿ ನೀಲಿ ರೇಖೆಗಳ ಮೂಲಕ ಅವುಗಳನ್ನು ಸೃಷ್ಠಿಸಿದ್ದಾನೆ ಇದರ ಕೆಳಭಾಗದಲ್ಲಿ ನಾಲ್ಕು ಗೋಪುರಗಳನ್ನು ಸೃಷ್ಠಿಸಿದ್ದಾನೆ. ಇದರ ಕೆಳಭಾಗದಲ್ಲಿ ನಾಲ್ಕು ಗೋಪುರಗಳಿದ್ದು ಅಲ್ಲಿ ನಾಲ್ಕು ಗೋಪುರಗಳಿದ್ದು ಅಲ್ಲಿ ನಾಲ್ಕು ದೇವತೆಗಳನ್ನು ಚಿತ್ರಿಸಲಾಗಿದೆ. ಈ ಚಿತ್ರಗಳಲ್ಲಿ ಬರುವ ವ್ಯಕ್ತಿಗಳು ಬಾಹ್ಯರೇಖೆ, ವರ್ಣಗಾರಿಕೆ ಮೈಸೂರು ಹಾಗೂ ಸೀಬಿಯಲ್ಲಿ ಇರುವ ಭಿತ್ತಿಚಿತ್ರಗಳನ್ನು ಹೋಲುತ್ತದೆ.

ಚಿತ್ರ-೩೦. ಪಂಚಾಗ್ನಿ ತಪವನ್ನು ತಡೆಯುತ್ತಿರುವ ಪಾರ್ಶ್ವನಾಥರು

ಹಿಂದಿನ ಕಮಠನ ಆತ್ಮವೇ ಬ್ರಾಹ್ಮಿಲೆಯಾ ತಂದೆ ಮಹೀಪಾಲ ರಾಜನಾಗಿದ್ದನು. ಮಹೀಪಾಲ ಕೆಲಕಾಲ ರಾಜ್ಯಭಾರವನ್ನೆಸಗಿ, ತನ್ನ ಮಡದಿ ಸತ್ತುದನ್ನು ಕಂಡು ನೀವೇಗದಿಮದ ತಪಸ್ವಿಯಾದನು, ಒಂದು ದಿನ ಈ ತಪಸ್ವಿ ಪಂಚಾಗ್ನಿಗಳ ನಡುವೆ ನಿಂತು ಧ್ಯಾನಮಗ್ನನಾಗಿದ್ದನು. ಈ ಸ್ಥಳಕ್ಕೆ ಪಾರ್ಶ್ವನಾಥರು ಒಮ್ಮೆ ಬಂದು ತನ್ನ ತಾತನು ಮಾಡುತ್ತಿದ್ದ ಉರಿಯನ್ನ ಮತ್ತೆ ಹೆಚ್ಚಿಸುವ ಸಲುವಾಗಿ ಒಂದು ಕಟ್ಟಿಗೆಯನ್ನು ಕೊಡಲಿಯಿಂದ ಸೀಳಲು ತೊಡಗಿದನು, ಇದನ್ನು ಕಂಡ ಪಾರ್ಶ್ವನಾಥರ ಈ ಕಟ್ಟಿಗೆಯನ್ನು ಸೀಳಬೇಡಿ, ಮತ್ತು ಬೆಂಕಿ ಉರಿಸಬೇಡಿ ಈ ಎರಡು ಕಾರ್ಯಗಳಿಂದ ಪ್ರಾಣಿ ಹಿಂಸೆಯಾಗುವುದು ಎಂದು ತನ್ನ ತಾತನಿಗೆ ಹೇಳಿದರೂ ಆತ ನಿರ್ಲಕ್ಷ್ಯದಿಂದ ಕೊಡಲಿಯಿಂದ ಹೊಡೆದನು. ಕೊರಡಿನಲ್ಲಿದ್ದ ನಾಗ ದಂಪತಿಗಳು(ಸರ್ಪಗಳೂ) ತುಂಡು ತುಂಡಾಗಿ ಸಂಕಟದಿಂದ ಒದ್ದಾಡುವುದನ್ನು ಕಂಡು ಪಾರ್ಶ್ವನಾಥರು ಕೂಡಲೇ ಅವಕ್ಕೆ ಓಂಕಾರವನ್ನು ಉಪದೇಶ ಮಾಡಿದರು. ನಂತರ ಆ ತಪಸ್ವಿಯ ಕಡೆ ತಿರುಗಿ. ಈ ತಪಸ್ವಿ ಕಡೆ ತಿರುಗಿ, ಈ ತಪಸ್ಸಿನ ಗುರುವಾದರು ಏನು? ಪಾಪಕರ್ಮದಿಂದ ವಿಮುಕ್ತನಾಗಬೇಕೆಂದಲ್ಲವೆ ? ಆದರೆ ಈ ತಪವೆಸಗುವಾಗಲು ಅನೇಕ ಜೀವಿಗಳಿಗೆ ಚಿತ್ರಹಿಂಸೆ ಕೊಡುತ್ತಿರುವೆ! ಅಜ್ಞಾನದಿಂದ ನೀನಸಾಗುತ್ತಿರುವ ಈ ಕಾಯಕ್ಲೇಶವು ನೀರನ್ನು ಬೆಣ್ಣೆಗಾಗಿ ಕಡೆಯುವಂತಿದೆ, ಎಂದು ತನ್ನ ತಾತನಿಗೆ ತಿಳಿಸಿರುವ ಇತ್ತ ವಿಲಿ-ವಿಲಿ ಒದ್ದಾಡುತ್ತಿದ್ದ ನಾಗದಂಪತಿಗಳ ಮೇಲೆ ಪಾರ್ಶ್ವನಾಥರ ಕರುಣದೃಷ್ಠಿ ಬೀಳುತ್ತಿರುವುಗಾಗಲೇ ಅವುಗಳ ಮನಸ್ಸಿನ ಕ್ರೋಧ ಉಪಶಮನವಾಗಿ ಶುಭಭಾವನೆಯಿಂದ ಅವರೆಡು ಸತ್ತು ನಾಗಲೋಕದಲ್ಲಿ ಧರಣೇಂದ್ರ, ಪದ್ಮಾವತಿ ಎಂಬ ಯಕ್ಷದೇವತೆಗಳಾಗಿ ಹುಟ್ಟಿದ್ದವು. ಮಹೀಪಾಲುನು ಪಾರ್ಶ್ವನಾಥನು ಮೇಲೆ ಸಿಟ್ಟುಕೊಂಡು ಬಹುಕಾಲ ತಪ್ಪು ಮಾರ್ಗದಲ್ಲಿ ಆಚರಿಸಿದನು.

ನೋಡುಗನ ಎಡಭಾಗದ ಮೊದಲ ಪಟ್ಟಿಕೆಯಲ್ಲಿ ಇಂಧ್ರ ಶಚಿದೇವಿಯರ ಮೇಲೆ ಶಿಶು ಪಾರ್ಶ್ವನಾಥರು ಕೂತಿದ್ದು ಇವರ ಹಿನ್ನೆಲೆಯಲ್ಲಿ ಛತ್ರಿ ಛಾಮರಗಳನ್ನು ಹಿಡಿದು ನಿಂತಿರುವ ದೇವ ದಾಸರುಗಳನ್ನು ಕಾಣಬಹುದಾಗಿದೆ. ಹಿನ್ನೆಲೆಯನ್ನು ಗಾಢ ನೀಲಿ ವರ್ಣದಿಂದ ಚಿತ್ರಿಸಿದ್ದು ಸುವರ್ಣ ಕಮಾನು ಹಾಗು ರಜತ ಗೋಪುರವನ್ನು ಇಲ್ಲಿ ಚಿತ್ರಿಸಲಾಗಿದೆ ಮುಂದುವರೆದು ಎರಡನೇ ಅಂಕಣದಲ್ಲಿ ಇವರ ಮುಂದೆ ತಾಳ ತಂಬುರಿಗಳು ಮುಂದುವರೆದು ಎರಡನೇ ಅಂಕಣದಲ್ಲಿ ಇವರ ದೇವಲೋಕದ ಮೃದಂಗಗಳನ್ನು ಹಿಡಿದು ನೃತ್ಯ ಮಾಡುತ್ತಿರುವ ದೇವಲೋಕದ ಪುರುಷರನ್ನು ಕಾಣಬಹುದಾಗಿದ್ದು ಇಲ್ಲಿ ಓರ್ವ ದೇವನಿಗೆ ನಾಲ್ಕು ಕೈಗಳನ್ನು ತೋರಿಸಲಾಗಿದೆ. ಇವರುಗಳನ್ನು ತಿಳಿ ಗೆಂಪು ವರ್ಣ, ಶ್ವೇತ ವರ್ಣಗಳ ಸಹಾಯದಿಂದ ಚಿತ್ರಿಸಿದ್ದು ನೀಲಿ ಬಿಳಿ ವಸ್ತ್ರಗಳನ್ನು ಧರಿಸಿದ್ದಾರೆ.ಹಿನ್ನೆಲೆಯಲ್ಲಿ ಹಳದಿ ಮಿಶ್ರಿತ ಕೆಂಪು ವಸ್ತ್ರಗಳನ್ನು ಧರಿಸಿದ್ದಾರೆ. ಹಿನ್ನೆಲೆಯಲ್ಲಿ ಹಳದಿ ಮಿಶ್ರಿತ ಕೆಂಪು ವರ್ಣವಿದ್ದು ಮೇಲ್ಭಾವಣಿಯ ಗೋಪುರಗಳಿಂದ ಬಿಳಿ, ಹಳದಿ ಮಿಶ್ರವರ್ಣದ ಹೂಗಳನ್ನು ನೇತುಹಾಕಲಾಗಿದೆ. ಅದರ ಮುಂದಿನ ಅಂಕಣದಲ್ಲಿ ಪಾರ್ಶ್ವನಾಥರು ತನ್ನ ಅರಮನೆಯಲ್ಲೇ ಸಾರ್ವಜನಿಕರಿಗೆ ದೇವತೆಗಳಿಗೆ ಆದರ್ಶಮಯ ಗುಣಗಳನ್ನು ಸಾರ್ವಜನಿಕರಿಗೆ ದೇವತೆಗಳಿಗೆ ಆದರ್ಶಮಯ ಗುಣಗಳನ್ನು ಬೋಧಿಸುತ್ತಿರುವುದು ಅಲ್ಲಿ ಇವುಗಳನ್ನು ಕೇಳಿ ರಾಜಪರಿವಾರದವರು ವಾದ್ಯ ನುಡಿಸುತ್ತಿರುವುದು ಕಂಡುಬರುತ್ತದೆ.

ಕಮಾನು ಗೋಪುರಗಳು, ಮಂಟಪಗಳು, ತೂಗು ಹಾಕಿದ ಗಾಜಿನ ದೀಪಗಳು, ರತ್ನಗಂಬಳಿಗಳು, ಛತ್ರಿ ಛಾಮರಗಳನ್ನು ಹಿಡಿದ ಪುರುಷರುಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಮುಂದಿನ ಚಿತ್ರದಲ್ಲಿ ಇಬ್ಬರು ವ್ಯಕ್ತಿಗಳು ಪಾರ್ಶ್ವನಾಥರಿಗೆ ಎರಡು ನಾಗರ ಪ್ರತಿಮೆಗಳನ್ನು ಧಾನ ನೀಡುತ್ತಿರುವುದು ಅರಸು ದಾಸರು ಛತ್ರಿ ಛಾಮರಗಳನ್ನು ಹಿಡಿದು ನಿಂತಿದ್ದು ಇದು ಯಾವುದು ಇದು ಯಾವುದೇ ವನದಲ್ಲಿ ನೀಡಿರುವ ದೃಶ್ಯವಾಗಿದ್ದು ಇನ್ನೆಲೆಯಲ್ಲಿ ಚಿಕ್ಕದೊಂದು ಗುಡಿ ಹಾಗು ಮರಗಳನ್ನು ತೋರಿಸಲಾಗಿದ್ದು. ವಿಶೇಷವಾಗಿ ತೆಂಗಿನ ಮರವೊಂದನ್ನು ಈ ಚಿತ್ರದಲ್ಲಿ ತೋರಿಸಲಾಗಿದೆ. ಕೊನೆಯದಾಗಿ ಪಾಂಚಾಗ್ನಿ ಚಿತ್ರವಿದ್ದು ಇಲ್ಲಿ ಕಮಾಠನು ಮರುಜನ್ಮ ಪಡೆದು ಬ್ರಾಹ್ಮಿಲೆಯ ವೃತವನ್ನು ಮಾಡುತ್ತಿದ್ದನು. ಪಾರ್ಶ್ವನಾಥರು ಅಲ್ಲಿ ಹೋದಾಗ ತನ್ನ ತಾತನು ಮಾಡುತ್ತಿದ್ದ ಪಂಚಾಗ್ನಿ ವೃತ್ತಕ್ಕೆ ಕೊರಡುಂದನ್ನು ಹೊಡೆಯಲು ಪ್ರಯತ್ನಿಸಿದ್ದ ಮಹೀಪಾಲನಿಗೆ ಆದರಲ್ಲಿ ಎರಡು ಹಾವುಗಳಿದ್ದು. ಈ ಕೊರಡನ್ನು ಹೊಡೆಯಬೇಡಿ ಎಂದು ಹೇಳುವ ದೃಶ್ಯವಿದಾಗಿದ್ದು ಮಹೀಪಾಲ ಈ ಮಾತಿಗೆ ಬೇಲೆ ಕೊಡದೆ ಕೊರಡನ್ನು ತುಂಡರಿಸಿದಾಗ ನಾಗ ದಂಪತಿಗಳು ತುಂಡು ತುಂಡಾಗಿ ಸಂಕಟ ಪಡುತ್ತಿದ್ದನು ಪಾರ್ಶ್ವನಾಥರು ಕಂಡು ಅದಕ್ಕೆ ಣಮೋಕಾರ ಮಂತ್ರವನ್ನು ಉಪದೇಶಿಸುವ ಚಿತ್ರ ಇದಾಗಿದ್ದು ನಗ್ನನಾಗಿರುವುದನ್ನು ಸಾಧುವು ಕೊಡಲಿಯನ್ನು ಹಿಡಿದು ನಿಂತಿರುವುದು ಎಡಭಾಗದಲ್ಲಿ

ಪಾರ್ಶ್ವನಾಥರು ಅಭಯ ಅಸ್ತ್ರವನ್ನು ಹಿಡಿದು ಹೊಡೆದಂತಿದೆ ತಡೆಯುತ್ತಿರುವುದು ಕೊರಡು ಹೊಡೆದು ಎರಡು ಹೋಳಾಗಿ ಬಿದ್ದು ನಾಗದಂಪತಿಗಳು ಸಾವನ್ನಪ್ಪುತ್ತಿರುವುದು ಈ ಚಿತ್ರದಲ್ಲಿ ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ಕೆಂಪು ಗಾಢ, ನೀಲಿ ವರ್ಣಗಳನ್ನು ತೋರಿಸಲಾಗಿದ್ದು ಮುಂದಿನ ಚಿತ್ರದಲ್ಲಿ ಮಹೀಪಾಲ ಮುನಿಯು ಕಠೋರ ತಪವನ್ನು ಮಾಡುತ್ತಿರುವ ಎಂಟು ಭಂಗಿಗಳನ್ನು ತೋರಿಸಿದ್ದು ಪಂಚಾಗ್ನಿ ತಪಸ್ಸಿಗಾಗಿ ನಾಲ್ಕು ಮುಲೆಯಲ್ಲೂ ಬೆಂಕಿಯನ್ನು ಹಾಕಿ ಮಧ್ಯದಲ್ಲಿ ಮಹೀಪಾಲನು ಹುಲಿಯ ಚರ್ಮದ ಮೇಲೆ ಕೂತು ತಪಸ್ಸು ಮಾಡುತ್ತಿರುವ ದೃಶ್ಯವನ್ನು ತೋರಿಸಲಾಗಿದ್ದು ಮೇಲಿನ ಅಂಕಣದಲ್ಲಿ ನಾಲ್ಕುಭಂಗಿಗಳಲ್ಲಿ ಹಠಯೋಗ ಮಾಡುತ್ತಿರುವುದು ಹಿನ್ನೆಲೆಯಲ್ಲಿ ಕೆಂಪು, ನೀಲಿ ವರ್ಣವನ್ನು ತೋರಿಸಲಾಗಿದೆ ಒಟ್ಟಾರೆಯಾಗಿ ಚಿತ್ರಗಳಲ್ಲಿ ನೀಲಿ, ಕೆಂಪು, ಬಿಳಿ, ಕಂದು ಹಳದಿ ಹಸಿರು ಈ ವರ್ಣಗಳೇ ಹೆಚ್ಚಾಗಿದ್ದು ವಿಜಯನಗರ ವಿಜಯನಗರೋತ್ತರ ಚಿತ್ರಗಳ ಪ್ರಭಾವವು ನೇರವಾಗಿ ಈ ಚಿತ್ರಗಳಲ್ಲಿ ಕಂಡುಬರುತ್ತದೆ.

ಚಿತ್ರ-೩೧. ಪರ್ಶ್ವನಾಥರ ಪರಿನಿಷ್ಕ್ರಮಣ

ಪಾರ್ಶ್ವನಾಥರು ಹುಟ್ಟಿದಾಗಿನಿಂದ ಸಂಸಾರಸುಖದಲ್ಲಿ ವಿರಾಗಿಯಾಗಿದ್ದರು. ಆದ್ದರಿಂದ ಮದುವೆಗೆ ಒಡಂಬಿಡಲಿಲ್ಲ. ೩೦ನೇ ವಯಸ್ಸಿನಲ್ಲಿ ವೈರಾಗ್ಯ ಹೊಂದಿ, ಸಂಸಾರವನ್ನು ತೊರೆದರು. ಇದನ್ನರಿತು ದೇವೇಂದ್ರನು ವೈರಾಗ್ಯ ಹೊಂದಿ .ಸಂಸಾರವನ್ನು ತೊರೆದರು. ಇದನ್ನರಿತು ದೇವೇಂದ್ರನು ಧಾವಿಸಿಬಂದು ಪಾರ್ಶ್ವನಾಥರನ್ನು ಸುತ್ತಿಸಿ ಆನಂದ ನೃತ್ಯವನ್ನುಸಗಿ ಸನ್ಯಾಸಿಯಾದ ಪಾರ್ಶ್ವನಾಥವರಿಗೆ ಪೂಜೆಯನ್ನು ಸಗಿ ದೇವಲೊಕಕ್ಕೆ ಮರಳಿದನು. ಈ ಕ್ರಿಯೆಗೆ ಪರಿನಿಷ್ಕ್ರಮಣ ಕಲ್ಯಾಣವೆನ್ನುವರು.

ಪಾರ್ಶ್ವನಾಥರು ಸಿಂಹಾಸನದಲ್ಲಿ ಕೂತಿದ್ದು ಅವರ ಹಿಂದೆ ಛತ್ರಿ ಛಾಮರಗಳನ್ನು ಹಿಡಿದು ನಿಂತಿರುವುದನ್ನು ಕಾಣಬಹುದಾಗಿದ್ದು ಇಲ್ಲಿ ಪಾರ್ಶ್ವನಾಥರು ಬಿಳಿ ವಸ್ತ್ರದಾರಿಯಾಗಿದ್ದು ಕಡು ನಿಲಿ ವರ್ಣದಿಂದ ತ್ವಚೆ ಶೋಭಿಸುತ್ತಿದೆ. ಹಿನ್ನೆಲೆಯಲ್ಲಿ ಕೆಲವು ವರ್ಣವನ್ನು ಬಳಸಿದ್ದು ಚಿತ್ರವು ಅಲ್ಲಲ್ಲಿ ಉದಿರಿ ಹೋಗಿದೆ ಅದರ ಮುಂದಿನ ಸಾಲಿನಲ್ಲಿ ಇಂದ್ರ ಲೋಕದ ದೇವ ಸಹಚರರು ಇಂದ್ರನನ್ನು ಸೇರಿದಂತೆ ಮಂಡಿಯೂರಿ ಕೈಮುಗಿದು ನಮಸ್ಕರಿಸುತ್ತಿರುವ ಕೆಲವರು ಇನ್ನು ಸಾಷ್ಟಾಂಗ ನಮಸ್ಕರಿಸುತ್ತಿರುವರು. ಎಲ್ಲರು ಕಿರೀಟಧಾರಿಗಳಗಿದ್ದು ವಜ್ರಾಭರಣಕಚಿತರಾಗಿದ್ದಾರೆ. ಮುಂದೆ ಪಾರ್ಶ್ವನಾಥರನ್ನು ಪಲ್ಲಕಿಯಲ್ಲಿ ಕೂರಿಸಿಕೊಂಡು ದೇವಲೋಕದ ಸದಸ್ಯರು ಪಲ್ಲಕ್ಕಿಯನ್ನು ಭುಜಗಳ ಮೇಲೆ ಹೊತ್ತುಕೊಂಡು ಸಾಗುತ್ತಿದ್ದು ಪಲ್ಲಕ್ಕಿಯಲ್ಲಿ ಕುಳಿತಿರುವಂತೆ ತೋರಿಸಲಾಗಿದೆ. ಇದರ ಮುಂದೆ ಸ್ತ್ರೀಯೊಬ್ಬಳು ನೃತ್ಯಮಾಡುತ್ತಿದ್ದು, ನೃತ್ಯಕ್ಕೆ ಸಂಬಂಧಿಸಿದ ವಸ್ತ್ರಾಭರಣಗಳನ್ನು ಈಕೆ ಧರಿಸಿದ್ದು ನೃತ್ಯ ಭಂಗಿಯಲ್ಲಿದ್ದಾಳೆ. ಇವರ ಹಿಂಭಾಗದಲ್ಲಿ ನಾಲ್ಕು ಜನ ವಾದ್ಯಗಳು ತಾಳ ಮೃದಂಗಗಳನ್ನು ಹಿಡಿದು ನಾದಸ್ವರ ನುಡಿಸುತ್ತಿದ್ದಾರೆ.

ಇದರ ಮುಂದಿನ ಭಾಗದಲ್ಲಿ ಪಾರ್ಶ್ವನಾಥರು ಪಾಂಡು ಮಾಡುತ್ತಿದ್ದ ದೃಶ್ಯವಿದಾಗಿದ್ದು, ಇವರ ಹಿಂಬದಿಯಲ್ಲಿ ಶಂಕ, ಚಕ್ರ, ಜಾಗಟೆ, ಕಾಣಬಹುದಾಗಿದ್ದು ಮುಂದಿನ ಚಿತ್ರದಲ್ಲಿ ಸುಗಂಧ ದ್ರವ್ಯ ಕ್ಷೀರಗಳಿಂದ ಪಾರ್ಶ್ವನಾಥರು ಕೈತೊಳೆಯುತ್ತಿರುವುದು ಇಂದ್ರನಿದ್ದು ಇಲ್ಲಿ ಒಂದು ಕಂಬದ ಕಮಲಾಕರದ ಮೇಜಿದ್ದು ಅದರ ಮೇಲೆ ದ್ರವ್ಯಗಳನ್ನಿರಿಸಲಾಗಿದೆ. ಕೈತೊಳೆದ ನೀರು ಕೆಳಗಿನ ಅರಿವಾಣದಲ್ಲಿ ಬೀಳುವಂತೆ ಕಲಾವಿದನು ಚಿತ್ರಿಸಿದ್ದಾನೆ. ಮುಂದಿನ ಚಿತ್ರದಲ್ಲಿ ಪಾರ್ಶ್ವನಾಥರು ಕುಳಿತಿದ್ದು ಅವರ ಕೆಳಭಾಗದಲ್ಲಿ ದೇವತೆಗಳು. ಶಿರಸಾಭಾಗಿ ನಮಸ್ಕರಿಸುತ್ತಿರುವ ದೃಶ್ಯವಿದಾಗಿದ್ದು, ಅಲ್ಲದೆ ನಗಾರೆಯನ್ನು ಬಾರಿಸುತ್ತಿರುವ ವ್ಯಕ್ತಿಯನ್ನು ಸಹಾ ಇಲ್ಲಿ ಕಲಾವಿದನು ರಚಿಸಿದ್ದಾನೆ. ಈ ಚಿತ್ರದಲ್ಲಿ ಗಾಢ ನೀಲಿ, ಗಾಢ ಕಪ್ಪು, ಹಳದಿ, ಬಿಳಿ, ಸುವರ್ಣ, ಕಂದು, ಹಸಿರು, ನೀಲಿ, ತಿಳಿ ಕೆಂಪು, ವರ್ಣಗಳು ಹೆಚ್ಚಾಗಿ ಕಂಡುಬರುತ್ತವೆ. ಇಲ್ಲಿ ರಚಿಸಲಾಗಿರುವ ಚಿತ್ರಗಳು ವಿಜಯನಗರೋತ್ತರ ವಾದಂತಹ ಭಿತ್ತಿಚಿತ್ರಗಳ ಸಾಮ್ಯ ಕುರುಹನ್ನು ನೀಡುತ್ತದೆ.

ಚಿತ್ರ–೩೨. ಪಾರ್ಶ್ವರನಾಥರ ಮೇಲೆ ಶಂಬರ ದೇವನ ಬೆಂಕಿ ಮಳೆ

ಪಾರ್ಶ್ವನಾಥರು ಸನ್ಯಾಸಿಯಾದ ಮೇಲೆ ಈತ ಕೆಲಕಾಲ ಕಠಿಣ ವ್ರತದಾರಿಯಾಗಿ ತಪವೆಸಗಿದರು. ಒಮ್ಮೆ ಎರಡು ದಿವಸ ಉಪವಾಸವಿದ್ದು ಶುದ್ದ ಭಾವನೆಯಿಂದ ತಪವೆಸಗುತ್ತಿರುವಾಗ ಶಂಬರ ದೇವ (ಕಮಠ) ವಿಮಾನವೇರಿ ವಿಪ್ರಲಾದ್ರಿಗೆ ಬರುವಾಗ ಆತನ ವಿಮಾನವು ಇದ್ದಕ್ಕಿದ್ದಂತೆ ನಿಂತು ಹೋಯಿತು. ಕೆಳಗಡೆ ಆರ್ಶ್ವನಾಥರು ತಪವೆಸಗುತ್ತಿರುವುದನ್ನು ಕಂಡಾಕ್ಷಣ ಈತನಿಗೆ ಹಿಂದಣ ದ್ವೇಷ ಉಕ್ಕಿ ಮುನಿಯ ಮೇಲೆ ಬೆಂಕಿಯ ಮಳೆ ಸುರಿಸಿದನು ಮುನಿಯ ಸುತ್ತಲೂ ಭಕ್ತಿಯಿಂದ ಮಂಡಿಸಿದ್ದ ಕಾಡು ಪ್ರಾಣಿಗಳು ಇದನ್ನು ಕಂಡು ಮರುಗಿದವು ಬೆಂಕಿಯ ಮಳೆಗೆರೆಯುತ್ತಿದ್ದರು ಮುನಿಯು ತದೇಕ ಚಿತ್ತದಲ್ಲಿ ಮಗ್ನನಾಗಿಯೇ ಇದ್ದರ್ಯ್ ನಾಗಲೋಕದ ಯಕ್ಷದಂಪತಿಗಳೂ ಅವಧಿ ಜ್ಞಾನದಿಂದ ಮುನಿಗಾಗುತ್ತಿರುವ ಉಪಸರ್ಗವನ್ನರಿತು ತಕ್ಷಣ ಅಲ್ಲಿಗೆ ಬಂದು ಮಂದರ ಪರ್ವತದಂತೆ ಅಚಲನಾಗಿದ್ದ ಪಾರ್ಶ್ವನಾಥರನ್ನು ಕಂಡು ಅಚ್ಚರಿಗೊಂಡು ತಮ್ಮ ವಜ್ರದ ಹೆಡೆಯನ್ನು ಕೊಡೆಯಂತೆ ಹರಡಿ ಬೆಂಕಿಯ ಮಳೆ ಮುನಿಗೆ ತಾಗದಂತೆ ತಡೆಯನ್ನು ಕೊಂಡೆಯಂತೆ ಹರಡಿ ಬೆಂಕಿಯ ಮಳೆ ಮುನಿಗೆ ತಾಗದಂತೆ ತಡೆದರು ಪೂರ್ವಭವದಲ್ಲಿ ತಿರ್ಯಕ್ ಪ್ರಾಣಿಗಳಾಗಿದ್ದು ಯಾವ ಮಹಾಪುರುಷನ ದಿವ್ಯೋಪದೇಶದಿಂದ ಧರಣೀಂದ್ರ ಪದ್ಮಾವತಿಯರೆಂಬ ದೇವತೆಗಳಾಗಿ ಜನಿಸಿರೋ ಅವರೇ ಈ ಮಹಾಪುರುಷನ ಉಪಕಾರ ಸ್ಮರಣೆಯಿಂದ ಹೀಗೆ ಸೇವೆ ಸಲ್ಲಿಸಿ ತಮ್ಮ ಕೃತಜ್ಞಾತೆಯನ್ನು ಪ್ರದರ್ಶಿಸಿದರು ಸತ್ಪುರುಷರು ಉಪಕಾರವನ್ನೆಂದೂ ಮರೆಯುವುದಿಲ್ಲ ಪಾರ್ಶ್ವನಾಥರು ಇವೊಂದನ್ನು ಗಮನಿಸದೆ ಧ್ಯಾನಮಗ್ನರಾಗಿದ್ದು ಕರ್ಮದೊಂದಿಗೆ ಹೋರಾಡಿ ಘಾತೀಯ ಕರ್ಮವನ್ನು ಜನಿಸಿ ಜಿನರಾದರು ಅವರಿಗೆ ಲೋಕಾ ಲೋಕವನ್ನರಿಯುವ ಕೇವಲ ಜ್ಞಾನ ಉಂಟಾಯಿತು.

ಅವರು ಸರ್ವಜ್ಞಾರಾದರು ಅವರ ಪರಮಾದಾರಿತ ದಿವ್ಯ ದೇಹವು ಭೂಮಿಯಿಂದ ಮೇಲೇರಿ ಅಂಬರದಲ್ಲಿ ನಿಂತಿತು ದೇವಗುಣ ಬಂದು ಕೇವಲ ಜ್ಞಾನ ಪೂಜೆಯನ್ನು ಮಾಡಿದರು.

ಈ ಚಿತ್ರವು ಉತ್ತರ ನೋಡೆಯ ಎರಡನೆಯ ಅಂಕಣದ ಮೇಲ್ಪಟ್ಟಿಯಲ್ಲಿದೆ. ಈ ಚಿತ್ರವು ಉದ್ದಪಟ್ಟಿಯಲ್ಲಿದ್ದು ಮೂರು ಭಾಗಗಳಾಗಿ ವರ್ಗೀಕರಿಸಲಾಗಿದೆ. ಮೊದಲನೆಯ ಭಾಗದಲ್ಲಿ ಪಾರ್ಶ್ವನಾಥರು ಎಂಟುದಿನಗಳ ಕಾಲ ಉಪವಾಸದಲ್ಲಿದ್ದು ಶುದ್ಧ ಭಾವನೆಯಿಂದ ನಿಂತು ತಪವನ್ನು ಮಾಡುತ್ತಲಿರುವುದು ವಿಪ್ರಲಾದಿ ಸೀಮೆಯ ಮರಗಿಡಗಳ ನಡುವೆ ದೀರ್ಗವಾಗಿ ತಪಮಾಡುತ್ತಿರುವುದು ಹಿನ್ನೆಲೆಯಲ್ಲಿ ಕೆಂಪುವರ್ಣವಿದ್ದು ಗಾಡ ಹಸಿರಿನ ಮರಗಿಡಗಳಿದ್ದು ವಿಶೇಷವಾಗಿ ತೆಂಗಿನ ಮರದ ಚಿತ್ರವನ್ನು ನಾವಿಲ್ಲಿ ಕಾಣಬಹುದು ಮುಂದಿನ ಚಿತ್ರದಲ್ಲಿ ಪಾರ್ಶ್ವನಾಥರಮೇಲೆ ಶಂಬರ ದೇವನ ಸಹಚರರು ವಿಮಾನದಲ್ಲಿ ಸಂಚರಿಸುತ್ತಾ ವಿಷಕೀಟ ಮೃಗಾಧಿಗಳಿಂದ ರಾಕ್ಷಸ ದೂತರಿಂದ ತಪೋಭಂಗವನ್ನು ಮಾಡುತ್ತಿರುವುದನ್ನು ನಾವಿಲ್ಲಿ ಗಮನಿಸಬಹುದು ಶಂಬರನ ಸಹಚರರು ದೂಮ್ರವರ್ಣದ ವಿಮಾನಗಳಿಂದ ಹಾವು, ಚೇಳು, ಮೃಗ, ಸಿಂಹಗಳನ್ನು ಪಾರ್ಶ್ವನಾಥರ ಮೇಲೆ ಎಸೆಯುತ್ತಿರುವುದು ಇದರ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದ್ದು ಮರಗಿಡಗಳನ್ನು ಹಿನ್ನೆಲೆಯಲ್ಲಿ ನೋಡಬಹುದು.

ಮುಂದಿನ ಚಿತ್ರದಲ್ಲಿ ಇದರಿಂದ ಯಾವ ಪ್ರಯೋಜನ ಕಾಣದ ಶಂಬರ ದೇವ ತಾನೆ ವಿಮಾನದಲ್ಲಿ ಕುಳಿತು ಬೆಂಕಿಯ ಬಾಣಗಳನ್ನು ನೀಡುತ್ತಿರುವುದು ಧರಣೇಂದ್ರನು ವಜ್ರದ ಹೆಡೆಯನ್ನು ಪಾರ್ಶ್ವನಾಥರಿಗೆ ಅಡ್ಡಲಾಗಿ ಹಿಡಿದಿದ್ದು ಪದ್ಮಾವತಿಯು ಛತ್ರಿಯನ್ನು ಹಿಡಿದು ನಿಂತಿರುವ ದೃಶ್ಯವಿದಾಗಿದೆ ಈ ಚಿತ್ರದಲ್ಲಿ ಪಾರ್ಶ್ವನಾಥರು ದಿಗಂಬರರಾಗಿ ನಿಂತಿದ್ದು ಶಂಬರ ದೇವ ಕೆಂಪು ವಸ್ತ್ರ ಧಾರಿಯಾಗಿದ್ದು ಗಡ್ಡವನ್ನು ಬಿಟ್ಟು ಕಿರೀಟವನ್ನು ತೊಟ್ಟು ವಿಮಾನದಲ್ಲಿ ಗಾಳಿಯ ಮೇಲೆ ನಿಂತಿರುವುದು ಹಾಗೂ ಪಾರ್ಶ್ವನಾಥರ ಪರಿಸ್ಥಿತಿಯನ್ನು ಕಂಡು ಹುಲಿ, ಜಿಂಕೆ, ಆನೆಗಳು ಜೇಂಕರಿಸುತ್ತಿರುವುದು ಹಿನ್ನೆಲೆಯಲ್ಲಿ ಧರಣೇಂದ್ರರು ವಜ್ರಕಾಯವಾಗಿ ನಿಂತಿದ್ದು ಶಂಬರ ಬೆಂಕಿಯ ಬಾಣಗಳನ್ನು ಪಾರ್ಶ್ವನಾಥರಿಗೆ ಬೀಳದಂತೆ ತಡೆಯುತ್ತಿರುವುದು ಪದ್ಮಾವತಿಯು ಧರಣೇಂದ್ರರಿಗೆ ಏನೂ ತಾಗದಂತೆ ಛತ್ರಿಯನ್ನು ತಡೆಯುತ್ತಿರುವುದು ಪದ್ಮಾವತಿಯು ವಜ್ರಾಭರಣ ಕಚಿತಳಾಗಿ ನಿಂತಿರುವುದು ನಾವಿಲ್ಲಿ ಕಾಣಬಹುದು ಈ ಹಿನ್ನೆಲೆಯಲ್ಲಿ ಬಿಳಿಯ ವರ್ಣವನ್ನು ತೋರಿಸಿದ್ದು ಮರಗಿಡ, ವನ್ಯ, ಹಾವು, ಚೇಳು, ಹುಲಿ, ಸಿಂಹ, ಪಕ್ಷಿವಂತಾಗಳನ್ನು ತೋರಿಸಲಾಗಿದೆ.

ಮುಂದುವರಿದು ಪಾರ್ಶ್ವನಾಥರು ಈ ಎಲ್ಲಾ ಅಗ್ನಿ ಪರೀಕ್ಷೆಯನ್ನು ಗೆದ್ದು ನಿಂತಿರುವುದು ಅದರ ಮುಂದಿನ ಚಿತ್ರದಲ್ಲಿ ಇವೊಂದನ್ನು ಗಮನಿಸದೆ ಧ್ಯಾನ ಮಗ್ನರಾಗಿದ್ದು ಕರ್ಮದೊಂದಿಗೆ

ಹೋರಾಡಿ ಘಾತಿಯ ಕರ್ಮವನ್ನು ಜಯಿಸಿ ಜಿನರಾದರು ಅವರಿಗೆ ಲೋಕಾ ಲೋಕವನ್ನರಿಯುವ ಕೇವಲ ಜ್ಞಾನ ಉಂಟಾಯಿತು. ಅವರು ಸರ್ವಜ್ಞರಾದರು ಅವರ ಪರಮೌದಾರಿಕ ದಿವ್ಯ ದೇಹವು ಭೂಮಿಯಿಂದ ಮೇಲೇರಿ ಅಂಬರದಲ್ಲಿ ನಿಂತಿತು ದೇವಗುಣ ಬಂದು ಕೇವಲ ಜ್ಞಾನ ಪೂಜೆಯನ್ನು ಮಾಡಿದರು. ದೇವೇಂದ್ರನು ಕುಬೇರನಿಂದ ಸಮವಸರಣವೆಂಬ ಮಹಾ ಸಭಾಮಂಟಪವನ್ನು ನಿರ್ಮಾಣ ಮಾಡಿಸಿದನು ಗ್ರಂಥಗಳಲ್ಲಿ ಉಲ್ಲೇಖವಿರುವಂತೆ ಪಾರ್ಶನಾಥರು ಭೂಮಿಯಿಂದ ಆಗಸದೆತ್ತರಕ್ಕೆ ಬೆಳೆದಿರುವಂತೆ ಕಲಾವಿದನು ಚಿತ್ರಿಸಿದ್ದು ಕೆಲಭಾಗದಲ್ಲಿ ಮುನಿಗಳು, ಯತಿಗಳು, ಋಷಿಗಳು ನಗ್ನರಾಗಿ ಜಟಾಧಾರಿಗಳಾಗಿ ಗಡ್ಡವನ್ನು ಬಿಟ್ಟುಕೊಂಡು ತನ್ನ ಎರಡೂ ಕೈಗಳನ್ನು ಮೇಲೆತ್ತಿ ಕೈಮುಗಿಯುತ್ತಿರುವಂತೆ ಚಿತ್ರಿಸಿದ್ದಾನೆ. ಆಕಾಶದಲ್ಲಿ ಮೋಡಗಳ ಮೇಲೆ ಮಲಗಿ ಸಾಷ್ಟಾಂಗ ನಮಸ್ಕಾರ ಮಾಡುವಂತೆ ದೇವತೆಗಳನ್ನು ಚಿತ್ರಿಸಲಾಗಿದೆ. ಈ ಚಿತ್ರದ ಹಿನ್ನೆಲೆಯನ್ನು ಗಾಡ ನೀಲಿವರ್ಣದಿಂದ ಚಿತ್ರಿಸಲಾಗಿದ್ದು ಬಿಳಿ ಮೋಡಗಳನ್ನು ರಚಿಸಿದ್ದು ತಿಳಿ ನೀಲಿಯಿಂದ ಮೋಡದ ಉಬ್ಬುಗಳನ್ನು ತೋರಲಾಗಿದೆ. ಕೆಳಭಾಗದಲ್ಲಿ ಗಾಡ ನೀಲಿ ವರ್ಣದಿಂದ ಮರಗಳನ್ನು ಕಂದು ವರ್ಣದಿಂದ ಬುಡಗಳನ್ನು ತೋರಲಾಗಿದೆ ಇಲ್ಲಿ ಗಾಡ ನೀಲಿ, ಕೆಂಪು, ಕಂದು ನೀಲಿ, ಬಿಳಿ, ಬೂದು ಬಣ್ಣಗಳಿಂದ ಈ ಚಿತ್ರಗಳನ್ನು ಚಿತ್ರಿಸಲಾಗಿದ್ದು ಹಿರಿಯೂರು, ಸೀಬಿಗಳಲ್ಲಿ ಈ ಚಿತ್ರಗಳ ಶೈಲಿಯನ್ನು ಕಾಣಬಹುದು.

ಚಿತ್ರ-೩೩. ಸಮವಸರಣ ಚಿತ್ರ

ಸಮವಸರಣ ಎಂದರೆ ಅರಿಹಂತ ಪರಮೇಷ್ಟಿಗಳು ವಿರಾಜಮಾನರಾಗಿ ಉಪದೇಶವನ್ನು ಮಾಡುತ್ತಾ ವಿವರಿಸುವ ಸಭಾ ಮಂಟಪವೇ ಸಮವರಸರಣ ಎಂದು. ತೀರ್ಥಂಕರರು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ತಪೋವನಕ್ಕೆ ಹೋಗಿ ದೀಕ್ಷೆ ತೆಗೆದುಕೊಳ್ಳುತ್ತಾರೆ. ಅದರಿಂದ ಅವರ ಆತ್ಮನಿಗೆ ಅನಾಧಿಕಾಲದಿಂದಲೂ ಅಂಟಿ ಬಂದಿದ್ದ ಜ್ಞಾನಾವರಣೀಯ ದರ್ಶನಾವರಣೀಯ ಮೋಹನೀಯ ಅಂತರಾಯವೆಂಬ ಆತ್ಮಘಾತಕವಾದ ಘಾತೀಯ ಕರ್ಮಗಳು ನಾಶವಾಗುತ್ತವೆ. ಆಗ ಅವರು ಆಕಾಶದಲ್ಲಿ ನಿಲ್ಲುತ್ತಾರೆ. ದೇವೇಂದ್ರನಿಗೆ ಇದು ಗೊತ್ತಾಗುತ್ತದೆ. ಕೂಡಲೇ ಕುಬೇರನಿಂದ ಸಮವಸರಣವನ್ನು ಅರಿಹಂತರು ಇರುವ ಜಾಗದಲ್ಲಿ ನಿರ್ಮಾಣ ಮಾಡಿಸುತ್ತಾರೆ.

ಸಮವಸರಣವು ಭೂಮಿಯಿಂದ ಮೇಲೆ ಐದು ಸಾವಿರ ಧನಸ್ಸು ಎತ್ತರದ ಅಂತರದಲ್ಲಿ ಇರುತ್ತದೆ. ಇದಕ್ಕೆ ಭೂಮಿಯಿಂದ ಸಮವಸರಣದವರೆಗೂ ಇಪ್ಪತ್ತು ಸಾವಿರ ಮೆಟ್ಟಿಲುಗಳಿರುತ್ತದೆ. ಸಮವಸರಣಕ್ಕೆ ಹೋಗಬಯಸುವವರು ತೀರಾ ಕೆಳಗಿನ ಮೊದಲ ಮೆಟ್ಟಿಲು ಮೇಲೆ ನಿಂತರೆ ಸಾಕು ಅವರು ಕ್ಷಣಾರ್ಧದಲ್ಲಿ ಸಮವಸರಣವನ್ನು ತಲುಪುತ್ತಾರೆ. ಕಾರಣ ಆ ಮೆಟ್ಟಿಲಿಗೆ ಪಾದಲೇಪನವೆಂಬ

ಔಷಧಿ ಲೇಪನವಾಗಿರುತ್ತದೆ. ಆದ್ದರಿಂದ ೨೦ ಸಾವಿರ ಮೆಟ್ಟಿಲನ್ನು ಹತ್ತಬೇಕಾಗಿರುವುದಿಲ್ಲ ಇವು ೪ ದಿಕ್ಕಿನಲ್ಲೂ ಇರುತ್ತದೆ ಸಮವಸರಣವು ಇಂದ್ರ ನೀಲಮಣಿಯಿಂದ ರಚನೆಯಾಗಿರುತ್ತದೆ. ಇದು ಆದಿನಾಥರಿಗೆ ೧೨ ಯೋಜನ ವಿಸ್ತಾರವಾಗಿದ್ದಿತು ಬರುತ್ತಾ ಬರುತ್ತಾ ಅರ್ಧಯೋಜನೆ ಕಡಿಮೆಯಾಗುತ್ತಾ ಮಹಾವೀರರ ಕಾಲದಲ್ಲಿ ಒಂದು ಯೋಜನವಿತ್ತು ಇದು ವೃತ್ತಾಕಾರವಾಗಿರುತ್ತದೆ. ಸಮವಸರಣ ಸುತ್ತಾ ಪಂಚ ರತ್ನಗಳ ಧೂಳಿಂದ ತುಂಬಿರುವ ಕೋಟೆ ಇದೆ. ಇದರ ನಾಲ್ಕು ದಿಕ್ಕಿನಲ್ಲಿ ಹೆಬ್ಬಾಗಿಲುಗಳಿವೆ ಅಕ್ಕ ಪಕ್ಕಗಳಲ್ಲಿ ದ್ವಾರಪಾಲಕರಿರುತ್ತಾರೆ. ಆ ಬಾಗಿಲ ಒಳಗೆ ಎದುರಿನಲ್ಲಿ ಎತ್ತರವಾದ ಮಾನಸ್ಥಂಭವಿರುತ್ತದೆ. ನಾಲ್ಕು ದಿಕ್ಕಿನಲ್ಲಿರುವ ಮಾನಸ್ಥಂಭಗಳ ನಡುವೆ ಐದು-ಐದು ಜಿನಮಂದಿರಗಳಿರುತ್ತವೆ.

ಧೂಳೀಸಾಲ ಕೋಟೆಯನ್ನು ದಾಟಿದರೆ ನಿರ್ಮಲವಾದ ಜಲದಿಂದ ತುಂಬಿರುವ ಸದಾ ಕಮಲಗಳು ಅರಳಿರುವ ಖಾತಿಕಾ ಎಂಬ ಭೂಮಿ ಇರುತ್ತದೆ. ಅದರಿಂದ ಮುಂದೆ ಲತಾಭೂಮಿ ಇರುತ್ತದೆ. ಅಲ್ಲಿ ವಿವಿಧ ಪುಷ್ಪಗಳಿಂದ ತುಂಬಿದ ಬಳ್ಳಿಗಳು ಸುಗಂಧಭರಿತವಾಗಿರುತ್ತದೆ. ಅಲ್ಲಿಂದ ಮುಂದೆ ೧೦೮-೧೦೮ ಅಷ್ಟ ಮಂಗಲ ದ್ರವ್ಯಗಳಿಂದ ಕೂಡಿದ ಚೈತನ್ಯ ಭೂಮಿ ಇರುತ್ತದೆ. ಅಲ್ಲಿಂದ ಮುಂದೆ ಹಲವು ಚಿಹ್ನೆಗಳಿಂದ ಕೂಡಿರುವ ಧ್ವಜಗಳುಳ್ಳ ಧ್ವಜಭೂಮಿ ಇರುತ್ತದೆ. ಇವು ಸಮವಸರಣದ ಸುತ್ತಾ ೧೦೮೦ ಇರುತ್ತದೆ. ಇದರ ಸುತ್ತಾ ಒಳಭಾಗದಲ್ಲಿ ಸುವರ್ಣ ಪ್ರಕಾರವಿರುತ್ತದೆ. ಅದರಿಂದಾಚೆ ಕಲ್ಪವೃಕ್ಷಗಳು ತುಂಬಿರುವ ಭೂಮಿ ಇರುತ್ತದೆ. ಇದರಲ್ಲಿ ಸಿದ್ಧ ಪ್ರತಿಮೆಗಳು ವಿರಾಜಮಾನವಾಗಿರುತ್ತದೆ. ಅಲ್ಲಿಂದ ಮುಂದೆ ಬೆಳ್ಳಿಯ ಕೋಟೆ ಇರುತ್ತದೆ. ಇದರ ನಾಲ್ಕು ದಿಕ್ಕಿನಲ್ಲಿ ಗೋಪುರ್ಗಳಿವೆ ನಾಟ್ಯ ಶಾಲೆಗಳಿವೆ. ಇಲ್ಲಿ ಜ್ಯೋತಿರ್ವ್ಯಂತರ ಭವನವಾಸಿಗಳು ನಲಿದಾಡುತ್ತಾರೆ. ಅನಂತರ ಆಕಾಶ ಸ್ಪಟಿಕದ ಕೋಟೆ ಇರುತ್ತದೆ ಅಲ್ಲಿಂದ ಮುಂದೆ ೧೨ ಕೋಷ್ಟಗಳಿವೆ ಹೀಗೆ ಸಮವಸರಣದಲ್ಲಿ ಕ್ರಮವಾಗಿ (೧) ಪ್ರವಾಸ ಚೈತನ್ಯ ಭೂಮಿ (೨)ಜಲ ಖಾತಿಕಾ ಭೂಮಿ (೩)ವಲ್ಲಿವನ ಭೂಮಿ (೪)ಉಪವನಭೂಮಿ (೫)ಧ್ವಜಮಾಲಾ ರುವಲಯ ಭೂಮಿ (೬)ಕಲ್ಪಮಹೀರುವ ಭೂಮಿ (೭)ಭುವನ ಸಂದೋಹ ಭೂಮಿ (೮)ದ್ವಾದಶಾಂಗಣ ಭೂಮಿ (೯)ವೈಡೂರ್ಯಪೀಠ (೧೦)ಕನಕಪೀಠ (೧೧)ರತ್ನ ಸಿಂಹಾಸನ ಎಂಬ ೧೧ ವಿಭಾಗಗಳಿರುತ್ತವೆ ಸಮವಸರನವು ಚಂದ್ರಮಂಡಲದಂತೆ ವೃತ್ತಾಕಾರವಾಗಿರುತ್ತದೆ.

ಅರಿಹಂತರ ಧಿರ್ಲೋಪದೇಶವನ್ನು ಕೇಳಲು ಬರುವ ಭವ್ಯತ್ಮರು ಕುಳಿತು ಕೊಳ್ಳುವ ಜಾಗವನ್ನು ಕೋಷ್ಟಗಳು ಎನ್ನುವರು ಪುರುಷರಿಗೂ, ಸ್ತ್ರೀಯರಿಗೂ ಪ್ರತ್ಯೇಕ ಕೋಷ್ಟಗಳಿರುತ್ತವೆ. ಈ ಕೋಷಟಗಳು ೧೨ ಕ್ರಮವಾಗಿ ಹೀಗೆ ಇವೆ (೧)ಗಣಧರಾದಿ ಮುನಿ ಸಂಘ (೨)ಕಲ್ಪವಾಸೀ ದೇವಿಯರು (೩) ಅರ್ಜಿಕೆಯರು ಮತ್ತು ಮಾನವ ಸ್ತ್ರೀಯರು (೪)ಜ್ಯೋತಿಷ್ಕ ದೇವಿಯರು

(೫)ವ್ಯಂತರ ದೇವಿಯರು (೬)ಭವನವಾಸೀ ದೇವಿಯರು (೭) ಭವನವಾಸೀ ದೇವತೆಗಳು (೮)ವ್ಯಂತರ ದೇವತೆಗಳು (೯)ಜ್ಯೋತಿಷ್ಕ ದೇವತೆಗಳು (೧೦)ಕಲ್ಪವಾಸೀ ದೇವತೆಗಳು (೧೧) ಮನುಷ್ಯರು (೧೨) ತಿರ್ಯಂಚ ಪ್ರಾಣಿಗಳು ದ್ವಾದಶಾಂಗಣ ಕೋಷ್ಟಕದ ಮಧ್ಯೆ ಗಂಧಕುಟಿ ಇರುತ್ತದೆ. ಸಮವಸರಣ ನಟ್ಟ ನಡುವೆ ಶ್ರೀ ಮಂಟಪವಿದೆ ಇದರಲ್ಲಿ ಜಿನೇಂದ್ರ ಭಗವಾನರಾದ ಅರಿಹಂತರು ವಿರಾಜಮಾನರಾಗಿ ಇರುತ್ತಾರೆ.

ಉತ್ತರಗೋಡೆಯ ಬಲಭಾಗದಲ್ಲಿ ಈ ಚಿತ್ರ ಸಂಕೀರ್ಣವಿದ್ದು ಮೇಲಿನಪಟ್ಟಿಯಲ್ಲಿ ಪಾರ್ಶ್ವನಾಥರು ಹಾಗೂ ಶಂಬರನ ವೃತ್ತಾಂತವಿದ್ದು ಇನ್ನುಳಿದ ತೊಂಭತ್ತು ಭಾಗದಷ್ಟು ಜಾಗದಲ್ಲಿ ಸಮವಸರಣದ ಚಿತ್ರಗಳನ್ನು ಕಾಣಬಹುದು ಮೊದಲಿಗೆ ದೊಡ್ಡದೊಂದು ಚೌಕಾಕಾರದಲ್ಲಿ ದೊಡ್ಡದೊಂದು ವೃತ್ತಾಕಾರವಿದೆ ಇದೇ ಸಮವಸರಣ ಒಳ ವೃತ್ತವನ್ನು ಸೇರಿದಂತೆ ಒಂಭತ್ತು ವೃತ್ತಗಳನ್ನು ನಾವಿಲ್ಲಿ ಕಾಣಬಹುದಾಗಿದ್ದು ಒಳವೃತ್ತದಲ್ಲಿ ಸುವರ್ಣ ಮಂಟಪವಿದ್ದು ಹಿಂಬದಿಯಲ್ಲಿ ವೃಕ್ಷವನ್ನು ತೋರಿಸಲಾಗಿದೆ. ಇದರ ಇನ್ನೆಲೆಯಲ್ಲಿ ಅಷ್ಟಮಂಗಲಗಳನ್ನು ಎರಡೂ ಬದಿಯಲ್ಲಿ ತೋರಿಸಲಾಗಿದ್ದು ಎರಡೂ ಬದಿಯಲ್ಲೂ ಗ್ರಂಥಪೀಠವನ್ನು ಇಡಲಾಗಿದೆ. ಇಲ್ಲಿ ಪಾರ್ಶ್ವನಾಥರು ನೇರ ಅಭಿಮುಖವಾಗಿ ನಿಂತಿದ್ದು ಇವರ ಕಾಲ ಬಳಿಯಲ್ಲಿ ನಗಾರಿಗಳನ್ನು ಬಾರಿಸುತ್ತಿರುವ ಇಬ್ಬರು ಮನುಷ್ಯರಿದ್ದಾರೆ. ಎರಡನೇ ವೃತ್ತದಲ್ಲಿ ಗಣಧರಾದಿ ಮುನಿಗಳು ನಾಲ್ಕು ಗೋಪುರಗಳನ್ನು ಕಾಣಬಹುದು. ಮೂರನೇ ವೃತ್ತದಲ್ಲಿ ಬರಿಯ ಗೋತರಗಳೇ ಇವೆ ನಾಲ್ಕನೇ ವೃತ್ತದಲ್ಲಿ ತೀರ್ಥಂಅಕ್ರರು ಗೋಪುರಗಳು ಮರಗಳು ಸರೋವರಗಳನ್ನು ಕಾಣಬಹುದಾಗಿದೆ. ಐದನೇ ವೃತ್ತದಲ್ಲಿ ಧ್ವಜಗಳು ಗೋಪುರಗಳು, ದ್ರವ್ಯಗಳು, ಗಿರಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಆರನೇ ಸಾಲಿನಲ್ಲಿ ತೀರ್ಥಂಕರರು ಪರ್ವತಗಳು ಬಾರೆಗಿಡದ ಹಣ್ಣುಗಳು ಮರಗಳಿವೆ. ಏಳನೇ ವೃತ್ತದಲ್ಲಿ ಹೂ-ಗಿಡ, ಹೂ-ಬಳ್ಳಿಗಳಿವೆ, ಎಂಟನೇ ವೃತ್ತದಲ್ಲಿ ಜಲಚರ ಜೀವಿಗಳಿವೆ. ಒಂಭತ್ತನೇ ವೃತ್ತದಲ್ಲಿ ಮನುಷ್ಯರೂ ತೀರ್ಯಂಚ ಪ್ರಾಣಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ನಾಲ್ಕು ಮೂಲೆಗಳಲ್ಲಿಯೂ ಜೈನ ಮಾನಸ್ಥಂಬಗಳಿವೆ ಹಾಗೂ ಎಡಭಗದಲ್ಲಿ ಚಂದ್ರ ಮತ್ತು ಬಲಭಾಗದಲ್ಲಿ ಸೂರ್ಯನ ನಕ್ಷೆಗಳಿವೆ.

ಈ ಸಮರಸರಣದ ಎಡಬಲ ಭಾಗದಲ್ಲಿ ಆಗಸದಲ್ಲಿ ದೇವತೆಗಳು ಕೈಮುಗಿದು ನಿಂತಿರುವುದು ಕೆಳಭಾಗದಲ್ಲಿ ಮರಗಿಡಗಳು ಸರೋವರಗಳ ವಿನ್ಯಾಸಗಳಿವೆ. ಇದರ ಕೆಳಭಾಗದಲ್ಲಿ ದೇವತೆಗಳು ನಿಂತು ಪುಷ್ಪವೃಷ್ಟಿ ಮಾಡುತ್ತಿರುವುದು ಕಾಮಾನುಗಳು ವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದಾಗಿದೆ ಇನ್ನು ಚಿತ್ರದ ಎಡಭಾಗದಲ್ಲಿ ಅಷ್ಟಮಂಗಲಗಳು, ರತ್ನಗಳು ಶಂಕು, ಚತ್ರಿ, ಚಾಮರ, ಕುಂಬ, ಕನ್ನಡಿ, ದ್ರವ್ಯ, ವೀಣೆ, ಹೂವಿನ ಹಾರಗಳು, ವಸ್ತ್ರಗಳು, ರತ್ನಕುಬಗಳು ಸುಗಂಧ ದ್ರವ್ಯಗಳು.

ನಾವಿಲ್ಲಿ ಕಾಣಬಹುದಾಗಿದೆ ಸಮವಸರಣದ ಕೆಳಭಾಗದಲ್ಲಿ ಸರ್ವಾಹ್ಣ ಯಕ್ಷನ ಚಿತ್ರವಿದ್ದು ಈತನು ಸಮವಸರಣವನ್ನು ರಕ್ಷಣೆ ಮಾಡುವವನಾಗಿರುತ್ತಾನೆ ಈತನು ಶ್ಯಾಮಲ ವರ್ಣಧಾರಿಯಾಗಿದ್ದು ವಜ್ರಾಭರಣಧಾರಿಯಾಗಿದ್ದು ನಾಲ್ಕು ಕೈಗಳನ್ನು ಈತನು ಹೊಂದಿದ್ದಾನೆ ಕೈಮುಗಿದು ನಿಂತಿರುವ ಈತನು ಹಿಂದಿರುವ ಎರಡು ಕೈಗಳಿಂದ ಶ್ವೇತಾಕಾರದ ವೃತ್ತವನ್ನು ಹಿಡಿದು ನಿಂತಿರುವಂತೆ ತೋರಿಸಲಾಗಿದೆ. ಈ ಚಿತ್ರದ ಎಡಭಾಗದಲ್ಲಿ ಮುನಿಸಾಧುಗಳಿದ್ದು ಬಲಭಾಗದಲ್ಲಿ ದೇವತೆಗಳು ಆನೆಯಲ್ಲಿ ಪಲ್ಲಕ್ಕುಯಲ್ಲಿ ಸಮವಸರಣಕ್ಕೆ ಬರುವಂತೆ ಇಲ್ಲಿ ಕಲಾವಿದನು ತೋರಿಸಿದ್ದಾನೆ ಇದರ ಕೆಳಭಾಗದಲ್ಲಿ ನೃತ್ಯ ಮಾಡುತ್ತಿರುವ ದೃಶ್ಯ, ಇಂದ್ರಾದಿ ದೇವತೆಗಳು ಬರುತ್ತಿರುವ ದೃಶ್ಯ ಎಡಭಾಗದ ಕೆಳ ಸಾಲಿನಲ್ಲಿ ಪ್ರಾಣಿಗಳು ಬರಿತ್ತಿರು ದೃಶ್ಯಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಇದರ ಬಳಿಕ ಎಡ ಬಲಗಳಲ್ಲಿ ಶಾಸನ ಯಕ್ಷಿಯರ ಚಿತ್ರಗಳಿವೆ ಬಲಭಾಗದಲ್ಲಿ ಪದ್ಮಾವತಿ ಹಾಗೂ ಎಡಭಾಗದಲ್ಲಿ ಧರಣೀಂದ್ರ ಚಿತ್ರಗಳನ್ನು ಸಾವಿಲ್ಲಿ ಕಾಣಬಹುದಾಗಿದೆ ಇಬ್ಬರೂ ದೇವತೆಯರು ನೀಲ ವರ್ಣದಲ್ಲಿದ್ದು ಕಿರೀಟ ಧಾರಿಯರಾಗಿದ್ದಾರೆ. ನಾಲ್ಕು ಕೈಗಳಿದ್ದು ಹಿಂದಿನ ಎರಡು ಕೈಗಳಲ್ಲಿ ಶಂಕಚಕ್ರಗಳಿದ್ದು ಮುಂದಿರುವ ಕೈಯಲ್ಲಿ ಅಭಯ ಹಾಗೂ ಗಧೆಯನ್ನು ಹಿಡಿದು ಬಲಗಾಲನ್ನು ಬದಿಗೆ ಹೊರೆಯಾಗಿ ನಿಲ್ಲಿಸಿಕೊಂಡು ಕೃಷ್ಣನ ಭಂಗಿಯಲ್ಲಿ ನಿಂತಿರುವರು ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದ್ದು ಸುವರ್ಣದ ಕಮಾನನ್ನು ಇಲ್ಲಿ ತೋರಿಸಲಾಗಿದೆ ಮೇಲಿನಿಂದ್ ಹೂ–ಬಳ್ಳಿಗಳನ್ನು ಜೊತು ಬಿಡಲಾಗಿದೆ. ಇದರ ಜೊತೆಯಲ್ಲಿ ಪಂಚ ಪರಮೇಷ್ಠಿಯ ಚಿತ್ರವನ್ನು ಇಲ್ಲಿ ತೋರಿಸಲಾಗಿದೆ ಒಟ್ಟಾರೆಯಾಗಿ ಇದೊಂದು ಉತ್ತಮ ಸಂಯೋಜನಾ ಚಿತ್ರವಾಗಿದ್ದು ಜಾಗದ ಬಳಕೆ ಬಣ್ಣಗಳ ಬಳಕೆ ರೇಖಾವಿನ್ಯಾಸ ದೇವತೆಗಳ ಚಿತ್ರ ವಂಶಮಾನ ವರ್ಣ ತಾಳಮಾನ ಭಂಗಿಗಳು, ಬಾಹ್ಯರೇಖೆಗಳು ಅದರ ಸೂಕ್ಷ್ಮತೆ ಗಹನಗಳು ವರ್ಣಿಸಲಸಾಧ್ಯವಾದವುಗಳಾಗಿವೆ. ಸಾಮಾನ್ಯವಾಗಿ ಹಿನ್ನೆಲೆಯಲ್ಲಿ ನೀಲಿ ಬಳಸಲಾಗಿದ್ದು ಕೆಂಪು, ಬಿಳಿ, ಕಂದು, ಹಸಿರು, ಸುವರ್ಣ, ಕೇಸರಿ, ಗಾಡ ನೀಲಿ ಹೀಗೆ ಇವೇ ಮೂಲವರ್ಣಗಳನ್ನು ಬಳಸಿಕೊಂಡು ಚಿತ್ರರಚನೆ ಮಾಡಲಾಗಿದೆ.

೩. ಪೂರ್ವದ ಗೋಡೆಯ ಚಿತ್ರಗಳು

ದೇವಾಲಯದ ಅಭಿಮುಖವಾಗಿ ನಿಂತಾಗ ಕಾಣುವ ಪೂರ್ವದ ಗೋಡೆಯ ಚಿತ್ರಗಳು ಬಹು ಸ್ಪಷ್ಟವಾಗಿರುವುದಿಲ್ಲ ಹಾಗೂ ಅಚಿತ್ರಗಳ ಕುರಿತಾಗಿ ಯಾವುದೇ ಮಾಹಿತಿಗಳೂ ಸಿಕ್ಕಿರುವುದಿಲ್ಲ ಅಲ್ಲದೆ ಬಹುಪಾಲು ಶಿಥಿಲಗೊಂಡಿವೆ. ಪೂರ್ವ ದಿಕ್ಕಿನ ಗೋಡೆಯ ಮೇಲೆ ಮೇಲ್ಚಾವಣಿಯ ಕೆಳಪಟ್ಟಿಯಲ್ಲಿ ಕಿಟಕಿ ಬಾಗಿಲುಗಳ ಅಡ್ಡಗೋಡೆ ಪಟ್ಟಿಗಳಲ್ಲಿ ಮಾತ್ರ ಚಿತ್ರಗಳನ್ನು ಕಾಣಬಹುದಾಗಿದ್ದು ತೀರ ಗುರುತಿಸಲಾರದಷ್ಟು ಕಪ್ಪುವರ್ಣಕ್ಕೆ ಎಲ್ಲವು ಬಂದರೆ ಮಾಲೆಗಳಲ್ಲಿ ಗಾರೆಯ ಚಕಳಿಗಳು

ಎದ್ದು ಹೋಗಿವೆ ಅಲ್ಲದೆ ಗೋಡೆಗಳನ್ನು ತೆಗೆದು ಕಿಟಕಿಗಳನ್ನು ಇಡುವಾಗಲು ಬಹುಪಾಲು ದೃಶ್ಯಗಳು ನಾಶವಾಗಿದು ಗೋಡೆಯ ಗಾರೆ ಚಕ್ಕೆಗಳು ಎದ್ದುಹೋಗಿವೆ. ಅಲ್ಲದೆ ಗೋಡೆಗಳನ್ನು ತೆಗೆದು ಕಿಟಕಿಗಳನ್ನು ಇಡುವಾಗಲು ಬಹುಪಾಲು ದೃಶ್ಯಗಳು ನಾಶವಾಗಿದು ಗೋಡೆಯ ಗಾರೆ ಚಕ್ಕೆಗಳು ಎದ್ದು ಹೋಗಿವೆ ಹಾಗೂ ಮುಖ್ಯ ದ್ವಾರ ಬಾಗಿಲಿಗೆ ಹಾಕಲಾಗಿರುವ ಇತ್ತಾಳೆ ಲೋಹದ ರಕ್ಷಕವಚ ಕಬ್ಬಿಣದ ಕಂಬಿಗಳನ್ನು ಹಾಕಲು ಹೋಗಿ ಬಹುಪಾಲು ನಾಶವಾಗಿವೆ.

ಅವುಗಳಲ್ಲಿ ಗುರುತಿಸಬಹುದಾದ ಕೆಲವು ಚಿತ್ರಗಳ ಸಂಕ್ಷಿಪ್ತ ಮಾಹಿತಿಯನ್ನು ಇಲ್ಲಿ ಹೇಳಲಾಗುವುದು ಎಡ ಮೂಲೆಯಿಂದ ನೋಡುವುದಿದ್ದರೆ ತೀರ್ಥಂಕರರು ತಪ ಮಾಡುತ್ತಿರುವುದು ಮಾನಸ್ತಂಭ ಸರೋವರಗಳು ಸ್ವರ್ಣಮಂಟಪಗಳಲ್ಲಿ ಕೈಮುಗಿದು ಕುಳಿತಿರುವ ದೇವತೆಗಳು ಸರೋವರ ತೆಂಗಿನ ಮರಗಳು ವೃತಾಕಾರ ಅದರಲ್ಲಿ ಮತ್ತೊಂದು ವೃತ್ತ ಅದಲ್ಲಿ ಒಂಭತ್ತು ದೇವತೆಗಳು ಮತ್ತೆ ಅದರ ಸುತ್ತಲೂ ನಾಲ್ಕು ಕಡೆಯಲ್ಲಿ ಐದೈದು ದೇವತೆಗಳ ಗುಂಪು ಗಾಳಿಯಲ್ಲಿ ತೇಲುತ್ತಿರುವಂತೆ ಧ್ಯಾನಮಾಡುವಂತೆ ತೀರ್ಥಂಕರರನ್ನು ಚಿತ್ರಿಸಲಾಗಿದೆ ಅಲ್ಲದೇ ಕೆಂಪು ಮತ್ತು ಹಸಿರು ವರ್ಣದ ಹೂ–ಬಳ್ಳಿ ವಿನ್ಯಾಸಗಳನ್ನು ಇಲ್ಲಿ ಕಲಾವಿದನು ಚಿತ್ರಿಸಿರುತ್ತಾನೆ.

ಇದರ ಬಳಿಕ ದ್ವಾರಪಾಲಕರು ಯಕ್ಷ–ಯಕ್ಷಿಣಿಯರು ಆರು ಬಾಗಿಲುಗಳುಳ್ಳ ರಾಯಗೋಪುರದ ಚಿತ್ರ ಇದಾದ ಬಳಿಕ ಮುಖ್ಯದ್ವಾರದ ಎಡಗೋಡೆಯ ಮೇಲಿನ ಚಾವಣಿಯ ಪೂರ್ವದಿಕ್ಕಿನ ಪುಟ್ಟಿಯಲ್ಲಿ ಸ್ತ್ರೀಯರು ಶೃಂಗಾರವಾಗುತ್ತಿರುವ ದೃಶ್ಯ ಮಹಿಳೆಯ ತಲೆ ಬಾಚುತ್ತಿರುವುದು ಇನ್ನೊಬ್ಬಳು ಕನ್ನಡಿಯನ್ನು ಹಿಡಿದು ನಿಂತಿರುವುದು ಇದರ ಮುಂದಿನ ಸಾಲುಗಳಲ್ಲಿ ಛತ್ರಿ ಚಾಮರಗಳನ್ನು ಹಿಡಿದು ನಿಂತಿರುವ ಹಲವಾರು ಸ್ತ್ರೀಯರು ಅರಸನ ಮುಂದೆ ನೃತ್ಯ ಮಾಡುತ್ತಿರುವುದು ಅರಸನು ಮಂಟಪದ ಮೇಲೆ ಕುಳಿತು ನೋಡುತ್ತಿರುವುದು ರಾಜನ ಹಿಂಭಾಗದಲ್ಲಿ ರಾಣಿಯೂ ಕೂತಿದ್ದು ರಾಜದಾಸಿಯರು ಛತ್ರಿ ಚಾಮರಗಳನ್ನು ಹಿಡಿದು ರಾಜರಿಗೆ ಉಪಚರಿಸುತ್ತಿರುವುದು.

ಇದಾದ ಬಳಿಕ ಮುಖ್ಯದ್ವಾರದ ಎಡಗೋಡೆಯ ಮೇಲೆ ಗೋಪುರಗಳಿಂದ ಕೂಡಿದ ರಥದ ಚಿತ್ರವಿದ್ದು ಅದರ ಮೇಲೆಲ್ಲ ಧ್ವಜವನ್ನು ಚಿತ್ರಿಸಲಾದೆ. ಕೆಲಭಾಗದಲ್ಲಿ ಎರಡೂ ಕಡೆ ಸಿಂಹಗಳು ಎರಡು ಕಾಲುಗಳನ್ನು ಎತ್ತಿ ತನ್ನ ಎದೆಯನ್ನು ಎತ್ತಿ ನಿಂತಿರುವಂತೆ ತೋರಿಸಲಾಗಿದೆ ಕೆಳಭಾಗದಲ್ಲಿ ರಥದ ಪೀಟವಿದ್ದು ಅದಕ್ಕೆ ಚಕ್ರಗಳು ಇಲ್ಲಿ ತೋರಿಸಲಾಗಿದ್ದು ಕೆಂಪು ಹಳದಿ ವರ್ಣಗಳಿಂದ ಪೂರ್ಣಗೊಳಿಸಲಾಗಿದ್ದು ಹಿನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದೆ ಮುಖ್ಯ ದ್ವಾರದ ಎರಡೂ ಕಡೆ ದ್ವಾರಪಾಲಕರಿದ್ದು ಇವು ಲೋಹದ ತಗಡಿನಿಂದ ಮುಚ್ಚಿ ಹೋಗಿವೆ. ಮುಖ್ಯ ದ್ವಾರದ ಮೇಲೆ ಚಾವಣಿಯ ಪಟ್ಟಿ ಇದು ಇದರ ಮೇಲೆ ೨೪ ತೀರ್ಥಂಕರರ ಚಿತ್ರಗಳನ್ನು

ಚಿತ್ರಿಸಲಾಗಿದೆ. ಮುಖ್ಯದ್ವಾರದ ಬಲಗೋಡೆಯಲ್ಲಿ ಹಲವು ಬಾಗಿಲು ಹಾಗೂ ಗೋಪುರವಿರುವ ಮಂಟಪವಿದ್ದು ಕೆಳಭಾಗದಲ್ಲಿ ಹಲವು ಮಂದಿ ನಿಂತು ಕಹಳೆಯನ್ನು ಬಾರಿಸುತ್ತಿದ್ದಾರೆ ಇದರ ಮೇಲಿನ ಪಟ್ಟಿಕೆಯಲ್ಲಿ ಐದು ತೀರ್ಥಂಕರರಿದ್ದು ಸಾಲಾಗಿ ಪ್ರತ್ಯೇಕ ಮಂಟಪದಲ್ಲಿ ಕೂತಿದ್ದು ಎರಡೂ ಬದಿಯಲ್ಲಿ ಮಹಿಳೆಯರು ಫಲಪುಷ್ಪಗಳನ್ನು ಹಿಡಿದು ನಿಂತಿದ್ದಾರೆ ಇದರ ಕೆಳಾಭಾಗದಲ್ಲಿ ಅರಮನೆಯ ಗೋಪುರ ಕೆಳಭಾಗದಲ್ಲಿ ಛತ್ರಿ, ಚಾಮರ, ಧ್ವಜ, ಸಿಂಹ ಲಾಂಚನ, ಮೀನಿನ ಲಾಂಚನ, ಹಾಗೂ ಚಕ್ರ ಮತ್ತು ಪಧಕ ಲಾಂಚನಗಳನ್ನು ಹಿಡಿದು ನಿಂತಿರುವ ಪುರುಷರಿದ್ದಾರೆ.

ಹೀಗೆ ಪೂರ್ವದಿಕ್ಕಿನಲ್ಲಿರುವ ಗೋಡೆಯ ಮೇಲೂ ಚಿತ್ರಗಳಿದ್ದು ಇಲ್ಲಿ ಹೆಚ್ಚು ಭಾಗ ನಾಶ ಹೊಂದಿದೆ ಕೆಲವು ಪ್ರಾಕೃತಿಕವಾಗಿ ನಾಶವಾದರೆ ಕೆಲವು ಮನುಷ್ಯರಿಂದ ಬರುವ ವಿಪತ್ತಿನಿಂದ ನಾಶಲಾಗಿವೆ ಈ ಚಿತ್ರಗಳನ್ನು ನೋಡಿದಾಗ ಯಾವುದೂ ಅರಸು ಮನೆತನಕ್ಕೂ ಹಾಗೂ ಜೈನ ತೀರ್ಥಂಕರರುಗಲ ನಡೆಯುವ ಘಟನೆಗಳನ್ನು ತೋರುತ್ತವೆ ಅಲ್ಲದೆ ಈ ಗೋಡೆಯಲ್ಲಿ ಕಿಟಕಿಗಳನ್ನು ಇದುವ ಸಲುವಾಗಿಯೂ ಕೆಲವು ಅಮೂಲ್ಯವಾದ ಚಿತ್ರಗಳು ನಮ್ಮ ಪರಂಪರೆ ಪುಟಗಳನ್ನು ಸೇರದೆ ಎಲ್ಲಿಯೂ ದಾಖಲಾಗದೆ ನಶಿಸಿ ನಾಶವಾಗಿರುವುದು ವಿಷಾದದ ಸಂಗತಿಯಾಗಿದ್ದು ಇದರನಡುವೆಯೂ ಇನ್ನುಳಿದ ಚಿತ್ರಗಳನ್ನು ರಕ್ಷಿಸಿಕೊಂಡು ಬಂದಿರುವ ಶ್ರವಣಬೆಳಗೊಳ ಜೈನ ಮಠದ ಕಲಾಸಕ್ಕಗೆ ಕಲಾ ಪರಂಪರೆಯು ಕಲಾವಿದರು ಸಂಘಸಂಸ್ಥೆಗಳು ಸಂಶೋಧಕರೂ ಚಿರರುಣಿಗಳಾಗಿರುತ್ತಾರೆ.

ದಕ್ಷಿಣದ ಗೋಡೆಯ ಚಿತ್ರಗಳು

ಪೂರ್ವ ಗೋಡೆಯ ಮುಂದುವರೆದ ಭಾಗದ ಚಿತ್ರವಾಗಿದ್ದು ಅದೇ ಕಥಾನಕವು ಮುಂದುವರೆಯುವುದು ಪೂರ್ವದ ಗೋಡೆಯ ಎರಡೂ ಗೋಡೆಗಳು ಕಿಟಕಿಯನ್ನು ಇಡಲು ಈ ಚಿತ್ರಗಳನ್ನು ತೆರವು ಮಾಡಲಾಗಿದ್ದು ದಕ್ಷಿಣದ ಗೋಡೆಯ ಚಿತ್ರಗಳನ್ನು ಸಹ ಯಾವ ಕಥೆಗೆ ಸಂಬಂಧಿಸಿದವು ಇವು ಎಂಬುದನ್ನು ಊಹಿಸಲು ಕಷ್ಟವಾಗುತ್ತದೆ ಇದರ ಪ್ರಥಮದಲ್ಲಿ ಛತ್ರಿ ಚಾಮರಗಳನ್ನು ಹಿಡಿದು ಕೂತಿರುವ ಸೈನಿಕರು ರಾಜಪರಿವಾರದ ಚಿತ್ರ ರಾಜ ಸಭೆಯ ಚಿತ್ರ ರಾಜನು ಸಭಿಕರಿಂದ ಏನನ್ನೋ ಕೇಳುವಂತೆ ತೋರಿಸಲಾಗಿದೆ ರಾಜನ ಮುಂಭಾಗದಲ್ಲಿ ರಾಜಪರಿವಾರದವರು ರಾಜ ಸಭಿಕರು ನಿಂತಿರುವುದನ್ನು ತೋರಿಸಲಾಗಿದೆ ಬಲಬದಿಯಲ್ಲಿ ಕೆಂಪು ಆನೆಯೊಂದು ಅಂಬಾರಿಯನ್ನು ಹೊತ್ತು ರಾಜರು ಹಾಗೂ ಮಾವುತನು ಕುಳಿತಿರುವ ಹಾಗೆ ತೋರಿಸಲಾಗಿದೆ ಕೆಳನಾಲಗೆನಲ್ಲೂ ಸಹ ಮೇಲಿನ ರೀತಿಯ ಪಟ್ಟಿಕೆಯ ಸಾಲುಗಳಿದ್ದು ಬಲ ಬದಿಯಲ್ಲಿ ರಾಜನು ಅಶ್ವವನ್ನೇರಿ ತನ್ನ ಬಲಗೈನ್ನು ಮೇಲೆ ಪ್ರಜಗಳ ಕಡೆ ಕೈಮಾಡುವಂತೆ

ತೋರಿಸಲಾಗಿದೆ ಇವುಗಳ ಹಿನ್ನೆಲೆಯನ್ನು ಗಾಡ ನೀಲಿವರ್ಣದಿಂದ ತೋರಿಸಲಾಗಿದ್ದು ಮಧ್ಯ ಮಧ್ಯದಲ್ಲಿ ವಿನ್ಯಾಸಗಳ ಪಟ್ಟಿಯನ್ನು ಹಾಗೂ ಮೇಲಿನ ಸಾಲುಗಳನ್ನು ಹೂ ಬಳ್ಳಿಯ ಸಾಲುಗಳನ್ನು ತೋರಿಸಲಾಗಿದೆ.

ಇದರ ಬಳಿಕ ಮಧ್ಯದಲ್ಲಿ ಬಾಗಲಿದ್ದು ಇದರ ಮೇಲಿನ ಪಟ್ಟಿಯಲ್ಲಿ ಐದು ಜನ ತೀರ್ಥಂಕರರನ್ನು ತೋರಿಸಲಾಗಿದ್ದು ಸುವರ್ಣ ಮಂಟಪಗಳನ್ನು ಇಲ್ಲಿ ಕಾಣಬಹುದಾಗಿದೆ. ಇದರ ಕೆಳಭಾಗದ ಪಟ್ಟಿಯಲ್ಲಿ ಸಿಂಹವನ್ನು ಕುಳಿತಿರುವಂತೆ ವಿನ್ಯಾಸದಲ್ಲಿ ತೋರಲಾಗಿದೆ ಈ ತೀರ್ಥಂಕರರನ್ನು ಕಪ್ಪು, ಕೆಂಪು, ಬಿಳಿ, ಸುವರ್ಣ ಹಾಗೂ ನೀಲಿ ವರ್ಣಗಳಲ್ಲಿ ತೋರಲಾಗಿದೆ. ಇದರ ಕೆಳಸಾಲಿನಲ್ಲಿ ಮುಖ್ಯ ಆರ್ಯಿರಾ ಹಾಗೂ ಯಕ್ಷಿಯರ ಚಿತ್ರಗಳನ್ನು ರಚಿಸಲಾಗಿದೆ ಇವರು ವಶು ದೇವತೆಗಳಾಗಿದ್ದು ಪ್ರತಿಯೊಬ್ಬರಿಗೂ ಪೀಟ, ಕಮಾನು, ಲಾಂಚನಗಳನ್ನು ಇಲ್ಲಿ ಚಿತ್ರಿಸಲಾಗಿದೆ ಕೆಳಭಾಗದ ಎರಡೂ ಕಡೆಯಲ್ಲಿಯೂ ದ್ವಾರಪಾಲಕರು ಹಾಗೂ ಯಕ್ಷ ಯಕ್ಷಿಯರನ್ನು ರಚಿಸಲಾಗಿದೆ ಎಡ ಮೂಲೆಯ ಬಹುತೇಕ ಚಿತ್ರಗಳ ಚಕ್ಕಳಿಗಳು ಎದಿಂದು ಚಿತ್ರ ವಿವರಣೆಗೆ ತೀರಾ ಕಷ್ಟವಾಗಿರುತ್ತದೆ.

ಚಿತ್ರ-೧. ನಾಗ ಕುಮಾರ ಚರಿತೆ

ದಕ್ಷಿಣ ಗೋಡೆಯ ಅರ್ಧದಿಂದ ನಾಗಕುಮಾರ ಚರಿತೆಯು ಪ್ರಾರಂಭವಾಗಲಿದ್ದು ಅವನ ಜೀವನ ವೃತ್ತಾಂತವನ್ನು ಇಲ್ಲಿ ಚಿತ್ರಿಸಲಾಗಿದೆ ಮೇಲಿನ ಸಾಲುಗಳಿಂದ ಚಿತ್ರಗಳನ್ನು ನೋಡುವುದಾದರೆ ಸ್ತ್ರೀಯರೊಂದಿಗೆ ಅರಸನು ವಿನೋದವಾಡುತ್ತಿರುವ ದೃಶ್ಯವಿದಾಗಿದ್ದು ಮೂರು ಕಮಾನಿನ ಮಂಟಪದಡಿಯಲ್ಲಿ ರಾಜನೂ ಹಾಗೂ ಸ್ತ್ರೀಯು ಕೂತಿರುವುದು ವಿಮಾನದಲ್ಲಿ ಸಾಗುತ್ತ ಸ್ತ್ರೀಯೊಬ್ಬಳಿಗೆ ಕೈ ಮಾಡುತ್ತಿರುವುದು ಅರಸನು ಕಾಯಿಲೆಯಿಂದ ಬಳಲಿ ಮಲಗಿರುವುದು ಹಿಂಭಾಗದಲ್ಲಿ ವೈದ್ಯರು ದಾಸಿಯರು ಸೇವೆ ಮಾಡುತ್ತಿರುವುದು ಮುಂಭಾಗದಲ್ಲಿ ರಾಜ ಪ್ರಮುಖರು ಕೈತೋರಿಸಿ ಮಾತನಾಡುತ್ತಿರುವುದು ರಾಜನು ತೀರ್ಥಂಕರರ ಒಳಗೆ ಹೋಗಿ ಶರಣಾಗುತ್ತಿರುವುದು ಇವುಗಳು ಮೊದಲ ಸಾಲಿನ ಚಿತ್ರಗಳಾಗಿವೆ.

ಎರಡನೇ ಸಾಲಿನಲ್ಲಿ ಪದ್ಮಾಸನದ ಮೇಲೆ ತೀರ್ಥಂಕರರು ಕುಳಿತಿದ್ದು ರಾಜಪರಿವಾರದವರು ಸಾಮ್ಯಾನ್ಯರು ಬೇಟೆಗೆ ಬರುತ್ತಿರುವುದು ರಾಜ ಸಭೆಯಲ್ಲಿ ಚರ್ಚೆ ನಡೆಯುತ್ತಿರುವ ದೃಶ್ಯ ರಾಜನು ಅಶ್ವವನ್ನೇರಿ ಹೋಗುತ್ತಿರುವ ದೃಶ್ಯ ಸಾಲು ಇದಾಗಿದೆ ಮೂರನೆ ಸಾಲಿನಲ್ಲಿ ಜನ ಸಾಮಾನ್ಯರ ಮೇಲೆ ಹಾಗೂ ಸಾಕುಪ್ರಾಣಿ, ಕುದುರೆಗಳ ಮೇಲೆ ಎರಡು ಆನೆಗಳು ಎರಗಿ ತಮ್ಮ ಪುಂಡಾಟವನ್ನು ಪ್ರದರ್ಶಿಸುತ್ತಿರುವುದು ನಂತರದ ಚಿತ್ರದಲ್ಲಿ ಸೊಂಡಲಿನಿಂದ ಎಸೆಯುತ್ತಿರುವುದು ಕಾಲಿನಲ್ಲಿ ತುಳಿಯುತ್ತಿರುವುದು ಮೇಲಿಂದ ರಾಜಭಟರು ಈಟಿಯಿಂದ ತಿವಿಯುತ್ತಿರುವುದು ಕಟ್ಟಡವನ್ನು

ಕೆಡವಿ ಮರವನ್ನು ಜನಸಾಮಾನ್ಯರ ಮೇಲೆ ಬೀಳಿಸುತ್ತಿರುವುದು. ಇದಾದ ನಂತರ ನಾಗದೇವನಿಂದ ಸ್ತ್ರೀಯೊಬ್ಬಳು ವರಪಡೆಯುತ್ತಿರುವ ದೃಶ್ಯ ಮನುಷ್ಯನನ್ನು ಕೊಲ್ಲುತ್ತಿರುವ ಆನೆಯ ಮೇಲೇರಿ ರಾಜನು ಆನೆಯನ್ನು ಪಳಗಿಸಿ ಕಾಲನ್ನು ಕಟ್ಟುತ್ತಿರುವ ದೃಶ್ಯ ಹೀಗೆ ನಾಗಕುಮಾರನ ಪೂರ್ಣ ಮಾಹಿತಿಯನ್ನು ಸಾರುವ ಚಿತ್ರಗಳು ಇದಾಗಿವೆ.

ಇದಾದ ಮೇಲೆ ಇನ್ನೊಂದು ಅಂಕಣದಲ್ಲಿಯೂ ಇದೇ ನಾಗಕುಮಾರನ ಚರಿತ್ರೆಯು ಮುಂದುವರೆಯುವುದು ಇಲ್ಲಿ ಯುದ್ಧದ ಸನಿವೇಶವಿದ್ದು ರಥಗಳನ್ನೇರಿ ಹಾಗೂ ವಿಮಾನಗಳಿಂದಲೂ ಬಾಣಗಳನ್ನು ಬಿಡುತ್ತಿರುವ ದೃಶ್ಯಗಳು ಈ ಚಿತ್ರಗಳನ್ನು ಕಂಡುಬರುತ್ತದೆ ಒಟ್ಟಾರೆಯಾಗಿ ಎರಡು ಅಂಕಣಗಳಲ್ಲಿ ನಾಗ ಕುಮಾರನ ಚಿತ್ರಗಳಿದು ಅತಿಮನಮೋಹಕವಾಗಿವೆ ಅಲ್ಲದೆ ಸ್ವಲ್ಪವೂ ಹಾಳಾಗದೆ ತುಂಬಾ ಸುರಕ್ಷಿತವಾಗಿ ಈ ಚಿತ್ರಗಳನ್ನು ನೋಡಿಕೊಳ್ಳಲಾಗಿದೆ ಈ ಚಿತ್ರಗಳಲ್ಲಿ ಹೆಚ್ಚಾಗಿ ಕಡು ನೀಲಿ ಗಾಡ ಕೆಂಪು ಬಿಳಿ ವರ್ಣಗಳನ್ನು ಇಲ್ಲಿ ನೋಡಬಹುದಾಗಿದ್ದು ಮೈಸೂರು ಶೈಲಿಯ ಚಿತ್ರಗಳಿವಾಗಿವೆ ಇದೇ ರೀತಿಯ ಚಿತ್ರಗಳನ್ನು ಇದೇ ಕಾಲವಾನ ಸೀಬಿಯ ಶ್ರೀ ನರಸಿಂಹಸ್ವಾಮಿಯ ದೇವಾಲಯದಲ್ಲಿಯೂ ಕಾಣಬಹುದು.

ಪಶ್ಚಿಮ ಬಲಗೋಡೆಯ ಮೇಲಿನ ಚಿತ್ರಗಳು

ನಾಗಕುಮಾರ ಚರಿತ್ರೆಯ ಉನ್ನುಳಿದ ಭಾಗದ ಚಿತ್ರಗಳನ್ನು ಪಶ್ಚಿಮ ಗೋಡೆಯ ಎಡ ಅಂಕಣದಲ್ಲಿ ರಚಿಸಲಾಗಿದು ಹಿಂದಿನ ಅಂಕಣದ ಮುಂದುವರೆದ ಭಾಗ ಇದಾಗಿದ್ದು ಇಲ್ಲಿಯೂ ಸಹ ಯುದ್ದದ ಚಿತ್ರಗಳನ್ನು ಕಾಣಬಹುದಾಗಿದೆ ಮೊದಲ ಸಾಲಿನಲ್ಲಿ ಯೋದರು ಯುದ್ದಕ್ಕೆ ಹೊರಟಿದ್ದು ಜೈನ ತೀರ್ಥಂಕರನ ದೇವಾಲಯದಲ್ಲಿ ಅಪ್ಪಣೆಯನ್ನು ಪಡೆಯುತ್ತಿರುವುದು ಈ ಮಂಟಪಗಳ ಸುತ್ತಲೂ ನೀರಿದ್ದು ಅಲ್ಲಿ ಜಲಚರಗಳನ್ನು ತೋರಿಸಲಾಗಿದೆ ಮೊದಲನೇ ಸಾಲಿನ ಎರಡನೇ ಹಂತದಲ್ಲಿ ಗಗನದಲ್ಲಿ ರಾಕ್ಷಸರ ನಡುವೆ ಯುದ್ದ ಮಾಡುತ್ತಿರುವಂತೆ ತೋರುವ ದೃಶ್ಯ ಅದರ ಕೆಳಭಾಗದಲ್ಲಿ ರಥದಲ್ಲಿ ಕೂತು ಯುದ್ದಮಾಡುತ್ತಿರುವ ದೃಶ್ಯ.

ಇದರ ಕೆಲಭಾಗದಲ್ಲಿ ಯುದ್ದವನ್ನು ಮುಗಿಸಿ ಅರಮನೆಗೆ ಹಿಂದಿರುಗಿರುವುದು ಇಲ್ಲಿ ಮೂರು ಹಂತಸ್ಥಿನ ಮಹಡಿ ಮನೆಯನ್ನು ಕಾಣಬಹುದು ಇದರ ನಡುವೆ ನೀರಿನ ಚಿಲುಮೆಯನ್ನು ಸಹ ಕಾಣಬಹುದು ಈ ದೃಶ್ಯಗಳು ಚಿತ್ರಗಳ ಕಾಲಮಾನಕ್ಕೆ ಪುಷ್ಟಿನೀಡುತ್ತವೆ ಇದಾದ ಬಳಿಕ ಸ್ತ್ರೀಯರ ಹಲವು ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ ಕೊನೆಯಲ್ಲಿ ರಾಜಪರಿವಾರದವರು ತೆರಳಿ ಜೈನ ಮುನಿಯ ಮುಂದೆ ಮಂಡಿಯೂರಿ ತಲೆಬಾಗಿರುವ ದೃಶ್ಯಗಳನ್ನು ನಾವಿಲ್ಲಿ ಕಾಣಬಹುದಾಗಿದೆ ಇವುಗಳ ನದುವಿನ ಪಟ್ಟಿಗಳಲ್ಲಿ ಹೂ ಬಳ್ಳಿಯ ವಿನ್ಯಾಸಗಳನ್ನು ಕಾಣಬಹುದಾಗಿದೆ.

ಇದರ ಕೊನೆಯ ಪಟ್ಟಿಯಲ್ಲಿ ಜೈನ ತೀರ್ಥಂಕರರ ಮಂದಿರವಿದ್ದು ಬೇಡ ನಾಯಕನೊಬ್ಬನು ಬಂದು ನಮಸ್ಕರಿಸುತ್ತಿರುವ ದೃಶ್ಯಗಳನ್ನು ನಾವಿಲ್ಲಿ ಕಾಣಬಹುದು ಅಲ್ಲದೆ ಇಲ್ಲಿ ಮತ್ತೊಬ್ಬ ಬೇಡ ತುಪಾಕಿಯನ್ನು ಹಿಡಿದು ಪ್ರಾಣಿಗಳ ಮೇಲೆ ಗುಂಡಾರಿಸುತ್ತಿರುವುದನ್ನು ನಾವಿಲ್ಲಿ ಕಾಣಬಹುದಾಗಿದು ಸಾಕಷ್ಟು ಬಗೆಯ ಆನೆಗಳು ಜಿಂಕೆ, ಹುಲಿ, ಸಿಂಹ, ಹಂದಿಗಳು, ಮೊಲ, ನಾಯಿಗಳು ಕಾಡಿನಲ್ಲಿ ಸಂಚರಿಸುತ್ತಿದ್ದು ಅವುಗಳನ್ನು ಬೇಡರು ಬೇಟೆಯಾಡುವ ದೃಶ್ಯ ಇದಾಗಿದು ಇದೊಂದು ಕಾಡಿನ ದೃಶ್ಯವಾಗಿದ್ದು, ಇದೇ ರೀತಿಯ ಚಿತ್ರಗಳನ್ನು ಹಿರಿಯೂರಿನ ಶ್ರೀತೇರುಮಲ್ಲೇಶ್ವರ ದೇವಾಲಯದಲ್ಲಿ ಕಾಣಬಹುದಾಗಿದೆ ಈ ಚಿತ್ರಗಳಲ್ಲಿಯೂ ಸಹ ಹೆಚ್ಚಿನದಾಗಿ ಗಾಡ ನೀಲಿ, ಕೆಂಪು, ಕಂದು, ಬಿಳಿ ವರ್ಣಗಳನ್ನೇ ಹೆಚ್ಚು ಬಳಸಲಾಗಿದೆ.

ಚಿತ್ರ-೧. ಷಡ್ ಲೇಶ್ಯೆಗಳು

ಯಾರ ಮನ-ಮಚನ-ಕಾರ್ಯಗಳು ಕ್ರಿಯೆಗಳು ಮತ್ತು ಭಾವನೆಯು ವರ್ತನೆಯು ವೃತ್ತಿಗಳು, ಆಚಾರ, ವಿಚಾರ ವ್ಯವಹಾರಗಳು ನಡೆ-ನುಡಿಗಳು ಅಶುಭ-ಶುಭ, ದುಷ್ಟ-ರಿಷ್ಟ, ಅಧಮ-ಉತ್ತಮ, ಕ್ರೂರ-ಮೃದು, ಅಧರ್ಮ-ಧರ್ಮ ರೂಪದಿಂದ ಕೂಡಿರುವುದೊ ಅವುಗಳ ಸ್ಥಿತಿಯೇ ಲೇಶ್ಯೆಗಳು ಅಂದರೆ ಮನಸ್ಸಿನಲ್ಲಿ ವೃತ್ತಿಯಲ್ಲಿ ಕಂಡುಬರುವ ಕಂಡುಬರುವ ಪರಿಣಾಮಕ್ಕೆ ಲೇಶ್ಯೆ ಎನ್ನುತ್ತಾರೆ. ಎಲ್ಲಾ ಜೀವಿಗಳಲ್ಲೂ ಇವನ್ನು ಕಾಣಬಹುದು ಅವರವರ ಶುಭಶುಭ ಪರಿಣಾಮಗಳನ್ನು ತಿಳಿಸಲು ಕಪ್ಪು, ನೀಲಿ, ಬೂದು, ಹಳದಿ, ಕೆಂಪು, ಬಿಳಪು ಎಂಬ ಆರು ಬಣ್ಣಗಳಿಗೆ ಹೋಲಿಸಿದ್ದಾರೆ ಇವುಗಳಂತೆ ಕೆಲವರ ಭಾವನೆ ವರ್ತನೆಗಳು ಅತಿ ಗಾಢವಾಗಿ ಅಶುದ್ದವಾಗಿ ಒರಟಾಗಿರುತ್ತದೆ. ಕೆಲವು ಮೃದು ಶುಭ, ಶುದ್ಧವಾಗಿರುತ್ತದೆ ಇವೆಲ್ಲವೂ ಒಬ್ಬರಲ್ಲೆ ಕಂಡು ಬರುವುದಿಲ್ಲ ವಿವಿಧ ಪರಿಣಾಮದ ನಡೆ ನುಡಿಯ ಮನೋಭಾವದ ಜೀವಿಗಳನ್ನು ಗುರ್ತಿಸಲು ಇರುವ ಚಿಹ್ನೆಗಳೆ ಲೇಶ್ಯೆಗಳು

೧. ಕೃಷ್ಣ ಲೇಶ್ಯೆ(ಕಪ್ಪು)- ಕ್ರೂರ ಸ್ವಭಾವ

೨. ನೀಲ ಲೇಶ್ಯೆ(ನೀಲಿ)- ಒರಟು ಸ್ವಭಾವ

೩. ಕಾಪೋತ ಲೆಶ್ಯೆ(ಭೂದು)-ಅವಿನಯ ಸ್ವಭಾವ

೪. ಪೀತ ಲೇಶ್ಯೆ(ಹಲದಿ)-ಮೃದು ಸ್ವಭಾವ

೫. ಪದ್ಮಲೇಶ್ಯೆ(ಕೆಂಪು)-ಉತ್ತಮ ಗುಣ

೬. ಶುಕ್ಲ ಲೇಶ್ಯೆ(ಬಿಳುಪು)-ಶುದ್ದ ಸ್ವಭಾವ

ಇವುಗಳಲ್ಲಿ ಮೊದಲ ಮೂರು ಅಂದರೆ ಕೃಷ್ಣ, ನೀಲ, ಕಾಪೋತ ಲೇಶ್ಯೆಗಳು ಅಶುಭವು, ಮಕ್ಕ ಮೂರು ಅಂದರೆ ಪೀತ, ಪದ್ಮ, ಲೇಶ್ಯೆಗಳು ಶುಭವೂ ಶುಕ್ಲವು ಶುದ್ಧ ಸ್ವಭಾವವೂ ಆಗಿದೆ ಇವುಗಳಲ್ಲಿಯೂ ಕ್ರಮವಾಗಿ ಶುಭಾಶುಭ ಲೇಶ್ಯೆಗಳಲ್ಲಿ ಕನಿಷ್ಠ ಮಧ್ಯಮ, ಉತ್ತಮ ದರ್ಜೆಯ ಪರಿಣಾಮಗಳಾಗಿವೆ.

ಒಮ್ಮೆ ಈ ಆರು ಜನ ಸ್ನೇಹಿತರು ಎಲ್ಲಿಗೋ ವಿಹಾರ ಹೊರಟಿದ್ದರೂ ಅವರ ಸ್ವಾಭಾವವು ವಿವಿಧವಾಗಿದ್ದವು ಅವರು ದಾರಿಯಲ್ಲಿ ಒಂದು ನೇರಲೆ ಮರವನ್ನು ಕಂಡರು ಎಲ್ಲರೂ ಅದರ ಹಣ್ಣನ್ನು ತಿನ್ನಲು ಬಯಸಿದರು ಅವರಲ್ಲಿ ಒಬ್ಬನಾದ ಶುಕ್ಲನು ಕೆಳಗೆ ಬಿದ್ದ ಹಣ್ಣನ್ನು ಮಾತ್ರ ಆರಿಸಿ ತಿಂದನು ಎರಡನೆಯವನಾದ ಪದ್ಮನು ಮರದಲ್ಲಿ ಕೈಗೆ ಎಟರುವ ಹಣ್ಣನ್ನು ಕಿತ್ತು ತಿಂದು ಮೂರನೆಯವನಾದ ಪಿತನು ಮೇಲೇರಿ ಹಣ್ಣಿನ ಗೊಂಚಲನ್ನು ಕಿತ್ತು ಅದರಲ್ಲಿ ಹಣ್ಣಾಗಿದ್ದುದನ್ನು ತಿಂದು ಕಾಯಿಯನ್ನು ಬಿಸಾಡಿದನು ನಾಲ್ಕನೆಯವನು ಕಾಪೋತನು ದೊಡ್ಡದೊಡ್ಡ ರೆಂಬೆಗಳನ್ನು ಮುರಿದು ಹಣ್ಣು ತಿಂದನು ಐದನೆಯನಾದ ನೀಲನು ದೊಡ್ಡ ದೊಡ್ಡ ಕೊಂಬೆಗಳನ್ನು ಮುರಿದು ಹಣ್ಣು ತಿಂದನು ಆರನೆಯವನಾದ ಕೃಷ್ಣನು ತನಗೆ ಬೇಕಾಗಿದ್ದ ಕೆಲವೆರಡು ಹಣ್ಣುಗಳಿಗಾಗಿ ಆ ಮರದ ಬುಡವನ್ನೇ ಕತ್ತರಿಸಿ ಉರುಳಿಸಿ ಹಣ್ಣು ತಿಂದನು ಹೀಗೆ ಅವರವರ ಸ್ವಭಾವಕ್ಕನುಸಾರವಾಗಿ ಕೃತ್ಯವೆಸಗಿದರು ಕ್ರಮವಾಗಿ ಅವರ ಪರಿಣಾಮಗಳು ಶುಕ್ಲ, ಪದ್ಮ, ಪೀತ, ಕಾಪೋತ, ನೀಲ, ಕೃಷ್ಣ ಲೇಶ್ಯೆಗಳಿಂದ ಕೂಡಿದ್ದವು ಅವಕ್ಕೆ ತಕ್ಕಂತೆ ಅವರು ನಡೆದುಕೊಂಡರು.

ಪಶ್ಚಿಮ ಗೋಡೆಯ ಬಲಬದಿಯಲ್ಲಿರುವ ಈ ಚಿತ್ರವು ಮಾನವೀಯ ಮೌಲ್ಯಗಳ ಪ್ರತಿಕವಾಗಿದೆ ಈ ಚಿತ್ರದ ಹಿನ್ನೆಲೆಯಲ್ಲಿ ಬಿಳಿಯ ವರ್ಣವನ್ನು ತೋರಿಸಲಾಗಿದ್ದು ಆರು ಜನ ನೇರಳೇ ಮರವನ್ನು ಏರಿ ಹಣ್ಣುಗಲನ್ನು ತಿನ್ನುವ ದೃಶ್ಯವಿದಾಗಿದ್ದು ಇಲ್ಲಿ ನೋಡುಗನ ಬಲಭಾಗದ ಕೆಳಭಾಗದಲ್ಲಿ ಕಿರೀಟದಾರಿಯಾಗಿರುವ ಶುಕ್ಲನೆನ್ನುವ ವ್ಯಕ್ತಿಯು ಶುದ್ಧ ಸ್ವಭಾವದವನಾಗಿದ್ದು ಮೇಲಿಂದ ಬೀಳು ಫಲಗಳನ್ನು ಮಾತ್ರ ಸೇವಿಸುವುದಾಗಿ ತನ್ನಲ್ಲಿರುವ ಹೊದಿಕೆಯನ್ನು ಹಿಡಿದು ಎರಡೂ ಕೈಗಳಲ್ಲಿ ಚಾಚಿನಿಂತಿದ್ದಾನೆ ಎಡಭಾಗದಲ್ಲಿ ಮತ್ತೊಬ್ಬ ವ್ಯಕ್ತಿ ಇದ್ದು ಕೃಷ್ಣ ಲೇಶ್ಯೆ ಸ್ವಭಾವದವನಾಗಿದ್ದು ಕ್ರೂರ ಮನಸ್ಸಿನವನು ಈತನು ಕಪ್ಪು ಮಿಶ್ರಿತ ಬೂದು ವರ್ಣದಿಂದ ಇದ್ದು ಬಲಗಾಲನ್ನು ಮರದ ಮೇಲೆ ಇರಿಸಿ ಎರಡೂ ಕೈಗಳಿಂದ ಕೊದಳಿಯನ್ನು ಹಿದಿದು ಮರವನ್ನು ಕದಿಯುತ್ತಿದ್ದಾನೆ.

ಮರದ ಮೇಲಿನ ಎಡಭಾಗದಲ್ಲಿ ಮತ್ತೊಬ್ಬ ವ್ಯಕ್ತಿಯು ಕುಳಿತಿದ್ದು ಕಾಪೋತ ಲೇಶ್ಯೆದ ಒರಟು ಸ್ವಭಾವದವನಾಗಿದ್ದು ಬೂದು ಬಣ್ಣದಲ್ಲಿರುವನು ಇವನು ದೊಡ್ಡ ದೊಡ್ಡ ರೆಂಬೆಗಳನ್ನು ಮುರಿವಂತೆ ಕಲಾವಿದನು ತೋರಿಸಿದ್ದು ಅದರಲ್ಲಿರುವ ಹಣ್ಣುಗಳನ್ನು ತಿಂದು ಬೇಡದನ್ನು ಬಿಸಾಟುವ

ಪ್ರಕೃತಿ ಇವನದು ಇವನನ್ನು ಬೂದುವರ್ಣದಲ್ಲಿ ತೋರಿಸಲಾಗಿದ್ದು ಎಡಗೈಯನ್ನು ರೆಂಬೆಯ ಮೇಲೂರಿ ಬಲಗೈಯಿಂದ ಮತ್ತೊಂದು ರೆಂಬೆಯನ್ನು ಮುರಿಯುವಂತೆ ಕಲಾವಿದನನ್ನು ತೋರಿಸಿದ್ದಾನೆ ಇವನ ಕೆಳಭಾಗದಲ್ಲಿ ಕೆಂಪು ವರ್ಣದ ವ್ಯಕ್ತಿ ಕುಳಿತಿದ್ದು ಇವನನ್ನು ಪದ್ಮಲೇಶ್ಯೆ ಎಂದು ಇವನು ಉತ್ತಮ ಗುಣದವನೆಂದು ಹೇಳಲಾಗುವುದು ಈತನು ಮರದಲ್ಲಿ ಕೈಗೆಟಕುವ ಫಲಗಳನ್ನು ಮಾತ್ರ ಬಿಡಿಸಿಕೊಂಡು ಅವನ್ನು ಸೇವಿಸುತ್ತಿರುವನು ಇವನನ್ನು ಕೆಂಪು ವರ್ಣದಿಂದ ಚಿತ್ರಿಸಲಾಗಿದ್ದು ತಲೆಗೆ ಕೆಂಪು ರುಮಾಲನ್ನು ಸುತ್ತಿಕೊಂಡು ಎಡಗೈಯಿಂದ ಹಣ್ಣುಗಳನ್ನು ಕೀಳುವಂತೆ ತೋರಿಸಲಾಗಿದೆ.

ಬಲಬದಿಯ ಮರದ ಮೇಲಿರುವ ಪೀತ ಲೇಶ್ಯೆನು ಹಳದಿವರ್ಣದವನಾಗಿದ್ದು ಮೃದು ಸ್ವಾಭಾವಿ ಇವನು ಮೇಲಿನ ಹಣ್ಣಿನ ಗೊಂಚಲುಗಳನ್ನು ಕೀಳುತ್ತಿರುವಂತೆ ತೋರಲಾಗಿದ್ದು ತನ್ನ ಎಡಗೈಯಿಂದ ಗೊಂಚಲನ್ನು ಮುರಿಯುತ್ತಿರುವಂತೆ ತೋರಲಾಗಿದೆ ಹಳದಿವರ್ಣವಾದರೂ ಸಹ ಕಾಲಮಾನದ ಪ್ರಭಾವದಿಂದ ಮಾಸುಬಿಳಿವರ್ಣಕ್ಕೆ ತಿರುಗಿದೆ ಇವನ ಕೆಳಭಾಗದಲ್ಲಿ ನೀಲ ಲೇಶ್ಯನಿದ್ದು ಇವನು ಒರಟು ಸ್ವಭಾವದವನಾಗಿದ್ದಾನೆ ಕಲಾವಿದನು ಇವನನ್ನು ನೀಲಿವರ್ಣದಿಂದ ಚಿತ್ರಿಸಿದ್ದು ಎರಡೂ ಕೈಯಿಂದ ಕೊಡಲಿಯನ್ನು ಹಿಡಿದು ಹಣ್ಣಿಗಾಗಿ ಮರದ ರೆಂಬೆಯನ್ನು ಕತ್ತರಿಸುವಂತೆ ಇಲ್ಲಿ ತೋರಲಾಗಿದೆ.

ಒಟ್ಟಾರೆಯಾಗಿ ಈ ಚಿತ್ರದ ಹಿನ್ನೆಲೆಯಲ್ಲಿ ಬಿಳಿವರ್ಣದಿಂದ ತೋರಲಾಗಿದ್ದು ಕಂದು ವರ್ಣದ ವೃಕ್ಷವನ್ನು ಹಾಗೂ ಹಸಿರು ಎಲೆಗಳನ್ನು ಹಳದಿ ಹಣ್ಣುಗಳನ್ನು ಇಲ್ಲಿ ತೋರಿಸಲಾಗಿದೆ ಗಾಢ ಕಂದು ವರ್ಣದಿಂದ ಬಾಹ್ಯರೇಖೆಗಳನ್ನು ಎಳೆಯಲಾಗಿದ್ದು ಈ ಚಿತ್ರವು ನೋಡಲು ಸೊಗಸಾಗಿದ್ದು ಈ ಚಿತ್ರವನ್ನು ಜೈನ ಹಲವು ಕಡೆಗಳಲ್ಲಿ ಬರೆಸಿರುತ್ತಾರೆ ಇದೊಂದು ವ್ಯಕ್ತಿತ್ವದ ನೀತಿಪಾಠ ಹೇಳುವ ಚಿತ್ರವಾಗಿದ್ದು ಜನಸಾಮಾನ್ಯಗಿರೆ ಬಹುಬೇಗನೆ ಅರ್ಥವಾಗುತ್ತದೆ ಆರು ಲೇಶ್ಯೆಗಳನ್ನು ಆರು ಮನುಷ್ಯರ ವ್ಯಕ್ತಿತ್ವಕ್ಕೆ ಒಲಿಸಿ ಚಿತ್ರರಚನೆ ಮಾಡಲಾಗಿದ್ದು ಸ್ವಲ್ಪವೂ ಹಾಳಾಗದೆ ನೋಡಲು ಸಿಗುತ್ತದೆ.

ಈ ಚಿತ್ರದ ಬಲಬದಿಯ ಅಂಕಣದಲ್ಲಿಯೂ ಚಿತ್ರಗಳಿದ್ದು ಇವುಗಳ ಕುರಿತಂತೆ ಯಾವುದೇ ಮಾಹಿತಿಗಳು ಲಭ್ಯವಾಗಿರುವುದಿಲ್ಲ ಆದರೆ ಇದರ ಅರ್ಧದಿಂದ ಕೆಳಭಾಗದ ಚಿತ್ರಗಳು ಐತಿಹಾಸಿಕ ಚಿತ್ರವಾಗಿದ್ದು ಇಲ್ಲಿ ನಡೆಯುತ್ತಿದ್ದ ರಥೋತ್ಸವದ ದೃಶ್ಯವಾಗಿದೆ ಎಂದು ಇಲ್ಲಿಯ ವೃದ್ಧಗಳು ಹೇಳುತ್ತಾರೆ. ಇದರ ಕೆಳಭಾಗದಲ್ಲಿ ಹೂ ಬಳ್ಳಿಯ ವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದು.

ಈ ಚಿತ್ರಗಳ ಮೇಲಿನ ಸಾಲುಗಳಲ್ಲಿ ತೀರ್ಥಂಕರರ ಸಾಲಿದು ೨೪ ತೀರ್ಥಂಕರರನ್ನು ಇಲ್ಲಿ ತೋರಿಸಲಾಗಿದೆ ಅಲ್ಲಲ್ಲಿ ಚಿತ್ರಗಳ ಚಕ್ಕಳಿಗಳು ಎದ್ದುಹೋಗಿದೆ ಎರಡನೇ ಸಾಲಿನಲ್ಲಿ ರಾಜನು ದೇವತೆಗಳಿಗೆ ಕೈ ಮುಗಿಯುತ್ತಿರುವ ಚಿತ್ರ ಸ್ತ್ರೀಯರೊಂದಿಗೆ ಬಣ್ಣದೋಕುಳಿಯಾಡುತ್ತಿರುವ ಚಿತ್ರ

ಉದ್ಯಾನವನದಲ್ಲಿ ಸರೋವರದ ಬಳಿಯಲ್ಲಿ ರಾಜನು ಸ್ತ್ರೀಯರೊಂದಿಗೆ ವಿಹರಿಸುತ್ತಿರುವ ಚಿತ್ರ ರಾಜತಂತ್ರ ವ್ಯವಸ್ಥೆಯಲ್ಲಿ ರಾಜನು ರಾಜವರ್ಗದೊಂದಿಗೆ ಮಾತನಾಡುವ ಚಿತ್ರ ಜೈನ ಸ್ತ್ರೀ ಸನ್ಯಾಸಿಗಳ ಚಿತ್ರ ರಾಜಪರಿವಾರ ಉತ್ಸವಕ್ಕೆ ತೆರಳುತ್ತಿರುವ ಚಿತ್ರ ಇಲ್ಲಿ ರಾಜರು ಆನೆಯ ಮೇಲೆ ಸಾಗುತ್ತಿದ್ದು ಹಿಂದೆ ರಾಜಸ್ತ್ರೀಯರು ಪಲ್ಲಕ್ಕಿಯಲ್ಲಿ ಹೊತ್ತುತರುತ್ತಿರುವುದು ಇದನ್ನು ಕಟ್ಟಡಗಳ ಕಮಾನುಗಳಿಂದ ನೋಡುತ್ತಿರುವ ಜನಸಾಮಾನ್ಯರು ಛತ್ರಿಚಾಮರಗಳನ್ನು ಹಿಡಿದುನಿಂತಿರುವ ಸೇವಕರು ಕತ್ತಿ, ಈಟಿ, ಗುರಾಣಿಗಳನ್ನು ಹಿದಿದ ಭಟರು ಕಹಳೆಯನ್ನು ಹಿಡಿದು ಊದುತ್ತಿರುವ ದೃಶ್ಯ ಇದಾಗಿದ್ದು ವಿಫಲ ಸಂಯೋಜನೆಯ ಸಂಕೀರ್ಣ ಚಿತ್ರ ಈ ಚಿತ್ರವನ್ನು ಸರಿಯಾಗಿ ಗಮನಿಸಿದಾಗ ಇಂದಿಗೂ ನಡೆಯುವ ದಸರ ಉತ್ಸವದ ಛಾಯೆ ಈ ಚಿತ್ರದಲ್ಲಿ ಕಂಡುಬರುತ್ತದೆ ಇದರ ಕೆಳಭಾಗದಲ್ಲಿಯೇ ರಥದ ಉತ್ಸವವಿದ್ದು ಇದನ್ನು ಆಚರಿಸಲು ರಾಜವರ್ಗದವರು ಸಾಗುತ್ತಿರಬಹುದು ಎಂದು ಹೇಳಲಾಗುವುದು.

ಚಿತ್ರ-೨. ರಥೋತ್ಸವದ ಚಿತ್ರ

ಕೆಳಸಾಲಿನಲ್ಲಿ ರಥವನ್ನು ಎಳೆಯುತ್ತಿರುವ ಚಿತ್ರವಿದು. ಈ ಚಿತ್ರದಲ್ಲಿ ಕಲಾವಿದರ ನುರಿತ ಬುದ್ಧಿ ಹಾಗೂ ಕೈಗಳು ಕೆಲಸಮಾಡಿರುವುದು ಕಂಡುಬರುತ್ತದೆ. ಮೂರು ಅಂತಸ್ತಿನ ರಥವಿದ್ದು ಇದರ ಮೇಲೆ ಧ್ವಜಗಳನ್ನು ಇಡಲಾಗಿದೆ ಮೂರನೆ ಹಂತದಲ್ಲಿ ದೇವತೆಯು ಇದ್ದು ಇಬ್ಬರು ಪುರೋಹಿತರು ನಿಂತಿರುವರು ಕೆಳಭಾಗದಲ್ಲಿ ರಥದ ಚಕ್ರವನ್ನು ತಳ್ಳಲು ಮರದ ಕೊರಡಿನ ಸಹಾಯವನ್ನು ಪಡೆದು ಮೇಲಿಂದ ಕೆಳಗದು ಮುತ್ತಿರುವ ಮೂವರು ಪುರುಷರು ಇವರ ಕೆಳಗೆ ಇಬ್ಬರು ಪುರುಷರು ಇದನ್ನು ಕೆಳಗೆಳೆಯುತ್ತಿರುವ ರಥದ ಹಿಂದೆ ಹಾಗೆ ಒಂಟೆಗಳನ್ನು ಕಾಣಬಹುದಾಗಿದೆ. ಛತ್ರಿ ಚಾಮರಗಳನ್ನು ಹಿಡಿದಿರುವ ಸೇವಕರು ಜೈನ ಮುನಿಗಳಂತೆ ಕಾಣುವ ಇಬ್ಬರು ಯತಿಗಳು ಕೈಗಳನ್ನು ಹಸ್ತಲಾಗತಿಸುತ್ತಿರುವಂತೆ ತೋರಲಾಗಿದ್ದು ಕೆಂಪು ವಸ್ತ್ರವನ್ನು ಇವರು ಧರಿಸಿದ್ದಾರೆ ಇವರು ಕಾಲಿಗೆ ಮರದ ಪಾದಿಕೆಗಳನ್ನು ಬಳಸಿರುವುದ ಇಲ್ಲಿ ಕಂಡುಬರುವುದು ಇವರು ಜೈನರೆ ಎಂದು ಹೇಳುವುದಕ್ಕೂ ಹಾಗೂ ಈ ಚಿತ್ರವು ಶ್ರವಣಬೆಳಗೊಳದಲ್ಲಿಯ ಶ್ರೀಗಳ ಪರಂಪರೆಯನ್ನು ತೋರುತ್ತದೆ.

ಉನ್ನುಳಿದಂತೆ ರಥಕ್ಕೆ ಹಗ್ಗವನ್ನು ಕಟ್ಟಿಕೊಂಡು ಜನಸಾಮಾನ್ಯರು ಎಳೆಯುತ್ತಿದ್ದು ಇನ್ನು ಕೆಲವರು ಕೈಯಲ್ಲಿ ಕೋಲುಗಳನ್ನು ಹಿಡಿದು ರಥವನ್ನು ಎಳೆಯುವಂತೆ ಆದೇಶಿಸುತ್ತಿರುವರು ಯತಿಗಳ ಮುಂದಿನ ಸಾಲಿನಲ್ಲಿ ರಾಜ್ಯ ಲಾಂಚನಗಳು ಎರಡು ಸಿಂಹಲಾಂಚನಗಳೆರಡು, ಶಂಕ, ಚಕ್ರ, ಮೀನಿನ ಲಾಂಛನಗಳೆರಡುಗಳನ್ನು ಹಾಗೂ ಎರಡು ಧ್ವಜಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇದರ ಕೆಳಭಾಗದಲ್ಲಿ ತಾಳ, ತಂಬೂರಿ, ಶಹನಾಯಿ, ತಪತೆ, ಜಾಗಡೆಗಳನ್ನು ಹಿಡಿದು ಸಾಗುತ್ತಿದ್ದು ಸ್ತ್ರೀಯರು ನೃತ್ಯ ಮಾಡುತ್ತಿರುವ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ ರಥ ಎಳೆಯುವವರ

ಮುಂದೂ ಸಹ ರಣಕಹಳೆ ವೀರ ಕಹಳೆ ಶಹನಾಯಿ ಬೀಗಲ್ ಗಳಂತಹ ಹಲವು ವಾದ್ಯ ಉಪಕರಣಗಳನ್ನು ಬಾರಿಸುತ್ತಿರುವುದು ಕಂಡು ಬರುತ್ತದೆ.

ಇದರ ಮುಂದಿನ ಸಾಲಿನಲ್ಲಿ ಜಾತ್ರೆಯಲ್ಲಿ ವ್ಯಾಪಾರ ಮಾಡುತ್ತಿರುವ ದೃಶ್ಯವಿದ್ದು ಮೇಲಿನ ಸಾಲಿನಲ್ಲಿ ಬಟ್ಟೆಯನ್ನು ವ್ಯಾಪಾರ ಮಾಡುತ್ತಿರುವ ದಂಪತಿಗಳು ಹಾಗೂ ವ್ಯಾಪಾರ ಅದರ ಮುಂದೆ ಕುಂಬಳ ಕಾಯಿ, ಬಾಳೆಹಣ್ಣು, ತರಕಾರಿ ಮಾರುತ್ತಿರುವ ವ್ಯಾಪಾರಿಯು ತಕ್ಕದೆ ಹಿಡಿದಿದ್ದು ಐದು ಸ್ತ್ರೀಯರು ವ್ಯವಹರಿಸುತ್ತಿದ್ದಾರೆ ಇದರ ಮುಂದಿನ ಚಿತ್ರದಲ್ಲಿ ವ್ಯಾಪಾರಿಯೊಬ್ಬನು ತಕ್ಕಡಿಯನ್ನು ಜೋತುಹಾಕಿ ಮಡಿಕೆ ಕುಡಿಕೆಗಳಲ್ಲಿ ಏನೇನೋ ಮಾರುತ್ತಿರುವುದು ಒಬ್ಬ ಪುರುಷನು ಹಾಗೂ ಮೂವರು ಸ್ತ್ರೀಯರು ವ್ಯವಹರಿಸುತ್ತಿರುವುದನ್ನು ನಾವಿಲ್ಲಿ ಕಾಣಬಹುದಾಗಿದೆ ಈ ಸಾಲಿನ ಹಿನ್ನೆಲೆಯಲ್ಲಿ ಗಾಡನೀಲಿ ವರ್ಣವನ್ನು ಹಿನ್ನೆಲೆಯಾಗಿ ತೋರಿಸಲಾಗಿದೆ.

ಇದರ ಕೆಳಸಾಲಿನಲ್ಲಿ ಪುರುಷ ಮತ್ತು ಸ್ತ್ರೀಯರು ತಮ್ಮ ಮಕ್ಕಳನ್ನು ಜಾತ್ರೆಯಲ್ಲಿ ಕರೆದೊಯ್ಯುವ ಚಿತ್ರವಿದ್ದು ಸ್ತ್ರೀಯರು ಸೊಂಟದಲ್ಲಿ ಕೂರಿಸಿಕೊಂಡಿದ್ದರೆ ಪುರುಷರು ಮಗುವಿನ ಕೈಹಿಡಿದಿದ್ದಾರೆ ಇದರ ಮುಂದೆ ವ್ಯಾಪಾರಿಯು ಯಾವುದೋ ಕಾಯಿ ಮಾಡುತ್ತಿರುವುದು ಪಕ್ಕದಲ್ಲಿ ಒಬ್ಬನ ಕಾಯನ್ನು ಮತ್ತೊಬ್ಬ ಕದಿಯಲು ಹೋದಾಗ ಆ ವ್ಯಕ್ತಿಯು ಕದಿಯಲು ಬಂದವನ ಜುಟ್ಟನ್ನು ಹಿಡಿದು ಕೈಯನ್ನು ಹಿಡಿಯುತ್ತಿರುವುದು ಈ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕಳ್ಳನನ್ನು ಹಿಡಿದಿರುವ ವ್ಯಕ್ತಿಯು ಸಿಟ್ಟಿನಿಂದ ತುಟಿಯನ್ನು ಕಚ್ಚುತ್ತಿರುವ ಚಿತ್ರವನ್ನು ಇಲ್ಲಿ ರಚಿಸಲಾಗಿದೆ ಇವರ ಮುಂದೆ ಸಂಗೀತಗಾರರು ತಂಬೂರಿಗಳನ್ನು ಹಿಡಿದು ನಿಂತಿರುವುದು ಮತ್ತೊಬ್ಬ ಸ್ತ್ರೀಯೊಂದಿಗೆ ಮಾತನಾಡುತ್ತಿರುವಂತೆ ಚಿತ್ರದಲ್ಲಿ ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದ್ದು ಹೆಚ್ಚಾಗಿ ನೀಲಿ ಬಿಳಿವರ್ಣಗಳನ್ನು ಬಳಸಿ ಚಿತ್ರವನ್ನು ಸಂಪೂರ್ಣಗೊಳಿಸಲಾಗಿದೆ.

ಇದರ ಕೆಳಸಾಲಿನಲ್ಲಿ ಸಹ ವ್ಯಾಪಾರದ ದೃಶ್ಯಗಳಿದ್ದು ಸೇರಿನಲ್ಲಿ ಅಳೆದು ಕೊಡುತ್ತಿರುವ ಮಹಿಳೆ ಕಾಲುಂಗುರವನ್ನು ತೊಡಿಸುತ್ತಿರುವ ಮಹಿಳೆ ಬಳೆಗಳನ್ನು ತೊಡಿಸುವ ಮಹಿಳೆಯರನ್ನು ನಾವಿಲ್ಲಿ ಕಾಣಬಹುದಾಗಿದೆ ಒಟ್ಟಾರೆಯಾಗಿ ೧೭ನೇ ಶತಮಾನದ ಸುಮಾರಿಗೆ ರಚಿತವಾಗಿರುವ ಈ ಚಿತ್ರ ಶ್ರವಣಬೆಳಗೊಳದ ಶ್ರೀಮಠ ಚಿತ್ರಗಳು ಮೈಸೂರು ಶೈಲಿಯ ಹಾಗೂ ವಿಜಯನಗರ ಶೈಲಿಯ ಮತ್ತು ಮೊಘಲ್ ಶೈಲಿಯ ಸಂಮಿಶ್ರಣ ಚಿತ್ರಗಳಾಗಿದ್ದು ನೋಡಲು ಮನಮೋಹಕವಾಗಿದೆ ಅಲ್ಲದೆ ಜೈನ ಪರಂಪರೆಯ ಚಾರಿತ್ರಿಕ ಹಾಗೂ ಪೌರಾಣಿಕ ದಾಖಲೆಗಳ ಸಚಿತ್ರರೂಪ ಈ ಚಿತ್ರಕಲೆಯಾಗಿದ್ದು ಇವುಗಳ ಉಳಿವಿಗಾಗಿ ನಮ್ಮ ಸರಕಾರ ಸಂಘಸಂಸ್ಥೆಗಳು ಈ ಮಠಗಳಿಗೆ ಆರ್ಥಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ನೆರವಾಗಿ ಈ ಜೈನ ಚಿತ್ರ ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಕೈಯಾಕಬೇಕಿದೆ.

ಮೂಡುಬಿದರೆಯ ಜೈನ ಮಠ

ದಕ್ಷಿಣ ಕನ್ನಡ ಜಿಲ್ಲೆ ತುಳುನಾಡಿನ ಒಂದು ಭಾಗವಾಗಿತ್ತು ಈ ನಾಡು ಸಹ್ಯಾದ್ರಿ ಬೆಟ್ಟಗಳ ಸಾಲಿನಲ್ಲಿ ಗೋಕರ್ಣದಿಂದ ಚಂದ್ರಗಿರಿವರೆಗೆ ಹಬ್ಬಿತ್ತು ಇದು ಈಗ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಹಂಚಿಹೋಗಿದೆ ಈ ಜಿಲ್ಲೆಗೆ ಜೈನ ಧರ್ಮ ಎಂದು ಬಂದಿತೆಂಬುದನ್ನು ಹೇಳುವುದು ಕಷ್ಟ ಖ್ಯಾತ ಕವಿ ಗೋವಿಂದಪೈಯವರು ಅದು ಮೂರನೇ ಶತಮಾನದಲ್ಲಿ ಇರಬೇಕೆಂದು ಊಹಿಸುತ್ತಾರೆ. ಶಾಸನಗಳ ಆಧಾರದ ಮೇಲೆ ಅದು ಕ್ರಿ.ಶ.೮ನೇ ಶತಮಾನದಲ್ಲಿ ಇಲ್ಲಿ ಸ್ಥಿರವಾಗಿ ನೆಲೆಸಿತ್ತೆಂದು ಹೇಳಬಹುದು ಆದರೆ ಕ್ರಿ.ಶ೭೧೪ರಲ್ಲಿ ಮೂಡಬಿದರೆ ಶ್ರಾವಕರೆಲ್ಲ ಸೇರಿ ಇಲ್ಲಿನ ಪ್ರಾಚೀನ ಗುರು ಬಸದಿಯನ್ನು ಕಟ್ಟಿಸಿದರು ಹಿಂದೆ ಈ ಸ್ಥಳದಲ್ಲಿ ಜನವಸತಿ ಇರಲಿಲ್ಲ ಆಗ ಜೈನ ಯತಿಯಳೊಬ್ಬರು ಇಲ್ಲಿಗೆ ಬಂದಾಗ ಮೃಗಖಗ ಆಟವಾಡುತ್ತಿದ್ದುದನ್ನು ಕಂಡರಂತೆ ಆಗ ಬಿದುರುಗಳನ್ನು ಕಡಿಸಿ ನೋಡಿದಾಗ ಶ್ರೀಪಾರ್ಶ್ವನಾಥ ಮೂರ್ತಿ ಸಿಕ್ಕಿತಂತೆ ಅಲ್ಲಿಯೇ ಶ್ರಾವಕರ ಹೆಸರಿನಿಂದ ಈ ಮಂದಿರವನ್ನು ಕಟ್ಟಲಾಯಿತು ಆದ್ದರಿಂದ ಇದಕ್ಕೆ ಗುರು ಹೆಸರು ಬಂದಿತು ಈಗಲೂ ಇಲ್ಲಿಯೇ ಗುರುಗಳಿಗೆ ಪಟ್ಟಾಭಿಷೇಕ ಆಗುವುದು ಇಲ್ಲಿನ ಶ್ರೀಪಾರ್ಶ್ವನಾಥ ಎರಡು ಸರ್ಪಗಳ ಒಂದು ಫಣಾಣಿಯಿಂದ ಅಲಂಕೃತವಾದ ೧೨ ಅಡಿ ಎತ್ತರದ ಭವ್ಯಮೂರ್ತಿಯಾಗಿದೆ.

ಧವಲ, ಜಯಧವಲ ಮತ್ತು ಮಹಾಧವಲ ಗ್ರಂಥಗಳನ್ನು ಹಾಗೂ ಬಂಗಾರ, ಪಚ್ಚೆ, ರತ್ನ, ಸ್ಪಟಿಕ, ನೀಲ, ಮಾಣಿಕ್ಯ, ವಜ್ರ, ಹವಳ ಮತ್ತು ಪುಷ್ಯರಾಗಗಳಿಂದ ಮಾಡಿದ ಅಮೂಲ್ಯ ಜಿನ ಪ್ರತಿಮೆಗಳನ್ನು ಸಂಗ್ರಹಿಸಿಡಲಾಗಿದೆ. ಮಂಗಳೂರಿನಿಂದ ೩೬ ಕಿಲೋಮೀಟರ್ ದೂರವಿದ್ದು ಮಂಗಳೂರು ತಾಲ್ಲೂಕಿಗೆ ಸೇರುತ್ತದೆ ಮೂಡಬಿದರೆಯು ಶ್ರೀಮಂತ ಇತಿಹಾಸವನ್ನು ಹೊಂದಿದ್ದು ಜೈನಕಾಶಿ ಎಂದು ಪ್ರಸಿದ್ದವಾಗಿದೆ ಇಲ್ಲಿ ೧೮ ದೇವಾಲಯಗಳು, ೧೮ ಜೈನ ಬಸಿದಿಗಳು ಇವೆ ಇಲ್ಲಿಯ ಸಾವಿರ ಕಂಬದ ಬಸದಿಯ ವಿಶ್ವಪ್ರಸಿದ್ದವಾದುದು ಇಲ್ಲಿಯ ಗುರು ಬಸದಿಯು ಜೈನರ ಪವಿತ್ರ ಗ್ರಂಥಗಳಾದ ಶ್ರೀಧವಳ ಮತ್ತು ಮಹಾ ಧವಳಗಳ ಹಸ್ತಪ್ರತಿಗಳನ್ನು ಹೊಂದಿದ್ದು ಆ ಕಾರಣದಿಂದ ಸಿದ್ಧಾಂತ ಬಸದಿ ಎಂದೂ ಕರೆಯಲ್ಪಡುತ್ತದೆ. ಇಲ್ಲಿರುವ ಜೈನ ಮಠವು ಶ್ರವಣಬೆಳಗೊಳದ ಶಾಖಾಮಠ ಮಠವೆಂದು ಹೇಳಲಾಗುತ್ತದೆ. ಸಾವಿರ ಕಂಬದ ಬಸದಿಯ ಮುಂಭಾಗದಲ್ಲಿ ಈ ಮಠವಿದ್ದು ಈ ಮಠದಲ್ಲಿ ಜೈನ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ.

ಮೂಡುಬಿದರೆಯ ಜೈನ ಮಠದಲ್ಲಿ ದೇವಾಲಯವಿದ್ದು ಇದರೊಳಗೂ ಚಿತ್ರಗಳಿದ್ದು ಇವನ್ನು ಛಾಯಾಚಿತ್ರ ತೆಗೆಯಲು ಅನುಮತಿ ಇರುವುದಿಲ್ಲ ಆದರೆ ಅದರ ಮುಂಭಾಗದ ಗೋಡೆಯ ಮೇಲೆ ದೇವಾಲಯದ ಎಡ ಹೊರಗೋಡೆಯ ಮೇಲೆ ಮುಂದಿರುವ ಕಟ್ಟಡದ ಮೇಲೆ ಹೀಗೆ

ನಾಲ್ಕು ಕಡೆಗಳಲ್ಲಿ ನಾವು ಚಿತ್ರಗಳನ್ನು ಕಾಣಬಹುದಾಗಿದೆ ಅವುಗಳೆಂದರೆ ದ್ವಾರಪಾಲಕರು, ನಂದೀಶ್ವರ ದ್ವೀಪ ಸಮವಸರಣದ ಚಿತ್ರ, ಲೋಕಸ್ವರೂಪ, ಮಾನಸ್ಥಂಭಗಳು, ಜಂಬುವೃಕ್ಷ, ದಾತಕೀ ವೃಕ್ಷ, ಜೈನ ಮಹಾಭಾರತ, ಭರತನ ದಿಗ್ವಿಜಯ, ಜೈನ ರಾಮಾಯಣ, ಯಕ್ಷಗಾನದ ಚಿತ್ರವಿದೆ.

ಚಿತ್ರ-೧. ದ್ವಾರಪಾಲಕರ ಚಿತ್ರ

ಜೈನಮಠದಲ್ಲಿರುವ ಗರ್ಭಗುಡಿಯನ್ನು ಪ್ರವೇಶಿಸುವಾಗ ಎಡಬದಿಯಲ್ಲೂ ದ್ವಾರಪಾಲಕರ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಕಿರೀಟದಾರಿಯಾಗಿರುವ ದ್ವಾರಪಾಲಕನು ನಸುಗೆಂಪು ವರ್ಣದಿಂದ ಕಂಗೋಳಿಸುತ್ತಿದ್ದಾನೆ. ತ್ರಿಭಂಗಿಯಲ್ಲಿ ನಿಂತಿರುವ ದ್ವಾರಪಾಲಕನು ನಾಲ್ಕು ಕೈಗಳನ್ನು ಹೊಂದಿದ್ದು ವಜ್ರಾಭರಣ ಕಚಿತನಾಗಿದ್ದಾನೆ ಹಿಂದಿನ ಎರಡು ಕೈ ಹಾಗೂ ಮುಂದಿನ ಎಡಗೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದು ಬಲಗೈಯಲ್ಲಿ ಗದೆಯೊಂದನ್ನು ಹಿಡಿದು ನಿಂತಿರು ಭಂಗಿ ಮನಮೋಹಕವಾಗಿದೆ. ಇವರು ನಿಂತಿರುವ ಪೀಟದ ಎರಡೂ ಬದಿಗಳಲ್ಲೂ ೬ ಸಿಂಹಗಳನ್ನು ಕಾಣಬಹುದಾಗಿದೆ ಅದರ ಪಕ್ಕದಲ್ಲಿ ಎರಡೂ ಬದಿಯಲ್ಲೂ ಸುಂದರವಾದ ಸುವರ್ಣರ ಚಿತ್ರ ಕಂಬಗಳಿದ್ದು ಮೇಲ್ಭಾಗದಲ್ಲಿ ಕಮಾನಿನಾಕಾರದಲ್ಲಿ ರಚನೆಯನ್ನು ಮಾಡಲಾಗಿದೆ. ಅದರ ಮೇಲೊಂದು ಗೋಪುರ ಎರಡು ಗಜಗಳು ಹಾಗೂ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದ್ದು ಅಶ್ವಿನಿ ದೇವತೆಗಳು ರೇಖೆಗಳಿಂದ ಗಗನದಲ್ಲಿ ಸಾಗುವಂತೆ ತೋರಿಸಲಾಗಿದೆ ಇಲ್ಲಿ ಹೆಚ್ಚಾಗಿ ಹಳದಿ, ನಸುಗೆಂಪು, ಸ್ವರ್ಣ ಗಾಡನೀಲಿ, ಕಪ್ಪು, ಕಂದು ವರ್ಣಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಚಿತ್ರ-೨. ನಂದೀಶ್ವರ ದ್ವೀಪ

ಮಠದ ದೇವಾಲಯದ ಗರ್ಭಗುಡಿಯ ಬಲ ಬದಿಯ ಗೋಡೆಯ ಮೇಲಿರುವ ನಂದೀಶ್ವರ ದ್ವೀಪದ ಚಿತ್ರವು ಗೋಡೆಯ ಮೇಲೆ ಚೌಕಕಾರವಾಗಿದ್ದು ಸುತ್ತಲೂ ಹೂಬಳ್ಳಿಯ ಚಿತ್ರಗಳಿದ್ದು ನಾಲ್ಕು ಮೂಲೆಯಲ್ಲೂ ಹಿಂಮುಖವಾಗಿ ತಿರುಗಿ ನಿಂತಿರು ಸ್ವರ್ಣ ಸಿಂಹಗಳನ್ನು ನಾವಿಲ್ಲಿ ಕಾಣಬಹುದಾಗಿದೆ ಇದರ ಮಧ್ಯೆ ದೊಡ್ಡದಾದ ಸ್ವರ್ಣವೃತ್ತವಿದ್ದು ಅದರೊಳಗೆ ನಾಲ್ಕು ವೃತ್ತಗಳಿವೆ ಇದರ ಮಧ್ಯದಲ್ಲಿ ಚಿಕ್ಕದು ಸ್ವರ್ಣ ವೃತ್ತವಿದ್ದು ಹೂವಿನ ವಿನ್ಯಾಸವನ್ನು ಸುವರ್ಣ ವರ್ಣದಿಂದ ಚಿತ್ರಿಸಲಾಗಿದೆ ನಾಲ್ಕು ವೃತ್ತಗಳಲ್ಲಿಯೂ ನಾಲ್ಕು ಚೌಕಾಕಾರಗಳಿದ್ದು ಅದರ ನಡುವಿನ ವೃತ್ತದಲ್ಲಿ ಸುವರ್ಣ ಮಂಟಪವನ್ನು ಕಾಣಬಹುದು ಅದರಲ್ಲಿ ತೀರ್ಥಂಕರರು ಯೋಗಾಸೀನರಾಗಿ ಕುಳಿತಿರುವ ಚಿತ್ರಗಳನ್ನು ಕಾಣಬಹುದಾಗಿದೆ ಈ ಚಿತ್ರದ ಹಿನ್ನೆಲೆಯನ್ನು ಗಾಡ ನೀಲಿವರ್ಣದಿಂದ ಚಿತ್ರಿಸಲಾಗಿದ್ದು ಒಳಗಿನ ನಾಲ್ಕು ವೃತ್ತಗಳನ್ನು ಕೆಂಪು ವರ್ಣಗಳಿಂದ ತೋರಿಸಲಾಗಿಲ್ಲ. ಉಳಿದಂತೆ ಬೇಕೆಲ್ಲವನ್ನು ಸುವರ್ಣ ವರ್ಣದಿಂದ ತೋರಿಸಲಾಗಿದೆ ಉಳಿದಂತೆ ಬೇಕೆಲ್ಲವನ್ನು ಸುವರ್ಣ ವರ್ಣದಿಂದ

ತೋರಿಸಲಾಗಿದೆ ಕೆಳಭಾಗದಲ್ಲಿ ಚಿತ್ರದ ಚಕ್ಕಲಿಗಳು ಹೋಗಿದ್ದು ಉಳಿದಂತೆ ಚಿತ್ರ ನೋಡಲು ಸುಂದರವಾಗಿದೆ.

ಚಿತ್ರ–೩. ಸಮವಸರನದ ಚಿತ್ರ

ಗರ್ಭಗುಡಿಯ ಮುಂದಿನ ಗೋಡೆಯಲ್ಲಿ ಸಮವಸರಣ ಹಾಗೂ ಲೋಕ ಸ್ವರೂಪ ಚಿತ್ರಗಳಿದ್ದು ಇದಲ್ಲೆ ಮಾನಸ್ಥಂಭಗಳನ್ನು ತೋರಲಾಗಿದೆ. ಶ್ರವಣಬೆಳಗೊಳದ ಪಾರ್ಶ್ವನಾಥರ ಸಮವಸರಣದ ಮಾದರಿಯಲ್ಲೆ ಈ ಚಿತ್ರವೂ ಸಹ ಇದ್ದು ಇದನ್ನು ಹಳದಿ ವರ್ಣದಿಂದ ಚಿತ್ರಿಸಲಾಗಿದೆ. ಗೋಡೆಯ ಮೇಲೆ ಚೌಕಾಕಾರದ ವ್ಯಾಪ್ತಿಯನ್ನು ಈ ಚಿತ್ರವು ಹೊಂದಿದ್ದು ಸುವರ್ಣ ವರ್ಣದಿಂದ ರಚಿಸಲಾಗಿದೆ ಈ ಚಿತ್ರವು ನೋಡಲು ಜಾಮಿತಿಕವಾಗಿದು ಶ್ರವಣಬೆಳಗೊಳದ ಚಿತ್ರದಂತಿಲ್ಲ ಇಲ್ಲಿ ಹಲವು ವೃತ್ತಾಕಾರಗಳು ನೇರ ರೇಖೆಗಳು ಅರ್ಧಚಂದ್ರಾಕಾರ, ಪ್ಲಸ್ ಆಕಾರ, ತ್ರಿಕೋನಾಕಾರ ತ್ರಿಜ್ಯಗಳು ಹೂಬಳ್ಳಿಯ ವಿನ್ಯಾಸಗಳು ಹೀಗೆ ಒಂಭತ್ತು ವೃತ್ತಗಳನ್ನು ಹೊಂದಿದ್ದು ಯಾವುದೇ ಮನುಷ್ಯಾಕೃತಿ ಈ ಚಿತ್ರದಲ್ಲಿ ಕಂಡುಬರುವುದಿಲ್ಲ ವೃತ್ತದ ಹೊರಭಾಗದಲ್ಲಿಯೂ ಸಹ ಹೂಬಳ್ಳಿಯ ವಿನ್ಯಾಸವಿದ್ದು ಗಾಡನೀಲಿ ವರ್ಣದಿಂದ ರಚಿಸಲಾಗಿದೆ ಅಲ್ಲಲ್ಲಿ ಒಳಭಾಗದಲ್ಲಿ ಕೆಂಪು ವರ್ಣವನ್ನು ಕಾಣಬಹುದಾಗಿದ್ದು ಚಿತ್ರದ ಹೊರ ಪಟ್ಟಿಯಲ್ಲಿ ಹೂಬಳ್ಳಿಯ ವಿನ್ಯಾಸವನ್ನು ತೋರಿಸಲಾಗಿದೆ.

ಚಿತ್ರ–೪. ಮಾನಸ್ಥಬಗಳು

ಸಮವಸರಣದ ನಾಲ್ಕು ದಿಕ್ಕಿನಲ್ಲೂ ನಾವು ಮಾನಸ್ಥಭಗಳನ್ನು ಕಾಣುತ್ತೇವೆ ಆದರೆ ಈ ಮೂಡಬಿದರೆಯ ಜೈನ ಮಠದಲ್ಲಿರುವ ಸಮವಸರಣದ ಚಿತ್ರದಲ್ಲಿ ಎರಡನ್ನು ಮಾತ್ರ ತೋರಿಸಲಾಗಿದೆ ಒಂದು ಸಮವಸರಣದ ಬಲಭಾಗದಲ್ಲಿದ್ದು ಎರಡನೆಯದು ಲೋಕಸ್ವರೂಪದ ಬಳಿಯಲ್ಲಿದೆ ಎರಡೂ ಚಿತ್ರಗಳು ನೋಡಲು ಭಾಗಶಃ ಒಂದೇ ರೀತಿಯಲ್ಲಿದ್ದು ಅಳತೆಯಲ್ಲೂ ಒಂದೇ ಸಾಮ್ಯತೆ ಇದೆ ಸುವರ್ಣ ವರ್ಣದಿಂದ ರಚಿಸಲಾದ ಈ ಮನಸ್ಥಂಭಗಳು ಹನ್ನೊಂದು ಪೀಠಗಳ ಹಂತವನ್ನು ಹೊಂದಲಾಗಿದೆ ಕೆಳಗಿನಿಂದ ದಪ್ಪಗಿರುವ ಈ ಕಂಬವು ಮೇಲೋಗುತ್ತ ಸಣ್ಣದಾಗುತದೆ ಇದರ ಮೇಲಿನ ಪೀಟಗಳದಲ್ಲಿ ಗೋಪುರಾಕಾರವಿದ್ದು ಅಲ್ಲಿ ತೀರ್ಥಂಕರರು ಕುಳಿತಿರುವುದನ್ನು ಕಾಣಬಹುದಾಗಿದೆ ಆದರೆ ಸಮವಸರಣದ ಬದಿಯಲ್ಲಿರುವ ಮಾನಸ್ಥಭದಲ್ಲಿ ಏಳನೇ ಹಂತದ ಗಣ್ಣಿನಲ್ಲಿ ಎರಡೂ ಕಡೆ ಅರ್ಧ ಚೌಕಾಕಾರದವಿದ್ದು ಮೇಲಿನಿಂದ ಆಯತಾಕಾರದ ವಸ್ತುವು ಜೊತುಬಿದ್ದಂತೆ ತೋರಿಸಲಾಗಿದ್ದು ಸುವರ್ಣ ವರ್ಣದಿಂದ ತೋರಿಸಲಾಗಿರುವುದು ಈ ಸ್ಥಭದ ಹಿನ್ನೆಲೆಯನ್ನು ಗಾಡನೀಲಿವರ್ಣದಿಂದ ಚಿತ್ರಿಸಲಾಗಿದ್ದು ಮೇಲೆ ತೀರ್ಥಂಕರರು ಕುಳಿತಿರುವ ಹಿನ್ನೆಲೆಯಲ್ಲಿ ಕೆಂಪು ವರ್ಣದಿಂದ ತೋರಿಸಲಾಗಿದೆ ಇಲ್ಲಿ ಹಳದಿ, ಸುವರ್ನ, ಕಂದು, ಕೆಂಪು, ಗಾಡನೀಲಿ ಮತ್ತು ಕಪ್ಪು ವರ್ಣಗಳನ್ನು ಬಳಸಲಾಗಿರುವುದು

ಚಿತ್ರ-೫. ಲೋಕ ಸ್ವರೂಪದ ದೃಶ್ಯ

ಜೀವಾದಿ ಆರು ದ್ರವ್ಯಗಳು ತುಂಬಿರುವ ವಿಸ್ತರವಾದ ಸ್ಥಳವೇ ಲೋಕ, ಒಬ್ಬ ಪುರುಷನು ತನ್ನ ಎರಡೂ ಕಾಲುಗಳನ್ನು ಅಗಲಿಸಿ ನಿಂತು ತನ್ನ ಸೊಂಟದ ಮೇಲೆ ಎರಡೂ ಕೈಗಳನ್ನು ಇಟ್ಟುಕೊಂಡು ನಿಂತರೆ ಕಾಣುವ ಹಾಗೆ ಲೋಕವಿದೆ ತಬಲ ವಾದ್ಯದ ಬಲ ತಬಲದ ಮೇಲೆ ಎಡ ತಬಲವನ್ನು ಬೋರಲಾಗಿ ಹಾಕಿಟ್ಟಾಗ ಹೇಗೆ ಕಾಣುವುದೋ ಅದರಂತೆ ಲೋಕವಿದೆ ಈ ಲೋಕವು ಅನಂತ ಆಕಾಶದ ಮಧ್ಯೆ ಇದೆ ಇದನ್ನು ಘನೋದಧಿ ಘನವಾತ ಮತ್ತು ತನು ವಾತಗಳೆಂಬ ಭಾರಿ ಗಾತ್ರದ ಗಾಳಿಗಳು ಸುತ್ತುವರಿದು ಲೋಕವನ್ನು ಆಕಾಶದಲ್ಲಿ ಹಿಡಿದು ನಿಲ್ಲಿಸಿದೆ ಈ ಗಾಳಿಗಳು ಸ್ಥಿರವಾದವುಗಳು ಬೀಸುವಂಥಹವುಗಳಲ್ಲಿ ಒಂದೊಂದು ೨೦ ಸಾವಿರ ಯೋಜನ ಗಾತ್ರದ ಗಾಳಿಗಳಿವೆ

ಈ ಲೋಕದ ಒಟ್ಟು ಕ್ಷೇತ್ರದ ಪ್ರಮಾಣ ೩೪೩ ರಜ್ಜು ಇದೆ ಇದರಲ್ಲಿ ಜೀವ ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂಬ ಆರು ದ್ರವ್ಯಗಳು ತುಂಬಿದೆ ಈ ಲೋಕದ ಹೊರಭಾಗದಲ್ಲಿ ಕೇವಲ ಆಕಾಶವು ಅನಂತವಾಗಿದೆ ಈ ಲೋಕವು ೧೪ ರಜ್ಜು ಉತ್ತರವಾಗಿದೆ ಇದು ಘನಾಕಾರವಾಗಿದೆ. ಕೆಳಗಡೆ ಏರು ರಜ್ಜು, ಮೇಲ್ಭಾಗದ ಮಧ್ಯದಲ್ಲಿ ಐದು ರಜ್ಜು, ತುದಿಯಲ್ಲಿ ಒಂದು ರಜ್ಜು ಗಾತ್ರವಿದೆ ಈ ಲೋಕದ ಮಧ್ಯದಲ್ಲಿ ಒಂದು ರಜ್ಜು ಉದ್ದ ಒಂದು ರಜ್ಜು ಅಗಲ ಗಾತ್ರದ ತ್ರಸನಾಡಿಯಿದೆ ಇಲ್ಲಿಯೇ ಏಕೇಂದ್ರಿಯಾದಿಂದ್ ಹಿಡಿದು ಪಂಚೇಂದ್ರಿಯದವರೆಗಿನ ಜೀವಿಗಳು ಇರುತ್ತದೆ. ಆದರೆ ಈ ತ್ರಸನಾಡಿಯಿಂದ ಹೊರಗೆ ಇರುವ ಲೋಕದಲ್ಲಿ ಕೇವಲ ಏಕೇಂದ್ರಿಯ ಜೀವಿಗಳು ಇರುತ್ತದೆ. ದ್ವೀಂದ್ರಿಯದಿಂದ ಹಿಡಿದು ಪಂಚೇಂದ್ರಿಯ ಜೀವಗಳಿಗೆ ತ್ರಸಜೀವಗಳೆನ್ನುತ್ತಾರೆ ಕೇವಲ ಏಕೇಂದ್ರಿಯ ಜೀವಕ್ಕೆ ಸ್ಥಾವರ ಜೀವವೆನ್ನುತ್ತಾರೆ.

ಲೋಕದಲ್ಲಿ ೩ ವಿಭಾಗಗಳಿವೆ (೧)ಅಧೋಲೋಕ (೨) ಮಧ್ಯಲೋಕ (೩) ಊರ್ಧ್ವಲೋಕ ಅಧೋಲೋಕದಲ್ಲಿ ನಿತ್ಯನಿಗೂಢ ಪಶು ನರಕಗಳೂ ಪಂಚಭಾಗ ಖರಭಾಗಗಳೂ ಇವೆ. ಮಧ್ಯಲೋಕದಲ್ಲಿ ಮಾನವ-ತೀರ್ಯಂಚರಿದ್ದಾರೆ ಇದೇ ಮರ್ತ್ಯಲೋಕ ಊರ್ಧ್ವಲೋಕದಲ್ಲಿ ಜ್ಯೋತಿರ್ಲೋಕ, ದೇವಲೋಕ, ಸಿದ್ದಲೋಕ ಈ ಲೋಕಗಳು ಯಾರಿಂದಲೂ ಸೃಷ್ಟಿಯಾಗಿಲ್ಲ ಯಾರಿಂದಲೂ ಲಯವಾಗುವುದಿಲ್ಲ ಇದು ಅನಾದಿಯಿಂದಲೂ ಸ್ವಯಂ ಸಿದ್ದವಾಗಿದೆ ಮತ್ತು ಅನಂತಕಾಲದವರೆಗೂ ಇರುತ್ತದೆ.

ಸಮವಸರಣ ಎಡ ಬದಿಯಲ್ಲಿರುವ ಚಿತ್ರವಾಗಿದ್ದು ತಬಲಗಳನ್ನು ಒಂದರ ಮೇಲೊಂದನ್ನು ಇಟ್ಟರೆ ಕಾಣುವ ರೀತಿಯಲ್ಲಿ ಈ ಚಿತ್ರವಿದೆ ಪಕ್ಕದಲ್ಲಿ ಎರಡು ವೃತ್ತಾಕಾರದ ಚಿತ್ರವಿದ್ದು, ಕೆಂಪು ವರ್ಣದ ಪ್ಲಸ್ ಆಕಾರದಲ್ಲಿದೆ ಈ ವೃತ್ತವನ್ನು ಗಾಡ ನೀಲಿ ವರ್ಣದಿಂದ ರಚಿಸಲಾಗಿದ್ದು ಇದರ ಮೇಲೆ ಸುವರ್ಣ ವೃತ್ತವನ್ನು ರಚಿಸಿದ್ದು ಸುತ್ತಲೂ ಸುವರ್ಣ ಬಿಂಧುಗಳನ್ನು ಇಡಲಾಗಿದೆ ಈ

ಲೋಕ ಸ್ವರೂಪದ ಹಿನ್ನೆಲೆಯನ್ನು ಮಾಸು ನೀಲಿ ವರ್ಣದಿಂದ ಪೂರ್ಣಗೊಳಿಸಿದ್ದು ಲೋಕದ ಸ್ವರೂಪದ ಮಧ್ಯಭಾಗದಲ್ಲಿ ಕೆಂಪು ವರ್ಣವನ್ನು ತುಂಬಲಾಗಿದೆ ಇದರ ಸುತ್ತಲೂ ಸ್ವರ್ಣ ವರ್ಣದಿಂದ ರಚಿಸಲಾಗಿದ್ದು ಮಧ್ಯಭಾಗದಲ್ಲಿ ಉದ್ದನೆಯ ಸುವರ್ಣ ವರ್ಣದಲ್ಲಿ ಪಟ್ಟಿದು ೨೪ ಅಂಕಣಗಳಿದ್ದು ಕೆಳಭಾಗದಲ್ಲಿ ೭ ದೊಡ್ಡ ಅಂಕಣಗಳನ್ನು ಕಾಣಬಹುದಾಗಿದೆ ಈ ಚಿತ್ರದ ಮೇಲ್ಭಾಗದಲ್ಲಿ ತೀರ್ಥಂಕರ ನೊಬ್ಬನು ಕೂತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ.

ಇದರ ಕೆಳಭಾಗದಲ್ಲಿ ಚೌಕಾಕಾರವಿದ್ದು ಇದರಲ್ಲಿ ಒಂಭತ್ತು ಅಂಕಣಗಳನ್ನು ಮಾಡಲಾಗಿದ್ದು ಐದು ಕೆಂಪು ಅಂಕಣಗಳು ಹಾಗೂ ನಾಲ್ಕು ಗಾಡನೀಲಿ ಅಂಕಣಗಳಿವೆ ಇದರಲ್ಲಿ ಒಂಭತ್ತು ಬಗೆಯ ಶುಭಗಳಿದ್ದು ಇದನ್ನು ನವ ದ್ರೈವೇಶಗಳು ಅಥವಾ ಒಂಭತ್ತು ಸ್ವರ್ಗಗಳು ಎಂದು ಕರೆಯುತ್ತಾರೆ ಇಲ್ಲಿ ಕಮಟಲ, ಕನ್ನಡಿಕುಂಭ, ಧ್ವಜ, ಕುಂಡ, ಛತ್ರಿ, ಕನ್ನಡಿ, ಮರ, ಚಾಮರ ಹಾಗೂ ಮತ್ತೊಂದು ಮರ ಹೀಗೆ ಒಂಭತ್ತು ಶುಭಗಳ ಚಿತ್ರವನ್ನು ನಾವಿಲ್ಲಿ ಕಾಣಬಹುದಾಗಿದೆ ಇದರ ಕೆಳಭಾಗದಲ್ಲಿ ಎರಡು ಚಕ್ರಾಕಾರವಿದ್ದು ಎಂಟು ಉದ್ದ ಮತ್ತು ಅಡ್ಡರೇಖೆಗಳಿವೆ ಒಂದು ಚಕ್ರ ಕೆಂಪು ಹಾಗೂ ಮತ್ತೊಂದು ಹಳದಿ ವರ್ಣದಲ್ಲಿ ಚಿತ್ರಿಸಲಾಗಿದೆ.

ಚಿತ್ರ-೬ ಜಂಬು ವೃಕ್ಷ ಹಾಗೂ ದಾತಕೀ ವೃಕ್ಷ

ಮಠದ ಗರ್ಭಗುಡಿಯ ಎಡಭಾಗದ ಗೋಡೆಯ ಮೇಲೆ ಈ ಚಿತ್ರಗಳಿದ್ದು ಇಲ್ಲಿ ಈ ಮಠದ ಗುರುಗಳು ಕೂರುವರಲ್ಲಿ ಇವರ ಬೆನ್ನಿದೆ ಈ ಎರಡೂ ವೃಕ್ಷಗಲ ಚಿತ್ರಗಳಿವೆ ಇದರ ಹಿನ್ನೆಲೆಯಲ್ಲಿ ಕೆಂಪು ವರ್ನವಿದ್ದು ಇದರ ಸುತ್ತಲೂ ಹೂ ಬಳ್ಳಿಯ ವಿನ್ಯಾಸವನ್ನು ಚಿತ್ರಿಸಲಾಗಿದೆ. ಮರಗಳನ್ನು ಸುವರ್ಣ ವರ್ಣದಿಂದ ಚಿತ್ರಿಸಿದು ಎಲೆಗಳನ್ನು ಗಾಡ ಹಸಿರು ವರ್ಣದಿಂದ ಚಿತ್ರಿಸಲಾಗಿದೆ ಈ ವೃಕ್ಷದೊಳಗೆ ಚೈತ್ಯಾಲಯವಿರುತ್ತದೆ ಅದನ್ನು ಜಿನಮಂದಿರವೆಂದು ಕರೆಯುತ್ತಾರೆ. ಎಡಭಾಗದಲ್ಲಿರುವ ಜಂಬೂ ವೃಕ್ಷದಲ್ಲಿರುವ ಚೈತ್ಯಾಲಯವನ್ನು ಜಂಬೂ ಚೈತ್ಯಾಲಯವೆಂದು ದಾತಕೀ ವೃಕ್ಷದಲ್ಲಿರುವ ಚೈತ್ಯಾಲಯವನ್ನು ದಾತಕೀ ಚೈತ್ಯಾಲಯಗಳೆಂದು ಕರೆಯುತ್ತಾರೆ. ಇದರ ತೀರ್ಥಂಕರರಿರುತ್ತಾರೆ. ಅವರನ್ನು ಸುವರ್ಣ ವರ್ಣದಿಂದ ಚಿತ್ರಿಸಲಾಗಿದೆ ಇದರ ಕೆಳಭಾಗದಲ್ಲಿ ಅರ್ಧ ಚಕ್ರಾಕಾರದ ಪೀಟವಿದೆ ಈ ವೃಕ್ಷಗಳು ದಾತಕೀ ಖಂಡಲ್ಲಿ ದಾತಕೀ ವೃಕ್ಷವಿದು ಜಂಬೂಕಂಡದಲ್ಲಿ ಜಂಬೂವೃಕ್ಷಗಳಿವೆ ಇವು ದೈತ್ಯ ವೃಕ್ಷಗಳು ಇದರಲ್ಲಿ ಹೊನ್ನ ತೀರ್ಥಂಕರರನ್ನು ಚಿತ್ರಿಸಲಾಗಿದೆ.

ಚಿತ್ರ-೭. ಜೈನ ಮಹಾಭಾರತ

ಜೈನ ದೇವಾಲಯದ ಎದುರುಭಾಗದಲ್ಲಿರುವ ಕಟ್ಟಡದ ಎಡಗೋಡೆಯ ಮೇಲೆ ಜೈನ ಮಹಾ ಭಾರತದ ಚಿತ್ರವಿದ್ದು ಚೌಕಾಕಾರದ ಭಾಗದಲ್ಲಿ ಚಿತ್ರವನ್ನು ರಚಿಸಲಾಗಿದೆ ಈ ಚಿತ್ರದಲ್ಲಿ

ಧರ್ಮರಾಯನು ಹಾಗೂ ಪಂಚಾಲಿಯ ಸಿಂಹಾಸನ ಮೇಲೆಕೂತಿದ್ದು ಇದರ ಮೇಲೆ ಛತ್ರಿಯಾಕಾರವನ್ನು ಸಹ ಕಾಣಬಹುದಾಗಿದೆ ಹಿಂಭಾಗದ ಎಡ ಬದಿಯಲ್ಲಿ ಭೀಮನು ಗಧೆಯನ್ನು ಬಲಗೈಯಲ್ಲಿ ಹಿಡಿದು ನಿಂತಿದ್ದು ಅವನ ಮುಂಭಾಗದಲ್ಲಿ ಸಹದೇವನು ಕೆಂಪುವರ್ಣದ ವಸ್ತ್ರವನ್ನು ಧರಿಸಿ ಚಾಮರವನ್ನು ಹಿಡಿದು ನಿಂತಿದ್ದಾನೆ ಧರ್ಮರಾಯನ ಬಲ ಬದಿಯಲ್ಲಿ ಅರ್ಜುನನು ಎಡಗೈಯಲ್ಲಿ ಬಿಲ್ಲಿಡಿದು ನಿಂತಿದ್ದು ಬಲಗೈಯಲ್ಲಿ ನವಿಲು ಗರಿಯ ಚಾಮರವನ್ನು ಹಿಡಿದು ನಿಂತಿದ್ದಾನೆ ಇವನ ಎಡಭಾಗದಲ್ಲಿ ಸಹದೇವನೂ ಸಹ ಬಿಲ್ಲನ್ನು ಹಿಡಿದು ನಿಂತಿದ್ದಾನೆ ಎಲ್ಲರೂ ಕೆಂಪು ನಾಮಗಳನ್ನು ಹಣೆಯ ಮೇಲೆ ಇಟ್ಟುಕೊಂಡಿದ್ದು ಕಿರೀಟದಾರಿಗಳಾಗಿದ್ದಾರೆ ಇವರ ಮೇಲೆ ಅಶ್ವಿನಿ ದೇವತೆಗಳು ಗಗನದಲ್ಲಿ ರೆಕ್ಕೆಗಳ ಸಹಾಯದಿಂದ ಹಾರುತ್ತಿದ್ದು ಚಾಮರವನ್ನು ಬೀಸುವಂತೆ ತೋರಲಾಗಿದೆ ಈ ಚಿತ್ರದಲ್ಲಿ ರವಿವರ್ಮನ ತೈಲವರ್ಣದ ಚಿತ್ರವಾದ ರಾಮಾ ಸೀತೆಯರ ಪ್ರಭಾವ ನೇರವಾಗಿ ಕಾಣುವುದಲ್ಲದೆ ಇವರು ಧರಿಸಿರುವ ವಸ್ತ್ರಗಳು ಮೈಸೂರುರವರಿಗೆ ಹೋಲುತ್ತದೆ ಈ ಕಾರಣಗಳಿಂದ ಈ ಚಿತ್ರಗಳು ಮೈಸೂರು ಅರಸರ ಕಾಲಕ್ಕೆ ಆಗಿರಬೇಕು ಎಂದು ಊಹಿಸಬಹುದಾಗಿದೆ ಈ ಚಿತ್ರಗಳಲ್ಲಿ ಹೆಚ್ಚಾಗಿ ಮಾಸಲು ನೀಲಿ ವರ್ಣಗಳಿಂದ ಪೂರ್ಣಗೊಳಿಸಲಾಗಿದೆ ಈ ಚಿತ್ರದ ಸುತ್ತಲೂ ಹೂಬಳ್ಳಿಯ ವಿನ್ಯಾಸವನ್ನು ಚಿತ್ರಿಸಲಾಗಿದೆ.

ಚಿತ್ರ–೮. ಭರತನ ದಿಗ್ವಿಜಯ

ಮಠದ ಗರ್ಭಗೃಹದ ಎದುರಿನ ಕಟ್ಟಡದ ಬಲಬದಿಯಲ್ಲಿ ಈ ಚಿತ್ರವಿದ್ದು ಭರತ ಹಾಗೂ ಬಾಹುಬಲಿಗೆ ಸಂಬಂದಿಸಿದ ಚಿತ್ರ ಇದಾಗಿದೆ ಭರತನು ಪ್ರಪಂಚವನ್ನೆಲ್ಲ ಗೆಲ್ಲುವ ಹಂಬಲದಲ್ಲಿ ದಿಗ್ವಿಜಯವನ್ನು ಮುಗಿಸಿಕೊಂಡು ಬರುವಾಗ ಆತನ ಚಕ್ರರತ್ನವು ಪುರ ಪ್ರವೇಶ ಮಾಡಲಿಲ್ಲ ಭರತನು ತನ್ನ ತಮ್ಮಂದಿರನ್ನು ಜಯಿಸಿಲ್ಲವೆಂದು ಪುರೋಹಿತರು ಹೇಳಿದರು ಕಾಣಿಕೆಗಳೊಡನೆ ಬರುವಂತೆ ತಮ್ಮಂದಿರಿಗೆ ಹೇಳಿಕಳಿಸಿದಾಗ ಬಹುಬಲಿಯನ್ನುಳಿದ ಇತರರು ವೃಷಭನಾಥರ ಬಳಿ ಹೋಗಿ ದೀಕ್ಷೆಪಡೆದರು ಬಾಹುಬಲಿಯು ತಂದೆಯು ತಂದೆಯ ಹೊರತು ಇನ್ನಾರಿಗೂ ತಲೆ ಬಾಗುವುದಿಲ್ಲವೆಂದು ತಂದೆಯಿಂದ ತನಗೆ ದೊರೆತ ರಾಜ್ಯವನ್ನು ಕೊಡುವುದಿಲ್ಲವೆಂದು, ಇದಕ್ಕಾಗಿ ಯುದ್ದಕ್ಕೆ ಸಹ ಸಿದ್ದನೆಂದು ಭರತನ ದೂತರಿಗೆ ಹೇಳಿದನು ಭರತನು ಈ ಸುದ್ದಿಯನ್ನು ಕೇಳಿ ಯುದ್ದಕ್ಕೆ ಸಿದ್ದನಾದನು ಎರಡೂ ಸೈನ್ಯಗಳು ಯುದ್ದ ಪ್ರಾರಂಭಿಸುವ ಮುಂಚೆ ಮಂತ್ರಿಗಳು ಯೋಚಿಸಿ ಭರತ ಬಾಹುಬಲಿ ಇಬ್ಬರೂ ವಜ್ರ ದೇಹಿಗಳಾಗಿರುವುದರಿಂದ ವೃಥಾ ಸೈನ್ಯ ನಾಶವಾಗುವುದಲ್ಲದೆ ಈ ಇಬ್ಬರಿಗೂ ಏನೂ ಆಗುವುದಿಲ್ಲ ಆದ್ದರಿಂದ ಈ ಇಬ್ಬರ ಮಧ್ಯೆಯೆ ದೃಷ್ಟಿಯುದ್ದ ಜಲಯುದ್ದ ಮತ್ತು ಮಲ್ಲಯುದ್ದ ನಡೆಯಲಿ ಎಂದು ತೀರ್ಮಾನಿಸದಿರು ಹೀಗೆ ಈ ಸನ್ನಿವೇಶವನ್ನು ಕಲಾವಿದನು ಚಿತ್ರಿಸಿದ್ದಾನೆ.

ಈ ಚಿತ್ರದ ಹಿನ್ನೆಲೆಯಲ್ಲಿ ತಿಳಿಕಪ್ಪು ವರ್ಣದಿಂದ್ ರಚಿಸಲಾಗಿದ್ದು ಎರಡೂ ಕಡೆ ಅಶ್ವಗಳು ಗಜಗಳು ನಿಂತಿರುವುದು ಛತ್ರಿಚಾಮರಗಳನ್ನು ಹಿಡಿದು ನಿಂತಿರುವ ರಾಜವರ್ಗ ಕಹಳೆಯನ್ನು ಊದುತ್ತಿರುವ ದೃಶ್ಯ ಭರತ ಬಾಹುಬಲಿಗಳು ಎದುರುಬದುರಾಗಿ ನಿಂತಿರುವುದು ಇವರ ಬದಿಯಲ್ಲಿ ರಾಜ ಸದಸ್ಯರುಗಳಿದು ಮೇಲಿನ ಸನ್ನಿವೇಶಕ್ಕೆ ಸಜ್ಜಾಗಿ ನಿಂತಿರುವಂತೆ ಕಾಣುವುದು ಇಲ್ಲಿ ಹೆಚ್ಚಾಗಿ ಸುವರ್ಣ, ಕೆಂಪು, ಬಿಳಿ, ತಿಳಿಗೆಂಪು, ಕಂದು, ಬೂದು ವರ್ಣಗಳನ್ನು ಹೆಚ್ಚಾಗಿ ಬಳಸಿದ್ದು, ಈ ಮಿಶ್ರಿತವು ಸಹ ಮೈಸೂರು ಶೈಲಿಯಲ್ಲಿದ್ದು ಪಾಶ್ಚಾತ್ಯರ ಪ್ರಭಾವ ಈ ಚಿತ್ರಗಳಲ್ಲಿ ಕಾಣುತ್ತದೆ.

ಚಿತ್ರ-೯. ಜೈನ ರಾಮಾಯಣ

ಭರತನ ದಿಗ್ವಿಜಯದ ಪಕ್ಕದಲ್ಲಿಯೇ ಈ ಚಿತ್ರವಿದ್ದು ಇಲ್ಲಿ ರಾಮ, ಲಕ್ಷ್ಮಣ, ಸೀತೆ, ಭರತ, ಶತೃಜ್ಞ ಹಾಗೂ ಮಾರುತಿಯನ್ನು ಇಲ್ಲಿ ಕೂತಿದ್ದು, ಮೇಲೆ ಕೆಂಪುವರ್ಣದ ಛತ್ರಿಯನ್ನು ಕಾಣಬಹುದು ಇವರ ಹಿಂದೆ ಶತೃಜ್ಞ ಕೃಷ್ಣವರ್ಣದಲ್ಲಿದ್ದು ಭರತನು ರಾಮನ ಬಲಬದಿಯಲ್ಲಿದ್ದು ಚಾಮರವನ್ನು ಹಿಡಿದು ಕುಳಿತಿದ್ದಾಗೆ ಸೀತೆಯ ಬದಿಯಲ್ಲಿ ಲಕ್ಷ್ಮಣನು ಚಾಮರವನ್ನು ಹಿಡಿದು ಬಿಲ್ಲನ್ನು ಹಿಡಿದು ಬಿಲ್ಲನ್ನು ಹಿಡಿದು ನಿಂತಿರುವಂತೆ ತೋರಿಸಲಾಗಿದೆ ಇವರ ಮುಂಭಾಗದಲ್ಲಿ ಹನುಮಂತನು ಮಂಡಿಯೂರಿ ಕೂತಿರುವಂತೆ ತೋರಿಸಲಾಗಿದೆ ಹಿನ್ನೆಲೆಯಲ್ಲಿ ತಿಳಿಕಪ್ಪು ವರ್ಣವನ್ನು ಲೇಪಿಸಿದ್ದು ರಾಮ, ಶತೃಜ್ಞ ಹಾಗೂ ಹನುಮಂತರನ್ನು ಕೃಷ್ಣವರ್ಣದಲ್ಲಿ ತೊರಿಸಿದ್ದು ಎಲ್ಲರು ಕಿರೀಟ ವಜ್ರಾಭರಣ ಕಚಿತರಾಗಿ ನಿಂತಿರುವುದನ್ನು ನಾವಿಲ್ಲಿ ಕಾಣಬಹುದು ಈ ಚಿತ್ರವು ಸಹ ರವಿವರ್ಮರ ಪ್ರಭಾವ ಹೆಚ್ಚಾಗಿ ಕಾಣುವುದನ್ನು ಗಮನಿಸಬಹುದು ಇಲ್ಲಿ ಹಳದಿ, ಕಪ್ಪು, ಕೆಂಪು, ಕಂದು ವರ್ಣಗಳು ಹೆಚ್ಚಾಗಿ ಕಂಡುಬರುತ್ತವೆ.

ಚಿತ್ರ-೧೦. ಯಕ್ಷಗಾನದ ಚಿತ್ರ

ಮಠದ ಗರ್ಭಗುಡಿಯ ಎದುರಿನ ಕಟ್ಟಡದಲ್ಲಿ ಎಡಗೋಡೆಯ ಮೇಲೆ ಈ ಚಿತ್ರವಿದ್ದು ಈ ಚಿತ್ರದ ಮೇಲೆ ಹಿಂದೆ ಸುಣ್ಣವನ್ನು ಲೇಪಿಸಿ ಸಂಪೂರ್ಣವಾಗಿ ನಾಶವಾಗಿದ್ದು ಈಗಿನ ಮಠಾಧಿಪತಿಗಳು ಇದನ್ನು ಅರಿತು ಬಿಳಿ ಸುಣ್ಣವನ್ನು ತೆರವುಗೊಳಿಸಿದ್ದು ಆದರೂ ಯಾವುದೇ ಚಿತ್ರಗಳು ಉಳಿಯಲಿಲ್ಲ ಆದರೆ ಯಕ್ಷಗನದ ಚಿತ್ರದ ಛಾಯೆಯನ್ನು ಮಾತ್ರ ನಾವು ನೋಡಲಿಕ್ಕೆ ಇಲ್ಲಿ ಸಿಗಲಿದೆ.

ಒಟ್ಟಾರೆಯಾಗಿ ಮೂಡಬಿದರೆಯ ಚಿತ್ರಗಳು ಮೈಸೂರು ಅರಸರ ಕಾಲಕ್ಕೆ ಆಗಿರುವಂತೆ ತೋರುತ್ತವೆ ಅಲ್ಲದೆ ಈ ಮಠದಲ್ಲಿ ಭಿತ್ತಿಚಿತ್ರಗಳನ್ನು ಜಾಗರೂಕವಾಗಿ ನೋಡಿ ಕೊಳ್ಳುತ್ತಿದ್ದು ಇವುಗಳ ಸಂಪೂರ್ಣಮಾಹಿತಿಯನ್ನು ಈ ಮಠದ ಗುರುಗಳು ತಿಳಿದಿದ್ದು ಈ ಭಿತ್ತಿಚಿತ್ರ ಪರಂಪರೆಯ ಮಹತ್ವವನ್ನು ಸಹ ಅರಿತಿದ್ದಾರೆ ಈ ಮಠದಲ್ಲಿಯೇ ಧವಳ, ಜಯಧವಳ, ಮಹಾಧವಳಗಳ, ಹಸ್ತಪ್ರತಿ ಗ್ರಂಥಗಳಿದ್ದು

ಇವು ಜೈನ ತೀರ್ಥಂಕರರ ಮೂಲ ಗ್ರಂಥಗಳಾಗಿದ್ದು ಇದರ ಸಂಪೂರ್ಣ ಮಾಹಿತಿಯನ್ನು ಇಲ್ಲಿಯ ಮಠಾಧಿಪತಿಗಳು ತಿಳಿದಿರುವುದರಿಂದ ಚಿತ್ರದ ಮಹತ್ವ ಚಿತ್ರರಚನೆಯ ಮಹತ್ವಗಳನ್ನು ಸಂಪೂರ್ಣವಾಗಿ ಅರಿತಿರುವರು.

ಕಾರ್ಕಳದ ಜೈನಮಠದ ಭಿತ್ತಿಚಿತ್ರಗಳು

ಕಾರ್ಕಳ ಉಡುಪಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ ಪಶ್ಚಿಮ ಘಟ್ಟದ ಬುಡದಲ್ಲಿರುವ ಈ ಊರು ಹಲವು ಶತಮಾನಗಳ ಹಿಂದೆ ಜೈನ ರಾಜರ ಆಳ್ವಿಕೆಯ ಕಾಲದಲ್ಲಿ ಪಾಂಡ್ಯ ನಗರಿ ಎಂದು ಪ್ರಸಿದ್ಧಿ ಪಡೆದಿತ್ತು ಕಾಲಕ್ರಮೇಣ ಇಲ್ಲಿರುವ ಕರಿ ಬಂಡೆಗಳಿಂದ ಕರಿಕಲ್ಲು ಎಂದು ಪ್ರಸಿದ್ದವಾಗಿತ್ತು ಮುಂದೆ ಕರಿಕಲ್ಲು ತುಳುವಿನಲ್ಲಿ ಕಾರ್ಲವೆಂದು ಮಾರ್ಪಟ್ಟು ಕನ್ನಡದಲ್ಲಿ ಕಾರ್ಕಳ ಎಂದು ಹೆಸರಾಗಿದೆ ೪೨ ಅಡಿ ಎತ್ತರದ ಏಕವಿಲಾ ಗೊಮ್ಮಟೇಶ್ವರ ಮೂರ್ತಿ ಚತುರ್ಮುಖ ಬಸದಿ ಮತ್ತು ಇತರ ಧಾರ್ಮಿಕ ಕ್ಷೇತ್ರಗಳ ಮೂಲಕ ಕಾರ್ಕಳವು ಪ್ರವಾಸಿಸ್ಥಳವಾಗಿ ಛಾಪು ಮೂಡಿಸಿದೆ. ಅಲುಪರು ಕಾರ್ಕಳವನ್ನಾಳಿದವರಲ್ಲಿ ಮೊದಲಿಗರು ತದನಂತರ ಸಂತರು ಆಳ್ವಿಕೆಯನ್ನು ಮುಂದುವರೆಸಿದರು ಕಾರ್ಕಳ ಅಥವಾ ಪ್ರಾಚೀನ ಪಾಂಡ್ಯ ನಗರಿ, ಭೈರರಸ ಒಡೆಯರಿಂದ ಕ್ರಿ.ಶ.೧೩–೧೬ನೇ ಶತಮಾನದಲ್ಲಿದ್ದ ಕಳಸ ಕಾರ್ಕಳ ಸಾಮ್ರಾಜ್ಯದಲ್ಲಿ ರಾಜಕೀಯ ಮತ್ತು ಸಂಸ್ಕೃತಿಕ ಮಹತ್ವವನ್ನು ಪಡೆಯಿತು ಕಾರ್ಕಳದಲ್ಲಿ ರಾಜಮನೆತನ ಹೊಯ್ಸಳರ ಕಾಲದಲ್ಲಿ ಪ್ರಾಧಾನ್ಯ ಪಡೆದು ಕೊಂಡಿತು ಮುಂದೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ತನ್ನ ವೈಭವವನ್ನು ಇನ್ನೂ ವಿಸ್ತರಿಸಿಕೊಂಡಿತು. ಕಾರ್ಕಳವು ಜೈನಕಾರಿ ಎಂದೇ ಖ್ಯಾತಿ ಪಡೆದಿದ್ದಿ ಇಲ್ಲಿ ಜೈನ ಧರ್ಮಿಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ ಸುಮಾರು ೧೮ ಜೈನ ಬಸದಿಗಳು ಕಾರ್ಕಳದಲ್ಲಿವೆ ಅವುಗಳಲ್ಲಿ ಚತುರ್ಮುಖ ಬಸದಿಯು ತನ್ನ ವಾಸ್ತುಶಿಲ್ಪದ ಹಿರಿಮೆಯಿಂದಾಗಿ ಪ್ರಸಿದ್ಧಿ ಪಡೆದಿದೆ ಕಾರ್ಕಳದಲ್ಲಿರುವ ೪೨ ಅಡಿ ಉತ್ತರದ ಬಾಹುಬಲಿ ಪ್ರತಿಮೆಯು ರಾಜ್ಯದಲ್ಲಿಯೇ ಎರಡನೇ ಅತಿ ಎತ್ತರದ ಏಕಶಿಲಾ ಪ್ರತಿಮೆಯಾಗಿದೆ ಈ ಕಾರ್ಕಳದ ಚತುರ್ಮುಖ ಬಸದಿಯಲ್ಲಿ ಬಳಿಯಲ್ಲೆ ಇರುವ ಜೈನಮಠದಲ್ಲಿ ಭಿತ್ತಿ ಚಿತ್ರಗಳು ಇದ್ದು ಅವುಗಳ ಕುರಿತಂತೆ ಈ ಕೆಳಗಿನಂತೆ ವಿಮೋಚಿಸಬಹುದಾಗಿದೆ.

ಚಿತ್ರ–೧. ತೀರ್ಥಂಕರರುಗಳ ಚಿತ್ರ

ಈ ಮಠವು ಎರಡು ಅಂತಸ್ತಿನ ಕಟ್ಟಡವಾಗಿದ್ದು ಒಳ ರಚನೆಯಲ್ಲಿ ಬಾವಿಯಾಕಾರದಲ್ಲಿದೆ ಇದರ ಬಲಭಾಗದ ಕೋಣೆಯ ಎದುರುಗಡೆಯ ಅಂಕಣದಲ್ಲಿ ೨೪ ತೀರ್ಥಂಕರರ ಚಿತ್ರಗಳನ್ನು ನಾವಿಲ್ಲಿ ಕಾಣುತ್ತೇವೆ ಶ್ರವಣಬೆಳಗೊಳದ ಚಾವಣಿಯ ಕೆಳಭಾಗದ ಸಾಲುಗಳಲ್ಲಿ ರಚಿಸಲಾದ ಚಿತ್ರಗಳಂತೆ ಈ ಚಿತ್ರಗಳಿದ್ದು ೨೪ ತೀರ್ಥಂಕರರು ಪದ್ಮಾಸನ ಭಂಗಿಯಲ್ಲಿ ಕುಳಿತು ಕೈಗಳನ್ನು ಹೊಟ್ಟೆಯ

ಕೆಳಭಾಗದಲ್ಲಿ ತೊಡೆಯ ಮೇಲಿರಿಸಿಕೊಂಡು ಧ್ಯಾನ ಮುದ್ರೆಯಲ್ಲಿ ನಿರ್ಮಲ ಮುಖಾರವಿಂದವನ್ನು ಹೊಂದಿದ್ದು ಎಲ್ಲಾ ಚಿತ್ರಗಳು ಒಂದೇ ರೀತಿಯಲ್ಲಿ ಇದ್ದು ಅವರ ಲಾಂಚನ ಹಾಗೂ ವರ್ಣಗಳಿಂದ ಅವರನ್ನು ಗುರುತಿಸಬಹುದಾಗಿದೆ ಉಳಿದಂತೆ ಸುತ್ತಲೂ ಹೂಬಳ್ಳಿಯ ವಿನ್ಯಾಸವನ್ನು ನಾವಿಲ್ಲಿ ಕಾಣಬಹುದಾಗಿದೆ.

ಚಿತ್ರ–೨. ಜೈನ ಮುನಿಯನ್ನು ಸತ್ಕರಿಸುತ್ತಿರುವುದು

ಈ ಚಿತ್ರವು ಮಸುಕು ಮಸುಕಾಗಿದ್ದು ಸಂಪೂರ್ಣ ಹಾಳಾಗುವ ಹಂತದಲ್ಲಿದೆ ಈ ಚಿತ್ರದಲ್ಲಿ ಮುನಿಯೊಬ್ಬರನ್ನು ರಾಜ ಹಾಗೂ ಮತ್ತೊಬ್ಬ ರಾಜಪರಿವಾರದ ವ್ಯಕ್ತಿಯು ತಮ್ಮಲ್ಲಿರುವ ದ್ರವ್ಯಗಳನ್ನು ನೀಡಿ ಸತ್ಕರಿಸುವ ಚಿತ್ರ ಇದಾಗಿದ್ದು, ಇಲ್ಲಿ ಅರಸನು ಕೆಂಪು ವರ್ಣದ ವಸ್ತ್ರವನ್ನು ಧರಿಸಿದ್ದು ಮುನಿಯು ಹಳದಿ ಮಿಶ್ರಿತ ಬಿಳಿವರ್ಣದಿಂದ ಕಂಗೊಳಿಸುತ್ತಿದ್ದು ಹಿನ್ನೆಲೆಯಲ್ಲಿ ಮಾಸಲು ಹಸಿರು ವರ್ಣವನ್ನು ಲೇಪಿಸಲಾಗಿದ್ದು, ಈ ಚಿತ್ರ ನೋಡಲು ಮೈಸುರು ಶೈಲಿಯಂತೆ ಕಾಣುತ್ತೇವೆ. ಮೂಡಬಿದರೆಯ ಚಿತ್ರಗಳಿಗೂ ಇಲ್ಲಿಯ ಚಿತ್ರಗಳಿಗೂ ಬಹುತೇಕ ಸಾಮ್ಯತೆಗಳಿದ್ದು ಇವೆರಡು ಒಂದೇ ಕಾಲಘಟ್ಟದಲ್ಲಿ ರಚನೆಯಾಗಿರ ಬಹುದೆಂಬುದನ್ನು ಊಹಿಸಬಹುದು

ಚಿತ್ರ–೩. ಸರಸ್ವತಿಯ ಚಿತ್ರ

೨೪ ತೀರ್ಥಂಕರರ ಸಾಲಿನ ಕೆಳಭಾಗದಲ್ಲಿ ಈ ಸರಸ್ವತಿಯ ಚಿತ್ರವಿದ್ದು ತುಂಬಾ ಮಸುಕು ಮಸುಕಾಗಿ ಈ ಚಿತ್ರಗಳು ಗೋಚರಿಸುವುದರಿಂದ ಸ್ವಷ್ಟವಾಗಿ ಇದೇ ಎಂದು ಹೇಳುವುದು ಕಷ್ಟವಾಗುವುದು ಇದೂ ಸಹ ಮೂಡಬಿದರೆಯ ಮಠದ ಹೊರಕಟ್ಟಡದಲ್ಲಿರುವ ಚಿತ್ರಗಳನ್ನು ಹೋಲುವುದರಿಂದ ರವಿವರ್ಮನ ನಂತರದ ಚಿತ್ರಗಳು ಇವಾಗಿದ್ದು ಸರಸ್ವತಿಯಂತೆ ಕಂಡರೂ ಸಹ ಜನ ಯಕ್ಷಿ ಚಿತ್ರವಿರಬಹುದು ಎಂದು ತೋಚುವುದು ನಿಖರವಾಗಿ ಹೇಳಲು ನೈಸರ್ಗಿಕ ವಿಕೋಪದಿಂದ ಇವುಗಳು ತುಂಬಾ ಹಾಳಾಗಿದು ಇವುಗಳ ಬಗ್ಗೆ ಮಠದ ಸ್ವಾಮಿಯವರು ಯಾವುದೇ ಆಸಕ್ತಿಯನ್ನು ತೋರುತ್ತಿಲ್ಲ ವೆಂಬುದು ವಿಶಾಧನೀಯ ಸಂಗತಿಯಾಗಿದೆ.

ಜೈನ ಶ್ರಾವಕರ ಮನೆಯ ಭಿತ್ತಿಚಿತ್ರಗಳು

ಬಜಗೋಳಿಯ ಸುಬ್ಬಯ್ಯ ಶಾಸ್ತ್ರಿಗಳ ಮನೆಯಲ್ಲಿರುವ ಚಿತ್ರಗಳು ಕಾರ್ಕಳದಿಂದ ಹತ್ತು ಹದಿನೈದು ಕಿಲೋಮೀಟರ್‌ಗಳಷ್ಟು ದೂರದಲ್ಲಿರುವ ಬಜಗೋಳಿಯಲ್ಲಿರುವ ಊರಿನಿಂದ ಹೊರಭಾಗಕ್ಕೆ ನಡೆದು ಸ್ವಲ್ಪದೂರ ಅರ್ಧ ಕಿಲೋಮೀಟರ್ ನಷ್ಟು ಸಾಗಿದರೆ ಕಾಡಿನಂತಿರುವ ತೋಟದಲ್ಲಿ ಇವರ ಮನೆ ಇದ್ದು ಸುಬ್ಬಯ್ಯ ಶಾಸ್ತ್ರಿಗಳು ತೀರಿಕೊಂಡಿದ್ದಾರೆ ತೀರಾ ಬಡತನದಲ್ಲಿದ್ದು ಭಿತ್ತಿಚಿತ್ರಗಳಿರುವ ಮನೆಯಾಚೆಗೆ ತುಂಬ ಶಿಥಿಲ ಸ್ಥಿತಿಗೆ ಬಂದಿರುವುದು ಆದರೆ ಮನಸ್ಸುಗಳು ಶ್ರೀಮಂತವಾಗಿದೆ.

ಚಿತ್ರ-೧. ೨೯ ಜೈನ ತೀರ್ಥಂಕರರ ಚಿತ್ರ

ಸುಬ್ಬಯ್ಯ ಶಾಸ್ತ್ರಿಗಳ ಮನೆಯನ್ನು ಬಾವಿಯಾಕಾರದಲ್ಲಿ ಕಟ್ಟಲಾಗಿದ್ದು ಪ್ರವೇಶದ ಎಡ ಭಾಗದ ಮೂರು ಗೋಡೆಯ ಮೇಲೆ ಈ ಚಿತ್ರಗಳಿದ್ದು ಒಟ್ಟು ೨೯ ಜೈನ ತೀರ್ಥಂಕರರ ಚಿತ್ರಗಳನ್ನು ನಾವು ಕಾಣಬಹುದಾಗಿದೆ. ಈ ಮನೆಯು ಮಣ್ಣಿನಂಚುಗಳಿಂದ ಮೇಲಿನ ಚಾವಣಿಯನ್ನು ಮುಚ್ಚಲಾಗಿದ್ದು ಮರಗಳ ಅಟ್ಟಗಳನ್ನು ಮಾಡಿಸಲಾಗಿದೆ ಈ ಮರದ ಅಟ್ಟದ ಕೆಳಭಾಗದಲ್ಲಿ ಸಾಲಾಗಿ ನಿಂತಿರುವ ೨೪ ತೀರ್ಥಂಕರರು ಹಾಗೂ ೫ ಪೀಟಗಳ ಮೇಲೆ ಕುಳಿತಿರುವ ಕಪ್ಪು ವರ್ಣದ ಪಂಚ ಪರಮೇಷ್ಟಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇಲ್ಲಿಯ ಚಿತ್ರಗಳನ್ನು ಹಳದಿ ವರ್ಣದಿಂದ ಮಾಡಲಾಗಿದ್ದು ಒಬ್ಬರ ಮತ್ತೊಬ್ಬರ ಮಧ್ಯೆ ಕಮಾನಿನ ಕಂಬಗಳನ್ನು ಮಾಡಲಾಗಿದೆ. ಈ ನಿಂತಿರುವ ತೀರ್ಥಂಕರರಲ್ಲಿ ಕೆಲವೊಂದು ಕಪ್ಪು, ನೀಲಿ, ಬಿಳಿ, ತಿಳಿಗೆಂಪು ವರ್ಣದಾಗಿದ್ದು ಹಿನ್ನೆಲೆಯನ್ನು ಕೆಂಪು, ಕೇಸರಿ, ನೀಲಿ ವರ್ಣಗಳನ್ನು ಬಳಸಲಾಗಿದೆ ಕೆಳಭಾಗದಲ್ಲಿ ಹಳದಿ ಹಿನ್ನೆಲೆಯ ಮೇಲೆ ಹಸಿರು ಹೂ ಬಳ್ಳಿಗಳಿದ್ದು ನೇರಲೆಗೆಂಪು ವರ್ಣದ ಹೂವುಗಳನ್ನು ಬಿಡಿಸಲಾಗಿದೆ.

ಚಿತ್ರ-೨. ಸರಸ್ವತಿಯ ಚಿತ್ರ

ಮಧ್ಯದ ಗೋಡೆಯ ಮೇಲೆ ಮೂರು ದೊಡ್ಡ ಚಿತ್ರಗಳಿದ್ದು ಅದರಲ್ಲಿ ಮೊದಲನೆಯದಾದ ಸರಸ್ವತಿಯ ಚಿತ್ರವಿದ್ದು ತಿರ ಇತ್ತೀಚಿನ ಚಿತ್ರವೆನಿಸುತ್ತದೆ ರವಿವರ್ಮರವರು ರಚಿಸಿರುವ ಚಿತ್ರವನ್ನೇ ಹೋಲುವ ಈ ಚಿತ್ರವು ಯತಾವತ್ತಾಗಿ ಅದೇ ಭಂಗಿಯನ್ನು ಹೊಂದಿದೆ ಸರಸ್ವತಿಗೆ ನಾಲ್ಕು ಕೈಗಳಿದ್ದು ಮುಂದಿನ ಕೈಗಳಲ್ಲಿ ವೀಣೆಯನ್ನು ಹಿಡಿದಿದ್ದು ಹಿಂದಿನ ಕೈಯಲ್ಲಿ ಜಪಮಾಲೆ ಹಾಗೂ ಹಸ್ತಪ್ರತಿಗಳನ್ನು ಹಿಡಿದಿರುವಂತೆ ತೋರಿಸಿದ್ದು, ಕಲ್ಲಿನ ಬಂಡೆಯ ಮೇಲೆ ಕುಳಿತಿದು ಎಡಗಾಲಿನ ಮೇಲೆ ಬಲಗಾಲನ್ನು ಹಾಕಿಕೊಂಡು ಕೂತಿದ್ದು ಬಲಬದಿಯಲ್ಲಿ ನವಿಲನ್ನು ಕಾಣಬಹುದು ಹಿನ್ನೆಲೆಯಲ್ಲಿ ವರಗಳನ್ನು ಆಕಾಶವನ್ನು ತೋರಿಸಲಾಗಿದೆ.

ಚಿತ್ರ-೩. ಅರಸನೊಬ್ಬನು ಜಿನನಿಗೆ ಭಿಕ್ಷೆ ನೀಡುವ ದೃಶ್ಯ

ಅರಸನೊಬ್ಬನು ಎಡಬದಿಯಲ್ಲಿ ನಿಂತಿದ್ದು ತನ್ನ ಎದುರು ನಿಂತಿರುವ ಮುನಿಗೆ ತನ್ನ ಎರಡೂ ಕೈಗಳಿಂದ ದಾನ ನೀಡುತ್ತಿರುವ ದೃಶ್ಯವನ್ನು ಇಲ್ಲಿ ರಚಿಸಲಾಗಿದ್ದು ಇವನ ಹಿಂಬದಿಯಲ್ಲಿ ಬಿಳಿಸೀರೆಯನ್ನು ಉಟ್ಟು ಸ್ತ್ರೀಯೊಬ್ಬಳು ನಿಂತಿದ್ದು ಅವಳ ಪಕ್ಕದಲ್ಲಿ ಪುರುಷನು ಏನನ್ನೋ ಹಿಡಿದು ನಿಂತಿರುವಂತೆ ತೋರಿಸಲಾಗಿದೆ ಜೈನ ಮುನಿಯ ನಗ್ನನಾಗಿದ್ದು ಇವನ ಹಿಂಬದಿಯಲ್ಲಿ ದೊಡ್ಡದಾದ ಕಮಂಡಲವಿದ್ದು ಅದರ ಹಿಂದೆ ಹುಲಿ ಮತ್ತು ಹಸು ಒಂದೇ ಮಡಿಕೆಯಲ್ಲಿ ನೀರು ಕುಡಿಯುವಂತೆ

ತೋರಿಸಲಾಗಿದೆ. ಹಿನ್ನೆಲೆಯಲ್ಲಿ ಮರಗಿಡ ಆಕಾಶವನ್ನು ತೋರಿಸಲಾಗಿದೆ. ಇದೂ ಸಹ ರಾಜ ರವಿವರ್ಮರ ಪ್ರಭಾವದಿಂದಾಗಿ ಚಿತ್ರವಾಗಿದ್ದು ತೀರ ಇತ್ತೀಚಿನ ಚಿತ್ರಗಳೆನಿಸುತ್ತವೆ.

ಚಿತ್ರ-೪. ಅರಸನು ಮಲಗಿರುವ ದೃಶ್ಯ

ಮೂರನೆಯ ಚಿತ್ರ ಇದಾಗಿದ್ದು ಕೊನೆಯ ಅಂಕಣದಲ್ಲಿದೆ ಇಲ್ಲಿ ಅರಸನೊಬ್ಬನು ತನ್ನ ಕುದುರೆಯನ್ನು ಕೊಳದ ಮುಂದೆ ಮರಕ್ಕೆ ಕಟ್ಟಿಹಾಕಿ ಮಲಗಿ ವಿಶ್ರಮಿಸುವಂತೆ ತೋರಿಸಲಾಗಿದೆ. ಬಿಳಿವರ್ಣದ ಕುದುರೆಯನ್ನು ಬಹಳ ಕಿರು ರೂಪದಲ್ಲಿ ರಚಿಸಲಾಗಿದ್ದು ರಾಜನು ದಿಬ್ಬದ ಗೋಡೆಯ ಮೇಲೆ ಮಲಗಿರುವಂತೆ ತೋರಿಸಲಾಗಿದೆ ಹಿನ್ನೆಲೆಯಲ್ಲಿ ನೀಲಿ ಹಾಗೂ ಹಸಿರು ಕಾಡನ್ನು ಇಲ್ಲಿ ತೋರಿಸಲಾಗಿದ್ದು ಯಾಥದರ್ಶನ ಸಂಪೂರ್ಣವಾಗಿ ಮುಗ್ಗರಿಸಿದೆ.

ನೆಲ್ಲಿಕಾರು ಪಂಡಿತರ ಮನೆಯ ಭಿತ್ತಿಚಿತ್ರ

ಕಾರ್ಕಳದಿಂದ ಸುಮಾರು ಇಪ್ಪತ್ತಾರೇ ಕಿ.ಮೀ ದೂರದಲ್ಲಿ ನೆಲ್ಲಿಕಾರು ಇದೆ ಮುಖ್ಯ ರಸ್ತೆಯಲ್ಲಿ ಇಳಿದು ಅಲ್ಲಿಂದ ಸುಮಾರು ಅರ್ಧ ಕಿಲೋಮೀಟರ್ ದೂರ ನಡೆದು ಕ್ರಮಿಸಬೇಕು ರಸ್ತೆಯ ಎರಡೂ ಕಡೆ ಗೋಮಾಳದ ಜಾಗವಿದ್ದು, ನೇರವಾದ ರಸ್ತೆ ಇದೆ ಮುಂದೆ ಸಾಗಿದರೆ ಬೀದಿಯ ಎಡಬಲಗಳಲ್ಲಿ ಸಾಲು ಮನೆಗಳಿದ್ದು ಕೊನೆಯಲ್ಲಿ ಜೈನ ಮಂದಿರವನ್ನು ಕಾಣಬಹುದು ಪಂಡಿತರ ಮನೆಗೆ ಹೋಗುತ್ತ ಎಡಭಾಗದಲ್ಲಿದ್ದು ಇದರ ಮುಂದಿನ ಮನೆಯಲ್ಲಿ ಭಿತ್ತಿ ಚಿತ್ರಗಳನ್ನು ನಾವು ಕಾಣಬಹುದಾಗಿದೆ ಈ ಊರಿನಲ್ಲಿ ಹಾಗೂ ಈ ಮನೆಗಳಲ್ಲಿ ಚಲನಚಿತ್ರಗಳನ್ನು ತೆಗೆಯಲಾಗಿದೆ.

ಪಂಡಿತರ ಮನೆಯ ಚಿತ್ರ

ಒಂದನೇ ಅಂತಸ್ಥಿನ ಮನೆಯ ಹೊರಭಾಗದ ಗೋಡೆಯ ಮೇಲೆ ಭಿತ್ತಿಚಿತ್ರಗಳಿದ್ದು ಎಡ ಮತ್ತು ಬಲಭಾಗದಲ್ಲಿ ಬಂದೂಕುಗಳನ್ನು ಹಿಡಿದು ನಿಂತಿರುವ ಚಿತ್ರಗಳಿದ್ದು ಇವರು ದಪ್ಪ ಮೀಸೆಗಳನ್ನು ಬಿಟ್ಟು ಪೇಟವನ್ನು ತೊಟ್ಟು ಸೈನಿಕರ ರೀತಿಯಲ್ಲಿ ವಸ್ತ್ರಗಳನ್ನು ಧರಿಸಿದ್ದಾರೆ ಇದರ ಮಧ್ಯದಲ್ಲಿ ಕಿಟಕಿ ಬಾಗಿಲುಗಳಿದ್ದು ಇವೆರಡರ ಮಧ್ಯಭಾಗದಲ್ಲಿ ಜೈನ ಮುನಿಗೆ ಅರಸನೊಬ್ಬನು ಭಿಕ್ಷೆಯನ್ನು ನೀಡುತ್ತಿರುವ ದೃಶ್ಯವಿದ ಜನಮುನಿಯು ನಗ್ನನಾಗಿದ್ದು ಹಳದೀ ವರ್ಣದಿಂದ ಕಂಗೋಳಿಸುತ್ತಿದ್ದಾರೆ ಬಲಭಾಗದಲ್ಲಿ ಅರಸನಿದ್ದು ಪಕ್ಕದಲ್ಲಿ ಅರಸರ ಆಪ್ತನು ಕೈಯಲ್ಲಿ ಏನನ್ನೋ ಹಿಡಿದು ನಿಂತಿರುವಂತೆ ಚಿತ್ರವನ್ನು ಬರೆಯಲಾಗಿದ್ದು ಹಿನ್ನೆಲೆಯಲ್ಲಿ ಬ್ರಿಟೀಷ್ ಮಾದರಿಯ ಕಟ್ಟಡವಿದ್ದು ಅದರ ಮೇಲೆ ಧ್ವಜಹೊಂದನ್ನು ಕಾಣಬಹುದು ಹಿನ್ನೆಲೆಯನ್ನು ಮರಗಿಡಗಳಿಂದ ಪೂರ್ಣಗೊಳಿಸಲಾಗಿದೆ ಬಲಭಾಗದಲ್ಲಿ ಚಿತ್ರದ ಚಕ್ಕಳಿಗಳು ಉರಿದುಹೋಗುತ್ತಿದ್ದು ಚಿತ್ರವು ತನ್ನ ವರ್ಣಸತ್ವವನ್ನು ಕಳೆದುಕೊಳ್ಳುತ್ತಿದೆ ಈ ಚಿತ್ರದ

ಸುತ್ತಲು ಹೂಬಳ್ಳಿ ವಿನ್ಯಾಸವಿದ್ದು ಈ ಚಿತ್ರವನ್ನು ನೋಡಲು ಬಜಗೋಳಿಯ ಶ್ರವಕರ ಮನೆಯ ಚಿತ್ರದಂತಿ ಕಾಣುವುದು.

ದೊಡ್ಡ ಮನೆಯಲ್ಲಿಯ ಚಿತ್ರಗಳು

ಈ ಮನೆಯ ಎದುರು ಭಾಗದಲ್ಲಿರುವ ದೊಡ್ಡ ಮನೆಯಲ್ಲಿಯೂ ಭಿತ್ತಿ ಚಿತ್ರಗಳಿದ್ದು ಇದೇ ರೀತಿ ಮಹಡಿಯ ಹೊರಭಾಗದಲ್ಲಿ ಚಿತ್ರಗಳನ್ನು ಕಾನಬಹುದಾಗಿದೆ ಇಲ್ಲಿ ಜಂಭೂವೃಕ್ಷ ಹಾಗೂ ದಾತಕೀ ವೃಕ್ಷದ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ ಮಹದಿಯ ಹೊರಭಾಗದಲ್ಲಿ ಬಾಗಲಿಟ್ಟು ಇದರ ಎರಡೂ ಬದಿಗಳಲ್ಲಿ ವೃಕ್ಷಗಳ ಚಿತ್ರಗಳನ್ನು ರಚಿಸಲಾಗಿದ್ದು ಇದರ ಮೇಲೆ ಚೈತ್ಯಾಲಯವಿದ್ದು ಅಲ್ಲಿ ತೀರ್ಥಂಕರನು ಪದ್ಮಾಸನದಲ್ಲಿ ಕುಳಿತಿರುವ ಹಾಗೆ ಚಿತ್ರಗಳನ್ನು ರಚಿಸಲಾಗಿದ್ದು ಹಿನ್ನೆಲೆಯಲ್ಲಿ ಬಿಳಿವರ್ಣವನ್ನು ತೋರಿಸಲಾಗಿದ್ದು ಹಸಿರು ಎಲೆಗಳನ್ನು ಸುವರ್ಣ ಕೊಂಬೆಗಳನ್ನು ಇಲ್ಲಿ ಚಿತ್ರಿಸಲಾಗಿದೆ ಇದೆ ರೀತಿಯ ಚಿತ್ರವನ್ನು ಮೂಡಬಿದರೆಯ ಜೈನ ಮಠದಲ್ಲಿಯೂ ಕಾಣಬಹುದಾಗಿದೆ.

卐卐卐



ರಾಜ ಸಭೆಯಲ್ಲಿ ವಿಶ್ವಭೂತಿ ಮತ್ತು ಮಕ್ಕಳು



ಮರುಭೂತಿಯನ್ನು ಮಂತ್ರಿ ಮಾಡುತ್ತಿರುವ ದೃಶ್ಯ



ಅರವಿಂದರು ಹಾಗೂ ಮರುಭೂತಿ ಯುದ್ಧಕ್ಕೆ ಹೊರಟ ದೃಶ್ಯ



ಅರವಿಂದರು ಹಾಗೂ ಮರುಭೂತಿ ಯುದ್ಧಕ್ಕೆ ಹೊರಟ ದೃಶ್ಯ



ಅರವಿಂದರು ಕಮಠ ಹಾಗೂ ಮರುಭೂತಿಯೊಂದಿಗೆ ಸಂವಾದ



ಕಮಠನು ಸ್ತ್ರೀಯರೊಂದಿಗೆ ಪಗಡೆಯಾಡುತ್ತಿರುವುದು



ಪತ್ನಿಯನ್ನು ಶಂಕಿಸುತ್ತಿರುವ ಮರುಭೂತಿ



ಕಮಠನ ಸ್ತ್ರೀ ದೌರ್ಜನ್ಯ



ಸ್ತ್ರೀಯರೊಂದಿಗೆ ಶೃಂಗಾರದಲ್ಲಿ ತೊಡಗಿರುವ ಕಮಠ




ಕಮಠನಿಗೆ ತಲೆ ಬೋಳಿಸಿತ್ತಿರುವ ಚಿತ್ರ



ಕಮಠನನ್ನು ಕತ್ತೆಯ ಮೇಲೆ ಸವಾರಿ ಮಾಡಿಸುತಿರುವುದು



ಕಮಠನಿಗೆ ಬೇಡರು ಕಲ್ಲಿನಿಂದ ಹೊಡೆದರು



ಕಮಠನು ಮರುಭೂತಿಯ ಮೇಲೆ ಕಲ್ಲನ್ನಾಕುತ್ತಿರುವ ದೃಶ್ಯ



ವಜ್ರಜಂಘ ಶ್ರೀಮತಿ



ರಶ್ಮಿವೇಗನ ಜನ್ಮಾಂತರದ ದೃಶ್ಯ



ಅಚ್ಯುತೇಂದ್ರನ ಸ್ವರ್ಗಾವತರಣ



ವಜ್ರನಾಬಿ ಕುರಂಗ ಬೇಡನ ವೃತ್ತಾಂತ



ಆನಂದ ಮುನಿಯು ಸಿಂಹನಿಂದ ಹತನಾದ ದೃಶ್ಯಾವಳಿ



ರಾಜಕುಲಕ್ಕೆ ಆನಂದನ ಉಪದೇಶ




ಶೋಡಶ ಭಾವನೆಗಳ ಪೋರತಪ



ಅನತೇಂದ್ರನ ಸ್ವರ್ಗಾರೋಹಣ



ವಿಶ್ವಸೇನಾ ಬ್ರಾಹ್ಮೀದೇವಿ ದೃಶ್ಯ



ಹದಿನಾರು ಶುಭ ಕನಸುಗಳು



ಶಚಿದೇವಿ ಬ್ರಾಹ್ಮಿಲೆಯ ಗರ್ಭಾವತರಣ



ದೇವತೆಗಳು ವಿಶ್ವಸೇನ ದಂಪತಿಗಳ ಸೇವೆ ಮಾಡುತ್ತಿರುವುದು



ಬ್ರಾಹ್ಮೀಲಾದೇವಿಗೆ ಶಿಶುಜನನವಾದ ದೃಶ್ಯ



ಐರಾವತದಲ್ಲಿ ಇಂದ್ರನು ಜಿನ ಶಿಶುವನ್ನು ಮೇರು ಪರ್ವತಕ್ಕೆ ಕೊಂಡೊಯ್ಯುವ ದೃಶ್ಯ



ಐರಾವತದಲ್ಲಿ ಇಂದ್ರನು ಜಿನ ಶಿಶುವನ್ನು ಮೇರು ಪರ್ವತಕ್ಕೆ ಕೊಂಡೊಯ್ಯುವ ದೃಶ್ಯ



ಜನ್ಮಾಭಿಷೇಕದ ದೃಶ್ಯ



ಪಂಚಾಗ್ನಿ ತಪವನ್ನು ತಡೆಯುತ್ತಿರುವ ಪಾರ್ಶ್ವನಾಥರು



ಪಂಚಾಗ್ನಿ ತಪವನ್ನು ತಡೆಯುತ್ತಿರುವ ಪಾರ್ಶ್ವನಾಥರು



ಪರ್ಶ್ವನಾಥರ ಪರಿನಿಷ್ಕ್ರಮಣ



ಪಾರ್ಶ್ವರನಾಥರ ಮೇಲೆ ಶಂಬರ ದೇವನ ಬೆಂಕಿ ಮಳೆ



ಪಾರ್ಶ್ವರನಾಥರ ಮೇಲೆ ಶಂಬರ ದೇವನ ಬೆಂಕಿ ಮಳೆ



ಪಾರ್ಶ್ವರನಾಧರ ಮೇಲೆ ಶಂಬರ ದೇವನ ಬೆಂಕಿ ಮಳೆ



ಸಮವಸರಣ ಚಿತ್ರ



ಸಮವಸರಣದ ಅಷ್ಟಮಂಗಳಗಳ ಚಿತ್ರ



ಸರ್ವಣಯಕ್ಷ ಹಾಗೂ ದೇವಾನು ದೇವತೆಗಳು ಸಮವಸರಣಕ್ಕೆ ತೆರಳುತ್ತಿರುವುದು



ಪಾರ್ಶ್ವನಾಥರ ದ್ವಾರಪಾಲಕ



ಧರಣೇಂದ್ರ



ಪದ್ಮಾವತಿ



ಪಂಚಪರಮೇಷ್ಠಿಗಳು



ಷಡ್ ಲೇಶ್ಯೆಗಳು



ರಥೋತ್ಸವದ ಚಿತ್ರ



ರಥೋತ್ಸವದ ಚಿತ್ರ



ರಥೋತ್ಸವದ ವೇಳೆಯ ಜಾತ್ರೆಯ ಚಿತ್ರ



ದ್ವಾರಪಾಲಕರ ಚಿತ್ರ



ನಂದೀಶ್ವರ ದ್ವೀಪ



ಸಮವಸರನದ ಚಿತ್ರ



ಲೋಕ ಸ್ವರೂಪದ ದೃಶ್ಯ



ಜಂಬು ವೃಕ್ಷ ಹಾಗೂ ದಾತಕೀ ವೃಕ್ಷ



ಜೈನ ಮಹಾಭಾರತ



ಭರತನ ದಿಗ್ವಿಜಯ



ಜೈನ ರಾಮಾಯಣ



ಯಕ್ಷಗಾನದ ಚಿತ್ರ




೨೪ ಜೈನ ತೀರ್ಥಂಕರರ ಚಿತ್ರ



ಸರಸ್ವತಿಯ ಚಿತ್ರ



ಅರಸನೊಬ್ಬನು ಜಿನನಿಗೆ ಭಿಕ್ಷೆ ನೀಡುವ ದೃಶ್ಯ



ಪಂಡಿತರ ಮನೆಯ ಚಿತ್ರ



ಪಂಡಿತರ ಮನೆಯ ಚಿತ್ರ



ದೊಡ್ಡ ಮನೆಯಲ್ಲಿಯ ಚಿತ್ರಗಳು

ಅಧ್ಯಾಯ : ನಾಲ್ಕು

ಜೈನ ಹಸ್ತಪ್ರತಿ ಚಿತ್ರಕಲೆ

ಅಧ್ಯಾಯ : ನಾಲ್ಕು

ಜೈನ ಹಸ್ತಪ್ರತಿ ಚಿತ್ರಕಲೆ

ಭಾರತೀಯ ಚಿತ್ರಕಲೆ ಬೇರೆ ಸಂದರ್ಭದ ಹಿನ್ನೆಲೆಯಲ್ಲಿ ಅವಶ್ಯಕತೆಗನುಗುಣವಾಗಿ ವಿವಿಧ ಮಾಧ್ಯಮಗಳಲ್ಲಿ ಅಭಿವ್ಯಕ್ತವಾಗಿದೆ. ಶಿಲೆ, ಮಣ್ಣು, ಮರ (ಕಟ್ಟಿಗೆ), ಗಾರೆ, ಲೋಹ, ಗಾಜು ಮುಂತಾದ ಮಾಧ್ಯಮಗಳಲ್ಲದೆ ತಾಳೇಗರಿ, ಭೂರ್ಜ್ವಪತ್ರ, ಕಡತ, ಚರ್ಮ, ಕಾಗದದಂತಹ ಹಗುರವಾದ ಸ್ಥಳಾಂತರಿಸಲು ಅನುಕೂಲವಾಗುವ ಮಾಧ್ಯಮಗಳಲ್ಲೂ ರೂಪು ತಾಳಿದೆ. ಮುದ್ರಣ ಯಂತ್ರ ಬರುವುದಕ್ಕಿಂತ ಪೂರ್ವದಲ್ಲಿ ಬರವಣಿಗೆಯ ಸಾಧನವಾಗಿ ಹಸ್ತಪ್ರತಿಗಳು ನಿರ್ವಹಿಸಿದ ಪಾತ್ರ ಅನನ್ಯವಾದುದು. ಹಸ್ತಪ್ರತಿಗಳೂ ಅರಸರ ಸುಪ್ತಸಂತಾನದ ಕರ್ತವ್ಯಗಳಲ್ಲಿ ಒಂದೆಂದೂ, ಶಾಸ್ತ್ರದಾನ, ಗ್ರಂಥ ಪ್ರತಿಷ್ಠೆಯ ಪುಣ್ಯಪ್ರತೀಕವೆಂದೂ, ಧರ್ಮ ಪೀಠಾರೋಹಣದ ಪ್ರಸಂಗದ ಜ್ಞಾನದ ಉಡುಗೊರೆಗಳೆಂದೂ, ಬದುಕಿನ ಸ್ವಮುಖದ ಪರಮಸುಖದ ಕಾಮಧೇನುಗಳೆಂದೂ ಭಾವಿಸಿ ಇಂದಿವರೆಗೂ ಕನ್ನಡಿಗರು ಅವುಗಳನ್ನು ಪೂಜ್ಯ ಭಾವನೆಯಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ. ಸಾಮಾನ್ಯ ಜನರು ಹಸ್ತಪ್ರತಿಗಳನ್ನು ತಮ್ಮ ಪ್ರಯೋಜನದ ವೃತ್ತಿ ಮೂಲ ಸಾಧನವಾಗಿಯೂ ಅವುಗಳನ್ನು ಬಳಸಿಕೊಂಡು ಬಂದಿದ್ದಾರೆ. ಹಸ್ತಪ್ರತಿಗಳು ನಮ್ಮ ಪ್ರಾಚೀನ ಜನಾಂಗದ ಅಭಿವ್ಯಕ್ತಿಯ ಅಮೂಲ್ಯ ಸಂಪತ್ತಾಗಿದೆ. ಇವುಗಳ ಅಧ್ಯಯನವೆಂದರೆ ನಮ್ಮ ಪೂರ್ವಜರ ಸಾಂಸ್ಕೃತಿಕ ಜೀವನದ ಅಧ್ಯಯನವೇ ಆಗಿದೆ.[೧]

'ಹಸ್ತಪ್ರತಿ' ಎಂಬ ಪದ ಕನ್ನಡದಲ್ಲಿ ಬಳಕೆಗೊಳ್ಳಲಾರಂಭಿಸಿದ್ದು ಈ ಶತಮಾನದಲ್ಲಾದ ಗ್ರಂಥ ಸಂಪಾದನಾ ಶಾಸ್ತ್ರದ ಪರಿಚಯದೊಂದಿಗೆ. ಆಂಗ್ಲ ಭಾಷೆಯಲ್ಲಿನ 'Manuscript' ಎಂಬದಕ್ಕೆ ಪರ್ಯ್ಯಾರಯವಾಗಿ ಬರಸುತ್ತಾ ಬಂದಿರುವ ಪದವಿದು. ಈ ಪದ ನಮಗೆ ಪರಿಚಯವಾಗುವ ಮೊದಲೇ

೦೧. ಡಾ. ಎಸ್. ಪಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದನೆಲೆ, ಪು-೩೮

ಓಲೆಕಟ್ಟು, ಹೊತ್ತಿಗೆ, ಗ್ರಂಥ ಶಾಸ್ತ್ರ, ನೀಲಿ ಹೊತ್ತಿಗೆ ಎಂಬ ಪದಗಳು ಬಳಕೆಯಲ್ಲಿದ್ದವು. ಅವನ್ನೇ ಸೌಲಭ್ಯಾಕಾಂಕ್ಷೆಯಿಂದ ಮೊಟಕುಗೊಳಿಸಿ ಕಟ್ಟು, ಹೊತ್ತಿಗೆ, ಶಾಸ್ತ್ರ ಮುಂತಾಗಿ ಕರೆಯಲಾಗುತಿತ್ತು. ಕನ್ನಡದ ಪ್ರಾಚೀನ ಗ್ರಂಥಗಳಲ್ಲಿಯೂ ಹೊತ್ತಿಗೆ, ಕವಳಿಗೆ, ಪುಸ್ತಕ ಕಟ್ಟು, ವಹಿ, ಗ್ರಂಥ ಮುಂತಾಗಿ ಹಸ್ತಪ್ರತಿಗಳನ್ನು ಗುರುತಿಸಿದ್ದುಂಟು ಎಂದು ಹೇಳುತ್ತಾರೆ ಡಾ. ಬಿ.ಕೆ. ಹಿರೇಮಠ ಅವರು. ಹಸ್ತಪ್ರತಿಯನ್ನು ತಮ್ಮದೇ ಆದ ರೀತಿಯಲ್ಲಿ "ಭಾರವಲ್ಲದ ಲೇಖ್ಯ ವಸ್ತುವಿನ ಮೇಲೆ ಕೈಯಿಂದ ಬರೆದ ಜೀವನಾವಶ್ಯಕ ಜ್ಞಾನ ಪ್ರಧಾನವಾದ ಕೃತಿ ಮತ್ತು ಅದರ ಪ್ರತಿಕೃತಿಗಳಿಗೆ ಹಸ್ತ ಪ್ರತಿಗಳು"[೨] ಎಂದು ಸರಿಯಾಗಿಯೇ ವ್ಯಾಖ್ಯಾನಿಸಿದ್ದಾರೆ. ಇನ್ನೂ ಹಸ್ತಪ್ರತಿ ಚಿತ್ರಕಲೆಯೆಂದರೆ ಕೈಯಿಂದ ಬರವಣಿಗೆಯಾದಿ ಸಿದ್ದಗೊಂಡು, ವಸ್ತ್ರಪಟ, ವೃಕ್ಷಪತ್ರ (ತಾಡೋಲೆ ಭೂರ್ಜ್ವಪತ್ರ) ಕಾಗದ, ಚರ್ಮದಂತಹ ಹಗುರವಾದ ವಸ್ತು ಅಥವಾ ಕಟ್ಟುಗಳ ರಕ್ಷಾಕವಚದ ಮೇಲೆ ಮತ್ತು ಒಳಗಡೆಯ ಅಲಂಕಾರಕ್ಕಾಗಿ ಬರವಣಿಗೆಯ ವಿಷಯದ ಹಿನ್ನೆಲೆಯಲ್ಲಿ ಆಯಾ ಸಂದರ್ಭ ಸನ್ನಿವೇಶಕ್ಕೆ ಚಿತ್ರಿಸಿದ ರೇಖಾ ವರ್ಣಚಿತ್ರ ವಿನ್ಯಾಸವನ್ನೆಲ್ಲಾ ಹಸ್ತಪ್ರತಿಯ ಚಿತ್ರಕಲೆ ಎಂದು ಕರೆಯಬಹುದಾಗಿದೆ.

ಹಸ್ತಪ್ರತಿಗಳು ಧಾರ್ಮಿಕವಾಗಿ ಅಲ್ಲದೆ, ಸಂಸ್ಕೃತಿ, ಆಚಾರ-ವಿಚಾರ, ಭಾಷೆ, ಸಾಹಿತ್ಯ, ಜ್ಯೋತಿಷ್ಯ, ಗಣಿತ, ವಿಜ್ಞಾನ, ತತ್ವಜ್ಞಾನ, ಮಹಾಗ್ರಂಥಗಳ ರಚನೆಯನ್ನು ಮಾಡಲು ಬಳಸುತ್ತಿದ್ದರು. ಇವುಗಳಲ್ಲಿ ಸಾಹಿತ್ಯವಷ್ಟೇ ಅಲ್ಲದೆ ಚಿತ್ರಕಲೆಗೂ ಪ್ರಾಮುಖ್ಯತೆ ಇತ್ತು. ಅಲ್ಲದೆ ಹಲವಾರು ಹಸ್ತಪ್ರತಿಗಳನ್ನು ಕಲಾವಿದರಿಂದ ಪ್ರತಿಮಾಡಿಸಲಾಗುತ್ತಿತ್ತು. ಹಾಗೂ ವಿಷಯ ಸಾಂದರ್ಭಿಕವಾಗಿ ಬೇಕಾಗುವ ಚಿತ್ರಗಳನ್ನು ಸಹ ಚಿತ್ರಕಲಾವಿದರಿಂದ ಚಿತ್ರಿಸಲಾಗುತ್ತಿತ್ತು. ಅವುಗಳನ್ನು ಸಚಿತ್ರಹಸ್ತ ಪ್ರತಿಗಳೆಂದು ಕರೆಯಲಾಗುತ್ತದೆ. ಈ ಸಚಿತ್ರ ಹಸ್ತಪ್ರತಿಗಳನ್ನು ಮುಖ್ಯವಾಗಿ ಈ ಕೆಳಗಿನ ರೀತಿಯಲ್ಲಿ ವರ್ಗೀಕರಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ.

೧. ಜನಪದ ಮೂಲ ಹಸ್ತಪ್ರತಿ ಚಿತ್ರಕಲೆ.

೨. ಶಿಷ್ಟಪದ ಮೂಲದ ಹಸ್ತಪ್ರತಿ ಚಿತ್ರಕಲೆ.

೩. ಶಿಷ್ಟಪದ ಮೂಲದ ಸಮ್ಮಿಶ್ರ ಹಸ್ತಪ್ರತಿ ಚಿತ್ರಕಲೆ ಎಂಬುದಾಗಿ ಮೂರು ವಿಧವಾಗಿ ವರ್ಗೀಕರಿಸಬಹುದಾಗಿದ್ದು, ಇವುಗಳನ್ನು ಸ್ಥೂಲವಾಗಿ ಈ ಕೆಳಕಂಡಂತೆ ವಿವೇಚಿಸಬಹುದು.

೧. ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆ

ಜನಪದ ಚಿತ್ರಕಲೆಯೂ ನಿಸರ್ಗ ಸಹಜವಾದ ಲಕ್ಷಣಗಳನ್ನು ತನ್ನಲ್ಲಿ ಅಳವಡಿಸಿಕೊಂಡಿವೆ. ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ರೇಖೆ ಬಣ್ಣಗಳದ್ದೇ ಒಂದು ವಿಶೇಷ ಸೊಗಸು. ಅಲಂಕಾರವೇ

೦೨. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು - ಒಂದು ಅಧ್ಯಯನ, ಪು-೧೦

ಇಲ್ಲಿ ಪ್ರಮುಖ ವೈಶಿಷ್ಟ್ಯ. ಯವುದೇ ರೀತಿಯ ಕಟ್ಟುನಿಟ್ಟಾದ ಪ್ರಮಾಣ ಬದ್ಧತೆಗೆ ಈ ಕಲೆ ಬದ್ಧವಾಗಿರುವುದಿಲ್ಲ. ಅಧ್ಯಯನದ ಯಾವ ಅರಿವು ಇಲ್ಲದೆ ಜನಪದರು ತಾವು ಪಡೆದ ಲೋಕಾನುಭವದ ಭಾವನೆಗಳಿಗೆ ಸಹಜವಾಗಿ ಮೂರ್ತ ರೂಪವನ್ನು ಇಲ್ಲಿ ನೀಡರುತ್ತಾರೆ. ಜನಪದ ಹಸ್ತಪ್ರತಿ ಚಿತ್ರಕಲೆಯಲ್ಲಿ ಬಳಕೆಯಾಗುವ ಬಣ್ಣಗಳು ನಿಸರ್ಗದಲ್ಲಿ ಅವರಿಗೆ ಸಹಜವಾಗಿ ಸಿಗುವಂತಹ ವಸ್ತುಗಳಿಂದ ಸಿದ್ಧಪಡಿಸಿಕೊಂಡಂತಹವುಗಳು. ಇನ್ನು ಇವುಗಳ ವಸ್ತು ವಿಷಯ, ಸಂಪ್ರದಾಯ, ನಂಬಿಕೆ, ಆಚರಣೆ, ಕಥೆ, ಒಗಟು, ಒಗಟುಗಾದೆ ಇತ್ಯಾದಿ ಜನಪದೀಯ ಅಂಶಗಳು ದಟ್ಟವಾಗಿ ಈ ಕಲೆಯನ್ನು ಆವರಿಸಿಕೊಂಡಿದೆ.

ಈ ಜನಪದ ಮೂಲದ ಹಸ್ತಪ್ರತಿ ಚಿತ್ರಕಲೆಯನ್ನು ಮೂರು ರೀತಿಯಲ್ಲಿ ವಿಂಗಡಿಸಿ ನೋಡುವುದಾದರೆ,

೧. ರೇಖಾಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು.

೨. ವರ್ಣಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು.

೩. ರೇಖಾ ಮತ್ತು ವರ್ಣಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು.

೧. ರೇಖಾ ಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳು : ರೇಖಾಚಿತ್ರವನ್ನು ಒಳಗೊಂಡ ಹಸ್ತಪ್ರತಿಗಳು ಜನಪದದಲ್ಲಿ ಉಪಲಬ್ಧವಿದ್ದು ಇಲ್ಲಿ ಬರವಣಿಗೆ ಇಲ್ಲದೆ ಕೇವಲ ರೇಖಾ ಚಿತ್ರ ವಿನ್ಯಾಸಗಳಿವೆ. (ಚಿತ್ರಕಾರರು ಸ್ಕೆಚ್ ಬುಕ್‌ಗಳ ಸ್ವೂರಪದಲ್ಲಿ ಇಲ್ಲಿ ಕಾಣಬಹದು) ಬರವಣಿಗೆಯ ಜೊತೆಯಲ್ಲಿಯೂ ರೇಖಾಚಿತ್ರಗಳಿರುವ ಹಸ್ತಪ್ರತಿಗಳಿವೆ. ಇವುಗಳಲ್ಲಿ ಮುಖ್ಯವಾಗಿ ಕೆಲವನ್ನು ಉದಾಹರಣೆಗೆ ಉಲ್ಲೇಖಿಸುವುದಾದರೆ, ಹಚ್ಚೆಯ ರೇಖಾ ಚಿತ್ರಗಳಗೊಂಡ ಹಸ್ತಪ್ರತಿಗಳು, ಹೆಳವರಲ್ಲಿ ವಂಶಾವಳಿಗಳನ್ನೊಳಗೊಂಡ ಹಸ್ತಪ್ರತಿಗಳು ಹಾಗೂ ಮದರಂಗಿ (ಮೆಹಂದಿ) ರೇಖಾ ಚಿತ್ರಗಳನ್ನೊಳಗೊಂಡ ಹಸ್ತಪ್ರತಿಗಳು[3] ಹೀಗೆ ಇತ್ಯಾದಿ ರೇಖಾಚಿತ್ರ ಪ್ರಧಾನ ಜನಪದ ಹಸ್ತಪ್ರತಿಗಳನ್ನು ಕಾಣಬಹುದಾಗಿದೆ.

೨. ವರ್ಣ ಚಿತ್ರಗಳಿರುವ ಜನಪದ ಹಸ್ತಪ್ರತಿಗಳು : ಜನಪದ ಹಸ್ತಪ್ರತಿಗಳಲ್ಲಿರುವ ವರ್ಣಚಿತ್ರಗಳನ್ನು ಬಿಟ್ಟು ಕೊಡದ ವಿಷಯವನ್ನು ಮಾತ್ರ ಪ್ರಕಟಿಸುವ ಕಾಯಕವು ನಡೆದಿದೆ. ದುಬಾರಿಯಾದ ಮುದ್ರಣವು, ವೆಚ್ಚವು ಇದಕ್ಕೆ ಕಾರಣವಾಗಿ ಅಮೂಲ್ಯವಾದ ಜನಪದ ವರ್ಣಚಿತ್ರಗಳು ಮೂಲದ ಹಸ್ತಪ್ರತಿಯಲ್ಲಿಯೇ ಅಜ್ಞಾತವಾಗಿ ಉಳಿದಿರುವುದೇ ಹೆಚ್ಚು. ಉದಾಹರಣೆಗಾಗಿ ನಂಜುಂಡ ಕವಿಯ 'ವೃಷಬೇಂದ್ರ ವಿಲಾಸ' ಎಂಬ ಯಕ್ಷಗಾನ ಜನಪದ ಹಸ್ತಪ್ರತಿಯಲ್ಲಿ ಸಾವಿರಾರು

೦೩. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು-೭೧

ವರ್ಣಚಿತ್ರಗಳಿದ್ದು ಅವು ಪ್ರಕಟವಾಗದೆ ಇರುವುದು ಚಿತ್ರಕಲಾ ಕ್ಷೇತ್ರ ದೊಡ್ಡ ಕೊರತೆಯನ್ನಬೇಕಾಗಿದೆ. ಇಲ್ಲಿ ಬಸವಣ್ಣನ ಕಥೆಯನ್ನು ಯಕ್ಷಗಾನ ರೂಪದಲ್ಲಿ ವರ್ಣಚಿತ್ರಗಳೊಂದಿಗೆ ಹೇಳಿಕೊಂಡು ಹೋಗಲಾಗಿದೆ. 'ಶ್ರೀ ತತ್ವನಿಧಿ' ಯಲ್ಲಿರುವಂತೆ ಪುಟಪುಟಗಳಲ್ಲಿಯೂ ಮೈವೆತ್ತು ನಿಂತಿರುವ ಅಸಂಖ್ಯಾತ ವರ್ಣಚಿತ್ರಗಳು ದಪ್ಪವಾದ ಬಿಳಿಯ ಕಾಗದದಲ್ಲಿ ರಚಿತವಾದ ಈ ಗ್ರಂಥ ಆಧಾರದಲ್ಲಿ ಸುಮಾರು ಒಂದಡಿಗಿಂತಲೂ ಸ್ವಲ್ಪ ಹೆಚ್ಚು ಉದ್ದವಾಗಿಯೂ ಮತ್ತು ಅರ್ಧ ಅಡಿಗಿಂತಲೂ ಸ್ವಲ್ಪ ಹೆಚ್ಚು ಅಗಲವಾಗಿಯೂ ಇದೆ. ಒಂದೊಂದು ಪುಟದ ಸುತ್ತಲೂ ಹಳದಿ ಬಣ್ಣದ ಅಂಚನ್ನು ಕಟ್ಟಲಾಗಿದೆ. ಪ್ರತಿಪುಟದಲ್ಲಿಯೂ ಕಥಾನಿರೂಪಣೆಯ ಒಂದೋ, ಎರಡೋ ಪದ್ಯಗಳಿದ್ದು ಅದಕ್ಕೆ ಸಂಬಂಧಪಟ್ಟ ಚಿತ್ರಗಳೇ ಪ್ರಧಾನವಾಗಿ ಕಂಗೊಳಿಸುತ್ತವೆ.[೪]

ಶಾಂತಿಕೀರ್ತಿಯ ಚತುರ್ವಿಂಶತಿ ತೀರ್ಥಂಕರ ಪುರಾಣದ ಎರಡು ಅಪೂರ್ವವಾದ ಕಾಗದದ ಹಸ್ತಪ್ರತಿಗಳು ಕೊಲ್ಲಾಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಠದ ಸಂಗ್ರಹದಲ್ಲಿದೆ. ಇವೆರಡು ಪ್ರತಿಯೊಬ್ಬ ತೀರ್ಥಂಕರನ ಜನನ, ಜನ್ಮಗ್ರಾಮ, ಅವಸಾನಗಳ ಸಂಕ್ಷಿಪ್ತ ಚರಿತ್ರೆಯೊಂದಿಗೆ ಚಿತ್ರರಚನೆಯೂ ಅನುಪಮವಾಗಿರುವುದು ವಿಶೇಷ. ಅದರಂತೆ ಈ ಸಂಗ್ರಹದಲ್ಲಿನ ಪ್ರತಿಷ್ಠಾತಿಲಕವು ಕೂಡ ವಿಫಲವಾದ ಚಿತ್ರರಚನೆಗಳಿಂದ ಕೂಡಿದ್ದು ಬಸದಿಗಳಲ್ಲಿನ ಮೂರ್ತಿಗಳ ಪೂಜಾದಿ ಸಮಾರಂಭಗಳ ವಿಧಿವಿಧಾನಗಳನ್ನು ಹೇಳಿರುವುದಲ್ಲದೆ ಅದನ್ನು ವರ್ಣ ಚಿತ್ರರೂಪದಲ್ಲಿ ತೋರಿಸಿದ್ದು ಕಂಡುಬರುತ್ತದೆ. ಚಿತ್ರಗಳು ಮರಾಠಾಶೈಲಿಯ ಪ್ರಭಾವವಿರುವ ಚಿತ್ರ ಶೈಲಿಯ ಸಚಿತ್ರ ಪ್ರತಿಯಾಗಿದೆ[೫] ಎಂದು ಡಾ॥ ಬಿ. ಕೆ. ಹಿರೇಮಠ ಅವರ ಅಭಿಪ್ರಾಯವಾಗಿದೆ.

೩. ರೇಖಾ ಮತ್ತು ವರ್ಣಚಿತ್ರ ಪ್ರಧಾನ ಹಸ್ತಪ್ರತಿಗಳು : ರೇಖಾ ಮತ್ತು ವರ್ಣಚಿತ್ರಪ್ರಧಾನ ಜನಪದ ಹಸ್ತಪ್ರತಿಗಳಲ್ಲಿ ನಾನಾ ವಿಧವಾದ ಸ್ವರೂಪಗಳಿದ್ದು, ಅವುಗಳಲ್ಲಿ ಒಂದೆರಡನ್ನು ಸಂಕ್ಷಿಪ್ತವಾಗಿ ನೋಡುವುದಾದರೆ ನೀಲಿ ಹೊತ್ತಿನ ಹಸ್ತಪ್ರತಿ ಮತ್ತು ಗಿಳಿ ಶಕುನದ ಹಸ್ತಪ್ರತಿಗಳನ್ನು ಸಾಮಾನ್ಯವಾಗಿ ಗಮನಿಸಬಹುದಾಗಿದೆ. ಈ ನೀಲಿ ಹೊತ್ತಿಗೆ ಹಸ್ತಪ್ರತಿಯಲ್ಲಿ ಬರವಣಿಗೆಯಿಲ್ಲದೆ ಕೇವಲ ರೇಖಾ ಮತ್ತು ವರ್ಣ ಚಿತ್ರಗಳಿರುವುದು ಇದರ ವೈಶಿಷ್ಟ್ಯ. ಈ ಹಸ್ತಪ್ರತಿಯನ್ನು ಜಿನಗಾರ ಅಥವಾ ಚಿತ್ರಗಾರ ಕುಟುಂಬದವರು ತಯಾರಿಸಿ ಕೊಟ್ಟಿದ್ದಾಗಿ ವಿವರಗಳು ಸಿಗುತ್ತವೆ.[೬] ಇನ್ನು ಗಿಳಿಶಕುನದ ಹಸ್ತಪ್ರತಿಗಳಲ್ಲಿಯೂ ರೇಖಾಚಿತ್ರ ಮತ್ತು ವರ್ಣಚಿತ್ರಗಳಿರುವ ಹಾಳೆಗಳಿದ್ದು ಅವುಗಳ ನಡುವೆ ರಂಧ್ರ ಮಾಡಿ ಕಟ್ಟಿದ ಕಟ್ಟು ಈ ಹಸ್ತಪ್ರತಿ ಗಿಳಿಯ ಸಹಾಯದಿಂದ ಈ ಕಟ್ಟಿನಲ್ಲಿರುವ ಹಾಳೆಯನ್ನು

೦೪. ಡಾ. ಎಚ್. ತಿಪ್ಪೇರುದ್ರಸ್ವಾಮಿ : ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು-೭೭೬

೦೫. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು - ಒಂದು ಅಧ್ಯಯನ, ಪು-೧೯೨

೦೬. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು-೧೨೬

ತೆಗೆಯಿಸಿ ನೋಡಿ ಆ ಚಿತ್ರದ ವಿಷಯದ ಮೇಲೆ ಭವಿಷ್ಯ ಹೇಳಲಾಗುತ್ತದೆ. ನೀಲಿ ಹೊತ್ತಿಗೆ ಮತ್ತು ಗಿಳಿಶಕುನದ ಹಸ್ತಪ್ರತಿ ಚಿತ್ರಗಳಿಗೂ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಮೂಲ ಉದ್ದೇಶ ಹಾಗೂ ಚಿತ್ರಗಳು ಒಂದೇ ರೀತಿಯ ಆಶಯವನ್ನು ಹೊಂದಿದೆ. ಇದೇ ಅಲ್ಲದೆ ಮಂತ್ರ-ತಂತ್ರ, ಬಾನಾಮತಿಗೆ ಸಂಬಂಧಿಸಿದ ಜನಪದ ಚಿತ್ರಗಳಿರುವ ಹಸ್ತಪ್ರತಿಗಳು ಜನಪದದಲ್ಲಿ ಸಿಗುತ್ತಿದ್ದು ಅವುಗಳನ್ನು ಸಮಗ್ರವಾಗಿ ಸಂಗ್ರಹಿಸಿ ವಿಧ್ವಾಂಸರ ಸಂಶೋಧನಾ ಅಧ್ಯಯನಗಳ ಅವಶ್ಯಕತೆಗಳು ಕಲಾಕ್ಷೇತ್ರಕ್ಕೆ, ಕಲಾವಿದರಿಗೆ ಗೌರವ ತರುವ ಮಾರ್ಗವಾಗಿದೆ.

೨. ಶಿಷ್ಟಪದ ಮೂಲದ ಹಸ್ತಪ್ರತಿ ಚಿತ್ರಕಲೆ

ಶಿಷ್ಟಪದ ಮೂಲದ ಹಸ್ತಪ್ರತಿಯಲ್ಲಿ ಶಾಸ್ತ್ರೀಯ ಹಿನ್ನೆಲೆಯ ಚಿತ್ರಕಲೆಯೂ ಇರುವುದು ಗಮನಿಸುವಂತಹ ಅಂಶವಾಗಿದೆ. ಇಲ್ಲಿ ಕಿರುರೂಪ ಚಿತ್ರಕಲೆ ಮತ್ತು ರಾಗಮಾಲಾ ಅಲ್ಲದೆ ತಾಂತ್ರಿಕ ಚಿತ್ರಕಲೆ ವಿಶೇಷವಾಗಿ ಬೆಳೆದು ಬಂದಿರುವುದನ್ನು ನೋಡುತ್ತೇವೆ. ಸಂಗೀತವನ್ನು ಚಿತ್ರಕಲೆಗೆ ಅಳವಡಿಸಿಕೊಂಡು ಹಸ್ತಪ್ರತಿಯಲ್ಲಿ ಚಿತ್ರಗಳನ್ನು ಬಿಡಿಸಿದ್ದು ಒಂದು ಹೊಸ ಪ್ರಯೋಗ. ಇಲ್ಲಿ ವಾತ್ಸಾಯನನ ಷಡಗಂಗಗಳು ಕ್ರಮವರಿತು ಬಂದಿವೆ. ಜನಪದ ಕಲೆಯಿಂದ ಶಿಷ್ಟಪದ ಕಲೆ ಬೌದ್ಧಿಕ ವಿಕಾಸ ಪಡೆದು ಹಸ್ತಪ್ರತಿಯಲ್ಲಿ ತಂತ್ರವಿನ್ಯಾಸಗಳನ್ನು ಬಳಸಿ ಪ್ರಯೋಗಿಸಿದ್ದನ್ನು ಕಾಣಬಹುದಾಗಿದೆ. ಈ ಶಿಷ್ಟಪದ ಹಸ್ತಪ್ರತಿ ಚಿತ್ರಕಲೆಯನ್ನು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

೧. ಚಿತ್ರಕಲೆಯ ಉಲ್ಲೇಖವನ್ನು ಹೊಂದಿದ ಹಸ್ತಪ್ರತಿಗಳು.

೨. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಹಸ್ತಪ್ರತಿಗಳು.

೧. ಚಿತ್ರಕಲೆಯ ಉಲ್ಲೇಖವನ್ನು ಹೊಂದಿದ ಹಸ್ತಪ್ರತಿಗಳು : ಹಸ್ತಪ್ರತಿಯಲ್ಲಿ ಚಿತ್ರಕಲೆಯ ಕುರಿತಾದ ಸಾಹಿತ್ಯವನ್ನು ಹೊಂದಿರುವ ಇಲ್ಲವೇ ಪ್ರಾಸಂಗಿಕವಾಗಿ ಚಿತ್ರಕಲೆಯ ವಿಷಯವನ್ನು ಉಲ್ಲೇಖಿಸುವ ಹಸ್ತಪ್ರತಿಗಳು ಹೇರಳವಾಗಿ ಸಿಗುತ್ತವೆ. ಇವುಗಳನ್ನು ಮೂರು ರೀತಿಯಲ್ಲಿ ವಿಭಜಿಸಬಹುದು.[೭]

ಅ. ಸಂಸ್ಕೃತ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ.

ಬ. ಕನ್ನಡ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ.

ಕ. ಪರ್ಷಿಯನ್ ಹಸ್ತಪ್ರತಿಗಳಲ್ಲಿ ಚಿತ್ರಕಲೆಯ ಉಲ್ಲೇಖ.

ಅ. ಸಂಸ್ಕೃತ ಹಸ್ತಪ್ರತಿ ಕೃತಿಗಳಲ್ಲಿ ಚಿತ್ರಕಲೆಯ ಉಲ್ಲೇಖ : ಸಂಸ್ಕೃತದ ಸಾಹಿತ್ಯದಲ್ಲಿ ಚಿತ್ರಕಲೆಯ

೦೭. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು-೫೫

ಉಲ್ಲೇಖದ ಹಲವಾರು ಕೃತಿಗಳಿದ್ದು, ಕೆಲವನ್ನು ಇಲ್ಲಿ ಹೆಸರಿಸಬಹುದಾಗಿದೆ. 'ಪಂಚದಶಿ' ಯಲ್ಲಿ ಚಿತ್ರದೀಪವೆಂಬ ಅಧ್ಯಾಯವೇ ಇದೆ. 'ಅಷ್ಟಾಧ್ಯಾಯಿ ನಾಟ್ಯಶಾಸ್ತ್ರ', 'ಮೇಘದೂತ', 'ರಘುವಂಶ', 'ಕಾಮಸೂತ್ರ', 'ಬೃಹತ್ ಸಂಹಿತಾ', 'ವಿಷ್ಣುಧರ್ಮೋತ್ತರ ಪುರಾಣ', 'ಮತ್ಸ್ಯಪುರಾಣ', 'ಗರುಡ ಪುರಾಣ', 'ಅಗ್ನಿಪುರಾಣ', 'ಹರಿಸವಂಶಪುರಾಣ', 'ಸ್ಕಂದ ಪುರಾಣ', 'ಪದ್ಮ ಪುರಾಣ', 'ಮೇದಿನಿಕೋಶ', 'ಬಾಣ ಕಾದಂಬರಿ', 'ಹರ್ಷಚರಿತ', 'ದಶಕುಮಾರ ಚರಿತ', 'ಕುಟ್ಟನಿಮತ', 'ನಿಲಕಮಂಜರಿ', 'ಕಥಾಸರಿತ್ಸಾಗರ', 'ಮಾನಸಾರ', 'ಕಾವ್ಯಪ್ರಕಾಶ', 'ನೈಷದ ಚರಿತ', 'ಪ್ರಶ್ನಾವ್ಯಾಕರಣ ಸೂತ್ರ', 'ತ್ರಿಷಷ್ಠಿ ಶಲಾಕಾ ಪುರುಷ ಚರಿತ', 'ನಾನಾರ್ಥ ವರ್ಣ ಸಂಕ್ಷೇಪ', 'ಆಚಾರಾಂಗ ಸೂತ್ರ', 'ಮಹಾವಂಶ ವಿನಯಪೀಠಕ, 'ದಮ್ಮಪದ' ಮುಂತಾದ ಕೃತಿಗಳಲ್ಲಿ ಚಿತ್ರಕಲೆಯ ರಚನಾ ವಿಧಿವಿಧಾನದ ಕುರಿತು ಹಲವಾರು ಉಪಯುಕ್ತ ಮಾಹಿತಿಗಳು ಸಿಗುತ್ತವೆ.

ಬ. ಕನ್ನಡ ಹಸ್ತಪ್ರತಿಯ ಕೃತಿಗಳಲ್ಲಿ ಚಿತ್ರಕಲೆಯ ಉಲ್ಲೇಖ : ಕವಿರಾಜಮಾರ್ಗ, ವಡ್ಡಾರಾಧನೆ, ವಿಕ್ರಮಾರ್ಜುನವಿಜಯ, ಕರ್ನಾಟಕ ಕಾದಂಬರಿ, ಮಲ್ಲಿನಾಥ ಪುರಾಣ, ಧರ್ಮಾಮೃತ, ಸಿದ್ಧರಾಮಚಾರಿತ್ರ, ಸೊಬಗಿನ ಸೋನೆ, ಮೋಹನ ತರಂಗಿಣಿ, ಚನ್ನಬವಸವಪುರಾಣ, ನೇಮಿನಾಥ ಪುರಾಣ, ಯಶೋಧರ ಚರಿತ್ರೆ, ಅನಂತನಾಥ ಪುರಾಣ, ಕಬ್ಬಿಗರ ಕಾವ್ಯ, ಅಭಿನವ ದಶಕುಮಾರ ಚರಿತೆ, ರಾಜಶೇಖರ ವಿಲಾಸ ಮತ್ತು ವಚನ ಸಾಹಿತ್ಯದಲ್ಲಿ ಬಸವಣ್ಣ, ಮಧುವಯ್ಯ, ಭಂಡಾರಿ ಶಾಂತರಸ, ಅಂಬಿಗರ ಚೌಡಯ್ಯ, ಮೋಳಿಗೆಯ ಮಾಚಯ್ಯನವರ ವಚನಗಳಲ್ಲಿ[೧೮] ಇನ್ನೂ ಅನೇಕ ಕೃತಿಗಳಲ್ಲಿ ಚಿತ್ರಕಲೆಯ ಉಲ್ಲೇಖಗಳು ಸಿಗುತ್ತವೆ.

ಕ. ಪರ್ಷಿಯನ್ ಹಸ್ತಪ್ರತಿಯಲ್ಲಿ ಚಿತ್ರಕಲೆಯ ಉಲ್ಲೇಖ : ವಿಜಾಪುರದ ಅರಸರಲ್ಲಿ ಮೊಘಲ್ ದೊರೆಗಳ ಕಾಲದಿಂದ ಪರ್ಷಿಯನ್ ಹಸ್ತಪ್ರತಿಗಳಲ್ಲಿ ಚಿತ್ರಕಲಾವಿದರ ಅನೇಕ ವಿವರಗಳು ಸಿಗುತ್ತವೆ. ವಿಜಾಪುರ ಅರಸ ಇಬ್ರಾಹಿಂದ ಆದಿಲ್‌ಶಾ (ಇಮ್ಮಡಿ ಕ್ರಿ.ಶ. ೧೫೮೦-೧೬೨೭) ದಖಣಿ ಕಲಾ ಶೈಲಿಗೆ ಮುಖ್ಯವಾದ ವ್ಯಕ್ತಿ ಮತ್ತು ಸ್ವಂತ ಚಿತ್ರಕಾರನಾಗಿದ್ದ 'ಕಿತಾಬೆ-ಇ-ನವರಸ' ಇವರ ಕಾವ್ಯಕ್ಕೆ ಅನುಗುಣವಾಗಿ ರಾಗಮಾಲಾಚಿತ್ರಗಳು ಅಲ್ಲಿ ರಚನೆಯಾಗಿವೆ. ಇವನಿಗಿಂತ ಮೊದಲು ಅಲ್ಲಿ ಆದಿಲ್‌ಶಾ (ಮೊದಲನೆಯ ಕ್ರಿ.ಶ. ೧೫೫೮-೧೫೮೦) ಕೂಡ ನಜಂ-ಉಲ್-ಉಲ್ಮ್ ಎಂಬ ಸಚಿತ್ರ ಗ್ರಂಥವನ್ನು ಸಿದ್ಧಪಡಿಸಿದನೆಂದು ತಿಳಿಯುತ್ತದೆ. ಇಲ್ಲೆಲ್ಲ ಅನೇಕ ಚಿತ್ರಕಾರರ ಹೆಸರುಗಳು ಸಿಗುತ್ತವೆ.[೧೯] (ಅಕ್ಬರ್ ಕ್ರಿ.ಶ. ೧೫೫೬-೧೬೦೫) ಇವನ ಕಾಲದಲ್ಲಿ ತರ್ಖಿ-ಇ-ಅಲ್‌ಪಿ (ಜಗತ್ತಿನ ಇತಿಹಾಸ), ಜಮಿ-ಆಲ್‌ತಪರಿಖ್ (ಮೊಗಲರ ಚರಿತ್ರೆ), ದರಬ್‌ನಾಮ್, ಶಾನಾಮಾ (ದೊರೆಗಳ ವಂಶಾವಳಿ), ತೈಮೂರ

---

೧೮. ಡಾ. ಎಸ್. ಸಿ. ಪಾಟೀಲ : ಕರ್ನಾಟಕದ ಜನಪದ ಚಿತ್ರಕಲೆ, ಪು-೫೮

೧೯. ಎಸ್. ಕೆ. ರಾಮಚಂದ್ರರಾವ್ : ಶ್ರೀತತ್ವನಿಧಿ-೧, ಪು-೪೬

ನಾಮಾ (ತೈಮೂರಲಂಗನ ಚರಿತ್ರೆ), ಬಾಬರ್ ನಾಮಾ[೧೦] ಮುಂತಾದ ಗ್ರಂಥಗಳಲ್ಲಿ ಚಿತ್ರಕಾರರ ಹೆಸರುಗಳು ಮತ್ತು ಅನೇಕ ವರ್ಣಚಿತ್ರಗಳು ಹಸ್ತಪ್ರತಿಯೊಂದಿಗೆ ಇರುವುದನ್ನು ಕಾಣಬಹುದಾಗಿದೆ.

೨. ಚಿತ್ರಕಲಾ ವಿನ್ಯಾಸವನ್ನು ಹೊಂದಿದ ಹಸ್ತಪ್ರತಿಗಳು : ಚಿತ್ರಕಲಾ ವಿನ್ಯಾಸವನ್ನು ಅಂದರೆ ರೇಖಾಚಿತ್ರ ಮತ್ತು ವರ್ಣಚಿತ್ರವನ್ನು ಹೊಂದಿದ ಹಸ್ತಪ್ರತಿಗಳು ಬಹುಸಂಖ್ಯೆಯಲ್ಲಿದ್ದು ಧಾರ್ಮಿಕ ಮತ್ತು ಧಾರ್ಮಿಕೇತರ ಹಸ್ತಪ್ರತಿಗಳೆಂದು ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದು. ಧಾರ್ಮಿಕವಾಗಿ ಗಮನಿಸುವುದಾದರೆ ಇದರಲ್ಲಿ ಜೈನ, ವೀರಶೈವ, ವೈಷ್ಣವ ಹಾಗೂ ಪಾರ್ಷಿ ಎಂದು ಗುರುತಿಸಬಹುದು.

ಜೈನಧರ್ಮದ ಹಸ್ತಪ್ರತಿಗಳಲ್ಲಿ ತೀರ್ಥಂಕರ, ಜೈನ ಮುನಿ, ಯಕ್ಷ ಯಕ್ಷಿ, ಹೂಬಳ್ಳಿ, ಪ್ರಾಣಿಗಳ ಚಿತ್ರಗಳು ಸಾಮಾನ್ಯವಾಗಿ ಕಂಡುಬರುತ್ತವೆ. ವೀರಶೈವ ಹಸ್ತಪ್ರತಿಗಳಲ್ಲಿ ಶಿವನನ್ನು ಕುರಿತ ಚಿತ್ರಗಳು ಓಲಗ, ನಂದಿ, ಶಿವಲಿಂಗ, ಗಣೇಶ, ಷಣ್ಮುಖ, ವೀರಭದ್ರ, ಶಿವಪಾರ್ವತಿಯರ ಮದುವೆ ಮುಂತಾದ ಚಿತ್ರಗಳಲ್ಲದೆ ಮಠಮಂದಿರಗಳ ಉತ್ಸವ ಮೂರ್ತಿ, ಗುರುಗಳ ಆಯಾಗ್ರಂಥಗಳ ಕಾವ್ಯನಾಯಕರು, ಶಿವಶರಣರು ಮತ್ತು ಶರಣ ಜೀವನದ ಮಹತ್ವದ ಘಟನೆ–ಸನ್ನಿವೇಶಗಳ ಚಿತ್ರಗಳು, ಪ್ರಾಣಿಪಕ್ಷಿಗಳಾದಿಯಾಗಿ ಸುಳಿವುಳ್ಳ ಎಲೆ ಬಳ್ಳಿಯ ವಿನ್ಯಾಸಗಳು ಕಂಡುಬರುತ್ತವೆ.

ವೈಷ್ಣವ ಹಸ್ತಪ್ರತಿಗಳಲ್ಲಿ ಸಾಮಾನ್ಯವಾಗಿ ಕೃಷ್ಣನ ಬಾಲಲೀಲೆ, ದಶಾವತಾರದ ಚಿತ್ರ, ರಾಮ–ಲಕ್ಷ್ಮಣ–ಸೀತೆಯ ಪರಿವಾರ, ಲಕ್ಷ್ಮೀ ಸಮೇತ ಶ್ರೀನಿವಾಸ, ಗಣಪತಿ, ಸರಸ್ವತಿ ಹಿಗೆ ಹಲವಾರು ಚಿತ್ರಗಳು ಕಂಡುಬರುತ್ತವೆ. ಪರ್ಷಿಯನ್ ಹಸ್ತಪ್ರತಿಗಳಲ್ಲಿ ವ್ಯಕ್ತಿಚಿತ್ರಗಳು, ಸಂಗೀತಗಾರರು, ರಾಗರಾಗಿಣಿಯರು, ಅಲಂಕಾರಿತ ಚಿತ್ರವಿನ್ಯಾಸಗಳು ಮತ್ತು ಇಲ್ಲಿ ಗೆರೆಗಳಿಂದ ಆವರಣವನ್ನು ನಿರ್ದೇಶನ ಮಾಡುವುದು ಇನ್ನೊಂದು ಅಂಶವಾಗಿದೆ. ಉದ್ಯಾನವನ, ಮರಗಿಡಗಳ ಸಾಲು, ಹಾರುವ ಹಕ್ಕಿಗಳು, ಅಂತಃಪುರ ವಿನ್ಯಾಸದ ಚಿತ್ರಗಳು ಹೆಚ್ಚಾಗಿ ಕಂಡುಬರುತ್ತವೆ. ರಕ್ಷಾಫಲಕಗಳಲ್ಲಿ ಆಯಾ ಮತಗಳು ಮನ್ನಿಸಿದ ದೇವಾನುದೇವತೆಗಳ, ಅವರ ಪರಿವಾರಗಳ, ಸಿದ್ಧರ, ಪ್ರಸಿದ್ಧರ, ಮುನಿಗಳ, ಕಾವ್ಯ ನಾಯಕರುಗಳ, ಶರಣರ, ಭಕ್ತರ ಚಿತ್ರರಚನೆಯನ್ನು ಬಿಡಿಸಿರುವುದುಂಟು. ಇನ್ನೂ ಪತ್ರ ಪುಷ್ಪವಲ್ಲಿಗಳ ನೈಸರ್ಗಿಕ ಅಲಂಕಾರಿಕ ಮತ್ತು ಸಾಂಪ್ರದಾಯಿಕ, ನಕ್ಷಾ ರಚನೆಗಳು ವೈವಿಧ್ಯಪೂರ್ಣವಾದವುಗಳು. ಅದರಂತೆ ಗಣಪತಿ, ಸರಸ್ವತಿ ಚಿತ್ರಗಳು ಮತ ಸಂಬಂಧಿ ಹಸ್ತಪ್ರತಿ ಹಾಗೂ ಫಲಕಗಳಿಲ್ಲಿಯೂ ಕಾಣಬರುವಂತಹವುಗಳಾಗಿವೆ[೧೧] ಎಂಬುದನ್ನು ಡಾ॥ ಬಿ.ಕೆ. ಹಿರೇಮಠ ಅವರ ವಿಚಾರಗಳು ಅತ್ಯಂತ ಸೂಕ್ತವಾದವುಗಳಾಗಿವೆ.

---

೧೦. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದ ನೆಲೆ, ಪು–೪೮

೧೧. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪು–೧೯೭

೩. ಶಿಷ್ಟ ಜನಪದ ಮೂಲದ ಸಮ್ಮಿಶ್ರ ಹಸ್ತಪ್ರತಿ ಚಿತ್ರಕಲೆ

ಚಿತ್ರಕಲಾ ಕ್ಷೇತ್ರದಲ್ಲಿ ಜನಪದ ಚಿತ್ರಕಲೆ, ಶಿಷ್ಟಪದ ಚಿತ್ರಕಲೆ ಎಂದು ವಿಂಗಡಿಸಿ ಅಧ್ಯಯನ ಮಾಡುವ ಸಂದರ್ಭದಲ್ಲಿ ಇವೆರಡರ ನಡುವಿನ ಸಮ್ಮಿಶ್ರ ಚಿತ್ರಕಲೆಯನ್ನು ಶಿಷ್ಟ ಜನಪದ ಚಿತ್ರಕಲೆ ಎಂದು ಪರಿಗಣಿಸಬೇಕಾಗುತ್ತದೆ. ಹಸ್ತಪ್ರತಿ ಮತ್ತು ಉದ್ದರಣೆ ಪಟಲಗಳ ಚಿತ್ರಗಳಲ್ಲಿ ಇಂತಹ ಚಿತ್ರಕಲಾ ಕೃತಿಗಳು ಕಂಡು ಬರುತ್ತವೆ. ಇವುಗಳ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಶಿಷ್ಟಪದ ಮತ್ತು ಜನಪದ ಚಿತ್ರಕಲೆಗಳ ಮಧ್ಯದ ಲಕ್ಷಣಗಳನ್ನು ಹೊಂದಿದೆ.

೨. ಇಲ್ಲಿ ಮಧ್ಯದ ವರ್ಗದ ಮನಸ್ಸಿನ ಆಡಂಬರಪೂರ್ಣ ಮಿಡಿತವಿದೆ.

೩. ಜನಪದ ಚಿತ್ರಕಲೆಯ ಅನುಕರಣೆಯೆಂಬಂತೆ ಇನ್ನೂ ಕೆಲವು ಸಲ ಶಿಷ್ಟಪದ ಚಿತ್ರಕಲೆಯ ಅನುಕರಣೆಯೆಂಬಂತೆ ಈ ಚಿತ್ರಗಳು ರೂಪ ಪಡೆದಿರುತ್ತವೆ.

೪. ರಚನಾವಿನ್ಯಾಸ ಮತ್ತು ವರ್ಣಗಾರಿಕೆ ಜನಪದ ಚಿತ್ರಕಲೆಯಷ್ಟು ಮುಕ್ತವೂ ಅಲ್ಲ, ಶಿಷ್ಟಪದ ಚಿತ್ರಕಲೆಯಷ್ಟು ಪ್ರಮಾಣಬದ್ಧವೂ ಅಲ್ಲ.

೫. ಜನಪದ ಚಿತ್ರಕಲೆಯಂತೆ ವಾಕ್ ಸಂಪ್ರದಾಯವೂ ಹೌದು, ಶಿಷ್ಟಪದ ಚಿತ್ರಕಲೆಯಂತೆ ಲಿಖಿತ ಸಂಪ್ರದಾಯವೂ ಹೌದು.

೬. ಕರ್ತೃತ್ವ ಜ್ಞಾನವೂ ಆಗಿರಬಹುದು, ಅಜ್ಞಾತವೂ ಆಗಿರಬಹುದು[೧೨] ಒಟ್ಟಿನಲ್ಲಿ ಶಿಷ್ಟಜನಪದ ಲಕ್ಷಣಗಳಿರುವ ಹಸ್ತಪ್ರತಿ ಮತ್ತು ಉದ್ದರಣೆ ಪಟಲಗಳ ಚಿತ್ರಗಳನ್ನು ಸೂಕ್ಷ್ಮವಾಗಿ ಗುರುತಿಸಿ ಅಧ್ಯಯನ ಮಾಡಬಹುದಾಗಿದೆ.

ಒಟ್ಟಾರೆಯಾಗಿ ನೋಡುವುದಾದರೆ ಅಮೂಲ್ಯ ರೇಖಾ ವರ್ಣಚಿತ್ರಗಳಿರುವ ಹಲವಾರು ಹಸ್ತಪ್ರತಿಗಳು ಕರ್ನಾಟದಕಲ್ಲಿವೆ. ಉದಾಹರಣೆಗೆ ಮುಮ್ಮಡಿ ಕೃಷ್ಣರಾಜ ಒಡೆಯರ್ 'ಶ್ರೀ ತತ್ವನಿಧಿ' ಯಲ್ಲಿ ಸಾವಿರಕ್ಕೂ ಮಿಕ್ಕಿದ ವರ್ಣಚಿತ್ರಗಳಿವೆ. ಇವರೇ ರಚಿಸಿದ 'ಸಾರಸಂಗ್ರಹ ಭಾರತ' ಹಸ್ತಪ್ರತಿಯಲ್ಲಿ ಎಪ್ಪತ್ತು ವರ್ಣಚಿತ್ರಗಳು, ತೊಂಭತ್ತು ರೇಖಾ ಚಿತ್ರಗಳಿವೆ. ಸ್ವರ ಚೂಡಾಮಣಿ, ಸಚಿತ್ರ ರಾಮಾಯಣ, ಸೌಗಂಧಿಕಾ ಪರಿಣಯ, ದೇವಿ ಮಹಾತ್ಮ ಈ ಹಸ್ತಪ್ರತಿಗಳಲ್ಲಿ ಸಾವಿರಾರು ರೇಖಾ ಹಾಗೂ ವರ್ಣಚಿತ್ರಗಳಿವೆ. ಮೂಡಬಿದರೆಯಲ್ಲಿರುವ ಧವಳ, ಜಯಧವಳ, ಮಹಾಧವಳ ಹಸ್ತಪ್ರತಿಯ ವರ್ಣಚಿತ್ರಗಳು, ಕೊಲ್ಲಾಪುರದ ಲಕ್ಷ್ಮಿಸೇನ ಭಟ್ಟಾರಕರ ಮಠದ ಹಸ್ತಪ್ರತಿಗಳು ವರ್ಣಚಿತ್ರಗಳಿಂದ ಕೂಡಿದವುಗಳಾಗಿವೆ. ಉದ್ಧರಣೆ ಪಟಲದ ತಾಂತ್ರಿಕ, ಆಧ್ಯಾತ್ಮಿಕ ಹಿನ್ನೆಲೆಯ ವರ್ಣಚಿತ್ರಗಳು ಜನಪದ

೧೨. ಡಾ. ಎಂ. ಎಂ. ಕಲಬುರ್ಗಿ : ಮಾರ್ಗ ಸಂಪುಟ-೭, ಪು-೪೭೬

ಮೂಲದ ಕೃಷ್ಣ ಪಾರಿಜಾತದ ನೂರಾರು ವರ್ಣಚಿತ್ರಗಳು ಹಾಗೆಯೇ ವೃಷಭೇಂದ್ರ ವಿಲಾಸದ ಸಾವಿರಾರು ವರ್ಣಚಿತ್ರಗಳು ಹೀಗೆ ಹಸ್ತಪ್ರತಿಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಕರ್ನಾಟಕ ಧಾರ್ಮಿಕ, ವೈಚಾರಿಕವಾಗಿ ಬೆಳೆದಂತೆ ಅದರೊಡನೆ ಸಾಹಿತ್ಯ, ಚಿತ್ರಕಲೆ ಹಾಗೂ ಶಿಲ್ಪಕಲೆಯನ್ನು ತನ್ನೊಂದಿಗೆ ಕರೆದೊಯ್ದಿದೆ. ಅದರಲ್ಲೂ ಸಚಿತ್ರ ಹಸ್ತಪ್ರತಿಗಳ ಆಗರವಿರುವ ಕರ್ನಾಟಕ ಸಾಹಿತ್ಯ ಚರಿತ್ರೆಯಲ್ಲಿ ಜೈನ ಹಸ್ತಪ್ರತಿ ಚಿತ್ರ ಪರಂಪರೆಯ ತನ್ನದೇ ಆದ ನೆಲೆಗಟ್ಟನ್ನು, ಶ್ರೀಮಂತಿಕೆಯನ್ನು ಒಳಗೊಂಡಿದೆ.

ಹಸ್ತಪ್ರತಿಕಾರರು ಭಕ್ತಿ, ಧರ್ಮಪ್ರಚಾರ, ಜನಾಕರ್ಷಣೆ ಹಾಗೂ ವೈಯಕ್ತಿಕ ಅಭಿರುಚಿಯ ಕಾರಣವಾಗಿ ಒಂದು ಕೃತಿಯನ್ನು ಪ್ರತಿ ಮಾಡುತ್ತಿದ್ದುದಷ್ಟೇ ಅಲ್ಲದೆ ಅದನ್ನೂ ಕಲಾತ್ಮಕವಾಗಿ ವಿನ್ಯಾಸಗೊಳಿಸಲು ಯತ್ನಿಸಿದರು. ಪರಿಣಾಮವಾಗಿ ಹಸ್ತಪ್ರತಿಗಳಲ್ಲಿಯೂ ಚಿತ್ರಕಲೆ ಕಾಣಿಸಿಕೊಂಡಿತು. ಕರ್ನಾಟಕದ ಹಸ್ತಪ್ರತಿ ಭಂಡಾರಗಳಲ್ಲಿ ಜೈನ ಹಸ್ತಪ್ರತಿಗಳಿದ್ದರೂ ಅವು ವೈವಿಧ್ಯಮಯವಾಗಿ, ವಿಶೇಷವಾಗಿ ಕಂಡುಬರುವುದು ಶ್ರವಣಬೆಳಗೊಳ, ಮೂಡಬಿದರೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ಭಂಡಾರದಲ್ಲಿ ಎಂಬುದನ್ನು ಗಮನಿಸಬಹುದು. ಹಸ್ತಪ್ರತಿಗಳಲ್ಲಿರುವ ಚಿತ್ರಗಳನ್ನು ಅಧ್ಯಯನ ದೃಷ್ಟಿಯಿಂದ ತ್ರಿಜ್ಯ ಚಿತ್ರ, ಸುಳುಹು ಚಿತ್ರ, ಸಾಮಾನ್ಯ ಚಿತ್ರ, ಸಾಂದರ್ಭಿಕ ಚಿತ್ರ ಎಂದು ನಾಲ್ಕು ಬಗೆಗಳಾಗಿವೆ. ತ್ರಿಜ್ಯ ಚಿತ್ರ ಮತ್ತು ಸಾಂದರ್ಭಿಕ ಚಿತ್ರಗಳಿಗೆ ಜೈನ ಹಸ್ತಪ್ರತಿಗಳಲ್ಲಿ ಆದ್ಯತೆಯಿದೆ ಎಂಬುದಾಗಿ ಡಾ॥ ಎಂ.ಎಂ. ಕಲಬುರ್ಗಿಯವರು ವಿವರ ನೀಡುತ್ತಾರೆ.

ಹಸ್ತಪ್ರತಿಗಳ ಆರಂಭ ಮತ್ತು ಅಂತ್ಯದಲ್ಲಿ ಗರಿಗಳನ್ನು ಖಾಲಿ ಬಿಡಲಾಗಿರುತ್ತೆ. ಉದ್ದೇಶ ಗ್ರಂಥ ಸಂರಕ್ಷಣೆಗಾಗಿ ಹಸ್ತಪ್ರತಿಕಾರ ಚಿತ್ರಕಲಾವಿದನೂ ಆಗಿದ್ದಲ್ಲಿ ಇಂಥ ಅಲಿಖಿತ ಗರಿಗಳ ಮೇಲೆ ತನ್ನ ಕೈಚಳಕ ತೋರಿಸುತ್ತಾನೆ. ಆರಂಭ ಮತ್ತು ಅಂತ್ಯದಲ್ಲಿ ಗರಿಗಳಲ್ಲಿ ತ್ರಿಜ್ಯ ಚಿತ್ರಗಳನ್ನು ಬಿಡಿಸುವುದು ಸಾಮಾನ್ಯ. ಚಿತ್ರ ಕೆಲವೊಮ್ಮೆ ಒಂದು ಅಧ್ಯಾಯದಿಂದ ಮತ್ತೊಂದು ಅಧ್ಯಯನಕ್ಕೆ ವ್ಯತ್ಯಾಸ ತಿಳಿಯಲು ನೆರವಾಗುವಂತೆ ಗರಿಯ ಒಂದು ಪಾರ್ಶ್ವದಲ್ಲಿ ಅಥವಾ ಒಂದು ಗುರಿಯ ಮೇಲೆ ತ್ರಿಜ್ಯ ಚಿತ್ರಗಳನ್ನು ರಚಿಸುವುದುಂಟು. ಹಸ್ತಪ್ರತಿ ಸೌಂದರ್ಯ ವೃದ್ಧಿಸಲು ಅದರ ಹೊರಪಟ್ಟಿಯ ಮರದ ಮೇಲೆ ಕೆತ್ತನೆ ಮಾಡುವುದುಂಟು. ಹೀಗೆ ಮೂಡಿಬಂದಿರುವ ಚಿತ್ರಗಳನ್ನು ಕುರಿತು ಬಿ.ಕೆ. ಹಿರೇಮಠರವರು ಹಸ್ತಪ್ರತಿಗಳಲ್ಲಿ ಬರೆಯದೆ ಉಳಿದ ಸ್ಥಳವನ್ನು ತುಂಬಲು ರಚಿಸಿದವುಗಳನ್ನು ಅಗತ್ಯದ ಅಲಂಕಾರಗಳೆಂದೂ, ಆಯಾ ಗ್ರಂಥದಲ್ಲಿ ಬರುವ ಸಂದರ್ಭ ಸನ್ನಿವೇಶಗಳನ್ನು ಅಲ್ಲದೇ ಆ ಗ್ರಂಥದ ವಿಷಯ, ನಿರೂಪಣೆಗೆ ಸಹಾಯಕವಾಗುವಂತೆ ರಚಿಸಿದ ಚಿತ್ರಗಳನ್ನು ಸಾಂದರ್ಭಿಕ ಚಿತ್ರಗಳೆಂದು ಮತ್ತೆ ವಿಂಗಡಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.[೧೩]

೧೩. ಡಾ. ಬಿ. ಕೆ. ಹಿರೇಮಠ : ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ, ಪು–೧೬೮

ಕರ್ನಾಟಕದ ಹಸ್ತಪ್ರತಿ ಬರವಣಿಗೆಯಲ್ಲಿ ಕನ್ನಡ ಸಾರಸ್ವತ ಲೋಕದ ಭಾಷಾ ಸಾಹಿತ್ಯ ವಲಯದಲ್ಲಿ ಮಹತ್ವಪೂರ್ಣವಾದ ಬದಲಾವಣೆ ಆದವು. ಅದರಂತೆ ಹಸ್ತಪ್ರತಿಯೊಳಗೆ ಚಿತ್ರರಚಿಸುವ ಕಾರ್ಯವೂ ಕರ್ನಾಟಕದಲ್ಲಿ ವಿಭಿನ್ನವಾಗಿ ಪ್ರಾರಂಭಗೊಂಡಿತು. ಕನ್ನಡ ಸಾಹಿತ್ಯದಲ್ಲಿ ಆದಿಕವಿ, ನಾಡೋಜ, ಕವಿಕುಲಗುರು 'ಪಂಪ' ನ ಯುಗವನ್ನು ಮಹಾಕಾವ್ಯಗಳ ಯುಗ, ಕನ್ನಡ ಸಾಹಿತ್ಯದ ಸುವರ್ಣಯುಗವೆಂಬಂತೆ ಜೈನ ಸಾಹಿತ್ಯದ ಯುಗವೆಂದೂ ಕರೆಯಲಾಗುವುದು. ಈ ಯುಗದಲ್ಲಿ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಶಾಂತಿಪುರಾಣ, ಮಲ್ಲಿನಾಥ ಪುರಾಣಗಳಂತಹ ಅನೇಕ ಕನ್ನಡದ ಮೇರು ಕೃತಿಗಳು ತಾಳೆಗರಿಯಲ್ಲಿ ರಚನೆಗೊಂಡಂತೆ, ಕನ್ನಡ ಲಿಪಿಯ ಪ್ರಾಕೃತ ಭಾಷೆಯ ಸಚಿತ್ರ ಜೈನ ಧರ್ಮದ ಮಹಾನ್ ಗ್ರಂಥಗಳಾದ ಧವಳ, ಜಯಧವಳ ಮತ್ತು ಮಹಾಧವಳಗಳು ಜಗತ್ತಿನ ಹಸ್ತಪ್ರತಿ ಜಗತ್ತಿನಲ್ಲಿ ಅದ್ವಿತೀಯವಾಗಿ ಹೊಯ್ಸಳ ಶೈಲಿ ಚಿತ್ರಕಲೆಯೊಂದಿಗೆ ಸಚಿತ್ರ ಹಸ್ತಪ್ರತಿಗಳಾಗಿ ಮೂಡಿಬಂದವು.[೧೪]

ಹಸ್ತಪ್ರತಿ ಚಿತ್ರರಚನಾ ಪೂರ್ವಭಾವಿ ಹಂತ

ಹಸ್ತಪ್ರತಿಗಳನ್ನು ಚಿತ್ರ ರಚಿಸುವ ಪೂರ್ವದಲ್ಲಿಯೇ ಕೆಲವಾರು ಪೂರ್ವಭಾವಿ ಸಿದ್ಧತೆಗಳು ಅತ್ಯವಶ್ಯಕವಾದವುಗಳು. ಈ ಹಂತದಲ್ಲಿ ನಾನಾ ವಿಧಿವಿಧಾನಗಳನ್ನು, ಕ್ರಿಯೆಗಳನ್ನು ಇಲ್ಲಿ ಮಾಡಲಾಗುವುದು. ಹಸ್ತಪ್ರತಿಗಳ ರಚನಾ ವಿಧಿವಿಧಾನಗಳಲ್ಲಿ ಎರಡು ಬಗೆ. ಈಗಿನ ಗ್ರಂಥಗಳನ್ನು ಹೇಗೆ ನಾವು ರಕ್ಷಾಕವಚ ಹಾಗೂ ಅಕ್ಷರ ಗ್ರಂಥಗಳು ಎಂದು ವಿಭಾಗ ಮಾಡುತ್ತೇವೋ ಅದೇ ರೀತಿಯಲ್ಲಿ ೧. ಹಸ್ತಪ್ರತಿ ರಕ್ಷಣಾ ಫಲಕ ಹಾಗೂ ೨. ಹಸ್ತಪ್ರತಿಗಳ ಮೇಲೆ ಚಿತ್ರ ರಚಿಸುವ ವಿಧಿವಿಧಾನಗಳು ಎಂದು. ಮೊದಲನೆಯದಾಗಿ ಹಸ್ತಪ್ರತಿ ರಕ್ಷಣಾಫಲಕದ ಚಿತ್ರರಚನಾ ವಿಧಿಯಲ್ಲಿ ಐದು ಬಗೆಯ ಮಾಧ್ಯಮದ ಫಲಕಗಳನ್ನು ನಾವಿಲ್ಲಿ ಕಾಣಬಹುದು. ೧. ಫಲಕದ ಮಾಧ್ಯಮ, ೨. ಮರದ ಮಾಧ್ಯಮ ಫಲಕ, ೩. ಲೋಹ ಮಾಧ್ಯಮ ಫಲಕ, ೪. ಆನೆದಂತ ಮಾಧ್ಯಮ ಫಲಕ ಹಾಗೂ ೫. ಮಿಶ್ರ ಮಾಧ್ಯಮ ಫಲಕ ಎಂಬುದಾಗಿ ಐದು ವಿವಿಧ ಬಗೆಯ ಮಾಧ್ಯಮಗಳ ಫಲಕಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇವುಗಳ ಬಗ್ಗೆ ವಿವರಗಳನ್ನು ಈ ಕೆಳಕಂಡಂತೆ ನೋಡಬಹುದಾಗಿದೆ.

೧. ಹಸ್ತಪ್ರತಿ ರಕ್ಷಣಾ ಫಲಕದ ಮೇಲೆ ಚಿತ್ರ ರಚನಾ ವಿಧಾನ

೧. ಫಲಕದ ಮಾಧ್ಯಮ

ಹಸ್ತಪ್ರತಿಗಳಿಗೆ ರಕ್ಷಾಕವಚಗಳಂತಿರುವ ಫಲಕಗಳು ರಾಜ್ಯ ರಕ್ಷಿಸುವ ಕೋಟೆ ಗೋಡೆಗಳ

---

೧೪. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–೭೧

ಕಾರ್ಯವನ್ನು ಅವು ನಿರ್ಮಿಸುತ್ತವೆ. ಹಸ್ತಪ್ರತಿಗಳು ತಾಳೆಗರಿ, ಭೂರ್ಜ್ವಪತ್ರ, ಕಾಗದದ ಪತ್ರ, ಪಟಚಿತ್ರಗಳು ಯಾವುದೇ ಇದ್ದರೂ ಅವುಗಳನ್ನು ಕಾಯ್ದಿಟ್ಟುಕೊಳ್ಳುವಲ್ಲಿ ಫಲಕಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತವೆ. ಮಾನದ ದೇಹದೊಳಗಿನ ಎಲುಬಿನ ಹಂದರದಂತೆ ಹಸ್ತಪ್ರತಿಗಳ ಹೊರಗಿಟ್ಟು ಈ ಫಲಕಗಳು ಕಾಯುವ ಕಾರ್ಯವನ್ನು ನಿರ್ವಹಿಸುತ್ತವೆ. ಹಸ್ತಪ್ರತಿಗಳಿಗೆ ಇರುವ ಆಪತ್ತುಗಳಿಂದ ಸಂರಕ್ಷಿಸಲು ಕೂಡಾ ಈ ಫಲಕಗಳು ರಕ್ಷಣೆ ನೀಡುತ್ತವೆ. ಗಾಳಿ, ಬೂಸ್ಟ್, ತೇವಾಂಶಗಳಿಂಧ ರಕ್ಷಣೆ ಒದಗಿಸಿದಂತೆ ಗೆದ್ದಲು, ಜಿರಲೆ, ಬೆಳ್ಳಿ ಮೀನುಗಳಂತಹ ಕೀಟಗಳಿಂದ ಇಲಿ, ಹೆಗ್ಗಣ ಮನೆಯೊಳಗೆ ಅಲ್ಲಲ್ಲಿ ಗೂಡುಕಟ್ಟುವ ಪಕ್ಷಿಗಳಿಂದಲೂ ಈ ಫಲಕಗಳು ಸಂರಕ್ಷಣೆಯನ್ನು ಒದಗಿಸಿ ಕೃತಿಗಳ ಆಯುರ್ಮಾನವನ್ನು ವೃದ್ಧಿಸುತ್ತವೆ.[೧೫]

೨. ಮರದ ರಕ್ಷಣಾ ಫಲಕಗಳು

ಹಸ್ತಪ್ರತಿಗಳಿಗೆ ಮರದ ಫಲಕಗಳು ಸಾಮಾನ್ಯವಾಗಿದ್ದು ಈ ಫಲಕಗಳನ್ನು ಕೀಟ ನಿರೋಧಕ ಶಕ್ತಿ ಇರುವ ಬೇವು, ಬೀಟೆ, ಗುಗ್ಗಳ, ತೇಗ, ಹೊನ್ನೆ, ಜಾಲಿ ಮತ್ತು ಹುಣಸೆ ಮರಗಳ ಕೆಚ್ಚಿನಿಂದ ತಯಾರಿಸುವಂತೆ ಸಾಮಾನ್ಯ ಜಾತಿಯ ಹಲವು ಮರದ ಹಲಗೆಗಳಿಂದಲೂ ರಚಿಸುತ್ತಾರೆ. ಲಿಪಿಕಾರ ಆಯ್ದುಕೊಂಡ ಗರಿಗಳ ಅಳತೆಗೆ ಸಮವಿದ್ದರೆ ಕೆಲವು ಸಲ ಗರಿಗಳಿಗಿಂತ ಸುತ್ತಲೂ ಒಂದು ಕಿರುಬೆರಳಿನ ತುದಿಯ ದಪ್ಪದ ಅಳತೆಯಷ್ಟು ಹೆಚ್ಚು ವಿಸ್ತಾರದಲ್ಲಿ ಫಲಕವನ್ನು ನಿರ್ಮಿಸಲಾಗುವುದು. ಇದನ್ನು ಸಮಗೊಳಿಸಿ ಮರಳಿನಲ್ಲಿ ಅರಳಿನಲ್ಲಿ ತಿಕ್ಕಿ ರಂಧ್ರ ಕೊರೆದು, ನುಣುಪುಗೊಳಿಸಲಾಗುವುದು. ಈ ಕಾರ್ಯವನ್ನು ಬಡಿಗ ಮೊದಲ ಹಂತದ ಕಾರ್ಯದಲ್ಲಿ ಮಾಡಿದಂತೆ ಎರಡನೇ ಹಂತದಲ್ಲಿ ಲೋಹಶಿಲ್ಪಿ ಫಲಕದ ಮೂಲೆಗಳಿಗೆ, ಬದಿಗಳಿಗೆ, ರಂಧ್ರಗಳಿಗೆ ಕಬ್ಬಿಣ, ಹಿತ್ತಾಳೆ, ಬೆಳ್ಳಿ ಲೋಹದ ಅಲಂಕೃತ ಬಿರುಡೆಗಳನ್ನು ಜೋಡಿಸಿ ದೇಶ ಕಾಯುವ ಸೈನಿಕನಿಗೆ ರಕ್ಷಣೆ ನೀಡುವ ಉಡುಗೆಗಳನ್ನು ನೀಡುವಂತೆ ಫಲಕ ಹಾಳಾಗಬಹುದಾದ ಆಯಕಟ್ಟಾದ ಪ್ರದೇಶಗಳಿಗೆ ಲೋಹಫಲಕಗಳನ್ನು ಜೋಡಿಸಿ ಕಾಯಕಲ್ಪ ಮಾಡುವನು.[೧೬] ಮೂರನೆಯದು ಕಲಾತ್ಮಕ ಹಂತ, ವರ್ಣಗಾರ ಅಥವಾ ವರ್ಣಶಿಲ್ಪಿಯ ಹಂತ ಇದಾಗಿದೆ. ಫಲಕ ಬಾಳಲು ಬಡಿಗ ಮತ್ತು ಲೋಹ ಶಿಲ್ಪ ಮಾಡಿರುವ ಕಾರ್ಯದಂತೆ ಬಣ್ಣ ಬಾಳುವ ಫಲಕ, ಫಲಕ ಬಾಳುವ ಕಾರ್ಯವನ್ನು ಕಲಾವಿದ ಕಲಾತ್ಮಕವಾಗಿ ಮಾಡುತ್ತಾನೆ.

ಫಲಕದ ಬಣ್ಣಗಾರಿಕೆಯಲ್ಲಿ ಪ್ರಾಥಮಿಕ ವರ್ಣಗಳಾದ ಕೆಂಪು, ಹಳದಿ, ನೀಲಿಯನ್ನು ಸಹಾಯಕವಾಗಿ ಬಿಳಿಯನ್ನು ಉಪಯೋಗಿಸುತ್ತಾರೆ. ಕರ್ನಾಟಕದ ವರ್ಣಲೋಕದಲ್ಲಿ ಕೆಂಪು ಬಣ್ಣವನ್ನು ಶಿವನೆಂದು, ಹಳದಿಯನ್ನು ಬ್ರಹ್ಮನೆಂದು, ನೀಲಿಯನ್ನು ವಿಷ್ಣುವೆಂದು ಪರಿಗಣಿಸಲಾಗಿದೆ.

---

೧೫. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–೭೩

೧೬. ಅದೇ.

ಜಗತ್ತಿಗೆ ಬ್ರಹ್ಮ, ವಿಷ್ಣು, ಮಹೇಶ್ವರರನ್ನು Generator, Operator and Destructor ಎಂದು ಸಾಂಕೇತಿಕವಾಗಿ ಉ. ಆ. ಎಂದು ಕರೆಯುವಂತೆ ವರ್ಣಲೋಕದಲ್ಲಿ ಹಳದಿ, ನೀಲಿ, ಕೆಂಪು ವರ್ಣಗಳನ್ನು ಮೂಲ ಬಣ್ಣಗಳೆಂದು ಕರೆಯುತ್ತಾರೆ. ಸಮಯ, ಸಂದರ್ಭಗಳಿಗೆ ಅನುಗುಣವಾಗಿ ಮೂಲಬಣ್ಣಗಳನ್ನು ಅವುಗಳ ಸಂಕರದಿಂದ ಜನಿಸುವ ತಲೆಮಾರುಗಳ ಬಣ್ಣಗಳಿಂದಲೂ ವರ್ಣಗಾರಿಕೆಯು ತಲೆ ತಲೆಮಾರುಗಳಿಂದ ಬಣ್ಣಗಾರಿಕೆಯಾಗಿ ಬೆಳೆದು ಬಂದಿದೆ.

೩. ಲೋಹದ ರಕ್ಷಣಾ ಫಲಕ

ಕರ್ನಾಟಕದ ಹಸ್ತಪ್ರತಿಗಳಿಗೆ ಮರದ ಫಲಕಗಳನ್ನು ಬಳಸಿದಂತೆ ಅಲ್ಲಲ್ಲಿ ಕಬ್ಬಿಣ, ತಾಮ್ರ, ಬೆಳ್ಳಿಯ ತಗಡುಗಳ, ಮಿಶ್ರಲೋಹಗಳ ಫಲಕಗಳನ್ನು ಅಲ್ಲಲ್ಲಿ ಬಳಸಿದ್ದು ಕಂಡುಬರುತ್ತದೆ. ವರ್ಣಗಾರಿಕೆ ಇರದೆ ವರ್ಣ ಶಿಲ್ಪಿಯ ನೆರವಿನಿಂದ ಬರೆದ ಹಲವು ಹೂಬಳ್ಳಿ ಸುಳುವು ರೇಖಾಚಿತ್ರಗಳನ್ನು ಲೋಹಶಿಲ್ಪಿ ರಚಿಸಿರುವುದನ್ನು ಕಾಣುತ್ತೇವೆ. ಮಹಮ್ಮದಿಯರ ಹಸ್ತಪ್ರತಿ ಫಲಕಗಳ ಮೇಲೆ ಬೆಳ್ಳಿ, ಬಣ್ಣದ ಹರಳು, ಬಂಗಾರದ ರೇಖು ಹಲವು ವಿಧದ ಬೆಸುಗೆಯ ಲೋಹದ ಫಲಕಗಳನ್ನು, ಲೋಹದ ಸಂಪುಗಳನ್ನೂ ಕಾಣುತ್ತೇವೆ. ಇದರಲ್ಲಿ ವರ್ಣಶಿಲ್ಪಿಗಿಂತ ಲೋಹಶಿಲ್ಪಿಯ ಕುಶಲತೆ ಪ್ರಥಮವಾಗಿರುತ್ತದೆ.

೪. ಆನೆದಂತದ ರಕ್ಷಣಾ ಫಲಕಗಳು:

ಕೆಲವು ಹಸ್ತಪ್ರತಿಗಳಿಗೆ ಅದ್ವಿತೀಯವಾಗಿರುವ ನಯನಾಜೂಕಿನ ಆನೆಯ ದಂತದ ಫಲಕಗಳನ್ನು ಬಳಸಲಾಗಿರುತ್ತದೆ. ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಅಕಾಡಮಿಯ ಕೇಂದ್ರದಲ್ಲಿ ಇಂತಹ ಆನೆದಂತದ ಹಸ್ತಪ್ರತಿಯ ಫಲಕವನ್ನು ಸಂಗ್ರಹಿಸಿ ಇಡಲಾಗಿದೆ. ಫಲಕ ಅಂದಾಜು ನಾಲ್ಕು ಸೆಂ.ಮೀ. ಅಗಲವಾಗಿದ್ದು, ೪೦ ಸೆಂ.ಮೀ. ಉದ್ದವಾಗಿದೆ. ಫಲಕದ ತುಂಬೆಲ್ಲಾ ಮನಮೋಹಕ ಮುದಗೊಳಿಸುವ ಹೂವುಬಳ್ಳಿ, ಪ್ರಾಣಿ, ಪಕ್ಷಿಗಳ ಆಕೃತಿಗಳಿವೆ. ಇಂತಹ ಫಲಕಗಳಲ್ಲಿ ಕಲಾವಿದ, ದಂತ ಶಿಲ್ಪಿ ಮತ್ತು ಕವಿ ಪಾಠ ಮೂರು ಒಂಡೆಡೆಗೊಂಡು ಕಾರ್ಯನಿರ್ವಹಿಸುತ್ತವೆ.[೧೭]

೫. ಮಿಶ್ರ ಫಲಕಗಳು

ಕೆಲವು ಫಲಕಗಳು ಹಲವಾರು ಕುಶಲ ಕರ್ಮಿಗಳ ಸಹಾಯ, ಸಹಕಾರಗಳಿಂದ ಸಂಯುಕ್ತವಾಗಿ ರೂಪುಗೊಂಡಿರುತ್ತದೆ. ಮರದ ಫಲಕಕ್ಕೆ ಲೋಕದ ಅಲಂಕಾರದಾಗಿರುವಂತೆ ಕೆಲವು ಸಲ ಮರದಫಲಕ ಆನೆದಂತದ ಫಲಕ ಸೇರಿಸಿ ಇನ್ನೆಲ್ಲಾ ಕಾರ್ಯವೂ ನಡೆದಿರುತ್ತದೆ. ಉದಾಹರಣೆಗಾಗಿ ಹೇಳುವುದಾದರೆ

೧೭. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–೭೪

ಮೈಸೂರು ವಿಶ್ವವಿದ್ಯಾಲಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಅಳಿಯ ಲಿಂಗರಾಜು ವಿರಚಿತ 'ಸೌಗಂಧಿಕಾ ಪರಿಣಯ' ವನ್ನು ಹೆಸರಿಸಬಹುದು. ಪತ್ರದ ಮಧ್ಯಮಕ್ಕೆ ಬಹು ಉದ್ದದ ಅಂದಾಜು ೨೮ ಅಂಗುಲ ಉದ್ದದ ತಾಳೆಗರಿ ಬಳಸಿದಮತೆ ಫಲಕಗಳಿಗೆ ಬೀಟೆ ಮರದ ಕಡುಕಂದು ವರ್ಣದ ಹಲಗೆಗಳನ್ನು ಬಲಸಲಾಗಿದೆ. ಅವುಗಳ ಮೇಲೆ ಮೂಲೆ ಮೂಲೆಗಳಲ್ಲಿ ದಂತದ ಬಿಳಿಯ ರೇಖುಗಳನ್ನು ಬಳಸಲಾಗಿದೆ. ಇದೆಲ್ಲವನ್ನೂ ಸಂರಕ್ಷಿಸುವ ಕ್ರಮದಂತೆ ಬೀಟೆ ಮರದ ಪೆಟ್ಟಿಗೆಯೂ ಇದ್ದು ಅದರ ಮೇಲೂ ಆನೆ ದಂತಗಳನ್ನು ಬಳಸಿ ನಿರ್ಮಿಸಿರುವ ನಕ್ಷಾಚಿತ್ರಗಳಿವೆ.[೧೮]

೨. ಹಸ್ತಪ್ರತಿಗಳ ಮೇಲೆ ಚಿತ್ರರಚನಾ ವಿಧಿ–ವಿಧಾನಗಳು

ಹಸ್ತಪ್ರತಿಯೊಳಗಿನ ಚಿತ್ರಗಳ ತಯಾರಿಯ ವಿಧಾನಗಳಲ್ಲಿ ಮುಖ್ಯವಾಗಿ ಎರಡು ೧) ಪೂರ್ವ ಸಿದ್ಧತಾ ಹಂತ ಮತ್ತು ೨) ಕಾರ್ಯನಿರ್ವಹಣಾ ಸಿದ್ಧತಾ ಹಂತ ಎಂದು. ಪೂರ್ವಸಿದ್ಧತಾ ಹಂತದಲ್ಲಿ ೧) ಲೇಖ್ಯ ವಸ್ತು ಸಿದ್ಧಾಂತ ಹಂತ ೨) ಸಾಹಿತ್ಯಕ ವಿಷಯ ಗ್ರಹಣ ಹಂತ ೩) ಸಮಾಲೋಚನಾ ಹಂತ ಹಾಗೂ ೪) ಕಡತದಲ್ಲಿ ಕರಡು ರೇಖಾಚಿತ್ರದ ಪರಿಕಲ್ಪನೆ ಹಂತ ಎಂಬುದಾಗಿದ್ದು ೨) ಕಾರ್ಯನಿರ್ವಹಣಾ ಸಿದ್ಧತಾ ಹಂತ ಇದರಲ್ಲಿ ಮತ್ತು ನಾಲ್ಕು ಹಂತಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ ೧. ರೇಖಾಚಿತ್ರದ ಹಂತ ೨. ಬಣ್ಣಗಾರಿಕೆಯ ಹಂತ ೩. ಪರಿಪೂರ್ಣ ಹಂತ ೪. ಭಾವಾಭಿವ್ಯಕ್ತಿಯ ಹಂತ ಹಾಗೂ ತಾಂತ್ರಿಕ ಹಂತ ಎಂಬುದಾಗಿ ಹಸ್ತಪ್ರತಿಗಳ ಮೇಲೆ ಚಿತ್ರರಚನಾ ವಿಧಿವಿಧಾನಗಳನ್ನು ಕಾಣಬಹುದಾಗಿದೆ. ಆದರೆ ಇದರಲ್ಲಿ ವಿಷಯಕ್ಕೆ ಪೂರಕವಾಗುವಂತೆ ಕಾರ್ಯನಿರ್ವಹಣಾ ಹಂತವನ್ನು ಮಾತ್ರ ನಾವಿಲ್ಲಿ ಚರ್ಚಿಸಬಹುದಾಗಿದೆ.

ಕಾರ್ಯನಿರ್ವಹಣಾ ಹಂತ

ವಿಷಯ ಗ್ರಹಿಕೆ, ಸಾಹಿತ್ಯ ರೂಪ, ಆಕಾರ ಮೂರ್ತತೆಯ ಹಂತವನ್ನು ದಾಟಿದ ನಂತರ ಬರುವುದೇ ಕಾರ್ಯನಿರ್ವಹಣಾ ಹಂತ. ಇಲ್ಲಿ ಕಲಾವಿದನು ತನ್ನ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಳಿಸಲು ಸಿದ್ಧನಾಗಿರುವಂತಹ ಹಂತವಾಗಿರುತ್ತದೆ. ಹಸ್ತಪ್ರತಿಯ ಭೂರ್ಜ್ವ, ತಾಳೆಗರಿ ಅಥವಾ ಕಾಗದದ ಯಾವುದೇ ಮಾಧ್ಯಮವಿದ್ದರೂ ಅದರಲ್ಲಿ ಸಂಯೋಜಿಸಬಹುದಾದ ಚಿತ್ರದ ಪೂರ್ವ ತಯಾರಿಕೆಯ ಹಂತವು ಇದಾಗಿರುತ್ತದೆ. ಚಿತ್ರವು ಗರಿಯ ಮಧ್ಯಭಾಗದಲ್ಲಿ ಅಥವಾ ಗರಿಯ ಎಡ, ಬಲಕ್ಕೆ ಸಮನಾದ ಅಳತೆಗೆ ಬರಬೇಕು. ಈ ಹಂತದಲ್ಲಿ ಗರಿಯ ಮೇಲ್ಮೈಯನ್ನು ಶಂಕುವಿನಂತ ವಸ್ತುಗಳಿಂದ ಉಜ್ಜಿ ಗಮಗೊಳಿಸುತ್ತಾರೆ ಮತ್ತು ಕೆಲವು ಸಲ ಬಳಪದ ಕಲ್ಲನ್ನು ತೇಯ್ದು ಸದರ ಗಂಧದಿಂದ ಬರುವ ಬಿಳಿಯ ಸುಣ್ಣವನ್ನು ಪ್ರಾಥಮಿಕ ಲೇಪನ (Primer)ವನ್ನಾಗಿ ಲೇಪಿಸಿ ಸಿದ್ಧಗೊಳಿಸುತ್ತಿದ್ದರು.[೧೯]

---

೧೮. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ). ಪು–೭೫

೧೯. ಅದೇ., ಪು–೮೦

೧. ರೇಖಾ ಹಂತ

ಹಸ್ತಪ್ರತಿ ಚಿತ್ರಕಲೆಯ ಕಾರ್ಯಕ್ಕೆ ಇದು ಪ್ರಮುಖ ಮತ್ತು ಪ್ರಬುದ್ಧ ಹಂತ. ಮುಂಬರಲಿರುವ ಬೆಳೆಯುವ ಸಿರಿಯನ್ನು ಗುರುತಿಸುವ ಘಟ್ಟ ಇದಾಗಿದೆ. ಚಿತ್ರದ ಒಟ್ಟು ಸಂಯೋಜನೆಯನ್ನು ರೇಖಾಗಡಿಗಳಲ್ಲಿ ಕಾಯ್ದಿಡುವ ಹಂತ ಇದಾಗಿದೆ. ಹಸ್ತಪ್ರತಿ ಚಿತ್ರಗಳ ಈ ಹಂತವನ್ನು ಪ್ರೊ॥ ಎಂ.ಹೆಚ್. ಕೃಷ್ಣಯ್ಯನವರು ಈ ರೀತಿ ಉಲ್ಲೇಖಿಸಿದ್ದಾರೆ. ಮಾಯಾ ಜನರು ಹಲವು ಮಡಿಕೆಗಳಲ್ಲಿ ಮಡಚಬಹುದಾದ ಮರದ ತೊಗಟೆ ಕುಟ್ಟು ತಯಾರಿಸಿದ ಒಂದೇ ಉದ್ದ ಹಾಳೆಯ ಗ್ರಂಥವನ್ನು ತಯಾರಿಸುತ್ತಿದ್ದರು. ಹಾಳೆಗೆ ಸುಣ್ಣ ಲೇಪ ಹಾಕಿ ಬಣ್ಣಗಳಿಂದ ಎರಡು ಪಕ್ಕಗಳಲ್ಲಿಯೂ ವಸ್ತು ಚಿತ್ರ (ಲಿಪಿ) ಬರೆಯುತ್ತಿದ್ದರು. ದೇವತೆಗಳು, ಗೂಢಚಿತ್ರ ಲಿಪಿಗಳಿಂದ ಅವು ಕೂಡಿವೆ. ಈ ಗ್ರಂಥಗಳ ಪ್ರತಿ ಮತ್ತೆ ಮತ್ತೆ ತೆಗೆಯುತ್ತಿದ್ದಿರಬೇಕು. ಈ ಗ್ರಂಥಗಳನ್ನು 'ಕೋಡೆಕ್ಸ್' ಎನ್ನುತ್ತಾರೆ. ಸಿಕ್ ನಗರಗಳ ಹೆಸರುಗಳಿಂದ ಅವು ಪ್ರಸಿದ್ಧವಾಗಿವೆ. ಒಂದು ಪಕ್ಕದಲ್ಲಿ ಆಚರಣೆಯ ವಿವರ, ಇನ್ನೊಂದು ಪಕ್ಕದಲ್ಲಿ ಭವಿಷ್ಯ ಅಥವಾ ಕಾಲಜ್ಞಾನವನ್ನು ನಿರೂಪಿಸಿದೆ. ಚರ್ಮದ ಹಸ್ತಪ್ರತಿಗಲೂ ಸಿಕ್ಕಿವೆ. ಒಂದರಲ್ಲಿ ಬಲಾಂಬೊಂಗೊ ನಗರ ಆಳರಸನ ವಂಶ ಚರಿತ್ರೆ ನಿರೂಪಿತವಾಗಿದೆ.

ಈ ಕೋಡೆಕ್ಸ್‌ಗಳ ಚಿತ್ರಗಳು (ರೇಖಾ ಪ್ರಧಾನವಾದವು) ಬಾಹ್ಯ ಹಾಗೂ ಒಳಗಿನ ರೇಖೆಗಳು ದಪ್ಪ. ಆದರೂ ಸರಳ ವಿವರಗಳ ಚಿತ್ರವಿದೆ. ವಸ್ತ್ರ, ಆಯುಧ, ಆಭರಣಗಳು ಮುಖ ಮುಖವಾಡ ಅಲಂಕಾರಗಳಿಂದ ಕೂಡಿರುತ್ತದೆ. ವರ್ಣಲೇಪ ಚಪ್ಪಟಡೆ ಇವುಗಳ ಓದಬೇಕಾದ ಗ್ರಂಥಗಳು ಚಿತ್ರವೇ ಪಠ್ಯವಾದ ಕಾರಣ ಓದಬೇಕಾದ ವಿಧಾನ ಸುಚಿಸಲು ಕೆಂಪುಗೆರೆಯ ಮಾರ್ಗ ನಿರ್ದೇಶನಗಳಿರುತ್ತವೆ. ಹಸ್ತಪ್ರತಿ ಚಿತ್ರಗಳು ಅರ್ಥವಾಗಿದ್ದರೂ ಕಲಾದೃಷ್ಟಿಯಿಂದ ಅಭ್ಯಾಸಿಸಲು ಕುತೂಹಲಕಾರಿಯಾಗಿದೆ.[೨೦]

೨. ಬಣ್ಣಗಾರಿಕೆಯ ಹಂತ

ಕರ್ನಾಟಕದ ಶಿಲ್ಪಗಳಲ್ಲಿ ಕದಂಬ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮತ್ತು ವಿಜಯನಗರಗಳ ಶಿಲ್ಪ ಶೈಲಿಗಳನ್ನು ಗುರುತಿಸುವಂತೆ ಬಣ್ಣಗಾರಿಕೆಯಲ್ಲೂ ಇಂತಹ ಭಿನ್ನತೆಯನ್ನು ಕಾಣುತ್ತೇವೆ. ವಿಜಯನಗರ ಶೈಲಿಯ ಒಂದೇ ಕಾಲಮಾನದ ವರ್ಣಗಾರಿಕೆಯಲ್ಲಿಯೇ ಕಿನ್ನಾಳ ಚಿತ್ರಗಾರ ಶೈಲಿ, ಸುರಪುರದ ಗರುಡಾದ್ರಿ ಶೈಲಿ ಮತ್ತು ತಂಜಾವೂರಿನ ರೇಖಾಶೈಲಿಗಳೆಂದು ಗುರುತಿಸಬಹುದು. ಉದಾಹರಣೆಗೆ ಹೊಯ್ಸಳರ ಶೈಲಿಯನ್ನು ವಿ.ಟಿ.ಎಸ್. ರಾವ್ ಅವರು ಈ ರೀತಿ ವರ್ಣಿಸುತ್ತಾರೆ. ಹೊಯ್ಸಳ ಚಿತ್ರಕಾರರು ತಮ್ಮ ವಿಶಿಷ್ಟ ಶೈಲಿಯಾದ ವಿಶಾಲ ಎದೆ, ಅಗಲವಾಗಿ ಚಿತ್ರಿಸಿದ ಕಣ್ಣುಗಳು,

---

೨೦. ಪ್ರೊ, ಎಂ. ಎಚ್. ಕೃಷ್ಣಯ್ಯ : ರೇಖಾಚಿತ್ರ, ಪು-೨೩

ಎರಡೂ ಕಣ್ಣುಗಳನ್ನು ಎತ್ತಿ ತೋರಿಸುವ ವೈಶಿಷ್ಟ್ಯ, ಮುಂದೆ ಬಂದಿರುವ ತ್ರಿಕೋನಾಕಾರದ ಚೂಪು ಮೂಗು, ದೀರ್ಘವಾದ ಕಣ್ಣಿನ ಮೂಲೆಗಳು, ಬಿಲ್ಲಿನಾಕಾರದ ಹುಬ್ಬುಗಳು, ಕೋನಯುಕ್ತವಾದ ಮುಖ, ಸುಂದರ ಗಲ್ಲಗಳು, ಸಪೂರದ ಸೊಂಟ, ಹಿತಮಿತವಾದ ವರ್ಣ ಸಂಯೋಜನೆಯಿಂದ ತಮ್ಮತನವನ್ನು ಉಳಿಸಿಕೊಂಡು ಮುಂದಿನ ಚಿತ್ರಕಾರರಿಗೆ ಕಲಾಗುರುಗಳಾಗಿರುವರು.[೨೧]

ಕರ್ನಾಟಕದ ಹಸ್ತಪ್ರತಿಗಳಲ್ಲಿ ಪ್ರಮುಖವಾಗಿ ಬಿಳಿ, ಕಪ್ಪು, ಕೆಂಪು, ಹಳದಿ ಹಾಗೂ ಹಸಿರು ಬಣ್ಣಗಳನ್ನೇ ಬಳಸಲಾಗಿದೆ. ಇವೆ ಪಂಚ ಬಣ್ಣಗಳು. ಈ ಪಂಚವರ್ಣಗಳು ಮಿಶ್ರಣದಿಂದ ಬಹುಬಣ್ಣಗಳನ್ನು ಸಿದ್ಧಪಡಿಸಿಕೊಳ್ಳುವಲಲ್ಲಿ ಕರ್ನಾಟಕ ಹಸ್ತಪ್ರತಿಗಳ ಕಲಾವಿದರು ಸಿದ್ಧಹಸ್ತರು. ಹರಿತರಿ, ತಾಮ್ರ, ಕೃಷ್ಣ, ಪೀತ, ಸೀತೆ ಎಂಬ ಪಂಚವರ್ಣಗಳ ಪ್ರಸ್ತಾಪ ಪೊನ್ನನ ಶಾಂತಿ ಪುರಾಣದಲ್ಲಿರುತ್ತದೆ. ಈ ಪಂಚವರ್ಣಗಳಲ್ಲಿ ನೀಲಿ ಬಣ್ಣವನ್ನು ಪರಿಗಣಿಸಿಲ್ಲವಾದರೂ ಅಭಿನವ ದಶಕುಮಾರ ಚರಿತ್ರೆಯಲ್ಲಿ ಷಡ್ವರ್ಣಗಳನ್ನು ಕುರಿತು ಉಲ್ಲೇಖವಿದ್ದು, ಸುಂದರ ಬಣ್ಣದ ಚಿತ್ರರಚನೆ ಷಡ್ವರ್ಣಗಳನ್ನು ಕುರಿತು ಉಲ್ಲೇಖವಿದ್ದು, ಸುಂದರವಾದ ಬಣ್ಣದ ಚಿತ್ರರಚನೆಗೆ ಷಡ್ವರ್ಣಗಳ ಶ್ರೇಣಿ ಪರಿಪೂರ್ಣವಾದುದು ಎಂದು ಭಾವಿಸಲಾಗಿದೆ. ಇಷ್ಟೇ ಅಲ್ಲದೆ ಬಣ್ಣಗಳಲ್ಲಿ ಕೆಂಪು ಮತ್ತು ಹಳದಿ, ಹಸಿರು ಮತ್ತು ನೀಲಿಗಿಂತ ಉಷ್ಣವಾಗಿರುತ್ತವೆ. ಇದರಿಂದ ಹಲವಾರು ಮಾನಸಿಕ ಸಂಶೋಧನೆಗಳು ಕಂಡುಹಿಡಿಯಲ್ಪಟ್ಟಿವೆ. ಬಣ್ಣಗಳ ಗುಂಪಿನಲ್ಲಿ ಕೆಂಪು ಮತ್ತು ಹಳದಿಯ ಮುಂದೆ ಒಂದು ನೀಲಿಯು ಹಿಂದೆ ಹೋಗುತ್ತದೆ. ಇದು ನಮ್ಮ ಕಣ್ಣು, ಉಬ್ಬಿದ ಭಾಗಗಳಲ್ಲಿ ಕೆಂಪುಕಿರಣಗಳನ್ನು ವೀಕ್ಷಿಸುತ್ತವೆ ಮತ್ತು ತಗ್ಗಿದ ಭಾಗಗಳಲ್ಲಿ ನೀಲಿ ಕಿರಣಗಳು ಕಣ್ಣಿನ ರೆಟಿನಾ ಬೀಳುತ್ತವೆ. ಏಕೆಂದರೆ ಅವು ಬೇರೆ ಬೇರೆ ಕೋನಗಳಲ್ಲಿ ಬಿಂಬಿತವಾಗುತ್ತವೆ. ಹಿಂದೆ ಮುಂದೆ ಹೊಗುವ ಈ ಬಣ್ಣಗಳ ಸಂವೇದನೆ, ಬಣ್ಣಗಳಿಗೆ ಚಲನೆ ಕೊಡುತ್ತವೆ.[೨೨]

೩. ಪರಿಪೂರ್ಣ ಹಂತ

ಹಸ್ತಪ್ರತಿ ಚಿತ್ರಕಲೆಯಲ್ಲೇ ಇದರು ಪರ್ಯಾಯ ಸ್ಥಿತಿಯ ಹಂತವಾಗಿದೆ. ಇಲ್ಲಿ ಸಂಯೋಜನೆ, ಸಮತ್ವಗಳನ್ನು ಸರಿದೂಗಿಸಿಕೊಂಡು ಇರುವ ಚಿಕ್ಕಪುಟ್ಟ ಮಾರ್ಪಾಡುಗಳಿಂದ ಹೊರರೇಖೆಗಳಿಂದ ಕ್ರಮವನ್ನು, ತಂತ್ರವನ್ನು ಸಾಹಿತ್ಯದೊಂದಿಗೆ ಹೋಲಿಕೆಯನ್ನು ಮಾಡಿಕೊಂಡು ಸ್ವೀಕರಿಸುವ ಅಥವಾ ನಿರಾಕರಿಸುವಂತಹ ಅಂತಿಮದ ಹಂತ ಇದಾಗಿರುತ್ತದೆ. ಈ ಹಂತದಲ್ಲಿ ಕಲಾಕೃತಿಯು ಪರೀಕ್ಷೆಗೆ ಒಳಗೊಂಡಾಗ ಅದು ಪರಿಪೂರ್ಣಗೊಂಡ ಕಲಾಕೃತಿಯಾಗಬಲ್ಲದು. ಅಲ್ಲಿ ಪ್ರಾರಂಭದಿಂದ ಕೊನೆಯ ಹಂತದ ಎಲ್ಲಾ ಮಜಲುಗಳು ಮತ್ತೊಮ್ಮೆ ಆತ್ಮಾವಲೋಕನದ ಪರೀಕ್ಷೆಗೆ ಒಳಪಡುತ್ತದೆ. ಚಿತ್ರಕಲೆಯೊಳಗೆ

೨೧. ಡಾ. ಸಿದ್ಧಯ್ಯ ಪುರಾಣಿಕ, ಮರ್ಣಿ, ವಿ.ಟಿ.ಎಸ್. ರಾವ್ (ಸಂ.) : ತಾಳೇಗ್ರಂಥಗಳಲ್ಲಿ ಚಿತ್ರವಿನ್ಯಾಸ, ಪು-೪೧೬

೨೨. ಎನ್. ಮರಿಶಾಮಾಚಾರ್ : ಸಮಕಾಲೀನ ಕಲೆ, ಪು-೨೨

ಅಡಗಿರುವಂತಹ ಭಾವ ಕಲೆಯ ಕುರಿತು ರಸಋಷಿ ರಾಷ್ಟ್ರಕವಿ ಡಾ॥ ಕೆ.ವಿ. ಪುಟ್ಟಪ್ಪನವರು ಹೀಗೆ ವಿವರಿಸುತ್ತಾರೆ. ಚಿತ್ರಕಾರನು ತನ್ನ ಕೃತಿಯನ್ನು ಪ್ರತಿಕೃತಿಯೆಂದು ಕರೆದಿದ್ದರೆ ಅದು ಹುಸಿ ಮೋಸವೂ ಆಗುತ್ತಿತ್ತು. ಆದರೆ ಅವನು ತನ್ನ ಚಿತ್ರವನ್ನು ಕಣ್ಣಿಗೆ ಕಾಣುವ ಪ್ರಕೃತಿಯ ಪ್ರತಿಕೃತಿ ಎಂದು ತಿಳಿಯುವುದಿಲ್ಲ. ಅವನ ಚಿತ್ರಕೃತಿ ಯಾವೊಬ್ಬ ವ್ಯಕ್ತಿಯ ರೂಪಕ್ಕೂ ಕನ್ನಡಿ ಹಿಡಿಯುವುದಿಲ್ಲ. ಅವನದು ಬರಿಯ ರೂಪ ಕಲೆಯಲ್ಲ, ಭಾವಕಲೆ ಎಂದರೆ ಭಾವಕ್ಕೆ ರೂಪ ಕಲ್ಪನೆಯಾಗಿದೆ ಅಷ್ಟೆ. ಗಾಳಿಯನ್ನು ಅದರ ನಾನಾ ಸ್ಥಿತಿಗಳಲ್ಲಿ ಅನುಭವಿಸಿ ಅದರ ಅನೇಕಾನೇಕ ದೃಶ್ಯಗಳನ್ನು ಅವುಗಳಿಂದ ಪ್ರೇರಿತವಾದ ಬಹು ಸಂಖ್ಯೆಯ ಭಾವಗಳನ್ನು ತನ್ನ ರಸಗರ್ಭದಲ್ಲಿ ಧಾರಣೆ ಮಾಡಿಕೊಂಡ ವರ್ಣ ಶಿಲ್ಪ ತನ್ನ ಸಹಾನುಭೂತಿಗೆ ರೂಪದಾನಗೈದು ಕಲಾ ತುಂಬಿದ ಮೇಲೆ ಅದನ್ನು ಪ್ರಕಟಿಸುತ್ತಾನೆ.[೨೩] ಯಾವ ಅನುಭವದ ಪ್ರಚೋದನೆಯ ಫಲವಾಗಿ ಸೃಷ್ಟಿಶೀಲವಾದ ಈ ರೀತಿಯಾಗಿ ಬಣ್ಣಗಾರಿಕೆಯ ಹಂತವು ಹಸ್ತಪ್ರತಿ ಚಿತ್ರಕಲೆಯಲ್ಲಿ ಪ್ರಮುಖಘಟ್ಟವಾಗಿದ್ದು ಇದರ ನಿರ್ವಹನೆಗೂ ಪ್ರಬುದ್ಧತೆ ಬೇಕು.

೩. ಭಾವಾಭಿವ್ಯಕ್ತಿಯ ಹಂತ

ಬರೀ ವರ್ಣಲೇಪನದಿಂದ ಕೃತಿ ಪೂರ್ಣಗೊಳ್ಳಲಾರದು ಎನ್ನುವ ವಾತ್ಸಾಯನ ಮಾತನ್ನು ಗಮನಿಸಬೇಕು. ರೂಪದಲ್ಲೂ, ಪ್ರಮಾಣದಲ್ಲೂ ಭಿನ್ನತೆ ಇರಬೇಕು. ಆದರೆ ವರ್ಣಗಾರಿಕೆಯ ಬಂಧನದಲ್ಲಿ ಭಾವ ಲಾವಣ್ಯಗಳ ಸಂಯೋಜನೆಯು ಸಮೃದ್ಧವಾಗಿರಬೇಕು. ಕಲಾಕೃತಿಯನ್ನು ಗಮನಿಸುತ್ತಲೇ ಸಾಹಿತ್ಯಕೃತಿಯೊಳಗಿನ ಭಾವ ಮಿಂಚಬೇಕು. ಈ ನವರಸಗಳಿಗೆ ತಕ್ಕುದಾ ನವವರ್ಣ ಮತ್ತು ವರ್ಣಕ್ಕೆ ಆಧರಿಸಿದ ದೇವತೆಗಳ ವಿವರವನ್ನು ವಿಶ್ವನಾಥನ 'ಸಾಹಿತ್ಯ ದರ್ಪಣ'ವು ನೀಡುವ ಮುಖ್ಯವಾದ ವಿವರಣೆ ಹೀಗಿದೆ. ಆಯಾ ರಸದ ಹಿನ್ನೆಲೆಯೊಂದಿಗೆ ಹುಟ್ಟಿಕೊಳ್ಳುವ ವರ್ಣ. ಆ ವರ್ಣಕ್ಕೆ ಅಧಿಪತಿಯಾಗಿರುವ ದೇವರನ್ನು ಕಾಣುವಂತಹ ಕೋಷ್ಟಕ ಇದಾಗಿದೆ. ರಸಗಳಲ್ಲಿಯೇ ಜನಪ್ರಿಯ ರಸ ಶೃಂಗಾರರ ರಸ. ಆ ರಸದಲ್ಲಿ ಚಿಂತೆ, ರೋಗ, ಯಾತನೆಗಳಿಗೆ ಆಸ್ಪದವೇ ಇಲ್ಲ. ಎಲ್ಲಾ ನೋವು, ಬವಣೆಗಳನ್ನು ಇಟ್ಟುಕೊಂಡು ಅವುಗಳನ್ನು ಮೀರಿ ಸಾಗುವುದು ಈ ರಸತ ಮಹತ್ತಾಗಿದೆ. ಇದರ ಹಿನ್ನೆಲೆಯಲ್ಲಿ ಈ ರಸದ ಅಧಿಪತಿ ವಿಷ್ಣುವನ್ನು ಕಾಣುವ ಉದಾತ್ತೆಯು ಈ ರಸದ ಬೆನ್ನಿಗಿದೆ. ಭಾವವರ್ಣ ಮತ್ತು ದೇವೆತಗಳನ್ನು ಈ ಕೆಳಕಂಡಂತೆ ಗಮನಿಸಬಹುದು.[೨೪]

ಕ್ರಸಂ.	ರಸ	ವರ್ಣ	ಅಧಿದೇವತೆ
೦೧.	ಶೃಂಗಾರ	ಶ್ಯಾಮಲ	ವಿಷ್ಣು

೨೩. ಕುವೆಂಪು : ದಾರ್ಶನಿಕ ಕಾವ್ಯ ಮೀಮಾಂಸೆ. ಪು-೪೦

೨೪. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ (ಸಂ.) : ನಿಜದನೆಲೆ. ಪು-೨೫೩

೦೨.	ಹಾಸ್ಯ	ಬಿಳುಪು	ಶಿವ
೦೩.	ಕರುಣ	ಬೂದು	ಯಮ
೦೪.	ರೌದ್ರ	ಕೆಂಪು	ರುದ್ರ
೦೫.	ವೀರ	ಹಳದಿ	ಇಂದ್ರ
೦೬.	ಭಯಾನಕ	ಕಪ್ಪು	ಕಾಲ
೦೭.	ಭೀಭತ್ಸ	ನೀಲ	ಮಹಾಕಾಲ
೦೮.	ಅದ್ಭುತ	ಸ್ವರ್ಣ	ಗಂಧರ್ವ
೦೯.	ಶಾಂತ	ಮಲ್ಲಿಗೆ ಬಿಳುಪು	ನಾರಾಯಣ ಚಂದ್ರಶೀತಲ

ಭೌತದಾಚೆಯ ಕಲೆ ಅಥವಾ ತಾಂತ್ರಿಕ ಕಲೆ

ಭಾರತೀಯ ಮತ್ತು ಕರ್ನಾಟಕ ಸಮಕಾಲೀನ ಚಿತ್ರಕಲೆಯಲ್ಲೂ ಇಂತಹ ಪ್ರಯೋಗಗಳು ಸಾಕಷ್ಟು ನಡೆದಿವೆ. ಈ ಗಾದಿಯಲ್ಲಿ ಮುನ್ನಡೆದಿರುವ ಜಿ. ಸ್ವಾಮಿನಾಥನ್, ಬಿರೇನ್‌ಡೇ, ಜಿ.ಆರ್. ಸಂತೋಷ್, ಕೆ.ಸಿ. ಫನಿಕ್ಕರ್, ಪಿ.ಟಿ. ಶೆಟ್ಟಿರಂತಹವರನ್ನು ಹೆಸರಿಸಬಹುದು. ಇವು ನೇರ ಲಲಿತಕಲೆಗೆ ಸಂಬಂಧಿಸಿದರೆ ಹಸ್ತಪ್ರತಿಗಳಿಗೆ ಸಂಬಂಧಿಸಿದ ಮಾಟ ಮಂಡಲದಂತಹ ಅನೇಕ ಸಂಯೋಜನೆಗಳನ್ನು, ಬೀಜಾಕ್ಷರಗಳನ್ನು ಸಕಾಲಗಳಲ್ಲಿ ಗುರುತಿಸಬಹುದಾಗಿದೆ. ಮೈಸೂರು ಹಸ್ತಪ್ರಿ ಭಂಡಾರದ ೧೮೮(ಕೆ.ಬಿ. ೯೧೩)ರ ಜ್ಯೋತಿಷ್ಯ ವೈದ್ಯ, ಮಂತ್ರಗಳ ಗ್ರಂಥಗಳಲ್ಲಿ ೫೫೫ (ಕೆ ೧೦೦೦/೫), ಚೆನ್ನಬಸಣ್ಣನವರ ಪದಮಂತ್ಯ ಗೋಪ್ಯ (ಸಚೇಕ) ೨೯೦ (ಕೆ ೧೦೦೦/೧೧) ದಶವಿಧ ಪಾದೋಧಕದಲ್ಲೂ ಕಾಣಬಹುದು. ಉದ್ದರನೆಗಳ ಮಂಡಲ, ತಂತ್ರಗಳ ಹೇಳಿಕೆಗೆ ಸಮಫಿ ಬರುತ್ತವೆ. ಅದಕ್ಕಾಗಿ ಪೂಜ್ಯರಾದ ಶ್ರೀ ಜ.ಚ. ನಿಯವರು ಈ ರೀತಿ ವಿವರಿಸುತ್ತಾರೆ. ಉದ್ಧರಣೆ ಉಪಾಸನೆಯ ಒಂದು ತಂತ್ರ ಮನ ಭಾವಗಳನ್ನು ಕಾಯ-ಕರಣಗಳನ್ನು ಕೇಂದ್ರೀಕರಿಸುವ ಸೂಚ್ಯ ಸೂತ್ರ ಪ್ರವೃತ್ತಿಯ ವಾಸನೆಯನ್ನು ನಿಯಂತ್ರಿಸುವ ವಿಕೃತಿಯಿಂದ ದೂರಿಸುವ ಅಕುಟಿಲ ಯಂತ್ರ ಮನಸ್ಸನ್ನು ಮನನಕ್ಕೆ ಮಿತಿಯನ್ನು ವಿಚಾರಕ್ಕೆ ಹಚ್ಚುವ ಅಕ್ಷರ ಮಂತ್ರವಾಗಿದೆ. ಇದು ವಾಗ್ಮಯವೂ ಅಹುದು, ವರ್ಣಮಯವೂ ಅಹುದು. ಇದನ್ನು ಅಂಗ-ಲಿಂಗ ಸಾಹಿತ್ಯವೆಂದೂ ಹೇಳಬೇಕು. ಇದು ಅಂಕೆ ಅಕ್ಷರ ವರ್ಣ ಪ್ರಧಾನವಾದ ಸಾಹಿತ್ಯ ಅಂತರಂಗವನ್ನು ಅರಿತುಕೊಳ್ಳಲು ಅನುವನ್ನುಂಟು ಮಾಡುವ ಸಾಂಕೇತಿಕ ದೃಶ್ಯ ಸಾಹಿತ್ಯವಾಗಿದೆ.[೨೫]

---

೨೫. ಡಾ. ಬಿ.ವಿ. ಶಿರೂರ (ಸಂ) ಗೌರವ : ಡಾ॥ ಜಚನಿ : ಉದ್ದರಣೆಗಳು : ಪು-೧೫೩

ಪರಿಕರಗಳು

ಈ ಮೇಲಿನ ಸಮೀಕ್ಷಾ ಹಂತ ಮತ್ತು ಕಾರ್ಯ ನಿರ್ವಹಣಾ ಹಂತಗಳು ಕಲಾವಿದ ಮತ್ತು ಸಾಹಿತಿಯ ಭಾವ ವಿನಿಮಯದ ಭಾವ ಬಂದಿದೆ. ಮಜಲುಗಳಾಗಿದ್ದು ಸಂಪೂರ್ಣವಾಗಿ ಭೌತಿಕದಾಚೆಯ ಮನಸ್ಸಿನ ನೆಲೆಯನ್ನಾಶ್ರಯಿಸಿದ ಅಂಶಗಳಾಗಿವೆ. ಚಿತ್ರದ ಸೃಷ್ಟಿಗೆ ಮಾನಸಿಕ ಕ್ರಿಯೆಯು ದೃಢಗೊಂಡ ಬಳಿಕ ಅದಕ್ಕೆ ಪೂರಕವಾಗಿರುವ ಭೌತಿಕವಾದಂತಹ ಪರಿಕರಗಳು ಬೇಕು. ಇವುಗಳನ್ನು ಕುರಿತು ಒಂದೊಂದಾಗಿ ಅಧ್ಯಯನಕ್ಕೆ ಒಳಪಡಿಸಬಹುದು. ಶುದ್ಧ : ಇದು ಪ್ರಾಥಮಿಕ ಬಣ್ಣ. ಇದನ್ನು ಪ್ರಾದೇಶಿಕವಾಗಿ ಬೇರೆ ಬೇರೆಯಾಗಿ ನಿರ್ಮಿಸಿಕೊಳ್ಳುತ್ತಾರೆ. ಬಳಪದ ಕಲ್ಲನ್ನು ಒರಟು ಕಲ್ಲಿನ ಮೇಲೆ ತೇಯ್ದಾಗ ಬರುವ ಮೃದು, ನುಣುಪು ಗಂಧವನ್ನು ಒಣಗಿಸಿ ಉಂಡೆ ಕಟ್ಟಿಕೊಂಡು ಬಣ್ಣ ಯಾವುದರ ಮೇಲೆ ಮಾಡಬೇಕೋ ಅದಕೆಕ ಪ್ರಾಥಮಿಕವಾಗಿ ಈ ಶುದ್ಧ ಅಥವಾ ಶುದ್ಧವನ್ನು ಸೋಸಿ ಬಳಸುತ್ತಾರೆ. ಜೈನ ಹಸ್ತಪ್ರತಿಗಳು ಬಹುವರ್ಣ ರಂಜಿತವಾಗಿರುವುದರಿಂದ ಇಂತಹ ಮೇಲ್ಮೈಗೆ ಬಣ್ಣಗಳನ್ನಾಗಿ ಬಳಸುತ್ತಾರೆ.[೨೬]

ಬಣ್ಣಗಳ ಸಾಮಗ್ರಿ

ಹಸ್ತಪ್ರತಿ ವರ್ಣಗಾರಿಕೆಗೆ ಬೇಕಾದ ವರ್ಣ ಮತ್ತು ಇತರ ಸಾಮಗ್ರಿಗಳನ್ನು ಕುರಿತು ಶಿವರಾಮ ಮೂರ್ತಿಯವರು ಈ ರೀತಿಯಾಗಿ ವಿವರಿಸುತ್ತಾರೆ. ಶಿಲ್ಪಗ್ರಂಥಗಳಲ್ಲಿ ಬರುವ ಅವುಗಳ ವಿವರಣೆಗಳಲ್ಲದೆ ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧಪಟ್ಟ ವಿಷಯ ಎಲ್ಲೆಲ್ಲಿ ಬರುತ್ತದೋ ಅಲ್ಲಲ್ಲಿ ಚಿತ್ರಕಾರನ ಉಪಕರಣಗಳು ಮತ್ತು ಸಾಮಗ್ರಿಗಳ ಬಗ್ಗೆ ಅನೇಕ ಉಲ್ಲೇಖಗಳಿವೆ. ಹೀಗೆ ಕಲಾವಿದನು ತನ್ನ ಸುಂದರವಾದ ಚಿತ್ರಗಳನ್ನು ಹೇಗೆ ಮತ್ತು ಯಾವುದರ ಸಹಾಯದಿಂದ ಚಿತ್ರಿಸುತ್ತಿದ್ದನೆಂಬುದನ್ನು ತಿಳಿದುಕೊಳ್ಳಲು ಬೇಕಾದಷ್ಟು ಸಾಮಗ್ರಿ ದೊರೆಯುತ್ತವೆ. ವಾತ್ಸಾಯನ ಕಾಮಸೂತ್ರದಲ್ಲಿ ತಿಳಿಸಿರುವಂತೆ ನಾಗರಕನು ಸಮುದ್ಗಕ ಅಥವಾ ಕುಂಚಗಳಿಂದ ತುಂಬಿದ ಪೆಟ್ಟಿಗೆ, ಒಂದು ಹಲಗೆ ಮತ್ತು ಚೌಕಟ್ಟು ಹೊಂದಿರುತ್ತಾನೆ ಎಂಬುದನ್ನು ಈಗಾಗಲೇ ನೋಡಿದ್ದೇನೆ. ಕಲಾವಿದನೊಬ್ಬ ಬಣ್ಣಗಳನ್ನೊಳಗೊಂಡ ಹಲವಾರು ತಟ್ಟೆಗಳಿಂದ ಸುತ್ತುವರಿಯಲ್ಪಟ್ಟ ತನ್ನ ಕುಂಚಗಳನ್ನು ಕೌಶಲದಿಂದ ಬಳಸುತ್ತಿರುವ ಚಿತ್ರವನ್ನು ಮೃಚ್ಛಕಟಿಕದಲ್ಲಿ ಕಾಣಬಹುದಾಗಿದೆ. ಕಲಾವಿದನ ಕಿಟಕಿಯ ಕಟ್ಟೆಯ ಮೇಲೂ ಬಣ್ಣದ ತಟ್ಟೆಗಳಿದ್ದುವೆಂದು ಪಾದವಾಡಿತಕದಲ್ಲಿ ವರ್ಣಿಸಲ್ಪಟ್ಟಿದೆ. ಕುಂಚಗಳಿಂದ ತುಂಬಿದ ಸೋರೆಬುರುಡೆಗಳು ಚಿತ್ರದ ಹಲಗೆಗಳಿಂದ ಕಟ್ಟಿರುವುದನ್ನು ಬಾಣಕವಿ ತನ್ನ ಹರ್ಷಚರಿತದಲ್ಲಿ ತಿಳಿಸಿದ್ದಾನೆ.

೨೬. ಡಾ. ಎಚ್.ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ ಒಂದು ಅಧಯ್ಯನ : ಪು-೯೦

ಕಾಳಿದಾಸ ಬಣ್ಣಗಳಿಂದ ತುಂಬಿದ ಪೆಟ್ಟಿಗೆ ವರ್ಣಿಕಾ ಕರಂಡ ಸಮುದ್ಗಕೆ ಎಂದು ಉಲ್ಲೇಖಿಸುತ್ತಾನೆ. ದಶಕುಮಾರ ಚರಿತ ಮತ್ತು ರತ್ನಾವಳಿಯಲ್ಲೂ ಕುಂಚಗಳ ಪೆಟ್ಟಿಗೆಯ ಇಂತಹುದೇ ಉಲ್ಲೇಖವಿದೆ. ಅಭಿಲಾಷಿತಾರ್ಥ ಚಿಂತಾಮಣಿ ಮತ್ತು ಉಳಿದ ಶಿಲ್ಪ ಗ್ರಂಥಗಳು, ಕುಂಚಗಳು ಮತ್ತು ವರ್ತಿಕಗಳನ್ನು ವರ್ಣಿಸುತ್ತವೆ. ರೇಖಾಚಿತ್ರಗಳನ್ನು ರಚಿಸಲು ಬಳಸುವ ಉಬ್ಬು ಕುಂಚಗಳು, ತಿಂಡುವರ್ತಿ ಅಥವಾ ಕಿತ್ತವರ್ತಿ ಎಂದು ಅನೇಕ ಬಗೆಯಲ್ಲಿ ಕರೆಯಲ್ಪಡುವ ವರ್ತಿಕೆಗಳು, ಕುರ್ಚಕಗಳು, ಲೇಖಣಿಗಳು ಮತ್ತು ತೂಲಿಕಾಗಳೆಂದು ಕರೆಯುವ ಕುಂಚಗಳು ವಿವರವಾಗಿ ವರ್ಣಿಸಲ್ಪಟ್ಟಿವೆ. ಖಚೋರವೆಂಬ ಸುವಾಸನೆಯಿಂದ ಕೂಡಿದ ಬೇರನ್ನು ಅನ್ನದಲ್ಲಿ ಬೆರೆಸಿ ಚೂಪಾದ ಉಜ್ಜು ಮೋಟಿನಂತಾಗುವಂತೆ ಉರುಳಿಸಿ ಕಿತ್ತಾಲೇ ಖಣಿ ಎಂದು ಕರೆಯಲ್ಪಟ್ಟಿರುವ ವರ್ತಿಕಾವನ್ನು ರಚಿಸುತ್ತಿದ್ದವು. ಹಸುವಿನ ಒಣಗಿದೆ ಸೆಗಣಿಯೊಂದಿಗೆ ಬೆರೆಸಿದ ಇಟ್ಟಿಗೆಯ ಪುಡಿಗೆ ನೀರನ್ನು ಬೆರೆಸಿ ನುಣ್ಣಗೆ ಅರೆದು ಸರಿಯಂತೆ ಕಲೆಸಿ ಚಿತ್ರ ಬರೆಯಲು ಉಜ್ಜಮೋಟಿನ ರೀತಿಯ ದಿಂಡುಗಳನ್ನು ಮಾಡುತ್ತಿದ್ದರು.[೨೭] ಮೊನಚಾದ ತಾಮ್ರದ ಕಂಠ ಮತ್ತು ಪುಕ್ಕದಿಂದ ಕೂಡಿದ ತೆಳುವಾದ ಬಿದಿರಿನ ಕಡ್ಡಿಯನ್ನು 'ತೂಲಿಕಾ' ಎಂದು ಕರೆಯುತ್ತಾರೆ.

ಅಭಿಲಾಷಿತಾರ್ಥ ಚಿಂತಾಮಣಿ ಮತ್ತು ಇತರ ಗ್ರಂಥಗಳು ಬಣ್ಣದ ರೂಪರೇಖೆಗಳು ಮತ್ತು ಲೇಪನೆಗಳಿಗಾಗಿ ಬಳಸುವ ಅನೇಕ ಬಗೆಯ ಈ ಉಪಕರಣಗಳ ಬಗೆಗೆ ಸ್ವಾರಸ್ಯಕರವಾದ ವಿವರಣೆಗಳನ್ನು ಕೊಡುತ್ತವೆ. ಲೇಪನ ಅಥವಾ ಅಕ್ಷಾಲನವು ದೊಡ್ಡಕುಂಚವಾದ ಕುರ್ಚಕದಿಂದ ಮಾಡಲ್ಪಡುತ್ತಿತ್ತು. ಚಿತ್ರದ ಉನ್ಮೀಲನಕ್ಕೆ ಅಂದರೆ ಚಿತ್ರದ ಕಣ್ತೆರೆಯಲು ಕೂಡುವ ಅಂತಿಮ ಸ್ಪರ್ಶಕ್ಕೆ ಸೂಕ್ಷ್ಮ ಉಪಕರಣವಾದ ತೂಲಿಕಾ ಅಥವಾ ಶಲಾಕರವು ಉಪಯೋಗಿಸಲ್ಪಡುತ್ತದೆ. ಸಸ್ಯಜನ್ಯ ಅಥವಾ ಖನಿಜಜನ್ಯ ಬಣ್ಣಗಳೆಂದರೆ ಗೈರಿಕಾ (ಕೆಂಪು) ನೀಲಿ, ಸುದ್ದಾ (ಬಿಳಿ), ಕಜ್ಜಲ (ಕಪ್ಪು) ಮತ್ತು ಹರತಾಳ (ಹಳದಿ) ವಜ್ರಲೇಪ ಮತ್ತು ನಿರ್ಮಿಸಕಲ್ಕಗಳು ಕ್ರಮವಾಗಿ ಬಣ್ಣಗಳನ್ನು ಕಲೆಸುವ ಪ್ರಾಣಿಜನ್ಯ ಮತ್ತು ಸಸ್ಯಜನ್ಯ ಅಂಟುಗಳು[೨೮] ಈ ರೀತಿಯಲ್ಲಿ ಬಣ್ಣಗಾರಿಕೆ ತಯಾರಿಕಾ ಹಂತಗಳನ್ನು ಬಳಸುತ್ತಾರೆ.

ಕುಂಚಗಳು

ಲಿಪಿಕಾರನ ಕೈಗೆ 'ಕಂಠ' ಮಾಧ್ಯಮವಾಗಿರುವಂತೆ ಕಲಾವಿದರ ಕರಗಳಿಗೆ ಕಂಠ ಕೈವಾರ, ಕುಂಚಗಳು, ಬಣ್ಣಗಳು, ಹಸ್ತಪ್ರತಿ ಚಿತ್ರಕಲೆಯ ನಿರ್ಮಾಣಕ್ಕೆ ಮೂಲಕಾರಣೀಭೂತವಾಗಿದೆ. ಕಂಠಗಳಲ್ಲಿ ವೈವಿಧ್ಯ ಮತ್ತು ಅನೇಕ ಈತಿಹಗಳು ಇರುವಂತೆ ಕಲಾವಿದನ ಪರಿಕರಗಳಿಗೂ ಅನೇಕ ಐತಿಹಗಳಿವೆ.

---

೨೭. C. Sivramamurthy : Indian Painting, p.no.19

೨೮. ಅದೇ.

ಇಂದಿನ ಕಾಗದದ ಕಾಲವನ್ನು ಅನುಸರಿಸಿ ಆ ಕಾಲದ ಬದಲಾದಂತೆ ಪರಿಕರಗಳನ್ನು ಬದಲಿಸುತ್ತಾ ಮೂಲ ಪರಂಪರೆಯನ್ನು ಮುನ್ನಡೆಸುತ್ತಾ ಸಾಗಿದ್ದಾನೆ. ಕಂಠದ ಸ್ಥಾನವನ್ನು ಲೆಕ್ಕಣಿಕೆ ಆವರಿಸಿಕೊಂಡಂತೆ, ಲೆಕ್ಕಣಿಕೆಗೆ ಬಂದಂತೆ ಕೊಂಡು ಪ್ರಾಚೀನ ಕಲಾಪರಂಪರೆಯನ್ನು ಅರ್ವಾಚೀನ ಪರಂಪರೆಯೊಂದಿಗೆ ಮುನ್ನಡಿಯಿಸಿಕೊಂಡು ಸಾಗಿವೆ. ಕುಂಚಕ್ಕೆ ತೂಲಿಕಾ, ಬಟ್ಟಿಗೆ, ಲೆಕ್ಕಣಿಕೆ, ಕರದ ಕಡ್ಡಿ, ಕೈ ಕಡ್ಡಿ, ಬಣ್ಣದ ಕಡ್ಡಿ ಎಂಬ ಅನೇಕ ಹೆಸರುಗಳಿಂದ ಪರಿಚಿತವಾಗಿದೆ. ಈ ಕಡ್ಡಿಗಳನ್ನು ಗ್ರಾಮೀಣ ಪ್ರದೇಶದಲ್ಲಿ ಸಿಗುವ ರೇವ್ವ ಬಾಳೆಯ ನಾರಿನಿಂದ, ಪುಂಡಿಯ ಸಸ್ಯದ ನಾರಿನಿಂದಲೂ ಇಂತಹ ಕುಂಚಗಳನ್ನು ತಯಾರಿಸಿಕೊಳ್ಳುತಿದ್ದರು. ಕಾಲಾನುಕ್ರಮದಲ್ಲಿ ಇಣಚಿಯ, ಆಡಿನ ಬಾಲದ ಕೇಶಗಳಿಂದಲೂ ಕುಂಚಗಳನ್ನು ನಿರ್ಮಿಸಿ–ಕೊಳ್ಳುತ್ತಿದ್ದರು. ಕಿನ್ನಾಳು, ಕನಕಗಿರಿ, ಸುರಪುರದ, ಗೋಕಾಕದ ಕಲಾವಿದರುಗಳು ಕುರೂಪದ ಚಿತ್ರಗಳಿಗೆ ಇಂತಹವೇ ಕುಂಚಗಳನ್ನು ಈಗಲೂ ಬಳಸುತ್ತಿರುವುದನ್ನು ಕಾಣಬಹುದು.

ಮಾಧ್ಯಮಗಳು

ಬಣ್ಣಗಳ ಬಹುಕಾಲದ ಬಾಳಿಕೆಗಾಗಿ, ಸುಲಭ ಸಾಧನಕ್ಕಾಗಿ ಜಲವರ್ಣಗಳಲ್ಲಿ ಅನೇಕ ಮಾಧ್ಯಮಗಳನ್ನು ಬಳಸುತ್ತಾರೆ. ಕರಿಜಾಲಿಯ ಅಂಟು, ಬೇವಿನ ಅಂಟುಗಳನ್ನು ನೀರಿನಲ್ಲಿ ನೆನೆಯಿಸಿ, ಶೋಧಿಸಿಕೊಂಡು ಬಣ್ಣಗಳಲ್ಲಿ ಬಳಸುತ್ತಾರೆ. ಮೀನಿನ ದೇಹದಿಂದ ತೆಗೆದ ಎಣ್ಣೆಯನ್ನು ಮೀನಿನ ಸರಿ ಎಂದು ಬಳಸುತ್ತಾರೆ. ಫಲಕಗಳ ಮೇಲಿರುವ ವರ್ಣ ಚಿತ್ರಗಳ ರಕ್ಷಣೆ ಮತ್ತು ಹೊಳವಿಗಾಗಿ ಗಿಡದ ವಜ್ರವನ್ನು 'ರಾಳ'ವನ್ನು ಬಳಸುತ್ತಾರೆ.[೨೯] ಈ ರೀತಿ ಮಧ್ಯಮಗಳಾಗಿ ಹಲವು ವಸ್ತುಗಳನ್ನು ಬಣ್ಣಗಳಲ್ಲಿ ಬಳಸುವುದನ್ನು ಕಾಣಬಹುದು.

ಜೈನ ಹಸ್ತಪ್ರತಿ ಚಿತ್ರಕಲೆಯ ವರ್ಗೀಕರಣ

ಕರ್ನಾಕಟ ವ್ಯಾಪ್ತಿಯಲ್ಲಿ ದೊರೆಯುವ ಜೈನ ಸಚಿತ್ರಹಸ್ತಪ್ರತಿಗಳನ್ನು ಒಟ್ಟಾರೆಯಾಗಿ ಮೂರು ಬಗೆಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಬಹುದಾಗಿದೆ. ಅವುಗಳಲ್ಲಿ ೧) ಹಸ್ತಪ್ರತಿಯ ಫಲಕದ ಮೇಲಿನ ಚಿತ್ರಗಳು ೨) ತಾಳೆಗರಿಯ ಮೇಲೆ ಕುಂಚದಿಂದ ಕೊರೆದ ರೇಖಾಚಿತ್ರಗಳು ೩) ಕಾಗದದ ಮೇಲಿನ ರೇಖಾ ಚಿತ್ರಗಳು ಹಾಗೂ ವರ್ಣಚಿತ್ರಗಳು. ಹೀಗೆ ಇವುಗಳನ್ನು ವಿಭಾಗಿಸಿ, ವಿಂಗಡಿಸಿ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

ಹಸ್ತಪ್ರತಿಯ ಫಲಕದ ಮೇಲಿನ ಚಿತ್ರಗಳು

ಹಸ್ತಪ್ರತಿಯ ಫಲಕಗಳನ್ನು, ಫಲಕಗಳು, ರಕ್ಷಣಾ ಫಲಕಗಳು, ಹಸ್ತಪ್ರತಿ ಕವಚಗಳು, ಹೊದಿಕೆಗಳು ಹೀಗೆ ನಾನಾವಿಧದಿಂದ ಇವುಗಳನ್ನು ಹೆಸರಿಸುತ್ತಾರೆ. ಈ ಹಸ್ತಪ್ರತಿ ರಕ್ಷಣಾ ಫಲಕಗಳು

೨೯. ಡಾ. ಎಚ್. ಎನ್. ಚಿತ್ರಗಾರ : ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ. ಪು–೯೪

ಸಾಮಾನ್ಯವಾಗಿ ಎಲ್ಲಾ ಹಸ್ತಪ್ರತಿಗಳ ಮೇಲ್ಭಾಗ ಹಾಗೂ ಕೆಳಭಾಗಗಳಲ್ಲಿ ನಾವು ಕಾಣಬಹುದಾಗಿದ್ದು, ಇವುಗಳ ಮಧ್ಯಭಾಗದಿಂದ ಅರ್ಧ ಎಡಕ್ಕೆ ಮತ್ತು ಅರ್ಧ ಬಲಕ್ಕೆ ಎರಡೂ ಕಡೆಯೂ ಚಿಕ್ಕದಾಗಿ ರಂಧ್ರವಿದ್ದು ಇದರ ಮೂಲಕ ದಾರವನ್ನು ತೂರಿಸುವ ವ್ಯವಸ್ಥೆಯನ್ನು ನಾವು ಮಾಡಬಹುದು. ಇವೆರಡರ ಮಧ್ಯಭಾಗದಲ್ಲಿ ಹಸ್ತಪ್ರತಿಗಳನ್ನಿಟ್ಟು ಕಟ್ಟಿದ್ದರೆ ಹಸ್ತಪ್ರತಿಗಳಿಗೆ ಯಾವುದೇ ಮುಖಾಗುವುದಾಗಲಿ, ಕಿಟವಾಡುವುದೇ ಆಗಲಿ ಕಿತ್ತು ಹೋಗುವುದನ್ನು ತಡೆಯಬಹುದಾಗಿದೆ. ಈ ರೀತಿಯ ಫಲಕಗಳು ಹಸ್ತಪ್ರತಿಗಳ ಕವಚದಂತೆ ಕಾರ್ಯನಿರ್ವಹಿಸುತ್ತವೆ. ಈ ಫಲಕಗಳಲ್ಲಿ ನಾನಾ ಮಾಧ್ಯಮದ ಫಲಕಗಳನ್ನು ಕಾಣಬಹುದು. ಅವುಗಳಲ್ಲಿ ಮುಖ್ಯವಾಗಿ ಮರದ ಫಲಕಗಳು, ಲೋಹದ ಫಲಕಗಳು ಹಾಗೂ ವಿಕ್ರಮಾಧ್ಯಮದ ಫಲಕಗಳೆಂದು ಮೂರು ಬಗೆಯಲ್ಲಿ ನಾವು ಕಾಣಬಹುದಾಗಿದೆ. ಆದರೆ ಸಚಿತ್ರ ಹಾಗೂ ವಿನ್ಯಾಸಗಳ ಫಲಕಗಳನ್ನು ಹೆಚ್ಚಾನು ಹೆಚ್ಚು ಮರದ ಫಲಕಗಳಲ್ಲಿಯೇ ಕಾಣಬಹುದಾಗಿದ್ದು, ಇವುಗಳಲ್ಲಿ ಹಸ್ತಪ್ರತಿಯ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಫಲಕಗಳ ಮೇಲೆ ಚಿತ್ರಗಳನ್ನು ಬಿಡಿಸಲಾಗುವುದು. ಇಲ್ಲವೆ ಸುಂದರ ವಿನ್ಯಾಸ ಅಥವಾ ಹೂಬಳ್ಳಿಯ ವಿನ್ಯಾಸಗಳನ್ನು ಹೆಚ್ಚಾನೆಚ್ಚು ಕಾಣುತ್ತೇವೆ.

ಈ ಮರದ ಫಲಕಗಳಲ್ಲಿ ಎರಡು ವಿಧಗಳಿದ್ದು ಒಂದು, ಸಾಪಾದ ಮರದ ಹಲಗೆಯ ಮೇಲೆ ವರ್ಣಗಳಿಂದ ಚಿತ್ರ ಬಿಡಿಸುವುದು. ಇನ್ನೊಂದು ಮರದ ಹಲಗೆಯನ್ನು ಸಾಪುಗೊಳಿಸಿ ಅದರ ಮೇಲೆ ವಿನ್ಯಾಸಗಳನ್ನು ಕೆತ್ತುವುದು ಹೀಗೆ ಎರಡು ಬಗೆಯಲ್ಲಿ ನಾವು ಹಸ್ತಪ್ರತಿಯ ಫಲಕಗಳ ವಿನ್ಯಾಸವನ್ನು ಕಾಣಬಹುದು. ಮೇಲೆ ತಿಳಿಸಿದಂತೆ ಹಸ್ತಪ್ರತಿಯ ವಸ್ತುವಿಷಯಾಧಾರಿತ ಚಿತ್ರಗಳನ್ನೇ ಈ ಫಲಕಗಳ ಮೇಲೂ ಕಾಣಬಹುದಾಗಿದ್ದು ಇಂದಿಗೂ ಸಹ ಈ ಪ್ರಕ್ರಿಯೇ ನಾವು ಬಳಸುವ ಕಾಗದದ ಗ್ರಂಥಗಳಲ್ಲಿಯೂ ಕಾಣಬಹುದು. ಪುಸ್ತಕದ ಒಳಗಿನ ವಸ್ತುವಿಷಯಕ್ಕೆ ಸಂಬಂಧಿಸಿದಂತೆಯೇ ಪುಸ್ತಕದ ರಕ್ಷಣಾ ಪುಟದ ಮುಖಪುಟದಲ್ಲಿ ಚಿತ್ರಗಳ ವಿನ್ಯಾಸವನ್ನು ಕಾಣಬಹುದು. ಹಿಂದೆ ಈ ಫಲಕಗಳನ್ನು ಹಸ್ತಪ್ರತಿಯ ರಕ್ಷಣೆಯ ಸಲುವಾಗಿ ಮೇಲೆ ಮತ್ತು ಕೆಳಗೆ ಎರಡೂ ಬದಿಗಳಲ್ಲಿಯೂ ಕಟ್ಟುತ್ತಿದ್ದ ಕಾರಣ ಇವುಗಳಿಗೆ ಗೆದ್ದಲು ಹಿಡಿಯದಂತಿರಲು, ತೇವಾಂಶದಿಂದ ಬೂಷ್ಟು ಬಾರದಂತಿರಲು, ಬೆಳ್ಳಿ ಮೀನುಗಳಂತಹ ಕ್ರಿಮಿ, ಕೀಟಗಳು ತಾಕದಂತಿರಲು, ಇಲಿಗಳು ಅಳಿಲುಗಳು ಇದನ್ನು ಕಚ್ಚಿ ಹಾನಿಮಾಡದಂತಿರಲೆಂದು ಮುಂಜಾಗ್ರತಾಕ್ರಮವಾಗಿ ಅಲ್ಲದೇ ಒತ್ತೊತ್ತಾಗಿರುವುದರಿಂದ ಹಸ್ತಪ್ರತಿಗಳು ಬೆಂಡಾಗಿ ಬಾಗದಂತೆ ಸದೃಢವಾಗಿರಲೆಂದು ಈ ರಕ್ಷಣಾ ಫಲಕಗಳನ್ನು ಬಳಸುತ್ತಿದ್ದರು. ಈ ಸಚಿತ್ರ ಹಸ್ತಪ್ರತಿಯ ಫಲಕಗಳನ್ನು ಮೂರು ವಿಧವಾಗಿ ಭಾಗ ಮಾಡಿಕೊಂಡು ಅಧ್ಯಯನ ನಡೆಸಲಾಗಿದ್ದು ಅವುಗಳಲ್ಲಿ ೧) ಕೆತ್ತಿದ ವಿನ್ಯಾಸದ ಹಸ್ತಪ್ರತಿ ಫಲಕಗಳು ೨) ಹೂಬಳ್ಳಿ ವಿನ್ಯಾಸದ ಹಸ್ತಪ್ರತಿ ಫಲಕಗಳು ೩) ವ್ಯಕ್ತಿ ಚಿತ್ರ ಹಸ್ತಪ್ರತಿ ಫಲಕಗಳು ಎಂದು ಮೂರು ವರ್ಗವಾಗಿ ವಿಂಗಡಿಸಿ ವಿವರಿಸಲಾಗಿದೆ.

೧. ಕೆತ್ತಿದ ವಿನ್ಯಾಸದ ಹಸ್ತಪ್ರತಿ ಫಲಕಗಳು

ಹಸ್ತಪ್ರತಿ ಫಲಕಗಳಲ್ಲಿ ಮೂರು ವಿಧವಾದ ಫಲಕಗಳಿದ್ದು ಅದರಲ್ಲಿ ಮರದ ಫಲಕಗಳಲ್ಲು ಮೂರು ವಿಧಗಳಿವೆ. ಸಾದ ಮರಫಲಕಗಳು, ಕೆತ್ತಿದ ಮರದ ಫಲಕಗಳು, ಚಿತ್ರ ವಿನ್ಯಾಸವಿರುವ ವರ್ಣ ಫಲಕಗಳೆಂದು ಇದರಲ್ಲಿ ಕೆತ್ತಿದ ಮರದ ಫಲಕಗಳ ಕುರಿತಾಗಿ ವಿವೇಚಿಸಬಹುದು. ಹಸ್ತಪ್ರತಿಯ ಅಳತೆಯನುಸಾರ ಈ ಫಲಕಗಳನ್ನು ತಯಾರಿಸಿಕೊಳ್ಳಲಾಗುವುದು. ಹೀಗೆ ತಯಾರಿಸಿಕೊಂಡ ಫಲಕಗಳು ಹುಳವಾಡದಂತೆ ಜಾಗೃತೆವಹಿಸಲಾಗುವುದು. ನಂತರ ಅವುಗಳ ಉಜ್ಜಿ ಸಿದ್ಧಪಡಿಸಿದ ಮೇಲೆ ಅವುಗಳ ಮೇಲೆ ವಿನ್ಯಾಸಗಳನ್ನು ಚಿತ್ರಿಸಿಕೊಂಡು ನಂತರ ಆ ವಿನ್ಯಾಸಕ್ಕನುಸಾರ ಉಳಿಗಳ ಸಹಾಯದಿಂದ ಸೂಕ್ಷ್ಮವಾಗಿ ಕೆತ್ತಲಾಗುವುದು. ಹೀಗೆ ಕೆತ್ತಿದ ಬಳಿಕ ಮಧ್ಯಭಾಗದಿಂದ ಎರಡೂ ಬದಿಗಳ ಮಧ್ಯಭಾಗದಲ್ಲಿ ರಂದ್ರಗಳನ್ನು ಮಾಡಲಾಗುವುದು. ಹೀಗೆ ಫಲಕದ ಎರಡು ಬದಿಗಳಲ್ಲೂ ಈ ವಿನ್ಯಾಸವನ್ನು ಕೆತ್ತಲಾಗುವುದು.

ಧರ್ಮಸ್ಥಳದ ಹಸ್ತಪ್ರತಿ ಬಂಡಾರದಲ್ಲಿ ದೊರೆತ ಒಂದು ಹಸ್ತಪ್ರತಿ ಫಲಕವಿದ್ದು ಇದರ ಮೇಲೆ ವಿನ್ಯಾಸಗಳನ್ನು ಕೆತ್ತಲಾಗಿದೆ. ಮೇಲಿನ ಫಲಕದಲ್ಲಿ ಎರಡದಿಂದ ಬಲಕ್ಕೆ ಮೊದಲಿಗೆ ಸಿಂಹದಾಕಾರದ ಪ್ರಾಣಿಯ ಚಿತ್ರವಿದ್ದು ಪಕ್ಕದಲ್ಲಿ ಹೂವುಗಳು, ತ್ರಿಶೂಲದಾಕೃತಿ, ರಂಧ್ರ, ಅದರ ಪಕ್ಕದಲ್ಲಿ ಎಂಟು ವೃತ್ತಗಳುಳ್ಳ ಹೂಬಳ್ಳಿಗಳು ಅದಾದ ಮೇಲೆ ನಾಲ್ಕು ಗೆರೆಗಳು ಚೌಕಾರಗಳು, ಹದಿನಾರು, ಮತ್ತೆ ಹೂವುಗಳು ಹಾಗೂ ಎರಡು ಅರ್ಧ ಚಕ್ರದ ವಿನ್ಯಾಸ ಹೀಗೆ ವಿನ್ಯಾಸವಿದು ಸುತ್ತಲೂ ಬದಿಯಲ್ಲಿ ಸ್ವಲ್ಪ ಜಾಗವನ್ನು ಬಿಡಲಾಗಿರುತ್ತದೆ. ಕೆಳಭಾಗದ ಫಲಕದಲ್ಲಿಯೂ ಇದೇ ರೀತಿಯ ವಿನ್ಯಾಸಗಳಿದ್ದು ಸ್ವರೂಪವು ವಿಭಿನ್ನವಾಗಿದೆ.

ಮೂಡಬಿದರೆಯಲ್ಲಿಯೂ ಸಹ ಇದೇ ರೀತಿಯ ಫಲಕವು ದೊರೆತಿದ್ದು, ಈ ಕಪ್ಪು ವರ್ಣದಲ್ಲಿದೆ. ಈ ಫಲಕವು ಸಹ ಮರದ ಫಲಕವಾಗಿದ್ದು ಇದರ ಮೇಲೆ ವಿನ್ಯಾಸಗಳನ್ನು ಕೆತ್ತಲಾಗಿದೆ. ಫಲಕದ ಮೇಲೆ ಮೂರು ವೃತ್ತಾಕಾರದ ವಿನ್ಯಾಸಗಳಿದ್ದು ಸೇವಂತಿ ಹೂ ವಿನ್ಯಾಸವನ್ನು ನೆನಪಿಸುತ್ತವೆ. ಇವು ಸರಿಯಾಗಿ ಎಡದಿಂದ ಪ್ರಾರಂಭದಲ್ಲಿ ಒಂದು, ಮಧ್ಯದಲ್ಲಿ ಹಾಗೂ ಕೊನೆಯಲ್ಲಿ ಹೀಗೆ ಮೂರು ವೃತ್ತಾಕಾರದ ಹೂ ವಿನ್ಯಾಸಗಳಿದ್ದು ಇವುಗಳ ಮಧ್ಯದಲ್ಲಿ ನಾಲ್ಕು ದಳದ ಹೂವಿನ ವಿನ್ಯಾಸಗಳನ್ನು ಕಾಣಬಹುದು. ಅಲ್ಲದೇ ಇವುಗಳ ಸುತ್ತ ವಿನ್ಯಾಸದ ಕೆತ್ತನೆಯನ್ನು ಕಾಣಬಹುದು.

೨. ಹೂ ಬಳ್ಳಿ ವಿನ್ಯಾಸದ ಹಸ್ತಪ್ರತಿ ಫಲಕಗಳು

ಧರ್ಮಸ್ಥಳದ ಹಸ್ತಪ್ರತಿ ಸಂಗ್ರಹಾಲಯದಲ್ಲಿ ದೊರೆತ ಹೂಬಳ್ಳಿ ವಿನ್ಯಾಸದ ಎರಡೂ ಫಲಕಗಳ ಮೇಲೆ ಚಿತ್ರಗಳಿದ್ದು ತೈಲವರ್ಣದ ಚಿತ್ರಗಳಾಗಿವೆ. ಮೇಲಿನ ಹಾಗೂ ಕೆಳಗಿನ ಎರಡೂ

ಫಲಕಗಳಲ್ಲಿಯ ಚಿತ್ರಗಳು ಒಂದೇ ತರವಾಗಿದ್ದು ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿ ಮೇಲ್ಬದಿ ಹಾಗೂ ಕೆಳಬದಿಯಲ್ಲಿ ಕಪ್ಪು, ಹಳದಿ ಪಟ್ಟಗಳ ಮಾದರಿಯಲ್ಲಿ ವರ್ಣಲೇಪಿಸಿ ಅದರ ಮೇಲೆ ಹಳದಿ, ಕಪ್ಪು ರೇಖೆಗಳನ್ನು ಹಾಕಲಾಗಿದೆ. ಮಧ್ಯದ ಹಗಲವಾದ ಜಾಗದಲ್ಲಿ ಕೆಂಪು ಹಿನ್ನೆ ಇದ್ದು ಹಳದಿ ವರ್ಣದ ಬಳ್ಳಿಯನ್ನು ರಚಿಸಲಾಗಿದೆ. ಅದರಿಂದ ಕಡು ನೀಲಿ ವರ್ಣದ ಎಲೆಗಳು ಮತ್ತು ಹೂಗಳ ಚಿತ್ರವನ್ನು ರಚಿಸಲಾಗಿದ್ದು ಹೂಗಳ ಮಧ್ಯಭಾಗದಲ್ಲಿ ಕೆಂಪು ವರ್ಣವನ್ನು ಸೇರಿಸಲಾಗಿದೆ. ಇವುಗಳ ಬಾಹ್ಯಾರೇಖೆಯನ್ನು ಹಳದೀ ವರ್ಣದಿಂದ ರಚಿಸಲಾಗಿದೆ. ಇವುಗಳ ಮಧ್ಯಭಾಗದಲ್ಲಿ ಎರಡೂ ಕಡೆ ರಂಧ್ರವಿದ್ದು ದಾರ ತೂರಿಸಿ ಹಸ್ತಪ್ರತಿಗಳನ್ನು ಬಿಗಿಯಲು ಸಹಾಯವಾಗುವಂತೆ ನಿರ್ಮಿಸಲಾಗಿದೆ.

ಶ್ರವಣಬೆಳಗೊಳದ ಹಸ್ತಪ್ರತಿ ವಿಭಾಗದಲ್ಲೂ ಸಹ ಹೂ ಬಳ್ಳಿಯ ವಿನ್ಯಾಸದ ಮೂರು ಫಲಕಗಳು ಸಿಕ್ಕಿದ್ದು ಅದರಲ್ಲಿ ಮೊದಲನೆಯ ಫಲಕವು ತೈಲವರ್ಣದಲ್ಲಿ ಆಗಿದ್ದು ಹಳದೀವರ್ಣದ ಹಿನ್ನೆಲೆಯನ್ನು ಹೊಂದಿದೆ. ಬದಿಯ ವಿನ್ಯಾಸದಲ್ಲಿ ಕೆಂಪು ವರ್ಣವನ್ನು ಲೇಪಿಸಿದ್ದು ಗಾಡ ಹಸಿರು ವರ್ಣದ ರೇಖೆಗಳಿವೆ. ಹಳದಿ ಹಿನ್ನೆಲೆಯ ಮೇಲೆ ಪಟ್ಟಿಗಳಿದ್ದು ಮೇಲೆ; ಕೆಳಗೆ ಇರುವ ಪಟ್ಟದಲ್ಲಿ ಗಾಡ ಹಸಿರು ಎಲೆಗಳ ವಿನ್ಯಾಸ ಹಾಗೂ ಕೆಂಪು ವರ್ಣದ ನಾಲ್ಕು ಚುಕ್ಕಿಗಳು ಇವೆ. ಮಧ್ಯಭಾಗದಲ್ಲಿ ದೊಡ್ಡದಾದ ಗಾಡ ಹಸಿರು ವರ್ಣದ ಎಲೆಯ ವಿನ್ಯಾಸಗಳಿದ್ದು ಮಧ್ಯಭಾಗದಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದೆ. ಇದರ ಪಕ್ಕಪಕ್ಕದಲ್ಲಿ ವೃತ್ತಾಕಾರದ ಏಳು ಚುಕ್ಕಿಗಳ ಹೂವಿನ ವಿನ್ಯಾಸವಿದ್ದು ನೋಡಲು ಗಾಡವಾಗಿ ಸುಂದರವಾಗಿ ಕಾಣಿಸುತ್ತವೆ.

ಎರಡನೇ ಫಲಕವು ಹಸ್ತಪ್ರತಿಯ ಮುಖಪುಟದಂತೆ ಕಾಣಿಸುತ್ತದೆ. ಇದರಲ್ಲಿ ಹಿನ್ನೆಲೆಯನ್ನು ಕೆಂಪು ವರ್ಣದಿಂದ ಲೇಪಿಸಿದ್ದು ಮಧ್ಯಭಾಗದಲ್ಲಿ ಆಯತಾಕಾರದ ಹಳದಿ ವರ್ಣದ ಜಾಗವಿದೆ. ಬಾಹುಶಃ ಇದರ ಮೇಲೆ ಹಸ್ತಪ್ರತಿ ಕೃತಿಯ ಹೆಸರನ್ನೋ ಅಥವಾ ಅದಕ್ಕೆ ಸಂಬಂಧಿಸಿದ ಚಿತ್ರವನ್ನೋ ರಚಿಸಲು ಸಿದ್ಧಗೊಳಿಸಲಾಗಿದೆ. ಇದರ ಸುತ್ತ ನಾಲ್ಕು ಭಾಗದಲ್ಲಿಯೂ ಹಸಿರು ವರ್ಣದ ವಿನ್ಯಾಸವಿದ್ದು ಹಳದಿ ವರ್ಣದಿಂದ ಬಾಹ್ಯರೇಖೆಯನ್ನು ಚಿತ್ರಿಸಲಾಗಿದೆ. ಇದರ ಜೊತೆಗೆ ಮತ್ತೊಂದು ವಿಭಿನ್ನವಾದ ಫಲಕವಿದ್ದು ಇದನ್ನು ಮರದ ರೊಟ್ಟಿನ ಸಹಾಯದಿಂದ ಮಾಡಲಾಗಿದೆ. ಇದೊಂದು ಲೆಕ್ಕದ ಕಡತಗಳನ್ನು ಸಂಗ್ರಹಿಸುವ ಹಸ್ತಪ್ರತಿಗಳ ಫಲಕವಾಗಿದ್ದು. ಇದರ ಮೇಲೆ ಜಾಮೀತಿಕ ರೇಖಾ ವಿನ್ಯಾಸವನ್ನು ಮಾಡಲಾಗಿದೆ. ಹಿನ್ನೆಲೆಯಲ್ಲಿ ಗಾಡ ನೀಲಿ ವರ್ಣವನ್ನು ತೋರಿಸಲಾಗಿದ್ದು, ಮಧ್ಯದಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಇದರ ಮೇಲೆ ಹಳದಿ ವರ್ಣದ ಹೊರೆ ರೇಖೆಗಳನ್ನು ಎರಡೂ ಬದಿಯಿಂದ ಎಳೆದಿದ್ದು ವಜ್ರ ಚೌಕಾಕಾರದ ವಿನ್ಯಾಸಗಳು ಮೂಡಿ ಬಂದಿವೆ.

೩. ವ್ಯಕ್ತಿ ಚಿತ್ರಗಳಿರುವ ಹಸ್ತಪ್ರತಿ ಫಲಕಗಳು

ಧರ್ಮಸ್ಥಳದ ಹಸ್ತಪ್ರತಿ ಕೇಂದ್ರದಲ್ಲಿ ದೊರೆತಿರುವ ಒಂದು ಸಚಿತ್ರ ಹಸ್ತಪ್ರತಿ ಫಲಕವಿದ್ದು ಇದರ ಮೇಲೆ ಚಿತ್ರಗಳನ್ನು ಕಾಣಬಹುದಾಗಿದೆ. ಈ ಫಲಕದ ಮೇಲೆ ದೇವತೆಗಳು ನಿಂತಿರುವ ರೀತಿಯಲ್ಲಿ ಹಳದಿ, ಹಸಿರು, ನೀಲಿ ವರ್ಣದಿಂದ ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ಕೇಂಪು ವರ್ಣವನ್ನು ತೋರಿಸಲಾಗಿದೆ. ಇಲ್ಲಿ ಸಾಲಾಗಿ ಒಬ್ಬರ ಹಿಂದೆ ಒಬ್ಬರಂತೆ ಸಾಕಷ್ಟು ದೇವತೆಗಳು ನಿಂತಿದ್ದು ಕಿರುರೂಪ ಚಿತ್ರಮಾದರಿಯಲ್ಲಿ ತೋರಿಸಲಾಗಿದೆ. ಈ ಚಿತ್ರಗಳು ನೋಡಲು ಅಸ್ಪಷ್ಟವಾಗಿದ್ದು, ಸೂಕ್ಷ್ಮವಾಗಿ ಗಮನಿಸದಿಲ್ಲಿ ಮಾತ್ರ ಚಿತ್ರಗಳು ಶೇಕಡಾ ಎಂಬತ್ತು ಭಾಗ ಕಪ್ಪಾಗಿ ಚಿತ್ರಗಳು ಮಸುಕು ಮಸುಕಾಗಿ ಗೋಚರಿಸುತ್ತಾ ಈ ಫಲಕದಲ್ಲಿ ಎರಡೂ ಬದಿಯಲ್ಲು ರಂಧ್ರಗಳಿದ್ದು ದಾರ ತೂರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರವಣಬೆಳಗೊಳದ ಹಸ್ತಪ್ರತಿ ಬಂಡಾರದಲ್ಲಿ ದೊರೆತ ಚಿತ್ರವೊಂದಿದ್ದು ಇದು ಜೈನ ರಾಮಾಯಣಕ್ಕೆ ಸಂಬಂಧಿಸಿದ ಚಿತ್ರವಾಗಿದೆ. ಇಲ್ಲಿ ಹನುಮಂತನು ಮಂಗಗಳನ್ನು ಹಾಗೂ ರಾಕ್ಷಸರನ್ನು ತನ್ನ ಬಾಲದಿಂದ ಹಿಡಿದು ಕಾಲಿನಲ್ಲಿ ಮಂಗಗಳನ್ನು ತುಳಿಯುವಂತೆ ತೋರಿಸಲಾಗಿದೆ. ಈ ಫಲಕವು ಕೇಸರಿ ವರ್ಣದ ಹಿನ್ನೆಲೆಯನ್ನು ಹೊಂದಿದ್ದು ಸುತ್ತಲೂ ಹಳದಿ ವರ್ಣದ ಪಟ್ಟಿಯನ್ನು ರಚಿಸಿ ಅದರ ಮೇಲೆ ಹೂಬಳ್ಳಿಯ ವಿನ್ಯಾಸವನ್ನು ಚಿತ್ರಿಸಲಾಗಿದೆ. ಅಶೋಕ ವನದಲ್ಲಿ ಹನುಮಂತನು ಮನಸ್ಸಿಗೆ ಬಂದಂತೆ ವರ್ತಿಸಿ ವನದಲ್ಲಿಯ ಗಿಡಮರಗಳನ್ನು ನಾಶಮಾಡಿ ಅಲ್ಲಿದ್ದ ಲಂಕೆಯ ವಾನರರನ್ನು, ರಾಕ್ಷಸರನ್ನು ಬಾಲದಿಂದ ಸುತ್ತಿಕೊಂಡು ನಾಶಮಾಡುತ್ತಿರುವುದು ಕೆಳಭಾಗದಲ್ಲಿ ನಾಲ್ಕಾರು ಜನಬಿದ್ದಿದ್ದು ಹಿಂಬದಿಯಲ್ಲಿ ಇಂದ್ರಜಿತು ಹಾಗೂ ಮತ್ತೊಬ್ಬ ವ್ಯಕ್ತಿಯ ಗದೆಯನ್ನು ಹಿಡಿದು ನಿಂತಿರುವಂತೆ ತೋರಿಸಲಾಗಿದೆ. ಇಲ್ಲಿ ಹನುಮಂತನನ್ನು ಕೇಸರಿ ವರ್ಣದಲ್ಲಿ ಅಲಂಕಾರ ಭೂಶಿತನಾಗಿ ಚಿತ್ರಿಸಿದ್ದು ಎರಡು ಹಸಿರು ವರ್ಣದ ಮರಗಳು ಬಾಗಿರುವಂತೆ ತೋರಿಸಲಾಗಿದೆ. ಹಿನ್ನೆಲೆಯಲ್ಲಿ ಕಿರೀಟದಾರಿಗಳಾದ ಗದೆಗಳನ್ನು ಹಿಡಿದು ನಿಂತಿರುವ ಇಬ್ಬರು ವ್ಯಕ್ತಿಗಳಿದ್ದು ಮುಂದಿನ ವ್ಯಕ್ತಿಯು ಕೈಮಾಡಿ ಕರೆಯುವಂತೆ ತೋರಿಸಲಾಗಿದೆ.

೨. ಹಸ್ತಪ್ರತಿಯ ಮೇಲೆ ಕಂಟದಿಂದ ಕೊರೆದ ರೇಖಾಚಿತ್ರಗಳು

ಕರ್ನಾಟಕ ಜೈನ ಪರಂಪರೆಯು ಸಾಹಿತ್ಯ ಲೋಕದಲ್ಲಿ ತನ್ನ ಪ್ರತಿಷ್ಠೆಯನ್ನು ಮೆರೆಯುವಂತೆ ಚಿತ್ರಕಲೆಯಲ್ಲಿಯೂ ಸಹ ತನ್ನದೇಯಾದ ಮೈಲುಗಲ್ಲುಗಳನ್ನು ದಾಟಿನಿಂತಿದೆ. ಸಚಿತ್ರ ಹಸ್ತಪ್ರತಿಗಳಲ್ಲಿಯ ಚಿತ್ರಗಳು ಇದಕ್ಕೆ ಸಾಕ್ಷಿಭೂತವೆನಿಸುತ್ತದೆ. ಹಸ್ತಪ್ರತಿ ಚಿತ್ರಕಲೆಯಲ್ಲಿ ರೇಝಾ ಚಿತ್ರಗಳು ಹಾಗೂ ವರ್ಣಚಿತ್ರಗಳು ಎಂದು ಎರಡು ಭಾಗ ಮಾಡಬಹುದಾಗಿದೆ. ರೇಖಾಚಿತ್ರಗಳನ್ನು ತಾಳೆಗರಿಗಳ

ಮೇಲೆ ಕಂಟದಿಂದ ಅಕ್ಷರಗಳನ್ನು ರಚಿಸುವಂತೆ ಚಿತ್ರಿಸಲಾಗುವುದು. ಸಾಮಾನ್ಯವಾಗಿ ಈ ತಾಳೆಗರಿಯ ಕಂಟದಿಂದ ಕೊರೆದ ಚಿತ್ರಗಳಲ್ಲಿ ವಿನ್ಯಾಸಗಳು ಹೂಬಳ್ಳಿ, ಹೂವಿನ ಜಾಮೀತಿಕ ವಿನ್ಯಾಸ, ಮಾನಸ್ತಂಭಗಳು, ಧ್ವಜಗಳು, ಚಕ್ರಗಳು, ಚೌಕಾಕಾರ, ಆಯತಾಕಾರ, ತ್ರಿಭುಜ ಹೀಗೆ ಜಾಮೀತಿಕ ವಿನ್ಯಾಸಗಳನ್ನು ಈ ಕಂಟದಿಂದ ಕೊರೆದ ಚಿತ್ರಗಳಲ್ಲಿ ಕಾಣಬಹುದು. ಬಹುಮುಖ್ಯವಾಗಿ ಸಮವಸರಣ, ಲೋಕದರಚನೆ, ಮಾನಸ್ತಂಭಗಳು, ಪೀಠಗಳು, ಧ್ವಜಸ್ತಂಭ, ಕಲ್ಪಗಳು, ಮಂಟಪರಚನೆ ಹೀಗೆ ವಿವಿಧ ಬಗೆಯ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇವುಗಳಿರುವ ಮುಖ್ಯ ಗ್ರಂಥಗಳೆಂದರೆ, ಆದಿಪುರಾಣ, ತ್ರಿಲೋಕಸಾರ, ಹರಿವಂಶ ಚರಿತ, ರಾಮಚಂದ್ರ ಚರಿತ ಪುರಾಣ, ಅಂಜನ ಪವನಂಜನ ಹೀಗೆ ಹಲವಾರು ಮುಖ್ಯ ಗ್ರಂಥಗಳಲ್ಲಿ ರೇಖಾಚಿತ್ರ ರಚನೆಯನ್ನು ಕಾಣಬಹುದು.

ಚಿತ್ರ-೧. ಹೂವಿನ ವೃತ್ತಾಕಾರದ ವಿನ್ಯಾಸ

೧೦೫೮ರಲ್ಲಿ ಏಕ ಸಂಧ್ಯ ವಿರಚಿಸಿದಂತಹ ಜಿನ ಸಂಹಿತಾ ಪರೋದ್ಧಾರ ಎಂಬ ಕೃತಿಯಲ್ಲಿ ಪ್ರಾರಂಭದ ಎಡಬದಿಯಲ್ಲಿ ವೃತ್ತಾಕಾರದ ಹೂವಿನ ರೇಖಾ ಚಿತ್ರವಿದೆ. ಇದರ ಬದಿಯಲ್ಲಿ ಹಳೆಗನ್ನಡದ ವ್ಯಾಖ್ಯಾಯನಗಳಿದ್ದು ಈ ಚಿತ್ರವನ್ನು ಅಲಂಕಾರಿಕವಾಗಿ ಈ ಜಾಮೀತಿ ವಿನ್ಯಾಸವನ್ನು ಬಳಸಿಕೊಳ್ಳಲಾಗಿದೆ. ಈ ಚಿತ್ರದ ಮಧ್ಯ ಭಾಗದಲ್ಲಿ ಕಮಲದಾಕಾರದ ಜಾಮೀತಿಕ ವಿನ್ಯಾಸವಿದ್ದು ಇದರ ಸುತ್ತ ಮೂರು ವೃತ್ತಗಳನ್ನು ಒಳಗೊಂಡಿದೆ. ಅದರಲ್ಲಿಯೂ ಹಲವು ವಿನ್ಯಾಸಗಳಿದ್ದು ನೋಡಲು ಅತಿಸುಂದರವೆನಿಸುತ್ತದೆ. ಈ ಕ್ರಿಯೆಯನ್ನು ತಾಳೆಗರಿಯ ಮೇಲೆ ಕಂಟವನ್ನು ಹಿಡಿದು ರಚಿಸಲಾಗಿದ್ದು ಅದು ನಮಗೆ ಕಪ್ಪಾಗಿ ಕಾಣಸಿಗುತ್ತದೆ.

ಚಿತ್ರ-೨. ರಾಮಚಂದ್ರ ಚರಿತ ಪುರಾಣದ ರೇಖಾ ವಿನ್ಯಾಸಗಳು

ರಾಮಚಂದ್ರ ಚರಿತ ಪುರಾಣ, ಚಂದ್ರಶೇಖರ ಮತ್ತು ಪದ್ಮನಾಭ ಕವಿಯ ವಿರಚಿಸಿದ ಈ ಮಹಾಗ್ರಂಥದಲ್ಲಿ ಎರಡು ರೇಖಾ ವಿನ್ಯಾಸದ ಹಸ್ತಪ್ರತಿಗಳಿದ್ದು ಇವುಗಳ ಎರಡೂ ಕಡೆಯಲ್ಲಿಯೂ ಚಿತ್ರಗಳನ್ನು ನಾವು ಕಾಣಬಹುದಾಗಿದೆ. ಇದರಲ್ಲಿ ಮೊದಲಿಗೆ ಮುಂದಿನ ಚಿತ್ರಗಳನ್ನು ವಿವರಿಸುತ್ತಾ ನಂತರ ಹಿಂದಿನ ಚಿತ್ರಗಳ ಬಗ್ಗೆ ಗಮನ ಹರಿಸೋಣ. ಮೊದಲ ತಾಳೆಗರಿಯಲ್ಲಿ ಕಂಟದಿಂದ ಕೊರೆದ ರೇಖಾಚಿತ್ರಗಳಿದ್ದು ಇಲ್ಲಿ ದೊಡ್ಡದಾದ ನಾಲ್ಕು ಆಯತಾಕಾರದ ವಿನ್ಯಾಸವಿದ್ದು ಇದರಲ್ಲಿ ಅಡ್ಡ ಮತ್ತು ಉದ್ದನೆಯ ರೇಖೆಗಳನ್ನು ಎಳೆದಿರುವುದರಿಮದ ಸಾಕಷ್ಟು ಚೌಕಾರಗಳು ಮೂಡಿದ್ದು, ಇದರಲ್ಲಿ ಅಂಕಿಗಳನ್ನು ಕೊರೆಯಲಾಗಿದೆ. ಎರಡನೆಯ ಹಸ್ತಪ್ರತಿಯು ತುಂಬಾ ವಿಶೇಷವಾಗಿದ್ದು, ಇಲ್ಲಿ ಜೈನ ಧರ್ಮಕ್ಕೆ ಸೇರಿದ ಲಾಂಚನ ಮಾನಸ್ತಂಭಗಳು ಇತ್ಯಾದಿಯನ್ನು ಕಾಣಬಹುದು. ಮೊದಲಿಗೆ ಪೀಠದಾಕಾರವಿದ್ದು ಅದರ ಮೇಲೆ ಚಕ್ರವನ್ನು ಕಾಣಬಹುದು. ಇದರ ಬಲಬದಿಯಲ್ಲಿ

ಮಾನಸ್ತಂಭದ ವಿನ್ಯಾಸ ಹಾಗೂ ಅದರ ಪಕ್ಕದಲ್ಲಿ ವೃತ್ತಾಕಾರದ ವಿನ್ಯಾಸವನ್ನು ಕಾಣಬಹುದಾಗಿದೆ. ಇದರ ಬಲಬದಿಗೆ ತಿಮ್ಮಪ್ಪನ ಚಕ್ರಮಾದರಿಯಲ್ಲಿರುವ ಆಕಾರವನ್ನು ಕಾಣಬಹುದಾಗಿದ್ದು, ಇದೊಂದು ಜೈನ ಧರ್ಮೀಯರ ಶುಭ ಸಂಕೇತವಾಗಿದೆ. ಈ ಚಕ್ರವನ್ನು ನಾವು ಶ್ರವಣಬೆಳಗೊಳದ ಭಿತ್ತಿಚಿತ್ರಗಳಲ್ಲಿಯೂ ಕಾಣಬಹುದಾಗಿದೆ. ಇದರ ಬಲಬದಿಗೆ ಧ್ವಜಸ್ತಂಭವನ್ನು ಕಾಣಬಹುದು.

ಇದರ ಕೆಳಭಾಗದಲ್ಲಿ ಪೀಠವನ್ನು ಹೊಂದಿದ್ದರು ನೀಳವಾದ ಕಂಬದ ಮೇಲ್ಭಾಗದಲ್ಲಿ ನಾಲ್ಕು ಅಡ್ಡ ಕಂಬಗಳಿದ್ದು ಅದರ ಮೇಲಿನ ತುದಿಯಲ್ಲಿ ಕಳಸವನ್ನು ಕಾಣಬಹುದು. ಇದರ ಬಲಬದಿಗೆ ಎರಡುಬಗೆಯ ತೀರ್ಥಂಕರರ ಪೀಠಗಳನ್ನು ಕಾಣಬಹುದಾಗಿದೆ. ಮೊದಲನೆಯದು ಸಾಮಾನ್ಯ ಪೀಠದಂತಿದ್ದು ಮತ್ತೊಂದು ಪೀಠದ ಮೇಲೆ ಎರಡು ಹಂತದ ವೃಕ್ಷಾಕಾರವನ್ನು ಕಾಣಬಹುದಾಗಿದೆ. ಇದರ ಪಕ್ಕದಲ್ಲಿ ಸ್ವಸ್ತಿಕ್ ಆಕಾರವಿದ್ದು ಮೊದಲಿನ ಚಿತ್ರದಂತೆ ಪೀಠದ ಮೇಲೆ ವೃತ್ತಾಕಾರವನ್ನು ಕಾಣಬಹುದು. ಇದರ ಬಲಬದಿಗೆ ಚಾಮರ ಹಾಗೂ ಧಿಡಾಕೃತಿಯನ್ನು ಕಾಣಬಹುದು. ಮೂರನೇ ತಾಳೆಗರಿಯಲ್ಲಿ ಮೊದಲಿಗೆ ಮೂರು ಚೌಕಾಕಾರವನ್ನು ಒಳಗೊಂಡ ಚೌಕವಿದ್ದು, ಇದರ ಒಳಭಾಗದಲ್ಲಿ ತ್ರಿಭುಜಾಕಾರವಿದೆ. ಚೌಕದ ಹೊರಭಾಗದಲ್ಲಿ ನಾಲ್ಕು ದ್ವಾರಗಳ ಮಾದರಿಯನ್ನು ತೋರಿಸಲಾಗಿದೆ. ಇದರ ಬಲಬದಿಯ ಮಧ್ಯದಲ್ಲಿ ಎರಡು ಸ್ತಂಭಗಳು ಹಾಗೂ ಇದರ ಬಲಬದಿಗೆ ಒಂದು ಚೌಕಾಕಾರವಿದ್ದು ಅದರಲ್ಲಿ ಒಂಬತ್ತು ವೃತ್ತಗಳನ್ನು ತೋರಿಸಲಾಗಿದೆ. ಇದರ ಪಕ್ಕಕ್ಕೆ ಕುಂಬಾಕಾರ ಹಾಗೂ ವೃತ್ತಾಕಾರವನ್ನು ತೋರಿಸಲಾಗಿದೆ. ನಾಲ್ಕನೇ ಗರಿಯಲ್ಲಿ ಎರಡನೇ ಗರಿಯಲ್ಲಿ ತೋರಿಸಿದಂತೆ ಎರಡು ಕುಂಬಾಕಾರದ ಚಿನ್ನೆಗಳಿದ್ದು ಕೆಳಭಾಗದಲ್ಲಿ ಪೀಠಗಳನ್ನು ಕಾಣಬಹುದಾಗಿದೆ. ಇದರ ಪಕ್ಕದಲ್ಲಿ ಬಲಭಾಗದಲ್ಲಿ ಪೀಠಗಳನ್ನು ಕಾಣಬಹುದಾಗಿದೆ. ಇದರ ಪಕ್ಕದಲ್ಲಿ ಬಲಭಾಗಕ್ಕೆ ಅಡ್ಡಲಾಗಿ ರಚಿಸಿರುವ ಧ್ವಜಸ್ತಂಭವಿದ್ದು ಇದರ ಮೇಲೆ ಅಗ್ಗವನ್ನು ಸುತ್ತಿದಂತೆ ತೋರಿಸಲಾಗಿದೆ. ಐದನೇ ಗರಿಯಲ್ಲಿ ಎರಡು ವೃತ್ತಾಕಾರದ ಮಂಡಲಗಳಿದ್ದು ಇದರ ಬದಿಯಲ್ಲಿ ಇನ್ನೆರಡು ಚೌಕಾಕಾರದ ಮಂಡಲಗಳಿದ್ದು ಒಳಭಾಗದಲ್ಲಿ ವೃತ್ತಗಳನ್ನು ತೋರಿಸಲಾಗಿದೆ.

ಆರನೇ ತಾಳೆಗರಿಯಲ್ಲಿ ಲೋಕ ವರ್ಣನೆಯ ಆಕಾರವನ್ನೆ ಹೋಲುವ ರೇಖಾ ವಿನ್ಯಾಸವಿದ್ದು ಜೊತೆಯಲ್ಲಿ ಇನ್ನೊಂದು ಚೌಕಾಕಾರದ ಮಂಡಲಗಳಿವೆ. ನಾಲ್ಕು ಮಂಡಲದ ಮಧ್ಯದಲ್ಲಿ ವೃತ್ತಾಕಾರವಿದ್ದು ಕೊನೆಯಿಂದ ಎರಡನೇ ಮಂಡಲದಲ್ಲಿ ನಕ್ಷತ್ರಾಕಾರದ ಷಡ್ಭುಜಾಕಾರವನ್ನು ಕಾಣಬಹುದಾಗಿದೆ. ಏಳನೇ ತಾಳೆಗರಿಯಲ್ಲಿ ಚಕ್ರ ಪೀಠ, ಛತ್ರಿ–ಚಾಮರದಾರಗಳಿವೆ. ವೃತ್ತಾಕಾರದಲ್ಲಿ ಪದ್ಮಧಳಗಳನ್ನು ಕಾಣಬಹುದಾಗಿದೆ. ಎಂಟನೇ ಗರಿಯಲ್ಲಿ ಚೌಕಾರವಿದ್ದು, ಆ ಚೌಕದಲ್ಲಿ ನೂರಾರು ಚಿಕ್ಕ ಚಿಕ್ಕ ಚೌಕದ ಮನೆಗಳನ್ನು ಕಾಣಬಹುದಾಗಿದೆ. ಹಿಂಬದಿಯಲ್ಲಿರುವ ಎಂಟು ತಾಳೆಗರಿಗಳು ಸಹ ಕಂಟದಿಂದ ಕೊರೆದ ಹಲವು ತಾಳೆಗರಿಗಳನ್ನು ಕಾಣಬಹುದು.

ಮೊದಲನೆಯ ತಾಳೆಗರಿಯಲ್ಲಿ ಚಕ್ರದ ಪೀಠಗಳು ವೃತ್ತಾಕಾರ ತ್ರಿಭುಜದ ಚೌಕಾಕಾರಗಳನ್ನು ಕಾಣಬಹುದು. ಎರಡನೆಯ ಗರಿಯಲ್ಲಿ ತೀರ್ಥಂಕರರ ಪೀಠ ಮೂರು ಲೋಕಗಳು ಚೌಕದ ಮನೆಗಳನ್ನು ಕಾಣಬಹುದು. ಮೂರನೆಯ ಗರಿಯಲ್ಲಿ ಲೋಕವರ್ಣನೆಯ ಚಿತ್ರ ಕುಂಭ, ಎರಡು ತ್ರಿಭುಜಗಳ ವಿರುದ್ಧ ಸಂಯೋಜನೆ ವೃತ್ತಾಕಾರ, ಧ್ವಜ ಚಕ್ರ ಸ್ಥಂಭ ದೀಪಸ್ತಂಭಗಳು ಕೊನೆಯಲ್ಲಿ ವೃತ್ತಾಕಾರದ ವಜ್ರಾಕಾರದ ಮಂಡಲಗಳು, ನಾಲ್ಕನೇ ಗರಿಯಲ್ಲಿ ತೀರ್ಥಂಕರರ ಪೀಠ ಕುಂಬಾಕೃತಿ ಚೌಕಾಕಾರದ ಮಂಡಲ ಅದರಲ್ಲಿ ವೃತ್ತಾಕಾರಗಳನ್ನು ಕಾಣಬಹುದು. ಐದನೇ ತಾಳೆಗರಿಯಲ್ಲಿ ವಿಶೇಷವಾದ ಚಿತ್ರಗಳಿದ್ದು ಮೊದಲಿಗೆ ಪದ್ಮ ಚಕ್ರವಿದ್ದು, ತ್ರಿಭುಜಾಕಾರದ ಮಂಟಪ ಅದರ ಪಕ್ಕದಲ್ಲಿ ಬಲಮುಖವಾಗಿ ಛತ್ರಿಚಾಮರ ಸಮವಸರಣ ಮಾನಸ್ಥಂಭ ಕ್ಷೀರಸಾಗರ ಕೆಳಭಾಗದಲ್ಲಿ ಸ್ವಸ್ತಿಕ್ ವಿನ್ಯಾಸವನ್ನು ಕಾಣಬಹುದು. ಕೊನೆಗೆ ಅರ್ಧ ತ್ರಿಭುಜಾಕಾರವಿದ್ದು ಕೊನೆಯಲ್ಲಿ ಸರೋವರ ಹಾಗೂ ವೃಕ್ಷಮಾದರಿಯನ್ನು ನಾವಿಲ್ಲಿ ಕಾಣಬಹುದು.

ಆರನೇ ತಾಳೇಗರಿಯಲ್ಲಿ ಚಕ್ರಗಳು ಪದ್ಮಾಕಾರಗಳು, ಮೆಟ್ಟಿಲುಗಳು ಹಾಗೂ ಮಂಟಪಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಏಳನೇ ಗರಿಯಲ್ಲಿ ಚೌಕಾಕಾರದ ಯಂತ್ರರೀತಿಯ ವಿನ್ಯಾಸ ವಿದ್ದು, ಎಂಟನೇ ಗರಿಯಲ್ಲಿ ವೃತ್ತಗಳು ಪದ್ಮಾಕಾರ ಸ್ತಂಭಗಳ ರೇಖಾವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಹೀಗೆ ಈ ತಾಳೇಗರಿ ತುಂಬೆಲ್ಲ ಕಂಟದಿಂದ ಕೊರೆದ ತಾಳೇಗರಿಯ ಚಿತ್ರಗಳಿದ್ದು ಇವುಗಳ ವಿನ್ಯಾಸಗಳು ಜೈನ ಧಾರ್ಮಿಕ ಕ್ರಿಯಾಕರ್ಮಗಳಿಗೆ ಸಂಬಂಧಿಸಿದ ವಿಧಿವಿಧಾನಗಳಿಗೆ ಸಂಬಂಧಿಸಿದ ಕಂಟದಿಂದ ಕೊರೆದ ರೇಖಾವಿನ್ಯಾಸಗಳಾಗಿದ್ದು, ಈ ಗ್ರಂಥದಲ್ಲಿ ಬಹುಪಾಲು ಚಿತ್ರಗಳನ್ನು ಕಾಣಬಹುದಾಗಿದೆ.

ಚಿತ್ರ-೩. ಸಮವಸರ ಮತ್ತು ಲೋಕಸ್ವರೂಪದ ಚಿತ್ರ

ಮೂಡುಬಿದರೆಯಲ್ಲಿಯ ಜೈನ ಮಠದ ಗರ್ಭಗುಡಿಯ ಬಲಬದಿಯ ಭಿತ್ತಿಯ ಮೇಲೆ ಕಾಣಸಿಗುವ ಸಮವಸರಣ ಹಾಗೂ ಲೋಕಸ್ವರೂಪದ ಭಿತ್ತಿ ಚಿತ್ರಗಳನ್ನೇ ಬಹುಪಾಲು ಹೋಲುವ ತಾಡೋಲೆಯ ಚಿತ್ರಗಳು ಇವಾಗಿದ್ದು, ಇವು ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರೆತಿದೆ. ನೋಡಲು ವೃತ್ತಾಕಾರವಿದ್ದು ಎಡದಿಂದ ಬಲಕ್ಕೆ ಸಾಗಿರುವ ಸರಳ ರೇಖೆಗಳನ್ನು ಕಾಣಬಹುದು. ಮಧ್ಯದಲ್ಲಿ ಅಡ್ಡರೇಖೆಗಳ ಸಾಲಿದ್ದು ವೃತ್ತದ ಮಧ್ಯಭಾಗದಲ್ಲಿ ಚೌಕಾಕಾರವಿದ್ದು ವೃತ್ತ ಮತ್ತು ಬಳ್ಳಿಯ ರೀತಿಯಲ್ಲಿ ವಿನ್ಯಾಸವನ್ನು ನಾವಿಲ್ಲ ಕಾಣಬಹುದಾಗಿದೆ. ಇದರ ಪಕ್ಕದಲ್ಲಿಯೇ ಲೋಕ ಸ್ವರೂಪದ ಚಿತ್ರವಿದ್ದು ಈ ಚಿತ್ರವು ನೋಡಲು ವ್ಯಕ್ತಿಯೊಬ್ಬ ಸೊಂಟದ ಮೇಲೆ ಅಂಗೈಗಳನ್ನು ಇಟ್ಟುಕೊಂಡು ನಿಂತಿರುವಾಗಿದೆ. ಮೇಲಿನ ಆಕಾರವು ಷಡ್ಭುಜಾಕಾರದಲ್ಲಿದ್ದು ಕೆಳಭಾಗದಲ್ಲಿ

ತ್ರಿಭುಜಾಕಾರದಲ್ಲಿ ನಾಲ್ಕು ಮೂಲೆಗಳುಳ್ಳ ಆಕಾರವನ್ನು ನಾವಿಲ್ಲ ಗಮನಿಸಬಹುದು. ಇದರ ಮಧ್ಯಭಾಗದಲ್ಲಿ ಎರಡು ರೇಖೆಗಳ ಸ್ಥಂಭಾಕಾರವಿದ್ದು ಮಧ್ಯದಿಂದ ಕೆಳಭಾಗದವರೆವಿಗೂ ಅಡ್ಡ ರೇಖೆಗಳನ್ನು ಎಳೆಯಲಾಗಿದೆ. ಈ ಚಿತ್ರವೂ ಸಹ ಕಂಟದಿಂದ ಕೊರೆದ ತಾಡೋಲೆಯ ಪ್ರತಿಯಾಗಿದ್ದು ನೋಡಲು ಕಪ್ಪಾಗಿ ಕಾಣುತ್ತವೆ.

ಚಿತ್ರ-೪. ರಥದ ಚಿತ್ರ

ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರೆತಿರುವ ಈ ತಾಡೋಲೆಯ ಚಿತ್ರವು ಮುಕ್ಕಾಗಿದೆ. ಈ ಚಿತ್ರದಲ್ಲಿ ಕಾರಾವಳಿ ಭಾಗಗಳ ದೇವಾಲಯಗಳಲ್ಲಿ ಕಾಣುವ ದೇವರ ಹಿಂಬದಿಯ ಪ್ರಭಾವಳಿಯಂತೆ ಈ ರಥದ ಆಕಾರವನ್ನು ಚಿತ್ರಿಸಲಾಗಿದ್ದು ಮಧ್ಯದಲ್ಲಿ ಮಂಟಪ ಹಾಗೂ ಕೆಳಭಾಗದಲ್ಲಿ ಚಕ್ರಗಳನ್ನು ಕಾಣಬಹುದಾಗಿದೆ. ಇದರ ಹಿನ್ನೆಲೆಯಲ್ಲಿ ದೊಡ್ಡದಾದ ಪ್ರಭಾವಳಿಯಂತೆ ಕಾಣುವ ವೃತ್ತಾಕಾರವಿದೆ. ಆದರೆ ಕೆಳಭಾಗದಲ್ಲಿ ಕಾಣುವ ರಥವನ್ನು ಎಳೆಯುವ ಅಗ್ಗವು ದೊಡ್ಡ ಸರ್ಪದ ಬಾಲದಂತಿದೆ. ಆದುದರಿಂದ ಈ ಪ್ರಭಾವಳಿಯನ್ನು ಸಹಸ್ರ ಎಡೆಯುಳ್ಳ ಸರ್ಪವೆಂದು ಪರಿಗಣಿಸಬಹುದು. ಅಲ್ಲದೆ ಈ ಚಿತ್ರದ ಬಲಬದಿಗೆ ಸರ್ಪಗಳು ಎಡೆಯೆತ್ತಿ ನಿಂತಿರುವ ರೀತಿಯಲ್ಲಿ ವಿನ್ಯಾಸಗಳನ್ನು ಚಿತ್ರಿಸಲಾಗಿದ್ದು ಇವು ಸ್ಪಷ್ಟವಾಗಿ ಕಾಣಿಸದೆ ಮಸುಕು ಮಸುಕಾಗಿ ನೋಡಸಿಗುತ್ತವೆ. ತಾಳೆಗರಿಯ ಮೇಲೆ ಕಂಟದಿಂದ ಕೊರೆದಿರುವ ಕಾರಣ ಕಪ್ಪುವರ್ಣದ ರೇಖಾವಿನ್ಯಾಸಗಳು ಇವಾಗಿವೆ.

ಚಿತ್ರ-೫. ಪದ್ಮಾಕಾರದ ವಿನ್ಯಾಸಗಳು

ತಾಳೆಯ ಗರಿಯ ಮೇಲೆ ಕಂಟದಿಂ ಕೊರೆದು ರಚಿಸಲಾದ ಈ ರೇಖಾ ವಿನ್ಯಾಸಗಳ ಪ್ರತಿಯು ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರೆತಿದೆ. ಇದರಲ್ಲಿ ಮೊದಲಿಗೆ ಮೂರು ವೃತ್ತಗಳುಳ್ಳ ಪದ್ಮಾಕಾರದ ಹಸ್ತಪ್ರತಿಯಲ್ಲಿ ಮೊದಲ ಎರಡುಸುತ್ತುಗಳಲ್ಲಿ ತಾವರೆಯ ಹೊರಭಾಗದ ದೊಡ್ಡ ಧಳಗಳ ವಿನ್ಯಾಸವಿದ್ದು ಒಳಭಾಗದಲ್ಲಿ ಚೂಪಾದ ರೇಖಾ ವಿನ್ಯಾಸವನ್ನು ನಾವು ಕಾಣಬಹುದು. ಇದರ ಬಲಬದಿಯ ಚಿತ್ರವು ಚಿಕ್ಕದಾಗಿದ್ದು ವೃತ್ತಾಕಾರದ ನಡುವೆ ಕಮಲದ ಮೊನಚಾದ ದಳಗಳ ವಿನ್ಯಾಸವಿದೆ.

ತಾಳೆಗರಿಯ ಮಧ್ಯಭಾಗದಲ್ಲಿರುವ ಚಿತ್ರವು ದೊಡ್ಡದಾಗಿದ್ದು ಮೂರು ವೃತ್ತಗಳನ್ನು ಒಳಗೊಂಡಿದ್ದು ಇದರೊಳಗೆ ಐದು ವೃತ್ತಗಳು ಪರಸ್ಪರ ಒಂದಕ್ಕೊಂದು ಚೇದಿಸಿಕೊಂಡು ಅದರೊಳಗೊಂದು ವೃತ್ತ ಏರ್ಪಡುವಂತೆ ಚಿತ್ರಿಸಲಾಗಿದ್ದು ಕಲಾವಿದನು ತನ್ನ ಜಾಮೀತಿಕ ನೈಪುಣ್ಯತೆಯನ್ನು ಇಲ್ಲಿ ಪ್ರದರ್ಶಿಸಿದ್ದಾನೆ. ಇನ್ನುಳಿದ ಎರಡು ಚಿತ್ರಗಳು ಮೊದಲಿನಂತೆ ಇದ್ದು ಎರಡೂ ಬದಿಯಲ್ಲೂ ಒಂದೇ ಬಗೆಯ ಚಿತ್ರಗಳನ್ನು ಕಾಣಬಹುದಾಗಿದೆ.

ಚಿತ್ರ-೬. ಕಮಲ ಮತ್ತು ವೃತ್ತಾಕಾರದ ರೇಖಾ ವಿನ್ಯಾಸಗಳು

ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರೆತಿರುವ ಈ ತಾಳೆಗರಿಯು ಎರಡಭಾಗದ ಎರಡೂ ಮೂಲೆಗಳಲ್ಲಿ ಕೊಂಚ ಮುಕ್ಕಾದಂತೆ ತೋರುತ್ತದೆ. ಈ ತಾಳೆಗರಿಯ ಪ್ರಾರಂಭದಲ್ಲಿ ಅಷ್ಟಪದಿಯ ಕಮಲದ ಆಕಾರವಿದ್ದು ಮೂರು ದಳ ವಿನ್ಯಾಸಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಕೊನೆಯದಾಗಿ ಸುತ್ತು ಒಂದು ವೃತ್ತವನ್ನು ಎಳೆಯಲಾಗಿದ್ದು ಚಿತ್ರದ ದಳದ ಮೂಲೆ ಮೂಲೆ ಯಾವುದೋ ಅಂಕಿಯನ್ನು ರಚಿಸಲಾಗಿದ್ದು ಅದರ ಪೂರಕ ಮಾಹಿತಿಯನ್ನು ಪಕ್ಕ ಪಟ್ಟಿಯಲ್ಲಿ ತೋರಿಸಲಾಗಿದೆ. ಲೆಕ್ಕ ಭಾಗಗಳನ್ನಾಗಿ ವಿಂಗಡಿಸಿರುವ ಮನೆಗಳಲ್ಲಿ ಸೂಚಿಸಲಾಗಿದೆ. ಮುಮದೆ ದೊಡ್ಡದಾದ ವೃತ್ತಾಕಾರವಿದ್ದು ಇದರಲ್ಲಿ ಸಾಕಷ್ಟು ವೃತ್ತಗಳನ್ನು ಎಳೆಯಲಾಗಿದ್ದು ಮೂರು ಸ್ತಂಭಾಕಾರವನ್ನು ಅಡ್ಡ ಉದ್ದ ಹಾಗೂ ಮಧ್ಯ ಭಾಗದಲ್ಲಿ ರಚಿಸಲಾಗಿದೆ.

ಹೀಗೆ ಇದೇ ರೀತಿಯಲ್ಲಿ ಕಂಟದಿಂದ ಕೊರೆದ ಹಲವು ತಾಳೆಗರಿಗಳ ಸಚಿತ್ರ ವಿನ್ಯಾಸಗಳಿದ್ದು ಇವೆಲ್ಲವು ಲೆಕ್ಕಗಳಿಗೆ ಸಂಬಂಧಿಸಿದ ಜಾಮೀತಿಕ ವಿನ್ಯಾಸಗಳಿಗೆ ಸಂಬಂಧಿಸಿದ ಚಿತ್ರಗಳನ್ನು ಕಾಣಬಹುದು. ಸಚಿತ್ರ ತಾಟೋಲೆಗಳಲ್ಲಿ ಕಂಟದಿಂದ ಕೊರೆದ ತಾಡೋಲೆಗಳು ಸಹ ಒಂದು ಬಗೆಯದಾದರೆ ಇವುಗಳೂ ಸಹ ವರ್ಣಚಿತ್ರ ಹಸ್ತಪ್ರತಿಗಳಷ್ಟೆ ಪ್ರಾಚೀನತೆ ಮತ್ತು ಮಹತ್ವಗಳನ್ನು ಹೊಂದಿವೆ. ತಾಡೋಲೆಗಳಲ್ಲಿ ಮೊದಮೊದಲು ವರ್ಣಚಿತ್ರಗಳ ಪೂರ್ವದಿಂದಲೂ ಕಂಟದಿಂದ ಕೊರೆಯುವ ಪದ್ಧತಿಗಳಿದ್ದು ಅಂದಿನಿಂದಲೇ ತಾಡೋಲೆಗಳಲ್ಲಿ ರೇಖಾಚಿತ್ರ ವಿನ್ಯಾಸಗಳನ್ನು ನಾವು ಕಾಣಬಹುದಾಗಿದೆ. ಈ ಚಿತ್ರಗಳು ಸಾಮಾನ್ಯವಾಗಿ ರೇಖಾ ವಿನ್ಯಾಸಕ್ಕೆ ಸೀಮಿತವಾಗಿದ್ದು ಇವುಗಳಲ್ಲಿ ಜಾಮೀತಿಕ ವಿನ್ಯಾಸಗಳು, ಹೂಬಳ್ಳಿಗಳು, ತಾಂತ್ರಿಕ ಅಂಶಗಳು ಜೈನ ಧರ್ಮದ ಕ್ರಿಯಾಕರ್ಮ, ವಿಧಿವಿಧಾನಗಳು, ಆಚರಣೆಗಳು ಹಾಗೂ ಅಲ್ಲಿ ನೆರವಾಗುವ ಅಂಶಗಳು ಕುರಿತಾಗಿಯೇ ಹೆಚ್ಚಿನ ರೇಖಾ ಚಿತ್ರಗಳನ್ನು ನಾವು ಕಾಣಬಹುದು. ಇವುಗಳಲ್ಲಿ ವೃತ್ತಾಕಾರ, ಚೌಕಾಕಾರ ತ್ರಿಭುಜಗಳು, ಸರಳರೇಖೆಗಳು, ಅಷ್ಟಷಡ್ಭುಜಗಳ ವಿನ್ಯಾಸಗಳೇ ಹೆಚ್ಚು ಕೆಲವು ಕೃತಿಗಳಿಗೆ ಸಂಬಂಧಿಸಿದ ಚಿತ್ರಗಳಿದ್ದರೆ ಇನ್ನು ಕೆಲವು ಶೃಂಗಾರಿಕ ಸೌಂದರ್ಯ ಭಾವ ಮೂಡಿಸುವ ಸಲುವಾಗಿ ಕೆಲವನ್ನು ಚಿತ್ರಿಸಲಾಗಿದೆ. ಅಲ್ಲದೇ ಕೆಲವೊಂದನ್ನು ವಿಷಯಗಳ ಭಾಗಗಳನ್ನಾಗಿ ಮಾಡಲೂ ಬಳಸಲಾಗಿದೆ. ಹೀಗೆ ನಾನಾ ರೀತಿಯಲ್ಲಿ ಈ ಕಂಟದಿಂದ ಕೊರೆದ ರೇಖಾ ವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಸಚಿತ್ರ ಹಸ್ತಪ್ರತಿಯ ವರ್ಣಚಿತ್ರಗಳು

ಜೈನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂಡಬಿದರೆ ಪ್ರದೇಶದ ಜೈನ ಭಂಡಾರಗಳಲ್ಲಿ ಅಗ್ಗಳನ ಚಂದ್ರಪ್ರಭಪುರಾಣ, ನಾಗಚಂದ್ರನ ಪಂಪರಾಮಾಯಣ, ನಾಗವರ್ಮನ ವರ್ಧಮಾನ ಪುರಾಣ,

ಕರ್ಣಪಾರ್ಯನ ನೇಮಿನಾಥ ಪುರಾಣ, ಪಂಚತಂತ್ರ ಧರ್ಮಾಮೃತ, ಕರ್ಣಾಟ ಭಾಷಾಭೂಷಣ, ಕಾವ್ಯಲೋಕನ, ಆದಿಪುರಾಣ ಭರತೇಶ ವೈಭವ ರನ್ನನ ಅಜಿತಪುರಾಣ, ವಡ್ಡಾರಾಧನೆ[೩೦] ಇತ್ಯಾದಿ ಕನ್ನಡ ಮಹಾನ್ ಸಾಹಿತ್ಯ ಭಂಡಾರ ಜೈನ ಸಾಹಿತ್ಯದಲ್ಲಿದೆ.

ಪುರಾತನ ಪ್ರಾಕೃತ ಗ್ರಂಥಗಳು ಸಾಮಾನ್ಯವಾಗಿ ಜೈನ ಗ್ರಂಥಗಳು ೧೧ನೆಯ ಶತಮಾನದವರೆಗೆ ಪ್ರಾಕೃತವು ಜೈನರ ಪವಿತ್ರ ಭಾಷೆಯಾಗಿತ್ತು. ದೇಶ ಭಾಷೆಯೇ ಅವರ ಮತಪ್ರಚಾರ ಮಾಧ್ಯಮವಾಗಿತ್ತು. ಹೀಗೆ ಮೈಸೂರಿನಲ್ಲಿ ಕನ್ನಡದಲ್ಲೂ, ತಮಿಳು ನಾಡಿನಲ್ಲಿ ತಮಿಳಿನಲ್ಲೂ ಆಂಧ್ರ ಪ್ರದೇಶದಲ್ಲಿ ತೆಲುಗಿನಲ್ಲೂ ಜೈನ ಧರ್ಮಗ್ರಂಥಗಳೂ ರಚಿತವಾಗತೊಡಗಿದವು. ನಮಗೆ ಕೈಯೆಡೆಯಾಗಿ ಬಂದ ಪ್ರಾಕೃತ ಗ್ರಂಥಗಳು ಹಲವಿವೆ ತ್ರೈಲೋಕ್ಯ ಪ್ರಜ್ಞಾಪತಿ, ಸರ್ವನಂದಿ, ಅನುಪ್ರೇಕ್ಷಾ, ದಶರನಸಾರ, ಜ್ಞಾನ ಚಂದ್ರ ಚರಿತೆ, ಪರಮಾತ್ಮ ಪ್ರಕಾಶ, ಸಮಧರ್ಮ ದೋಹಾ, ಗ್ರಂಥಗಳು ಪ್ರಾಕೃತದಲ್ಲಿದ್ದವು. ಸಂರಕ್ಷಣೆಯ ಕೊರತೆ ಸೂಚಿ ರಚನೆಯ ಕೊರತೆ ಮತ್ತು ಅನ್ಯ ಧರ್ಮಿಯರು ನೋಡಕೂಡದು ಎನ್ನುವ ಧಾರ್ಮಿಕ ವಿಧಿಯಕಾರಣದಿಂದಾಗಿ ಅವುಗಳನ್ನು ಸಾಮಾನ್ಯ ಓದುಗರ ಕೈಗಳಿಗೆ ಲಭ್ಯವಾಗುವುದಿಲ್ಲ-ವಾಗಿವೆ.[೩೧]

ವೃಷಭನಾಥನನ್ನು ಜೈನಧರ್ಮದ ಪ್ರಜನಕನೆಂದು ಭಾವಿಸುವ ಜೈನರು ಹಣಿತ ಮತ್ತು ಸಾಂಕೇತಿಕ ಪ್ರಜ್ಞೆಯ ಜನಕರೆಂದೇ ಭಾವಿಸುತ್ತಾರೆ. ಪ್ರಾರಂಭಿಕ ಹಂತದಲ್ಲಿ ಜೈನ ಪುರುಷ ಮತ್ತು ಮಹಿಳಾ ಯತಿಗಳು ಕಲೆಯನ್ನು ಧರ್ಮದಲ್ಲಿ ಬಳಕೆ ಮಾಡುವುದನ್ನು ತೀಕ್ಷ್ಣವಾಗಿ ಖಂಡಿಸಿದವರಲ್ಲದೆ ಸಾಧಕರು ಕಲಾತ್ಮಕ ಪ್ರತಿಮಾ, ಮೂಹೂರ್ತಗಳನ್ನು ಬಳಸುವುದರ ವಿರುದ್ಧ ಎಚ್ಚರಿಕೆಯನ್ನು ನೀಡಿದವು. ಆದರೆ ಕಾಲಾನುಕ್ರಮದ ಮಧ್ಯಕಾಲೀನ ಸಮಯಕ್ಕೆ ಈ ಮನೋಭಾವ ದುರ್ಬಲಗೊಂಡಂತೆ ಜೈನ ಧರ್ಮಿಯ ತತ್ವಗಳು ದೋಷ ಮತ್ತು ನಿರ್ದೋಷವೆಂಬ ಒಡಂಬಡಿಕೆಯನ್ನು ಮಾಡಿಕೊಂಡವು. ಈ ನಿಯಮದಂತೆ ಸಾಧಕರ ವಾಸದಲ್ಲಿ ಭೂದೃಶ್ಯಗಳು ಕಟ್ಟಡಗಳು ಆಕಾರರಹಿತ ಅಲಂಕಾರಿಕ ಚಿತ್ರಗಳು ಮೊದಲಿನ ಮನೋಭಾವದಂತೆ ರೂಪತಾಳಿದರೂ ೧೨ನೇ ಶತಮಾನದ ಕಾಲಕ್ಕೆ ಆಕಾಶದಲ್ಲಿ ತೇಲುವ ಯಕ್ಷ ಗಂಧರ್ವರ ಚಿತ್ರಗಳು ಪ್ರಾರಂಭಗೊಂಡಂತೆ ಸ್ತ್ರೀದೇವತೆಗಳ, ಮಹಿಳೆಯರ ಚಿತ್ರಗಳು ಜೈನ ಮಂದಿರವನ್ನು ಪ್ರವೇಶಿಸಿದಂತೆ ಜೈನ ಧರ್ಮ ಗ್ರಂಥಗಳು ಹಸ್ತಪ್ರತಿಗಳನ್ನು ಪ್ರವೇಶಿಸಿತು.[೩೨] ಇಲ್ಲಿಯವರೆವಿಗೂ ಇದ್ದ ಭಿತ್ತಿ ಚಿತ್ರಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಸಾಗಿಸಲೂ ಸಾಧ್ಯವಾಗುತ್ತಿರಲಿಲ್ಲ. ಇದರ ಪರ್ಯಾಯಾರ್ತವಾಗಿ ಒಂದು ಕಿರುರೂಪುಕಲೆ ಹಸ್ತಪ್ರತಿ ಕಲೆಗಳು ಕಲೆಯ ವೈವಿಧ್ಯತೆಯ ಪಸರುವಿಕೆಗೆ ನಾಂದಿಯಾದವು.

---

೩೦. ಮಧುವೆಂಕಾರೆಡ್ಡಿ – ಹಸ್ತಪ್ರತಿ ವ್ಯಾಸಂಗ – ೨. ಪು–೨೮

೩೧. ಎಸ್. ಮರಿಶಾಮಾಚಾರ್ ಸಾಹಿತ್ಯದಲ್ಲಿ ಚಿತ್ರಕಲೆ, ಪು–೩೬

೩೨. ಡಾ. ಯಾದಪ್ಪಪರದೇಶಿ: ಕರ್ನಾಟಕ ಭಿತ್ತಿ ಚಿತ್ರ, ಪು–೪೬

ಧವಲತ್ರಯಗಳಲ್ಲಿಯ ಸಚಿತ್ರ ಹಸ್ತಪ್ರತಿಗಳಲ್ಲಿನ ಚಿತ್ರಗಳು

ಧವಲ ಜಯಧವಲ ಮತ್ತು ಮಹಾಧವಲ ಈ ಸಿದ್ಧಾಂತ ಗ್ರಂಥಗಳನ್ನು ಜೈನರು ಅಧಿಕ ಶ್ರದ್ಧೆ ಮತ್ತು ಗೌರವದಿಂದ ಸ್ಮರಿಸುತ್ತಾರೆ. ಸಮಸ್ತ ಭಾರತದಲ್ಲಿ ಬೇರೆಡೆಗೆ ಸಿಗದ ಇವುಗಳ ಏಕೈಕ ಹಸ್ತಪ್ರತಿಗಳಿದ್ದುದು, ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಸಿದ್ಧಾಂತ ಬಸದಿಯ ಶಾಸ್ತ್ರಭಂಡಾರದಲ್ಲಿ ಮಾತ್ರ ಮೂಲತಃ ಶ್ರವಣಬೆಳಗೊಳದ ಜೈನಮಠಕ್ಕೆ ಸಂಬಂಧಿಸಿರಬಹುದಾದ ಇವು ಒಂದು ಕಾಲಕ್ಕೆ ಗೊಮ್ಮಟನೇ ಸಾಗಿಬರುವಂತೆ ಮೂಡಬಿದರಿಗೆ ಬಂದವು. ಅಂದಿನಿಂದ ಮೂಡಬಿದಿರೆಗೆ ಇನ್ನೂ ವಿಶೇಷತೆ ಪ್ರಾಪ್ತವಾಗಿ ಈ ಗ್ರಂಥಗಳು ಜನತೆಯ ಭಕ್ತಿಕಾಣಿಕೆಗಳನ್ನು ಸ್ವೀಕರಿಸುತ್ತಾ ಗದ್ದುಗೆಯ ಮೇಲೆ ಪೂಜೆಗೊಳ್ಳತೊಡಗಿದವು. ಗೌರವ ಭಕ್ತಿಗಳು ಬೆಳೆದಂತೆ ಇವುಗಳ ಅಭ್ಯಾಸ ಕಡಿಮೆಯಾಗುತ್ತಾ ನಡೆದು ಕೊನೆಗೆ ಬಿಚ್ಚಿ ನೋಡುವುದೂ ನಿಂತುಹೋಯಿತು. ಆಧುನಿಕ ಸಂಶೋಧನೆಗಳಾದ ವಿಮಾನ, ಹಡಗು, ರೇಡಿಯೋ ಇತ್ಯಾದಿಗಳ ರಚನಾ ರೀತಿ, ಬಂಗಾರ ಮಾಡುವ ವಿಧಾನ ಇತ್ಯಾದಿ ವಿಷಯವಿದರಲ್ಲಿದೆಯೆಂದು ಮುಗ್ಧ ಭಕ್ತರು ಮುಕ್ತ ಕಂಠದಿಂದ ಪ್ರಶಂಸಿಹತ್ತಿದರು.

ಈ ಗ್ರಂಥತ್ರಯದ ಲಿಪಿ ಹಳಗನ್ನಡ, ಭಾಷೆ ಪ್ರಾಕೃತ, ಈ ಗ್ರಂಥಗಳನ್ನು ಓದುವ ವ್ಯಕ್ತಿಗಳು ಸಿಗದೆ ಸಿಕ್ಕರೂ ಅರ್ಚಕರಿಂದ ಅವರಿಗೆ ಓದಲು ಅನುಮತಿ ಸಿಗದೆ ಹೋದ ಕಾರಣ, ಹಣಪಡೆದು ಗ್ರಂಥದರ್ಶನ ಮಾಡಿಸುವುದು ಮತ್ತು ಅವುಗಳನ್ನು ಗ್ರಂಥಚೋರರಿಂದ ರಕ್ಷಿಸುವುದು ಮಾತ್ರ ಅವರ ಕೆಲಸವಾಗಿಬಿಟ್ಟಿತು. ಇದರ ಪರಿಣಾಮವಾಗಿ ಪತ್ರಗಳು ಜೀರ್ಣಗೊಂಡು ಮಹಾಧವಲ[೩೩] (ಮಹಾಬಂಧ)ದ ಸುಮಾರು ೩-೪ ಸಾವಿರ ಶ್ಲೋಕಗಳು ನಾಶವಾದವು.

ಧವಶತ್ರಯಗಳು ಪ್ರಖ್ಯಾತಿಯ ದೃಷ್ಟಿಯಿಂದ ಇವು ಹದಿನೆಂಟನೇ ಶತಮಾನದ ಆದಿಭಾಗವು ಅವರನ್ನು ಬರೆದು ಇಂದಿಗೆ ಒಂಭತ್ತು ಶತಮಾನಗಳಿಗಿಂತ ದೀರ್ಘ ಕಾಲ ಸಂದಿದೆ. ಅಷ್ಟೊಂದು ಕಾಲ ನಮಗೆ ಅದು ಉಳಿದು ಬಂದಿರುವ ಸಂಗತಿಯೇ ಆಶ್ಚರ್ಯದ್ದು. ಇದರ ಓಲೆಗಳು ಸಾಕಷ್ಟು ವಿಶಾಲವಾದುವು. ಅವುಗಳ ಉದ್ದಗಲ ೬೬.೫ ಸೆಂ.ಮೀ. x ೭ ಸೆಂ.ಮೀ. ತಾಡವಾಲೆಯಲ್ಲಿ ಹನೆ ಮತ್ತು ಸೀತಾಳೆ ಎಂಬೆರಡು ಜಾತಿಗಳಿವೆ. ಮೊದಲನೆಯದು ಒರಟು ಮತ್ತು ದಪ್ಪ; ಬರವಣಿಗೆಗೆ ಎರಡನೇ ಜಾತಿಯೇ ಉತ್ತಮ. ಅದು ಅಗಲ ಮತ್ತು ಸಾಕಷ್ಟು ಉದ್ದದ ಗರಿಗಳನ್ನು ಒದಗಿಸುತ್ತಿವೆ. ಧವಲಾ ಗ್ರಂಥದ ಮೂಲವು ಕರ್ನಾಟಕವೇ; ಅದು ಹೊರಗಿನಿಂದ ಇಲ್ಲಿಗೆ ಬಂದುದಲ್ಲ. ಅದರ ಭಾಷೆ ಪ್ರಾಕೃತವಾದರೂ. ಅಲ್ಲಲ್ಲಿ ಸಂಸ್ಕೃತ ನುಡಿ ಬಂದಿದ್ದರೂ ಅದನ್ನು ಬರೆದುದು ಕನ್ನಡ ಲಿಪಿಯಲ್ಲಿ ಅದಕ್ಕಿಂತ ಮುಖ್ಯ ವಿಷಯ. ಇದನ್ನು ಕಂಠದಿಂದ ಬರೆಯದೆಯೇ ಲೇಖನಿ ಮತ್ತು

---

೩೩. ಧವಲ ಜಯಧವಲ ಮಹಾಧವಲ ಮಾರ್ಗ, ಪು-೧-೧೪

ಅರಗಿನ ಕಪ್ಪು ಶಾಯಿಗಳಿಂದ ಬರೆದಿದ್ದಾರೆ. ಬರೆದ ಲಿಪಿ ಒಂದಿಷ್ಟು ಮಾಸದೆ ಅಚ್ಚ ಕಡುಪಾಗಿ ಇಂದಿಗೂ ಕಾಣಿಸುತ್ತಿದೆ. ಕಂತದ ಬರವಣಿಗೆಯಲ್ಲಿ ಮಸಿ ತುಂಬಿಸಿದರೂ ಹಳೆಯ ಓಲೆಗಳಲ್ಲಿ ಓಲೆ ಬಣ್ಣಕ್ಕೂ ಬರವಣಿಗೆಗೆಗೂ ಕಾಲಕ್ರಮದಲ್ಲಿ ವ್ಯತ್ಯಾಸ ಕಾಣಿಸದೆ ಓದುವುದು ಕಷ್ಟವಾಗುತ್ತದೆ. ಇದು ಹಾಗಿಲ್ಲ. ಈ ಬರಹ ಗೊರಸೊಪ್ಪೆಯಲ್ಲಿ ಮೊದಲು ಸಿದ್ಧಗೊಂಡಿತೆಂದು ಅದರಿಂದಲೇ ತಿಳಿದುಬರುತ್ತದೆ. ಆದರೂ ಮುಂದಿನ ಜನರು ತಾಡವಾಲೆಯ ಬರವಣಿಗೆಗೆ ಲೇಖನಿ ಮಸಿಯನ್ನು ಬಳಸದೆ ಕಂತವನ್ನು ಏಕೆ ಉಪಯೋಗಿಸುತ್ತಾ ಹೋದರೋ ನನಗೆ ಹೊಳೆಯುವುದಿಲ್ಲ. ಲೇಖನಿ ಶಾಯಿಗಳಿಂದ ಓಲೆಗರಿಯ ಮೇಲೆ ಚಂದ ಅಕ್ಷರಗಳಿಂದ ಬರೆಯಲು ಉತ್ಸಾಹಪಟ್ಟ ಆ ಲಿಕಾರರು ಮತ್ತೂ ಒಂದು ಹೆಜ್ಜೆ ಮುಂದಕ್ಕಿರಿಸಿ ಅದನ್ನು ಚಿತ್ರಗಳಿಂದ ಅಲಂಕರಿಸಲು ಸಾಹಸಪಟ್ಟುದು ಸ್ವಾಭಾವಿಕವೇ ಅಂಟಿನ ಜತೆಯಲ್ಲಿ ಮಣ್ಣಿನ ಬಣ್ಣಗಳನ್ನು ಅರೆದು ಕುಂಚಗಳಿಂದ ಲೇಪಿಸಬಹುದು. ಕುಂಚದಿಂದಲೋ, ಲೇಖನಿಯಿಂದಲೋ ಚಿತ್ರಗಳ ರೇಖೆಗಳನ್ನು ಬರೆಯಬಹುದು.[೩೪] ಎಂಬುದಾಗಿ ಶಿವರಾಮ ಕಾರಂತರು ಅಭಿಪ್ರಾಯಿಸುತ್ತಾರೆ.

ಧವಲತ್ರಯಗಳ ಕುರಿತಾಗಿ ಹಲವಾರು ನಾನಾ ಬಗೆಗಿನ ಅಭಿಪ್ರಾಯಗಳನ್ನು ಮಂಡಿಸುತ್ತಾರೆ. ಅವು ಶಾಸನಗಳ ಆಧಾರದ ಮೇಲೆ, ತಾಳೆಗರಿಯಲ್ಲಿಯ ಉಲ್ಲೇಖಗಳ ಇತಿಹಾಸಜ್ಞರ ಅಭಿಪ್ರಾಯಗಳ ಮೇಲೆ ಹೀಗೆ ಕುರುಹುಗಳ ನೆಲೆಗಳ ಮೇಲೆ ಅವರವರ ಅಭಿಪ್ರಾಯಗಳು ಸಂಧಿಸಿರುತ್ತವೆ. ಆದರೆ ಧವಲಾಗ್ರಂಥದ ಕೊನೆಯಲ್ಲಿ ಕನ್ನಡದಲ್ಲೊಂದು ಉಲ್ಲೇಖವಿದೆ. ಅದರ ಮಾತುಗಳಿವು "ಮಾಂಡಲಿಕ ನಾಡಿನ ಶ್ರೀ ಭುಜಬಲಿ ಗಂಗಪೆರ್ಮಡಿ ದೇವರ ಅತ್ತೆಯಾದ ದೇವಿಯಕ್ಕಂ ಶ್ರುತ ಪಂಚಮಿಯಂ ನೋಂತುಜ್ಜವಣೆಯಂ ಮಾಡಿ ಬನ್ನಿಕೆರೆಯ ಉತ್ತುಂಗ ಶುಭಚಂದ್ರ ಸಿದ್ಧಾಂತ ದೇವರ್ಗೆ ಶ್ರುತಪೂಜೆಯಂ ಮಾಡಿ ಬರೆಸಿಕೊಟ್ಟ ಧವಲೆಯ ಪುಸ್ತಕಂ ಮಂಗಳ ಮಹಾ"[೩೫] ಇದು ಆ ಗ್ರಂಥದ ಲಿಪಿಕಾರ ಒದಗಿಸುವ ಸಾಕ್ಷಿ. ಜಯಧವಲ ಗ್ರಂಥದ ಪ್ರತಿಯೂ ಇದರ ಆಸುಪಾಸಿನದು. ಅದನ್ನು ಬರೆಯಿಸಿದಾತ ಅಣ್ಣಶ್ರೇಷ್ಠಿ ಎಂಬಾತ. ಹಾಗೆ ಅದನ್ನು ಬರೆಯಿಸಿ ಪದ್ಮಸೇನ ಮುನೇಂದ್ರ ಎಂಬುವರಿಗೆ ಶಾಸ್ತ್ರದಾನವಾಗಿ ಕೊಟ್ಟನೆಂಬ ಉಲ್ಲೇಖ ಅದರಲ್ಲಿದೆ. ಮಹಾಧವಲಾ ಗ್ರಂಥದ ಕೊನೆಯಲ್ಲಿ ಶ್ರೀ ಮಾಘನಂದಿ ಆಚಾರ್ಯರೆಂಬುವರ ಹೊಗಳಿಕೆ ಬರುತ್ತದೆ. ಅದನ್ನು ರೂಪವತಿ ಸೇನನ ಪತ್ನಿಯಾದ ಶ್ರೀಮತಿ ಎಂಬುವರು ಶ್ರೀ ಪಂಚಮಿ ಉದ್ಯಾಪನೆಯನ್ನು ಆ ಮಾಡಿ ಗ್ರಂಥವನ್ನು ಮಾಘನಂದಿ ಆಚಾರ್ಯರಿಗೆ ದಾನ ಮಾಡಿದ ಉಲ್ಲೇಖವಿದೆ.[೩೬] ಹೀಗೆ ಈ ಮೂರು ಗ್ರಂಥಗಳ ಐತಿಹಾಸಿಕ ಉಲ್ಲೇಖಗಳನ್ನು ನಾವು ಕಾಣಬಹುದು.

---

೩೪. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ, ಪು-೩೯

೩೫. ಅದೇ., ಪು-೪೦

೩೬. ಅದೇ.

ಸರ್ವಸಾಮಾನ್ಯವಾಗಿ ತಾಡವಾಲೆಗಳನ್ನು ಕಂಠಗಳಿಂದ ಬರೆಯುವ ರೂಢಿ ಎಲ್ಲೆಲ್ಲೂ ಕಂಡುಬರುತ್ತಿರುವಾಗ ಈ ಮೂರು ಧವಲಾ ಗ್ರಂಥಗಳು ಮಸಿಯಿಂದ ಬರೆದುವು ಆಗಿದ್ದು, ಒಂದೇ ಕಡೆ ದೊರಕಿದ್ದೂ, ಅವುಗಳಲ್ಲಿನ ಚಿತ್ರಗಳ ರೀತಿ ಒಂದೇ ಶೈಲಿಯದೆನಿಸುವುದರಿಂದಲೂ ಈ ಮೂರು ಗ್ರಂಥಗಳೂ ಸಮಕಾಲೀನವಾಗಿರಬೇಕು. ಕೊನೆಯ ಗ್ರಂಥದಲ್ಲಿ ಹೆಸರಿಸಿದ ಮಾಘನಂದಿ ರೂಪಸೇನ, ಶ್ರೀಮತಿಯರ ಕಾಲವನ್ನು ಕ್ರಿ.ಶ. ೧೧೧೩-೪೩ರ ಅವಧಿಗೆ ಸೇರಿಸುತ್ತಾರೆ. ಸಾಮಾನ್ಯವಾಗಿ ಈ ಗ್ರಂಥದಲ್ಲಿ ಬರುವ ಚಿತ್ರಗಳು ಹಾಳೆಯ ಎಡ, ಬಲ ಮಗ್ಗುಲಲ್ಲಿದ್ದು ನಡುವೆ ಬರವಣಿಗೆಯಿದೆ. ಚಿತ್ರದ ಆಚೀಚೆ ಚಿತ್ತಾರದ ಅಂಚುಗಳಿದ್ದು ಅವುಗಳ ಒಟ್ಟು ಗಾತ್ರ ೨೧೧-೩ ಇಂಚು ಅಗಲ ಮತ್ತು ೪-೫ ಇಂಚು ಉದ್ದವಾಗಬಹುದು. ಅಗಲ ತೀರ ಕಡಿಮೆಯಾಗಿರುವುದರಿಂದ ಅದರಲ್ಲಿ ಬರುವ ವ್ಯಕ್ತಿ ಚಿತ್ರಗಳು ಎಂದು ಇಂಚುಗಳಷ್ಟು ಕಡಿಮೆ ಎತ್ತರದವು. ಹಾಗಿದ್ದ ಬಳಿಕ ಅವನ್ನು ನಿಜಕ್ಕೂ ಚಿಕಣಿ ಚಿತ್ರ (Miniatures) ಎಂದು ಕರೆಯಬಹುದಾಗಿದೆ. ಚಿತ್ರಗತ ವಿಷಯಗಳು ಜಿನ ಧರ್ಮದ ತೀರ್ಥಂಕರರು ಯಕ್ಷ, ಯಕ್ಷಿಯರು, ಮುನಿಗಳು, ಕೆಲವೇ ಸಂದರ್ಭಗಳಲ್ಲಿ ಅವರ ಭಕ್ತರು ಸಖಿಯರು, ಸೇವಕಿಯರು[೩೭] ಹೀಗೆ ಈ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಈ ಚಿತ್ರಗಳು ರೇಖಾ ಪ್ರಧಾನವಾಗಿದ್ದು, ಚಪ್ಪಟೆ ಬಣ್ಣಗಳಿಂದ (Flat Clours) ತುಂಬಿದುವು. ಕೆಂಪು, ಸಸಿ ಹಸಿರು, ಕಪ್ಪು, ಪಾಚಲ, ಗೋಪಿ, ಕಪ್ಪುಗಳಂತಹ ಕೆಲವೇ ಮಣ್ಣಿನ ಬಣ್ಣಗಳಿಂದ ನಿರ್ವಹಿಸಬಹುದು. ಬಾನಿನ ಮುಗಿಲುಗಳನ್ನು ಚಿತ್ರಿಸುವಾಗ ಅಥವಾ ಕುಳಿತ ಪದ್ಮದಳನ್ನು ಚಿತ್ರಿಸುವಾಗ ಮಾತ್ರ ಬಣ್ಣಗಳಲ್ಲಿ ಛಾಯಾವ್ಯತ್ಯಾಸಗಳನ್ನು ಕಾಣಿಸಿದ್ದಾರೆಯೇ ಹೊರತು ಉಳಿದೆಡೆಗಳಲ್ಲಿ ವರ್ಣಲೇಪನ ಚಪ್ಪಟೆಯಾಗಿದೆ. ಈ ಚಿತ್ರಗಳ ಚೆಲುವಿಗೆ ಕಾರಣವಾದ ಅಂಶವೆಂದರೆ ಅಲ್ಲಿನ ಲಲಿತ, ಸೂಕ್ಷ್ಮ ರೇಖೆಗಳು ಮತ್ತು ಬಣ್ಣಗಳಲ್ಲಿ ಪರಸ್ಪರ ಹೊಂದಿಕೆ ಹೆಚ್ಚಿನ ಚಿತ್ರಗಳಲ್ಲಿ ವ್ಯತ್ಯಾಯ ಹಿನ್ನೆಲೆಯನ್ನು ಕಪ್ಪು ಇಲ್ಲವೆ ಕೆಂಪು ವರ್ಣಗಳಿಂದ ತುಂಬಿಸಿದ್ದಾರೆ. ಚಿತ್ರಕೃತಿಗಳ ಬಾಹ್ಯರೇಖೆಗಳನ್ನು ಸಂದರ್ಭಕ್ಕೆ ತಕ್ಕಂತೆ ಕಪ್ಪು ಅಥವಾ ಕೆಂಪು ಬಣ್ಣದ ಸೂಕ್ಷ್ಮ ರೇಖೆಗಳಿಂದ ಅಂಕಿಸಿದ್ದಾರೆ. ಅಂಥ ಸೂಕ್ಷ್ಮ ಲಲಿತ ರೇಖೆಗಳೇ ಇಲ್ಲಿ ವಿವಿಧ ಆಕೃತಿಗಳಿಗೆ ಸೊಬಗನ್ನುಂಟು ಮಾಡುವ ಮುಖ್ಯ ಶಕ್ತಿ. ಅವು ಸಾಮಾನ್ಯ ಗ್ರಾಮೀಣ ಚಿತ್ರಗಳಂತೆ ಲೊಡ್ಡಾಗಿಲ್ಲ. ನುರಿತ ಕೈಯಿಂದ ಹೊರವುಗಳಾಗಿ ಕಾಣಿಸುತ್ತಿವೆ[೩೮] ಎಂದು ಶಿವರಾಮ ಕಾರಂತರು ಅಭಿಪ್ರಾಯಿಸುತ್ತಾರೆ.

ಮೂಡಬಿದುರೆಯ ಧವಳ ತಯಗಳಲ್ಲಿ ತಾಡೋಲೆಯ ವರ್ಣಚಿತ್ರಗಳು ಪ್ರಪಂಚದ ಜೈನ ಧರ್ಮೀಯರಿಗೆ ಮೂಲ ಆಧಾರ ಕೃತಿಯಾಗಿದ್ದು ಇದಕ್ಕೆ ಜೈನ ಧಮೀಯರು ವಿಶೇಷವಾದ ಸ್ಥಾನವನ್ನು ನೀಡಿ ಗೌರವಿಸುತ್ತಾರೆ. ಮೇಲೆ ಹೇಳಿದಂತೆ ಧಾರ್ಮಿಕ ಭಾವ ಹೆಚ್ಚಾಗಿ ಅದರಲ್ಲಿ

---

೩೭. ಶಿವರಾಮ ಕಾರಂತ : ಭಾರತೀಯ ಚಿತ್ರಕಲೆ, ಪು-೪೧

೩೮. ಅದೇ., ಪು-೪೦

ಅಡಗಿದ್ದ ಚಿತ್ರ ಸೌಂದರ್ಯ ಮರೆಮಾಚಿತೇನೊ ಎಂಬ ಭಾವ ಚಿತ್ರಪ್ರೇಮಿಗಳಲ್ಲಿ ಮೂಡುವುದು. ಈ ಧವಳ ತ್ರಯಗಳನ್ನು ಅಧ್ಯಯನ ಮಾಡುವ ದೃಷ್ಟಿಯಿಂದ ಎರಡು ವಿಧಗಳಾಗಿ ವಿಂಗಡಿಸಿಕೊಂಡು ಅಧ್ಯಯಮನ ನಡೆಸಲಾಗಿದೆ. I ವ್ಯಕ್ತಿ ಚಿತ್ರಗಳು, II ವಿನ್ಯಾಸಗಳು ವ್ಯಕ್ತಿ ಚಿತ್ರಗಳಲ್ಲಿ ತೀರ್ಥಂಕರರು, ಜಿನ ಗುರುಗಳು, ಮುನಿಗಳು, ಯಕ್ಷ–ಯಕ್ಷೀಯರು, ಸರ್ವಾಣ್ಣ ಯಕ್ಷಿಯರು, ಗುರುಶಿಷ್ಯರು ಹೀಗೆ ವ್ಯಕ್ತಿ ಚಿತ್ರಗಳನ್ನು ಕಂಡರೆ ಇನ್ನು ವಿನ್ಯಾಸಗಳಲ್ಲಿ ಚಿತ್ರಗಳ ಬದಿಯಲ್ಲಿ ರಚಿಸಲಾಗಿರುವ ವಿನ್ಯಾಸದ ಪಟ್ಟಿಕೆಗಳು, ಹೂಬಳ್ಳಿಗಳು, ಜಾಮಿತಿಕ ವಿನ್ಯಾಸಗಳಲ್ಲಿ ಹೂವಿನ ವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

I ವ್ಯಕ್ತಿ ಚಿತ್ರಗಳು

ಚಿತ್ರ–೧. ಆದಿನಾಥ ತೀರ್ಥಂಕರರ ಚಿತ್ರ

ಧವಳ ಗ್ರಂಥದ ಸಚಿತ್ರ ವರ್ಣ ಹಸ್ತಪ್ರತಿಗಳಲ್ಲಿ ಸಿಗುವ ಚಿತ್ರಗಳಲ್ಲಿ ವಿಶೇಷವಾದ ಈ ಚಿತ್ರದ ಆದಿನಾಥ ವೃಷನಾಥರದ್ದು ಎಂದು ಹೇಳಬಹುದು. ಈ ಚಿತ್ರದಲ್ಲಿ ಸುವರ್ಣ ವರ್ಣದಿಂದ ಕಂಗೊಳಿಸುವ ಸ್ವಾಮಿಯ ಪದ್ಮಾಸನದಲ್ಲಿ ಕುಳಿತಿದ್ದು ಕೈಗಳನ್ನು ನಾಭಿಯ ಕೆಳಭಾಗದಲ್ಲಿ ಇರಿಸಿಕೊಂಡು ಕೂತಿದ್ದು ದ್ಯಾನಾಸಕ್ತರಾಗಿರುವರು. ಈ ಚಿತ್ರವು ವೃಷಭ ನಾಥರದ್ದೆ ಎಂದು ಹೇಳಲು ಪೂರ ಸಾಕ್ಷಿಯ ಇವರ ಹಿನ್ನೆಲೆಯಲ್ಲಿ ಕಾಣಸಿಗುವ ಎತ್ತಿನ ಚಿತ್ರಗಳು ಇವರ ಎರಡೂ ಬದಿಯಲ್ಲೂ ಎತ್ತಿನ ಮುಖದ ಚಿತ್ರವಿದ್ದು ನೋಡುಗನ ಬಲಬದಿಯಲ್ಲಿರುವ ಚಿತ್ರವು ಬಹು ಸ್ಪಷ್ಟವಾಗಿ ಗೋಮುಖ ಕಾಣಿಸುತ್ತದೆ. ಈ ಆಧಾರದ ಹಿನ್ನೆಲೆಯಲ್ಲಿ ಈ ಚಿತ್ರವು ವೃಷಭನಾಥರ ಚಿತ್ರವೆಂದು ಖಚಿತ ಪಡಿಸಬಹುದಾಗಿದೆ.

ಇನ್ನು ಈ ಚಿತ್ರದ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದ್ದು, ಸ್ವಾಮಿಯನ್ನು ಎದುರು ಮುಖವಾಗಿ ತೋರಿಸಿದ್ದಾರೆ. ಇಲ್ಲಿ ಸ್ವಾಮಿಯು ಮಂಧಸ್ಮಿತರಾಗಿ ಕುಳಿತಿದ್ದು, ಸುವರ್ಣರಿಂದ ಕಂಗೊಳಿಸುವಂತೆ ತೋರಿಸಲಾಗಿದೆ. ತಲೆಯ ಮೇಲೆ ಕಪ್ಪು ಕೂದಲುಗಳಿದ್ದು ಚಿತ್ರದ ಹೊರರೇಖೆಗಳನ್ನು ಗಾಡ ಕೆಂಪು–ಕಂದು ವರ್ಣದಿಂದ ಚಿತ್ರಿಸಲಾಗಿರುವುದು. ಅಲ್ಲದೆ ಸ್ವಾಮಿಯು ಕುಳಿತರುವ ಪೀಠವನ್ನು ಲಾಂಚನವನ್ನು ತೋರಿಸಲಾಗಿದ್ದು ಇವುಗಳು ಸ್ಪಷ್ಟವಾಗಿ ಗೋಚರಿಸುತ್ತಿಲ್ಲ. ವೃಷಭನಾಥರ ಹಿನ್ನೆಲೆಯಲ್ಲಿ ಎರಡೂ ಬದಿಗಳಲ್ಲೂ ಗೋಮುಖಗಳ ಚಿತ್ರಗಳನ್ನು ರಚಿಸಲಾಗಿದೆ. ಇದರ ರೇಖಾವಿನ್ಯಾಸಗಳನ್ನು ಗಮನಿಸಿದಾಗ ಹೊಯ್ಸಳರ ಬೇಲೂರು ಹಳೇಬೀಡುಗಳಲ್ಲಿಯ ಶಿಲ್ಪಗಳ ಬಾಹ್ಯರೇಖೆಗಳ ಛಾಯೆ ಇಲ್ಲಿ ಕಂಡು ಬರುವುದರಿಂದ ಇವು ಹೊಯ್ಸಳರ ಕಾಲದ್ದೆ ಎಂದು ಅಧಿಕೃತವಾಗಿ ಹೇಳಬಹುದಾಗಿದೆ. ಈ ಚಿತ್ರದ ಎರಡೂ ಬದಿಗಳಲ್ಲು ಪ್ರಾಕೃತ ಹಳೆಗನ್ನಡದ ಅಕ್ಷರಗಳಿದ್ದು ಇದಕ್ಕೂ ಚಿತ್ರಕ್ಕೂ

ತೊಂದರೆಯಾಗದಂತೆ ಸ್ಥಳಾವಕಾಶವಿದ್ದು ಇಲ್ಲಿ ರೇಖಾ ವಿನ್ಯಾಸವನ್ನು ಮಾಡಲಾಗಿದೆ. ಮೇಲಿಂದ ಕೆಳಮುಖವಾಗಿರುವ ರೇಖೆಗಳಿದ್ದು ಇವುಗಳ ಮಧ್ಯಭಾಗದಲ್ಲಿ ಹೊರೆ ಹಾಗೂ ಅಡ್ಡರೇಖೆಗಳ ಸಹಾಯದಿಂದ ಹಾವಿನ (ಜಿಗ್‌ಜಾಗ್) ಮಾದರಿಯಲ್ಲಿ ಚಿತ್ರಿಸಲಾಗಿದ್ದು ಇವುಗಳು ಕಡುಗಪ್ಪು ವರ್ಣದಿಂದ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಇದೊಂದು ಸುಂದರ ವಿನ್ಯಾಸದ ಕೃತಿಯಾಗಿದ್ದು ಈ ಚಿತ್ರ ಕೃತಿಯು ನೋಡಲು ಮನಮೋಹಕವಾಗಿದೆ.

ಚಿತ್ರ-೨. ನಿಂತಿರುವ ತೀರ್ಥಂಕರರು

ಧವಳತ್ರಯದ ಈ ವರ್ಣಚಿತ್ರಕೃತಿಯ ತಾಳೆಯಗರಿಯ ಮೇಲೆ ನೈಸರ್ಗಿಕ ವರ್ಣಗಳಿಂದ ರಚಿಸಲಾಗಿದ್ದು ಇಲ್ಲಿ ತೀರ್ಥಂಕರರೊಬ್ಬರು ಗೊಮ್ಮಟನಂತೆ ನಿಂತಿರುವ ದೃಶ್ಯವಿದ್ದು ಸುವರ್ಣ ವರ್ಣದಿಂದ ಕಂಗೊಳಿಸುತ್ತಿರುವನು ಇವರ ಹಿನ್ನೆಲೆಯನ್ನು ಕೆಂಪು ವರ್ಣದಿಂದ ತೋರಿಸಲಾಗಿದ್ದು ಇಲ್ಲಿ ತೀರ್ಥಂಕರರು ಎರಡೂ ಕೈಗಳನ್ನು ನೇರವಾಗಿ ಕೆಳಮುಖವಾಗಿ ಚಾಚಿಕೊಂಡು ನಿಂತಿರುವರು. ಈ ಚಿತ್ರವನ್ನು ಕಲಾವಿದನು ಮೊಣಕಾಲಿನವರೆಗೆ ಮಾತ್ರ ರಚಿಸಿದ್ದಾನೆ. ಹಾಗೂ ಎರಡು ಬದಿಗಳಲ್ಲಿ ಅಕ್ಷರಗಳಿದ್ದು ತೀರ್ಥಂಕರರ ಚಿತ್ರಕ್ಕೆ ತೊಂದರೆಯಾಗದಂತೆ ಎರಡೂ ಬದಿಗಳಲ್ಲಿಯೂ ಜಾಮೀತಿಕ ರೇಖಾ ವಿನ್ಯಾಸಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಎಡಬದಿಯಲ್ಲಿ ಕೆಳಮುಖವಾದ ರೇಖೆಗಳಿದ್ದು ಅಡ್ಡರೇಖೆಗಳು ವೃತ್ತಾಕಾರಗಳನ್ನು ಬಳಸಿಕೊಂಡು ವಿನ್ಯಾಸ ರಚಿಸಿದರೆ ಬಲಬದಿಯಲ್ಲಿ ನೇರವಾದ ಕೆಳಮುಖ ರೇಖೆಗಳ ಮಧ್ಯೆ ಅರ್ಧ ಮೊಟ್ಟೆಯಾಕಾರದಲ್ಲಿ ಚಿತ್ರಗಳನ್ನು ರಚಿಸಿದ್ದಾನೆ. ಎಲ್ಲಿ ಹೆಚ್ಚಾಗಿ ಕೆಂಪು ಸುವರ್ಣ ಕಂದು, ಗಾಡಕೆಂಪು, ಕಪ್ಪು ವರ್ಣಗಳನ್ನು ಬಳಸಲಾಗಿದೆ.

ಚಿತ್ರ-೩. ಪಾರ್ಶ್ವನಾಥರ ಚಿತ್ರ

ಈ ಚಿತ್ರದಲ್ಲಿ ಕೃಷ್ಣವರ್ಣದಲ್ಲಿ ಪದ್ಮಾಸನಾ ರೂಢರಾಗಿ ಕುಳಿತುದ್ಯಾನಿಸುತ್ತಿದ್ದು ಇವರಿಂದೆ ಏಳು ಎಡೆಯ ಶ್ವೇತವರ್ಣದ ಸರ್ಪವು ನೆರಳಾಗಿ ಕಾಯುತ್ತಿರುವಂತೆ ತೋರಿಸಲಾಗಿದ್ದು, ಇವರ ಎರಡೂ ಬದಿಯಲ್ಲಿ ಜಿನ ಗುರುಗಳು ಕುಳಿತು ನಮಿಸುತ್ತಿರುವಂತೆ ತೋರಿಸಲಾಗಿದೆ. ಎದುರು ಮುಖವಾಗಿ ಕುಳಿತಿರುವ ಪಾರ್ಶ್ವನಾಥರನ್ನು ಕಪ್ಪು ಶಾಮಲ ವರ್ಣದಿಂದ ಚಿತ್ರಿಸಿದ್ದು ತೀರ್ಥಂಕರರು ಪದ್ಮಾಸನದಲ್ಲಿ ಕುಳಿತುಕೊಂಡು ತನ್ನ ಎರಡೂ ಕೈಗಳನ್ನು ನಾಭಿಯ ಕೆಳಗೆ ತೊಡೆಯ ಮೇಲಿರಿಸಿ ದ್ಯಾನಿಸುತ್ತಿರುವುದು ಎರಡೂ ಬದಿಯಲ್ಲೂ ಜಿನ ಗುರುಗಳು ಪದ್ಮಾಸನದಲ್ಲಿ ಕುಳಿತು ಎರಡೂ ಕೈಗಳನ್ನು ಮುಗಿದುಕೊಂಡು ನರ್ಮತೆಯಿಂದ ಸ್ವಾಮಿಯನ್ನು ಪೂಜಿಸುತ್ತಿರುವುದು, ಇವರ ಹಿನ್ನೆಲೆಯನ್ನು ಗಾಢನೀಲ ವರ್ಣದಿಂದ ಚಿತ್ರಿಸಲಾಗಿದ್ದು, ಗಾಢ ಕೆಂಪು ವರ್ಣದಿಂದ, ಬಾಹ್ಯರೇಖೆಗಳನ್ನು ಎಳೆಯಲಾಗಿದೆ. ಎರಡೂ ಬದಿಗಳಲ್ಲು ವಿನ್ಯಾಸಗಳ ಪಟ್ಟಿಕೆಗಳಿದ್ದು ಎಡಬದಿಯಲ್ಲಿ

ವಿಚಿತ್ರವಾದ ವಿನ್ಯಾಸವನ್ನು ಚಿತ್ರಿಸಿದ್ದಾರೆ. ರೇಖಾವಿನ್ಯಾಸವಿದೆ. ಬಲಬದಿಯಲ್ಲಿ ಕೆಳಮುಖವಾದ ರೇಖೆಗಳಿದ್ದು ಇವುಗಳ ಮಧ್ಯದಲ್ಲಿ ಚೌಕ ವಜ್ರಾಕಾರದಲ್ಲಿ ರೇಖೆಗಳಿದ್ದು ಅವುಗಳಲ್ಲಿ ಹೂವಿನ ವಿನ್ಯಾಸವನ್ನು ತೋರಿಸಲಾಗಿದೆ. ಈ ಚಿತ್ರದಲ್ಲಿ ಕಪ್ಪು, ತಿಳಿಗಪ್ಪು, ಗಾಢಕೆಂಪು, ಗಾಢನೀಲಿ ವರ್ಣಗಳನ್ನು ಬಳಸಲಾಗಿದೆ.

ಚಿತ್ರ-೪. ಮಹಾವೀರ ತೀರ್ಥಂಕರ

ಈ ತಾಡೋಲೆಯ ವರ್ಣಚಿತ್ರದಲ್ಲಿ ತೀರ್ಥಂಕರರು ದ್ಯಾನಾಸಕ್ತರಾಗಿ ಕುಳಿತಿದ್ದು ಕೆಳಭಾಗದಲ್ಲಿ ಪೀಠವಿದ್ದು ಇದರ ಮೇಲೆ ಸಿಂಹದ ಆಕಾರವನ್ನು ತೋರಿಸಲಾಗಿದೆ ಹಾಗೂ ಹಿನ್ನೆಲೆಯಲ್ಲಿ ಗಂದರ್ವ ಸ್ತ್ರೀಯರು ನೃತ್ಯಮಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದ್ದು ಎರಡೂ ಬದಿಯಲ್ಲೂ ಯಕ್ಷಿ ಯಕ್ಷರನ್ನು ತೋರಿಸಲಾಗಿರುವುದು. ದ್ಯಾನಾಸಕ್ತರಾದ ತೀರ್ಥಂಕರರನ್ನು ಮಹಾವೀರರೇ ಎಂದು ಹೇಳಲು ಕುಳಿತಿರುವ ಪೀಠದಲ್ಲಿಯ ಸಿಂಹ ಲಾಂಚನ ಇದು ಇವರ ಲಾಂಚನವಾದ ಕಾರಣ ಮಹಾವೀರರ ಚಿತ್ರ ಇದು ಎಂದು ಗುರುತಿಸಬಹುದು.

ಇವರ ಬಲಬದಿಯಲ್ಲಿರುವ ಸಿದ್ದಾಯಿನಿ ಯಕ್ಷಿಯು ನಾಲ್ಕು ಬಾಹುಗಳನ್ನು ಹೊಂದಿದ್ದು ಎರಡು ಕಾಲುಗಳನ್ನು ಹಿಡಿದು ಕುಳಿತಿರುವಳು ತಲೆಯ ಮೇಲೆ ಕಿರೀಟ ಕೆಳಭಾಗದಲ್ಲಿ ಪೀಠವನ್ನು ಸಹ ತೋರಿಸಲಾಗಿದೆ. ಯಕ್ಷಿಯ ಬಲಬದಿಯಲ್ಲಿ ಬಾತುಕೋಳಿಯಾಕಾರದ ಪಕ್ಷಿಯನ್ನು ಸಹ ಕಾಣಬಹುದು. ಸ್ವಾಮಿ ಬಲಭಾಗದಲ್ಲಿ ಮಾತಂಗ ಯಕ್ಷನಿದ್ದು ನಾಲ್ಕು ಬಾಹು ಎರಡು ಕಾಲು ಹಾಗೂ ಕಿರೀಟಧಾರಿಯಾಗಿ ನಿಂತಿರುವಂತೆ ಇಲ್ಲಿ ಚಿತ್ರಿಸಲಾಗಿದ್ದು ಇದೊಂದು ಅಪೂರ್ವ ಸಂಯೋಜನೆಯಾಗಿದೆ. ಇಲ್ಲಿ ಕೆಂಪು ಗಾಢ ಹಸಿರು, ಗಾಢನೀಲಿ, ಗಾಢ ಕೆಂಪು ವರ್ಣಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಚಿತ್ರ-೫. ತೀರ್ಥಂಕರರು ಗೊಮ್ಮಟಾಕಾರದಲ್ಲಿ ನಿಂತಿರುವುದು

ಈ ಚಿತ್ರದಲ್ಲಿ ತೀರ್ಥಂಕರರೊಬ್ಬರು ಕಪ್ಪು ವರ್ಣದವರಾಗಿದ್ದು ಗೊಮ್ಮಟಾಕಾರದಲ್ಲಿ ನಿಂತಿರುವರು. ಇವರ ಎರಡೂ ಬದಿಯಲ್ಲೂ ಸ್ತ್ರೀಯರು ನಿಂತಿರುವಂತೆ ತೋರಿಸಲಾಗಿದೆ. ಈ ಚಿತ್ರದಲ್ಲಿ ಕಲಾವಿದನು ತನ್ನ ವರ್ಣಗಾರಿಕೆಯನ್ನು ಮೆರೆದಿದ್ದು ಕಪ್ಪು ವರ್ಣದಲ್ಲಿ ಚಿತ್ರಿಸಿರುವ ತೀರ್ಥಂಕರರ ಹಿಂದೆ ಕೆಂಪು ವರ್ಣವನ್ನು ತೋರಿಸಿದ್ದು ಕೆಂಪು ವರ್ಣದಲ್ಲಿ ತೋರಿಸಲಾಗಿರುವ ಸ್ತ್ರೀಯರ ಹಿಂದೆ ಕಪ್ಪು ವರ್ಣದ ಹಿನ್ನೆಲೆಯನ್ನು ತೋರಿಸಲಾಗಿದೆ. ವಿಶೇಷವೆಂದರೆ ಈ ಚಿತ್ರದಲ್ಲಿ ಚಿತ್ರಿಸಿರುವ ಸಾಮಾನ್ಯ ಸ್ತ್ರೀಯರು ಈ ಚಿತ್ರದಿಂದ ಆ ಕಾಲದ ಜೈನ ಧರ್ಮದ ಮಹಿಳೆಯ ವಸ್ತ್ರ

ವಿನ್ಯಾಸ ಶೃಂಗಾರ ಬಗೆಯನ್ನು ಗುರುತಿಸಬಹುದು. ಸುಂದರವಾಗಿ ಕಂಗೊಳಿಸುವ ಸ್ತ್ರೀಯರು ತನ್ನ ಕೂದಲಿಂದ ತುರುಬನ್ನು ಕಟ್ಟಿದ್ದು ಮಧ್ಯದಲ್ಲಿ ಹೂವನ್ನು ಮುಡಿದಿರುವಂತೆ ತೋರಿಸಲಾಗಿದೆ. ಇಲ್ಲಿ ಎಳೆಯಲಾಗಿರುವ ಬಾಹ್ಯ ರೇಖೆಗಳನ್ನು ಗಮಿನಿಸಿದಾಗ ಇವು ಬೇಲೂರಿನ ಶಿಲ್ಪ ಸುಂದರಿಯರನ್ನು ಬಿಂಬಿಸುತ್ತವೆ. ಇಲ್ಲಿ ಗಾಡಹಸಿರು, ಕಪ್ಪು, ಕೆಂಪು, ಹಳದಿ, ಗಾಡಕೆಂಪು, ಕಂದು ವರ್ಣಗಳನ್ನು ಬಳಸಿಕೊಂಡು ಕಲಾವಿದನು ಚಿತ್ರವನ್ನು ಸಂಪೂರ್ಣಗೊಳಿಸಿದ್ದಾನೆ.

ಚಿತ್ರ–೬. ಗುರು–ಶಿಷ್ಯರ ಚಿತ್ರ

ಈ ಚಿತ್ರವನ್ನು ತಾಡೋಲೆಯ ಎಡಬದಿಯಿಂದ ಮೊದಲಿಗೆ ಚಿತ್ರಿಸಲಾಗಿದ್ದು ಇಲ್ಲಿ ಜಿನ ಗುರುಗಳು ಪದ್ಮಾಸನವನ್ನು ಧರಿಸಿ ಕುಳಿತಿದ್ದು ಇವರ ಬಲಬದಿಗೆ ಇವರ ಶಿಷ್ಯನೊಬ್ಬನು ದಿಗಂಬರನಾಗಿಯೇ ಕುಳಿತಿರುವನು ಹಾಗೂ ಎರಡು ಬದಿಗಳಲ್ಲಿ ಚಿತ್ರ ದಿವ್ಯಾಸಗಳನ್ನು ತೋರಿಸಲಾಗಿದೆ. ಜಿನ ಗುರುಗಳು ಎದುರು ಮುಖವಾಗಿ ಕುಳಿತಿದ್ದು, ಪದ್ಮಾಸನಾರೂಢರಾಗಿ ಕುಳಿತಿರುವರು. ತನ್ನ ಎರಡು ಕೈಗಳನ್ನು ನಾಭಿಯ ಕೆಳಗೆ ತೊಡೆಯಮೇಲೆ ಜೋಡಿಸಿಕೊಂಡು ಕುಳಿತಿದ್ದು ಇವರ ಕೆಳಭಾಗದಲ್ಲಿ ಕೆಂಪು ವಸ್ತ್ರವನ್ನು ಕಾಣಬಹುದಾಗಿದೆ ಹಾಗೂ ಹಿನ್ನೆಲೆಯಲ್ಲಿ ಕುಳಿತಿರುವ ಪೀಠದ ವಿನ್ಯಾಸವಿದು ಕೆಂಪು ಹಾಗೂ ಹಸಿರು ವರ್ಣದ ಹಿನ್ನೆಲೆಯನ್ನು ತೋರಿಸಲಾಗಿರುವುದು. ಇವರ ಭುಜದ ಅಂಥದ ಹಿನ್ನೆಲೆಯಲ್ಲಿ ಚಾಮರಗಳನ್ನು ಎರಡೂ ಕಡೆಗಳಲ್ಲಿಯೂ ತೋರಿಸಲಾಗಿದೆ. ನೋಡುಗನ ಎಡಬದಿಯಲ್ಲಿ ಕುಳಿತಿರುವ ಶಿಷ್ಯನೂ ಸಹ ದಿಗಂಬರನಾಗಿ ತನ್ನ ಎರಡು ಕೈಗಳನ್ನು ಜೋಡಿಸಿಕೊಂಡು ಪದ್ಮಾಸನದಲ್ಲಿ ಚಿತ್ರಿಸಿದ್ದಾನೆ.

ಈ ಚಿತ್ರದ ಎರಡೂ ಬದಿಗಳಲ್ಲಿ ರೇಖಾವಿನ್ಯಾಸವಿದ್ದು ಎಡಬದಿಯಲ್ಲಿ ಯಾವುದೋ ಲಿಪಿಯಾಕಾರದ ರೇಖಾವಿನ್ಯಾಸವಿದೆ. ಇದರ ಬಲಬದಿಗೆ ಕೆಳಮುಖರೇಖೆಗಳ ಸಾಲುಗಳಿದ್ದು ಇದರ ಮಧ್ಯೆ ಅಡ್ಡರೇಖೆಗಳಿಂದ ವಿನ್ಯಾಸಗಳನ್ನು ರಚಿಸಲಾಗಿರುವುದು. ಬಲಬದಿಯ ವಿನ್ಯಾಸದಲ್ಲಿ ಕೆಳಮುಖ ಸರಳ ರೇಖೆಗಳಿದ್ದು ಮಧ್ಯದಲ್ಲಿ ಚೌಕಾಕಾರದ ವಜ್ರಾಕಾರದ ವಿನ್ಯಾಸಗಳನ್ನು ಸಹ ಕಾಣಬಹುದು. ಈ ಚಿತ್ರದಲ್ಲಿ ಕೆಂಪು, ಹಸಿರು, ಹಳದಿ, ಗಾಡ ಹಸಿರು, ಗಾಡ ಕೆಂಪು, ಕಂದು, ಕೆಂಪು ವರ್ಣಗಳೆ ಹೆಚ್ಚಾಗಿ ಕಂಡುಬರುತ್ತವೆ.

ಚಿತ್ರ–೭. ಗುರು–ಶಿಷ್ಯರ ಹಿತಭೋದನೆ

ಧವಳತ್ರಯದಲ್ಲಿ ಕಾಣಸಿಗುವ ಈ ವರ್ಣಚಿತ್ರವು ನೋಡಲು ಮನಮೋಹಕವಾಗಿದ್ದು ಹನ್ನೆರಡನೇ ಶತಮಾನದಲ್ಲಿ ರಚಿಸಿದ ಚಿತ್ರಗಳು ಇವು ಎಂದು ಅಚ್ಚರಿಯುಂಟಾಗುತ್ತದೆ. ಕಾರಣ ಈ ಚಿತ್ರಗಳಲ್ಲಿ ತ್ರಿ ಆಯಾಮದ ವರ್ಣಗಾರಿಕೆಯನ್ನು ಮಾಡಲಾಗಿರುವುದು ಕಂಡು ಬರುತ್ತದೆ. ಈ

ಚಿತ್ರದಲ್ಲಿ ಗುರುವು ಶಿಷ್ಯನಿಗೆ ಉಪದೇಶ ಮಾಡುವಂತೆ ತೋರುವುದು ಈ ಸನ್ನಿವೇಶವು ಆಧಿಪುರಾಣದ ಉಪಾಧ್ಯ ಪರಮೇಷ್ಠಿಯ ಹಿತಬೋಧನ ಸನ್ನಿವೇಶವಾಗಿದೆ. ದಿಗಂಬರ ಜಿನ ಗುರುಗಳು ಶಿಷ್ಯನಿಗೆ ಹಿತಬೋಧವನ್ನು ಮಾಡುತ್ತಿದ್ದು ನೋಡುಗರ ಎಡಬದಿಯಲ್ಲಿ ಗುರುವು ಪದ್ಮಾಸನದಲ್ಲಿ ಕುಳಿತಿದ್ದು ಕೈಯಲ್ಲಿ ಚಿನ್ಮುದ್ರೆಯನ್ನು ಹಿಡಿದುಕೊಂಡು ಏನನ್ನೋ ಬೋಧಿಸುವಂತೆ ತೋರಿಸಲಾಗಿದೆ. ಇವರ ಮುಂದೆ ಕೈಮುಗಿದ ಪದ್ಮಾಸನದಲ್ಲಿ ಕುಳಿತಿರುವ ಶಿಷ್ಯನಿದ್ದು ದ್ಯಾನಾಸಕ್ತನಾಗಿ ಉಪದೇಶವನ್ನು ಕೇಳುತ್ತಿರುವಂತೆ ಇಲ್ಲಿ ಚಿತ್ರಿಸಲಾಗಿದೆ.

ಹಿನ್ನೆಲೆಯಲ್ಲಿ ಕಪ್ಪುವರ್ಣವನ್ನು ತೋರಿಸಲಾಗಿದೆ. ಗುರು ಶಿಷ್ಯರನ್ನು ಸುವರ್ಣ ವರ್ಣದಲ್ಲಿ ತೋರಿಸಲಾಗಿದೆ. ತಲೆಗೂದಲನ್ನು ಕಪ್ಪಾಗಿ ತೋರಿಸಿದ್ದು ಗಾಡ ಕೆಂಪು ವರ್ಣದಿಂದ ಬಾಹ್ಯ ರೇಖೆಗಳನ್ನು ಎಳೆಯಲಾಗಿದೆ. ಇವರ ಎರಡು ಬದಿಗಳಲ್ಲಿ ಚೌಕಾಕಾರದ ಮಣಿಗಳಂತಹ ಸಾಲುಗಳನ್ನು ಹಾಗೂ ಕೆಳಮುಖವಾಗಿರುವ ಸರಳ ರೇಖೆಗಳೆದ್ದು ಇದರ ಮಧ್ಯೆ ಹಳದಿ ವರ್ಣವನ್ನು ಲೇಪಿಸಲಾಗಿದೆ. ಎಡಬದಿಯಲ್ಲಿ ಕೆಂಪು ವರ್ಣದ ನವಿಲೊಂದು ಹಿಂದಕ್ಕೆ ತಿರುಗಿ ಗುರು ಶಿಷ್ಯರನ್ನು ನೋಡುತ್ತಿರುವಂತೆ ಚಿತ್ರಿಸಿದ್ದು ತನ್ನ ಬಲಗಾಲನ್ನು ಮುಂದೆ ಇಟ್ಟು ಸಾಗುವಂತೆ ತೋರಿಸಲಾಗಿದೆ. ತಲೆಯ ಮೇಲೆ ಹಸಿರು ಪುಚ್ಚೆ ಹಳದಿ ರೆಕ್ಕೆಗಳು ಹಾಗೂ ಹಸಿರು ಪುಕ್ಕಗಳನ್ನು ಗುರು ಶಿಷ್ಯರ ಹಿಂದಿನಿಂದ ಬಲಬದಿಯವರೆಗೆ ಚಾಚಿರುವಂತೆ ಇಲ್ಲಿ ತೋರಿಸಲಾಗಿದ್ದು, ನವಿಲಿನಗರಿಯಲ್ಲಿರುವ ಕಣ್ಣಿನಾಕಾರವನ್ನು ಸಹ ಇಲ್ಲಿ ಕಲಾವಿದನು ಚಿತ್ರಿಸಿದ್ದಾನೆ. ಈ ಚಿತ್ರದ ಹಿಂದೆ ಗಾಡಕಪ್ಪು ವರ್ಣವನ್ನು ಲೇಪಿಸಿದ್ದಾನೆ. ಈ ಕಲಾಕೃತಿಯಲ್ಲಿ ಹಳದಿ, ಕೆಂಪು ತಿಳಿಗೆಂಪು, ಗಾಡ ಕೆಂಪು, ಗಾಡ ಹಸಿರು, ಕಂದು, ಕಪ್ಪು ವರ್ಣಗಳನ್ನು ಹೆಚ್ಚಾಗಿ ಇಲ್ಲಿ ಕಲಾವಿದನು ಪ್ರಯೊಗಿಸಿದ್ದು, ಹೊಯ್ಸಳ ಶೈಲಿಯ ರೇಖಾ ಪ್ರಾದಾನ್ಯತೆ ಇಲ್ಲಿ ವಿಜೃಂಭಿಸುತ್ತದೆ.

ಚಿತ್ರ–೮. ಉಪನ್ಯಾಸ ಪರಮೇಷ್ಠಿ ಗುರು ಶಿಷ್ಯರ ಚಿತ್ರ

ಈ ಚಿತ್ರವು ಆದಿಪುರಾಣದ ಉಪನ್ಯಾಸ ಪರಮೇಷ್ಠಿಗೆ ಸಂಬಂಧಿಸಿದ ಚಿತ್ರವಾಗಿದ್ದು, ಇಲ್ಲಿ ಗುರುಶಿಷ್ಯನಿಗೆ ಹಿತಬೋಧವನ್ನು ಮಾಡುವ ದೃಶ್ಯ ಇದಾಗಿದೆ. ಮೇಲಿನ ಚಿತ್ರದಂತೆ ಕಾಣುವ ಈ ಚಿತ್ರವು ಬಹುತೇಕ ಸಾಮ್ಯತೆಗಳನ್ನು ಹೊಂದಿದೆ. ಪದ್ಮಾಸನದಲ್ಲಿ ಕುಳಿತಿರುವ ದಿಗಂಬರ ಗುರುಶಿಷ್ಯರು ಸುವರ್ಣದಿಂದ ಕಂಗೊಳಿಸುತ್ತಿರುವರು. ಗುರುವು ಕೈಯಲ್ಲಿ ಚಿನ್ಮುದ್ರೆಯನ್ನು ಹಿಡಿದು ಶಿಷ್ಯಮನಿಗೆ ಹಿತವಚನವನ್ನು ಬೋಧಿಸುತ್ತಿರುವಂತೆ ಶಿಷ್ಯನು ಅತಿವಿನಯದಿಂದ ತನ್ನ ತಲೆಯನ್ನು ಬಾಗಿಸಿ ಕೈಗಳನ್ನು ಜೋಡಿಸಿಕೊಂಡು ಗುರುಗಳ ಉಪನ್ಯಾಸವನ್ನು ಪಡೆಯುತ್ತಿರುವಂತೆ ಇಲ್ಲಿ ಚಿತ್ರಿಸಲಾಗಿದೆ. ಎಡಬದಿಯಲ್ಲಿ ಲಿಪಿ ವಿನ್ಯಾಸದ ಚಿತ್ರವಿದ್ದು, ಕಪ್ಪುವರ್ಣದಿಂದ ರಚಿಸಲಾಗಿದೆ. ಇಲ್ಲಿ ಹೆಚ್ಚಾಗಿ ಹಳದಿ, ಗಾಡ ಹಸಿರು, ಕಪ್ಪು ಗಾಡಕೆಂಪು ವರ್ಣಗಳನ್ನು ಬಳಸಲಾಗಿದೆ.

ಚಿತ್ರ–೯. ಯಕ್ಷಿಣಿ ಮತ್ತು ಜಿನ ಗುರು

ಯಕ್ಷಿಣಿಯ ಬದಿಯಲ್ಲಿ ಕುಳಿತಿರುವ ಜಿನ ಗುರು ಈ ರೀತಿಯಲ್ಲಿ ಮೂರು ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದ್ದು, ಮೂರು ಒಂದೇ ತರನಾಗಿರದೆ ಮೂರು ಸಹ ಒಂದೊಂದು ಬಗೆಯಲ್ಲಿ ಇರುವುದನ್ನು ನಾವಿಲ್ಲಿಕಾಣಬಹುದಾಗಿದೆ. ಮೊದಲನೆಯ ಚಿತ್ರದಲ್ಲಿ ಯಕ್ಷಿಣಿಯ ನೋಡುಗನ ಎಡಭಾಗದಲ್ಲಿ ನಾಲ್ಕು ಬಾಹುಗಳನ್ನು ಹೊಂದಿ ಪದ್ಮಾಸನದಲ್ಲಿ ಕಿರೀಟದಾರಿಯಾಗಿ ಕುಳಿತಿದ್ದು ಬಲಬದಿಗೆ ನವಿಲೊಂದು ತನ್ನ ಬಲಗಾಲನ್ನು ಎತ್ತಿಕೊಂಡು ತನ್ನ ಪುಕ್ಕಗಳನ್ನು ಎತ್ತಿಕೊಂಡು ನಿಂತಿರುವಂತೆ ತೋರಿಸಲಾಗಿದ್ದು, ಇದರ ಬಲಬದಿಗೆ ಜಿನ ಗುರುವು ದಿಗಂಬರನಾಗಿ ಪದ್ಮಾಸನದಲ್ಲಿ ಕೂತು ತನ್ನ ಎರಡೂ ಕೈಗಳನ್ನು ಮುಗಿದುಕೊಂಡು ಕುಳಿತಹಾಗೆ ತೋರಿಸಲಾಗಿದೆ. ಇವರ ಎರಡೂ ಬದಿಯಲ್ಲು ವಿನ್ಯಾಸಗಳಿದ್ದು, ಎರಡೂ ಸಹ ಬೇರೆ ಬೇರೆಯಾಗಿ ವಿಶಿಷ್ಟ ವಿನ್ಯಾಸದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಯಕ್ಷಿಣಿಯ ಮೈಯಿ ಕೆಂಪಾಗಿದ್ದು ಸೊಂಟದಿಂದ ಕೆಳಭಾಗ ಉಡುಪು ಬಿಳಿಯ ವರ್ಣದ್ದಾಗಿರುವುದು ಹಚ್ಚ ಕಪ್ಪು, ಕೆಂಪು ಹಳದಿ ಗಾಡ ಕೆಂಪುವರ್ಣಗಳನ್ನು ಇಲ್ಲಿ ಕಾಣಬಹುದು.

ಮತ್ತೊಂದು ತಾಡೋಲೆಯ ಚಿತ್ರದಲ್ಲಿ ಎಡಬದಿಯಲ್ಲಿ ಜಿನ ಗುರುವು ಕುಳಿತಿದ್ದು ಇವರ ಮುಂದೆ ನವಿಲೊಂದು ತನ್ನ ಕಾಲುಗಳನ್ನು ನೆಲಕ್ಕೂರಿ ಪುಕ್ಕಗಳನ್ನು ಎತ್ತಿಕೊಂಡು ನಿಂತಿದ್ದು ಅದರ ಮುಂದೆ ಯಕ್ಷಿಣಿಯ ಶ್ವೇತ ವರ್ಣ ದವಳಾಗಿದ್ದು ಕೆಂಪುವರ್ಣದ ಕಚ್ಚೆಯನ್ನು ಧರಿಸಿದ್ದಾಳೆ. ಇಲ್ಲಿ ಎಲ್ಲಾ ಚಿತ್ರದಲ್ಲಿ ಯಕ್ಷಿಯಕ್ಷ ನಾಭಿಯಿಂದ ಮೇಲ್ಬಾಗವನ್ನು ನಗ್ನವಾಗಿ ತೋರಿಸಲಾಗಿದ್ದು ಆಭರಣ ಕಚಿತರಾಗಿ ತೋರಿಸಲಾಗಿದೆ. ನಾಲ್ಕು ಬಾಹುಗಳನ್ನು ಹೊಂದಿರುವ ಯಕ್ಷಿಯು ಹಿಂಬದಿಯ ಕೈಯಲ್ಲಿ ಆಯುಧಗಳನ್ನು ಹಿಡಿದಿದ್ದು ಮುಂಭಾಗದ ಕೈಯಲ್ಲಿ ಅಭಯ ಹಸ್ತವನ್ನು ಹಿಡಿದಂತೆ ತೋರಿಸಲಾಗಿದೆ. ಎಳೆದಂತೆ ಎರಡೂ ಪರಿಯಲ್ಲು ವಿನ್ಯಾಸದ ಚಿತ್ರಗಳಿದ್ದು ಕೆಂಪು, ಹಳದಿ, ಗಾಡ ಕೆಂಪು ಕಪ್ಪು ವರ್ಣಗಳನ್ನು ಇಲ್ಲಿ ಹೆಚ್ಚಾಗಿ ಬಳಸಲಾಗಿದೆ.

ಇನ್ನು ಮೂರನೇ ಯಕ್ಷಿ ಮತ್ತು ಗುರುವಿನ ಚಿತ್ರವು ಹಿಂದಿನ ಎರಡಕ್ಕಿಂತ ಭಿನ್ನವಾಗಿದೆ. ಈ ಚಿತ್ರದಲ್ಲಿ ಮಧ್ಯಭಾಗದಲ್ಲಿ ಯಕ್ಷಿಯನ್ನು ತೋರಿಸಲಾಗಿದ್ದು, ಶಾಮಲ ವರ್ಣದಿಂದ ರಚಿಸಲಾಗಿದೆ. ಈ ಕೆಯು ತನ್ನ ಎರಡೂ ಕಾಲುಗಳನ್ನು ಮಡಚಿಕೊಂಡು ಪಾದಗಳನ್ನು ಕೂಡಿಸಿಕೊಂಡು ಕೂತಿರುವಂತೆ ತೋರಿಸಲಾಗಿದೆ. ಯಕ್ಷಿಯ ಬಲಬದಿಯಲ್ಲಿ ಸಿಂಹವು ತನ್ನ ಮುಂದಿನ ಎರಡೂ ಕಾಲುಗಳನ್ನು ಎತ್ತಿ ನಿಂತಿರುವಂತೆ ಇದರ ಹಿಂದೆ ಕಪ್ಪುವರ್ಣದ ವ್ಯಕ್ತಿಯೊಬ್ಬ ನಿಂತಿದ್ದು ಅಸ್ಪಷ್ಟವಾಗಿದೆ ಹಾಗೂ ಯಕ್ಷಿಯ ಎಡಬದಿಯಲ್ಲಿ ಜಿನ ಗುರುವು ಕುಳಿತು ಪ್ರಾರ್ಥಿಸುವಂತೆ ತೋರಲಾಗಿದ್ದು ಕೊರಳಿಗೆ ಹಾಗೂ ಸೊಂಟಕ್ಕೆ ಏನನ್ನೋ ಕಟ್ಟಿರುವಂತೆ ತೋರಿಸಲಾಗಿದೆ. ಇವರ ಹಿಂಬದಿಯಲ್ಲಿ ಮರವನ್ನು

ತೋರಿಸಲಾಗಿದ್ದು. ಕಂದು, ನೀಲು, ಗಾಡ ಹಸಿರು, ಎಲೆಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಇಲ್ಲಿಯೂ ಸಹ ಎಡ ಮತ್ತು ಬಲಬದಿಗಳಲ್ಲಿ ರೇಖಾ ವಿನ್ಯಾಸ ಚಿತ್ರಗಳಿದ್ದು ಕಪ್ಪು, ಕೆಂಪು, ಬಿಳಿ, ಕಂದು, ಗಾಡ ನೀಲಿ, ಗಾಡ ಹಸಿರು ವರ್ಣಗಳನ್ನು ಇಲ್ಲಿ ತೋರಿಸಲಾಗಿದೆ.

ಚಿತ್ರ-೧೦. ಯಕ್ಷಿ ಮತ್ತು ಸೇವಕಿಯರು:

ಧವಳತ್ರಯದ ಸಚಿತ್ರ ವರ್ಣಚಿತ್ರಗಳ ತಾಡೋಲೆಯ ಮೇಲೆ ರಚಿಸಲಾಗಿರುವ ಯಕ್ಷಿ ಮತ್ತು ಸೇವಕಿಯರ ನಾಲ್ಕು ಚಿತ್ರಗಳನ್ನು ನಾವಿಲ್ಲಿ ಕಾಣುತ್ತೇವೆ. ಯಕ್ಷಿಯರೆಂದರೆ ಪ್ರತಿಯೊಬ್ಬ ತೀರ್ಥಂಕರಿಗೆ ಇರುವ ಶಾಸನ ಹೆಣ್ಣು ದೇವತೆಯರು ಇವರುಗಳೆಂದರೆ, ಚಕ್ರೇಶ್ವರಿ, ರೋಹಿಣಿ, ಪ್ರಜ್ಞಪ್ತಿ, ವಜ್ರ ಶೃಂಖಳೆ, ಪುರುಷದತ್ತೆ ಮನೋವೇಗಿ, ಕಾಶಿ, ಜ್ವಾಲಮಾಲಿನಿ, ಮಹಾಕಾಶಿ, ಮಾನವಿ, ಗೌರಿ, ಗಾಂಧಾರಿ, ವೈರೋಟಿ, ಅನಂತಮತಿ, ಮಾನಸಿ, ಮಹಾಮಾನಸಿ, ಜಯೆ ವಿಜಯೆ, ಅಪರಾಜಿತೆ, ಬಹುರೂಪಿಣಿ, ಚಾಮುಂಡಿ, ಅಮ್ರ ಕೂಷ್ಮಾಂಡಿ, ಪದ್ಮಾವತಿ, ಸಿದ್ಧಾಯಿನಿ ಎಂದು ವರ್ತಮಾನ ಜಿನರ ಚತುರ್ವಿಂಶತಿ ಯಕ್ಷಿಯರನ್ನು[೩೯] ನಾವಿಲ್ಲಿ ನೆನೆಯಬಹುದಾಗಿದೆ. ಆದರೆ ಈ ಚಿತ್ರಗಳಲ್ಲಿ ಅದರ ವಾಹನಗಳು ಕಾಣದಿರುವುದರಿಂದ ಇವುಗಳನ್ನು ಗುರುತಿಸಲಾಗುತ್ತಿಲ್ಲ.

ಮೊದಲನೆಯ ಚಿತ್ರದಲ್ಲಿ ನಾಲ್ಕು ಬುಜಗಳನ್ನು ಹೊಂದಿರುವ ಯಕ್ಷಿ ಪದ್ಮಾಸನದಲ್ಲಿ ಕುಳಿತಿದ್ದು, ಇವಳ ಎರಡೂ ಬದಿಯಲ್ಲು ಚಾಮರ ಹಿಡಿದು ನಿಂತಿರುವ ಸೇವಕಿಯರನ್ನು ಕಾಣಬಹುದಾಗಿದೆ. ಇವರ ಸುತ್ತ ನಾಲ್ಕು ಭುಜಗಳುಳ್ಳ ದುಂಡಾದ ಕಮಾನಿದ್ದು ಇದರ ಹೊರಭಾಗದಲ್ಲಿ ಮರಗಿಡಗಳನ್ನು ತೋರಿಸಲಾಗಿದೆ. ಯಕ್ಷಿಯು ನಾಲ್ಕು ಭುಜಗಳನ್ನು ಹೊಂದಿದ್ದು ಹಿಂದಿನ ಕೈಗಳಲ್ಲಿ ಆಯುಧಗಳನ್ನು ಹಿಡಿದಿರುವುದು ಕಾಣುತ್ತದೆ. ಎರಡೂ ಬದಿಯಲ್ಲಿ ನಿಂತಿರುವ ಚಾಮರ ಹಿಡಿದ ಸೇವಕಿಯರು ತಮ್ಮ ಮುಖಗಳನ್ನು ಯಕ್ಷಿಯನ್ನು ನೋಡದೆ ಬದಿಗೆ ತಿರುಗಿಸಿಕೊಂಡು ನಿಂತಿದ್ದಾರೆ. ಸೇವಕಿಯರು ವಸ್ತ್ರಗಳನ್ನು ಧರಿಸಿ ಒಂದು ಕಾಲನ್ನು ಮಡಚಿ ಇನ್ನೊಂದು ಕಾಲ ಮೇಲೆ ಬಾರಬಿಟ್ಟು ನಿಂತಿದ್ದಾರೆ. ಇವರನ್ನು ಗಮನಿಸುತ್ತಿದ್ದರೆ ಬೇಲೂರಿನ ಶಿಲ್ಪ ಸುಂದರಿಯರು ನೆನಪಾಗದಿರದು. ಇನ್ನು ಉಳಿದಂತೆ ಚಿತ್ರದ ಎರಡೂ ಬದಿಯಲ್ಲಿ ಬದಿಯ ಪಟ್ಟಿಕೆಗಳಿದ್ದು ಬಲಬದಿಯಲ್ಲಿ ಲಿಪಿಯಾಕಾರದ ವಿನ್ಯಾಸವಿದೆ. ಇಲ್ಲಿ ಕೆಂಪು, ಬಿಳಿ, ಹಳದಿ, ಹಸಿರು ಗಾಡ ಹಸಿರು ಗಾಡಕಪ್ಪು ಕಂದುವರ್ಣಗಳನ್ನು ಬಳಸಲಾಗಿದೆ.

ಎರಡನೇ ಚಿತ್ರದಲ್ಲಿ ಮೇಲಿನ ಚಿತ್ರದಂತೆಯೇ ವಿನ್ಯಾಸವಿದ್ದು ಇಲ್ಲಿ ವರ್ಣಗಾರಿಕೆಯನ್ನು ಬದಲಾಯಿಸಲಾಗಿದೆ. ಯಕ್ಷಿ ಕೆಂಪಾಗಿದ್ದು ಆಕೆ ಧರಿಸಿರುವ ವಸ್ತ್ರಗಳ ಶ್ವೇತವರ್ಣದವು. ಇವರ

---

೩೯. ಡಾ. ಸರಸ್ವತಿ ವಿಜಯ ಕುಮಾರ್ : ಜೈನ ಪಾರಿಭಾಷಿಕ ಪದವಿದರ ಕೋಶ, ಪು-೨೫೫

ಹಿನ್ನೆಲೆಯನ್ನು ಸಹ ಶ್ವೇತವರ್ಣದಿಂದ ರಚಿಸಲಾಗಿದ್ದು ಇನ್ನುಳಿದಂತೆ ಎಲ್ಲವು ಮೊದಲ ಚಿತ್ರದ ಸಾಮ್ಯತೆಯನ್ನು ಹೊಂದುತ್ತದೆ. ಮೂರನೇ ಚಿತ್ರವು ಸಹ ಮೊದಲನೆ ಮತ್ತು ಎರಡನೇ ಚಿತ್ರದಂತೆ ಇದ್ದು ಮೊದಲ ಚಿತ್ರದ ಯಥಾವತ್ತು ವರ್ಣಗಾರಿಕೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಉಳಿದಂತೆ ಯಾವುದೆ ವ್ಯತ್ಯಾಸಗಳು ಈ ಚಿತ್ರದಲ್ಲಿ ಕಂಡುಬರುವುದಿಲ್ಲ.

ನಾಲ್ಕನೇ ಚಿತ್ರವು ಕೊಂಚ ಭಿನ್ನವಾಗಿದ್ದು ಇಲ್ಲಿ ವರ್ಣಗಾರಿಕೆ, ವಿನ್ಯಾಸ, ಹಿನ್ನೆಲೆ, ಸಂಯೋಜನೆಗಳೆಲ್ಲವು ಬೇರೆ ರೀತಿಯಾಗಿ ತೋರಿಸುತ್ತವೆ. ಈ ಚಿತ್ರದಲ್ಲಿ ಯಕ್ಷಿಯು ನಾಲ್ಕು ಭುಜಗಳನ್ನು ಹೊಂದಿದ್ದು ಪದ್ಮಾಸನದಲ್ಲಿ ಕಿರೀಟದಾರಿಯಾಗಿ ಕುಳಿತಿದ್ದಾಳೆ. ಹಿಂದಿನ ಎರಡೂ ಕೈಗಳಲ್ಲೂ ಆಯುಧಗಳಿದ್ದು ಇಬ್ಬರು ಸೇವಕಿಯರು ಚಾಮರ ಹಿಡಿದು ನಿಂತಿದ್ದಾರೆ. ಯಕ್ಷಿಯು ಪೀಠದ ಮೇಲೆ ಕುಳಿತಿದ್ದು ಹಿನ್ನೆಲೆಯಲ್ಲಿ ವೃತ್ತಾಕಾರದ ಹೂಬಳ್ಳಿಯ ವಿನ್ಯಾಸವನ್ನು ಮಾಡಲಾಗಿದ್ದು ಎಡಬದಿಯಲ್ಲಿ ಮರಹೊಂದನ್ನು ತೋರಿಸಲಾಗಿದೆ. ಉಳಿದಂತೆ ಎರಡೂ ಬದಿಯಲ್ಲೂ ಬದಿಯ ಪಟ್ಟಿಗಳನ್ನು ರಚಿಸಲಾಗಿದೆ. ಇಲ್ಲಿ ಹೆಚ್ಚಾಗಿ, ಕೇಸರಿ, ಹಳದಿ, ಕೆಂಪು, ಹಸಿರು, ಗಾಡ ಹಸಿರು, ಕಂದುವರ್ಣಗಳನ್ನು ಇಲ್ಲಿ ಲೇಪಿಸಲಾಗಿದೆ.

ಚಿತ್ರ-೧೧. ಷಣ್ಮುಕ ಯಕ್ಷ

೨೪ ತೀರ್ಥಂಕರರಿಗೂ ಒಬ್ಬೊಬ್ಬರಂತೆ ಇಪ್ಪತ್ತನಾಲ್ಕು ಮಂದಿ ಶಾಸನ ಯಕ್ಷರನ್ನು ಕಾಣಬಹುದು. ಇದರಲ್ಲಿ ಷಣ್ಮುಕ ಯಕ್ಷನು ಹದಿಮೂರನೇ ಯಕ್ಷನಾಗಿದ್ದು ಇವನ ವರ್ಣ ಹರಿತ, ಇವನ ವಾಹನ ಮಯೂರ ಹನ್ನೆರಡು ಭುಜಗಳನ್ನು ಹೊಂದಿರುತ್ತಾನೆ. ಇವನು ತ್ರಿಮುಖನಾಗಿರುತ್ತಾನೆ. ಈ ಚಿತ್ರದಲ್ಲಿ ಎಡದಿಂದ ಕೊನೆಯಲ್ಲಿ ಯಕ್ಷನ ಚಿತ್ರವಿದ್ದು ಇವನಿಗೆ ನಾಲ್ಕು ಭುಜಗಳನ್ನು ಕಲಾವಿದ ತೋರಿಸಿದ್ದಾನೆ. ಎರಡೂ ಕಾಲುಗಳನ್ನು ಮಡಚಿ ಬಲಗಾಲನ್ನು ಅಡ್ಡಲಾಗಿ ಹಾಗೂ ಎಡಗಾಲನ್ನು ಮಡಚಿ ಮೇಲಕ್ಕೆತ್ತಿ ಕುಳಿತಂಥಿದ್ದು ಹಿಂದಿನ ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾನೆ. ಯಕ್ಷಿಯ ಎಡಭಾಗದಲ್ಲಿ ನವಿಲುಗರಿಯ ವಿನ್ಯಾಸವಿದ್ದು ಹಳದೀ ಹಾಗೂ ಕೆಂಪು ವರ್ಣದಿಂದ ಸಿಂಗರಿಸಲಾಗಿದೆ. ಇದರ ಎಡಬದಿಯಲ್ಲಿ ಉದ್ದ ಪಟ್ಟಿಕೆಯು ಇದ್ದು ಲಿಪಿಯಾಕಾರದ ವಿನ್ಯಾಸವನ್ನು ಕಾಣಬಹುದಾಗಿದೆ. ಇಲ್ಲಿ ಹಳದಿ, ಕೆಂಪು, ಕಂದು, ಕಪ್ಪು ವರ್ಣಗಳನ್ನು ಹೆಚ್ಚಾಗಿ ಬಳಸಲಾಗಿದೆ.

ಚಿತ್ರ-೧೨. ಕುಬೇರ ಯಕ್ಷ

ಈ ಧವಳತ್ರಯದ ವರ್ಣಚಿತ್ರವು ಸುಂದರವಾಗಿದ್ದು, ಈ ಯಕ್ಷನನ್ನು ಕುಬೇರ ಯಕ್ಷ ಎಂದು ಕರೆಯುತ್ತಾರೆ. ೧೯ನೇ ಯಕ್ಷ ಇವನಾಗಿದ್ದು ಇವನ ಲಾಂಚನ ಆನೆ ಈ ಚಿತ್ರದಲ್ಲಿ ಕುಬೇರ ಯಕ್ಷನು ಮಂಡಿಯನ್ನು ಮಡಚಿ ಕುಕ್ಕರ ಕಾಲಲ್ಲಿ ಕುಳಿತಿದ್ದು ಬಲಗೈಯಲ್ಲಿ ಚಿನ್ಮುದ್ರೆಯನ್ನು ಧರಿಸಿದ್ದಾನೆ.

ಇವನ ಬಲಬದಿಯಲ್ಲಿ ಆನೆಯೊಂದು ತನ್ನ ಪುಷ್ಪವನ್ನು ನೆಲಕ್ಕೆ ಊರಿಕೊಂಡು ಯಕ್ಷನಿಗೆ ಬೆನ್ನುಮಾಡಿ ಕುಳಿತಿದೆ. ಹಿಂಬದಿಯಲ್ಲಿ ಎರಡು ವೃಕ್ಷಗಳನ್ನು ತೋರಿಸಲಾಗಿದ್ದು, ಹಿನ್ನೆಲೆಯನ್ನು ಕೆಂಪುವರ್ಣದಿಂದ ತೋರಿಸಲಾಗಿದೆ. ಎರಡೂ ಬದಿಯಲ್ಲಿಯೂ ರೇಖ್ಯಾ ವಿನ್ಯಾಸಗಳಿದ್ದು ಕೆಂಪು, ಹಳದಿ, ಹಸಿರು, ಕಂದು, ಕಪ್ಪು ವರ್ಣಗಳನ್ನು ಇಲ್ಲಿ ತೋರಿಸಲಾಗಿದೆ.

ಚಿತ್ರ-೧೩. ಮಹಾಯಕ್ಷ

ಮಹಾಯಕ್ಷ ಈತನು ಅಜಿತನಾಥನ ಯಕ್ಷನಾಗಿದ್ದು ರೋಹಿಣೆ ಯಕ್ಷಿಣಿಯಾಗಿದ್ದಾಳೆ. ಮಹಾಯಕ್ಷನ ವಾಹನ ಗಜ ಬಣ್ಣ ಸುವರ್ಣ ಭುಜ ಸಂಖ್ಯೆ ಎಂಟು ಖಡ್ಗ, ದಂಡ, ಪರಶು, ವರದ, ಚಕ್ರ, ತ್ರಿಶೂಲ, ಕಮಲ, ಅಂಕುಶ ಇವುಗಳು ಇವರ ಆಯುಧಗಳು ಈ ಚಿತ್ರವು ನೋಡಲು ಮನಮೋಹಕವಾಗಿದ್ದು ತುಂಬಾ ಪ್ರೌಢ ರೇಖಾ ವಿನ್ಯಾಸಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ಚಿತ್ರದಲ್ಲಿ ಮಹಾಯಕ್ಷನು ಬಲಗಾಲನ್ನು ನೀಳವಾಗಿ ಕೆಳಗಿರಿಸಿ ಎಡಗಾಲನ್ನು ಮಡಿಚಿಕೊಂಡು ಕೂತಿದ್ದಾನೆ. ಸರ್ವ ಆಭರಣ ಕಚಿತನಾಗಿರುವ ಮಹಾಯಕ್ಷನು ನಾಲ್ಕು ಬಾಹುಗಳನ್ನು ಹೊಂದಿರುವನು. ಹಿಂಬದಿಯ ಹಸ್ತಗಳಲ್ಲಿ ಆಯುಧಗಳನ್ನು ಹಿಡಿದು ಗಜನ ಮೇಲೆ ಕುಳಿತಿರುವಂತೆ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಎಡಬದಿಯಲ್ಲಿ ಲಿಪಿಯ ರೇಖಾ ವಿನ್ಯಾಸ ಹಾಗೂ ಬಲಬದಿಯ ಪಟ್ಟಿಕೆಯಲ್ಲಿಯೂ ಜಾಮೀತಿಕ ರೇಖಾ ವಿನ್ಯಾಸಗಳನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ರೇಖಾ ವಿನ್ಯಾಸವು ಪ್ರೌಢವಾಗಿದ್ದು ಆಭರಣ ಶೈಲಿಯನ್ನು ನೋಡುತ್ತಿದ್ದರೆ, ಹೊಯ್ಸಳರ ಶೈಲಿಯು ಕಣ್ಮುಂದೆ ರಾಚಿದಂತಾಗುವುದು. ಕೆಂಪು, ಗಾಢಗೆಂಪು, ಹಳದಿ, ಹಸಿರು, ಕಪ್ಪು ವರ್ಣಗಳನ್ನು ಇಲ್ಲಿ ಹೆಚ್ಚಾಗಿ ಬಳಸಲಾಗಿದೆ.

ಚಿತ್ರ-೧೪. ಮಹಾಮಾನಸೀ ಯಕ್ಷಿ

ಮಹಾಮಾನಸೀ ಯಕ್ಷಿಯ ಶಾಂತಿನಾಥರ ಯಕ್ಷಿಯಾಗಿದ್ದು ಇವರ ಯಕ್ಷ ಗರುಡು ಮಹಾಮಾನಸೀ ಯಕ್ಷಿಯ ವಾಹನ ಮಯೂರ ವರ್ಣ ಸುವರ್ಣ ನಾಲ್ಕು ಬಾಹುಗಳನ್ನು ಹೊಂದಿದ್ದು ಫಲ, ಚಕ್ರ, ಖಡ್ಗ, ವರದ ಎಂಬ ನಾಲ್ಕು ಆಯುಧಗಳನ್ನು ಹಿಡಿದಿರುತ್ತಾಳೆ. ಮಹಾಮಾನಸೀ ಯಕ್ಷಿಯನ್ನು ಕಲಾವಿದನು ಸೂಕ್ಷ್ಮವಾಗಿ ಚಿತ್ರಿಸಿದ್ದು ರೇಖಾವಿನ್ಯಾಸ ಪ್ರೌಢಿಮೆಯನ್ನು ಮೆರೆದಿದೆ. ಈ ಚಿತ್ರದಲ್ಲಿ ಯಕ್ಷಿಯು ನಾಲ್ಕು ಬಾಹುಗಳನ್ನು ಹೊಂದಿದ್ದು, ಕಿರೀಟಧಾರಿಯಾಗಿ ನವಿಲಿನ ಮೇಲೆ ಕುಳಿತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಮಯೂರ ತನ್ನ ಬಲಬದಿಗೆ ತಿರುಗಿ ಯಕ್ಷಿಯನ್ನು ನೋಡುತ್ತಿರುವಾಗಿದುದ್ದು ಯಕ್ಷಿಯ ಎರಡೂ ಕಡೆಗೆ ನವಿಲಿನ ಗರಿಗಳನ್ನು ತೋರಿಸಲಾಗಿದೆ. ಯಕ್ಷಿಯು ನಾಭಿಯಿಂದ ಮೇಲೆ ನಗ್ನಳಾಗಿದ್ದು ಕೆಂಪು ವರ್ಣದಿಂದ ಕಂಗೊಳಿಸುತ್ತಿರುವಳು. ಈ

ಚಿತ್ರದಲ್ಲಿ ಕೆಂಪು, ಹಸಿರು, ಹಳದಿ, ಕಪ್ಪು, ಕಂದು ವರ್ಣಗಳನ್ನು ಪ್ರಮುಖವಾಗಿ ಬಳಸಲಾಗಿದ್ದು, ಚಿತ್ರವು ನೋಡಲು ಮನಮೋಹಕವಾಗಿದೆ.

ಚಿತ್ರ–೧೫. ಜ್ವಾಲಾಮಾಲಿನೀ ಯಕ್ಷಿ

ಜ್ವಾಲಾಮಾಲಾ ಯಕ್ಷಿಯು ಎಂಟನೇ ತೀರ್ಥಂಕರರಾದ ಚಂದ್ರಪ್ರಭರ ಯಕ್ಷಿಯಾಗಿದ್ದು ಇವರ ಯಕ್ಷ ಶ್ಯಾಮ ಜ್ವಾಲಾಮಾಲಿನೀ ಯಕ್ಷಿಯು ದಿಗಂಬರ ಯಕ್ಷಿಯಾಗಿದ್ದು ಇವರ ವಾಹನ ಮಹಿಷಿ, ಶ್ವೇತ ವರ್ಣ ಎಂಟು ಭುಜ ಚಕ್ರ, ಧನುಷ್, ಪಾಶ, ಗುರಾಣಿ, ತ್ರಿಶೂಲ, ಬಾಣ, ಮತ್ಸ್ಯ ಕತ್ತಿ, ಖಡ್ಗ, ಮುದ್ಗರ ಫಲಕ ಪರಶು ಇವು ಇವರ ಆಯುಧಗಳಾಗಿವೆ.

ಈ ಚಿತ್ರವು ನೋಡಲು ಅಚ್ಚರಿಯನ್ನು ಉಂಟುಮಾಡುವುದು ಕಾರಣ ಹನ್ನೆರಡನೇ ಶತಮಾನದಲ್ಲಿ ರಚಿಸಿದ ಈ ಚಿತ್ರದಲ್ಲಿಯ ವರ್ಣಗಳು ಇನ್ನೂ ತನ್ನ ಪ್ರಕರತೆಯನ್ನು ಕಳೆದುಕೊಳ್ಳದೇ ಎಷ್ಟು ನಾಜೂಕಾಗಿವೆ ಎಂದು ಈ ಯಕ್ಷಿಯು ತನ್ನ ಬಲಗಾಲನ್ನು ಮಡಚಿ ಎಡಗಾಲನ್ನು ಕೆಳಗೆ ಚಾಚಿ ಕುಳಿತಿರುವಂತಿದ್ದು ತನ್ನ ಬಲಭಾಗಕ್ಕೆ ದಿಟ್ಟಿಸಿ ನೋಡುತ್ತಿರುವಂತೆ ಚಿತ್ರ ರಚಿಸಲಾಗಿದೆ. ನಾಭಿಯಿಂದ ನಗ್ನನಾಗಿರುವ ಈ ದೇವಿಯು ಸಕಲಾಭರಣ ಭೂಷಿತಳಾಗಿದ್ದಾಳೆ. ತನ್ನ ನಾಲ್ಕು ಬಾಹುಗಳಲ್ಲು ಆಯುಧಗಳನ್ನು ಹಿಡಿದ ಮಹಿಷಿಯ ಮೇಲೆ ಕುಳಿತಿರುವಂತೆ ಚಿತ್ರವನ್ನು ಚಿತ್ರಿಸಲಾಗಿದೆ. ಇಲ್ಲಿ ಕೆಂಪು, ಹಳದಿ, ಗಾಢ ಕೆಂಪು, ಕಪ್ಪು, ಬಣ್ಣಗಳನ್ನು ಬಳಸಲಾಗಿದ್ದು ರೇಖಾವಿನ್ಯಾಸವು ಹೊಯ್ಸಳ ಶೈಲಿಯನ್ನು ಹೋಲುತ್ತದೆ.

II ವಿನ್ಯಾಸಗಳ ಚಿತ್ರಗಳು

ಚಿತ್ರ–೧. ವೃತ್ತಾಕಾರದ ವಿನ್ಯಾಸಗಳು

ಧವಳ ತ್ರಯಗಳಲ್ಲಿಯ ಸಚಿತ್ರ ವರ್ಣಚಿತ್ರಗಳಲ್ಲಿ ದೊರೆಯುವ ವಿನ್ಯಾಸಗಳು ವಿಶೇಷವಾಗಿದ್ದು ಇವನ್ನು ಗ್ರಂಥದ ವಿಷಯಗಳ ಬೇರ್ಪಡಿಸಲು ಹಾಗೂ ವ್ಯಕ್ತಿ ಚಿತ್ರಗಳಿಗೂ ಮತ್ತು ವಿಷಯಗಳು ಒಂದಕ್ಕೊಂದು ಕೂಡದಂತೆ ಸುಂದರವಾಗಿ ಕಾಣಲು ಕೆಳಮುಖ ರೇಖೆಗಳನ್ನು ಬಳಸಿಕೊಂಡು ಅವುಗಳಲ್ಲಿ ವಿನ್ಯಾಸ ಮಾಡುವುದು ಹಾಗೂ ಈ ರೇಖೆಗಳ ಮಧ್ಯದಲ್ಲಿ ವೃತ್ತಾಕಾರಗಳನ್ನು ಬಳಸಿ ಅದರಲ್ಲಿ ವಿನ್ಯಾಸಗಳನ್ನು ರಚಿಸುವುದು ಹೆಚ್ಚಾಗಿ ಕಂಡು ಬರುತ್ತವೆ. ಈ ರೀತಿಯ ವಿನ್ಯಾಸಗಳನ್ನು ಒಂದು ತಾಡೋಲೆಯಲ್ಲಿ ಎರಡರಿಂದ ಐದು ಬಗೆಯಲ್ಲಿ ಚಿತ್ರಗಳನ್ನು ಕಾಣಬಹುದು.

ವೃತ್ತಾಕಾರದ ಮೂರು ವಿನ್ಯಾಸಗಳು ದೊರೆತಿದ್ದು ಇದರಲ್ಲಿ ಮೊದಲನೆಯ ವಿನ್ಯಾಸದಲ್ಲಿ ಎರಡೂ ಬದಿಯಲ್ಲೂ ಕೆಳಮುಖ ರೇಖೆಗಳಿದ್ದು ಅವುಗಳಲ್ಲಿ ತ್ರಿಭುಜಾಕಾರದ ವಿನ್ಯಾಸವನ್ನು

ಕಾಣಬಹುದಾಗಿದೆ. ಇದರ ಮಧ್ಯಭಾಗದಲ್ಲಿ ನಾಲ್ಕು ವೃತ್ತಾಕಾರಗಳು ಒಂದರೊಳಗೊಂದರಂತೆ ಇದ್ದು ಗಾಢ ಹಸಿರು ತಿಳಿ ಹಸಿರು, ಹಳದಿ, ಕೆಂಪು ವರ್ಣದಲ್ಲಿವೆ. ಇದರ ಮಧ್ಯಭಾಗದಲ್ಲಿ ತಾವರೆಯಾಕಾರದ ಹೂವಿನ ಜಾಮೀತಿಕ ಚಿತ್ರವಿದ್ದು ಇದನ್ನು ರಚಿಸಲು ಕಲಾವಿದನು ಕೈವಾರ ರೀತಿಯ ಉಪಕರಣವನ್ನು ಬಳಸಿಕೊಂಡು ರಚಿಸಿರಬಹುದೆಂದು ಊಹಿಸಬಹುದು. ಇದರಿಂದ ಆ ಕಾಲದಲ್ಲಿ ರೇಖಾಗಣಿತದ ಉಪಯೋಗವು ಕಲಾವಿದನಲ್ಲು ಇತ್ತು ಎಂಬುದು ತಿಳಿದುಬರುತ್ತದೆ. ಈ ಚಿತ್ರದಲ್ಲಿ ಹಸಿರು, ಕೆಂಪು, ಹಳದಿ, ಗಾಢ ಹಸಿರು ಹಾಗೂ ಗಾಢ ಕೆಂಪು ವರ್ಣಗಳನ್ನು ಕಾಣಬಹುದಾಗಿದೆ.

ಎರಡನೇ ಚಿತ್ರವು ನೋಡುಗನ ಬಲಭಾಗದ ಮೂಲೆಯಂತು ಮುಕ್ಕಾಗಿದ್ದು ಇದೊಂದು ಶ್ರೇಷ್ಟವಾದ ಜಾಮೀತಿಕ ವಿನ್ಯಾಸವಾಗಿದೆ. ಈ ಚಿತ್ರವು ವೃತ್ತಾಕಾರದಲ್ಲಿದ್ದರೂ ಸಹ ಷಡ್ಬಾಹುಗಳನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ರಂಗಗಳಿದ್ದು ಮೊದಲೆರಡು ವೃತ್ತದಲ್ಲಿ ಕಪ್ಪು ಹಾಗೂ ಹಳದಿ ವರ್ಣವನ್ನು ಲೇಪಿಸಲಾಗಿದ್ದು ಮೂರನೇ ರಂಗದಲ್ಲಿ ಐದು ಧಳಗಳ ಆರು ಕಮಲಾಕಾರದ ಹೂಗಳನ್ನು ರಚಿಸಿದ್ದು ಮಧ್ಯರಂಗದಲ್ಲಿ ವೃತ್ತಾಕಾರದ ಕಪ್ಪು ವರ್ಣವಿದ್ದು ಇದರ ಮಧ್ಯದಲ್ಲಿ ಚೂಪಾದ ತಾವರೇ ಧಳಗಳುಳ್ಳ ಜಾಮೀತಿಕ ತಾವರೇ ಹೂವನ್ನು ರಚಿಸಲಾಗಿದೆ. ಎರಡೂ ಬದಿಯಲ್ಲಿಯೂ ತ್ರಿಭುಜಾಕಾರದ ವಿನ್ಯಾಸವನ್ನು ಕೆಳಮುಖವಾಗಿರುವ ರೇಖೆಗಳ ಮಧ್ಯದಲ್ಲಿ ರಚಿಸಲಾಗಿದೆ. ಈ ಚಿತ್ರವು ವಿಶಿಷ್ಟವಾಗಿದ್ದು ಇಲ್ಲಿ ತಿಳಿನೀಲಿ, ಗಾಢ ಕೆಂಪು, ಹಳದಿ ಹಾಗೂ ಕಪ್ಪು ವರ್ಣಗಳನ್ನು ಬಳಸಿ ಸಿಂಗರಿಸಲಾಗಿದೆ.

ಇನ್ನು ಮೂರನೇ ಚಿತ್ರದಲ್ಲಿ ಮೊದಲನೆಯ ಹಾಗೂ ಎರಡನೆಯ ಎರಡೂ ರೀತಿಯ ವಿಭಿನ್ನ ವಿನ್ಯಾಸವನ್ನು ಬಳಸಿಕೊಂಡು ಅದರಲ್ಲಿ ವೃತ್ತಾಕಾರದ ಮೇಲೆ ಸ್ವಲ್ಪ ಣಾಗದಷ್ಟು ಷಡ್ಭುಜಗಳುಳ್ಳ ವಿನ್ಯಾಸವು ತಾಗಿರುವಂತೆ ತೋರಿಸಲಾಗಿದೆ. ಮೊದಲ ವೃತ್ತದಲ್ಲಿ ಕಮಲದ ಹೂವಿನ ಚಿತ್ರದ ಬದಿ ನೋಟವನ್ನು ಚಿತ್ರಿಸಿದ್ದು ಎರಡನೇ ಚಿತ್ರದಲ್ಲಿ ಐದು ದಳಗಳುಳ್ಳ ಆರು ಹೂಗಳನ್ನು ಹಾಗೂ ಅದರ ಕಾಂಡವನ್ನು ವೃತ್ತದಲ್ಲಿ ಛೇದಿಸಿರುವಂತೆ ತೋರಿಸಲಾಗಿದೆ. ಈ ಚಿತ್ರಗಳ ಹಿನ್ನೆಲೆಯನ್ನು ಹಸಿರು ವರ್ಣದಿಂದ ರಚಿಸಲಾಗಿದ್ದು ಇನ್ನುಳಿದಂತೆ ಕೆಂಪು, ಹಳದಿ, ಹಸಿರು ಮತ್ತು ಕಪ್ಪು ವರ್ಣವನ್ನು ಇಲ್ಲಿ ರಚಿಸಲಾಗಿರುವುದು.

ಚಿತ್ರ-೨. ಬದಿಯಲ್ಲಿಯ ವರ್ಣ ವಿನ್ಯಾಸಗಳು

ಮೇಲೆ ತಿಳಿಸಿದಂತೆ ಒಂದು ತಾಳೆಗರಿಯಲ್ಲಿ ಎರಡರಿಂದ ಐದು ಬದಿಯ ವಿನ್ಯಾಸಗಳನ್ನು ನಾವು ನೋಡಬಹುದು. ಈ ರೀತಿಯ ನಾಲ್ಕು ವಿನ್ಯಾಸಗಳು ಸಿಕ್ಕಿದ್ದು ಇವುಗಳು ನೋಡಲು ಒಂದೇ ತರನಾದ ಸಾಮ್ಯತೆಗಳನ್ನು ಹೊಂದಿರುತ್ತವೆ. ಮೊದಲೆರಡು ಚಿತ್ರಗಳಲ್ಲಿ ಮೇಲಿಂದ

ಕೆಳಮುಖವಾಗಿ ಎಳೆದಿಂತರಿಉವ ರೇಖೆಗಳ ಮಧ್ಯದ ಜಾಗದಲ್ಲಿ ತಿಳಿಗಪ್ಪು ವರ್ಣವನ್ನು ಲೇಪಿಸಿ ಅದರ ಮೇಲೆ ಗಾಡ ಕಪ್ಪು ವರ್ಣದಿಂದ ಹೂಬಳ್ಳಿಯ ವಿನ್ಯಾಸಗಳನ್ನು ಚಿತ್ರಿಸಲಾಗುವುದು. ಬದಿಯ ರೇಖೆಗಳಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ಹಾವಿನಾಕಾರದ ರೇಖೆಗಳನ್ನು ಎಳೆಯಲಾಗಿರುವುದು.

ಮತ್ತೆರಡು ಬದಿಯ ಚಿತ್ರಗಳಿದ್ದು ಚಿತ್ರಗಳಲ್ಲಿ ಕೆಳಮುಖವಾಗಿ ಎಳೆದಿರುವ ರೇಖೆಗಳ ಮಧ್ಯದಲ್ಲಿ ಎಲೆಗಳ ಟೀ (T) ಆಕಾರದಲ್ಲಿ ವಿನ್ಯಾಸಗಳನ್ನು ಕಾಣಬಹುದಾಗಿದ್ದು, ಇವನ್ನು ಬದಿಗಳಲ್ಲಿ ಚಿತ್ರಿಸಿ ಇದರ ಅಂಚಿಗೆ ರೇಖೆಯನ್ನು ಎಳೆಯಲಾಗಿದೆ. ಈ ಚಿತ್ರಗಳಲ್ಲಿ ಕೆಂಪು, ಹಳದಿ, ನೀಲಿ ಗಾಡ ಕೆಂಪು ವರ್ಣಗಳಿಮದ ರೇಖಾ ವಿನ್ಯಾಸಗಳನ್ನು ಚಿತ್ರಿಸಿ ಪೂರ್ಣಗೊಳಿಸಲಾಗಿದೆ.

ಸಚಿತ್ರ ಕಾಗದ ಪ್ರತಿಗಳು

ಕೈ ಬರಹದ ಗ್ರಂಥವನ್ನು ನಾವು ಹಸ್ತಪ್ರತಿಯೆಂದು ಕರೆಯುತ್ತೇವೆ. ಈ ಹಸ್ತ ಪ್ರತಿಯಲ್ಲಿ ಕವಿನಿರ್ಮಿತ "ಕೃತಿ" ಲಿಪಿಕಾರ ನಿಮಿತ "ಪ್ರತಿ" ಎಂಬ ಎರಡು ಘಟಕಗಳು ಸೇರಿಕೊಂಡಿರುತ್ತವೆ. ಕವಿ ಒಂದು ಕೃತಿಯನ್ನು ರಚಿಸುತ್ತಾರೆ. ಕಾಲಕ್ರಮೇಣದಲ್ಲಿ ಲಿಪಿಕಾರರು ಅದನ್ನು ಅನೇಕ ಪ್ರತಿಗಳಾಗಿ ಬೆಳೆಸಿಕೊಂಡು ಬಂದಿರುತ್ತಾರೆ ಹಸ್ತಪ್ರತಿಯೇ ಆಗಿದ್ದೂ ಕವಿಯ ಮೂಲ ನಿರ್ಮಿತಿಯನ್ನು "ಕೃತಿ" ಎಂದೂ ಆಮೇಲಿನ ಲಿಪಿಕಾರರ ನಿರ್ಮಿತಿಗಳನ್ನು "ಪತಿ ಎಂದೂ ಕರೆಯುವುದು ನ್ಯಾಯ ಸಮ್ಮತವೆನಿಸುತ್ತದೆ.[೪೦] ಬರೆಯಲು ತಾಳೆಗರಿಯಂತೆ ಉಪಯೋಗಿಸಲ್ಪಡುತ್ತಿದ್ದ ಇನ್ನೊಂದು ಸಾಧನವೆಂದರೆ ಕಾಗದ ಅಭಿನವ ಮಂಗ ರಾಜನ (೧೩೯೮) 'ಪತ್ತಕೆಯೆನಲು ಕಾಗದ ಮಕ್ಕುಂ' ಎಂಬ ಉಲ್ಲೇಖ ಇದು ೧೪ನೇ ಶತಮಾನದಷ್ಟು ಪೂರ್ವದಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿದ್ದಂತೆಂದು ಸ್ಪಷ್ಟಪಡಿಸುತ್ತದೆ. ಕ್ರಿ.ಶ.೧೦೨ರಲ್ಲಿ ತ್ಸಾಯ್ ಲುಪ್ ಎಂಬ ಚೀನೀ ವ್ಯಕ್ತಿಯಿಂದ ಕಂಡು ಹಿಡಿಯಲ್ಪಟ್ಟ ಇದು ಮಹಮದೀಯರ ಮೂಲಕ ಕಾಗಜ್ ಹೆಸರಿನಿಂದ ಭಾರತವನ್ನು ಬಳಿಕ ಕರ್ನಾಟಕವನ್ನು ಪ್ರವೇಶಿಸಿತು[೪೧] ಎಂಬುದು ಇತಿಹಾಸಜ್ಞರ ವಾಧವಾಗಿದೆ.

ಕಾಗದ ಪ್ರತಿಗಳನ್ನು ಸ್ವಿದೇವಿ ಕಾಗದ ಮತ್ತು ವಿದೇವಿ ಕಾಗದವೆಂದು ವರ್ಗೀಕರಿಸಬಹುದು ಸ್ವೀದೇವಿ ಕಾಗದ ಬೆಳೆದು ಬರುತ್ತಿದ್ದಂತೆ ೧೮ನೇಯ ಶತಮಾನದ ಸುಮಾರಿಗೆ ನುಣುಪಾದ ವಿದೇವಿ ಕಾಗದ ಬಳಕೆಯಾಗತೊಡಗಿತು ಸ್ವದೇವಿ ಕಾಗದವನ್ನು ಗೃಹ ಕೈಕಾರಿಕೆ ಎಂಬಂತೆ ಹತ್ತಿ ಬಟ್ಟೆಯ ಚೂರುಗಳನ್ನು ನೀರಿನಲ್ಲಿ ನೆನೆಹಾಕಿ ತಯಾರಿಸುತ್ತಿದ್ದರು ಬಟ್ಟೆಯ ತುಂಡಿಗೆ ಕೋರಿ ಎಂದು ಹೆಸರು ಹೀಗಾಗಿ ಇಂಥ ಕಾಗದವನ್ನು ಇಂಥ ಕಾಗದವನ್ನು ಕೋರಿಕಾಗದ ಎಂದು

೪೦. ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪು-೬

೪೧. ಅದೇ., ಪು-೧೨

ಕರೆಯುತ್ತಿದ್ದರು. ದಪ್ಪನೆಯ ಇದು ಕಂದು ಬಣ್ಣದಾಗಿದ್ದು ೬ ಅಂಗುಲ ಅಗಲ ೧೨ ಅಂಗುಲ ಉದ್ದದ ವರೆಗಿನ ಸಣ್ಣ ದೊಡ್ಡ ಆಕಾರಗಳಲ್ಲಿ ಸಿಗುತ್ತದೆ. ಕಟ್ಟಲು ಅನುಕೂಲವಾಗುವಂತೆ ಕೋರಿ ಕಾಗದಗಳ ಮಧ್ಯದಲ್ಲಿ ರಂಧ್ರಮಾಡಿ ದಾರದಿಂದ ಪವಣಿಸುತ್ತಿದ್ದರು ಕೆಲವೊಮ್ಮೆ ಮಗ್ಗುಲಿಗೆ ಹೊಲಿಗೆ ಹಾಕುತ್ತಿದ್ದು ಇಂಥವುಗಳನ್ನು ವಹಿ ಎಂದು ಕರೆಯುತ್ತಿದ್ದರು ವಿದೇಶಿ ಕಾಗದವು ಕೋರಿ ಕಾಗದಕ್ಕಿಂತ ತೆಳ್ಳಗೆ ಮತ್ತು ನುಣುಪು ಇದ್ದು ಸರಾಗವಾಗಿ ಬರೆಯಲು ಅನುಕೂಲವಾಗಿರುತ್ತದೆ ನೀಲಿ ಬಣ್ಣದ ವಿದೇಶಿ ಕಾಗದಗಳನ್ನು ಬರವಣಿಗೆಗಾಗಿ ಪ್ರಾಚೀನರು ಬಳಸುತ್ತಿದ್ದರು ಇವುಗಳನ್ನು 'ನೀಲಿ ಹೊತ್ತಿಗೆ' ಎಂದು ಕರೆಯುತ್ತಿದ್ದರು ಬಹುಶಃ ವೈರಾಗ್ಯ ವಿಷಯದ ಕೃತಿಗಳಿಗಾಗಿ ಈ ಕಾಗದ ಉಪಯೋಗಿಸುವ ಪದ್ಧತಿ ಬಳಕೆಯಲ್ಲಿದ್ದಿತು ಅದಕ್ಕಾಗಿಯೇ ಯುವಕರಿಗೆ[೪೨] ಎಂಬ ಅನಿಸಿಕೆಯನ್ನು ಡಾ.ಎಂ.ಎಂ ಕಲ್ಬುರ್ಗಿಯವರು ಕನ್ನಡ ಹಸ್ತ ಪ್ರತಿ ಶಾಸ್ತ್ರಿ ಎಂಬ ಗ್ರಂಥದಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಬರವಣಿಗೆಯ ಸಾಲುಗಳು ವಕ್ರವಾಗ ಬಾರದೆಂದು ಬರೆಯುವ ಮೊದಲು ಕಾಗದದ ಮೇಲೆ ದಾರದ ರೇಖೆಗಳನ್ನು ಮಾಡಿಸುತ್ತಿದ್ದರು ಮತ್ತು ಹುಳು ಮುಟ್ಟಬಾರದೆಂದು ಪಟಕದ ನೀರಿನಲ್ಲಿ ಅದ್ದುತ್ತಿದ್ದರು ಈ ವಿಷಯ "ಮೊದಲು ಪಟಕದ ನೀರಿನಲ್ಲಿ ಎದ್ದಿ ಒಣಗಿಸಬೇಕು. ನಂತರ ಒಂದೊಂದು ಓಲೆಗೆ ಎಷ್ಟೆಷ್ಟು ಎಳೆಗಳನ್ನು ಬರೆಯಬೇಕೂ ಅಷ್ಟು ದಾರದ ಸುತ್ತುಗಳನ್ನು ವಾಲಿಗೆ ಸರಿಯಾಗಿ ಹಲಗೆಯಲ್ಲಿ ಸುತ್ತಿ ಆ ದಾರ ಸುತ್ತಿದ ಹಲಗೆಯ ಮೇಲೆ ಎಳೆಯಬೇಕು (ವತ್ತಬೇಕು) ಅಂದರೆ ಗೆರೆಗಳು ಮೂಡುವವು ಆ ಗೆರೆಗಳ ಮೇಲೆ ಬರೆದ ಎಳೆಗಳು ಸೊಟ್ಟಾಗುವುದಿಲ್ಲ ಪಟಕದ ನೀರಿನಲ್ಲಿ ತೊಯಿಸುವುದರಿಂದ ವಾಲಿಗಳಿಗೆ ಎಷ್ಟು ದಿವಸಗಳಿಗಾದರೂ ನುಶಿ ಮುಟ್ಟುವದಿಲ್ಲ ನಂತರ ಅಳತೆಯ ಮಸಿಯಿಂದ ಬರೆಯಬೇಕು ಅಂದರೆ ಅಕ್ಷರಗಳು ತೊಳೆದರೆ ಸಹ ಹೋಗುವುದಿಲ್ಲ ಇನ್ನು ಪಟಕದ ನೀರು ಅಂದರೆ ಪಾವಸೇರು ಪಟಕವನ್ನು ಒಂದು ಥಡೆ ನೀರಿನಲ್ಲಿ ಪುಡಿಮಾಡಿ ಹಾಕಬೇಕು ಈ ನೀರನ್ನು ಪರಾತದಲ್ಲಿ ಹಾಕಿ ಹಾಳೆಯನ್ನು ಎದ್ದಿ ತೆಗೆದು ಒಣಗಿಸಬೇಕು ಈ ನೀರನ್ನು ಹೆಚ್ಚಿಗೆ ಬೇಕಾದರೆ ಈ ಪ್ರಮಾಣವನ್ನು ಹೆಚ್ಚಿಗೆ ಮಾಡಿಕೊಳ್ಳಬೇಕು ಎಂಬ ಉದ್ಧರಣೆಗಳಿಂದ ತಿಳಿದುಬರುತ್ತದೆ.[೪೩] ಹೀಗೆ ಇತಿಹಾಸ ಪೂರ್ವ ಹಿನ್ನೆಲೆ, ವಿಧಾನ, ತಯಾರಿಕೆ, ಸಿದ್ದತೆಯ ಹಂತಗಳ ಬಗ್ಗೆ ಮಾಹಿತಿಯಾಗಿದೆ.

ಜೈನ ಸಚಿತ್ರ ಕಾಗದದ ಪ್ರತಿಗಳಲ್ಲಿ ಎರಡುತರನಾದ ಸಚಿತ್ರ ಕಾಗದ ಪ್ರತಿಗಳನ್ನು ನಾವು ನೋಡಬಹುದು ಅವೆಂದರೆ ರೇಖ ಪ್ರಧಾನ ಚಿತ್ರಗಳು ಹಾಗೂ ವರ್ಣಚಿತ್ರಗಳೆಂದು ರೇಖಾಪ್ರಧಾನ ಚಿತ್ರಗಳಲ್ಲಿ ರೇಖೆಗಳೆ ಪ್ರಧಾನವಾಗಿದ್ದು ಇಲ್ಲಿ ಕಪ್ಪು ವರ್ಣದ ರೇಖೆಗಳನ್ನು ಬಳಸಿಕೊಂಡು ವಿನ್ಯಾಸಗಳನ್ನು

---

೪೨. ಡಾ. ಎಂ. ಎಂ. ಕಲಬುರ್ಗಿ : ಕನ್ನಡ ಹಸ್ತಪ್ರತಿ ಶಾಸ್ತ್ರ, ಪು–೧೨

೪೩. ಅದೇ., ಪು–೧೩

ಚಿತ್ರಿಸಲಾಗಿರುವುದು ಸಚಿತ್ರ ಕಾಗದದ ವರ್ಣ ಚಿತ್ರಗಳಲ್ಲಿ ವರ್ಣ ಹಾಗೂ ರೇಖ ವಿನ್ಯಾಸದೊಂದಿಗೆ ವಸ್ತು ವಿಷಯವೂ ಸಹ ಬಹು ಮುಖ್ಯವಾಗಿರುತ್ತದೆ.

ರೇಖಾ ಪ್ರಧಾನ ಕಾಗದ ಪ್ರತಿಗಳು

ಜೈನ ಸಚಿತ್ರ ಹಸ್ತಪ್ರತಿಗಳಷ್ಟೆ ಪ್ರಾಮುಖ್ಯತೆಯನ್ನು ಹೊಂದಿರುವ ಕಾಗದದ ರೇಖಾ ವಿನ್ಯಾಸಗಳು ತಮ್ಮದೇಯಾದ ಗುಣಮಟ್ಟ ಹಾಗೂ ವಸ್ತು ವಿಷಯಗಳನ್ನು ಒಳಗೊಂಡಿರುತ್ತದೆ. ಅವುಗಳಲ್ಲಿ ಬಹುಮುಖ್ಯವಾಗಿ ಜೈನ ತತ್ತ್ವಾದರ್ಶಗಳ ಸಾಂಕೇತಿಕ ದೃಶ್ಯಗಳು, ಮಾನಸ್ಥಭಂಗಿಗಳು, ಜಿನ ಮುನಿಗಳು, ತೀರ್ಥಂಕರರುಗಳು ಲೇಖ ವಿನ್ಯಾಸ, ವಾದ್ಯಗಳು, ಪೂಜಾ ಸಾಮಗ್ರಿಗಳು, ಧ್ವಜಗಳು ಮಂಡಲಗಳು, ಸಾಂಕೇತಿಕ ಆಕಾರಗಳು ಹೀಗೆ ಕಾಗದದ ಮಸಿಯಿಂದ ಬರೆಯಲಾದ ಹಲವು ಬಗೆಯ ವಸ್ತು ವಿಷಯಗಳನ್ನೊಳಗೊಂಡ ರೇಖಾ ಪ್ರಾಧಾನ ಕಾಗದ ಚಿತ್ರಗಳನ್ನು ನಾವಿಲ್ಲಿ ಕಾಣಬಹುದು.

ಸಚಿತ್ರ ವರ್ಣ ಕಾಗದ ಪ್ರತಿಗಳು

ಜೈನ ಇತಿಹಾಸವು ಬಹು ಪುರಾತನವಾದದ್ದು ಅಂತೆಯೇ ಇದರ ಕಲಾ ಪಂರಂಪರೆಯೂ ಸಹ ತನ್ನದೆ ಆದ ವೈಶಿಷ್ಟ್ಯಗಳನ್ನು, ಸಾಧಕ ಬಾದಕಗಳನ್ನು, ವಿಷಯ ದಿಕ್ಸೂಚಿಯನ್ನು ಹೊಂದಿದ್ದು ನೇರವಾಗಿ ಇವು ಧರ್ಮದಿಂದ ಸಾಹಿತ್ಯ, ಸಾಹಿತ್ಯದಿಂದ ಕಲೆ, ಕಲೆಯಿಂದ ಪರಂಪರೆಯ ಪ್ರಸಾರವನ್ನು ಮಾಡುವಲ್ಲಿ ಜೈನೀಯರು ಬಹುತೇಕ ಯಶಸ್ಸುಗಳನ್ನು ಕಂಡಿದ್ದು ನಾಡಿನ ಮೇಲೆ ಮೂಲೆಗಳಿಗೂ ತನ್ನ ಛಾಪನ್ನು ಮೂಡಿಸಿದೆ. ತೀರ ಇತ್ತೀಚಿನವರೆಗೂ ತನ್ನ ಕಲಾ ಪಸರುವಿಸುಕೆಯನ್ನು ಸಮಾಜದಲ್ಲಿ ಅಬ್ಬುವ ಜನರಲ್ಲಿ ಅಹಿಂಸಾ ಜಾಗೃತಿಯನ್ನು ಮೂಡಿಸುವ ಕಾಯಕದಲ್ಲಿ ನಿರತವಾಗಿದೆ.

ಇವರ ಕಲಾಪರಂಪರೆಯು ತೀರಾ ಪುರಾತನವಾದದ್ದು ಅಷ್ಟೇ ಅಲ್ಲದೆ ಜೀನಧರ್ಮ ಪರಂಪರೆಯೂ ಸಹ ಅಷ್ಟೇ ಪುರಾತನವಾದದ್ದು ಅಂದಿನಿಂದ ಈ ಪರಂಪರೆಯನ್ನು ಇಂದಿನವರೆವಿಗೂ ಸಾಗಿಸಿಕೊಂಡು ಬಂದ ಹಿರಿಮೆ ಧರ್ಮೀಯರ ಜೊತೆಗೆ ಶ್ರಮಿಸಿದ ಕಲಾವಿದರಿಗೂ ಸಲ್ಲಬೇಕಾಗಿರುತ್ತದೆ. ಈ ಸಚಿತ್ರ ವರ್ಣಗಳ ಕಾಗದದ ಪ್ರತಿಗಳಲ್ಲಿಯ ಚಿತ್ರಗಳು ತಮ್ಮದೇಯಾದ ವಿಶಿಷ್ಟತೆಯೊಂದಿಗೆ ವಸ್ತು ವಿಷಯಗಳಲ್ಲೂ ಸಹ ಜಿನ ಸಂವೇದನೆ ಹಾಗೆಯೇ ಸಮಾಜ ಪರಿವರ್ತನಾ ಚಿತ್ರಗಳೆ ಹೆಚ್ಚಾಗಿ ಕಂಡುಬಂದಿದ್ದು ಇಲ್ಲಿ ತಿರ್ಥಂಕರರ ಜೀವನ ಹಾಗೂ ಅವರ ಪೂರ್ವ ಜನ್ಮದ ಸಾತ್ವಿಕ ಚರಿತ್ರೆಯ ಬಣ್ಣನೆಗಳು ಹೆಚ್ಚಿದ್ದು ಇವುಗಳು ಸಮಾಜದ ಅಹಿಂಸಾ ಚೇತನಕ್ಕೆ ಬೆಳಕಾಗಿವೆ ಎಂದರೆ ಅತಿಶಯಿಕ್ತಿ ನುಡಿಗಳಲ್ಲಿ ನನ್ನ ಅಧ್ಯಾಯನದಲ್ಲಿ ಶ್ರವಣಬೆಳಗೊಳದಲ್ಲಿಯ ಹಸ್ತಪ್ರತಿ ಭಂಡಾರದಲ್ಲಿ ದೊರೆತ ಕೆಲವು ಕಾಗದದ ಚಿತ್ರಗಳಿದ್ದು ಹಾಗೂ ಮಹಾಪುರಾಣದ ತಿರ್ಥಂಕರರ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ.

ತೀರ್ಥಂಕರರ ಸಚಿತ್ರ ಕಾಗದ ವರ್ಣಪ್ರತಿಗಳು

ಶ್ರವಣ ಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರೆತ ಸಚಿತ್ರ ತೀರ್ಥಂಕರರ ಕಾಗದದ ಪ್ರತಿಗಳಿದ್ದು ೨೩ ಜನ ತೀರ್ಥಂಕರ ಚಿತ್ರಗಳಿದ್ದು ಒಂದು ಕಾಣೆಯಾಗಿದೆ ಅದರಲ್ಲಿ ಐದನೇ ತೀರ್ಥಂಕರ ಸುಮತಿನಾಥರ ಚಿತ್ರವನ್ನು ವರತುಪಡಿಸಿ ಉಳಿದ ೨೩ ಇವೆ ಅವುಗಳೆಂದರೆ ಋಷಭನಾಥ, ಅಜಿತನಾಥ, ಸಂಭವನಾಥ, ಅಭವನಾಥ, ಪದ್ಮನಾಥ, ಸುಮಾರ್ಶ್ವನಾಥ, ಚಂದ್ರಪ್ರಭನಾಥ, ಪುಷ್ಪದಂತ, ಶೀತಲನಾಥ ಶ್ರೇಯಾಂಸನಾಥ, ವಾಸುಪೂಜ್ಯನಾಥ, ವಿಮಲನಾಥ, ಅನಂತನಾಥ, ಧರ್ಮನಾಥ, ಶಾಂತಿನಾಥ, ಕುಂಥುನಾಥ, ಅರನಾಥ, ಮಲ್ಲಿನಾಥ, ಮುನಿಸುಪುತ್ರ, ನಮಿನಾಥ, ನೇಮಿನಾಥ, ಪಾರ್ಶ್ವನಾಥ, ಮಹಾವೀರ ಹೀಗೆ ೨೩ ತೀರ್ಥಂಕರರ ಚಿತ್ರಗಳು ಇಲ್ಲವೇ ಹಾಗೂ ಇವುಗಳ ವಿವರಣಾತ್ಮಕ ಸಂಶೋಧನಾ ವಿವರಣೆಯನ್ನು ಇಲ್ಲಿ ಮಾಡಲಾಗಿದೆ.

ಚಿತ್ರ-೧. ಋಷಭನಾಥರ ಚಿತ್ರ

ಋಷಭನಾಥರು ತೀಥಂಕರರಲ್ಲಿ ಮೊದಲಿಗರು ಇವರು ಅಯೋದ್ಯಯ ನಾಭಿರಾಜ ಹಾಗೂ ಮರುದೇವಿಯ ಮಗನಾಗಿ ಇಕ್ಷ್ವಾಕು ವಂಶದಲ್ಲಿ ಜನಿಸದಿರು ಇವರ ಆಯುಷ್ಯ ೮೪ ಲಕ್ಷ ಪೂರ್ವಿ ಎತ್ತರ ೫೦೦ ಬಿಲ್ಲು ತಪಸ್ಸು ಮಾಡಿದ ಕಾಲ ೧೦೦೦ ವರ್ಷಗಳ ಕಾಲ ಇವರು ಕೇವಲ ಜ್ಞಾನ ಹೊಂದಿದ ವೃಕ್ಷ ಆಲದ ಮರ, ಇವರಿಗೆ ೮೪ ಮಂದಿ ವೃಷಭಸೇನಾದಿ ಗುಣಧರಂ ಗೋಮುಖ ಯಕ್ಷ ಹಾಗೂ ಚಕ್ರೇಶ್ವರಿ ಯಕ್ಷ ಇವರು ಮುಕ್ತಿಹೊಂದಿದ ಸ್ಥಲ ಕೈಲಾಸ ಪರ್ವತ ಇದು ಇವರ ಸಂಕ್ಷಿಪ್ತ ಮಾಹಿತಿಯಾಗಿದೆ. ಋಷಭನಾಥರ ಕಾಗದದ ಮೇಲಿನ ಚಿತ್ರದಲ್ಲಿ ಧ್ಯಾನಸ್ಥಿತಿಯಲ್ಲಿ ಪದ್ಮಾಸನ ರೂಢರಾಗಿ ಕುಳಿತಿರುವ ಋಷಭರು ಸುವರ್ಣ ಕಾಂತೀಯರಾಗಿದ್ದಾರೆ. ಇವರ ಹಿಂದೆ ಹಳದಿ ಪ್ರಭೆಯನ್ನು ತೋರಿಸಲಾಗಿದೆ. ಕೆಂಪು ಕಮಲದ ಮೇಲೆ ಕುಳಿತಿರುವ ಇವ್ವೆಗೆ ಗೋಮುಖ ಯಕ್ಷ ಹಾಗೂ ಚಕೇಶ್ವರಿ ಯಕ್ಷಿಯ ಎಡ ಬಲದ ಹಿಂಬದಿಯ ಎರಡು ಬದಿಯಲ್ಲಿ ನಿಂತಿರುವರು. ಇವರುಗಳು ನಾಲ್ಕು ಬಾಹುಗಳನ್ನು ಹೊಂದಿದ್ದು ಋಷಭರಿಗೆ ಹೂಮಾಲೆಯನ್ನು ಹಾಕುತ್ತಿರುವ ರೀತಿಯಲ್ಲಿ ಕಲಾವಿದನು ಚಿತ್ರಿಸಿದ್ದಾನೆ ಇವರ್ ಹಿಂಬದಿಯಲ್ಲಿ ಹೂಬಳ್ಳಿಗಳಿದ್ದು ನೀಲಿ ವರ್ಣದ ಪೀಟದ ಮೇಲೆ ನಿಂತಿದ್ದಾರೆ ತೀರ್ಥಂಕರರ ಕೆಳಭಾಗದಲ್ಲಿ ಇವರ ಲಾಂಛನವಾದ ವೃಷಭವು ಮಲಗಿರುವಂತೆ ತೋರಿಸಲಾಗಿದ್ದು ಅದು ಶ್ವೇತವರ್ಣದಲ್ಲಿದ್ದು ಹಸಿರು ವಸ್ತ್ರವನ್ನು ಅದರ ಬೆನ್ನಮೇಲೆ ಹಾಕಲಾಗಿದೆ ವಿಶೇಷವೆಂದ ಚಕ್ರೇಶ್ವರಿ ಯಕ್ಷಿಂಜ ಕೆಂಪು ಸೀರೆಯನ್ನು ಧರಿಸಿ ಜನ ಸಾಮಾನ್ಯರಂತೆ ಕಾಣುತ್ತಿದ್ದು ಇವರ ವೇಷಭೂಷಣ, ಒಡವೆ ವೈಶೂರ್ಯ ಮರಾಠ ಶೈಲಿಯನ್ನು ಹೋಲುತ್ತದೆ. ತಲೆ, ಕಿವಿ ಹಾಗೂ ಎದೆಯ ಮೇಲೆ ಬಿಳಿಯ ಕೂದಲನ್ನು ತೋರಿಸಿರುವ ಕಲಾವಿದನು ಅವನ

ಸೂಕ್ಷ್ಮ ಪ್ರಜ್ಞೆಯನ್ನು ಸಾಬಿತುಪಡಿಸಿದ್ದಾನೆ ಈ ಚಿತ್ರದಲ್ಲಿ ಹಲದಿ, ಕೆಂಪು, ಹಸಿರು, ಕಂದು, ಕಪ್ಪು, ಬೂದು ಸುವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೨. ಅಜಿತನಾಥರ ಚಿತ್ರ

ಎರಡನೆಯ ತೀರ್ಥಂಕರರಾದ ಅಜಿತನಾಥರು ಅಯೋಧ್ಯೆಯ ಜಿತಶತ್ರು ರಾಜ ಹಾಗೂ ವಿಜಯದೇವಿ ದಂಪತಿಗಳ ಮಗನಾಗಿದ್ದು ಇವರ ಗರ್ಭಾವತರಣವು ಜ್ಯೇಷ್ಠ ಕೃಷ್ಣ ಅಮವಾಸ್ಯೆಯಲ್ಲಿ ಹಾಗೂ ಜನ್ಮಾಭಿಷೇಕ ಕಲ್ಯಾಣವು ಮಾಘಶುಥ ದಶಮಿಯಂದು ನಡೆಯಿತು ಋಷಭನಾಥರ ವಂಶವಾದ ಇಕ್ಷ್ವಾಕು ವಂಶದಲ್ಲಿಯೇ ಇವರ ಜನನವಾಯಿತು ಇವರ ಎತ್ತರ ೪೫೦ ಬಿಲ್ಲು ತಪಸ್ಸು ಮಾಡಿದ ಕಾಲ ೧೨ ವರ್ಷಗಳ ಕಾಲ ಕೇವಲಜ್ಞಾನ ಹೊಂದಿದ ವೃಕ್ಷ ಎಳಲೆ ಬಾಳೆಗಿಡ ಇವರ ಲಾಂಛನ ಆನೆ, ಸಿಂಹಸೇನಾದಿ ೯೦ ಮಂದಿ ಗಣಧರರುಗಳು ಇವರಿಗೆ ಇವರ ಯಕ್ಷ ಇವರ ಲಾಂಛನ ಆನೆ, ಸಿಂಹಸೇನಾದಿ ೯೦ ಮಂದಿ ಗಣಧರರುಗಳು ಇವರಿಗೆ ಇವರ ಯಕ್ಷ ಇವರ ಲಾಂಛನ ಆನೆ, ಸಿಂಹಸೇನಾದಿ ೯೦ ಮಂದಿ ಗಣಧರರುಗಳು ಇವರಿಗೆ ಇವರ ಯಕ್ಷ ಮಹಾಯಕ್ಷ ಹಾಗೂ ಯಕ್ಷಿ ರೋಹಿಣಿ ಇವರ ದೀಕ್ಷ ಕಲ್ಯಾಣ ಮಾಘ ಶುದ್ಧ ನವಮಿ, ಕೇವಲಜ್ಞಾನ ಕಲ್ಯಾಣ ಪುಷ್ಯಶುದ್ಧ ಏಕಾದಶಿ ನಿರ್ವಾಣಕಲ್ಯಾಣ ಚೈತ್ರ ಶುದ್ದ ಪಂಚಮಿಯಂದು ಇನ್ನು ಇವರು ಮುಕ್ತಿಯೊಂದಿದ ಸ್ಥಳ ಸಮ್ಮೇದಗಿರಿಯ ಸಿದ್ದವರಕೂಟ ಎಂದು.

ಅಜಿತ ನಾಥರ ಕಾಗದ ಚಿತ್ರದಲ್ಲಿ ಇವರು ಸುವರ್ಣ ವರ್ಣದಿಂದ ಗೊಮ್ಮಟಾಕಾರದಲ್ಲಿ ದಿಗಂಬರರಾಗಿ ನಿಂತಿದ್ದು ಇವರ ಹಿನ್ನೆಲೆಯಲ್ಲಿ ಕೀರ್ತಿ ಮುಖವುಳ್ಳ ಹಾಗೂ ವಿನ್ಯಾಸಗಳುಳ್ಳ ಕಮಾನಿದ್ದು ಇದರ ಹಿಂದೆ ಕೆಂಪು ವರ್ಣವನ್ನು ಹಾಗೂ ಅದರಲ್ಲಿ ಮೂರು ದಿನಗಳ ಹೂಗಳು ಬೆಲೆಯುತ್ತಿರುವಂತೆ ತೋರಿಸಲಾಗಿದೆ ಅಜಿತನಾಥರು ಕೆಂಪು ಮಿಶ್ರಿತ ಕಂದು ವರ್ಣದ ಕಮಲದ ಮೇಲೆ ನಿಂತಿದ್ದು ಬಿಳಿ ಹಾಗೂ ಕೆಂಪು ಮಿಶ್ರಿತ ಪೀಟವನ್ನು ತೋರಿಸಲಾಗಿದ್ದು ಕೆಳಭಾಗದಲ್ಲಿ ಶ್ವೇತ ಗಜವನ್ನು ತೊರಿಸಲಾಗಿದ್ದು ಆಭರಣ ವಸ್ತ್ರಗಳನ್ನು ಇದರ ಮೇಲೆ ಚಿತ್ರಿಸಲಾಗಿದೆ. ಇದರ ಹಿಂದೂ ಮುಂದು ಕೆಂಪು ನೀಲಿ ಸಂಯೋಜಿತ ವರ್ಣದ ಹೂ ಎಲೆ ಬಳ್ಳಿಗಳ ವಿನ್ಯಾಸವನ್ನು ರಚಿಸಲಾಗಿದೆ. ಇನ್ನೂ ತೀರ್ಥಂಕರರ ಬಲ ಬದಿಗೆ ಇವಾ ಯಕ್ಷರಾದ ಮಹಾಯಷರು ಸಕಲ ವಸ್ತ್ರಾಭರಣ ಕಚಿತರಾಗಿ ನಿಂತಿದ್ದು ನಾಲ್ಕು ಬಾಹುಗಳನ್ನು ಹೊಂದಿದ್ದಾರೆ ಇವರ ಮೇಲೆ ಕೆಂಪು, ನೀಲಿ ವಿಚಿತ್ರ ಹಸಿರು ವರ್ಣದ ಹೂಬಳ್ಳಿಗಳ ವಿನ್ಯಾಸಗಳನ್ನು ತೋರಿಸಲಾಗಿದೆ ತೀರ್ಥಂಕರರ ಎಡಬದಿಗೆ ಸಕಲ ವಸ್ತ್ರಾಭರಣರೂಢರಾಗಿ ತಲೆಗೆ ತುರುಬುಕಟ್ಟಿ ಕೆಂಪು ಸೀರೆ ಹಸಿರು ಕುಪ್ಪಸ ತೊಟ್ಟು ನಾಲ್ಕು ಬಾಹುಗಳನ್ನು ಹೊಂದಿ ಕೈಮುಗಿದು ನಿಂತಿರುವ ರೋಹಿಣಿ ಯಕ್ಷಿಯನ್ನು ತೋರಿಸಲಾಗಿದೆ.

ಇವರ ಮೇಲೂ ಸಹ ಹೂಬಳ್ಳಿ ವಿನ್ಯಾಸಗಳನ್ನು ನಾವು ಕಾಣಬಹುದಾಗಿದೆ. ಇಲ್ಲಿ ಹೆಚ್ಚಿನದಾಗಿ ಕೆಂಪು, ನೀಲಿ, ಹಸಿರು, ಬಿಳಿ, ಕಂದು, ಕಪ್ಪು ವರ್ಣಗಳನ್ನೆ ಹೆಚ್ಚಾಗಿ ಬಳಸಿ ಚಿತ್ರಿಸಲಾಗಿದೆ.

ಚಿತ್ರ–೩. ಸಂಭವನಾಥರ ಚಿತ್ರ

ಮೂರನೇ ತೀರ್ಥಂಕರರಾದ ಸಂಭವನಾಥರು ಶ್ರಾವಸ್ತಿನಗರದ ಜಿತಾರಿ ರಾಜ ಹಾಗೂ ಸುಕ್ಷೇಣಾದೇವಿ ದಂಪತಿಗಳಿಗೆ ಇಕ್ಷ್ವಾಕು ವಂಶದಲ್ಲಿ ಫಲ್ಗುಣ ಶುದ್ದ ಅಷ್ಟಮಿಯಂದು ಗರ್ಭಾವತರಣ–ಗೊಂಡು ಕಾತೀಕ ಶುದ್ದ ಹುಣ್ಣಿಮೆಯಂದು ಜನ್ಮಾಭಿಷೇಕಗೊಂಡು ಜನಿಸದಿರು ಇವರ ಎತ್ತರ ೪೦೦ ಬಿಲ್ಲು, ೧೪ ವರ್ಷಗಳ ಕಾಲ ತಪಸ್ಸು ಮಾಡಿದರು ಇವರು ತಾಲ ವೃಕ್ಷದಲ್ಲಿ ಕೇವಲಜ್ಞಾನ ಹೊಂದಿದರು ಇವರ ಒಟ್ಟು ಆಯುಷ್ಯ ೬೦ ಲಕ್ಷ ಪೂರ್ವಿಗಳು ಶ್ರೀಮುಖ ಹಾಗೂ ಪಜ್ಞಪ್ತಿಯರು ಇವರ ಯಕ್ಷ ಯಕ್ಷಿಯರು ಕುದುರೆ ಇವರ ಲಾಂಚನವಾಗಿತ್ತು ಮಾರ್ಗಶಿರ ಶುದ್ದ ಹುಣ್ಣಿಮೆ ಇವರ ದೀಕ್ಷ ಕಲ್ಯಾಣದ ದಿನ, ಕೇವಲ ಜ್ಞಾನ ಕಲ್ಯಾಣ ಕಾರ್ತೀಕ ಕೃಷ್ಣ ಚೌತಿಯಂದು ಚೈತ್ರ ಶುದ್ದ ಷಷ್ಠಿಯಂದು ನಿರ್ವಾಣ ಕಲ್ಯಾಣವಾದದ್ದು ಇವರು ಮುಕ್ತಿ ಹೊಂದಿದ ಸ್ಥಳ ಸಮ್ಮೇದಗಿರಿಯಾಗಿದೆ. ಎಂಬುವುದು ಪುರಾಣಗಳ ಉಲ್ಲೇಖವಾಗಿದೆ.

ಈ ಚಿತ್ರದಲ್ಲಿ ಸಂಭವನಾಥ ತೀರ್ಥಂಕರರು ದಿಗಂಬರನಾಗಿ ಗೊಮ್ಮಟಾಕಾರದಲ್ಲಿ ಸುವರ್ಣ ಕಾಂತಿಯಿಂದ ಕಂಗೊಳಿಸುತ್ತಿದ್ದು ಕೆಂಪು ನೀಲಿ ಮತ್ತು ಬಿಳಿ ಮಿಶ್ರಿತ ವರ್ಣದ ಕಮಲದ ಮೇಲೆ ನಿಂತಿದ್ದು ಕೀರ್ತಿ ಮುಖವಿರುವ ಸುವರ್ಣ ಕಮಾನುಗೋಪುರವು ಹಿನ್ನೆಲೆಯಲ್ಲಿದ್ದು ಇದರ ಹಿಂದೆ ಕೆಂಪು ಹಿನ್ನೆಲೆವರ್ಣವನ್ನು ತೋರಿಸಿದ್ದು ಇವರ ತಲೆಯಮೇಲೆ ಬಿಳಿಯ ಪ್ರಭಾಮಂಡಲವಿದೆ. ಇವರ ಬಲಬಧಿಯಲ್ಲಿ ಶ್ರೀಮುಖ ಯಕ್ಷರಿದ್ದು ಕೆಂಪು ಕೆಂಪು ದೋತ್ರ ಹಸಿರು ಶಲ್ಯ ಕಿರೀಟಾಭರಣಗಳನ್ನು ಧರಿಸಿ ನಿಂತಿದ್ದು ನಾಲ್ಕು ಬಹುಗಳನ್ನು ಹೊಂದಿದ್ದಾರೆ. ಇವರ ಕೈ ಮತ್ತು ಹೊಟ್ಟೆಭಾಗದಲ್ಲಿ ನಾಮದ ಗುರುತುಗಳನ್ನು ಕಾಣಬಹುದು ಇದರ ಕೆಳಬದಿಯಲ್ಲಿ ಕಿರು ರೂಪದ ತೆಂಗಿನ ಮರವೊಂದನ್ನು ಕಾಣಬಹುದಾಗಿದೆ ಮೇಲೆ ಹಸಿರು, ನೀಲಿ, ಬಿಳಿ, ಕೆಂಪು ಸಮ್ಮಿಶ್ರ ವರ್ಣಗಳ ಹೂಬಳ್ಳಿಗಳನ್ನು ಕಾಣಬಹುದಾಗಿದ್ದು ಇವರ ತಲೆಯ ಮುಂಭಾಗದಲ್ಲಿ ಕನ್ನಡ ಲಿಪಿಯ ಮೂರು ಅಕ್ಷರಗಳನ್ನು ಕಾಣಬಹುದಾಗಿದ್ದು ಇದರ ಅರ್ಥ ತಿಳಿಯುತ್ತಿಲ್ಲ.

ತೀರ್ಥಂಕರ ಎಡಭಾಗದಲ್ಲಿ ತುರುಬು ಕಟ್ಟಿರುವ ಪ್ರಜ್ಞಪ್ತಿಯು ಬಿಳಿ ಸೀರೆ ಕೆಂಪು ರವಿಕೆಯನ್ನು ತೊಟ್ಟಿದ್ದಾಳೆ ನಾಲ್ಕು ಬಾಹುಗಳನ್ನು ಹೊಂದಿರುವ ಈಕೆ ಆಭರಣಗಳಿಂದ ಶೃಂಗರಿತರಾಗಿದ್ದು ಬಿಳಿಯ ಸೀರೆಯ ಮೇಲೆ ಚೌಕಾರದ ವಿನ್ಯಾಸವನ್ನು ಕಾಣಬಹುದು ಇದರ ಹಿಂದೆಯು ಸಹ ಹಸಿರು ವರ್ಣದ ಕಿರು ರೂಪದ ತೆಂಗಿನ ಮರವೊಂದನ್ನು ಕಾಣಬಹುದಾಗಿದ್ದು ಮೇಲೂಸಹ ಹೂಬಳ್ಳಿಯ ವಿನ್ಯಾಸಗಳನ್ನು ಕಾಣಬಹುದು ಇವರು ನಿಂತಿರು ಕೆಳಭಾಗದಲ್ಲಿ ಕೆಂಪು ಬಿಳಿ ನೀಲಿ

ವರ್ಣಗಳ ಪೀಟದ ವಿನ್ಯಾಸವಿದ್ದು ಇದರ ಮುಂಭಾಗದಲ್ಲಿ ಶ್ವೇತ ತುರಗವನ್ನು ತೋರಿಸಲಾಗಿದೆ ಇದರ ಎರಡೂ ಬದಿಯಲ್ಲೂ ಹೂಬಳ್ಳಿಯ ವಿನ್ಯಾಸಗಳನ್ನು ತೋರಿಸಲಾಗಿದೆ.

ಚಿತ್ರ-೪ ಅಬಿನಂದನಾ ತೀರ್ಥಂಕರ ಚಿತ್ರ

ಅಯೋಧ್ಯೆಯ ಇಕ್ಷ್ವಾಕು ವಂಶದ ಸಂಭರ ರಾಜ ಹಾಗೂ ಸಿದ್ಧಾರ್ಥಾದೇವಿ ದಂಪತಿಗಳಿಗೆ ವೈಶಾಖ ಶುದ್ದ ಷಷ್ಟಿಯಂದು ಗರ್ಭಾವತರಣ ಕಲ್ಯಾಣವಾಗಿ ಮಾಘ ಶುದ್ದ ದ್ವಾದಶಿಯಂದು ಜನ್ಮಾಭಿಷೇಕ ಕಲ್ಯಾಣವಾಯಿತು ೩೫೦ ಬಿಲ್ಲು ಎತ್ತರ ೫೦ ಲಕ್ಷ ಪೂರ್ವಿ ಆಯುಷ್ಯವಿತ್ತು ಇವರ ಲಾಂಛನ ಕಪಿ ಮಾಘ ಶುದ್ದ ದ್ವಾದಶಿಯಂದು ದೀಕ್ಷಾಕಲ್ಯಾಣವಾಗಿ ೧೮ ವರ್ಷಗಳ ಕಾಲ ತಪಸ್ಸು ಮಾಡಿ ಪುಷ್ಯಶುದ್ದ ಚತುರ್ದಶಿಯಂದು ಹೊನ್ನೇಮರ ಬಳಿಯಲ್ಲಿ ಕೇವಲ ಜ್ಞಾನ ಕಲ್ಯಾಣವಾಗಿ ಯಕ್ಷೇಶ್ವರ ಮತ್ತು ವಜ್ರಶ್ರುಂಖಲ ಎಂಬ ಯಕ್ಷ ಯಕ್ಷಿಯಾ ಆಗಮವಾಗಿ ಸಮ್ಮೇದಗಿರಿ ಆನಂದಕೂಟದಲ್ಲಿ ವೈಶಾಖ ಶುದ್ದ ಷಷ್ಠಿಯಂದು ನಿರ್ವಾಣ ಕಲ್ಯಾಣವಾಯಿತು. ಈ ಚಿತ್ರದಲ್ಲಿ ಕೆಂಪು, ನೀಲಿ, ಬಿಳಿ ಮಿಶ್ರವರ್ಣದ ಕಮಲದ ಹೂವಮೇಲೆ ಸುವರ್ಣ ವರ್ಣದಲ್ಲಿಲ್ ತೇಜೋ ಮೂರ್ತಿಯಾಗಿ ನಿಂತಿರುವ ಅಭಿನಂದನರ ಹಿಂದೆ ಕಮಾನು ಗೋಪುರವಿದ್ದು ಅದರ ಮೇಲೆ ಕೀತಿ ಮುಖ ಹಾಗೂ ಎರಡೂ ಬದಿಯ ಮಧ್ಯದಲ್ಲಿ ಆನೆ ಮುಖವಿರುವ ಸಿಂಹಗಳು ಕುಳಿತಿದ್ದು ಕೆಂಪು ಹಳದಿ ವರ್ಣಗಳಿಂದ ಕೂಡಿದ ಗೋಪುರವಿದ್ದು ಕಪ್ಪು ಬಾಹ್ಯ ರೇಖೆಗಳನ್ನು ರಚಿಸಲಾಗಿದೆ. ಇವರ ಎಡ ಬಲ ಬದಿಯಲ್ಲಿ ಯಕ್ಷೇಶ್ವರ ಹಾಗೂ ವಜ್ರ ಶ್ರುಂಖಲರೆಂಬ ಯಕ್ಷ ಯಕ್ಷಿಯರಿದ್ದಾರೆ ಇಬ್ಬರೂ ಸಹ ನಾಲ್ಕು ಬಾಹುಗಳಿಂದ ಕೂಡಿದ್ದು ಕೈ ಜೋಡಿಸಿ ನಿಂತಿದ್ದಾರೆ ಇವರ ಇಂದಿನ ಕೈಗಳಲ್ಲಿ ಹೂ, ಹೂಮಾಲೆಗಳನ್ನು ಕಾಣಬಹುದು ಹಾಗೂ ಇವರ ಮುಂಭಾಗದಲ್ಲಿ ಕಿರುರೂಪದಲ್ಲಿ ಎರಡು ಕಾಯಿಗಳಿರುವ ಹಸಿರು ವರ್ಣದ ತೆಂಗಿನ ಗಿಡಗಳಿದ್ದು ಮೇಲೆ ಕೆಂಪು ತಿಳಿಹಸಿರಿನ ಹೂಬಳ್ಳಿಯ ಚಿತ್ರಗಳನ್ನು ನಾವು ಕಾಣಬಹುದಿದ್ದು ಈ ರಮ್ಯತೆ ಕಾರಣ ಕಲಾ ಕೃತಿಯನ್ನು ರಚಿಸುವ ಕಲಾವಿದನ ಸುತ್ತಮುತ್ತಲಿನ ಪರಿಸರವು ಪ್ರಭಾವ ಬಿರಿರುತ್ತದೆ ಆದ ಕಾರಣ ಈ ರೀತಿ ನಿಸರ್ಗ ರಮಣೀಯ ದೃಶ್ಯಗಳನ್ನು ಕಲವಿದನು ಕಲಾಕೃತಿಗಳಲ್ಲಿ ಅಳವಡಿಸಿಕೊಂಡಿರಲು ಸಾಧ್ಯವಾಗಿರುತ್ತದೆ.

ಚಿತ್ರ-೫. ಸುಮಾಥಿನಾಥ ತೀರ್ಥಂಕರ

ಸುಮತಿನಾಥ ತೀರ್ಥಂಕರರ ಚಿತ್ರವು ದೊರೆತಿರುವ ಚಿತ್ರಗಳಲ್ಲಿ ಇಲ್ಲವಾದರೂ ಇವರ ಕುರಿತಾಗಿ ಕೊಂಚ ಮಾಹಿತಿಯನ್ನು ನೀಡಲು ಇಚ್ಚಿಸುತ್ತ, ಅಯೋಧ್ಯೆಯ ಇಕ್ಷ್ವಾಕು ವಂಶದ ಮೇಘರಥರಾಜ ಹಾಗೂ ಮಂಗಲಾದೇವಿ ದಂಪತಿಗಳಿಗೆ ಶ್ರಾವಣ ಶುದ್ದ ಬಿದಿಗೆಯಲ್ಲಿ ಗರ್ಭಾವತರಣವಾಗಿ ಚೈತ್ರ ಶುದ್ದ ಏಕಾದಶಿಯಲ್ಲಿ ಜನ್ಮಾಭಿಷೇಕ ಕಲ್ಯಾಣದಲ್ಲಿ ಜನಿಸದಿ ಸುಮತಿನಾಥರು ೩೦೦ ಬಿಲ್ಲು ಎತ್ತರವಿದ್ದರೂ ವೈಶಾಖ ಶುದ್ದ ನವಮಿಯಂದು ದೀಕ್ಷಾ ಕಲ್ಯಾಣದ ಬಳಿಕ ೨೦

ವರ್ಷಗಳ ಕಲತಪಸ್ಸು ಮಾಡಿ ಚೈತ್ರ ಶುದ್ಧ ಏಕಾದಶಿಯಂದು ಪಿಯಂಗು ವೃಕ್ಷದಡಿಯಲ್ಲಿ ಕೇವಲಜ್ಞಾನ ಹೊಂದಿದರು ಚಾಮರಾದಿ ಸೇರಿ ೧೧೬ ಮಂದಿ ಗಣಧರರು ತುಂಬದ ಹಾಗೂ ವಜ್ರಾಂಕುಶ ರೆಂಬ ಯಕ್ಷ ಯಕ್ಷಿಯರನ್ನು ಹೊಂದಿದ್ದರು ಇವರ ಲಾಂಚನ ಚಕ್ರವಾಕ ಚೈತ್ರಶುದ್ಧ ಏಕಾದಶಿಯಂದು ಸಮ್ಮೇದಗಿರಿಯ ಅವಿಚಲ ಕೂಟದಲ್ಲಿ ನಿರ್ವಾಣ ಕಲ್ಯಾಣ ನಡೆಯಿತು ಎಂಬುದು ಜೈಪುರಾಣಗಳಲ್ಲಿ ಉಲ್ಲೇಖವಾಗಿರುವ ಸಂಗತಿಯಾಗಿವೆ.

ಚಿತ್ರ–೬. ಪದ್ಮಪ್ರಭ ತೀರ್ಥಂಕರರ ಕಾಗದದ ಚಿತ್ರ

ಕೌಶಂಬಿಯ ಇಕ್ಷ್ವಾಕು ವಂಶದ ಧಾರಣರಾಜ ಹಾಗೂ ಸುಷಿಮಾದೇವಿ ದಂಪತಿಗಳಿಗೆ ಮಾಘ ಕೃಷ್ಣ ಷಷ್ಠಿಯಂದು ಗರ್ಭಾವತರಣ ಕಲ್ಯಾಣವಾಗಿ ಕಾರ್ತಿಕ ಕೃಷ್ಣತದೋದಶಿಯಂದು ಜನ್ಮಾಭಿಷೇಕ ಕಲ್ಯಾಣವಾಯಿತು ಇವರು ೨೫೦ ಬಿಲ್ಲು ಎತ್ತರ ಹಾಗೂ ೩೦ ಲಕ್ಷ ಪೂರ್ವಿ ಆಯುಷ್ಯವನ್ನು ಹೊಂದಿದ್ದರು ಕಾರ್ತೀಕ ಕೃಷ್ಣ ತ್ರಯೊದಶಿಯಂದು ದೀಕ್ಷಾ ಕಲ್ಯಾಣವಾಗಿ ೬ ತಿಂಗಳು ತಪಸ್ಸು ಮಾಡಿದರು ಚೈತ್ರ ಶುದ್ಧ ಹುಣ್ಣಿಮೆಯಂದು ಮನೋಹರ ವೃಕ್ಷದ ಕೆಳಗೆ ಕೇವಲಜ್ಞಾನ ಕಲ್ಯಾಣವಾಗಿ ವಜ್ರಚಾಮರಾದಿ ೧೧೦ ಮಂದಿ ಗಣಧರರು ಹಾಗೂ ಕುಸುಮ ಮತ್ತು ಏನೋ ವೇಗರೆಂಬ ಯಕ್ಷ ಯಕ್ಷಿಯರ ಜೊತೆ ಕಮಲ ಲಾಂಛನ ಇವರದಾಯಿತು. ಫಾಲ್ಗುಣ ಕೃಷ್ಣ ಚೌತಿಯಂದು ಸಮ್ಮೇದಗಿರಿ ಮೋಹನ ಕೂಟದಲ್ಲಿ ನಿರ್ವಾಣ ಕಲ್ಯಾಣವಾಯಿತು.

ಈ ಚಿತ್ರದಲ್ಲಿ ಶ್ಯಾಮಲ ವರ್ಣದ ಪದ್ಮಪ್ರಭರು ದಿಗಂಬರನಾಗಿ ಗೊಮ್ಮಟಾರವಾಗಿ ನಿಂತಿದ್ದು ಇವರ ಹಿನ್ನೆಲೆಯಲ್ಲಿ ಕಮಾನು ಗೋಪುರ ಅದರ ಮೇಲೊಂದು ಗೋಪುರ ಎರಡೂ ಬದಿಯಲ್ಲು ದೊಡ್ಡದಾದ ಗೋಡೆಗಳು ಅದರ ಮೇಲೆ ಕೆಂಪು ಧ್ವಜ ಹಿಂಬದಿಯಲ್ಲಿ ಮರದ ಕೊಂಬೆ ಹೂ ಎಲೆಗಳು ಕಾಣಬಹುದು ತೀಥಂಕರರ ಹಿಂದೆ ಕೆಂಪು ವರ್ಣಲೇಪನ ಗಾಜಿನ ದೀಪಸ್ತಂಭಗಳು ಹಾಗೂ ತಲೆಯಮೇಲೆ ಮೂರು ಗೋಪುರ ಕಳಸಗಳನ್ನು ಕಾಣಬಹುದು. ಇನ್ನು ಎರಡೂ ಬದಿಯಲ್ಲಿಯೂ ಯಕ್ಷ ಯಕ್ಷಿಯರು ನಿಂತಿದ್ದು ನಾಲ್ಕು ಬಾಹುಗಳಿದ್ದು ಕೈ ಜೋಡಿಸಿ ನಿಂತಿದ್ದಾರೆ ಇವರಿಬ್ಬಾ ಕೈಗಳಲ್ಲು ಹೂ ಮಾಲೆಗಳನ್ನು ಕಾಣಬಹುದಾಗಿದೆ ಹಾಗೂ ಗೋಡೆಗೆ ಸುವರ್ಣ ವರ್ಣದ ಗಂಟೆಗಳನ್ನು ಸರಪಳಿಯ ಸಹಾಯದಿಂದ ಕಟ್ಟಿದ್ದಾರೆ ಇಲ್ಲಿ ಹೆಚ್ಚಿನದಾಗಿ ಬಿಳಿಯ ಬಣ್ಣವನ್ನೆ ಹೆಚ್ಚಾಗಿದ್ದು ನೀಲಿ ಹಾಗೂ ಕಪ್ಪು ವರ್ಣಬಾಹ್ಯ ರೇಖೆಗಳಿದ್ದು ಇವರ ಲಾಂಚನವಾದ ಕೆಂಪು ಕಮಲವನ್ನು ತೀರ್ಥಂಕರರ ಕೆಳಭಾಗದಲ್ಲಿ ಚಿತ್ರಿಸಲಾಗಿದೆ.

ಚಿತ್ರ–೭. ಸುಪಾರ್ಶ್ವನಾಥರ ಕಾಗದದ ಚಿತ್ರ

ಕಾಶಿಯ ಉಗ್ರವಂಶದ ಸುಪ್ರತಿಷ್ಠರಾಜ ಹಾಗೂ ಪೃಥ್ವೀದೇವಿ ದಂಪತಿಗಳಿಗೆ ಭಾದಪದ

ಶುದ್ದ ಷಷ್ಠಿಯಂದು ಗರ್ಭಾವತರಣ ಕಲ್ಯಾಣವಾಗಿ ಜ್ಯೇಷ್ಠ ಶುದ್ದ ದ್ವಾದಶಿಯಲ್ಲಿ ಜನ್ಮಾಭಿಷೇಕ ಕಲ್ಯಾಣವಾಯಿತು ಇವರು ೨೦೦ ಬಿಲ್ಲು ಎತ್ತರದವರು ಜೇಷ್ಠ ಶುದ್ದದ್ವಾದಶಿಯಂದು ದೀಕ್ಷಾಕಲ್ಯಾಣವಾಗಿ ೯ ವರ್ಷ ತಪಸ್ಸು ಮಾಡಿದನಂತರ ಫಾಲ್ಗುಣ ಬಹುಳ ಷಷ್ಟಿಯಂದು ಬಗೆಮರದಡಿ ಕೇವಲಜ್ಞಾನ ಹೊಂದಿದರು ಬಳಿಕ ಬಳ ಮೊದಲಗಿ ೯೫ ಮಂದಿ ಗನಧರರನ್ನು ವರನಂದಿ ಮತ್ತು ಕಾಳಿ ಎಂಬ ಯಕ್ಷ ಯಕ್ಷಿಯರನ್ನು ಸ್ವಸ್ತಿಕ ಲಾಂಚನವನ್ನು ಹೊಂದಿದರು ಒಟ್ಟು ೨೦ ಲಕ್ಷ ಪುರ್ವಿ ಆಯುಷ್ಯವನ್ನು ಪೂರ್ಣಗೊಳಿಸಿ ಫಾಲ್ಗುಣ ಬಹುಳ ಸಪ್ತಮಿಯಂದು ಸಮ್ಮೇದಗಿರಿ ಪ್ರಭಾಸಕೂಟ ಎಂಬಲ್ಲಿ ನಿರ್ವಾಣ ಕಲ್ಯಾನವನ್ನು ಹೊಂದಿದ್ದರು.

ಈ ಚಿತ್ರದಲ್ಲಿ ಸುಪಾರ್ಶ್ವನಾಥರನ್ನು ಹಸಿರುವರ್ಣದಿಂದ ತೋರಿಸಲಾಗಿದ್ದು ನಗ್ನರಾಗಿ ಹಳದಿ ಕೆಂಪು ವಿಶ್ರವರ್ಣದ ಕಮಲದ ಮೇಲೆ ನಿಂತಿದ್ದು ಹಿನ್ನೆಲೆಯ ವರ್ಣವನ್ನು ಕೆಂಪಾಗಿ ತೋರಿಸಲಾಗಿದೆ. ತೀರ್ಥಂಕರರ ಎರಡೂ ಬದಿಗಳಲ್ಲು ಸುರ್ವಣ ಕಂಬಗಳಿದ್ದು ಮೂರು ಕಮಾನು ಗೋಪುರಗಳನ್ನು ತೋರಿಸಲಗಿದ್ದು ಅದರ ಮೇಲೆ ಎರಡುಗೆರೆ ಹಾಗೂ ಎರಡು ಕೋತಿಗಳ ಪರಸ್ಪರ ಒಂದನೊಂದು ದಿಟ್ಟಿಸಿ ನೋಡುವಂತೆ ಚಿತ್ರಿಸಲಾಗಿದ್ದು ಇವುಗಳ ಹಿಂದೆ ಎರಡು ಬದಿಗಳಲ್ಲು ಹೂ ಎಲೆಬಳ್ಳಿಗಳನ್ನು ಚಿತ್ರಿಸಲಾಗಿದೆ. ತೀರ್ಥಂಕರರ ಎಡ ಬಲ ಬದಿಗಳಲ್ಲಿ ವರನಂದಿ ಹಾಗೂ ಕಾಳಿ ಎಂಬ ಯಕ್ಷ ಯಕ್ಷಿಯರಿದ್ದಾರೆ ಇಬ್ಬರೂ ಸಹ ನಾಲ್ಕು ಬಾಹುಗಳನ್ನು ಒಳಗೊಂಡಿದ್ದು ವಸ್ತ್ರಾಭರಣ ಖಚಿತರಾಗಿ ಕೈ ಮುಗಿದು ನಿಂತಿದ್ದು ಮತ್ತೊಂದು ಕೈಗಳಲ್ಲಿ ಹೂವಿನ ಹಾರವನ್ನಿಡಿದು ಪ್ರಾರ್ಥಿಸುವಂತೆ ಇಲ್ಲಿ ತೋರಿಸಲಾಗಿರುವುದು ಇವರ ಕೆಳಭಾಗದಲ್ಲಿ ಕೆಂಪು, ಬಿಳಿ, ನೀಲಿ, ಹಸಿರುಗಳ ಸಂಯೋಜಿತ ವರ್ಣಗಳನ್ನು ಬಳಸಿಕೊಂಡು ಕಪ್ಪು ರೇಖೆಗಳಿಂದ ರೇಖಾ ವಿನ್ಯಾಸ ಮಾಡಲಾಗಿದ್ದು ಸ್ವಸ್ತಿಕ್ ಚಿನ್ಹೆಯನ್ನು ಕೆಳಭಾಗದಲ್ಲಿ ಬರೆಯಲಾಗಿದ್ದು ಎರಡೂ ಕೆಳಬದಿಯಲ್ಲು ಹೂಬಳ್ಳಿ ಚಿತ್ರಗಳಿದ್ದು ನೋಡುಗನ ಬಲ ಬದಿಯ ಕೆಳ ಮೂಲೆಯ ಚಿತ್ರವು ನಾಶವಾಗಿದೆ. ಈ ಚಿತ್ರದಲ್ಲಿ ಹೆಚ್ಚಾಗಿ ಕೆಂಪು, ಹಳದಿ, ಹಸಿರು, ನೀಲಿ, ಬಿಳಿ, ತಿಳಿಗೆಂಪು, ತಿಳಿಹಸಿರು ಕಪ್ಪು ವರ್ಣಗಳನ್ನು ಬಳಸಿ ಚಿತ್ರರಚಿಸಲಾಗಿರುವುದು.

ಚಿತ್ರ-೮. ಚಂದ್ರಪ್ರಭ ತೀರ್ಥಂಕರರು ಕಾಗದ ಚಿತ್ರ

ಚಂದ್ರಪುರಿಯ ಇಕ್ವಾಕು ವಂಶದ ಸೇನಾ ರಾಜ ಮತ್ತು ಲಕ್ಷಣಾದೇವಿ ದಂಪತಿಗಳಿಗೆ ಚೈತ್ರ ಬಹುಳ ಪಂಚಮಿಯಂದು ಗರ್ಭಾವತರಣ ಕಲ್ಯಾನವಾಗಿ ಪುಷ್ಯಬಹುಳ ಏಕಾದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಜನಿಸದಿ ಇವರು ೧೫೦ ಬಿಲ್ಲು ಎತ್ತರವಿದ್ದು ಪುಷ್ಯ ಬಹುಳ ಏಕಾದಶಿಯಂದು ದೀಕ್ಷಾ ಕಲ್ಯಾಣವಾಗಿ ಸತತ ೧೪ ವರ್ಷ ತಪಸ್ಸು ಮಾಡಿ ದತ್ತಾದಿ ೯೩ ಮಂದಿ ಗಣಧರರನ್ನು

ಹೊಂದಿ ಶ್ಯಾಮ ಜ್ವಾಲಾಮಾಲ ಎಂಬ ಯಕ್ಷ ಯಕ್ಷಿಯರನ್ನು ಹಾಗೂ ಚಂದ್ರ ಲಾಂಛನವನ್ನು ಹೊಂದಿದರು ಇದಾದ ಬಳಿಕ ೧೦ ಲಕ್ಷ ಪೂರ್ವಿ ಆಯುಷ್ಯ ಮುಗಿಸಿ ಫಾಲ್ಗುಣ ಬಹುಳ ಸಪ್ತಮಿಯಂದು ಸಮ್ಮೇಧಗಿರಿ ಲಲಿತಘನ ಕೂಟ ಎಂಬಲ್ಲಿ ನಿರ್ವಾಣ ಕಲ್ಯಾಣ ನಡೆಯಿತು.

ಈ ಚಿತ್ರದಲ್ಲಿ ಶ್ವೇತ ವರ್ಣದಿಂದ ಕಂಗೊಳಿಸುತ್ತಿರುವ ತೀರ್ಥಂಕರರು ದಿಗಂಬರರಾಗಿ ಕೆಂಪು ಕಮಲದ ಮೇಲೆ ನಿಂತಿರುವಂತೆ ತೋರಿಸಲಾಗಿದೆ. ಇವರ ಎಡಬಲ ಬದಿಗಳಲ್ಲಿ ಶ್ಯಾಮ ಜ್ವಾಲಾಮಾಲರೆಂಬ ಯಕ್ಷ ಯಕ್ಷಿಯರು ನಿಂತಿದ್ದು ಇವರಿಗೆ ಮೂರು ಸುವರ್ಣ ಕಮಾನು ಗೋಪುರಗಳನ್ನು ನಿರ್ಮಿಸಿರುವಂತೆ ತೋರಿಸಿದ್ದು ಅವುಗಳ ಮೇಲೆ ಕಳಸಗಳನ್ನು ಇರಿಸಲಾಗಿದೆ ಯಕ್ಷ ಯಕ್ಷಿಯರು ಸರ್ವಾಲಂಕಾರ ಭೂಷಿತರಾಗಿ ನಿಂತಿದ್ದು ನಾಲ್ಕು ಬಾಹುಗಳನ್ನು ಹೊಂದಿರುವರು ಮೇಲಿನ ಕಮಾನಿನಲ್ಲಿ ಕುಳಿತಿರುವ ಎರಡು ನವಿಲುಗಳನ್ನು ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ತಿರ್ಥಂಕರರ ಪೀಟವಿದ್ದು ಅರ್ಧ ಚಂದ್ರಾಕಾರದ ಬಿಳಿಯ ಲಾಂಛನವನ್ನು ತೋರಿಸಲಾಗಿದೆ ವಿಶೇಷವಾಗಿ ಮೇಲೆ ಕೆಳಗೆ ಸುತ್ತಲೂ ಹೂ ಬಳ್ಳಿಗಳ ಚಿತ್ರಗಳನ್ನು ರಚಿಸಲಾಗಿದೆ. ಈ ಚಿತ್ರದಲ್ಲಿ ಹಳದಿ, ಕೆಂಪು, ಹಸಿರು, ನೀಲಿ, ಬಿಳಿ ವರ್ಣಗಳನ್ನು ಲೇಪಿಸಲಾಗಿದ್ದು ಚಿತ್ರದಲ್ಲಿ ಸ್ವಲ್ಪ ಹೂ ಜಾಗಬಿಡದೆ ಸಂಪೂರ್ಣವಾಗಿ ಭರ್ತಿಮಾಡಲಾಗಿದೆ.

ಚಿತ್ರ–೯. ಪುಷ್ಪದಂತಕ ಕಾಗದದ ವರ್ಣ ಚಿತ್ರ

ಕಾಕಂದಿ ನಗರ ಎಂಬಲ್ಲಿ ಇಕ್ಷಾಕು ವಂಶದ ಸುಗ್ರೀವ ರಾಜ ಜಯರಾಮದೇವಿ ಎಂಬ ದಂಪತಿಗಳಿಗೆ ಫಲ್ಗುಣ ಕೃಷ್ಣ ನವಮಿಯಂದು ಗರ್ಭವತರಣ ಕಲ್ಯಾಣವಾಗಿ ಮಾರ್ಗಶಿರ ಶುಕ್ಲಪಾಡ್ಯದಯ ಜನ್ಮಾಭಿಷೇಕ ಕಲ್ಯಾಣವಾಗಿ ಜನಿಸದಿ ತೀರ್ಥಂಕರರು ೧೦೦ ಬಿಲ್ಲು ಎತ್ತರದವರಾಗಿದ್ದರು ಇವರಿಗೆ ಮಾರ್ಗಶಿರ ಶುಕ್ಲ ಪಾಡ್ಯದಂದು ದೀಕ್ಷಾಕಲ್ಯಾಣವಾಗಿ ಕಾರ್ತಿಕ ಶುಕ್ಲ ಬಿದಿಗೆಯಂದು ನಾಗ ವೃಕ್ಷದ ಕೆಳಗೆ ಸತತ ೧೪ ವರ್ಷ ೩ ತಿಂಗಳ ತಪಸ್ಸಿನ ಸಲುವಾಗಿ ಕೇವಲ ಜ್ಞಾನ ಕಲ್ಯಾಣವಾಯಿತು ಇದರ ಜೊತೆಗೆ ವಿದರ್ಭರದಿಯಾಗಿ ೮೮ ಮಂದಿ ಗಣಧಿಕರು ಅಜಿತ ಮಹಾಕಾಳಿ ಎಂಬ ಯಕ್ಷ ಯಕ್ಷಿಯರು ಮೊಸಳೆ ಲಾಂಚನಗಲು ಬಂದವು ಒಟ್ಟು ೨ ಲಕ್ಷ ಪೂರ್ವಿ ಆಯುಷ್ಯದ ನಂತರ ಭಾದ್ರಪದ ಶುಕ್ಲ ಅಷ್ಟಮಿಯಂದು ಸಮ್ಮೇದಗಿರಿ ಪ್ರಭಾಸವರಕೂಟದಲ್ಲಿ ನಿರ್ವಾಣ ಕಲ್ಯಾಣವಾಯಿತು ಎಂದು ಜೈನ ಧರ್ಮಿಯರ ಗ್ರಂಥಗಳ ಆಧಾರ ಉಲ್ಲೇಖವಾಗಿದೆ.

ಈ ಚಿತ್ರದಲ್ಲಿ ಪುಷ್ಪದಂತ ತೀರ್ಥಂತರನು ಶ್ವೇತ ವರ್ಣದಲ್ಲಿ ದಿಗಂಬರನಾಗಿ ನಿಂತಿದ್ದು ಹಿನ್ನೆಲೆಯಲ್ಲಿ ಕೆಂಪು ಹಿನ್ನೆಲೆ ಇದೆ ಇವರ ತಲೆಮೇಲೆ ಪ್ರಭಾವಳಿ ಇದ್ದು ಸುವರ್ಣ ಕಮಾನಿನಿಂದ ಅಲಂಕರಿಸಲಾಗಿದೆ. ಅದರ ಮೇಲೊಂದು ಕೀರ್ತಿಮುಖವಿದ್ದು ದೊಡ್ಡದಾದ ಕಮಾನಿನ ಚಿತ್ರವನ್ನು ಕಾಣಬಹುದಾಗಿದೆ ತೀರ್ಥಂಕರರ ಬಲ ಬದಿಯಲ್ಲಿ ಹಳದಿ ಕಚ್ಚೆ ಹಾಗೂ ಹಸಿರು ಶಲ್ಯವನ್ನು

ತೊಟ್ಟು ನಾಲ್ಕು ಬಾಹುಗಳನ್ನು ಹೊಂದಿರುವ ಅಜಿತ ಯಕ್ಷನು ಸ್ವರ್ಣ ಆಭರಣಗಳನ್ನು ಧರಿಸಿ ನಿಂತಿದ್ದಾನೆ ಎಡಬದಿಯಲ್ಲಿ ಮಹಾಕಾಳಿ ಯಕ್ಷಿಯು ಕೆಂಪು ಸೀರೆ ಹಸಿರು ರವಿಕೆಯನ್ನು ತೊಟ್ಟು ನಿಂತಿದ್ದು ತಲೆಗೆ ತುರುಬು ಕಟ್ಟಿ ನಾಲ್ಕು ಬಾಹುಗಳನ್ನು ಹೊಂದಿ ಕೈಯಲ್ಲಿ ಮಾಲೆಯನ್ನು ಹಿಡಿದು ನಿಂತಿರುವುದು ವಿಶೇಷವಾಗಿದೆ ತೀರ್ಥಂಕರರ ಕೆಳಗೆ ಪೀಠವಿದ್ದು ಅದರಲ್ಲಿ ಮೊಸಳೆಯ ಬದಲಿಗೆ ಏಡಿಕಾಯಿಯನ್ನು ಹೋಲುವ ಜೀವಿಯ ಚಿತ್ರವನ್ನು ಕಾಣಬಹುದಾಗಿದ್ದು ತಿಳಿ ನೀಲಿ ವರ್ಣದಿಂದ ರಚಿಸಲಾಗಿದೆ. ಇನ್ನು ಉಳಿದಂತೆ ಪುಷ್ಪದಂತ ತೀರ್ಥಂಕರರೆಂಬ ಕಾರನಕ್ಕೇನೋ ತಿಳಿಯದು ಕಾಗದದ ಉಳಿದ ಎಲ್ಲಾ ಖಾಲಿ ಜಾಗವನ್ನು ಹೂ ಬಳ್ಳಿಗಳಿಂದಲೇ ಸಂಪೂರ್ಣಗೊಳಿಸಿದ್ದು ಕಲಾವಿದರಿಗಿದ್ದ ನಿಸರ್ಗ ಪ್ರೇಮದ ಪರಿಚಯವಾಗುತ್ತದೆ. ಇಲ್ಲಿ ಹೆಚ್ಚು ಕೆಂಪು, ಹಳದಿ, ಹಸಿರು ಮಿಶ್ರಿತ ನೀಲಿ, ಹಸಿರು, ಬಿಳಿ, ಕಪ್ಪು ಈ ವರ್ಣಗಳನ್ನು ಬಳಸಿಕೊಂಡು ಚಿತ್ರ ಸಂಪೂರ್ಣ-ಗೊಳಿಸಲಾಗಿರುವುದು.

ಚಿತ್ರ-೧೦. ಶೀತಲನಾಥ ತೀರ್ಥಂಕರರ ಕಾಗದ ಚಿತ್ರ

ಭದ್ರಪುರದ ಇಕ್ಷ್ವಾಕು ವಂಶದ ದೃಡರಥ ಹಾಗೂ ಸುನರಾ ದಂಪತಿಗಳಿಗೆ ಚೈತ್ರ ಮಾಸ ಕೃಷ್ಣಪಕ್ಷ ಅಅಷ್ಟಮಿ ತಿಥಿಯಂದು ಗರ್ಭಾವತರಣ ಕಲ್ಯಾಣವಾಗಿ ಮಾಘ ಮಾಸ ಕೃಷ್ಣಪಕ್ಷ ದ್ವಾದಶಿ ತಿಥಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಶೀತಲನಾಥ ಜನನವಾಯಿತು ೯೦ ಬಿಲ್ಲು ಎತ್ತರವಿದ್ದರೂ ಇವರಿಗೆ ಮಾಘಮಾಸದ ಕೃಷ್ಣಪಕ್ಷದಲ್ಲಿ ದ್ವಾದಶಿಯಲ್ಲಿ ದೀಕ್ಷಾ ಕಲ್ಯಾಣವಾಗಿ ಮೂರು ವರ್ಷಗಳ ತಪಸ್ಸಿನ ನಂತರ ಪುಷ್ಯ ಮಾಸ ಕೃಷ್ಣಪಕ್ಷ ಚತುರ್ದಶಿಯಂದು ಬಿಲ್ವ ವೃಕ್ಷದಡಿ ಕೇವಲ ಜ್ಞಾನ ಕಲ್ಯಾಣ ಪ್ರಾಪ್ತವಾಗಿ ಅನಗಾರ ಕೇವಲಿಗಳೇ ಮೊದಲಾಗಿ ೮೧ ಮಂದಿ ಗಣಧರರು ಕಲ್ಪವೃಕ್ಷ ಲಾಂಚನ ಬ್ರಹ್ಮದೇವ ಮಾನವಿ ಎಂಬ ಯಕ್ಷ ಯಕ್ಷಿಯರು ಪ್ರಾಪ್ತರಾಗಿ ಒಟ್ಟು ಒಂದು ಲಕ್ಷ ಪೂರ್ವಿ ಆಯುಷ್ಯ ಸಂಪೂರ್ಣಗೊಳಿಸಿ ಆಶ್ವಿಜ ಮಾಸ ಶುದ್ದ ಅಷ್ಟಮೀ ತಿಥಿಯಂದು ಸಮ್ಮೇದಗಿರಿಯ ವಿದ್ಯದ್ವರಕೂಟ ಎಂಬಲ್ಲಿ ನಿರ್ವಾಣ ಕಲ್ಯಾಣ ನಡೆಯಿತು.

ಈ ಚಿತ್ರದಲ್ಲಿ ಶೀತಲನಾಥರು ಗಾಡ ಹಸಿರು ಹಳದಿ ವರ್ಣಗಳ ಮಿಶ್ರಣದ ಶ್ಯಾಮಲ ವರ್ಣದಂತೆ ತೋರುತ್ತಿದ್ದು ದಿಗಂಬರರಾಗಿ ಕೆಂಪು ಬಿಳಿ ಮಿಶ್ರಣದ ಕಮಲದ ಮೇಲೆ ನಿಂತಿರುವವರು ಇವ ತಲೆಯ ಹಿಂದೆ ಬಿಳಿಯ ಪ್ರಭಾವಳಿ ರೇಖೆಯಿದ್ದು ಕೀರ್ತಿಮುಖವುಳ್ಳ ಸುವರ್ಣ ಬಣ್ಣದ ಕಮಾನನ್ನು ಕಾಣಬಹುದು ಎರಡು ಬದಿಗಳಲ್ಲಿ ಕಮಾನಿಗೆ ಗೋಡೆ ಹಾಗೂ ಕಂಬದ ಆಧಾರವಿದ್ದು ಆ ಗೋಡೆಯ ಮೇಲು ಹೂವಿನ ಗಿಡದ ಭಿತ್ತಿ ಚಿತ್ರದಂತಹ ಚಿತ್ರರಚನೆಯನ್ನು ಕಾಣಬಹುದು ಬಲಬದಿಯಲ್ಲಿ ಬ್ರಹ್ಮದೇವ ಯಕ್ಷನ ಚಿತ್ರವಿದ್ದು ನಾಲ್ಕು ಬಾಹುಗಳನ್ನು ಹೊಂದಿ ಕಿರೀಟಾದಿ ಶಲ್ಯ

ದೋತ್ರಗಳನ್ನು ಧರಿಸಿರುವ ಯಕ್ಷನು ತನ್ನ ಕೈಯಲ್ಲಿ ಹೂವಿನ ಹಾರ ಹಿಡಿದು ನಿಂತಿದ್ದು ಎಡಬದಿಯಲ್ಲಿ ಮಾನವಿ ಎಂಬ ಯಕ್ಷಿಯು ಕೆಂಪುರವಿಕೆ ಬಿಳಿ ನೀಲಿ ಮಿಶ್ರವರ್ಣದ ಕುಪ್ಪಸವನ್ನು ತೊಟ್ಟು ಹೂವನ್ನು ಹಿಡಿದು ನಾಲ್ಕು ಬಾಹುಗಳನ್ನು ಹೊಂದಿ ನಿಂತಿರುವಳು ಯಕ್ಷಿಯ ಹಿಂದೂ ಒಂದು ತೆಂಗಿನ ಮರದ ಚಿತ್ರವಿದ್ದು ತೀರ್ಥಂಕರರ ಕೆಳಭಾಗದಲ್ಲಿ ಪೀಠವಿದ್ದು ಕೆಂಪು, ನೀಲಿ, ಬಿಳಿ, ಹಳದಿ, ಕಪ್ಪು ವರ್ಣದಿಂದ ಸಿಂಗರಿಸಲಾಗಿದ್ದು ಇದರ ಮುಂಭಾಗದಲ್ಲಿ ಕಲ್ಪವೃಕ್ಷದ ಲಾಂಚನವಿದೆ ಇದರ ಎಡಬಲ ಬದಿಗಳಲ್ಲಿ ತೆಂಗಿನ ಮರದ ಚಿತ್ರವಿದ್ದು ಖಾಲಿ ಜಾಗಗಳಲ್ಲಿ ಹೂ ಬಳ್ಳಿಗಳ ವಿನ್ಯಾಸವನ್ನು ಮಾಡಲಾಗಿರುವುದು ಹೆಚ್ಚಾಗಿ ಈ ಚಿತ್ರದಲ್ಲಿ ಕೆಂಪು, ಹಳದಿ, ಹಸಿರು, ನೀಲಿ, ಬಿಳಿ, ಕಪ್ಪು ವರ್ಣಗಳನ್ನು ಕಾಣಬಹುದಾಗಿದೆ.

ಚಿತ್ರ-೧೧. ಶ್ರೇಯಾಂಸನಾಥ ತೀರ್ಥಂಕರರ ಕಾಗದದ ಚಿತ್ರ

ಸಿಂಹಪುರಿಯ ಇಕ್ಷ್ವಾಕು ವಂಶದ ವಿಮಲವಾಹನ ಮತ್ತು ನಂದಾದೇವಿ ದಂಪತಿಗಳಿಗೆ ಜ್ಯೇಷ್ಠಮಾಸ ಕೃಷ್ಣಪಕ್ಷ ಷಷ್ಠಿ ತಿಥಿಯಂದು ಗರ್ಭಾವತರಣ ಕಲ್ಯಾಣ ಜರುಗಿ ಫಾಲ್ಗುಣ ಮಾಸ ಕೃಷ್ಣ ಏಕಾದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಜನನವಾಯಿತು ಇವ ಎತ್ತರ ೮೦ ಬಿಲ್ಲು ಇವರಿಗೆ ಫಾಲ್ಗುಣ ಮಾಸ ಕೃಷ್ಣಪಕ್ಷ ಏಕಾದಶಿಯಂದು ದೀಕ್ಷ ಕಲ್ಯಾಣವಾಗಿ ಸತತ ೨ ವರ್ಷಗಳ ತಪಸ್ಸನ್ನು ಮಾಡಿ ಮಾಘ ಮಾಸ ಕೃಷ್ಣಪಕ್ಷ ಅಮಾವಾಸ್ಯೆ ತಿಥಿಯಂದು ತುಂಬುರಾ ವೃಕ್ಷದಡಿಯಲ್ಲಿ ಕೇವಲಜ್ಞಾನ ಕಲ್ಯಾಣ ಪ್ರಾಪ್ತವಾಗಿ ಕುಂಥು ಭಟ್ಟಾದಕರೇ ಮುಮತಾಗಿ ೭೭ ಮಂದಿ ಗಣಧರರು ಈಶ್ವರ ಗೌರಿ ಯಕ್ಷ ಯಕ್ಷಿಯರು ಬೇರುಂಡ ಲಾಂಚನ ಪ್ರಾಪ್ತವಾಗಿ ೮೪ ಲಕ್ಷ ವರ್ಷಗಳ ಕಾಲ ಆಯುಷ್ಯಹೊಂದಿ ಶ್ರಾವಣ ಮಾಸ ಶುಕ್ಲಪಕ್ಷ ಪೂರ್ಣಿಮಾ ತಿಥಿಯಂದು ಸಮ್ಮೇದಗಿರಿಯ ಸಂಕುಲ ಕೂಟದಲ್ಲಿ ನಿರ್ವಾಣ ಕಲ್ಯಾಣವನ್ನು ಹೊಂದಿದರು.

ಈ ಚಿತ್ರದಲ್ಲಿ ಶ್ರೇಯಾಂಸನಾಥರು ಹಳದಿ, ಹಸಿರು ಮಿಶ್ರಿತ ಶ್ಯಾಮಲ ವರ್ಣದಂತಿದ್ದು ದಿಗಂಬರರಾಗಿ ಕಮಲ ಪುಷ್ಪದ ಮೇಲೆ ನಿಂತಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದೆ. ಸುವರ್ಣ ವರ್ಣದ ಕೀರ್ತಿ ಮುಖವುಳ್ಳ ಕಮಾನಿದ್ದು ಕೆಳಭಾಗದಲ್ಲಿ ವಿನ್ಯಾಸ ಸ್ಥಂಬಗಳು ಹಾಗೂ ಕಮಾನಿನ ಆಧಾರ ಗೋಡೆ ಇದ್ದು ಇದರ ಮೇಲು ಹಾಗೂ ಕಮಾನಿನ ಗೋಡೆಯ ಮೇಲು ತಿಳಿ ಹಸಿರು ವರ್ಣ ಲೇಪಿಸಿ ಅದರ ಮೇಲೆ ಗಾಡ ಹಸಿರಿನಿಂದ ಹೂವಿನ ಗಿಡದ ಹೂಬಳ್ಳಿಯ ವಿನ್ಯಾಸಗಳನ್ನು ಮಾಡಲಾಗಿದ್ದು ಕಮಾನಿನ ವಿನ್ಯಾಸವು ವಿಶೇಷವಾಗಿ ಜ್ವಾಲಾ ಪುಷ್ಪಗಳ ವಿನ್ಯಾಸದಲ್ಲಿ ಚಿತ್ರಿಸಲಾಗಿದೆ.

ತೀರ್ಥಂಕರರ ಬಲಬದಿಯಲ್ಲಿರುವ ಈಶ್ವರ ಯಕ್ಷರು ಬಿಳಿ ದೋತ್ರ ಹಾಗೂ ಕೆಂಪು ಶಲ್ಯವನ್ನು ತೊಟ್ಟು ಕಿರಾಟಾಭರಣಗಳನ್ನು ಧರಿಸಿ ನಿಂತಿದ್ದು ನಾಲ್ಕು ಬಾಹುಗಳನ್ನು ಇವರು

ಹೊಂದಿರುವವರು ಕೈಯಲ್ಲಿ ಪುಷ್ಪವನ್ನು ಹಿಡಿದು ತೀರ್ಥಂಕರರನ್ನು ನೋಡುವ ರೀತಿಯಲ್ಲಿ ಕಲಾವಿದನು ಚಿತ್ರ ರಚಿಸಿರುವನು. ಇನ್ನು ಇವರ ಎಡಬದಿಯಲ್ಲಿ ನಿಂತಿರುವ ಗೌರಿ ಯಕ್ಷಿಯು ಕೆಂಪು ರವಿಕೆ ಹಾಗೂ ಹಸಿರು ಕುಪ್ಪಸವನ್ನು ತೊಟ್ಟು ತಲೆಯಲ್ಲಿ ತುರುಬನ್ನು ಕಟ್ಟಿ ಸಕಲ ಆಭರನಗಳನ್ನು ಧರಿಸಿ ಹೂಮಾಲೆಯನ್ನು ಹಿಡಿದು ತೀರ್ಥಂಕರರನೇ ನೋಡುವ ರೀತಿಯಲ್ಲಿ ಚಿತ್ರಿಸಲಾಗಿದೆ. ತೀರ್ಥಂಕರರ ಕೆಳಗಿನ ಪೀಟದಲ್ಲಿ ಇವರ ಲಾಂಛನವಾದ ಬೇರುಂಡವನ್ನು ಚಿತ್ರಿಸಲಾಗಿದ್ದು ಈ ಗರುಡನು ಮಂಡಿಯೂರಿ ಹೂಮಾಲೆಯನ್ನು ಹಿಡಿದು ಕುಳಿತಿರುವಂತೆ ತೋರಿಸಲಾಗಿದೆ ಉಳಿದಂತೆ ಇನ್ನೆಲ್ಲಾ ಕಡೆ ಹೂಬಳ್ಳಿಯ ವಿನ್ಯಾಸವನ್ನು ಮಾಡಲಾಗಿದೆ ಇಲ್ಲಿ ಹೆಚ್ಚಾಗಿ ಕೆಂಪು ನೀಲಿ ತಿಳಿ ಹಸಿರು ಹಳದಿ ಬಿಳಿ ಕಪ್ಪು ವರ್ಣಗಳನ್ನು ಬಳಸಿ ಚಿತ್ರಿಸಲಾಗಿದೆ.

ಚಿತ್ರ–೧೨. ವಾಸ್ತುಪೂಜ್ಯ ತೀರ್ಥಂಕರ ಕಾಗದದ ಚಿತ್ರ

ಚಂಪಾಪುರದ ಇಕ್ಷ್ವಾಕು ವಂಶದ ವಸುಪೂಜ್ಯ ರಾಜ ಹಾಗೂ ವಿಜದೇವಿ ದಂಪತಿಗಳಿಗೆ ಆಘಾತ ಕೃಷ್ಣಷಷ್ಟಿಯಂದು ಗರ್ಭಾವತರಣ ಕಲ್ಯಾಣವಾಗಿ ಫಾಲ್ಗುಣ ಕೃಷ್ಣ ಚತುರ್ದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಇವರ ಜನನವಾಯಿತು ಇವರು ೭೦ ಬಿಲ್ಲು ಎತ್ತರವಿದ್ದು ಫಾಲ್ಗುಣ ಕೃಷ್ಣ ಚತುರ್ದಶಿಯಂದು ದೀಕ್ಷ ಕಲ್ಯಾಣವಾಗಿ ಒಂದು ವರ್ಷಗಳ ಕಾಲ ತಪಸ್ಸುಮಾಡಿ ಮಾಘ ಶುಕ್ಲ ಬಿದಿಗೆಯಂದು ಕದಂಬ ವೃಕ್ಷದ ಕೆಳಗೆ ಕೇವಲ ಜ್ಞಾನ ಕಲ್ಯಾನವಾಗಿ ಮಹಿಷ ಲಾಂಛನ ಸೇರಿದಂತೆ ಧರ್ಮವೆಂಬುವವರೇ ಮುಂತಾಗಿ ೬೬ ಮಂದಿ ಗಣಧರರು ಕುಮಾರ ಮತ್ತು ಗಾಂಧಾರಿ ಎಂಬ ಯಕ್ಷ ಯಕ್ಷಿಯರು ಪ್ರಾಪ್ತರಾದರು ಒಟ್ಟು ೭೨ ಲಕ್ಷ ವರ್ಷ ಆಯುಷ್ಯ ಮುಗಿಸಿ ಭಾದ್ರಪದ ಕೃಷ್ಣ ಚತುರ್ದಶಿಯಂದು ಚಂಪಾಪುರದಲ್ಲಿ ನಿರ್ವಾನ ಕಲ್ಯಾಣ ಹೊಂದಿದರು.

ಈ ಚಿತ್ರದಲ್ಲಿ ವಾಸುಪೂಜ್ಯರು ಗಾಡ ಕೆಂಪುವರ್ಣದಲ್ಲಿ ದಿಗಂಬರರಾಗಿ ನಿಂತುಕೊಂಡಿದ್ದು ಹಿಂಬದಿಯಲ್ಲಿ ನೀಲಿವರ್ಣ ಕಮಾನಿನ ಮೇಲೆ ಕೀರ್ತಿಮುಖವನ್ನು ತೋರಿಸಲಾಗುವುದು ಕಮಾನಿನ ಗೋಡೆಯಮೇಲೆ ದೊಡ್ಡದಾಗಿ ಹೂಬಳ್ಳಿಯ ಚಿತ್ತ ಚಿತ್ರವಿನ್ಯಾಸವನ್ನು ಕಾಣಬಹುದಿದ್ದು ಹಿಂಬದಿಯ ಗೋಡೆಯ ಮೇಲೂಸಹ ಕೆಂಪು ಹೂ ಹಾಗೂ ನೀಲಿ ಎಲೆಗಳ ಹೂ ಬಳ್ಳಿಯ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ. ಪೀಟದಿಂದ ಕೆಳಭಾಗದಲ್ಲಿ ಮತ್ತು ಎರಡು ಬದಿಗಳಲ್ಲಿ ಕಪ್ಪು ಕಲ್ಲುಗಳಿಂದ ನಿರ್ಮಿತವಾದಂತೆ ಗೋಡೆಯನ್ನು ತೋರಿಸಲಾಗಿರುವು. ಕೆಳಭಾಗದಲ್ಲಿ ಪೀಟವಿದ್ದು ಅಲ್ಲಿ ಮಹಿಷ ಕಾಲನ್ನು ಮಡಚಿ ಕುಳಿತಿರುವಂತೆ ತೋರಿಸಲಾಗಿದೆ ತೀರ್ಥಂಕರರ ಬಲಬದಿಯಲ್ಲಿ ಕುಮಾರ ಯಕ್ಷನು ನಾಲು ಬಾಹುಗಳನ್ನು ಹೊಂದಿ ಕೈಯಲ್ಲಿ ಹೂಮಾಲೆಯನ್ನು ಹಿಡಿದು ನಿಂತಿರುವಂತೆ ತೋರಿಸಲಾಗಿದೆ ಹಾಗೂ ಒಟ್ಟಾರೆಯಾಗಿ ಈ ಚಿತ್ರದಲ್ಲಿ ಕೆಂಪು, ನೀಲಿ, ಗಾಡ ನೀಲಿ, ತಿಳಿಗಪ್ಪು, ಹಸಿರು, ಬಿಳಿ, ಕೇಸರಿ ವರ್ಣಗಳನ್ನು ರಚಿಸಲಾಗಿದ್ದು ನೋಡಲು ಸುಂದರವಾಗಿ ಮೂಡಿ ಬಂದಿದೆ.

ಚಿತ್ರ-೧೩. ವಿಮಲನಾಥ ತೀರ್ಥಂಕರರ ಕಾಗದದ ಚಿತ್ರ

ಕಾಂಪಿಲ್ಯ ನಗರದಲ್ಲಿ ಕೃತವರ್ಮ ರಾಜ ಹಾಗೂ ಜಯಶ್ಯಾಮಾದೇವಿ ದಂಪತಿಗಳಿಗೆ ಜ್ಯೇಷ್ಠ ಕೃಷ್ಣದಶಮಿಯಮದು ಗರ್ಭಾವತರಣವಗಿ ಮಾಘ ಶುಕ್ಲ ಚೌತಿಯಂದು ಜನ್ಮಾಭಿಷೇಕ ಕಲ್ಯಾಣದಂದು ಇವರ ಜನನವಾಯಿತು ೬೦ ಬಿಲ್ಲು ಎತ್ತರವಿದ್ದು ಇವರು ಮಾಘ ಶುಕ್ಲ ಚೌತಿಯಂದು ದೀಕ್ಷ ಕಲ್ಯಾಣ ಹೊಂದಿ ೩ ವರ್ಷಗಳ ಕಾಲ ತಪಸ್ಸುಮಾಡಿದರು ಇದಾದ ಬಳಿಕ ಮಾಘ ಶುಕ್ಲ ಷಷ್ಠಿಯಂದು ಜಂಬೂ ವೃಕ್ಷದಡಿಯಲ್ಲಿ ಕೇವಲ ಜ್ಞಾನ ಕಲ್ಯಾಣ ಹೊಂದಿ ಮಂದಾರರೇ ಮುಂತಾಗಿ ೫೫ ಮಂದಿ ಗಣಧರರನ್ನು ವರಹ ಲಾಂಛನವನ್ನು ಷಣ್ಮುಖ ಮತ್ತು ಮತ್ತು ವೈಕೋಟಿ ಯಕ್ಷ ಯಕ್ಷಿಯರನ್ನು ಹೊಂದಿದನು ೬೦ ಲಕ್ಷ ವರ್ಷ ಆಯುಷ್ಯನಂತರ ಆಷಾಢಕೃಷ್ಣ ಅಷ್ಟಮಿಯಂದು ಸಮ್ಮೇಧಗಿರಿ ಸುವೀರ ಕೂಟ ಎಂಬಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರದಲ್ಲಿ ವಿಮನಾಥರು ಹಸಿರು, ಹಳದಿ ಮಿಶ್ರ ಶ್ಯಾಮಲ ವರ್ಣದಲ್ಲಿದ್ದು ದಿಗಂಬರರಾಗಿ ನಿಂತಿರುವರು ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವಿದ್ದು ಲೇಪಸ್ತಂಭ ಛತ್ರಿ ಜಾಮರಗಳನ್ನು ತೀರಿಸಲಾಗಿರುವುದು ಇಲ್ಲಿ ಮೂರು ಕಮಾನು ಗೋಪುರಗಳಿದ್ದು ಇನ್ನೆರಡು ಯಕ್ಷ ಯಕ್ಷಿಯರಿಗೆ ಸೇರುತ್ತದೆ. ಹಸಿರು, ಹಳದಿ, ಕೆಂಪು, ಬಿಳಿ ವರ್ಣಗಳ ಸಂಯೋಜನೆಯಲ್ಲಿ ಗೋಪುರವಿದ್ದು ಕಳಸವನ್ನು ಚಿತ್ರಿಸಲಾಗಿದೆ. ಪಕ್ಕದ ಗೋಪುರಗಳ ಮೇಲೆ ಕಾಲಿಡುತ್ತ ಮಧ್ಯದ ಗೋಪುರವನ್ನು ಏರಲು ಪ್ರಯತ್ನಿಸುತ್ತಿರುವ ಎರಡು ಮಂಗಗಳು ಹಿಂತಿರುಗಿ ಹೂಬಳ್ಳಿಯ ಮೇಲೆ ಕುಳಿತಿರುವ ಗಿಳಿಗಳನ್ನು ನೋಡುತ್ತಿರುವವು ಇವರ ಬಲಬದಿಗೆ ಷಣ್ಮುಖ ಯಕ್ಷನಿದು ಹಳದಿ ಗೋತ್ರ ಕೆಂಪು ಶಲ್ಯಗಳನ್ನು ತೊಟ್ಟು ಕಿರೀಟಾಭರನಗಳನ್ನು ಧರಿಸಿ ತೀರ್ಥಂಕರರಿಗೆ ಕೈಜೋಡಿಸಿ ನಿಂತಿರುವಂತೆ ಚಿತ್ರಿಸಲಾಗಿದೆ ಇನ್ನು ಇವರ ಬಲಬದಿಯಲ್ಲಿ ಹಸಿರು ರವಿಕೆ, ಕೆಂಪು ಕುಪ್ಪಸವನ್ನು ತೊಟ್ಟು ನಾಲ್ಕು ಬಾಹುಗಳನ್ನು ಹೊಂದಿ ಕೈಜೋಡಿಸಿ ನಮಿಸುತ್ತಿದು ಇನ್ನೊಂದು ಕೈಯಲ್ಲಿ ಹೂಮಾಲೆಯನ್ನು ಹಿಡಿದು ನಿಂತಂತೆ ತೋರಿಸಲಾಗಿದೆ. ಕೆಳಭಾಗದಲ್ಲಿ ತೀರ್ಥಂಕರರ ಪೀಡವಿದ್ದು ಕಲುವಡಿಚಿಕೊಂಡು ಕುಳಿತಿರುವ ವರಾಹ ಲಾಂಛನವನ್ನು ಚಿತ್ರಿಸಲಾಗಿದೆ. ಉಳಿದಂತೆ ಇಲ್ಲಿ ಕೆಂಪು, ಹಸಿರು, ಹಳದಿ, ನೀಲಿ, ಬಿಳಿ, ಕಪ್ಪು ವರ್ಣಗಳನ್ನು ಬಳಸಿಕೊಂಡು ಚಿತ್ರವನ್ನು ಸಂಪೂರ್ಣಗೊಳಿಸಲಾಗಿದೆ.

ಚಿತ್ರ-೧೪. ಅನಂತನಾಥ ತೀರ್ಥಂಕರರ ಕಾಗದದ ಚಿತ್ರ

ಅಯೋಧ್ಯ ನಗರದ ಇಕ್ಷ್ವಾಕು ವಂಶದಲ್ಲಿ ಸಿಂಹಸೇನ ರಾಜ ಹಾಗೂ ಲಕ್ಷ್ಮಿಮತಿ ದಂಪತಿಗಳಿಗೆ ಕಾರ್ತೀಕ ಕೃಷ್ಣ ಪಾಡ್ಯದಂದು ಗರ್ಭಾವತರಣ ಕಲ್ಯಾಣ ಹೊಂದಿ ಜ್ಯೇಷ್ವ ಕೃಷ್ಣ ದ್ವಾದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಇವರ ಜನನವಾಯಿತು ಇವರು ೫೦ ಬಿಲ್ಲು ಎತ್ತರವಿದ್ದು ಜ್ಯೇಷ್ಠ ಕೃಷ್ಣ

ದ್ವಾದಸಿಯಂದು ದೀಕ್ಷ ಕಲ್ಯಾಣಹೊಂದಿ ಎರಡು ವರ್ಷಗಳ ಸುದೀರ್ಗ ತಪಸ್ಸು ಮಾಡಿ ಚೈತ್ರ ಕೃಷ್ಣ ಅಮವಾಸ್ಯೆಯಂದು ಅಶ್ವತ್ಥ ವೃಕ್ಷದ ಕೆಳಗೆ ಕೇವಲ ಜ್ಞಾನ ಕಲ್ಯಾಣವನ್ನು ಹೊಂದಿ ಜಯಧಾಮರೇ ಮುಂತಾಗಿ ೫೦ ಮಂದಿ ಗಣಧರರುಗಳು, ಕರಡಿ ಲಾಂಛನ, ಪಾತಾಳಯಕ್ಷ ಮತ್ತು ಅನಂತಮತಿ ಎಂಬ ಯಕ್ಷ ಯಕ್ಷಿಯರನ್ನು ಹೊಂದಿದರು ಇದಾದಬಳಿಕ ಒಟ್ಟು ೩೦ ಲಕ್ಷ ವರ್ಷಗಳು ಆಯುಷ್ಯದಲ್ಲಿ ಬದುಕಿ ಚೈತ್ರ ಕೃಷ್ಣ ಅಮಾವಾಸ್ಯೆಯಂದು ಸಮ್ಮೇಧಗಿರಿ ಸ್ವಯಂ ಪ್ರಭಕೂಟ ಎಂಬಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರವು ಉಳಿದ ಚಿತ್ರಗಳಿಗಿಂತ ವಿಶೇಷವಾಗಿದ್ದು ಇಲ್ಲಿ ಅನಂತನಾಥರು ಶ್ಯಾಮಲ ವರ್ಣದಲ್ಲಿ ದಿಗಂಬರನಾಗಿ ನಿಯ ತಲೆಯ ಮೇಲೆ ಪ್ರಭಾಕಳಸವನ್ನು ತೋರಿಸಲಾಗಿದೆ. ಗುಜರಾತಿನ ಗೋಪುರ ಕಮಾನುಗಳಂತಿರುವ ಮಂಟಪವಿದ್ದು ಮೂರು ವಿಭಾಗಗಳಾಗಿವೆ ಮಧ್ಯದಲಲ್ಲಿ ತೀರ್ಥಂಕರರು ಹಾಗೂ ಉಳಿದೆರಡೂ ಬದಿಗಳಲ್ಲಿ ಯಕ್ಷ ಯಕ್ಷಿಯರನ್ನು ಕಾಣಬಹುದಾಗಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ತೋರಿಸಲಾಗಿದೆ. ಈ ಗೋಪುರದ ಕಟ್ಟಡದ ಮೇಲೆ ಎರಡು ಹಸಿರು ಯಂಚಿನ ನಾಲ್ಕು ಕಂಬಗಳ ಚಾವಣಿಇದ್ದು ಇದರ ಕೆಳಭಾಗದಲ್ಲಿ ದೊಡ್ಡದಾದ ನಗಾರೆಗಳನ್ನು ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ಎರಡು ಬದಿಗಳಲ್ಲಿ ತೆಂಗಿನ ಮರಗಳನ್ನು ತೋರಿಸಲಾಗಿದೆ ತೀರ್ಥಂಕರರ ಬಲ ಬದಿಯಲ್ಲಿ ಶ್ವೇತವರ್ಣ ಪಾತಳಯಕ್ಷನು ನಾಲ್ಕು ಬಾಹುಗಳನ್ನು ಹೊಂದಿದ್ದು ಕೈಮುಗಿದು ನಿಂತಿರುವಂತೆ ತೋರಿಸಲಾಗಿದ್ದು ಒಂದು ಕೈಯಲ್ಲಿ ಹೂವಿನ ಮಾಲೆಯನ್ನು ಹಿಡಿದಿದ್ದಾನೆ ಕಿರೀಟಾಭರಣಗಳನ್ನು ಧರಿಸಿ ನಿಂತಿರುವನು ಇತ್ತ ಎಡಬದಿಯಲ್ಲಿ ಅನಂತಮತಿ ಯಕ್ಷಿಯು ಹಸಿರು ಕುಪ್ಪಸ ಹಾಗೂ ಹಸಿರು ಮಿಶ್ರಿತ ಹಳದಿ ರವಿಕೆಯ ತೊಟ್ಟು ನಾಲ್ಕು ಬಾಹುಗಳನ್ನು ಹೊಂದಿ ಕೈಜೋಡಿಸಿ ನಿಂತಿದ್ದು ಕೈಯಲ್ಲಿ ಹೂ ಮಾಲೆಯನ್ನು ಹಿಡಿದು ನಿಂತಿದ್ದಾಳೆ ಈಕೆಯು ತಲೆಯ ಮೇಲೆ ಕುಪ್ಪಸವನ್ನು ಧರಿಸಿದ್ದಾಳೆ ಇವರ ಕೆಳಭಾಗದಲ್ಲಿ ತೀರ್ಥಂಕರರ ಪೀಟವಿದ್ದು ಅಲ್ಲಿ ಅವರ ಲಾಂಛನವಾದ ಕರಡಿಯನ್ನು ಚಿತ್ರಿಸಲಾಗಿದೆ.

ಚಿತ್ರ-೧೫. ಧರ್ಮನಾಥ ತೀರ್ಥಂಕರರ ಕಾಗದದ ಚಿತ್ರ

ರತ್ನಪುರಿಯ ಕುರುವಂಶದ ಭಾನುರಾಜ ಮತ್ತು ಸುಪ್ರಭಾದೇವಿ ದಂಪತಿಗಳಿಗೆ ವೈಶಾಖ ಕೃಷ್ಣತ್ರಯೋದಶಿಯಂದು ಗರ್ಭಾವತರಣ ಕಲ್ಯಾಣವಾಗಿ ಮಾಘ ಶುದ್ಧ ತ್ರಯೋದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಜನಿಸದಿರು ಇವರು ೪೫ ಬಿಲ್ಲು ಎತ್ತರವಿದ್ದು ಮಾಘ ಶುದ್ಧ ತ್ರಯೋದಶಿಯಂದು ದೀಕ್ಷಾ ಕಲ್ಯಾಣವಾಯಿತು ನಂತರ ೧ ವರ್ಷಕಾಲ ತಪಸ್ಸುಮಾಡಿ ಪುಷ್ಯ ಕೃಷ್ಣ ಪೌರ್ಣಿಮೆಯಂದು ಎಳೆಲೆ ಬಾಳೆಗಿಡದ ಬುಡದಲ್ಲಿ ಕೇವಲಜ್ಞಾನ ಕಲ್ಯಾಣವಾಯಿತು ಇದರೊಂದಿಗೆ

ಅರಿಷ್ಟಸೇನರೇ ಮುಂತಾಗಿ ೪೩ ಮಂದಿ ಗಣಧರರು ಕಿನ್ನರ ಮತ್ತು ಮಾನಸಿ ಯಕ್ಷ ಯಕ್ಷಿಯರು, ವಜ್ರ ಲಾಂಛನವನ್ನು ಹೊಂದಿದ್ದರು ಇದರೊಂದಿಗೆ ೧೦ ವರ್ಷ ಆಯುಷ್ಯವನ್ನು ಹೊಂದಿದ ತೀರ್ಥಂಕರರು ಜ್ಯೇಷ್ಟಶುಕ್ಲ ಚೌತಿಯಂದು ಸಮ್ಮೇದಗಿರಿ ಸುದತ್ತಾವರ ಕೂಟದಲ್ಲಿ ನಿರ್ವಾಣ ಕಲ್ಯಾಣವನ್ನು ಹೊಂದಿದರು.

ಈ ಚಿತ್ರದಲ್ಲಿ ಸುವರ್ಣ ವರ್ಣದಲ್ಲಿ ಕಂಗೊಳಿಸುವ ಧರ್ಮನಾಥರು ಕಮಲದ ಹೂವಿನ ಮೇಲೆ ದಿಗಂಬರರಾಗಿ ನಿಂತಿದ್ದು ತಲೆಯ ಹಿಂದೆ ಶ್ವೇತಪ್ರಭೆಯನ್ನು ತೋರಿಸಲಾಗಿರುವುದು ಹಿನ್ನೆಲೆಯಲ್ಲಿ ಕೆಂಪುವರ್ಣ ಹಾಗೂ ಬಿಳಿ ಮೂರು ಮೂರು ಚುಕ್ಕಿಗಳ ಹೂಗಳನ್ನು ತೋರಿಸಲಾಗಿದ್ದು ಸುವರ್ಣ ಕಮಾನಿನ ಮಂಟಪವನ್ನು ತೋರಿಸಲಾಗಿದೆ ಇವರ ಬಲಬದಿಗೆ ಕಿನ್ನರ ಯಕ್ಷ ಹಾಗೂ ಬಜಗಳನ್ನು ಒಂದು ಕೈಯಲ್ಲಿ ಹೂಮಾಲೆಯನ್ನು ಹಿಡಿದು ನಿಂತಿರುವಂತೆ ತೀರ್ಥಂಕರರ ಕೆಳಭಾಗದಲ್ಲಿ ಪೀಟವಿದ್ದು ಅಲ್ಲಿ ವಜ ಲಾಂಛನವನ್ನು ತೋರಿಸಲಾಗಿದೆ ಇನ್ನುಳಿದಂತೆ ಸುತ್ತಲೂ ಹೂಬಳ್ಳಿಗಳನ್ನು ತೋರಿಸಲಾಗಿದ್ದು ವಿಶೇಷವಾಗಿ ಮಾನಸೀ ಯಕ್ಷಿಯ ಸೀರೆಯನ್ನು ನೇರಳೆವರ್ಣದಲ್ಲಿ ತಿರಿಸಿರುವುದು ವಿಶೇಷ ಈ ಚಿತ್ರದಲ್ಲಿ ಹೆಚ್ಚಾಗಿ ಹಳದಿ, ಕೆಂಪು, ಹಸಿರು, ಬಿಳಿ, ನೇರಳೆ ವರ್ಣಗಳನ್ನು ಬಳಸಿ ಚಿತ್ರರಚಿಸಲಾಗಿದೆ.

ಚಿತ್ರ-೧೬. ಶಾಂತಿನಾಥ ತೀರ್ಥಂಕರ ಕಗದದ ಚಿತ್ರ

ಹಸ್ತಿನಾಪುರದ ಕುರುವಂಶದಲ್ಲಿ ವಿಶ್ವಸೇನರಾಜ ಹಾಗೂ ಐರಾದೇವಿ ದಂಪತಿಯರು ಭಾದ್ರಪದ ಕೃಷ್ಣ ಸಪ್ತಮಿಯಂದು ಗರ್ಭಾವತರನ ಕಲ್ಯಾಣ ಹೊಂದಿ ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ಜನ್ಮಾಭಿಷೇಕ ಕಲ್ಯಾಣವಾಗಿ ಜನನವಾಯಿತು ಇವರು ೪೦ ಬಿಲ್ಲು ಎತ್ತರವಿದ್ದು ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ದೀಕ್ಷಾ ಕಲ್ಯಾಣಹೊಂದಿ ೧೬ವರ್ಷಗಳ ಕಾಲ ತಪಗೈದು ಪುಷ್ಯಶುಕ್ಲ ದಶಮಿಯಂದು ನಂದ್ಯಾವರ್ತ ವೃಕ್ಷದಡಿಯಲ್ಲಿ ಕೇವಲಜ್ಞಾನ ಕಲ್ಯಾಣಹೊಂದಿ ಚಕ್ರಾಯಧರೇ ಮುಂತಾಗಿ ೩೬ ಮಂದಿ ಗಣಧರರು ಗರುಡ, ಮಹಮಾನಸಿ ಯಕ್ಷ ಯಕ್ಷಿಯರು ಜಿಂಕೆ ಲಾಂಛನವನ್ನು ಹೊಂದಿದರು ಒಂದು ಲಕ್ಷ ವರ್ಷಗಳ ಒಟ್ಟು ಆಯುಷ್ಯವನ್ನು ಹೊಂದಿ ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ಸಮ್ಮೇದಗಿರಿ ಕುಂದಪ್ರಭ ಕೂಟದಲ್ಲಿ ನಿರ್ವಾಣ ಕಲ್ಯಾಣವನ್ನು ಹೊಂದಿದರು.

ಈ ಚಿತ್ರದಲ್ಲಿ ಶಾಂತಿನಾಥ ತೀರ್ಥಂಕರರು ಶ್ಯಾಮಲ ವರ್ಣದಲ್ಲಿದ್ದು ದಿಗಂಬರರಾಗಿ ನಿಂತಿದ್ದು ಇವರ ಹಿನ್ನೆಲೆಯಲ್ಲಿ ಗಾಡನೀಲಿ ವರ್ಣವನ್ನು ತೋರಿಸಲಾಗಿದೆ. ತಲೆಯ ಹಿಂದೆ ಪ್ರಭಾ ಛತ್ರಿಗಳಿವೆ ಹಾಗೂ ಇವರ ಮೇಲೆ ರಾಜಸ್ಥಾನ ಶೈಲಿಯ ಬಿಳಿ ನೀಲಿ ಮಿಶ್ರವರ್ಣದ ಕಮಾನು ಗೋಪುರವಿದ್ದು ಅದರ ಮೇಲೆ ಕಳಸವನ್ನು ಕಾಣಬಹುದಾಗಿದೆ ಇವರ ಎರಡೂ ಬದಿಗಳಲ್ಲೂ ಗರುಡ ಮಹಾವನಸಿ ಯಕ್ಷ ಯಕ್ಷಿಯರು ನಿಂತಿದ್ದು ನಾಲ್ಕು ಬಾಹುಗಳನ್ನು ಹೊಂದಿ ಕೈಜೋಡಿಸಿ

ನಮಸ್ಕರಿಸುವಂತೆ ತೋರಿಸಲಾಗಿದೆ. ತಮ್ಮ ಮತ್ತೊಂದು ಕೈಗಳಲ್ಲಿ ಹೂವಿನ ಮಾಲೆಗಳನ್ನು ಹಿಡಿದು ನಿಂತಿದ್ದು ವಿನಮ್ರ ಭಕ್ತಿಯು ಮುಖದಲ್ಲಿ ಗೋಚರವಾಗುತ್ತದೆ. ಈ ಯಕ್ಷ ಯಕ್ಷಿಯರ ಹಿಂದೆ ಎರಡು ವೃಕ್ಷಗಳನ್ನು ತೋರಿಸಲಾಗಿದ್ದು ಯಕ್ಷನ ಹಿಂಬದಿಯ ಮರವು ಹಸಿರು ನೀಲಿ ಹೂಗಳನ್ನು ಬಿಟ್ಟರೆ ಯಕ್ಷಿಯ ಹಿಂದಿರುವ ವೃಕ್ಷದಲ್ಲಿ ಹಳದಿ ಹೂಗಳನ್ನು ನಾವು ಕಾಣಬಹುದಾಗಿದೆ ತೀರ್ಥಂಕರರ ಕೆಳಭಾಗದಲ್ಲಿ ಪೀಠವಿದ್ದು ಅಲ್ಲಿ ಕಪ್ಪು ಜಿಂಕೆಯು ಸಾಗುತ್ತಿರುವ ಲಾಂಛನವನ್ನು ತೋರಿಸಲಾಗಿದೆ ಒಟ್ಟಾರೆಯಾಗಿ ಇಲ್ಲಿ ನೀಲಿ, ಕಪ್ಪು, ಕೆಂಪು, ಹಸಿರು, ಹಳದಿ, ಬಿಳಿವರ್ಣಗಳನ್ನು ಹೆಚ್ಚಾಗಿ ಬಳಸಿದ್ದು ಇದರಿಂದ ಚಿತ್ರಗಳನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ–೧೭. ಕುಂಥುನಾಥ ತೀರ್ಥಂಕರರ ಕಾಗದದ ಚಿತ್ರ

ಹಸ್ತಿನಾಪುರದ ಕುರುವಂಶದ ಶೂರಸೇನ ಹಾಗೂ ಶ್ರೀಕಾಂತಾದೇವಿ ದಂಪತಿಗಳಿಗೆ ಶ್ರಾವಣ ಕೃಷ್ಣದಶಮಿಯಂದು ಗರ್ಭಾವತರಣ ಕಲ್ಯಾಣಹೊಂದಿ ವೈಶಾಖ ಶುಕ್ಲಪಾಡ್ಯದಂದು ಜನ್ಮಾಭಿಷೇಕ ಕಲ್ಯಾಣವು ನಡೆದು ಇವರ ಜನನವಾಯಿತು ೩೫ ಬಿಲ್ಲು ಎತ್ತರದವರು ಇವರಿಗೆ ಚೈತ್ರಶುಕ್ಲತದಿಗೆಯಂದು ದೀಕ್ಷಾ ಕಲ್ಯಾಣ ನಡೆದು ೧೬ವರ್ಷಗಳ ಕಾಲ ತಪಸ್ಸನ್ನು ಮಾಡಿದರು ಆ ನಂತರ ಚೈತ್ರ ಶುಕ್ಲತದಿಗೆಯಂದು ತಿಲಕ ವೃಕ್ಷದಡಿಯಲ್ಲಿ ಕೇವಲ ಜ್ಞಾನ ಕಲ್ಯಾಣಹೊಂದಿ ಸ್ವಯಂಪ್ರಭಾರೆ ಮುಂತಾಗಿ ೩೫ ಮಂದಿ ಗಣಧರರು ಗಂಧರ್ವ ಮತ್ತು ಜಯದೇವಿ ಎಂಬ ಯಕ್ಷ ಯಕ್ಷಿಯರು ಮೇಷ ಲಾಂಛನಗಳು ಇವರಿಗೆ ದೊರಲಿ ೯ ಸಾವಿರ ವರ್ಷ ಆಯುಷ್ಯವನ್ನು ಮುಗಿಸಿ ವೈಶಾಖ ಶುಕ್ಲ ಪಾಡ್ಯದಂದು ಸಮ್ಮೇದಗಿರಿ ಜ್ಞಾನಧರ ಕೂಟದಲ್ಲಿ ನಿರ್ವಾಣಕಲ್ಯಾಣವನ್ನು ಹಿಂದಿದರು.

ಈ ಚಿತ್ರದಲ್ಲಿ ತ್ರಿಭುಜಾಕಾರರದ ಜಗತಿ ಇದ್ದು ಅದರ ಮೇಲೆ ಮೂರು ಕಮಾನುಗಳುಳ್ಳ ಒಂದೇ ಗೋಪುರ ಮಂಟಪವಿದ್ದು ಇದರ ಮಧ್ಯದ ಕಮಾನಿನಲ್ಲಿ ತೀರ್ಥಂಕರರು ಶ್ಯಾಮಲ ವರ್ಣದಲ್ಲಿ ದಿಗಂಬರರಾಗಿ ಕಮಲದ ಮೇಲೆ ನಿಂತಿರುವಂತೆ ತೋರಿಸಲಾಗಿದೆ ಹಿನ್ನೆಲೆಯಲ್ಲಿ ನವಿಲು ಹಸಿರು ವರ್ಣವನ್ನು ಲೇಪಿಸಲಾಗಿದೆ. ಇವರ ಶಿರದ ಮೇಲೆ ಛತ್ರಿಕಳಸಗಳಿದ್ದು ಹೂವಿನ ಸಲನ್ನು ಕಾಣಬಹುದಾಗಿದೆ ಕಮಾನನ್ನು ಹಳದಿ, ಕೆಸರಿ, ಬಿಳಿ, ನೀಲಿ ವರ್ಣದಲ್ಲಿ ತೋರಿಸಲಾಗಿದ್ದು, ಗೋಪುರವನ್ನು ಕೆಂಪು ವರ್ಣದಲ್ಲಿ ಚಿತ್ರಿಸಲಾಗಿದ್ದು ಹಳದಿ ಕಳಸವನ್ನು ಇರಿಸಲಾಗಿದೆ ಹಾಗೂ ಈ ಗೋಪುರದ ಮೇಲೆ ಎರಡು ಗಿಳಿಗಳು ಕುಳಿತಿದ್ದು ಹಿಂಮುಖವಾಗಿ ನೋಡುತ್ತಿರುವುದು ಹಾಗೂ ಎರಡೂ ಬದಿಗಳಲ್ಲಿಯೂ ಕೆಂಪು ವರ್ಣದ ಧ್ವಜಗಳನ್ನು ಕಾಣಬಹುದಾಗಿದೆ ತೀರ್ಥಂಕರ ಬಲಭಾಗದಲ್ಲಿ ಗಂಧರ್ವ ಯಕ್ಷನು ಶ್ವೇತವರ್ಣದವನಾಗಿದ್ದು ನಾಲ್ಕು ಬಾಹುಗಳನ್ನು ಹೊಂದಿರುವನು ಅಲ್ಲದೆ ತನ್ನ ಬಾಹುಗಳಲ್ಲಿ ಹೂ ಹಾಗೂ ಹೂವಿನ ಮಾಲೆಯನ್ನು ಹಿಡಿದು ನಿಂತಿರುವನು ಎಡಬದಿಯಲ್ಲಿ

ಜಯದೇವಿ ಯಕ್ಷಿಯು ನೀಲಿ ರವಿಕೆ ಹಾಗೂ ಹಳದಿ ಕುಪ್ಪಸವನ್ನು ತೊಟು ನಾಲ್ಕು ಬಾಹುಗಳನ್ನು ಹೊಂದಿ ಹೂಮಾಲೆಯನ್ನು ಹಿಡಿದು ನಿಂತಿದ್ದಾಳೆ ಕೆಳಭಾಗದಲ್ಲಿ ಮೇಷ ಲಾಂಛನವನ್ನು ಕಾಣಬಹುದಾಗಿದೆ ಇಲ್ಲಿ ಹಾಗೂ ಎರಡೂ ಬದಿಗಳಲ್ಲು ಗುಲಾಬಿ ಗಿಡಗಳನ್ನು ಹೋಲುವ ಗಿಡಗಳನ್ನು ಕಾಣಬಹುದಾಗಿದೆ. ಇಲ್ಲಿ ಕೆಂಪು, ನೀಲಿ, ಹಳದಿ, ತಿಳಿಹಸಿರು, ಬಿಳಿ, ಕಪ್ಪು ವರ್ಣಗಳನ್ನು ಬಳಸಿಕೊಂಡು ಚಿತ್ರ ರಚಿಸಲಾಗಿದೆ.

ಚಿತ್ರ-೧೮. ಅಮರನಾಥ ತೀರ್ಥಂಕರರ ಕಾಗದದ ಚಿತ್ರ

ಹಸ್ತಿನಾಪುರದ ಕುರುವಂಶದಲ್ಲಿ ಸುದರ್ಶನರಾಜ ಹಾಗೂ ಮಿತ್ರಸೇನದೇವಿ ದಂಪತಿಗಳಿಗೆ ಫಾಲ್ಗುನ ಶುಕ್ಲ ತದಿಗೆಯಂದು ಗರ್ಭಾವತರಣ ಕಲ್ಯಾಣವು ಏರ್ಪಟ್ಟು ಮಾರ್ಗಶಿರ ಶುಕ್ಲ ಚತುರ್ದಶಿಯಂದು ಜನ್ಮಾಭಿಷೇಕ ಕಲ್ಯಾಣದಲ್ಲಿ ಜನಿಸದಿರು ಇವರು ೩೦ ಬಿಲ್ಲು ಎತ್ತರವಿದ್ದು ಮಾರ್ಗಶಿರ ಶುಕ್ಲ ದ್ವಾದಶಿಯಂದು ದೀಕ್ಷ ಕಲ್ಯಾಣಕ್ಕೇರಿ ೧೬ ವರ್ಷಗಳ ಕಾಲ ತಪಸ್ಸು ಮಾಡಿ ಕಾರ್ತಿಕ ಶುಕ್ಲ ದ್ವಾದಶಿಯಂದು ಮಾವಿನ ಮರದಡಿಯಲ್ಲಿ ಕೇವಲಜ್ಞಾನ ಕಲ್ಯಾಣವು ಜರುಗಿ ಕುಂಭಾರ್ಯರೇ ಮುಂತಾಗಿ ೩೦ ಮಂದಿ ಗಣಧರರು, ಮಹೇಂದ್ರ ಮತ್ತು ವಿಜಯಾ ಯಕ್ಷ ಯಕ್ಷಿಯರು ಮೀನಿನ ಲಾಂಛನವು ದೊರೆತು ೮೪ ಸಾವಿರ ವರ್ಷಗಳ ಆಯುಷ್ಯವನ್ನು ಪೂರ್ಣಗೊಳಿಸಿ ಚೈತ್ರ ಕೃಷ್ಣ ಅಮಾವಾಸ್ಯೆಯಂದು ಸಮ್ಮೇದಗಿರಿ ನಾಟಕಕೂಟದಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರವೂ ಸಹ ಒಂದು ವಿಶೇಷ ಸಂಯೋಜನೆಯಾಗಿದ್ದು ಎರಡಂತಸ್ತಿನ ಮಂಟಪದಲ್ಲಿ ಮಧ್ಯದಲ್ಲಿ ಕಮಾನಿನಲ್ಲಿ ಶ್ಯಾಮಲ ವರ್ಣದಲ್ಲಿ ನಿಂತಿರುವ ದಿಗಂಬರ ಹಿಂದೆ ನೀಲಿ ವರ್ಣವನ್ನು ಲೇಪಿಸಲಾಗಿದೆ ಅದರ ಮೇಲೊಂದು ಮಂಟಪವಿದ್ದು ಅಲ್ಲಿ ಇದರ ಪೀಠದ ಮೂರು ಹಂತದ ಛತ್ರಿಯಿದೆ. ಮೇಲೆ ಮತ್ತು ಕೆಳಗೆ ಎರಡು ಹಂತಸ್ತುಗಳಿದ್ದು ಮೇಲೆ ಚಾಮರಗಳನ್ನು ಹಿಡಿದು ಗಾಳಿ ಬೀಸುತ್ತಿರುವ ಇಬ್ಬರು ಸ್ತ್ರೀಯರು ಎರಡೂ ಬದಿಗಳಲ್ಲಿದ್ದಾರೆ ಕೆಳ ಹಂತಸ್ತಿನಲ್ಲಿ ಎರಡೂ ಬದಿಗಳಲ್ಲಿ ಯಕ್ಷ ಯಕಿಯರಿದ್ದು ಇವರ ಹಿಂದೆ ಇವರಿಗೆ ಛತ್ರಿಗಳನ್ನು ಹಿಡಿದು ನಿಂತಿರುವ ಸೇವಕಿಯರಿದ್ದಾರೆ ಯಕ್ಷ ಯಕ್ಷಿಯರಿಬ್ಬರಿಗೂ ನಾಲ್ಕು ಬಾಹುಗಳಿದ್ದು ಕೈ ಮುಗಿದು ನಿಂತಿರುವಂತೆ ಚಿತ್ರ ರಚಿಸಲಾಗಿದೆ. ಮಂಟಪದ ಎರಡೂ ಬದಿಗಳಲ್ಲೂ ಎರಡು ವೃಕ್ಷಗಳಿದ್ದು ತೀರ್ಥಂಕರ ಬಲಬದಿಯದ್ದು ಮಾವಿನ ಹಣ್ಣುಗಳನ್ನು ತುಂಬಿರುವ ಮಾವಿನ ಮರವಿದೆ ಇವರು ಕೇವಲ ಜ್ಞಾನ ಹೊಂದಿದ್ದು ಈ ಮರದಡಿಯೇ ಬಲಬದಿಯ ಮರವು ನೀಲಿ ಹಾಗೂ ಕಪ್ಪು ಎಲೆಗಳನ್ನು ಹೊಂದಿದ್ದು ಮರದ ಚಿತ್ರ ಸ್ವಲ್ಪಭಾಗ ನಾಶವಾಗಿದೆ ಇನ್ನು ತೀರ್ಥಂಕರರ ಪೀಠದ ಕೆಳಭಾಗದಲ್ಲಿ ಮೀನ ಲಾಂಛನವನ್ನು ನಾವಿಲ್ಲಿ ಕಾಣಬಹುದಾಗಿದೆ. ಇಲ್ಲಿಯ ಚಿತ್ರಗಳಲ್ಲಿ ಗಾಡ ನೀಲಿ, ಹಸಿರು, ಕೆಂಪು, ಹಳದಿ, ಬಿಳಿ, ಕಪ್ಪು ವರ್ಣಗಳನ್ನು ಬಳಸಿಕೊಂಡು ಚಿತ್ರವನ್ನು ಸಂಪೂರ್ಣಗೊಳಿಸಲಾಗಿದೆ.

ಚಿತ್ರ-೧೯. ಮಲ್ಲಿನಾಥ ತೀರ್ಥಂಕರ ಕಾಗದದ ಚಿತ್ರ

ಮಿಥಿಲಾನಗರದ ಇಕ್ಷ್ವಾಕು ವಂಶದಲ್ಲಿ ಕುಂಭರಾಜ ಮತ್ತು ಸುಪ್ರಭಾದೇವಿ ದಂಪತಿಗಳಿಗೆ ಚೈತ್ರ ಶುದ್ಧ ಪಾಡ್ಯದಂದು ಗರ್ಭಾವತರನ ಕಲ್ಯಾಣವಾಗಿ ಮಾರ್ಗಶಿರ ಶುದ್ಧ ಏಕಾದಶಿಯಂದು ಜನ್ಮಾಭಿಷೇಕ ಕಲ್ಯಾಣದಲ್ಲಿಲ್ ಜನನವಾಯಿತು. ಇವರು ೨೫ ಬಿಲ್ಲು ಎತ್ತರವಿದ್ದು ಮಾರ್ಗಶಿರ ಶುದ್ಧ ಏಕಾದಶಿಯಂದು ದೀಕ್ಷಾ ಕಲ್ಯಾಣವಾಗಿ ೬ ದಿವಸ ತಪಸ್ಸು ಮಾಡಿ ಪುಷ್ಯಕೃಷ್ಣ ಬಿದಿಗೆಯಂದು ಅಶೋಕ ವೃಕ್ಷದ ಕೆಳಗೆ ಕೇವಲಜ್ಞಾನ ಕಲ್ಯಾಣವಾಗಿ ವಿಶಾಖಾಚಾರ್ಯರೇ ಮುಂತಾಗಿ ೨೮ ಮಂದಿ ಗಣಧರರು ಕುಬೇರ ಯಕ್ಷ ಅಪರಾಜಿತ ಯಕ್ಷಿಯರು ಕಳಸ ಲಾಂಛನಗಳನ್ನು ಸಂಪಾದಿಸಿದರು ೫೫ ಸಾವಿರ ವರ್ಷ ಸಂಪೂರ್ಣ ಆಯುಷ್ಯ ಪೂರ್ಣಗೊಳಿಸಿ ಫಾಲ್ಗುಣ ಶುದ್ಧ ಪಂಚಮಿಯಂದು ಸಮ್ಮೇಧಗಿರಿ ಸಂವಲಕೂಟದಲ್ಲಿ ನಿರ್ವಾಣ ಕಲ್ಯಾಣವಾದರು.

ಈ ಚಿತ್ರದಲ್ಲಿ ಶ್ಯಾಮಲ ವರ್ಣದಲ್ಲಿ ದಿಗಂಬರರಾಗಿ ಮಲ್ಲಿನಾಥರು ನಿಂತಿದ್ದು ಅರಬ್ಬಿ ಶೈಲಿಯ ಕಟ್ಟಡ ರಚನೆಯ ಕಮಾನಿನಲ್ಲಿ ನಿಂತಿರುವರು ಇವರ ಶಿರದ ಮೇಲೆ ಮೂರು ಛತ್ರಿಯಾಕಾರವಿದ್ದು ನೀಲಿಯ ಕಮಾನನ್ನು ಕಾಣಬಹುದಾಗಿದೆ ಅದರ ಪಕ್ಕದಲ್ಲಿ ಗೋಲಾಕಾರಗಳ ಗುಂಜುಗಲಿದ್ದು ಇದರ ಎರಡು ಬದಿಯಲ್ಲಿ ಧ್ವಜಗಳನ್ನು ಕಾಣಬಹುದಾಗಿದೆ ಕೆಳಭಾಗದಲ್ಲಿ ಯಕ್ಷ ಯಕ್ಷಿಯರಾದ ಕುಬೇರ ಮತ್ತು ಅಪರಾಜಿತರು ನಾಲ್ಕು ಬಾಹುಗಳನ್ನು ಹೊಂದಿದು ಹೂ ಮಾಲೆಯನ್ನು ಹಿಡಿದು ತಮ್ಮ ಎರಡೂ ಕೈಗಳಿಂದ ತೀರ್ಥಂಕರರಿಗೆ ನಮಿಸುತ್ತಿರುವ ದೃಶ್ಯ ಇದಾಗಿದೆ. ಕುಬೇರನು ಕಿರೀಟಾದಿಯಾಗಿ ವಸ್ತ್ರಾಭರಣಗಳನ್ನು ಧರಿಸಿದ್ದು ಅಪರಾಜಿತಾ ಯಕ್ಷಿಯೂ ಸಹ ಕೆಂಪು ಸೀರೆ ಹಸಿರು ಕುಪ್ಪಸಗಳನ್ನು ತೊಟ್ಟು ವಜ್ರಾಭರಣಗಳನ್ನು ಧರಿಸಿರುವಳು ತೀರ್ಥಂಕರರ ಕೆಳಭಾಗದಲ್ಲಿ ಇವರ ಲಾಂಛನವಾದ ಕುಂಭವನ್ನು ತೋರಿಸಲಾಗಿದ್ದು ಅದನ್ನು ಸುವರ್ಣ ವರ್ಣದಲ್ಲಿ ರಚಿಸಲಾಗಿದೆ. ಈ ಚಿತ್ರದಲ್ಲಿ ಸಾಕಷ್ಟು ಪಾಲು ವರ್ಣಗಳು ನಾಶಗೊಂಡಿದ್ದು ಹಾಕಿಕೊಂಡಿರುವ ರೇಖಾ ವಿನ್ಯಾಸಗಳನ್ನು ಮಾತ್ರ ನಾವಿಲ್ಲಿ ಗುರುತಿಸಬಹುದು.

ಚಿತ್ರ-೨೦. ಮುನಿಸುವ್ರತ ತಿರ್ಥಂಕರರ ಕಾಗದದ ಚಿತ್ರ

ರಾಜಗೃಹ ನಗರದ ಹರಿವಂಶದ ಸುಮಿತ್ರರಾಜ ಮತ್ತು ಸೋಮಾದೇವಿ ದಂಪತಿಗಳಿಗೆ ಶ್ರಾವಣ ಕೃಷ್ಣ ಬಿದಿಗೆಯಂದು ಗರ್ಭಾವತರಣ ಕಲ್ಯಾಣವಾಗಿ ಚೈತ್ರ ಕೃಷ್ಣ ಪಂಚಮಿಯಂದು ಜನ್ಮಾಭಿಷೇಕ ಕಲ್ಯಾಣದಂದು ಜನಿಸದಿರು ಇವರು ೧೫ ಬಿಲ್ಲು ಎತ್ತರವಿದ್ದು ವೈಶಾಖ ಕೃಷ್ಣ ದಶಮಿಯಂದು ದೀಕ್ಷಾ ಕಲ್ಯಾಣವಾಗಿ ೧೧ ತಿಂಗಳು ತಪಸ್ಸು ಮಾಡಿದರು ವೈಶಾಖಕೃಷ್ಣ ನವಮಿಯಂದು ಇವರಿಗೆ ಸಂಪಿಗೆ ಮರದಡಿಯಲ್ಲಿ ಕೇವಲಜ್ಞಾನವಾಗಿ ಮಲ್ಲಿಮುನಿಗಳೇ ಮುಂತಾಗಿ ೧೮ ಮಂದಿ

ಗಣಧರರು ಪುರುಷವರ ಮತ್ತು ಬಹುರೂಪಿಣಿ ಎಂಬ ಯಕ್ಷ ಯಕ್ಷಿಣಿಯರು ಆಮೆಯ ಲಾಂಛನಗಳು ದೊರೆತು ೩೦ ಸಾವಿರ ವರ್ಷ ಪೂರ್ಣಾಯುಷ್ಯವನ್ನು ಮುಗಿಸಿಕೊಂಡು ಫಾಲ್ಗುಣ ಕೃಷ್ಣ ದ್ವಾದಶಿಯಂದು ಸಮ್ಮೇಧಗಿರಿ ನಿರ್ಜರಕೂಟದಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರದಲ್ಲಿ ಮುನಿಸುವ್ರತ ತೀರ್ಥಂಕರರು ಶ್ಯಾಮಲ ವರ್ಣದಲ್ಲಿದ್ದು ದಿಗಂಬರರಾಗಿ ನಿಂತಿದ್ದು ಇವರ ಹಿಂಬದಿಯಲ್ಲಿ ಪ್ರಭಾಕಲಸಗಳನ್ನು ತೋರಿಸಲಾಗಿದ್ದು ಅದರ ಹಿಂದೆ ಹಳದಿ ವರ್ಣದ ಲೇಪನವನ್ನು ಮಾಡಲಾಗಿದೆ. ಮೂರು ಕಮಾನು ಗೋಪುರಗಳಿದ್ದು ಮಧ್ಯದ ಗೋಪುರಗಳಿದ್ದು ಮಧ್ಯದ ಗೋಪುರದಲ್ಲಿ ತಿರ್ಥಂಕರರಿದ್ದು ಬದಿಯ ಎರಡಲ್ಲಿ ಯಕ್ಷ ಯಕ್ಷಿಯರನ್ನು ತೋರಿಸಲಾಗಿದೆ. ಕೆಂಪು, ಕಂದು, ಕಪ್ಪು, ಗೋದಿ ಬಣ್ಣಗಳಿಂದ ತಿರ್ಥಂಕರ ಗೋಪುರವನ್ನು ರಚಿಸಿದ್ದು ಮೇಲೆ ಕಳಸವನ್ನು ನಿರ್ಮಿಸಲಾಗಿದೆ. ಬಲಬದಿಯಲ್ಲಿ ಪುರುಷವರ ಯಕ್ಷರ ಚಿತ್ರವಿದ್ದು ಶ್ವೇತವರ್ಣದಲ್ಲಿ ಸರ್ವಾಲಂಕಾರ ಭೂಷಿತರಾಗಿ ಹೂಮಾಲೆಯನ್ನು ಹಿಡಿದು ನಾಲ್ಕು ಭುಜಗಳನ್ನು ಹೊಂದಿ ಕೈಯಲ್ಲಿ ಹೂಮಾಲೆ ಹಿಡಿದು ಮುಂದಿನ ಕೈಗಳನ್ನು ಜೋಡಿಸಿ ನಮಿಸುತ್ತಿರುವಂತೆ ಅಪರಾಜಿತಾ ಯಕ್ಷಿಯನ್ನು ತೋರಿಸಲಾಗಿದೆ. ಯಕ್ಷ ಯಕ್ಷಿಯ ಗೋಪುರವನ್ನು ತಿಳಿ ಹಸಿರು ಹಾಗೂ ಗೋದಿ ಬಣ್ಣದಲ್ಲಿ ರಚಿಸಲಾಗಿದ್ದು ಕಳಸಗಳನ್ನು ಇಟ್ಟು ಶೃಂಗರಿಸಿದಂತೆ ಕಲಾವಿದನು ಚಿತ್ರವನ್ನು ರಚಿಸಿದ್ದಾನೆ ಎರಡೂ ಗೋಪುರಗಳ ಮೇಲೂ ನವಿಲು ಕುಳಿತು ತನ್ನ ಕೊಕ್ಕಿನಿಂದ ಪುಕ್ಕವನ್ನು ಸರಿಪಡಿಸಿಕೊಳ್ಳುವಂತೆ ಚಿತ್ರ ರಚಿಸಿದ್ದು ಮಧ್ಯದ ಗೋಪುರದ ಮೇಲೆ ಎರಡೂ ಬದಿಯಲ್ಲೂ ಗಿಳಿಯೂ ಹಾರಿಬಂದು ಕೂರುತ್ತಿರುವ ರೀತಿಯಲ್ಲಿ ಚಿತ್ರರಚನೆ ಮಾಡಲಾಗಿದೆ. ತೀರ್ಥಂಕರರ ಕೆಳಪಟ್ಟಿಯಲ್ಲಿ ಸುವರ್ಣವರ್ಣವನ್ನು ಲೇಪಿಸಿದ್ದು ಇವರ ಲಾಂಛನವಾದ ಆಮೆಯ ಚಿತ್ರವನ್ನು ರಚಿಸಲಾಗಿದೆ. ಎರಡೂ ಬದಿಯ ಕೊನೆಯಲ್ಲಿ ಹೂವಿನ ಗಿಡಗಳನ್ನು ತೊರಿಸಲಾಗಿದ್ದು ಇಲ್ಲಿ ಹಳದಿ, ಕೆಂಪು, ನೀಲಿ, ಹಸಿರು, ತಿಳಿಗಪ್ಪು, ಕಪ್ಪು, ಬಿಳಿ ಹಾಗೂ ಗೋದಿ ಬಣ್ಣಗಳನ್ನು ಬಳಸಿಕೊಂಡು ಚಿತ್ರ ರಚನೆಯನ್ನು ಮಾಡಲಾಗಿದೆ.

ಚಿತ್ರ-೨೧. ನಮಿನಾಥ ತೀರ್ಥಂಕರರ ಕಾಗದದ ಚಿತ್ರ

ಮಿಥಿಲಾನಗರದ ಇಕ್ಷ್ವಾಕು ವಂಶದ ವಿಜಯರಾಜ ಹಾಗೂ ವಪ್ರಾದೇವಿ ದಂಪತಿಯರಿಗೆ ಆಶ್ವಯುಜ ಕೃಷ್ಣ ಬಿದಿಗೆಯಂದು ಗರ್ಭಾವತರಣ ಕಲ್ಯಾಣವಾಗಿ ಆಶಾಡ ಕೃಷ್ಣ ದಶಮಿಯಂದು ಜನ್ಮಾಭಿಷೇಕ ಕಲ್ಯಾಣದಲ್ಲಿ ಜನಿಸಿದ ಇವರು ೧೫ ಬಿಲ್ಲು ಎತ್ತರವಿದ್ದು ಆಶಾಡ ಕೃಷ್ಣ ದಶಮಿಯಂದು ದೀಕ್ಷಾ ಕಲ್ಯಾಣವಾಗಿ ೯ ವರ್ಷಗಳ ಸತತ ತಪಸ್ಸಿನ ಸಲುವಾಗಿ ಮಾರ್ಗಶಿರ ಕೃಷ್ಣ ಏಕಾದಶಿಯಂದು ಸುರಗಿ ವೃಕ್ಷದಡಿಯಲ್ಲಿ ಕೇವಲಜ್ಞಾನ ಕಲ್ಯಾಣವಾಗಿ ಸುಪ್ರಭಾಸರೇ ಮುಂತಾಗಿ ೧೭ ಮಂದಿ ಗಣಧರರು ವಿದ್ಯುತ್ ಪ್ರಭ ಮತ್ತು ಚಾಮುಂಡಿ ಯಕ್ಷ ಯಕ್ಷಿಯರು ನೀಲಕಮಲ ಲಾಂಛನವನ್ನು

ಹೊಂದಿ ೧೦ ಸಾವಿರ ವರ್ಷಗಳಷ್ಟು ಪೂರ್ಣಾ ಆಯುಷ್ಯವನ್ನು ಮುಗಿಸಿ ವೈಶಾಖ ಕೃಷ್ಣ ಚತುರ್ದಶಿಯಂದು ಸಮ್ಮೇಧಗಿರಿ ಮಿಶ್ರಧರ ಕೂಟದಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರದಲ್ಲಿ ನಮಿನಾಥರು ಕೆಂಪು ವರ್ಣದಲ್ಲಿದ್ದು ಶಿರಸ್ಸಿನ ಹಿಂದೆ ಶ್ವೇತೆ ಪ್ರಭೆಯನ್ನು ಕಾಣಬಹುದು ಹಿನ್ನೆಲೆಯಲ್ಲಿ ಹಳದಿವರ್ಣವಿದ್ದು ಹಸಿರು ಹೂಗಳು ಬೀಳುವಂತೆ ತೊರಿಸಲಾಗಿದೆ. ತೀರ್ಥಂಕರರ ಎರಡೂ ಬದಿಯಲ್ಲಿ ಸುವರ್ಣಕಂಬಗಳಿದ್ದು ಅದರ ಮೇಲೆ ಕೀರ್ತಿಮುಖಗಳಿರುವ ಎರಡು ಸಿಂಹಗಳಿದ್ದು ಇವುಗಲ ಮೇಲೆ ಕಮಾನಿನ ಗೋಪುರವನ್ನು ನಿರ್ಮಿಸಲಾಗಿದ್ದು ಅದರ ಮೇಲೆ ಕಳಸವನ್ನು ಕೂರಿಸಲಾಗಿದೆ. ಬಲಬದಿಯಲ್ಲಿ ವಿದ್ಯುತ್ ಪ್ರಭ ನಾಲ್ಕು ಬಾಹುಗಳನ್ನು ಹೊಂದಿದ್ದು ಸರ್ವಾಲಂಕಾರ ಭೂಷಿತನಾಗಿ ನಿಂತಿರುವನು ಎಡಬದಿಯಲ್ಲಿ ಚಾಮುಂಡಿ ಯಕ್ಷಿಯು ನೀಲಿ ಸೀರೆ ಕೆಂಪು ರವಿಕೆಯನ್ನು ತೊಟ್ಟು ಸರ್ವಾಲಂಕಾರ ಭೂಷಿತೆಯಾಗಿ ನಾಲ್ಕು ಬಹುಗಳನ್ನು ಹೊಂದಿ ಕೈಮುಗಿದು ನಿಂತಿದ್ದಾಳೆ ತೀರ್ಥಂಕರರ ಕೆಳಭಾಗದಲ್ಲಿ ನೀಲ ಕಮಲದ ಲಾಂಛನವಿದ್ದು ಸುತ್ತಲೂ ಹೂಬಳ್ಳಿಯ ವಿನ್ಯಾಸವನ್ನು ಚಿತ್ರಿಸಲಾಗಿದೆ ಇನ್ನುಳಿದಂತೆ ಹಳದಿ, ಕೆಂಪು, ನೀಲಿ, ಹಸಿರು, ಬಿಳಿ, ಕಪ್ಪು ವರ್ಣಗಳನ್ನು ಬಳಸಿಕೊಂಡು ಚಿತ್ರ ರಚನೆ ಮಾಡಲಾಗುವುದು.

ಚಿತ್ರ–೨೨. ನೇಮಿನಾಥ ತೀರ್ಥಂಕರರ ಕಾಗದದ ಚಿತ್ರ

ದ್ವಾರಕಾನಗರದ ಹರಿವಂಶದಲ್ಲಿ ಸಮುದ್ರ ವಿಜಯ ಮತ್ತು ಶಿವದೇವಿ ದಂಪತಿಗಳಿಗೆ ಕಾರ್ತೀಕ ಕೃಷ್ಣ ಷಷ್ಠಿಯಂದು ಗರ್ಭಾವತರಣ ಕಲ್ಯಾಣವಾಗಿ ಶ್ರಾವಣ ಶುಕ್ಲ ಷಷ್ಠಿಯಂದು ಜನ್ಮಾಭಿಷೇಕ ಕಲ್ಯಾಣದಲ್ಲಿ ಜನಿಸದಿ ಇವರು ೧೦ ಬಿಲ್ಲು ಎತ್ತರವಿದ್ದು ಶ್ರಾವಣ ಶುಕ್ಲ ಷಷ್ಠಿಯಂದು ದೀಕ್ಷಾ ಕಲ್ಯಾಣವಾಗಿ ೫೩ ದಿವಸಗಳ ಕಾಲ ತಪಸ್ಸುಮಾಡಿ ಆಶ್ವಯುಜ ಶುಕ್ಲಪಾಡ್ಯದಂದು ಬಿದರುವಂದ ಕೆಳಗೆ ಕೇವಲಜ್ಞಾನ ಕಲ್ಯಾಣವಾಗಿ ವರದತ್ತರೇ ಮುಂತಾಗಿ ೧೧ ಮಂದಿ ಗಣಧರರು, ಸರ್ವಾಹ ಯಕ್ಷ ಹಾಗೂ ಕೂಷ್ಮಾಂಡಿನಿ ಯಕ್ಷಿ, ಶಂಕ ಲಾಂಛನಗಳನ್ನು ಹೊಂದಿ ೧ ವರ್ಷಕಾಲ ಬಾಳಿ ಆಷಾಡ ಶುಕ್ಲ ಸಪ್ತಮಿಯಂದು ಊರ್ಜಯಮ್ತಗಿರಿಯಲ್ಲಿ ನಿರ್ವಾಣ ಕಲ್ಯಾಣವಾಯಿತು.

ಈ ಚಿತ್ರದಲ್ಲಿ ನೇಮಿನಾಥರು ಶ್ವೇತವರ್ಣದವರಾಗಿದ್ದು ಪದ್ಮಾಸನದಲ್ಲಿ ಧ್ಯಾನಾಸಕ್ತರಾಗಿ ಕುಳಿತಿದು ಹಿಂಬದಿಯಲ್ಲಿ ಹಳದಿ ವರ್ಣವನ್ನು ತೋರಿಸಲಾಗಿದ್ದು ಇವರ ಕೆಳಗೆ ಕಮಲದ ಹೂವನ್ನು ಚಿತ್ರಿಸಲಾಗಿದೆ. ಇಲ್ಲಿ ಮೂರು ಮಂಟಪಗಳಿದ್ದು ಮಧ್ಯದ ಮಂಟಪದಲ್ಲಿ ತೀರ್ಥಂಕರರು ಇದು ಈ ಕಮಾನುಗೋಪುರವನ್ನು ಕಡುನೀಲಿ, ಕೆಂಪು, ಹಸಿರು, ಹಳದಿ ವರ್ಣಗಳಿಂದ ಚಿತ್ರಿಸಲಾಗಿದೆ. ಈ ಗೋಪುರದ ಮೇಲೆ ಕಳಸವನ್ನು ಇರಿಸಲಾಗಿದ್ದು ಅದರ ಪಕ್ಕದಲ್ಲಿ ಎರಡು ಪಾರಿವಾಳಗಳು ಎದುರು ಬದುರಾಗಿ ಕೂತಿವೆ ಇದರ ಬದಿಯಲ್ಲೆ ಎರಡು ಧ್ವಜಗಳನ್ನು ನೆಟ್ಟಿದ್ದು ಬಲಬದಿಯ ಗೋಪುರದಲ್ಲಿ

ಸವಾರಹಣ ಯಕ್ಷನು ನಾಲ್ಕು ಬಾಹುಗಳನ್ನು ಹೊಂದಿದ್ದು ಕೈಮುಗಿದು ನಿಂತಿದ್ದಾನೆ ಎಡಬದಿಯಲ್ಲಿ ಕೂಷ್ಮಾಂಡಿನ ಯಕ್ಷಿಯೂ ಸಹ ನಾಲ್ಕು ಬಾಹುಗಳನ್ನು ಹೊಂದಿದ್ದು ಕೈಯಲ್ಲಿ ಹೂಮಾಲೆಯನ್ನು ಹಿಡಿದು ಕೈಮುಗಿದು ನಿಂತಿರುವಂತೆ ತೋರಿಸಲಾಗಿದೆ. ಇವರುಗಳು ಎರಡು ಗೋಪುರಗಳಲ್ಲಿ ನಿಂತಿದ್ದು ಅದಕ್ಕೆ ಯಾವುದೇ ವರ್ಣವನ್ನು ಹಚ್ಚ ಕಳಸಕ್ಕೆ ಮಾತ್ರ ವರ್ಣ ಬಳಕೆಯಾಗಿರುವುದು. ಎರಡು ಬದಿಗಳ ಗಂಟೆಯನ್ನು ತೋರಿಸಲಾಗಿದೆ. ಇನ್ನು ತೀರ್ಥಂಕರರ ಮುಂದೆ ಶಂಕುವನ್ನು ಇರಿಸಲಾಗಿರುವುದು ಈ ಕಲಾಕೃತಿಯಲ್ಲಿ ಹೆಚ್ಚಾಗಿ ಬಣ್ಣಗಳನ್ನು ಬಳಸಲಾಗಿರುವುದಿಲ್ಲ ಉಳಿದಂತೆ ಕೆಂಪು, ಹಸಿರು, ಹಳದಿ, ಕಪ್ಪು, ಬಿಳಿ ವರ್ಣಗಳಿಂದ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೨೩. ಪಾರ್ಶ್ವನಾಥ ತೀರ್ಥಂಕರರ ಕಾಗದ ಚಿತ್ರ

ಕಾಶೀ ಪಟ್ಟಣದ ಉಗ್ರವಂಶದ ವಿಶ್ವ ಸೇನರಾಜ ವಾಮಾದೇವಿಯವರಿಗೆ ವೈಶಾಖ ಕೃಷ್ಣ ಬಿದಿಗೆಯಂದು ಪುಷ್ಯ ಕೃಷ್ಣ ಏಕಾದಶಿಯಂದು ಜನ್ಮಾಭಿಷೇಕ ಕಲ್ಯಾಣದಲ್ಲಿ ಜನಿಸಿ ಒಂಭತ್ತು ಮೊಳ ಎತ್ತರವಿದ್ದ ಇವರು ಪುಷ್ಯ ಕೃಷ್ಣ ಏಕಾದಶಿಯಂದು ದೀಕ್ಷಾ ಕಲ್ಯಾಣವಾಗಿ ನಾಲ್ಕು ತಿಂಗಳು ತಪಸ್ಸು ಮಾಡಿ ಚೈತ್ರ ಕೃಷ್ಣ ಚೌತಿಯಂದು ದೇವದಾರು ವೃಕ್ಷದಡಿಯಲ್ಲಿ ಕೇವಲಜ್ಞಾನ ಕಲ್ಯಾಣವೇರ್ಪಟ್ಟಿತು. ಇದರೊಂದಿಗೆ ಸ್ವಯಂಭೂಮುಂತಾಗಿ ೧೦ ಮಂದಿ ಗಣಧರರು ಇದ್ದು ಧರಣೇಂದ್ರ ಯಕ್ಷ ಹಾಗೂ ಪದ್ಮಾಮತಿ ಯಕ್ಷಿ ಜೊತೆಗೆ ಸರ್ಪ ಲಾಂಛನವನ್ನು ಹೊದಿದರು ೧೦೦ ವರ್ಷ ಬಾಳಿ ಇದಾದ ಬಳಿಕ ಶ್ರಾವಣ ಶುಕ್ಲ ಸಪ್ತಮಿಯಂದು ಸಮ್ಮೇಧಗಿರಿ ಸುವರ್ಣ ಭದ್ರಕೂಟ ಎಂಬಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರದಲ್ಲಿ ಹಸಿರು ವರ್ಣದಲ್ಲಿ ಪಾಶ್ವನಾಥರನ್ನು ತೋರಿಸಲಾಗಿದೆ. ಪದ್ಮಾಸನದಲ್ಲಿ ಧ್ಯಾನಕ್ಕೆ ಕುಳಿತಿದ್ದು ಒಂಭತ್ತು ಎಡೆಯ ಶ್ವೇತನಾಗ ನೆರಳಾಗಿ ನಿಂತಿರುವುದು ಹಿಂದೆ ಕೆಂಪುವರ್ಣವನ್ನು ತೋರಿಸಲಾಗಿದ್ದು ಕಮಾನಿನ ಚಾವಣಿಯಡಿಯಲ್ಲಿ ಇವರು ಕುಳಿತಿದು ಹಿಂಬದಿಯಲ್ಲಿ ಎರಡು ವಿಶ್ರಾಂತಿ ಮಂಟಪಗಳ ಚಿತ್ರವಿದೆ ತೀರ್ಥಂಕರರ ಬಲಬದಿಯಲ್ಲಿ ಧರಣೇಂದ್ರ ಯಕ್ಷನು ಸೊಂಟದಿಂದ ಕೆಳಗಿನ ನಾಗರ ಹಾವಿನ ಬಲದ ಮೇಲೆ ನಿಂತಿದ್ದು ನಾಲ್ಕು ಬಾಹುಗಳನ್ನು ಹೊಂದಿರುವನು ನಾಲ್ಕು ಬಾಹುಗಳನ್ನು ಹೊಂದಿರುವ ಈತನು ತನ್ನ ಎರಡೂ ಕೈಗಳನ್ನು ಮುಗಿದು ನಿಂತಿರುವನು. ಎಡಬದಿಯಲ್ಲಿ ಪದ್ಮಾವತಿಯು ಕೆಂಪುಸೀರೆ ಹಸಿರು ಕುಪ್ಪಸವನ್ನು ತೊಟ್ಟಿದ್ದು ನಾಲ್ಕು ಬಾಹುಗಳನ್ನು ಹೊಂದಿರುವಳು ಮಂಡಿಯೂರಿ ಕುಳಿತಿರುವ ಈ ಯಕ್ಷಿಯು ತನ್ನ ಹಿಂದಿನ ಕೈಗಳಲ್ಲಿ ದೀಪವನ್ನು ಹಿಡಿದಿದ್ದು ಮುಂದಿನ ಕೈಯಿಂದ ಹೂವಿನ ಸಮರ್ಪಣೆ ಮಾಡುತ್ತಿರುವಂತೆ ತೋರಿಸಲಾಗಿದೆ ತೀರ್ಥಂಕರರ ಕೆಳಗೆ ಇವರ ಲಾಂಛನವಾದ ಸುವರ್ಣ ವರ್ಣದ ನಾಗರ ಹಾವನ್ನು ಚಿತ್ರಿಸಿದ್ದಾರೆ.

ಈ ಚಿತ್ರದಲ್ಲಿ ಕಡುನೀಲಿ, ಬಿಳಿ, ಹಸಿರು, ಕೆಂಪು ಸುವರ್ಣ ಕಪ್ಪು ಈ ಬಣ್ಣಗಳನ್ನು ಬಳಸಿಕೊಂಡು ಚಿತ್ರ ರಚಿಸಲಾಗಿದೆ.

ಚಿತ್ರ–೨೪. ವರ್ಧಮಾನ ತೀರ್ಥಂಕರರ ಕಾಗದದ ಚಿತ್ರಗಳು

ಕುಂದಲಪುರ ನಗರದ ನಾಥವಂಶದ ಸಿದ್ದಾರ್ಥ ಮಹಾರಾಜ ಮತ್ತು ತ್ರಿಶಲಾದೇವಿ ದಂಪತಿಗಳಿಗೆ ಆಷಾಢ ಶುಕ್ಲ ಷಷ್ಠಿಯಂದು ಗರ್ಭಾವತರಣ ಕಲ್ಯಾಣವಾಗಿ ಚೈತ್ರ ಶುಕ್ಲ ತ್ರಯೋದಶಿಯಂದು ಜನ್ಮಾಭಿಷೇಕ ಕಲ್ಯಾಣ ನಡೆಸಿ ಜನಿಸದಿ ಇವರು ೭ ಮೊಳ ಎತ್ತರವಿದ್ದು ಮಾರ್ಗಶಿರ ಕೃಷ್ಣ ದಶಮಿಯಂದು ದೀಕ್ಷಾ ಕಲ್ಯಾಣವಾಗಿ ೧೨ ವರ್ಷ ತಪಗೈದರು ಇದಾದ ಬಳಿಕ ಮತ್ತಿಮರದ ಕೆಳಗೆ ವೈಶಾಖ ಶುಕ್ಲದಶಮಿಯಂದು ಕೇವಲಜ್ಞಾನ ಕಲ್ಯಾಣವನ್ನು ಹೊಂದಿ ಗೌತಮರೇ ಮುಂತಾಗಿ ೧೧ ಮಂದಿ ಗಣಧರರು ಸೇರಿದಂತೆ ಮಾತಂಗ ಮತ್ತು ಸಿದ್ಧಾಯಿಸಿ ಎಂಬ ಯಕ್ಷ ಯಕ್ಷಿಯರು, ಸಿಂಹ ಲಾಂಛನಗಳನ್ನು ಪಡೆದುಕೊಂಡು ೭೨ ವರ್ಷಗಳ ಕಾಲ ಬದುಕಿದರು. ಕಾರ್ತಿಕ ಕೃಷ್ಣ ಅಮಾವಾಸ್ಯೆಯಂದು ಪಾವಾಪುರಿ ಎಂಬಲ್ಲಿ ನಿರ್ವಾಣ ಕಲ್ಯಾಣ ಹೊಂದಿದರು.

ಈ ಚಿತ್ರವು ಒಂದು ವಿಶೇಷ ಸಂಯೋಜನೆ ಎಂದು ಹೇಳಬಹುದು ಏಕೆಂದರೆ ಈ ಚಿತ್ರದಲ್ಲಿ ೨೪ ತೀರ್ಥಂಕರರು ಇಬ್ಬರು ಯಕ್ಷ ಯಕ್ಷಿಯರು ಹಾಗೂ ಎರಡು ಗೊಮ್ಮಟ ಮೂರ್ತಿಗಳನ್ನು ಈ ಸಂಯೋಜನೆಯಲ್ಲಿ ಕಾಣಬಹುದಾಗಿದೆ ಈ ಸಂಯೋಜನೆಯಲ್ಲಿ ಐದು ಹಂತಸ್ತಿನ ಸಂಯೋಜನೆಯನ್ನು ತೋರಿಸಲಾಗಿದ್ದು ಅದರ ಮೇಲೊಂದು ಗೋಪುರವನ್ನು ತೋರಿ ಅಲ್ಲಿ ಕಳಸಗಳು, ಧ್ವಜಗಳು, ಬಾಹುಗಳನ್ನು ಚಿತ್ರಿಸಲಾಗಿದೆ. ಎರಡೂ ಬದಿಗಳಲ್ಲಿ ಮತ್ತೊಂದು ಭಾಗಗಳಿದ್ದು ಇಲ್ಲಿ ಎರಡು ಗೊಮ್ಮಟ ಮೂರ್ತಿ ಹಾಗೂ ಯಕ್ಷ ಯಕ್ಷಿಯರನ್ನು ಚಿತ್ರಿಸಲಾಗಿದೆ. ಕೆಳಗಿನಿಂದ ಮಧ್ಯದಲ್ಲಿ ಕಮಾನಿನಾಕಾರದ ಮಂಟಪದಲ್ಲಿ ಇಲ್ಲಿ ಶ್ಯಾಮಲ ವರ್ಣದಲ್ಲಿ ದಿಗಂಬರನಾಗಿ ವರ್ಧಮಾನರು ನಿಂತಿದ್ದು ಹಿನ್ನೆಲೆಯಲ್ಲಿ ಹಳದಿ ವರ್ಣವನ್ನು ಲೇಪಿಸಲಾಗಿದೆ. ಕಮಾನಿನ ಮೇಲ್ಭಾಗದಲ್ಲಿ ಹಸಿರು ವರ್ಣವಿದ್ದರೆ ಕೆಳಗೆ ಕೆಂಪನ್ನು ಸೂಚಿಸಲಾಗಿದೆ. ಇವರ ಕೆಳಭಾಗದಲ್ಲಿ ನಿಂತಿರುವ ನಾಲ್ಕು ಸಿಂಹಗಳನ್ನು ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದೆ. ಇವರ ಬಲಬದಿಯಲ್ಲಿ ಮಾತಾಂಗ ಯಕ್ಷನು ನಾಲ್ಕು ಬಹುಗಳನ್ನು ಹೊಂದಿದ್ದು ಕೈಯನ್ನು ಜೋಡಿಸಿ ನಿಂತಿದ್ದು ಎಡಭಾಗದಲ್ಲಿ ಸಿದ್ದಾಯಿನಿ ಯಕ್ಷಿಯೂ ಸಹ ನಾಲ್ಕು ಬಾಹುಗಳನ್ನು ಹೊಂದಿ ಕೈ ಜೋಡಿಸಿ ನಿಂತಿರುವುದು ಇನ್ನು ಇವರ ಮೇಲೆ ಎರಡು ಬದಿಯಲು ಶ್ವೇತವರ್ಣದ ಗೊಮ್ಮಟ ಮೂರ್ತಿಗಳನ್ನು ಕಾಣಬಹುದು. ಇನ್ನುಳಿದಂತೆ ಋಷಭನಾಥರಿಂದಿದಿದು ಪಾರ್ಶ್ವನಾಥರವರೆಗೂ ಒಟ್ಟು ವರ್ಧಮಾನರನ್ನು ಒಟ್ಟು ೨೩ ತೀರ್ಥಂಕರರನ್ನು ಇಲ್ಲಿ ಚಿತ್ರಿಸಲಾಗಿರುವುದು ಮೇಲೆ ಅಂದರೆ

ಐದನೇ ಹಂತಸ್ತಿನಲ್ಲಿ ಋಷಭನಾಥರನ್ನು ಮಧ್ಯದಲ್ಲಿ ಚಿತ್ರಿಸಿ ಎರಡೂ ಬದಿಯಲ್ಲು ಚಾಮರಗಳನ್ನು ಚಿತ್ರಿಸಲಾಗಿದೆ. ಇವರ ಬಲಬದಿಗೆ ಅಜಿತನಾಥರ ಚಿತ್ರ ಎಡಬದಿಗೆ ಸಂಭವನಾಥರ ಚಿತ್ರಗಳಿವೆ ಈ ಮೂವರನ್ನು ಶ್ಯಾಮಲ ವರ್ಣದಲ್ಲಿ ಚಿತ್ರಿಸಿ ಇವರಿವರ ಲಾಂಚನವನ್ನು ಇಲ್ಲಿ ರಚಿಸಲಾಗಿದೆ. ಮೇಲಿನಿಂದ ನಾಲ್ಕನೇ ಮಹಡಿಯಲ್ಲಿ ಒಟ್ಟು ಆರು ಜನ ತೀರ್ಥಂಕರರನ್ನು ಚಿತ್ರಿಸಲಾಗಿದ್ದು ನೋಡುಗರ ಎಡದಿಂದ ಮೊದಲಿಗೆ ಅಭಿನಂದನರು ಶ್ಯಾಮಲ ವರ್ಣದಲ್ಲಿ, ಸುಮತಿನಾಥರೂ ಕೂಡ ಶ್ಯಾಮಲ ವರ್ಣದಲ್ಲಿ ಪದ್ಮ ಪ್ರಭರು ಕೆಂಪುವರ್ಣದಲ್ಲಿ, ಸುಪಾರ್ಶ್ವನಾಥರು ಹಸಿರು ವರ್ಣದಲ್ಲಿ ಚಂದ್ರಪ್ರಭರು ಶ್ವೇತ ವರ್ಣದಲ್ಲಿ, ಪುಷ್ಪದಂತರೂ ಸಹ ಬಿಳಿವರ್ಣದಲ್ಲಿ ಚಿತ್ರಿಸಲಾಗಿದ್ದು ಇವರುಗಳನ್ನು ಇವರ ಲಾಂಛನಗಳ ಮೂಲಕ ಗುರುತಿಸಬಹುದಾಗಿದೆ.

ಮೇಲಿನಿಂದ ಮೂರನೇ ಮಹಡಿಯಲ್ಲು ಆರು ಜನ ತೀರ್ಥಂಕರರಿದ್ದು ಮೊದಲಿಗೆ ಶೀತಲನಾಥರನ್ನು ಶ್ಯಾಮಲ ವರ್ಣದಲ್ಲಿ ಚಿತ್ರಿಸಲಾಗಿದೆ ಇದರ ಬಳಿಕ ವಾಸುಪೂಜ್ಯರನ್ನು ಕೆಂಪುವರ್ಣದಲ್ಲಿ ಮಿಮಲನಾಥ, ಅನಂತನಾಥ, ಧರ್ಮನಾಥರನ್ನು ಶ್ಯಾಮಲ ವರ್ಣದಲ್ಲಿಯೇ ಚಿತ್ರಿಸಲಾಗಿದೆ. ಮೇಲಿನಿಂದ ಎರಡನೇ ಮಹದಿಯಲ್ಲಿ ಶಾಂತಿನಾಥರನ್ನು ಮತ್ತು ಕುಂಥನಾಥರನ್ನು ಶ್ಯಾಮಲ ವರ್ಣದಲ್ಲಿ ಚಿತ್ರಿಸಲಾಗಿದೆ. ಅರನಾಥರನ್ನು ಶ್ವೇತವರ್ಣದಲ್ಲಿ ಹಾಗೂ ಮಲ್ಲಿನಾಥರನ್ನು ಶ್ಯಾಮಲ ವರ್ಣದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಇನ್ನು ಉಳಿದಂತೆ ಕೆಳಮಹಡಿಯಲ್ಲಿ ನಾಲ್ಕು ಜನ ತೀರ್ಥಂಕರರನ್ನು ಚಿತ್ರಿಸಲಾಗಿದ್ದು ಮೊದಲಿಗೆ ಮುನಿಸುವ್ರತರವರನ್ನು ಶ್ಯಮಲ ವರ್ಣದಲ್ಲಿ ನಮಿನಾಥರನ್ನು ಶ್ಯಾಮಲ ವರ್ಣದಲ್ಲಿ ನೇಮಿನಾಥರನ್ನು ಶ್ವೇತವರ್ಣದಲ್ಲಿ ಹಾಗೂ ಪಾರ್ಶ್ವನಾಥರನ್ನು ಗೋದಿವರ್ಣದಲ್ಲಿ ಚಿತ್ರಿಸಲಾಗಿದೆ ಒಟ್ಟಾರೆಯಾಗಿ ಈ ಚಿತ್ರವು ೨೪ ತೀರ್ಥಂಕರರ ಸಂಯೋಜನೆಯಾಗಿದ್ದು ಇದರಲ್ಲಿ ತೀರ್ಥಂಕರರು ಮತ್ತು ಅವರವರ ಲಾಂಛನಗಳನ್ನು ಚಿಕ್ಕ ಚೌಕಾರದ ಮನೆಗಳಲ್ಲಿ ತೋರಿಸಲಾಗಿದ್ದು ವರ್ಧಮಾನರನ್ನು ಮಾತ್ರ ದೊಡ್ಡದಾಗಿ ತೋರಿಸಲಾಗಿದೆ.

ಚಿತ್ರ-೨೫. ಯಕ್ಷ ಯಕ್ಷಿಯ ವಾಹನಗಳ ಮೇಲೆ ತೆರಳುತ್ತಿರುವ ದೃಶ್ಯ

ಶ್ರವಣಬೆಳಗೊಳದ ಹಸ್ತಪ್ರತಿ ಭಂಡಾರದಲ್ಲಿ ದೊರತಿರುವ ವಿಶೇಷವಾದ ಚಿತ್ರವಿದ್ದು ಇದೊಂದು ಅಭೂತ ಪೂರ್ಣ ಚಿತ್ರವಾಗಿದೆ ಈ ಚಿತ್ರವನ್ನು ಕಾಗದದ ಮೇಲೆ ರಚಿಸಲಾಗಿ ಸಚಿತ್ರ ಕಾಗದ ವರ್ಣಚಿತ್ರ ಇದಾಗಿದೆ. ಯಕ್ಷ ಯಕ್ಷಿಯರು ತಮ್ಮ ತಮ್ಮ ವಾಹನಗಳಲ್ಲಿ ತೀರ್ಥಂಕರರ ಪಂಚಕಲ್ಯಾಣಗಳಿಗೆ ತೆರಳುತ್ತಿರುವ ದೃಶ್ಯ ಇದಾಗಿದ್ದು ಇದ್ದಲ್ಲಿ ಯಕ್ಷ ಯಕ್ಷಿಯರು ದಂಪತಿ ಸಮೇತರಾಗಿ ಜೊತೆ ಜೊತೆಯಲ್ಲಿ ಸಾಗುತ್ತಿರುವ ದೃಶ್ಯ ಇದಾಗಿದೆ. ಈ ಚಿತ್ರದಲ್ಲಿ ಐದು ಚೌಕಾರದ ಮಂಡಲಗಳಿದ್ದು ಈ ಐದು ಮಂಡಲಗಳಲ್ಲೂ ವಾಹನಗಳಲ್ಲಿ ಪಲ್ಲಕ್ಕಿಗಳಲ್ಲಿ ಪುಷ್ಪಯಾನಗಳಲ್ಲಿ ರಥಗಳಲ್ಲಿ ಸಾಗುತ್ತಿರುವ

ಯಕ್ಷ ಯಕ್ಷಿಯರನ್ನು ಕಾಣಬಹುದಾಗಿದೆ ಹೊರಗಿನಿಂದ ಮೊದಲ ಚೌಕದಲ್ಲಿ ಮದ್ಯದಿಂದ ಎಡಬದಿಗೆ ನೋಡುತ್ತ ಸಾಗಿದರೆ ಬಿಳಿ ಆನೆಯ ಮೇಲೆ ದಂಪತಿಗಳು ಸಾಗುವ ಚಿತ್ರವಿದೆ ಆನೆಯ ಗೋಮುಖ ಯಕ್ಷನ ವಾಹನವಾಗಿದ್ದು ಗೋಮುಖ ಮತ್ತು ಚಕ್ರೇಶ್ವರಿ ಯಕ್ಷಿಯು ಸಾಗುತ್ತಿರುವುದು.

ಎರಡನೇ ಚಿತ್ರದಲ್ಲಿ ಟಗರಿನ ಮೇಲೆ ನಗುತ್ತಿರುವ ಚಿತ್ರವಿದ್ದು ಇದು ಪ್ರಜ್ಞಪ್ತಿ ಯಕ್ಷಿಯ ವಹನ ಮೇಷವಾಗಿದ್ದು ಈ ದಂಪತಿಗಳ ಚಿತ್ರವಾಗಿದೆ. ಮಹಿಷಿಯ ಮೇಲೆ ಸಾಗುತ್ತಿರುವ ಚಿತ್ರವಾಗಿದ್ದು ಇದು ಜ್ವಾಲಾ ಮಾಲಿನಿ ಇದ್ದು ಆ ದಂಪತಿಗಳ ಚಿತ್ರವಾಗಿದೆ ಹೀಗೆ ಸಿಂಹದ ಮೇಲೆ ಕೂರ್ಮದಮೇಲೆ ಅಶ್ವದ ಮೇಲೆ ನಂದಿಯ ಮೇಲೆ ಸಾಗುತ್ತಿರುವ ಯಕ್ಷ-ಯಕ್ಷಿಯ ಚಿತ್ರ ಇದಾಗಿದ್ದು, ಇವುಗಳ ಮಧ್ಯದಲ್ಲಿ ಹೂಬಳಿಯ ಚಿತ್ರಗಳನ್ನು ಕಾಣಬಹುದಾಗಿದೆ. ಎರಡನೇ ಚೌಕದಲ್ಲಿಯೂ ಸಹ ಅದೇ ರೀತಿಯ ವಾಹನಗಳಲ್ಲಿ ಸಾಗುತ್ತಿರುವ ಯಕ್ಷ ಯಕ್ಷಿ ದಂಪತಿಗಳ ಚಿತ್ರಗಳಿದು ವಿಶೇಷವಾಗಿ ಪುಷ್ಪಕ ವಿಮಾನಗಳ ಚಿತ್ರಗಳನ್ನು ಸಹ ಕಾಣಬಹುದಾಗಿದೆ ಇವು ಗಾಳಿಯಲ್ಲಿ ತೇಲಿ ಬರುವಂತೆ ಚಿತ್ರವನ್ನು ಚಿತ್ರಿಸಲಾಗಿದೆ. ಅಲ್ಲದೆ ಈ ಎರಡನೇ ಚೌಕಾದಲ್ಲಿ ಒತ್ತೊತ್ತಾಗಿ ಸಂಯೋಜನೆಯನ್ನು ಮಾಡಲಾಗಿದ್ದು ಕೋಣ, ಸಿಂಹ, ಹುಲಿ, ಆನೆ, ಹಾವು, ಕುದುರೆ, ಗರುಡಗಳ ಮೇಲೆ ಸಾಗುತ್ತಿರುವುದು ಕಂಡು ಬರುತ್ತದೆ.

ಮೂರನೇ ಚೌಕಾದ ಹಿನ್ನೆಲೆ ಹಳದಿ ವರ್ಣವಾಗಿದ್ದು ಇಲ್ಲಿ ಅಶ್ವರಥದ ಮೇಲೆ ಸಾಗುತ್ತಿರುವ ದಂಪತಿಗಳ ಒಂದು ವಾಹನವನ್ನು ಒಟ್ಟಾರೆ ಇನ್ನುಳಿದವು ಪುಷ್ಪಕ ವಿಮಾನವಾಗಿದ್ದು ಗಾಳಿಯಲ್ಲಿ ತೇಲಿಬರುವಂತೆ ಚಿತ್ರಿಸಲಾಗಿದೆ. ಮಧ್ಯ ಮಧ್ಯ ಹೂವಿನ ವಿನ್ಯಾಸಗಳಿವೆ ನಾಲ್ಕನೇ ಚೌಕದಲ್ಲಿ ಇದೇ ಸಾಲು ಮುಂದುವರೆದಿದ್ದು ಮಧ್ಯ ಜಾಗದಲ್ಲಿ ಮೇಷನ ಮೇಲೆ ಕುಳಿತಿರುವ ವ್ಯಕ್ತಿಗೆ ಎರಡು ಶಿರಗಳಿದ್ದು, ಇಬ್ಬರು ಪತ್ನಿಯರನ್ನು ಕೂರಿಸಿಕೊಂಡು ಸಾಗುತ್ತಿರುವ ದೃಶ್ಯ ಇದ್ದಂಗೆ ಒಟ್ಟಾರೆಯಾಗಿ ಈ ಚಿತ್ರವು ಹಲವಾರು ಕಿರುರೂಪ ಚಿತ್ರಗಳನ್ನು ಹೊಂದಿದ ಒಂದು ಸಂಕೀರ್ಣ ಚಿತ್ರವಾಗಿದೆ ಇಲ್ಲಿ ಹಳದಿ, ಕೇಸರಿ, ಕೆಂಪು, ನೀಲಿ, ಹಸಿರು, ಬಿಳಿ, ಕಪ್ಪು ವರ್ಣಗಳನ್ನು ಬಳಸಿ ಚಿತ್ರ ರಚಿಸಲಾಗಿದೆ.

ಚಿತ್ರ-೨೬. ಮಂಡಲಗಳ ಚಿತ್ರ

ಈ ಮಂಡಲ ಚಿತ್ರಗಳನ್ನು ಜೈನ ಆರಾಧನ ಯಂತ್ರಗಳಾಗಿ ಪೂಜಿಸುತ್ತಾರೆ ಇವು ಇವುಗಳನ್ನು ಹೋಮಹವನಗಳನ್ನು ಮಾಡುವಾಗ ರಚಿಸುವಂತಹ ಮಂಡಲಗಳಾಗಿದ್ದು ಇವುಗಳನ್ನು ಪೂಜಾ ಕೈಂಕರ್ಯಗಳಲ್ಲಿ ಬಳಸಲಾಗುವುದು ಇವುಗಳಿಂದ ಹಲವಾರು ಸಿದ್ಧಿ ಸಾಧನಗಳನ್ನಾಗಿ ಜೈನೀಯರು ಬಳಸುತ್ತಾರೆ. ಅಲ್ಲದೆ ಜೈನ ತೀರ್ಥಂಕರ ಆರಾಧನೆಗಳನ್ನು ಮಾಡಲೆಂದೂ ಸಹ ಈ ಯಂತ್ರಗಳನ್ನು ಬಳಸುವುದರಿಂದ ಇವನ್ನು ಆರಾಧನ ಯಂತ್ರಗಳೆಂದು ಕರೆಯುವರು.

ಆರಾಧನೆಗೆ ಸಂಬಂಧಿಸಿದಂತೆ ಸೇವೆ, ಪೂಜೆ, ಆಚರಣೆ, ತಪಸ್ಸಾಧನೆ ಸಮ್ಯಗ್ದರ್ಶನ, ಸಾಮ್ಯಜ್ಞಾನ ಸಮ್ಯಚ್ಚಾರಿತ್ರ ಸಮ್ಯಕ್ತಪಸ್ಸು ಎಂಬ ನಾಲ್ಕನ್ನು ಸಾಧಿಸುವುದು. ದರ್ಶನ, ಜ್ಞಾನ, ಚಾರಿತ್ರ ಮತ್ತು ತಪ ಇವುಗಳ ಪ್ರಕಾಶನೆ ಪ್ರಯತ್ನ ನಿರ್ವಹಣೆ ಸಾಧನೆ ಪ್ರಕಟಣೆಗೆ ಆರಾಧನೆಯಂದು ಹೆಸರು ಸಮೇತ ಮಧ್ಯಸ್ಥ ಶುದ್ದ ಭಾವ, ವೀತರಾಗ ಚಾರಿತ್ಯ ಮತ್ತು ಧರ್ಮ ಇವೆಲ್ಲವೂ ಸ್ವಭಾವದ ಆರಾಧನೆಯಾಗಿದೆ ಸಮ್ಯತ್ವ ತಪ ಈ ನಾಲ್ಕನ್ನು ಯಥಾಯೋಗ್ಯ ರೀತಿಯಿಂದ ಪಾಲಿಸುವುದು ಅವುಗಳನ್ನು ದೃಢತಾ ಪೂರ್ವಕ ಪಾಲಿಸುವುದು ಪುನಃ ಪುನಃ ಜಾಗೃತಗೊಳಿಸುವುದು ಅವುಗಳನ್ನು ಆಮರಣ ಪಾಲಿಸುವುದು ಆರಾಧನೆಯಾಗಿದೆ ಇವುಗಳ ಸಾಧನೆಗೆ ಅವಶ್ಯಕವಾಗಿ ಮಂಡಲಗಳ ರಚನೆ ಬೇಕಾಗಿರುವುದರಿಂದ ವರ್ಣ ಮಂಡಲಗಳ ರಚನೆಯನ್ನು ಮಾಡಿ ಅವುಗಳೊಂದಿಗೆ ನಿಧಿ ಸಾಧನೆಗಳನ್ನು ಜಿನ ಮುನಿಗಳು, ಪುರೋಹಿತರು, ಅರ್ಚಕರು, ಆಚಾರ್ಯರು ಮಾಡುತ್ತಾ ಬಂದಿದ್ದಾರೆ.

ಈ ಮಂಡಲ ಚಿತ್ರಗಳಲ್ಲಿ ಚೌಕಾಕಾರದ ಮಂಡಲಗಳು ಹಾಗೂ ವೃತ್ತಾಕಾರದ ಮಂಡಲಗಳನ್ನು ಕಾಣಬಹುದಾಗಿದೆ ವೃತಾಕಾರದ ಮಂಡಲಗಳಲ್ಲಿ ನಾಲ್ಕು ಐದು ವೃತ್ತಗಳಿರುತ್ತವೆ ಅವುಗಳಲ್ಲಿ ಹೆಚ್ಚಾಗಿ ಕೇಸರಿ, ಹಳದಿ, ಕೆಂಪು, ನೀಲಿ, ಹಸಿರು ವರ್ಣಗಳನ್ನು ಹೆಚ್ಚಾಗಿ ಬಳಸುತ್ತಿದ್ದು ಇವುಗಳ ಹೊರಭಾಗದ ಪಟ್ಟಿಗಳಲ್ಲಿ ಹೂಬಳ್ಳಿಯ ಚಿತ್ರಗಳನ್ನು ಕಾಣಬಹುದು ಅಷ್ಟೇ ಅಲ್ಲದೆ ವೃತ್ತಾಕಾರದ ಚಿತ್ರಗಳಲ್ಲಿ ಕಮಲದ ಹೂವುಗಳ ವಿನ್ಯಾಸಗಳನ್ನು ಸಹ ನೋಡಬಹುದಾಗಿದ್ದು ನಾಲ್ಕು ವೃತ್ತಗಳೇ ಹೆಚ್ಚಾಗಿ ಕಂಡು ಬರುತ್ತಿದೆ ಇದರ ಜೊತೆಯಲ್ಲಿ ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿರುವ ಚಿತ್ರಗಳೂ ಸಹ ಹಲವು ದೊರಕುತ್ತವೆ ಆದರೆ ಯಾವ ತಿರ್ಥಂಕರರಿಗೂ ಕೆಳಭಾಗದಲ್ಲಿ ಲಾಂಚನಗಳಿಲ್ಲದಿರುವುದರಿಂದ ಇವರು ಯಾವ ತೀರ್ಥಂಕರರು ಎಂದು ಹೇಳಲು ಕಷ್ಟವಾಗುವುದು ಹೆಚ್ಚಾಗಿ ಪ್ರಕಾರ ವರ್ಣಗಳನ್ನೆ ಇಲ್ಲಿ ಬಳಸಲಾಗುವುದು ಅಲ್ಲದೆ ಇಲ್ಲಿ ವಿನ್ಯಾಸಕ್ಕಿಂತ ಹೆಚ್ಚು ಆಕಾರಕ್ಕೆ ಹೆಚ್ಚಿನ ಪ್ರಾಧ್ಯಾನತೆಯನ್ನು ನೀಡಿರುವುದು ಕಂಡು ಬರುತ್ತದೆ.

ಇನ್ನು ಚೌಕಾಕಾರದ ಮಂಡಲ ಚಿತ್ರಗಳಿದ್ದು ಇವುಗಳಲ್ಲಿಯೂ ಹೆಚ್ಚಿನದಾಗಿ ಪ್ರಕರ ವರ್ಣಗಳನ್ನೆ ಬಳಸಲಾಗುವು ಅಲ್ಲದೆ ಒಂದೊಂದು ಪೂಜಾ ವಿಧಿಗಳಿಗೆ ಒಂದೊಂದರಂತೆ ಅಯಾ ವಿಷಯಗಳಿಗೆ ಸಾಧನೆಗಳಿಗೆ ಅನುಕೂಲವಾಗುವಂತೆ ಚಿತ್ರಗಳನ್ನು ರಚಿಸಲಾಗುವುದು ಚೌಕಾಕಾರದ ಚಿತ್ರಗಳಲ್ಲಿ ಹೆಚ್ಚಾಗಿ ಜಾಮಿತಿ ಅಡ್ಡ ಮತ್ತು ಉದ್ದ ರೇಖೆಗಳಿಂದಾದ ಹಲವಾರು ಚೌಕಾರದ್ ರಚನೆ ಕಳಸಗಳು ಕುಂಬಗಳು ಅಷ್ಟ ಮಂಗಲಗಳ ಚಿತ್ರಗಳು ಸಿದ್ದಿ ಸಾಧನೆಯ ಅಂಶಗಳನ್ನು ಹೆಚ್ಚಾಗಿ ಈ ಚಿತ್ರಗಳಲ್ಲಿ ಬರೆಯಲಾಗುವುದು ಅವುಗಳಲ್ಲಿ ಆಹುತಿಗೆ ಸಂಬಂಧಿಸಿದ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಇದೇ ಅಲ್ಲದೆ ಪಂಚಕಲ್ಯಾಣದ ಚಿತ್ರಗಳು ಸಮವಸರಣಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳಿವೆ.

ಒಟ್ಟಾರೆಯಾಗಿ ಮಂಡಲಚಿತ್ರಗಳು ಆರಾಧನೆ ಆಹುತಿಗೆ ಸಂಬಂಧಿಸಿದ್ದವಾಗಿದೆ ಇಲ್ಲಿ ಜೈನ ಪೂಜಾ ಕೈಂಕರ್ಯಗಳಿಗೆ ಸಂಬಂದಿಸಿದಂತೆ ವಿಧಿವಿಧಾನಗಳಿಗೆ ಸಂಬಂಧಿಸಿದ ಸಿದ್ದಿ ಸಾಧನೆಗೆ ಸಂಬಂಧಿಸಿ ವರ್ಣಮಂಡಲಗಳು ಇವುಗಳನ್ನು ಕಲಿಯಬಹುದಾಗಿದೆ.

卐卐卐



ಮರದ ರಕ್ಷಣಾ ಹಸ್ತಪ್ರತಿಯ ಫಲಕ



ಮರದ ಹಸ್ತಪ್ರತಿಯ ಫಲಕದ ಮೇಲಿನ ಚಿತ್ರಗಳು



ಮರದ ಹಸ್ತಪ್ರತಿಯ ಫಲಕದ ಮೇಲಿನ ಚಿತ್ರಗಳು



ಮರದ ರಕ್ಷಣಾ ಹಸ್ತಪ್ರತಿಯ ಫಲಕ



ಲೋಹದ ರಕ್ಷಣಾ ಪಲಕ ಚಿತ್ರಗಳು ಸಂಗ್ರಹ




ರಾಮಚಂದ್ರ ಚರಿತ ಪುರಾಣದ ರೇಖಾ ವಿನ್ಯಾಸಗಳು




ರಾಮಚಂದ್ರ ಚರಿತ ಪುರಾಣದ ರೇಖಾ ವಿನ್ಯಾಸಗಳು




ಸಮವಸರ ಮತ್ತು ಲೋಕಸ್ವರೂಪದ ಚಿತ್ರ




ರಥದ ಚಿತ್ರ



ಪದ್ಮಾಕಾರದ ವಿನ್ಯಾಸಗಳು



ಕಮಲ ಮತ್ತು ವೃತ್ತಾಕಾರದ ರೇಖಾ ವಿನ್ಯಾಸಗಳು



ಕಮಲ ಮತ್ತು ವೃತ್ತಾಕಾರದ ರೇಖಾ ವಿನ್ಯಾಸಗಳು



ಆದಿನಾಥ ತೀರ್ಥಂಕರರ ಚಿತ್ರ



ನಿಂತಿರುವ ತೀರ್ಥಂಕರರು



ಪಾರ್ಶ್ವನಾಥರ ಚಿತ್ರ




ಮಹಾವೀರ ತೀರ್ಥಂಕರ



ತೀರ್ಥಂಕರರು ಗೊಮ್ಮಟಾಕಾರದಲ್ಲಿ ನಿಂತಿರುವುದು




ಗುರು-ಶಿಷ್ಯರ ಚಿತ್ರ



ಗುರು-ಶಿಷ್ಯರ ಹಿತಭೋದನೆ




ಉಪನ್ಯಾಸ ಪರಮೇಷ್ಠಿ ಗುರು ಶಿಷ್ಯರ ಚಿತ್ರ




ಯಕ್ಷಿಣಿ ಮತ್ತು ಜಿನ ಗುರು



ಯಕ್ಷಿಣಿ ಮತ್ತು ಜಿನ ಗುರು



ಯಕ್ಷಿಣಿ ಮತ್ತು ಜಿನ ಗುರು



ಯಕ್ಷಿ ಮತ್ತು ಸೇವಕಿಯರು



ಯಕ್ಷಿ ಮತ್ತು ಸೇವಕಿಯರು



ಯಕ್ಷಿ ಮತ್ತು ಸೇವಕಿಯರು



ಯಕ್ಷಿ ಮತ್ತು ಸೇವಕಿಯರು



ಷಣ್ಮುಖ ಯಕ್ಷ



ಕುಬೇರ ಯಕ್ಷ



ಮಹಾಯಕ್ಷ



ಮಹಾಮಾನಸೀ ಯಕ್ಷಿ




ಜ್ವಾಲಾಮಾಲಿನೀ ಯಕ್ಷಿ



ವೃತ್ತಾಕಾರದ ವಿನ್ಯಾಸ




ಬದಿಯಲ್ಲಿಯ ವರ್ಣ ವಿನ್ಯಾಸ




ಬದಿಯಲ್ಲಿಯ ವರ್ಣ ವಿನ್ಯಾಸ



ಬದಿಯಲ್ಲಿಯ ವರ್ಣ ವಿನ್ಯಾಸ




ಬದಿಯಲ್ಲಿಯ ವರ್ಣ ವಿನ್ಯಾಸ




ಬದಿಯಲ್ಲಿಯ ವರ್ಣ ವಿನ್ಯಾಸ



ಧವಲತ್ರಯಗಳು



ರೇಖಾ ಪ್ರಧಾನ ಕಾಗದ ಪ್ರತಿಗಳು








ಸಚಿತ್ರ ವರ್ಣ ಕಾಗದ ಪ್ರತಿಗಳು



ಋಷಭನಾಥ ನಾಥರ ಚಿತ್ರ



ಅಜಿತನಾಥರ ಚಿತ್ರ



ಸಂಭವನಾಥರ ಚಿತ್ರ



ಅಭಿನಂದನಾ ತೀರ್ಥಂಕರ ಚಿತ್ರ




ಪದ್ಮಪ್ರಭ ತೀರ್ಥಂಕರರ ಕಾಗದದ ಚಿತ್ರ



ಸುಪಾರ್ಶ್ವನಾಥರ ಕಾಗದದ ಚಿತ್ರ



ಚಂದ್ರಪ್ರಭ ತೀರ್ಥಂಕರರು ಕಾಗದ ಚಿತ್ರ



ಪುಷ್ಪದಂತಕ ಕಾಗದದ ವರ್ಣ ಚಿತ್ರ




ಶೀತಲನಾಥ ತೀರ್ಥಂಕರರ ಕಾಗದ ಚಿತ್ರ



ಶ್ರೇಯಾಂಸನಾಥ ತೀರ್ಥಂಕರರ ಕಾಗದದ ಚಿತ್ರ



ವಾಸ್ತುಪೂಜ್ಯ ತೀರ್ಥಂಕರ ಕಾಗದದ ಚಿತ್ರ



ವಿಮಲನಾಥ ತೀರ್ಥಂಕರರ ಕಾಗದದ ಚಿತ್ರ



ಅನಂತನಾಥ ತೀರ್ಥಂಕರರ ಕಾಗದದ ಚಿತ್ರ



ಧರ್ಮನಾಥ ತೀರ್ಥಂಕರರ ಕಾಗದದ ಚಿತ್ರ



ಶಾಂತಿನಾಥ ತೀರ್ಥಂಕರ ಕಗದದ ಚಿತ್ರ



ಕುಂಥುನಾಥ ತೀರ್ಥಂಕರರ ಕಾಗದದ ಚಿತ್ರ



ಅಮರನಾಥ ತೀರ್ಥಂಕರರ ಕಾಗದದ ಚಿತ್ರ



ಮಲ್ಲಿನಾಥ ತೀರ್ಥಂಕರ ಕಾಗದದ ಚಿತ್ರ



ಮುನಿಸುವ್ರತ ತೀರ್ಥಂಕರರ ಕಾಗದದ ಚಿತ್ರ



ನಮಿನಾಥ ತೀರ್ಥಂಕರರ ಕಾಗದದ ಚಿತ್ರ



ನೇಮನಾಥ ತೀರ್ಥಂಕರರ ಕಾಗದದ ಚಿತ್ರ



ಪಾರ್ಶ್ವನಾಥ ತಿರ್ಥಂಕರರ ಕಾಗದ ಚಿತ್ರ



ವರ್ಧಮಾನ ತೀರ್ಥಂಕರರ ಕಾಗದದ ಚಿತ್ರಗಳು




ಯಕ್ಷ ಯಕ್ಷಿಯ ವಾಹನಗಳ ಮೇಲೆ ತೆರಳುತ್ತಿರುವ ದೃಶ್ಯ



ಮಂಡಲಗಳ ಚಿತ್ರ





ಭಗವಾನ್ ಶ್ರೀ ವೃಷಭನಾಥ ತೀರ್ಥಂಕರರು



ಭಗವಾನ್ ಶ್ರೀ ಅಜಿತನಾಥ ತೀರ್ಥಂಕರರು

ಅಧ್ಯಾಯ : ಐದು

ಜೈನ ಸಂಕೀರ್ಣ ಚಿತ್ರಕಲೆ

ಅಧ್ಯಾಯ : ಐದು

ಜೈನ ಸಂಕೀರ್ಣ ಚಿತ್ರಕಲೆ

ಭಾರತೀಯ ಚಿತ್ರಪರಂಪರೆಯಲ್ಲಿ ಜೈನಧರ್ಮದ ಸಂಕೀರ್ಣ ಚಿತ್ರಕಲೆಯು ಐತಿಹಾಸಿಕವಾಗಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಮಧ್ಯ ಹಿಂದೂಸ್ಥಾನದ ನರಗುಜಾ ಜಿಲ್ಲೆಯಲ್ಲಿ ಜೋಗೀ ಮರಾಠಾ ಎಂಬ ಹೆಸರಿನ ಗುಹೆ ಇದೆ. ಇದರಲ್ಲಿರುವ ಲೇಖನದ ಲಿಪಿಯು ಕ್ರಿ.ಪೂ. ೩ನೆಯ ಶತಮಾನದ್ದು ಎಂದು ಡಾ. ಬ್ಲಾಕ್ ಅವರ ಮತವಾಗಿದೆ. ಕೆಲವು ವಿದ್ವಾಂಸರು ಸ್ವಲ್ಪ ಇತ್ತೀಚಿನ ಕಾಲದ್ದಿರಬೇಕೆಂದು ಸೂಚಿಸುವರು.[೧]

ಈ ಗುಹೆಯ ಬಳಿಯಿರುವ ಸೀತಾಬೋಂಗಾ ಗುಹೆಯಲ್ಲಿ ಕ್ರಿ.ಪೂ. ೩ನೇ ಶತಮಾನದ ಚಿತ್ರಗಳು ಕೆಲವು ಜೈನ ಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳ ಸುಂದರ ರೇಖೆಗಳು ಬಹು ಕಲಾವಂತಿಕೆಯಿಂದ ಕೂಡಿದುದಾಗಿವೆ. ನಂತರದಲ್ಲಿ ಮೌರ್ಯ, ಶುಂಗ, ಗುಪ್ತ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣಚಾಲುಕ್ಯರು, ಹೊಯ್ಸಳರು, ಮೊಘಲರು, ವಿಜಯನಗರ ಅರಸರು, ಮೈಸೂರು ಅರಸರು ಹೀಗೆ ಕ್ರಿಸ್ತಪೂರ್ವದಿಂದ ಮೈಸೂರು ಅರಸರವರೆವಿಗೂ ಜೈನ ಕಲೆಯ ಉಲ್ಲೇಖಗಳು ಸಿಗುವುದರ ಜೊತೆ ಅವುಗಳ ಭಿನ್ನತೆ ಮತ್ತು ಭವ್ಯತೆ ವಿಸ್ತರಿಸುತ್ತಾ ಹೋದವು. ಅವುಗಳಲ್ಲಿ ಶಿಲ್ಪ, ಉಬ್ಬುಶಿಲ್ಪ, ರೇಖಾಚಿತ್ರ, ವರ್ಣಚಿತ್ರ, ಭಿತ್ತಿಚಿತ್ರ, ಹಸ್ತಪ್ರತಿಗಳಲ್ಲಿ ಚಿತ್ರಗಳು, ಕೊರೆದ ಕಲ್ಲಿನ ರೇಖಾಚಿತ್ರಗಳು ಬಟ್ಟೆಯ ಮೇಲಿನ ವಿನ್ಯಾಸಗಳು, ಮನೆಯ ಮರದ ಕಂಬಗಳ ಮೇಲಿನ ವಿನ್ಯಾಸಗಳು ಶ್ರಾವಕರ ಮನೆಯಲ್ಲಿ ರಚಿಸಲಾದ ಭಿತ್ತಿಚಿತ್ರಗಳು ಹಾಗೂ ಹಸ್ತಪ್ರತಿ ಫಲಕ ಚಿತ್ರಗಳು ಹೀಗೆ ನಾನಾ ವಿಧವಾಗಿ ವರ್ಗೀಕರಿಸಿ, ಚಿತ್ರದ ವಿಭಿನ್ನ ವೈವಿಧ್ಯತೆಯನ್ನು ಸಾಕ್ಷೀಕರಿಸಬಹುದಾಗಿದೆ.

೦೧. ಮಿರ್ಜಿ ಅಣ್ಣಾರಾಯ್ : ಜೈನ ಧರ್ಮ, ಪು–೫೩೪

ಅದೇ ರೀತಿಯಲ್ಲಿ ಇವುಳನ್ನು ಹೊರತುಪಡಿಸಿ, ಇನ್ನೂ ಹತ್ತಾರು ಜೈನರ ಕಲಾವಿಧಾನಗಳನ್ನು ಸಂಕೀರ್ಣ ಮಾಧ್ಯಮಗಳಲ್ಲಿ ಉಲ್ಲೇಖಿಸಿ, ವಿವರಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ. ಇಲ್ಲಿ

೧. ಮಹಾಪುರಾಣ ಗ್ರಂಥಗಳಲ್ಲಿಯ ಚಿತ್ರಗಳು

೨. ಕಾವಿಕಲೆಯ ಚಿತ್ರಗಳು

೩. ಗೋಡೆಯ ಮೇಲಿನ ತೈಲವರ್ಣಚಿತ್ರಗಳು

೪. ಬಟ್ಟೆಯ ಮೇಲಿನ ತೈಲವರ್ಣ ಚಿತ್ರಗಳು

೫. ತೀರ್ಥಂಕರರ ವೃಕ್ಷಾರಾಧನೆ

೬. ಅಕ್ಷತಾ ಪುಂಜಗಳು – ಹೀಗೆ ಆರು ಬಗೆಯ ಸಂಕೀರ್ಣ ಮಾಧ್ಯಮದ ಚಿತ್ರಗಳನ್ನಾಗಿ ಗುರುತಿಸಿ, ಇವುಗಳ ವಸ್ತುವಿಷಯ, ವಿಶೇಷತೆ, ರಚನಾ ಶೈಲಿ ಮತ್ತು ಕ್ರಮ ಉದ್ದೇಶಗಳ ಮಹತ್ವದ ಕುರಿತಾಗಿ ಇಲ್ಲಿ ವಿಭಾಗಿಸಿಕೊಂಡು ವಿವರಣಾತ್ಮಕವಾಗಿ ವಿವರಿಸಲಾಗುವುದು.

೧. ಮಹಾಪುರಾಣ ಗ್ರಂಥಗಳಲ್ಲಿಯ ಚಿತ್ರಗಳು

ಮಾಪುರಾಣದ ಗ್ರಂಥದ ಪ್ರತಿಚಿತ್ರಗಳು ಇವಾಗಿದ್ದು, ಇವುಗಳ ಮೂಲ ಚಿತ್ರಗಳು ಸಿಗದಿರುವ ಕಾರಣ ಪ್ರತಿಮಾಡಿರುವ ಗ್ರಂಥಗಳಲ್ಲಿಯ ಚಿತ್ರಗಳನ್ನು ಛಾಯಾಚಿತ್ರ ತೆಗೆದು ಇವುಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ. ಈ ಮಹಾಪುರಾಣದ ಗ್ರಂಥ ಪ್ರತಿಯ ಪುಸ್ತಕದಲ್ಲಿ ೨೪ ತೀರ್ಥಂಕರರ ಚಿತ್ರಗಳಲ್ಲಿದ್ದು, ಇವುಗಳು ಮೈಸೂರು ಶೈಲಿಯಲ್ಲಿವೆ. ಇಲ್ಲಿ ತೀರ್ಥಂಕರರು, ಲಾಂಛನ, ಯಕ್ಷ-ಯಕ್ಷಿಯರು ಹೀಗೆ ಇದರ ಕುರಿತಾಗಿ ಚಿತ್ರಗಳಿದ್ದು, ಇದರ ಜೊತೆ ತೀರ್ಥಂಕರರ ಸಂಕ್ಷಿಪ್ತ ಕಿರು ಮಾಹಿತಿಯನ್ನೂ ಐತಿಹಾಸಿಕ ಹಿನ್ನೆಲೆಯನ್ನು ಇಲ್ಲಿ ಹೇಳಲಾಗಿದೆ.

ಚಿತ್ರ-೧. ಭಗವಾನ್ ಶ್ರೀ ವೃಷಭನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾ ಖಂಡದ ಅಯೋಧ್ಯಾಪಟ್ಟಣದ ಇಕ್ವಾಕು ವಂಶದ ನಾಭಿರಾಯಮನುವಿನ ಪತ್ನಿ ಮರುದೇವಿಯ ಪವಿತ್ರ ಗರ್ಭದಲ್ಲಿ ಚೈತ್ರ ಬಹುಳ ನವಮಿಯ ಶುಭ ತಿಥಿಯಲ್ಲಿ ಜನಿಸದಿ ವರ್ತಮಾನ ಕಾಲದ ಪ್ರಥಮ ತೀರ್ಥಂಕರರೂ, ಆದಿನಾಥ, ಪುರುದೇವ ಎಂಬ ನಾಮಾಂಕಿತರೂ, ವಜ್ರ ವೃಷಭ ನಾರಾಚಸಂಹನನರೂ, ಪರಮೌದಾರಿಕ ದಿವ್ಯ ದೇಹವುಳ್ಳವರೂ, ವೃಷಭ ಲಾಂಛನವುಳ್ಳವರೂ, ಐದು ನೂರು ಬಿಲ್ಲು ಎತ್ತರವಿದ್ದವರೂ, ೮೪ ಲಕ್ಷ ಪೂರ್ವ

ಆಯುಷ್ಯವುಳ್ಳವರೂ, ಜನತೆಗೆ ಅಸಿ, ಮಸಿ, ಕೃಷಿ, ವಾಣಿಜ್ಯ, ಶಿಲ್ಪ, ವಿದ್ಯೆ ಮುಂತಾದ ಕ್ರಿಯೆಗಳ ಮೂಲಕ ಜೀವನ ಮಾರ್ಗವನ್ನು ತೋರಿದವರೂ, ಹದಿನೈದನೆಯ ಮನುವೆನಿಸದ್ದಿವರೂ, ಯಶಸ್ವತಿ ಸುನಂದೆಯರೆಂಬ ಪತ್ನಿಯರಿಂದ ಭರತ, ಬಾಹುಬಲಿ, ಬ್ರಾಹ್ಮೀ ಸುಂದರಿಯರೇ ಮೊದಲಾದ ನೂರಮೂರು ಮಂದಿ ಸಂತಾನವನ್ನು ಹೊಂದಿದ್ದು ಬಹುಕಾಲ ರಾಜ್ಯಾಡಳಿತ ನಡೆಸಿ ಪ್ರಜಾಪಾಲನೆ ಮಾಡಿ ಜನರು ಧರ್ಮ ಮಾರ್ಗದಲ್ಲಿ ನಡೆಯಲು ಕಲಿಸಿ, ಒಮ್ಮೆ ನೀಲಾಂಜನೆಯ ನೃತ್ಯದ ಸಂದರ್ಭದಲ್ಲಿ ವೈರಾಗ್ಯ ಹೊಂದಿ ಭರತಾದಿಗಳಿಗೆ ರಾಜ್ಯವನ್ನು ಹಂಚಿಕೊಟ್ಟು, ಸಂಸಾರ, ಶರೀರ, ಭೋಗಗಳಿಂದ ವಿರಕ್ತರಾಗಿ ದಿಗಂಬರ ದೀಕ್ಷಾಧಾರಿಗಳಾಗಿ ದಾನ ಶ್ರೇಯಾಂಸನಿಂದ ಆಹಾರ ದಾನವನ್ನು ಪಡೆದು ಸಾವಿರ ವರ್ಷ ಘೋರ ತಪೋಧ್ಯಾನ ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ದ್ವಾದಶಗಣ ಪರಿಪೂರಿತರಾಗಿ ಶ್ರೀ ವೃಷಭಸೇನರೇ ಮೊದಲಾಗಿ ಎಂಭತ್ತನಾಲ್ಕು ಮಂದಿ ಗಣಧರರ ಸಹಿತರಾಗಿ ಶ್ರೀ ಗೋಮುಖ ಯಕ್ಷ ಶ್ರೀ ಚಕ್ರೇಶ್ವರಿ ಯಕ್ಷಿಯರ ಸಹಿತ ವಿಹಾರಗೈದು ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಕೈಲಾಸ ಗಿರಿಯಲ್ಲಿ ನಿಂದು ಸಕಲ ಕರ್ಮ ಕ್ಷಯ ಮಾಡಿ ಮಾಘ ಕೃಷ್ಣ ಚತುರ್ದಶಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ **ಭಗವಾನ್ ೧೦೦೮ ಶ್ರೀ ವೃಷಭನಾಥ ಸ್ವಾಮಿ**[೧೨]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರದಲ್ಲಿ ಆದಿಪುರಷರಾದಂತಹ ಶ್ರೀ ವೃಷಭನಾಥರು ಪದ್ಮಸನದಲ್ಲಿ ಕುಳಿತಿದ್ದು, ತಿಳಿಗೆಂಪು ವರ್ಣದಿಂದ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದ್ದು, ಪದ್ಮಪೀಠದ ಮೇಲೆ ಕುಳಿತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಇವರ ಕೆಳಭಾಗದಲ್ಲಿ ವೃಷಭ ಲಾಂಛನವನ್ನು ತೋರಿಸಲಾಗಿದೆ. ಇವರ ಬಲಬದಿಯಲ್ಲಿ ಗೋಮುಖ, ಯಕ್ಷ ಹಾಗೂ ಎಡಬದಿಯಲ್ಲಿ ಚಕ್ರೇಶ್ವರಿ ಯಕ್ಷಿಯನ್ನು ಚಿತ್ರಿಸಿದ್ದು, ಇವರ ಲಾಂಛನಗಳನ್ನು ಸಹ ಇಲ್ಲಿ ಚಿತ್ರಿಸಲಾಗಿದೆ. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದ್ದು, ಮೂವರಿಗೂ ಪ್ರತ್ಯೇಕ ಪೀಠ ಹಾಗೂ ಸುವರ್ಣ ಕಮಾನುಗಳನ್ನು ಚಿತ್ರಿಸಿದ್ದು, ಹೂಗುಚ್ಚದಿಂದ ಅಲಂಕರಿಸಲಾಗಿರುವುದು. ಗೋಮುಖ ಯಕ್ಷನ ಬಲಬದಿಯಲ್ಲಿ ಜೈನ ಮುನಿಯು ಕೈಮುಗಿದು ನಿಂತಿದ್ದು, ಕೆಳಭಾಗದಲ್ಲಿ ಕಮಂಡಲವನ್ನು ಚಿತ್ರಿಸಲಾಗಿದೆ. ಇನ್ನು ಯಕ್ಷಿಯ ಎಡಬದಿಯಲ್ಲಿ ಸ್ತ್ರೀಯೊಬ್ಬಳು ಕೈಮುಗಿದು ನಿಂತಿರುವ ರೀತಿಯಲ್ಲಿ ಚಿತ್ರದಲ್ಲಿ ತೋರಿಸಲಾಗಿದೆ.

ಕೆಳಭಾಗದ ಪಟ್ಟಿಕೆಯಲ್ಲಿ ಹನ್ನೆರಡು ಬಗೆಯ ಶುಭಗಳನ್ನು ತೋರಿಸಲಾಗಿದೆ. ಇದೊಂದು

೧೨. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೧೩

ಉತ್ತಮ ಸಂಯೋಜನೆಯ ಚಿತ್ರವಾಗಿದ್ದು, ಇಲ್ಲಿ ಕೆಂಪು, ನೀಲಿ, ಹಸಿರು, ತಿಳಿಗೆಂಪು, ಕಂದು, ಬಿಳಿ ವರ್ಣಗಳಿಂದ ಮೈಸೂರು ಶೈಲಿಯಲ್ಲಿ ಚಿತ್ರಿಸಲಾಗಿದೆ.

ಚಿತ್ರ-೨. ಭಗವಾನ್ ಶ್ರೀ ಅಜಿತನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾ ಖಂಡದ ಅಯೋಧ್ಯಾಪಟ್ಟಣದಲ್ಲಿ ಇಕ್ಷ್ವಾಕು ವಂಶದ ಜಿತಶತ್ರು ಮಹಾರಾಜನ ಪತ್ನಿ ವಿಜಯಾ ದೇವಿಯ ಪವಿತ್ರ ಗರ್ಭದಲ್ಲಿ ಮಾಘ ಶುದ್ಧ ದಶಮಿಯಂದು ಎರಡನೇ ತೀರ್ಥಂಕರರಾಗಿ ಜನಿಸಿ ಎಪ್ಪತ್ತೆರಡು ಲಕ್ಷಪೂರ್ವಿ ಆಯುಷ್ಯವುಳ್ಳವರಾಗಿ ನಾಲ್ಕು ನೂರ ಐವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂವತ್ಸರದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಆನೆಯ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಉಲ್ಕಾಪಾತವನ್ನು ನೋಡಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಸಿಂಹಸೇನರೇ ಮೊದಲಾದ ತೊಂಭತ್ತು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮಹಾಯಕ್ಷನೆಂಬ ಯಕ್ಷ ಶ್ರೀ ರೋಹಿಣಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸಿದ್ಧವರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಚೈತ್ರ ಶುದ್ಧ ಪಂಚಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಅಜಿತನಾಥ ಸ್ವಾಮಿ**[೩]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರದಲ್ಲಿ ಮೂರು ಕಮಾನುಗಳಿದ್ದು, ಅದರ ಮೇಲೆ ಕಮಾನುಗಳನ್ನು ಚಿತ್ರಿಸಿದ್ದು, ಧ್ವಜವನ್ನು ತೋರಿಸಲಾಗಿದ್ದು, ಹಿನ್ನೆಲೆಯಲ್ಲಿ ವೃಕ್ಷಗಳನ್ನು ರಚಿಸಲಾಗಿದೆ. ಅಜಿತನಾಥ ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿದ್ದು, ಪೀಠದ ಕೆಳಭಾಗದಲ್ಲಿ ಇವರ ಲಾಂಛನವಾದ ಆನೆಯನ್ನು ಚಿತ್ರಿಸಿದ್ದಾರೆ. ಇದರ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿ, ಜೊತೆಗೆ ಛಾಮರ, ಪೀಠ, ಪ್ರಭಾವಳಿಯಲ್ಲಿ ಮಹಾಯಕ್ಷನ ಚಿತ್ರವಿದ್ದು, ಅಷ್ಟಭುಜಗಳನ್ನು ಹೊಂದಿರುವ ಯಕ್ಷನನ್ನು, ನಾಲ್ಕು ಶಿರಗಳನ್ನು ಹೊಂದಿ ಆಯುಧಗಳನ್ನು ಹಿಡಿದು ಕುಳಿತ ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಬಳಸಿದ್ದಾರೆ. ಅಜಿತನಾಥರ ಎಡಬದಿಯಲ್ಲಿ ರೋಹಿಣಿ ಯಕ್ಷಿಯ ಚಿತ್ರವಿದ್ದು, ಹಸಿರು ಸೀರೆಯನ್ನು ತೊಟ್ಟು ನಾಲ್ಕು ಭುಜಗಳನ್ನು ಹೊಂದಿ ಅಭಯ ಮುದ್ರೆಯಲ್ಲಿ ಕುಳಿತಿರುವಳು. ಇವರ ಹಿನ್ನೆಲೆಯನ್ನು ಸಹ

೦೩. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೧೪

ಕೆಂಪು ವರ್ಣವನ್ನು ಲೇಪಿಸಲಾಗಿದೆ. ಯಕ್ಷಿಯ ಎಡಬದಿಯಲ್ಲಿ ಕೆಂಪು ಸೀರೆಯನ್ನು ತೊಟ್ಟು ಸ್ತ್ರೀಯೊಬ್ಬಳು ಸಕಲ ಆಭರಣ ಕಚಿತಳಾಗಿ ಕೈಮುಗಿದು ನಿಂತಿದ್ದಾಳೆ. ಅಂತೆಯೇ ಯಕ್ಷನ ಬಲಬದಿಯಲ್ಲಿ ನಿಂತಿರುವ ಸ್ತ್ರೀಯು ನಿರ್ಗತಿಗಳಾಗಿ ಕೈಮುಗಿದು ನಿಂತಿರುವುದು ಭಕ್ತಿಯ ಸಮನ್ವಯತೆಯನ್ನು ತೋರುತ್ತದೆ. ಇವರುಗಳ ಹಿನ್ನೆಲೆಯನ್ನು ಹಸಿರು ವರ್ಣದಿಂದ ತೋರಿಸಲಾಗಿದ್ದು, ಇವರ ಮೇಲ್ಭಾಗದಲ್ಲಿ ಗಂಟೆಗಳನ್ನು ತೋರಿಸಲಾಗಿದೆ. ಉಳಿದಂತೆ ಕೆಳಪಟ್ಟಿಯಲ್ಲಿ ಹನ್ನೆರಡು ಬಗೆಯ ಶುಭಗಳನ್ನು ತೋರಿಸಲಾಗಿದ್ದು ಹಿನ್ನೆಲೆಯಲ್ಲಿ ತಿಳಿ ನೀಲಿ ವರ್ಣವನ್ನು ತೋರಿಸಲಾಗಿದೆ. ಇಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಸಿರು, ನೀಲಿ, ಕೆಂಪು, ಹಳದಿ, ಬಿಳಿ, ಕಂದು ವರ್ಣಗಳನ್ನು ಬಳಸಲಾಗಿದ್ದು, ಈ ಚಿತ್ರಗಳು ಬಹುತೇಕ ಮೈಸೂರು ಶೈಲಿಯನ್ನು ಬಿಂಬಿಸುವಂತವಾಗಿದ್ದು, ಮೈಸೂರು ಶೈಲಿಯ ನೇರ ಪ್ರಭಾವವನ್ನು ಕಾಣಬಹುದಾಗಿದ್ದು, ಜೈನ ಧರ್ಮೀಯ ಕಥಾ ಪ್ರೇರಣೆ ಇವುಗಳ ಮೇಲಾಗಿದೆ.

ಚಿತ್ರ-೩. ಭಗವಾನ್ ಶ್ರೀ ಶಂಭವನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಶ್ರಾವಸ್ತೀ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಜಿತಾರಿ ಮಹಾರಾಜನ ಪತ್ನಿ ಸುಷೇಣಾ ದೇವಿಯ ಪವಿತ್ರ ಗರ್ಭದಲ್ಲಿ ಕಾರ್ತಿಕ ಶುದ್ಧ ಹುಣ್ಣಿಮೆಯಂದು ಮೂರನೇ ತೀರ್ಥಂಕರರಾಗಿ ಜನಿಸಿ ಅರವತ್ತ ನಾಲ್ಕು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ನಾಲ್ಕು ನೂರು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕುದುರೆ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಮೇಘದ ಚಲನೆಯನ್ನು ನೋಡಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾ-ಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಚಾರುಷೇಣರೇ ಮೊದಲಾದ ನೂರ ಐದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮುಖರೆಂಬ ಯಕ್ಷ ಶ್ರೀ ಪ್ರಜ್ಞಾಪ್ತಿ ಎಂಬ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಧವಲ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಚೈತ್ರ ಶುದ್ಧ ಷಷ್ಠಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಶಂಭವನಾಥ ಸ್ವಾಮಿ**[೦೪]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

---

೦೪. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೧೫

ಈ ಚಿತ್ರದಲ್ಲಿ ಶಂಭವನಾಥರು ಶ್ವೇತ ವರ್ಣದಿಂದ ಕಂಗೊಳಿಸುವಂತಿದ್ದು, ಪದ್ಮಾಸನದ ಭಂಗಿಯಲ್ಲಿ ಕುಳಿತಿದ್ದು, ಕೆಳಭಾಗದಲ್ಲಿ ಅಶ್ವ ಲಾಂಛನವನ್ನು ಹೊಂದಿರುವರು. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದ್ದು, ಕುದುರೆಯನ್ನು ಹಸಿರು ವರ್ಣದಲ್ಲಿ ತೋರಿಸಲಾಗಿದೆ. ಇವರ ಎರಡೂ ಬದಿಯಲ್ಲಿಯೂ ಕಮಾನುಗಳಿದ್ದು, ಅದರ ಮೇಲ್ಭಾಗದಲ್ಲಿ ಉದ್ದನೆಯ ಸುವರ್ಣ ಚಾವಣಿಯಿದ್ದು, ಮೂವರಿಗೂ ಮೂರು ಗೋಪುರಗಳನ್ನು, ಧ್ವಜಗಳನ್ನು ಕಾಣಬಹುದಾಗಿದೆ. ತೀರ್ಥಂಕರರ ಬಲಬದಿಯಲ್ಲಿ ತ್ರಿಮುಖ ಯಕ್ಷನಿದ್ದು, ಇವರನ್ನು ನೀಲಿ ವರ್ಣದಿಂದ ಚಿತ್ರಿಸಲಾಗಿದೆ. ಇವರು ಮೂರು ಮುಖಗಳು ಹಾಗೂ ಆರುಭುಜಗಳನ್ನು ಹೊಂದಿರುವುದು ಇಲ್ಲಿ ಕಾಣಬಹುದು. ಇವರ ಕೆಳಭಾಗದಲ್ಲಿ ಇವರ ಲಾಂಛನವಾದ ನವಿಲನ್ನು ಇಲ್ಲಿ ಚಿತ್ರಿಸಲಾಗಿದೆ. ಇವರ ಹಿನ್ನೆಲೆಯಲ್ಲಿ ಹಸಿರು ಹಾಗೂ ಕೆಳಭಾಗದಲ್ಲಿ ನೀಲಿ ವರ್ಣವನ್ನು ತೋರಿಸಲಾಗಿದೆ. ಯಕ್ಷನ ಬಲಬದಿಗೆ ಧಿಗಂಬರ ಜಿನನೊಬ್ಬನು ಕೈಮುಗಿದು ನಿಂತಿರುವ ಚಿತ್ರವಿದ್ದು, ಇವರ ಮೇಲ್ಭಾಗದಲ್ಲಿ ಗಂಟೆಗಳ ಗುಚ್ಚವನ್ನು ತೋರಿಸಲಾಗಿದೆ.

ತೀರ್ಥಂಕರರ ಎಡಭಾಗದಲ್ಲಿ ಪ್ರಜ್ಞಪ್ತಿ ಯಕ್ಷಿಯ ಚಿತ್ರವಿದ್ದು, ಈ ತಾಯಿಯು ಕೆಂಪು ಸೀರೆಯನ್ನು ತೊಟ್ಟು ಷಡ್ಭುಜಗಳನ್ನು ಹೊಂದಿ ಶ್ವೇತವರ್ಣದಿಂದ ಕಂಗೊಳಿಸುತ್ತಿದ್ದಾಳೆ. ಯಕ್ಷಿಯ ಎಡಭಾಗದಲ್ಲಿ ಶ್ವೇತಾಂಭರ ಜಿನ ಸ್ತ್ರೀಯ ಮತ್ತು ಸರ್ವ ಆಭರಣ ಕಚಿತ ಲೌಕಿಕ ಜಗತ್ತಿನ ಸ್ತ್ರೀಯು ಕೈ ಮುಗಿದು ನಿಂತಿರುವುದು ನಾವಿಲ್ಲಿ ಕಾಣಬಹುದಾಗಿದೆ. ಇವರ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ತೋರಿಸಲಾಗಿದೆ. ಈ ಚಿತ್ರವು ಸಹ ಮೈಸೂರು ಶೈಲಿಯ ಪ್ರಭಾವದಿಂದಿದ್ದು, ಶೈವರ ಪ್ರೇರಣೆಯನ್ನು ಕಾಣಬಹುದಾಗಿದೆ.

ಚಿತ್ರ–೪. ಭಗವಾನ್ ಶ್ರೀ ಅಭಿನಂದನ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಅಯೋಧ್ಯಾ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಸಂಬರ ಮಹಾರಾಜನ ಪತ್ನಿ ಸಿದ್ಧಾರ್ಥ ದೇವಿಯ ಪವಿತ್ರ ಗರ್ಭದಲ್ಲಿ ಮಾಘ ಶುದ್ಧ ದ್ವಾದಶಿಯಂದು ನಾಲ್ಕನೇ ತೀರ್ಥಂಕರರಾಗಿ ಜನಿಸಿ ಐವತ್ತು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ಮೂರು ನೂರ ಐವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕಪಿ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಬೀಳುತ್ತಿರುವ ಉಪ್ಪರಿಗೆಯ ಮನೆಯನ್ನು ನೋಡಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ

ವಜ್ರನಾಭಿ ಎಂಬುವರೇ ಮೊದಲಾದ ನೂರ ಮೂರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಯಕ್ಷೇಶ್ವರ ಯಕ್ಷ ಶ್ರೀ ವಜ್ರಶೃಂಖಲಾ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಆನಂದ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ವೈಶಾಖ ಶುದ್ಧ ಷಷ್ಠಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ ಶ್ರೀ **ಅಭಿನಂದನ ಸ್ವಾಮಿ**[೦೫]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರದಲ್ಲಿ ತೀರ್ಥಂಕರರು ತಿಳಿಕಂದು ವರ್ಣದಿಂದ ಚಿತ್ರಿಸಿದ್ದು, ಪದ್ಮಾಸನದಲ್ಲಿ ಕುಳಿತಿರುವರು. ಹಿನ್ನೆಲೆಯಲ್ಲಿ ನೇರಳೆ ವರ್ಣವನ್ನು ತೋರಿಸಿದ್ದು, ಇವರ ಬಲಬದಿಗೆ ಯಕ್ಷೇಶ್ವರ ಯಕ್ಷನನ್ನು ನೀಲಿವರ್ಣದಿಂದ ಚಿತ್ರಿಸಲಾಗಿದ್ದು, ನಾಲ್ಕು ಭುಜಗಳನ್ನು ಹೊಂದಿ ಆಯುಧಗಳನ್ನಿಡಿದು ಕೂತಿರುವನು. ಇವನ ಹಿನ್ನೆಲೆಯಲ್ಲಿಯೂ ಸಹ ಹಸಿರು ವರ್ಣವನ್ನು ಲೇಪಿಸಲಾಗಿದೆ. ಯಕ್ಷನ ಬಲಬದಿಯಲ್ಲಿ ಜಿನ ಮುನಿಯು ಕೈಯಲ್ಲಿ ಜಪಮಾಲೆಯನ್ನು ಹಿಡಿದು ಪದ್ಮಾನ ಸ್ಥಿತಿಯಲ್ಲಿ ಕುಳಿತಿರುವನು. ತೀರ್ಥಂಕರರ ಎಡಬದಿಯಲ್ಲಿ ವಜ್ರಶೃಂಖಲೆ ಎಂಬ ಯಕ್ಷಿಯಿದ್ದು, ಕೆಂಪು ಸೀರೆಯನ್ನು ತೊಟ್ಟು ನಾಲ್ಕು ಭುಜಗಳನ್ನು ಹೊಂದಿರುವಳು. ಯಕ್ಷಿಯ ಎಡಬದಿಯಲ್ಲಿ ಇಬ್ಬರು ಶ್ರೀಮಂತ ಮಹಿಳೆಯರು ಕೈಮುಗಿದು ನಿಂತಿದ್ದು, ಚಿತ್ರದ ಕೆಳ ಪಟ್ಟಿಯಲ್ಲಿ ನವ ಶುಭಗಳನ್ನು ತೋರಿಸಲಾಗಿದೆ. ಈ ಚಿತ್ರವು ಮೈಸೂರು ಶೈಲಿಯನ್ನು ಹೊಂದಿದ್ದು, ತ್ರೀ ಆಯಾಮದಲ್ಲಿ ವರ್ಣಗಾರಿಕೆಯನ್ನು ಮಾಡಲಾಗಿದ್ದು, ರೇಖಾವಿನ್ಯಾಸವನ್ನು ನಾಜೂಕಾಗಿ ಕಲಾವಿದನು ಮಾಡಿದ್ದಾನೆ.

ಚಿತ್ರ-೫. ಭಗವಾನ್ ಶ್ರೀ ಸುಮತಿನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಅಯೋಧ್ಯಾ ಪಟ್ಟಣದಲ್ಲಿ ಇಕ್ವ್ವಾಕು ವಂಶದ ಮೇಘರಥ ಮಹಾರಾಜನ ಪತ್ನಿ ಮಂಗಲಾದೇವಿಯ ಪವಿತ್ರ ಗರ್ಭದಲ್ಲಿ ಚೈತ್ರ ಶುದ್ಧ ಏಕಾದಶಿಯಂದು ಐದನೇ ತೀರ್ಥಂಕರರಾಗಿ ಜನಿಸಿ ನಲವತ್ತು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ಮುನ್ನೂರು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಚಕ್ರವಾಕ ಲಾಂಛನವುಳ್ಳವರಾಗಿ ಸುಖ ಶಾಂತಿಯಿಂದ ಬಹುಕಾಲ ರಾಜ್ಯವನ್ನಾಳಿ ಸಂಸಾರದ ಅಸಾರತೆಯನ್ನು ಭಾವಿಸಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಚಮರರೇ

೦೫. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೧೬

ಮೊದಲಾದ ನೂರ ಹದಿನಾರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ತುಂಬುರ ಯಕ್ಷ ಶ್ರೀ ವಜ್ರಾಂಕುಶ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಅವಿಚಲ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಚೈತ್ರ ಶುದ್ಧ ಏಕಾದಶಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಸುಮತಿನಾಥ ಸ್ವಾಮಿ**[೧೬]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಸುಮತಿನಾಥರು ಪದ್ಮಾಸನದಲ್ಲಿ ಶ್ವೇತವರ್ಣೀಯರಂತೆ ಚಿತ್ರಿಸಲಾಗಿದ್ದು, ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿದ್ದು, ದೀಪ, ಛಾಮರ, ಪ್ರಭಾವಳಿ ಹೂ ಮಾಲೆಯನ್ನು ತೋರಿಸಲಾಗಿದೆ. ಕೆಳಭಾಗದಲ್ಲಿ ಇವರ ಲಾಂಛನವಾದ ಚಕ್ರವಾಕವನ್ನು ತೋರಿಸಲಾಗಿದೆ. ಇವರ ಬಲಬದಿಯಲ್ಲಿ ತುಂಬುರ ಯಕ್ಷನನ್ನು ಚಿತ್ರಿಸಲಾಗಿದ್ದು, ಇವರ ಬಲಬದಿಯಲ್ಲಿ ಶ್ರವಕನೊಬ್ಬ ಕೈಮುಗಿದು ನಿಂತಿರುವನು. ತೀರ್ಥಂಕರರ ಎಡಭಾಗದಲ್ಲಿ ವಜ್ರಾಂಕುಶಾ ಯಕ್ಷಿಯು ಕೆಂಪು ಸೀರೆಯನ್ನು ತೊಟ್ಟು ಕುಳಿತಿರುವಳು. ಇವರ ಎಡಬದಿಯಲ್ಲಿ ಇಬ್ಬರು ಶ್ವೇತ ವಸ್ತ್ರಧಾರಿಗಳು ಕೈಜೋಡಿಸಿ ನಿಂತಿರುವುದನ್ನು ಕಾಣಬಹುದಾಗಿದೆ. ಇವರುಗಳ ಹಿನ್ನೆಲೆಯಲ್ಲಿಯೂ ಸಹ ನೀಲಿ ವರ್ಣ ಲೇಪಿಸಲಾಗಿದ್ದು, ಮೈಸೂರು ಶೈಲಿಯ ರೇಖಾವಿನ್ಯಾಸ, ವರ್ಣಗಾರಿಕೆ, ಕಿರೀಟ, ಗೋಪುರ ವಿನ್ಯಾಸಗಳನ್ನು ನಾವಿಲ್ಲಿ ಗುರುತಿಸಬಹುದಾಗಿದೆ.

ಚಿತ್ರ–೬. ಭಗವಾನ್ ಶ್ರೀ ಪದ್ಮಪ್ರಭ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಕೌಶಾಂಬಿ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಧಾರಣ ಮಹಾರಾಜನ ಪತ್ನಿ ಸುಷೀಮಾ ದೇವಿಯ ಪವಿತ್ರ ಗರ್ಭದಲ್ಲಿ ಕಾರ್ತಿಕ ಶುದ್ಧ ತ್ರಯೋದಶಿಯಂದು ಆರನೇ ತೀರ್ಥಂಕರರಾಗಿ ಜನಿಸಿ ಮೂವತ್ತು ಲಕ್ಷ ಪೂರ್ವಿ ಆಯುಷ್ಯ ವುಳ್ಳವರಾಗಿ ಇನ್ನೂರೈವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕಮಲ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಪಟ್ಟದ ಆನೆ ನೀರಿನಲ್ಲಿ ಮುಳುಗಿ ನರಳುತ್ತಿರುವ ದೃಶ್ಯ ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾ-ಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ವಜ್ರಮಾಚರರೇ ಮೊದಲಾದ ನೂರಹತ್ತು ಮಂದಿ ಗಣಧರರಿಂದ

೧೬. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೧೭

ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಕುಸುಮ ಯಕ್ಷ ಶ್ರೀ ಮನೋವೇಗೆ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಮೋಹನ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಫಾಲ್ಗುಣ ಕೃಷ್ಣ ಚೌತಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಪದ್ಮಪ್ರಭ ಸ್ವಾಮಿ**[೦೭]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರದಲ್ಲಿ ಪದ್ಮಪ್ರಭರ ಮೈ ವರ್ಣವನ್ನು ಗಾಢ ಕೆಂಪು ವರ್ಣದಿಂದ ಚಿತ್ರಿಸಲಾಗಿದ್ದು, ತೀರ್ಥಂಕರರು ಪದ್ಮಾಸನದಲ್ಲಿ ಕುಳಿತಿದ್ದು, ಹಿನ್ನೆಲೆಯಲ್ಲಿ ಹಸಿರು ವರ್ಣವನ್ನು ಲೇಪಿಸಲಾಗಿದೆ. ಅದರ ಮೇಲೆ ಚಾಮರ ಪೀಠ, ಪ್ರಭಾವಳಿ, ದೀಪಗಳನ್ನು ತೋರಿಸಲಾಗಿದ್ದು, ತೀರ್ಥಂಕರರ ಕೆಳಭಾಗದಲ್ಲಿ ತಾವರೆಯ ಲಾಂಛನವನ್ನು ಸಹ ಇಲ್ಲಿ ತೋರಿಸಲಾಗಿರುವುದು. ಇವರ ಬಲಬದಿಗೆ ಪುಷ್ಪಕುಸುಮ ಯಕ್ಷನಿದ್ದು, ಇವರ ಮೈ ಬಣ್ಣವನ್ನು ನೀಲಿ ವರ್ಣದಿಂದ ತೋರಿಸಲಾಗಿದ್ದು, ನಾಲ್ಕು ಭುಜ, ಕತ್ತಿ, ಗುರಾಣಿಗಳನ್ನು ಹಿಡಿದು ಕೂತಿದ್ದು, ಹಿನ್ನೆಲೆಯ್ಲಲಿ ಕೆಂಪು ಹಾಗೂ ಕೆಳಗೆ ನೀಲಿ ವರ್ಣವನ್ನು ಲೇಪಿಸಿದ್ದಾರೆ. ಯಕ್ಷನ ಬಲಬದಿಗೆ ಶ್ರವಕನೊಬ್ಬನು ಕೈಮುಗಿದು ನಿಂತಿರುವನು. ಇವರ ಮೇಲೆ ಗಂಟೆ ಹಾಗೂ ಹಿನ್ನೆಲೆಯನ್ನು ನೀಲಿ ವರ್ಣದಿಂದ ತೋರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಮನೋವೇಗಾ ಯಕ್ಷಿಯು ತಿಳಿ ನೀಲಿ ಸೀರೆಯನ್ನು ತೊಟ್ಟು ನಾಲ್ಕು ಭುಜಗಳನ್ನು ಹೊಂದಿ ಕತ್ತಿ ಗುರಾಣಿಗಳನ್ನು ಹಿಡಿದು ಶ್ವೇತ ವರ್ಣದಿಂದ ಕಂಗೊಳಿಸುತ್ತಿದ್ದಾಳೆ. ಹಿನ್ನೆಲೆಯಲ್ಲಿ ಕೆಂಪುವರ್ಣ ಹೊಂದಿದ್ದು, ಇವರ ಕೆಳಭಾಗದಲ್ಲಿ ತಮ್ಮ ಲಾಂಛನವಾದ ಕುದುರೆಯನ್ನು ತೋರಿಸಲಾಗಿದೆ. ಯಕ್ಷಿಯ ಎಡಬದಿಯಲ್ಲಿ ಇಬ್ಬರು ಸ್ತ್ರೀಯರು ಕೈಜೋಡಿಸಿ ನಿಂತಿರುವುದನ್ನು ಕಲಾವಿದ ಚಿತ್ರಿಸಿದ್ದಾನೆ. ಇನ್ನುಳಿದಂತೆ ಮೂರು ಕಮಾನುಗಳು, ಗೋಪುರಗಳು, ಅದರ ಹಿನ್ನೆಲೆಯಲ್ಲಿ ಮರಗಳ ಟೊಂಗೆಗಳನ್ನು ತೋರಿಸಲಾಗಿದೆ.

ಚಿತ್ರ-೭. ಭಗವಾನ್ ಶ್ರೀ ಸುಪಾರ್ಶ್ವನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಕಾಶೀ ಪಟ್ಟಣದಲ್ಲಿ ಉಗ್ರ ವಂಶದ ಸುಪ್ರತಿಷ್ಟ ಮಹಾರಾಜನ ಪತ್ನಿ ಪೃಥ್ವೀ ದೇವಿಯ ಪವಿತ್ರ ಗರ್ಭದಲ್ಲಿ ಜೇಷ್ಠ ಶುದ್ಧ ದ್ವಾದಶಿಯಂದು ಏಳನೇ ತೀರ್ಥಂಕರರಾಗಿ ಜನಿಸಿ ಇಪ್ಪತ್ತು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ಇನ್ನೂರು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ

---

೦೭. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೧೮

ಸ್ವಸ್ತಿಕ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಋತು ಪರಿವರ್ತನೆಯ ವೈಚಿತ್ರ್ಯವನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀಬಳ ಎಂಬುವವರೇ ಮೊದಲಾದ ತೊಂಭತ್ತೈದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ವರನಂದಿ ಯಕ್ಷ ಶ್ರೀ ಕಾಳಿದೇವಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಪ್ರಭಾಸ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಫಾಲ್ಗುಣ ಬಹುಳ ಸಪ್ತಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಸುಪಾರ್ಶ್ವನಾಥ ಸ್ವಾಮಿ**[೧೮]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರವು ಅತ್ಯುತ್ತಮ ಸಂಯೋಜನೆಯಾಗಿದ್ದು, ಇಲ್ಲಿ ಸುಪಾರ್ಶ್ವನಾಥನು ಹಸಿರು ವರ್ಣದಿಂದ ಚಿತ್ರಿಸಲಾಗಿದೆ. ಪದ್ಮಾಸನದಲ್ಲಿ ಕುಳಿತ ತೀರ್ಥಂಕರ ಹಿನ್ನೆಲೆಯಲ್ಲಿ ಐದೆಡೆಯ ಸರ್ಪವನ್ನು ತೋರಿಸಲಾಗಿದೆ. ಕೆಳಭಾಗದಲ್ಲಿ ಇವರ ಲಾಂಛನವಾದ ಸ್ವಸ್ತಿಕನ್ನು ತೋರಿಸಲಾಗಿದೆ. ಇವರ ಬಲಬದಿಗೆ ಶ್ವೇತವರ್ಣದ ವರನಂದಿ ಯಕ್ಷನ ಚಿತ್ರವಿದ್ದು, ಎರಡು ಭುಜಗಳನ್ನು ಮಾತ್ರ ಇವರು ಹೊಂದಿದ್ದು, ತ್ರಿಶೂಲ ಹಾಗೂ ದಂಡವನ್ನು ಹಿಡಿದು ಕುಂತಿದ್ದು, ಬಲಬದಿಗೆ ಶ್ರಾವಕನೊಬ್ಬ ಕೈಮುಗಿದು ನಿಂತಿರುವನು. ಇನ್ನು ತೀರ್ಥಂಕರರ ಎಡಬದಿಗೆ ಕಾಶಿ ಯಕ್ಷಿಯ ಚಿತ್ರವಿದ್ದು, ನಾಲ್ಕು ಭುಜಗಳನ್ನು ಹೊಂದಿದ್ದು, ಶ್ವೇತವರ್ಣದಲ್ಲಿ ಕಂಗೊಳಿಸುತ್ತಿದ್ದಾರೆ: ಕೆಳಭಾಗದಲ್ಲಿ ಇವರ ಲಾಂಛನವಾದ ನಂದಿಯ ಚಿತ್ರವನ್ನು ಕಾಣಬಹುದಾಗಿದೆ. ಇವರ ಎಡಬದಿಯಲ್ಲಿ ಸ್ತ್ರೀಯೊಬ್ಬಳು ಮಗುವನ್ನು ಎತ್ತಿಕೊಂಡು ಪ್ರಸಾದಾದಿಗಳನ್ನು ದೇವರಿಗೆ ಅರ್ಪಿಸುವ ಭಂಗಿಯಲ್ಲಿ ನಿಂತಿರುವಳು. ಇವರುಗಳ ಕೆಳಪಟ್ಟಿಯಲ್ಲಿ ಅಷ್ಟ ಮಂಗಳಗಳ ಚಿತ್ರಗಳನ್ನು ನಾವಿಲ್ಲಿ ಕಾಣಬಹುದು. ಚಿತ್ರದ ಹಿನ್ನೆಲೆಯಲ್ಲಿ ಗೋಪುರಗಳು ವೃಕ್ಷಗಳನ್ನು ಚಿತ್ರಿಸಲಾಗಿದೆ.

ಚಿತ್ರ–೮. ಭಗವಾನ್ ಶ್ರೀ ಚಂದ್ರಪ್ರಭ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಚಂದ್ರಪುರೀ ಪಟ್ಟಣದಲ್ಲಿ ಇಕ್ವಾಕು ವಂಶದ ಮಹಾಸೇನ ಮಹಾರಾಜನ ಪತ್ನಿ ಲಕ್ಷ್ಮಣಾ ದೇವಿಯ ಪವಿತ್ರ ಗರ್ಭದಲ್ಲಿ ಪುಷ್ಯ ಬಹುಳಾ ಏಕಾದಶಿಯಂದು ಎಂಟನೇ ತೀರ್ಥಂಕರರಾಗಿ ಜನಿಸಿ ಹತ್ತು ಲಕ್ಷ ಪೂರ್ವ ಆಯುಷ್ಯವುಳ್ಳವರಾಗಿ

---

೧೮. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೧೯

ಇನ್ನೂರೈವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಚಂದ್ರ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವಾಗ ಆದ ಬದಲಾವಣೆಯನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ದತ್ತರೇ ಮೊದಲಾದ ತೊಂಭತ್ಮೂರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಶ್ಯಾಮ ಯಕ್ಷ ಶ್ರೀ ಜ್ವಾಲಾಮಾಲಿನೀ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಲಲಿತ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಫಾಲ್ಗುಣ ಬಹುಳ ಸಪ್ತಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಚಂದ್ರಪ್ರಭ ಸ್ವಾಮಿಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಇದೊಂದು ಉತ್ತಮ ಸಂಯೋಜನೆ ಹಾಗೂ ವರ್ಣಗಳ ಬಳಕೆಯನ್ನು ಒಳಗೊಂಡ ಚಿತ್ರವಾಗಿದ್ದು, ಇಲ್ಲಿ ಚಂದ್ರಪ್ರಭರು ಪದ್ಮಾಸನದಲ್ಲಿ ಕುಳಿತಿದ್ದು, ಶುದ್ಧ ಶ್ವೇತವರ್ಣದಿಂದ ಕಂಗೊಳಿಸುತ್ತಿದ್ದು, ಇವರ ಕೆಳಭಾಗದಲ್ಲಿ ಅರ್ಧಚಂದ್ರಾಕಾರವನ್ನು ತೋರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿವರ್ಣವನ್ನು ತೋರಿಸಿದ್ದು, ಹೂಗುಚ್ಛ, ಚಾಮರಗಳನ್ನು ಸಹ ಇಲ್ಲಿ ಚಿತ್ರಿಸಲಾಗಿದೆ. ಇವರ ಬಲಬದಿಗೆ ಶಾಮಯಕ್ಷನ ಚಿತ್ರವಿದ್ದು, ಇವರನ್ನು ನೀಲಿವರ್ಣದಲ್ಲಿ ಚಿತ್ರಿಸಿದ್ದು, ನಾಲ್ಕು ಭುಜಗಳನ್ನು ತೋರಿಸಲಾಗಿದೆ. ವಿಶೇಷವಾಗಿ ಇವರ ಬಲಬದಿಗೆ ನಿಂತಿರುವ ದಿಗಂಭರ ಜೈನ ಮುನಿಯು ನಗ್ನವಾಗಿದ್ದು, ಲಂಗೋಟಿಯನ್ನು ಧರಿಸಿದ್ದಾರೆ. ಇನ್ನೂ ತೀರ್ಥಂಕರರ ಎಡಬದಿಯಲ್ಲಿರುವ ಜ್ವಾಲಮಾಲಿನಿ ಯಕ್ಷಿಯು ಅಷ್ಟಭುಜಗಳನ್ನು ಹೊಂದಿ, ಹಸಿರು ಸೀರೆಯನ್ನು ತೊಟ್ಟು, ಸಕಲ ಆಭರಣ, ಅಸ್ತ್ರಗಳಿಂದ ವಿಜೃಂಭಿಸುತ್ತಿದ್ದು, ಇವರ ಲಾಂಛನವಾದ ಮಹಿಷನನ್ನು ಕೆಳಭಾಗದಲ್ಲಿ ಚಿತ್ರಿಸಲಾಗಿದೆ. ದೇವಿಯ ಎಡಬದಿಯಲ್ಲಿ ಬ್ರಾಹ್ಮಣ ವಸ್ತ್ರವನ್ನು ಹೋಲುವ ಇಬ್ಬರು ಪುರುಷರಿದ್ದು, ಒಬ್ಬನು ಕೈಯೆತ್ತಿ ಮುಗಿಯುತ್ತಿರುವುದು ವಿಶೇಷವಾಗಿ ಕಂಡುಬರುತ್ತದೆ.

ಚಿತ್ರ–೯. ಭಗವಾನ್ ಶ್ರೀ ಪುಷ್ಪದಂತ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಕಾಕಂದೀ ಪಟ್ಟಣದಲ್ಲಿ ಇಕ್ಷ್ವಾಕು

---

೧೯. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೨೦

ವಂಶದ ಸುಗ್ರೀವ ಮಹಾರಾಜನ ಪತ್ನಿ ಜಯರಾಮಾ ದೇವಿಯ ಪವಿತ್ರ ಗರ್ಭದಲ್ಲಿ ಮಾರ್ಗಶಿರ ಶುಕ್ಲ ಪಾಡ್ಯಮಿಯಂದು ಒಂಭತ್ತನೇ ತೀರ್ಥಂಕರರಾಗಿ ಜನಿಸಿ ಎರಡು ಲಕ್ಷ ಪೂರ್ವ ಆಯುಷ್ಯವುಳ್ಳವರಾಗಿ ಒಂದು ನೂರು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಮೊಸಳೆ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಉಲ್ಕಾಪಾತವನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ವಿದರ್ಭರೇ ಮೊದಲಾದ ಎಂಭತ್ತೆಂಟು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಅಜಿತ ಯಕ್ಷ ಶ್ರೀ ಮಹಾಕಾಳಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಪ್ರಭಾಸ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಭಾದ್ರಪದ ಶುದ್ಧ ಅಷ್ಟಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಪುಷ್ಪದಂತ ಸ್ವಾಮಿ[೧೦]ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ವೇತವರ್ಣದಲ್ಲಿ ಪದ್ಮಾಸನ ಸ್ಥಿತಿಯಲ್ಲಿ ಕುಳಿತಿರುವ ಪುಷ್ಪದಂತ ತೀರ್ಥಂಕರರ ಹಿನ್ನೆಲೆಯಲ್ಲಿ ನೀಲಿವರ್ಣವನ್ನು ಲೇಪಿಸಲಾಗಿದ್ದು, ಇವರ ಹಿಂಬದಿಯಲ್ಲಿ ಹೂಗುಚ್ಛಗಳು, ಚಾಮರ, ಪೀಠ, ಪ್ರಭಾವಳಿಗಳನ್ನು ತೋರಿಸಲಾಗಿದೆ. ಇವರ ಲಾಂಛನವಾದ ಮೊಸಳೆಯನ್ನು ಹಸಿರು ವರ್ಣದಲ್ಲಿ ಚಿತ್ರಿಸಿದ್ದು, ಇವರ ಬಲಬದಿಯಲ್ಲಿ ಅಜಿತ ಯಕ್ಷನು ನಾಲ್ಕು ಭುಜಗಳನ್ನು ಹೊಂದಿ, ಹಳದಿ ಮತ್ತು ಕೆಂಪು ವಸ್ತ್ರಗಳನ್ನುಟ್ಟು ಕುಳಿತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಹಸಿರುವರ್ಣವನ್ನು ಲೇಪಿಸಲಾಗಿದೆ. ಇವರ ಬಲಬದಿಗೆ ಮಧ್ಯಮವರ್ಗದ ಸ್ತ್ರೀಯೊಬ್ಬಳು ಕೈಜೋಡಿಸಿ ನಿಂತಿರುವುದನ್ನು ಕಾಣಬಹುದಾಗಿದೆ. ಇನ್ನೂ ಪುಷ್ಪದಂತರ ಎಡಬದಿಯಲ್ಲಿ ಮಹಾಕಾಳಿ ಯಕ್ಷಿಯ ಚಿತ್ರವಿದ್ದು, ತಾಯಿಯು ಶ್ಯಾಮಲವರ್ಣವಿದ್ದು, ನಾಲ್ಕು ಭುಜಗಳನ್ನು ಹೊಂದಿರುವಳು. ಇವಳ ಎಡಬದಿಯಲ್ಲಿ ಶ್ರೀಮಂತ ಸ್ತ್ರೀಯೊಬ್ಬಳು ಬಿಳಿಯಬಣ್ಣದ ಸೀರೆಯನ್ನು ತೊಟ್ಟು, ಆಭರಣಕಚಿತಳಾಗಿ ದೇವಿಗೆ ಫಲಪುಷ್ಪಗಳನ್ನು ಅರ್ಪಿಸುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಚಿತ್ರದ ಕೆಳಗೆ ಪಟ್ಟಿಕೆಯಲ್ಲಿ ಅಷ್ಟ ಮಂಗಳಗಳನ್ನು ಕಾಣಬಹುದಾಗಿದ್ದು, ಇಲ್ಲಿ ನೀಲಿ, ಹಸಿರು, ಕೆಂಪು, ಬಿಳಿ, ಹಳದಿ, ಕಂದು ವರ್ಣಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ.

---

೧೦. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೨೧

ಚಿತ್ರ-೧೦. ಭಗವಾನ್ ಶ್ರೀ ಶೀತಲನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಭದ್ರಪುರ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ದೃಡರಥ ಮಹಾರಾಜನ ಪತ್ನಿ ಸುನಂದಾ ದೇವಿಯ ಪವಿತ್ರ ಗರ್ಭದಲ್ಲಿ ಮಾಘ ಕೃಷ್ಣ ದ್ವಾದಶಿಯಂದು ಹತ್ತನೇ ತೀರ್ಥಂಕರರಾಗಿ ಜನಿಸಿ ಒಂದು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ತೊಂಭತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕಲ್ಪವೃಕ್ಷ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಹಿಮದ ರಾಶಿ ಕರಗಿ ನೀರಾಗುವುದನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಅನಗಾರಕೇವಲಿಗಳೇ ಮೊದಲಾದ ಎಂಭತ್ತೊಂದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮಾನವಿ ಯಕ್ಷ ಶ್ರೀ ಬ್ರಹ್ಮ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ವಿದ್ವದ್ವರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಆಶ್ವಯುಜ ಶುದ್ಧ ಅಷ್ಟಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಶೀತಲನಾಥ ಸ್ವಾಮಿ**[೧೧]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ರೀತಲನಾಥ ಚಿತ್ರವನ್ನು ನೋಡಿದಾಕ್ಷಣ ಕಲಾವಿದನಲ್ಲಿ ಪ್ರಬುದ್ಧತೆಯ ಕೊರತೆಯು ಕಂಡುಬರುವುದು. ಇಲ್ಲಿ ಶೀತಲನಾಥರು ಕಣ್ಮುಚ್ಚಿ ಪದ್ಮಾಸನದಲ್ಲಿ ಧ್ಯಾನಮಾಡುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದ್ದು, ಹಿನ್ನೆಲೆಯಲ್ಲಿ ಹಸಿರು ವರ್ಣ ಲೇಪಿಸಿದ್ದು, ಚಾಮರ, ಹೂಗುಚ್ಛ, ಪೀಠಗಳನ್ನು ತೋರಿಸಲಾಗಿದೆ. ಇವರ ಬಲಬದಿಗೆ ಬ್ರಹ್ಮ ಯಕ್ಷನಿದ್ದು, ಅಷ್ಟ ಭುಜಗಳು ಹಾಗೂ ನಾಲ್ಕು ತಲೆಗಳನ್ನು ಹೊಂದಿದ್ದಾರೆ. ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಮಾನವೀ ಯಕ್ಷಿಯ ಚಿತ್ರವಿದ್ದು, ಹಸಿರು ವರ್ಣದಲ್ಲಿ ತೋರಿಸಲಾಗಿದೆ. ಈಕೆಗೆ ಪುರೋಹಿತನು ಮಂಗಳಾರತಿಯನ್ನು ಬೆಳಗುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಉಳಿದಂತೆ ಕೆಳಭಾಗದಲ್ಲಿ ಅಷ್ಟ ಮಂಗಳಗಳು ಹಾಗೂ ಮೇಲೆ ಕಮಾನು, ಗೋಪುರ, ಧ್ವಜಗಳನ್ನು ಇಲ್ಲಿ ತೋರಿಸಲಾಗಿದೆ. ವಿಶೇಷವೆಂದರೆ ಗೋಪುರ ಮತ್ತು ಕಮಾನುಗಳನ್ನು ಉಬ್ಬು ವರ್ಣದಲ್ಲಿ ತೋರಿಸಲಾಗಿದ್ದು, ತ್ರಿ ಆಯಾಮದ ಛಾಯೆಯನ್ನು ಈ ಚಿತ್ರಗಳು ಬಿಂಬಿಸುತ್ತವೆ. ಇದರಿಂದ ಇವುಗಳ ಮೇಲೆ ಮೈಸೂರು ಶೈಲಿಯ ಪ್ರಭಾವ ಸಂಪೂರ್ಣವಾಗಿದೆ ಎಂದು ಹೇಳಬಹುದು.

---

೧೧. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೨

ಚಿತ್ರ-೧೧. ಭಗವಾನ್ ಶ್ರೀ ಶ್ರೇಯಾಂಸನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಸಿಂಹಪುರೀ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ವಿಮಲಹಾಸನ ಮಹಾರಾಜನ ಪತ್ನಿ ನಂದಾ ದೇವಿಯ ಪವಿತ್ರ ಗರ್ಭದಲ್ಲಿ ಫಾಲ್ಗುಣ ಕೃಷ್ಣ ಏಕಾದಶಿಯಂದು ಹನ್ನೊಂದನೇ ತೀರ್ಥಂಕರರಾಗಿ ಜನಿಸಿ ಎಂಭತ್ತನಾಲ್ಕು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ಎಂಭತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಭೇರುಂಡ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಮ್ಮೆ ಋತುವಿನ ಪರಿವರ್ತನೆಯನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾ ಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಕುಂಥುಭಟ್ಟಾರರೇ ಮೊದಲಾದ ಎಪ್ಪತ್ತೇಳು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಈಶ್ವರ ಯಕ್ಷ ಶ್ರೀ ಗೌರಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸಂಕುಲ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಶ್ರಾವಣ ಶುದ್ಧ ಹುಣ್ಣಿಮೆಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಶ್ರೇಯಾಂಸನಾಥ ಸ್ವಾಮಿ**[೧೨]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಸುವರ್ಣ ವರ್ಣದಿಂದ ಕಂಗೊಳಿಸುತ್ತ ಪದ್ಮಾಸನದಲ್ಲಿ ಕುಳಿತಿರುವ ತೀರ್ಥಂಕರರ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದ್ದು, ಹಿಂದೆ ಹೂಗುಚ್ಛಗಳು, ಚಾಮರ, ಪೀಠಗಳು ಕಾಣಬಹುದಾಗಿದೆ. ಕೆಳಭಾಗದಲ್ಲಿ ಗಂಡಭೇರುಂಡ ಲಾಂಛನವನ್ನು ತೋರಿಸಲಾಗಿದೆ. ಇವರ ಬಲಬದಿಯಲ್ಲಿ ಈಶ್ವರ ಯಕ್ಷನನ್ನು ತೋರಿಸಲಾಗಿದ್ದು, ಶ್ವೇತವರ್ಣದ ಈಶ್ವರನು ನಾಲ್ಕು ಭುಜಗಳನ್ನು ಹೊಂದಿದ್ದು, ಕೆಳಗೆ ನಂದಿ ಲಾಂಛನವನ್ನು ತೋರಿಸಲಾಗಿದೆ. ಇವರ ಬಲಬದಿಗೆ ದಿಂಗಂಭರ ಜಿನ ಮುನಿಯು ಕೈಜೋಡಿಸಿ ನಿಂತಿರುವುದು ಕಂಡುಬರುತ್ತದೆ. ನಂತರ ತೀರ್ಥಂಕರರ ಎಡಬದಿಗೆ ಗೌರಿ ಯಕ್ಷಿಯನ್ನು ಚಿತ್ರಿಸಲಾಗಿದ್ದು, ಸುವರ್ಣ ವರ್ಣದಿಂದ ಕಂಗೊಳಿಸುವಂತೆ ತೋರಿಸಲಾಗಿದೆ. ದೇವಿಯು ಹಸಿರು ಸೀರೆಯನ್ನುಟ್ಟು ನಾಲ್ಕು ಭುಜಗಳನ್ನು ಹೊಂದಿದ್ದಾಳೆ. ಇವಳ ಎಡಬದಿಯಲ್ಲಿ ಪುರೋಹಿತನೊಬ್ಬನು ಘಂಟೆ ಬಾರಿಸುತ್ತ ಮಂಗಳಾರತಿ ಮಾಡುತ್ತಿರುವುದು ಕಂಡುಬರುತ್ತದೆ. ಇದರ ಮೇಲೆ ಮೂರು ಕಮಾನುಗಳು, ಛಾವಣಿ, ಮತ್ತು ನಾಲ್ಕು ಚಿಕ್ಕ ಹಾಗೂ ಮೂರು ದೊಡ್ಡ

೧೨. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೩

ಗೋಪುರಗಳನ್ನು ಕಾಣಬಹುದಾಗಿದೆ. ಅದರ ಮೇಲೆ ಧ್ವಜಗಳು ಹಾಗೂ ಹಿನ್ನೆಲೆಯಲ್ಲಿ ಮರದ ಟೊಂಗೆಗಳನ್ನು ತೋರಿಸಲಾಗಿದೆ.

ಚಿತ್ರ-೧೨. ಭಗವಾನ್ ಶ್ರೀ ವಾಸುಪೂಜ್ಯ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಚಂಪಾಪುರ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ವಸುಪೂಜ್ಯ ಮಹಾರಾಜನ ಪತ್ನಿ ವಿಜಯಾ ದೇವಿಯ ಪವಿತ್ರ ಗರ್ಭದಲ್ಲಿ ಫಾಲ್ಗುಣ ಕೃಷ್ಣ ಚತುದರ್ಶಿಯಂದು ಹನ್ನೆರಡನೇ ತೀರ್ಥಂಕರರಾಗಿ ಜನಿಸಿ ಎಪ್ಪತೆರಡು ಲಕ್ಷ ಪೂರ್ವಿ ಆಯುಷ್ಯವುಳ್ಳವರಾಗಿ ಎಪ್ಪತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಮಹಿಷ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಾಲಬ್ರಹ್ಮಚಾರಿಗಳಾಗಿ ಬಹುಕಾಲ ರಾಜ್ಯವನ್ನಾಳಿ ಸಹಜವಾಗಿಯೇ ನಶ್ವರವಾದ ಈ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಧರ್ಮ ಎಂಬುವರೇ ಮೊದಲಾದ ಅರವತ್ತಾರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಕುಮಾರ ಯಕ್ಷ ಶ್ರೀ ಗಾಂಧಾರಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಚಂಪಾಪುರದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಭಾದ್ರಪದ ಕೃಷ್ಣ ಚರ್ತುದಶಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ ಶ್ರೀ **ವಾಸುಪೂಜ್ಯ ಸ್ವಾಮಿ**[೧೩]**ಯವರ** ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಕೆಂಪು ವರ್ಣದಲ್ಲಿ ವಾಸುಪೂಜ್ಯ ತೀರ್ಥಂಕರರನ್ನು ಚಿತ್ರಿಸಲಾಗಿದ್ದು, ಪದ್ಮಾಸನದಲ್ಲಿ ಕುಳಿತಿರುವಂತೆ ತೋರಿಸಲಾಗಿದೆ. ಹಿನ್ನೆಲೆಯಲ್ಲಿ ಹಸಿರು ವರ್ಣ ಲೇಪಿಸಿದ್ದು, ಪ್ರಭಾವಳಿ, ಹೂಗುಚ್ಛ, ಚಾಮರಗಳನ್ನು ಚಿತ್ರಿಸಲಾಗಿದೆ. ಕೆಳಭಾಗದಲ್ಲಿ ಮಹಿಷ ಲಾಂಛನವನ್ನು ತೋರಿಸಲಾಗಿದ್ದು, ಇವರ ಬಲಬದಿಯಲ್ಲಿ ಕುಮಾರ ಯಕ್ಷರ ಚಿತ್ರವಿದ್ದು, ಇವರು ಷಡ್ಭುಜಗಳನ್ನು ಹೊಂದಿದ್ದು, ಮೂರು ತಲೆಗಳನ್ನು ಚಿತ್ರಿಸಲಾಗಿದೆ. ಇವರ ಹಿಂದೆ ಐದೆಡೆಯ ಸರ್ಪವನ್ನು ಪ್ರಭಾವಳಿಯಂತೆ ತೋರಿಸಲಾಗಿದೆ. ಇವರ ಬಲಬದಿಗೆ ದಿಗಂಬರ ಮುನಿಗಳು ಕೈಮುಗಿದು ನಿಂತಿರುವುದನ್ನು ಕಾಣಬಹುದು. ತೀರ್ಥಂಕರರ ಎಡಬದಿಯಲ್ಲಿ ಗಾಂಧಾರ ಯಕ್ಷಿಯ ಚಿತ್ರವಿದ್ದು, ದೇವಿಯನ್ನು ಹಸಿರು ವರ್ಣದಿಂದ ಚಿತ್ರಿಸಲಾಗಿದೆ. ಹಳದಿ ಸೀರೆಯಿಂದ ಅಲಂಕರಿಸಲಾಗಿದೆ. ಇವರ ಎಡಭಾಗದಲ್ಲಿ ಶ್ರೀಮಂತ ಸ್ತ್ರೀಯೊಬ್ಬಳು ಕೈಮುಗಿದು

೧೩. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೪

ನಿಂತಿರುವ ಹಾಗೆ ಕಲಾವಿದನು ಚಿತ್ರಿಸಿದ್ದಾನೆ. ಉಳಿದಂತೆ ಮೇಲೆ ಗೋಪುರಗಳಿದ್ದು, ಅದರ ಹಿಂದೆ ತೆಂಗಿನ ಮರಗಳಲ್ಲಿ ಕಾಯಿಗಳನ್ನು ಬಿಟ್ಟಿರುವಂತೆ ಚಿತ್ರಿಸಲಾಗಿದೆ. ಇಲ್ಲಿ ಹೆಚ್ಚಾಗಿ ನೀಲಿ, ಕೆಂಪು, ಹಸಿರು, ಬೂದು, ಕಂದು, ಬಿಳಿ ವರ್ಣಗಳನ್ನು ಬಳಸಿಕೊಳ್ಳಲಾಗಿದೆ.

ಚಿತ್ರ–೧೩. ಭಗವಾನ್ ಶ್ರೀ ವಿಮಲನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಕಾಂಪಿಲ್ಯ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಕೃತವರ್ಮ ಮಹಾರಾಜನ ಪತ್ನಿ ಜಯಶ್ಯಾಮಾ ದೇವಿಯ ಪವಿತ್ರ ಗರ್ಭದಲ್ಲಿ ಮಾಘ ಕೃಷ್ಣ ಚೌತಿಯಂದು ಹದಿಮೂರನೇ ತೀರ್ಥಂಕರರಾಗಿ ಜನಿಸಿ ಅರವತ್ತು ಲಕ್ಷ ಆಯುಷ್ಯವುಳ್ಳವರಾಗಿ ಅರವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ವರಾಹ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಹೇಮಂತ ಋತುವಿನ ವೈಚಿತ್ರ್ಯ ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಮಂದಾರರೇ ಮೊದಲಾದ ಐವತ್ತೈದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಷಣ್ಮುಖ ಯಕ್ಷ ಶ್ರೀ ವೈರೋಟಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸುವೀರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಆಷಾಢ ಕೃಷ್ಣ ಅಷ್ಟಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ವಿಮಲನಾಥ ಸ್ವಾಮಿ**[೧೪]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಈ ಚಿತ್ರದಲ್ಲಿ ವಿಮಲನಾಥರನ್ನು ಗೋಧಿ ವರ್ಣದಲ್ಲಿ ಚಿತ್ರಿಸಲಾಗಿದ್ದು, ಇವರು ಪದ್ಮಾಸನದಲ್ಲಿ ಕೂತು ಧ್ಯಾನಮಾಡುವ ಸ್ಥಿತಿಯಲ್ಲಿ ಕಲಾವಿದನು ಚಿತ್ರಿಸಿದ್ದಾನೆ. ಇವರ ಲಾಂಛನವಾದ ವರಾಹ ಚಿಹ್ನೆಯನ್ನು ಕೆಳಭಾಗದಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ತೋರಿಸಿದ್ದು, ಛತ್ರಿ, ಚಾಮರ, ಹೂಗುಚ್ಚಗಳನ್ನು ತೋರಿಸಲಾಗಿದೆ. ಇವರ ಬಲಬದಿಯಲ್ಲಿ ಷಣ್ಮುಖ ಯಕ್ಷರ ಚಿತ್ರವನ್ನು ರಚಿಸಿದ್ದು, ಇವರು ಅಷ್ಟಭುಜಗಳನ್ನು ಹಾಗೂ ನಾಲ್ಕು ಶಿರಗಳನ್ನು ಹೊಂದಿರುವಂತೆ ಚಿತ್ರಿಸಲಾಗಿದೆ. ಇವರನ್ನು ಹಸಿರು ವರ್ಣದಿಂದ ತೋರಿಸಲಾಗಿದ್ದು, ಇವರ ಕೆಳಭಾಗದಲ್ಲಿ ಮಯೂರ ಲಾಂಛನವನ್ನು ಕಾಣಬಹುದಾಗಿದೆ.

---

೧೪. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೨೫

ತೀರ್ಥಂಕರರ ಎಡಬದಿಯಲ್ಲಿ ವೈರೋಟೀ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳನ್ನು ಹೊಂದಿ, ಕೈಗಳಲ್ಲಿ ಆಯುಧಗಳನ್ನು ಹಿಡಿದು ಕುಳಿತಿರುವಳು. ಇಲ್ಲಿಯೂ ಸಹ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದ್ದು, ಇನ್ನುಳಿದಂತೆ ಚಿತ್ರದ ಕೆಳಭಾಗದಲ್ಲಿ ಅಷ್ಟ ಮಂಗಳಗಳನ್ನು ಹಾಗೂ ಮೇಲೆ ಗೋಪುರಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ. ವಿಶೇಷವಾಗಿ ಪಕ್ಷಿಗಳನ್ನು ಸಹ ಇಲ್ಲಿ ಕಾಣಬಹುದಾಗಿದ್ದು, ಹೆಚ್ಚು ಕೆಂಪು, ನೀಲಿ, ಹಸಿರು, ಹಳದಿ, ಕಂದು, ಬೂದು ಹಾಗೂ ತಿಳಿಗೆಂಪು ವರ್ಣಗಳನ್ನು ಬಳಸಿಕೊಳ್ಳಲಾಗಿದೆ. ಮೈಸೂರು ಶೈಲಿಯ ಜೊತೆಗೆ ತಮಿಳುನಾಡಿನ ದೇವಾಲಯಗಳಲ್ಲಿಯ ಗೋಪುರ ವಿನ್ಯಾಸದ ಪ್ರಭಾವವು ಸಹ ಈ ಚಿತ್ರಗಳ ಮೇಲೆ ಪರಿಣಾಮಕಾರಿಯಾಗಿ ಬೀರಿರುವುದನ್ನು ಗಮನಿಸಬಹುದಾಗಿದೆ.

ಚಿತ್ರ-೧೪. ಭಗವಾನ್ ಶ್ರೀ ಅನಂತನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಅಯೋಧ್ಯಾ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಸಿಂಹಸೇನ ಮಹಾರಾಜನ ಪತ್ನಿ ಲಕ್ಷ್ಮೀಮತಿ ದೇವಿಯ ಪವಿತ್ರ ಗರ್ಭದಲ್ಲಿ ಜ್ಯೇಷ್ಠ ಕೃಷ್ಣ ದ್ವಾದಶಿಯಂದು ಹದಿನಾಲ್ಕನೇ ತೀರ್ಥಂಕರರಾಗಿ ಜನಿಸಿ ಮೂವತ್ತು ಲಕ್ಷ ವರ್ಷ ಆಯುಷ್ಯ ವುಳ್ಳವರಾಗಿ ಐವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕರಡಿ ಲಾಂಛನವುಳ್ಳವರಾಗಿ ಸುಖ ಶಾಂತಿಯಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಉಲ್ಕಾಪಾತವನ್ನು ನೋಡಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಜಯಧಾಮರೇ ಮೊದಲಾದ ಐವತ್ತು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಪಾತಾಳ ಯಕ್ಷ ಶ್ರೀ ಅನಂತಮತಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸ್ವಯಂಪ್ರಭ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಚೈತ್ರ ಕೃಷ್ಣ ಅಮಾವಾಸ್ಯೆಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಅನಂತನಾಥ ಸ್ವಾಮಿ**[೧೫]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ರೀ ಅನಂತನಾಥ ತೀರ್ಥಂಕರರನ್ನು ತಿಳಿ ಸುವರ್ಣವರ್ಣದಿಂದ ಚಿತ್ರಿಸಿದ್ದು, ತೀರ್ಥಂಕರರು ಧ್ಯಾನಮುದ್ರೆಯಲ್ಲಿ ಪದ್ಮಾಸನಸ್ಥಿತರಾಗಿ ಪೀಠದಮೇಲೆ ಕುಳಿತಿದ್ದು, ಇವರ ಲಾಂಛನವಾದ ಕರಡಿಯನ್ನು

೧೫. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೬

ಕೆಳಭಾಗದಲ್ಲಿ ತೋರಿಸಲಾಗಿದೆ. ಹಿನ್ನೆಲೆಯನ್ನು ನೀಲಿ ವರ್ಣದಿಂದ ಚಿತ್ರಿಸಿದ್ದು, ಹೂಗುಚ್ಚಗಳು, ಚಾಮರ, ಪೀಠ, ಪ್ರಭಾವಳಿಗಳನ್ನು ತೋರಿಸಲಾಗಿದೆ. ಇವರ ಬಲಬದಿಯಲ್ಲಿ ಪಾತಾಳ ಯಕ್ಷನ ಚಿತ್ರವಿದ್ದು, ಇವರನ್ನು ಬೂದುವರ್ಣದಿಂದ ಚಿತ್ರಿಸಲಾಗಿದೆ. ಇವರಿಗೆ ಷಡ್ಭುಜಗಳು ಹಾಗೂ ಮೂರು ತಲೆಗಳನ್ನು ಸಂಯೋಜಿಸಲಾಗಿದೆ. ಪ್ರಭಾವಳಿಯ ಹಿನ್ನೆಲೆಯಲ್ಲಿ ಆರು ತಲೆಗಳುಳ್ಳ ಸರ್ಪವಿದ್ದು, ಅದರ ಹಿಂದೆ ಹೂಗುಚ್ಚಗಳ ವರ್ಣನೆ ಮಾಡಲಾಗಿದೆ. ಹಿನ್ನೆಲೆ ವರ್ಣವಾಗಿ ಹಸಿರು ವರ್ಣವನ್ನು ತೆಗೆದುಕೊಂಡಿದ್ದು, ಕಮಾನು ಮತ್ತು ಗೋಪುರವನ್ನು ಇಲ್ಲಿ ಚಿತ್ರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಅನಂತಮತಿ ಯಕ್ಷಿಯ ಚಿತ್ರವಿದ್ದು, ದೇವಿಯು ಶ್ವೇತ ವರ್ಣದಿಂದ ಕಂಗೊಳಿಸುತ್ತಿದ್ದು, ನಾಲ್ಕು ಭುಜಗಳನ್ನು ಹೊಂದಿದ್ದಾಳೆ. ಕೈಯಲ್ಲಿ ಬಿಲ್ಲು ಬಾಣಗಳನ್ನು ಹಿಡಿದು ಕುಳಿತಿರುವ ಯಕ್ಷಿಯು ಬಿಳಿ ಹಾಗೂ ಕೆಂಪು ಮಿಶ್ರಿತ ಸೀರೆಯನ್ನು ತೊಟ್ಟಿದ್ದಾಳೆ. ಇನ್ನುಳಿದಂತೆ ಮೂರು ಕಮಾನುಗಳು, ಕೀರ್ತಿ ಮುಖ ಹಾಗೂ ಮೇಲ್ಭಾಗದಲ್ಲಿ ಮೂರು ಗೋಪುರಗಳು ಮತ್ತು ಧ್ವಜಗಳನ್ನು ತೋರಿಸಿದ್ದು, ಹಿನ್ನೆಲೆಯಲ್ಲಿ ಮರದ ಟೊಂಗೆಗಳು ಹಾಗೂ ಎಲೆಗಳ ವಿನ್ಯಾಸಗಳನ್ನು ಈ ಚಿತ್ರದಲ್ಲಿ ಕಾಣಬಹುದಾಗಿದೆ.

ಚಿತ್ರ-೧೫. ಭಗವಾನ್ ಶ್ರೀ ಧರ್ಮನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ರತ್ನಪುರೀ ಪಟ್ಟಣದಲ್ಲಿ ಕುರುವಂಶದ ವಂಶದ ಭಾನು ಮಹಾರಾಜನ ಪತ್ನಿ ಸುಪ್ರಭಾ ದೇವಿಯ ಪವಿತ್ರ ಗರ್ಭದಲ್ಲಿ ಮಾಘ ಶುದ್ಧ ತ್ರಯೋದಶಿಯಂದು ಹದಿನೈದನೇ ತೀರ್ಥಂಕರರಾಗಿ ಜನಿಸಿ ಹತ್ತು ಲಕ್ಷ ವರ್ಷ ಆಯುಷ್ಯವುಳ್ಳವರಾಗಿ ನಲವತ್ತೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ವಜ್ರ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಉಲ್ಕಾಪಾತವನ್ನು ನೋಡಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಅರಿಷ್ಟಸೇನರೇ ಮೊದಲಾದ ನಲವತ್ಮೂರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಕಿನ್ನರ ಯಕ್ಷ ಶ್ರೀ ಮಾನಸಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸುದತ್ತರವರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಜ್ಯೇಷ್ಠ ಶುದ್ಧ ಚೌತಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಧರ್ಮನಾಥ ಸ್ವಾಮಿ**[೧೬]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

೧೬. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೭

ತೀರ್ಥಂಕರರನ್ನು ತಿಳಿಗೆಂಪು ವರ್ಣದಲ್ಲಿ ಚಿತ್ರಿಸಿದ್ದು, ಪದ್ಮಾಸನಸ್ಥಿತರಾಗಿ ಕುಳಿತಿದ್ದಾರೆ. ಪೀಠದ ಕೆಳಭಾಗದಲ್ಲಿ ಇವರ ಲಾಂಛನವಾದ ವಜ್ರಾಕಾರವನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪನಮಾಡಲಾಗಿದೆ. ಅದರ ಮುಂಭಾಗದಲ್ಲಿ ಹೂಗುಚ್ಚ, ಪ್ರಭಾವಳಿ, ಚಾಮರ, ಹಾಗೂ ಪೀಠವನ್ನು ಚಿತ್ರಿಸಲಾಗಿದೆ. ತೀರ್ಥಂಕರರ ಬಲಬದಿಯಲ್ಲಿ ಕಿನ್ನರ ಯಕ್ಷರ ಚಿತ್ರವಿದ್ದು, ಇವರು ಷಡ್ಭುಜಗಳನ್ನು ಹಾಗೂ ಮೂರು ತಲೆಗಳನ್ನು ಹೊಂದಿದ್ದಾರೆ. ಕಂದು ವರ್ಣದಲ್ಲಿ ಇವರನ್ನು ರಚಿಸಲಾಗಿದ್ದು, ಚಕ್ರ-ಶಂಖವನ್ನು ಹಿಡಿದಿದ್ದು, ಕೆಳಭಾಗದಲ್ಲಿ ಮತ್ಸ್ಯ ಲಾಂಛನವನ್ನು ತೋರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಮಾನಸಿ ಯಕ್ಷಿಯ ಚಿತ್ರವಿದ್ದು, ದೇವಿಯನ್ನು ಕಂದು ವರ್ಣದಲ್ಲಿ ತೋರಿಸಿದ್ದು, ಷಡ್ಭುಜಗಳನ್ನು ಹೊಂದಿದ್ದಾಳೆ. ಬಿಲ್ಲು ಬಾಣ, ಕಮಲಗಳನ್ನು ಹಿಡಿದಿರುವ ದೇವಿಯು ಶ್ವೇತವರ್ಣದ ಸೀರೆಯಿಂದ ಅಲಂಕೃತಳಾಗಿದ್ದಾಳೆ. ಕೆಳಭಾಗದಲ್ಲಿ ಹುಲಿಯ ಲಾಂಛನವನ್ನು ತೋರಿಸಲಾಗಿದೆ. ಇನ್ನುಳಿದಂತೆ ಕೆಳಭಾಗದಲ್ಲಿ ಅಷ್ಟಮಂಗಳಗಳು ಹಾಗೂ ಮೇಲೆ ಮೂರು ಕಮಾನುಗಳು, ಕೀರ್ತಿಮುಖ, ಗೋಪುರ ಮತ್ತು ಧ್ವಜಗಳನ್ನು ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಮರದ ಕೊಂಬೆಗಳು ಹಾಗೂ ಎಲೆಗಳನ್ನು ಚಿತ್ರಿಸಲಾಗಿದೆ. ಇಲ್ಲಿ ನೀಲಿ, ಹಸಿರು, ಕೆಂಪು, ಹಳದಿ, ಬಿಳಿ, ಕಂದು, ತಿಳಿಗೆಂಪು ಮುಂತಾದ ವರ್ಣಗಳ ಮೊದಲಾಗಿ ಚಿತ್ರರಚನೆ ಮಾಡಿದ್ದು, ರೇಖಾವಿನ್ಯಾಸವು ಮೈಸೂರು ಶೈಲಿಯ ನೇರ ಪ್ರಭಾವವನ್ನು ತೋರುತ್ತದೆ.

ಚಿತ್ರ-೧೬. ಭಗವಾನ್ ಶ್ರೀ ಶಾಂತಿನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಹಸ್ತಿನಾಪುರ ಪಟ್ಟಣದಲ್ಲಿ ಕುರುವಂಶದ ವಂಶದ ವಿಶ್ವಸೇನ ಮಹಾರಾಜನ ಪತ್ನಿ ಐರಾ ದೇವಿಯ ಪವಿತ್ರ ಗರ್ಭದಲ್ಲಿ ಜೇಷ್ಠ ಕೃಷ್ಣ ಚತುರ್ದಶಿ ಯಂದು ಹದಿನಾರನೇ ತೀರ್ಥಂಕರರಾಗಿ ಜನಿಸಿ ಒಂದು ಲಕ್ಷ ವರ್ಷ ಆಯುಷ್ಯವುಳ್ಳವರಾಗಿ ನಲವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಜಿಂಕೆ ಲಾಂಛನವುಳ್ಳವರಾಗಿ ಮನ್ಮಥ ರೂಪರೂ, ಐದನೇ ಚಕ್ರವರ್ತಿಗಳೂ ಆಗಿ ಷಟ್‌ಖಂಡಗಳನ್ನು ಬಹುಕಾಲ ರಾಜ್ಯವನ್ನಾಳಿ ಒಮ್ಮೆ ಕನ್ನಡಿಯಲ್ಲಿ ತನ್ನ ಎರಡು ಮುಖಗಳನ್ನು ನೋಡಿ ವಿಸ್ಮಯರಾಗಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಚಕ್ರಾಯುದ್ಧರೇ ಮೊದಲಾದ ಮೂವತ್ತಾರು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಗರುಡ ಯಕ್ಷ ಶ್ರೀ ಮಹಾಮಾನಸೀ ಯಕ್ಷಿಯರ ಸಹಿತ ವಿಹಾರ ಮಾಡಿ

ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಕುಂದಪ್ರಭ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಶಾಂತಿನಾಥ ಸ್ವಾಮಿ**[೧೭]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ತಿಳಿಗೆಂಪು ವರ್ಣದಲ್ಲಿ ಶಾಂತಿನಾಥರ ಚಿತ್ರವನ್ನು ರಚಿಸಲಾಗಿದ್ದು, ಪದ್ಮಾಸನಸ್ಥಿತಿಯಲ್ಲಿ ಪೀಠದ ಮೇಲೆ ಕುಳಿತು ಧ್ಯಾನಿಸುತ್ತಿದ್ದಾರೆ. ಇವರ ಕೆಳಭಾಗದಲ್ಲಿ ಜಿಂಕೆಯ ಲಾಂಛನವನ್ನು ತೋರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿ, ಅದರ ಮುಂಭಾಗದಲ್ಲಿ ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠಗಳನ್ನು ತೋರಿಸಿದಲ್ಲದೆ, ಮೇಲಿಂದ ಪುಷ್ಪವೃಷ್ಟಿ ಬೀಳುತ್ತಿರುವ ರೀತಿಯಲ್ಲಿ ಕಲಾವಿದನು ಸಂಯೋಜಿಸಿದ್ದಾನೆ. ತೀರ್ಥಂಕರರ ಬಲಬದಿಯಲ್ಲಿ ಗರುಡ ಯಕ್ಷನನ್ನು ಚಿತ್ರಿಸಿದ್ದು, ಇವರು ಚತುರ್ಭುಜಗಳನ್ನು ಹೊಂದಿ, ಕೈಯಲ್ಲಿ ಶಂಖ-ಚಕ್ರಗಳನ್ನು ಹಿಡಿದಿದ್ದು, ಶಾಮಲ ವರ್ಣದಲ್ಲಿ ಇವರನ್ನು ಚಿತ್ರಿಸಲಾಗಿದೆ. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಬಳಸಿದ್ದು, ಇವರ ಶರೀರದ ಮೇಲೆ ಹಸಿರು ಹಾಗೂ ಹಳದಿ ವಸ್ತ್ರಗಳಿಂದ ಶೃಂಗರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಮಹಾಮಾನಸಿ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳನ್ನು ಹೊಂದಿ, ಖಡ್ಗ-ಚಕ್ರಗಳನ್ನು ಹಿಡಿದು ಅಭಯ ಮುದ್ರೆಯಲ್ಲಿ ಕುಳಿತಿದ್ದಾಳೆ. ಹಸಿರು ಸೀರೆಯನ್ನುಟ್ಟ ಯಕ್ಷಿಯು ತಿಳಿಗೆಂಪು ವರ್ಣದಿಂದ ಕಂಗೊಳಿಸುತ್ತಿದ್ದಾಳೆ. ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಬಳಸಲಾಗಿದ್ದು, ಇವರ ಲಾಂಛನವಾದ ಮಯೂರ ಚಿಹ್ನೆಯನ್ನು ಕೆಳಭಾಗದಲ್ಲಿ ರಚಿಸಲಾಗಿದೆ. ಇನ್ನುಳಿದಂತೆ ಕೆಳಪಟ್ಟಿಯಲ್ಲಿ ಅಷ್ಟಮಂಗಳಗಳು, ಮೇಲ್ಭಾಗದಲ್ಲಿ ಕಮಾನು, ಕೀರ್ತಿಮುಖ, ಗೋಪುರಗಳನ್ನು ರಚಿಸಿದ್ದು, ಹಿನ್ನೆಲೆಯಲ್ಲಿ ಮರದ ಕೊಂಬೆಗಳು ಹಾಗೂ ಹಸಿರು ವರ್ಣದ ಎಲೆಗಳನ್ನು ಚಿತ್ರಿಸಲಾಗಿದೆ. ಇಲ್ಲಿ ಹೆಚ್ಚಾಗಿ ಹಳದಿ, ತಿಳಿಗೆಂಪು, ಕೆಂಪು, ನೀಲಿ, ಹಸಿರು, ಕಂದು ಮುಂತಾದ ವರ್ಣಗಳೇ ಪ್ರಮುಖವಾಗಿದ್ದು, ಈ ಚಿತ್ರದಲ್ಲಿ ಮೈಸೂರು ಶೈಲಿಯ ಪ್ರಭಾವವು ನೇರವಾಗಿ ಬೀರಿರುವುದು ಕಂಡುಬರುತ್ತದೆ.

ಚಿತ್ರ-೧೭. ಭಗವಾನ್ ಶ್ರೀ ಕುಂಥುನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಹಸ್ತಿನಾಪುರ ಪಟ್ಟಣದಲ್ಲಿ ಕುರುವಂಶದ ವಂಶದ ಶೂರಸೇನ ಮಹಾರಾಜನ ಪತ್ನಿ ಶ್ರೀಕಾಂತಾ ದೇವಿಯ ಪವಿತ್ರ ಗರ್ಭದಲ್ಲಿ ವೈಶಾಖ ಶುದ್ಧ ಪಾಡ್ಯಮಿಯಂದು ಹದಿನೇಳನೇ ತೀರ್ಥಂಕರರಾಗಿ ಜನಿಸಿ ತೊಂಭತ್ತೈದು ಸಾವಿರ ವರ್ಷ ಆಯುಷ್ಯವುಳ್ಳವರಾಗಿ ಮೂವತ್ತೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಟಗರು ಲಾಂಛನವುಳ್ಳವರಾಗಿ ಮನ್ಮಥ ರೂಪರಾಗಿದ್ದು,

೧೭ ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೮

ಚಕ್ರವರ್ತಿ ಆಗಿ ಷಟ್‌ಖಂಡಗಳನ್ನು ಬಹುಕಾಲ ರಾಜ್ಯವನ್ನಾಳಿ ಒಂದು ದಿನ ವನ ವಿಹಾರ ಮಾಡುತ್ತಿದ್ದಾಗ ಓರ್ವ ಮುನಿಗಳು ಬಿಸಿಲಿನಲ್ಲಿ ನಿಂತು ತಪಸ್ಸು ಮಾಡುವುದನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಸ್ವಯಂಪ್ರಭರೇ ಮೊದಲಾದ ಮೂವತ್ತೈದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಗಂಧರ್ವ ಯಕ್ಷ ಶ್ರೀ ಜಯಾದೇವಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಜ್ಞಾನದರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ವೈಶಾಖ ಶುದ್ಧ ಪಾಡ್ಯದಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಕುಂಥುನಾಥ ಸ್ವಾಮಿ**[೧೮]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ತೀರ್ಥಂಕರರನ್ನು ತಿಳಿಗೆಂಪು ವರ್ಣದಲ್ಲಿ ಚಿತ್ರಿಸಿದ್ದು, ಪದ್ಮಾಸನಸ್ಥಿತಿಯಲ್ಲಿ ಕುಳಿತು ಧ್ಯಾನಿಸುತ್ತಿರುವ ತೀರ್ಥಂಕರರ ಪೀಠದ ಕೆಳಭಾಗದಲ್ಲಿ ಟಗರಿನ ಲಾಂಛನವನ್ನು ರಚಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿದ್ದು, ಹೂಗುಚ್ಚಗಳು, ಪ್ರಭಾವಳಿ, ಚಾಮರ, ಪೀಠಗಳನ್ನು ಚಿತ್ರಿಸಿದ್ದು, ತೀರ್ಥಂಕರರ ಬಲಭಾಗದಲ್ಲಿ ಗಂಧರ್ವ ಯಕ್ಷರ ಚಿತ್ರವನ್ನು ರಚಿಸಲಾಗಿದೆ. ಯಕ್ಷನು ನೀಲಿವರ್ಣದಿಂದ ಕಂಗೊಳಿಸುತ್ತಿದ್ದು, ಚತುರ್ಭುಜನಾಗಿ ಸರ್ಪ, ಬಿಲ್ಲು-ಬಾಣಗಳನ್ನು ಹಿಡಿದು ಕುಳಿತಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಜಯ ಯಕ್ಷಿಯ ಚಿತ್ರವಿದೆ. ಈ ದೇವಿಯು ನಾಲ್ಕು ಭುಜಗಳನ್ನು ಹೊಂದಿ, ಶಂಖ-ಚಕ್ರಗಳನ್ನು ಹಿಡಿದು ಕುಳಿತಿದ್ದಾಳೆ. ಇವಳ ಹಿಂಭಾಗದಲ್ಲಿಯೂ ಸಹ ಕೆಂಪು ವರ್ಣವಿದ್ದು, ಕೆಳಪಟ್ಟಿಕೆಯಲ್ಲಿ ಅಷ್ಟ ಮಂಗಳಗಳನ್ನು ತೋರಿಸಲಾಗಿದೆ. ವಿಶೇಷವಾಗಿ ಈ ಚಿತ್ರದಲ್ಲಿ ಕಮಾನು, ಗೋಪುರವನ್ನು ಮತ್ತು ಹಿಂಬದಿಯಲ್ಲಿ ಶಿಖರವನ್ನು ತೀರ್ಥಂಕರರಿಗೆ ಮಾತ್ರ ಮೀಸಲಾಗಿರಿಸಿದ್ದಾರೆ. ಉಳಿದಂತೆ ಈ ಚಿತ್ರದಲ್ಲಿ ಧ್ವಜಗಳನ್ನು ಚಿತ್ರಿಸಿದ್ದು, ಕೆಂಪು, ಬಿಳಿ, ಹಳದಿ, ನೀಲಿ, ಹಸಿರು ವರ್ಣಗಳೇ ಪ್ರಮುಖವಾಗಿ ಬಳಸಿಕೊಂಡಿರುವುದನ್ನು ಕಾಣಬಹುದು.

ಚಿತ್ರ-೧೮. ಭಗವಾನ್ ಶ್ರೀ ಅರನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಹಸ್ತಿನಾಪುರ ಪಟ್ಟಣದಲ್ಲಿ ಕುರುವಂಶದ

೧೮. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೨೯

ವಂಶದ ಸುದರ್ಶನ ಮಹಾರಾಜನ ಪತ್ನಿ ಮಿತ್ರಸೇನಾ ದೇವಿಯ ಪವಿತ್ರ ಗರ್ಭದಲ್ಲಿ ಮಾರ್ಗಶಿರ ಶುದ್ಧ ಚತುದರ್ಶಿಯಂದು ಹದಿನೆಂಟನೇ ತೀರ್ಥಂಕರರಾಗಿ ಜನಿಸಿ ಎಂಭತ್ತನಾಲ್ಕು ಸಾವಿರ ವರ್ಷ ಆಯುಷ್ಯವುಳ್ಳವರಾಗಿ ಮೂವತ್ತು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಮತ್ಸ್ಯ ಲಾಂಛನವುಳ್ಳವರಾಗಿ ಮನ್ಮಥ ರೂಪರಾಗಿದ್ದು, ಚಕ್ರವರ್ತಿಗಳಾಗಿ ಷಟ್‌ಖಂಡಗಳನ್ನು ಬಹುಕಾಲ ರಾಜ್ಯವನ್ನಾಳಿ ಒಂದು ದಿನ ಚದುರುವ ಮೋಡವನ್ನು ಕಂಡು ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಕುಂಭಾರ್ಯರೇ ಮೊದಲಾದ ಮೂವತ್ತು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮಹೇಂದ್ರ ಯಕ್ಷ ಶ್ರೀ ವಿಜಯ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ನಾಟಕ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಚೈತ್ರ ಕೃಷ್ಣ ಅಮಾವಾಸ್ಯೆಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಅರನಾಥ ಸ್ವಾಮಿ**[೧೯]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ವೇತವರ್ಣದಲ್ಲಿ ಪದ್ಮಾಸನಸ್ಥಿತರಾಗಿ ಕೂತಿರುವ ತೀರ್ಥಂಕರರ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ತೋರಿಸಲಾಗಿದೆ. ಹೂಗುಚ್ಚಗಳು, ಚಾಮರ, ಪೀಠ, ಪ್ರಭಾವಳಿಗಳನ್ನು ಚಿತ್ರಿಸಲಾಗಿದೆ. ತೀರ್ಥಂಕರರ ಬಲಬದಿಯಲ್ಲಿ ಮಹೇಂದ್ರ ಯಕ್ಷರ ಚಿತ್ರವಿದ್ದು, ದ್ವಾದಶ ಭುಜಗಳನ್ನು, ಆರು ತಲೆಗಳನ್ನು ಹೊಂದಿದ್ದು, ನೀಲಿ ವರ್ಣದಲ್ಲಿ ಇವರನ್ನು ರಚಿಸಲಾಗಿದೆ. ಇವರ ಕೆಳಭಾಗದಲ್ಲಿ ಶಂಖುವಿನ ಲಾಂಛನವಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ತೀರ್ಥಂಕರರ ಎಡಭಾಗದಲ್ಲಿ ವಿಜಯಾದೇವಿ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳನ್ನು ವಜ್ರಾಯುಧ, ಸರ್ಪಾಯುಧಗಳನ್ನು ಹಿಡಿದು ಕುಳಿತಿದ್ದು, ಹಸಿರು ಸೀರೆಯನ್ನು ತೊಟ್ಟು ಕಂಗೊಳಿಸಿದ್ದಾಳೆ. ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದ್ದು, ಕೆಳಪಟ್ಟಿಯಲ್ಲಿ ಅಷ್ಟ ಮಂಗಳಗಳನ್ನು ಚಿತ್ರಿಸಿದ್ದಾರೆ. ಮೇಲ್ಭಾಗದಲ್ಲಿ ಮೂರು ಕಮಾನುಗಳು, ಕೀರ್ತಿಮುಖ, ಮೂರು ಗೋಪುರಗಳು, ಏಳು ಚಿಕ್ಕ ಗೋಪುರಗಳು ಹಾಗೂ ಅದರ ಮೇಲೆ ಸಜೀವ ಪಕ್ಷಿಗಳು ಕುಳಿತಿರುವ ರೀತಿಯಲ್ಲಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಮರದ ಕೊಂಬೆ ಹಾಗೂ ಎಲೆಗಳನ್ನು ಕಾಣಬಹುದಾಗಿದೆ. ಹೆಚ್ಚಾಗಿ ಈ ಚಿತ್ರದಲ್ಲಿ ಕೆಂಪು, ನೀಲಿ, ಹಸಿರು, ಬಿಳಿ, ತಿಳಿಗೆಂಪು, ಹಳದಿ, ಕಂದು ವರ್ಣಗಳನ್ನು ಬಳಸಲಾಗಿದೆ.

೧೯. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೩೦

ಚಿತ್ರ-೧೯. ಭಗವಾನ್ ಶ್ರೀ ಮಲ್ಲಿನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಮಿಥಿಲಾ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ಕುಂಭ ಮಹಾರಾಜನ ಪತ್ನಿ ಸುಪ್ರಭಾ ದೇವಿಯ ಪವಿತ್ರ ಗರ್ಭದಲ್ಲಿ ಮಾರ್ಗಶಿರ ಶುದ್ಧ ಏಕಾದರ್ಶಿಯಂದು ಹತ್ತೊಂಭತ್ತನೇ ತೀರ್ಥಂಕರರಾಗಿ ಜನಿಸಿ ಐವತ್ತೈದು ಸಾವಿರ ವರ್ಷ ಆಯುಷ್ಯವುಳ್ಳವರಾಗಿ ಇಪ್ಪತ್ತೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಕಳಸ ಲಾಂಛನವುಳ್ಳವರಾಗಿ ಬಾಲ ಬ್ರಹ್ಮಚಾರಿಗಳಾಗಿದ್ದು, ಯುವರಾಜ ಪದವಿಯಲ್ಲಿ ಬಹುಕಾಲ ಇದ್ದು ತಮಗೆ ವಿವಾಹ ಮಾಡಬೇಕೆಂದಿದ್ದಾಗ ಪೂರ್ವಭವದ ಸ್ಮರಣೆಯಾಗಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ವಿಶಾಖಚಾರ್ಯರೇ ಮೊದಲಾದ ಇಪ್ಪತ್ತೆಂಟು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಕುಭೇರ ಯಕ್ಷ ಶ್ರೀ ಅಪರಾಜಿತಾ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸಂವಲ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಫಾಲ್ಗುಣ ಶುದ್ಧ ಪಂಚಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಮಲ್ಲಿನಾಥ ಸ್ವಾಮಿ**[೨೦]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ರೀ ಮಲ್ಲಿನಾಥ ತೀರ್ಥಂಕರರು ತಿಳಿಗೆಂಪು ವರ್ಣದಲ್ಲಿದ್ದು, ಏಳಂತಸ್ತಿನ ಪದ್ಮಪೀಠದ ಮೇಲೆ ಕುಳಿತಿದ್ದು, ಕೆಳಭಾಗದಲ್ಲಿ ಕುಂಭ ಲಾಂಛನವನ್ನು ತೋರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವಿದ್ದು, ಅದರ ಮುಂಭಾಗದಲ್ಲಿ ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠಗಳನ್ನು ಚಿತ್ರಿಸಿದ್ದಾರೆ. ಇವರ ಬಲಬದಿಯಲ್ಲಿ ಕುಭೇರ ಯಕ್ಷನ ಚಿತ್ರವಿದ್ದು, ಅಷ್ಟಭುಜಗಳು ಮತ್ತು ನಾಲ್ಕು ತಲೆಗಳನ್ನು ಹೊಂದಿರುವ ಈ ಯಕ್ಷನ ಕೆಳಭಾಗದಲ್ಲಿ ಆನೆಯ ಲಾಂಛನವನ್ನು ಚಿತ್ರಿಸಲಾಗಿದೆ. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವಿದ್ದು, ಹೂಗುಚ್ಛಗಳಿಂದ ಅಲಂಕರಿಸಲಾಗಿದೆ. ಇನ್ನು ತೀರ್ಥಂಕರರ ಎಡಭಾಗದಲ್ಲಿ ಪರಾಜಿತ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳಿದ್ದು, ನೀಲಿ ವರ್ಣದಿಂದ ಅಲಂಕರಿಸಲಾಗಿದ್ದು, ಕೈಯಲ್ಲಿ ಕತ್ತಿ-ಗುರಾಣಿಗಳನ್ನು ಹಿಡಿದು ಕುಳಿತಿದ್ದಾಳೆ. ಇವಳ ಹಿನ್ನೆಲೆಯಲ್ಲೂ ಕೆಂಪು ವರ್ಣವನ್ನು ಲೇಪಿಸಲಾಗಿದ್ದು, ಚಿತ್ರದ ಕೆಳಪಟ್ಟಿಕೆಯಲ್ಲಿ ಅಷ್ಟಮಂಗಳಗಳ ಚಿತ್ರವಿದೆ. ಮೇಲೆ

---

೨೦. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೩೧

ಮೂರು ಕಮಾನುಗಳು, ಗೋಪುರಗಳು, ಕೀರ್ತಿಮುಖ, ನಾಲ್ಕು ಚಿಕ್ಕ ಗೋಪುರಗಳಿವೆ. ಅದರ ಮೇಲೆ ಗರುಡಾಕಾರದ ಪಕ್ಷಿಗಳು ಕುಳಿತಿರುವ ರೀತಿಯಲ್ಲಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಮರದ ಕೊಂಬೆ ಹಾಗೂ ಎಲೆಗಳನ್ನು ಚಿತ್ರಿಸಿದ್ದಾನೆ. ಇಲ್ಲಿಯೂ ಸಹ ನೀಲಿ, ಕೆಂಪು, ಹಳದಿ, ಕಂದು, ಹಸಿರು, ತಿಳಿಗೆಂಪು, ಬಿಳಿ ವರ್ಣಗಳೇ ಪ್ರಮುಖವಾಗಿದ್ದು, ಮೈಸೂರು ಶೈಲಿಯ ವಿನ್ಯಾಸ ಪ್ರಭಾವಳಿಯು ಹೆಚ್ಚಾಗಿ ಕಂಡುಬರುತ್ತದೆ.

ಚಿತ್ರ–೨೦. ಭಗವಾನ್ ಶ್ರೀ ಮುನಿಸುವ್ರತನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ರಾಜಗೃಹ ಪಟ್ಟಣದಲ್ಲಿ ಹರಿ ವಂಶದ ವಂಶದ ಸುಮಿತ್ರ ಮಹಾರಾಜನ ಪತ್ನಿ ಸೋಮಾ ದೇವಿಯ ಪವಿತ್ರ ಗರ್ಭದಲ್ಲಿ ಚೈತ್ರ ಕೃಷ್ಣ ಪಂಚಮಿಯಂದು ಇಪ್ಪತ್ತನೇ ತೀರ್ಥಂಕರರಾಗಿ ಜನಿಸಿ ಮೂವತ್ತು ಸಾವಿರ ವರ್ಷ ಆಯುಷ್ಯ ವುಳ್ಳವರಾಗಿ ಹದಿನೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಆಮೆಯ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ರಾಜ್ಯವನ್ನಾಳಿ ತಮ್ಮ ಆನೆಯೊಂದಕ್ಕೆ ಭವಸ್ಮರಣೆಯಾಗಿ ಅದು ಆಹಾರ ತ್ಯಾಗ ಮಾಡಿದ ವಿಷಯ ಕೇಳಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಮಲ್ಲಿಷೇಣರೇ ಮೊದಲಾದ ಹದಿನೆಂಟು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಪುರುಷವರ ಯಕ್ಷ ಶ್ರೀ ಬಹುರೂಪಿಣಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ನಿರ್ಜದಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಫಾಲ್ಗುಣ ಕೃಷ್ಣ ದ್ವಾದಶಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಮುನಿಸುವ್ರತನಾಥ ಸ್ವಾಮಿ**[೨೧]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶಾಮಲ ವರ್ಣದಲ್ಲಿ ತೀರ್ಥಂಕರರನ್ನು ಚಿತ್ರಿಸಲಾಗಿದ್ದು, ಪದ್ಮಾಸನ ಸ್ಥಿತಿಯಲ್ಲಿ ಪೀಠದ ಮೇಲೆ ಕುಳಿತಿದ್ದಾರೆ. ಕೂರ್ಮ ಲಾಂಛನವನ್ನು ಇವರ ಕೆಳಭಾಗದಲ್ಲಿ ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಅದರ ಮುಂಭಾಗದಲ್ಲಿ ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠಗಳ ವಿನ್ಯಾಸವಿದ್ದು, ತೀರ್ಥಂಕರರ ಬಲಬದಿಯಲ್ಲಿ ವರುಣ ಯಕ್ಷನ ಚಿತ್ರವನ್ನು ಕಾಣಬಹುದಾಗಿದೆ.

೨೧. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೩೨

ನಾಲ್ಕು ಭುಜಗಳಿರುವ ಇವರಿಗೆ ಎಂಟು ಶಿರಗಳನ್ನು ಹೊಂದಿರುವರು. ಇವರ ಕೆಳಭಾಗದಲ್ಲಿ ಎತ್ತಿನ ಲಾಂಛನವಿದ್ದು, ಹಿನ್ನೆಲೆಯಲ್ಲಿ ನೀಲಿವರ್ಣವನ್ನು ಲೇಪಿಸಿ, ಹೂಗುಚ್ಛಗಳಿಂದ ಅಲಂಕರಿಸಲಾಗಿದೆ. ತೀರ್ಥಂಕರರ ಎಡಭಾಗದಲ್ಲಿ ಬಹುರೂಪಿಣಿ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳನ್ನು ಹೊಂದಿ ಖಡ್ಗ-ಗುರಾಣಿಗಳನ್ನು ಹಿಡಿದು, ಕೆಂಪು ಸೀರೆಯನ್ನುಟ್ಟು ಕುಳಿತಿದ್ದಾಳೆ. ಈ ಯಕ್ಷಿಯ ಲಾಂಛನವಾದ ಶ್ವೇತ ಸರ್ಪವನ್ನು ಕೆಳಭಾಗದಲ್ಲಿ ಚಿತ್ರಿಸಲಾಗಿದೆ. ಇವರ ಹಿನ್ನೆಲೆಯಲ್ಲಿಯೂ ಸಹ ನೀಲಿ ವರ್ಣವಿದ್ದು, ಹೂಗುಚ್ಛಗಳಿಂದ ಅಲಂಕರಿಸಲಾಗಿದೆ.

ಚಿತ್ರದ ಕೆಳಪಟ್ಟಿಯಲ್ಲಿ ಅಷ್ಟ ಮಂಗಳಗಳನ್ನು ಚಿತ್ರಿಸಿದ್ದು, ಮೇಲೆ ಒಂದು ಕಮಾನು, ಕೀರ್ತಿಮುಖ, ದೊಡ್ಡದಾದ ಮೂರು ಗೋಪುರಗಳನ್ನು ಸಂಯೋಜಿಸಲಾಗಿದೆ. ಅದರ ಹಿಂಬದಿಯಲ್ಲಿ ಫಲಗಳನ್ನು ಬಿಟ್ಟಿರುವ ವೃಕ್ಷಗಳ ಚಿತ್ರವಿದ್ದು, ಎಲೆಗಳಿಂದ ಅಲಂಕರಿಸಲಾಗಿದೆ. ಈ ಚಿತ್ರದಲ್ಲಿ ನೀಲಿ, ತಿಳಿನೀಲಿ, ಕೆಂಪು, ಕಂದು, ಹಳದಿ, ಹಸಿರು, ಬಿಳಿ ವರ್ಣಗಳೇ ಪ್ರಮುಖವಾಗಿದ್ದು, ಮೈಸೂರು ಶೈಲಿಯ ಜೊತೆಗೆ ದ್ರಾವಿಡ ಶೈಲಿಯ ದೇವಾಲಯ ವಿನ್ಯಾಸವನ್ನು ಸಹ ನಾವಿಲ್ಲಿ ಕಾಣಬಹುದು.

ಚಿತ್ರ-೨೧. ಭಗವಾನ್ ಶ್ರೀ ನಮಿನಾಥ ತೀರ್ಥಂಕರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಮಿಥಿಲಾ ಪಟ್ಟಣದಲ್ಲಿ ಇಕ್ಷ್ವಾಕು ವಂಶದ ವಂಶದ ವಿಜಯ ಮಹಾರಾಜನ ಪತ್ನಿ ವಪ್ರಾ ದೇವಿಯ ಪವಿತ್ರ ಗರ್ಭದಲ್ಲಿ ಆಷಾಢ ಕೃಷ್ಣ ದಶಮಿಯಂದು ಇಪ್ಪತ್ತೊಂದನೇ ತೀರ್ಥಂಕರರಾಗಿ ಜನಿಸಿ ಹತ್ತು ಸಾವಿರ ವರ್ಷ ಆಯುಷ್ಯ ವುಳ್ಳವರಾಗಿ ಹದಿನೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ನೀಲಕಮಲ ಲಾಂಛನವುಳ್ಳವರಾಗಿ ಸುಖ ಸಂತೋಷದಿಂದ ಬಹುಕಾಲ ಬಾಳಿ ಒಂದು ದಿನ ತಮ್ಮ ಪೂರ್ವಭವದ ಸ್ಮರಣೆಯಾಗಿ ಅಪರಾಜಿತೇಶ್ವರ ತೀರ್ಥಾಧೀಶರ ನೆನಪಾಗಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಸುಪ್ರಭಾಸರೇ ಮೊದಲಾದ ಹದಿನೇಳು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ವಿದ್ಯುತ್‌ಪ್ರಭ ಯಕ್ಷ ಶ್ರೀ ಚಾಮುಂಡಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಮಿತ್ರಧಾರ ಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ವೈಶಾಖ ಕೃಷ್ಣ ಚತುದರ್ಶಿಯಂದು ನಿರ್ವಾಣ ಹೊಂದಿ

ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ನಮಿನಾಥ ಸ್ವಾಮಿ**[೨೨]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ತಿಳಿಗೆಂಪು ವರ್ಣದಲ್ಲಿ ತೀರ್ಥಂಕರರನ್ನು ಚಿತ್ರಿಸಲಾಗಿದ್ದು, ಮಂದಹಾಸದಿಂದ ನಗುವ ಮೊಗವನ್ನು ತೋರಿದ್ದಾರೆ. ಇವರಿಗೆ ಗುಂಗುರ ಕೂದಲಿನ ವಿನ್ಯಾಸವನ್ನು ಮಾಡಿದ್ದು, ಪದ್ಮಾಸನ ಸ್ಥಿತಿಯಲ್ಲಿ ಧ್ಯಾನಸಕ್ತರಾಗಿ ಕುಳಿತಿದ್ದಾರೆ. ಇವರ ಪೀಠದ ಕೆಳಭಾಗದಲ್ಲಿ ನೈದಿಲೆಯ ಲಾಂಛನವಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಲಾಗಿದೆ. ಇದರ ಮುಂದೆ ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠಗಳನ್ನು ರಚಿಸಿದ್ದು, ತೀರ್ಥಂಕರರ ಬಲಬದಿಯಲ್ಲಿ ಭ್ರುಕುಟಿ ಯಕ್ಷನ ಚಿತ್ರವಿದೆ. ಅಷ್ಟಭುಜಗಳನ್ನು ಹೊಂದಿ, ನಾಲ್ಕು ಶಿರಗಳನ್ನು ಚಿತ್ರಿಸಲಾಗಿದೆ. ಕೈಯಲ್ಲಿ ಕತ್ತಿ–ಗುರಾಣಿ, ಪಾಶಾಯುಧಗಳನ್ನು ಹಿಡಿದಿರುವ ಈ ಯಕ್ಷನ ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಚಾಮುಂಡಿ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜಗಳನ್ನು ಹೊಂದಿ, ಖಡ್ಗ–ಗುರಾಣಿಗಳನ್ನು ಹಿಡಿದು ಅಭಯ ಮುದ್ರೆಯಲ್ಲಿ ಕೆಂಪು ಸೀರೆಯನ್ನು ತೊಟ್ಟು ಕುಳಿತಿದ್ದಾಳೆ. ಹಿನ್ನೆಲೆಯಲ್ಲಿ ಗಾಢ ನೀಲಿ ವರ್ಣವನ್ನು ಬಳಸಿದ್ದು, ಚಿತ್ರದ ಕೆಳಪಟ್ಟಿಕೆಯಲ್ಲಿ ಅಷ್ಟ ಮಂಗಳಗಳನ್ನು ತೋರಿಸಲಾಗಿದೆ. ಮೇಲೆ ಮೂರು ಕಮಾನುಗಳು, ಕೀರ್ತಿಮುಖಗಳನ್ನು ಚಿತ್ರಿಸಿ, ಐದು ಗೋಪುರಗಳನ್ನು ತೋರಿಸಲಾಗಿದೆ. ಹಿನ್ನೆಲೆಯಲ್ಲಿ ತಾಳೆ ಮರವನ್ನು ರಚಿಸಿದ್ದು, ಹೆಚ್ಚಾಗಿ ನೀಲಿ, ಕಡುನೀಲಿ, ಹಸಿರು, ತಿಳಿಗೆಂಪು, ಕೆಂಪು, ಹಳದಿ, ಬಿಳಿ, ಕಂದು ವರ್ಣಗಳನ್ನು ಈ ಚಿತ್ರಕ್ಕೆ ಬಳಸಿಕೊಳ್ಳಲಾಗಿದೆ.

ಚಿತ್ರ–೨೨. ಭಗವಾನ್ ಶ್ರೀ ನೇಮಿನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ದ್ವಾರಕಾ ಪಟ್ಟಣದಲ್ಲಿ ಹರಿ ವಂಶದ ಸಮುದ್ರ ವಿಜಯ ಮಹಾರಾಜನ ಪತ್ನಿ ಶಿವ ದೇವಿಯ ಪವಿತ್ರ ಗರ್ಭದಲ್ಲಿ ಶ್ರಾವಣ ಶುಕ್ಲ ಷಷ್ಠಿಯಂದು ಇಪ್ಪತ್ತೆರಡನೇ ತೀರ್ಥಂಕರರಾಗಿ ಜನಿಸಿ ಒಂದು ಸಾವಿರ ವರ್ಷ ಆಯುಷ್ಯ ವುಳ್ಳವರಾಗಿ ಹದಿನೈದು ಬಿಲ್ಲು ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಶಂಖ ಲಾಂಛನವುಳ್ಳವರಾಗಿ ಕೆಲಕಾಲ ಯುವರಾಜರಾಗಿದ್ದು, ತಮ್ಮ ವಿವಾಹ ಸಂದರ್ಭದಲ್ಲಿ ಕೂಡಿ ಹಾಕಿದ್ದ ಪ್ರಾಣಿಗಳ ಆಕ್ರಂದನವನ್ನು ಕೇಳಿ ವಿವಾಹವಾಗದೇ ಬಾಲ ಬ್ರಹ್ಮಚಾರಿಗಳಾಗಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ

೨೨. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು–೩೩

ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ವರದತ್ತರೇ ಮೊದಲಾದ ಹನ್ನೊಂದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಸರ್ವಾಣ ಯಕ್ಷ ಶ್ರೀ ಕೂಷ್ಮಾಂಡಿನಿದೇವಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಊರ್ಜಯಂತ ಗಿರಿಶಿಖರದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಆಷಾಢ ಶುದ್ಧ ಸಪ್ತಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ನೇಮಿನಾಥ ಸ್ವಾಮಿ**[೨೩]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಶ್ಯಾಮಲ ವರ್ಣದಿಂದ ತೀರ್ಥಂಕರರನ್ನು ಚಿತ್ರಿಸಿದ್ದು, ಪದ್ಮಾಸನದಲ್ಲಿ ಧ್ಯಾನಸಕ್ತರಾಗಿ ಕುಳಿತಿದ್ದಾರೆ. ಇವರ ಪೀಠದ ಕೆಳಭಾಗದಲ್ಲಿ ಶಂಖುವಿನ ಲಾಂಛನವಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಿದ್ದಾರೆ. ಅದರ ಮುಂಭಾಗದಲ್ಲಿ ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠ ಹಾಗೂ ಪುಷ್ಪವೃಷ್ಟಿಯನ್ನು ಕಲಾವಿದನು ಚಿತ್ರಿಸಿದ್ದಾನೆ. ತೀರ್ಥಂಕರರ ಬಲಬದಿಯಲ್ಲಿ ಸರ್ವಾಹ್ಣ ಯಕ್ಷರ ಚಿತ್ರವಿದ್ದು, ಸ್ವಾಮಿಯು ಶ್ಯಾಮಲ ವರ್ಣದಲ್ಲಿ ಕಂಗೊಳಿಸುತ್ತಿದ್ದು, ನಾಲ್ಕು ಭುಜಗಳನ್ನು ಹೊಂದಿದ್ದು, ಇವರ ಕೆಳಭಾಗದಲ್ಲಿ ಆನೆಯ ಲಾಂಛನವನ್ನು ಚಿತ್ರಿಸಲಾಗಿದೆ. ಇನ್ನು ತೀರ್ಥಂಕರರ ಎಡಭಾಗದಲ್ಲಿ ಕೂಷ್ಮಾಂಡಿನೀ ಯಕ್ಷಿಯ ಚಿತ್ರವಿದೆ. ದೇವಿಯು ಎರಡು ಮಕ್ಕಳನ್ನು ತನ್ನ ಎರಡು ತೊಡೆಗಳ ಮೇಲೆ ಕೂರಿಸಿಕೊಂಡು ಕೈಗಳಿಂದ ಬಂಧಿಸಿ, ಅಭಯ ಮುದ್ರೆಯೊಂದಿಗೆ ಹಿಂಭಾಗದ ಕೈಗಳಲ್ಲಿ ಶಂಖ-ಚಕ್ರಗಳನ್ನು ಹಿಡಿದಿದ್ದು, ದೇವಿಯು ಹಸಿರು ವರ್ಣದಿಂದ ಕಂಗೊಳಿಸಿದ್ದಾಳೆ. ಯಕ್ಷಿಯ ಮೇಲೆ ಕುಳಿತಿರುವ ಇಬ್ಬರು ಬಾಲಕರು ಶ್ವೇತವರ್ಣದಿಂದಿದ್ದು, ಸರ್ವ ಆಭರಣಗಳಿಂದ ಕಂಗೊಳಿಸುತ್ತಿದ್ದಾರೆ. ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ತೋರಿಸಿದ್ದು, ಪ್ರಭಾವಳಿಯಲ್ಲಿ ಮರದ ಮರದ ವಿನ್ಯಾಸವನ್ನು ತೋರಿಸಿದ್ದಾನೆ. ಚಿತ್ರದ ಕೆಲಪಟ್ಟಿಕೆಯಲ್ಲಿ ಅಷ್ಟಮಂಗಳಗಳ ಚಿತ್ರವಿದ್ದು, ಮೇಲೆ ಮೂರು ಕಮಾನುಗಳು, ಕೀರ್ತಿಮುಖ ಹಾಗೂ ಮೂರು ದೊಡ್ಡ ಮತ್ತು ಚಿಕ್ಕ ಗೋಪುರಗಳು, ಧ್ವಜಗಳ ಚಿತ್ರವಿದ್ದು, ಹಿನ್ನೆಲೆಯಲ್ಲಿ ಮರಗಳ ಕೊಂಬೆ, ಎಲೆಗಳ ಚಿತ್ರ ರಚಿಸಲಾಗಿದೆ. ಈ ಚಿತ್ರದಲ್ಲಿ ಕೆಂಪು, ನೀಲಿ, ಗಾಢ ಹಸಿರು, ಗಾಢ ನೀಲಿ, ಕಂದು, ಬಿಳಿ, ಹಳದಿ ವರ್ಣಗಳು ಪ್ರಮುಖವಾಗಿ ಬಳಸಿದ್ದು, ವಿನ್ಯಾಸಗಳಲ್ಲಿ ಮೈಸೂರು ಶೈಲಿಯ ಚಿತ್ರದ ಕುರುಹು ಕಂಡುಬರುತ್ತದೆ.

ಚಿತ್ರ-೨೩. ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ವಾರಣಾಸೀ ಪಟ್ಟಣದಲ್ಲಿ ಉಗ್ರ ವಂಶದ ವಿಶ್ವಸೇನ ಮಹಾರಾಜನ ಪತ್ನಿ ವಾಮಾ ದೇವಿಯ ಪವಿತ್ರ ಗರ್ಭದಲ್ಲಿ ಪುಷ್ಯ ಕೃಷ್ಣ

---

೨೩. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೩೪

ಏಕಾದಶಿಯಂದು ಇಪ್ಪತ್ಮೂರನೇ ತೀರ್ಥಂಕರರಾಗಿ ಜನಿಸಿ ನೂರು ವರ್ಷ ಆಯುಷ್ಯ ವುಳ್ಳವರಾಗಿ ಒಂಭತ್ತು ಮೊಳ ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಸರ್ಪ ಲಾಂಛನವುಳ್ಳವರಾಗಿ ಬಾಲ ಬ್ರಹ್ಮಚಾರಿಗಳಾಗಿದ್ದು ಕೆಲಕಾಲ ಯುವರಾಜರಾಗಿದ್ದು, ಒಂದು ದಿನ ಅಯೋಧ್ಯಾ ನಗರದ ವರ್ಣನೆಯನ್ನು ಕೇಳಿ ತಮ್ಮ ಪೂರ್ವಭವದ ಸ್ಮರಣೆಯಾಗಿ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಸ್ವಯಂಭೂ ಮೊದಲಾದ ಹತ್ತು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಧರಣೇಂದ್ರ ಯಕ್ಷ ಶ್ರೀ ಪದ್ಮಾವತಿ ದೇವಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಸಮ್ಮೇದಗಿರಿಯ ಸುವರ್ಣ ಭದ್ರಕೂಟದಲ್ಲಿ ನಿಂದು ಸಕಲ ಕರ್ಮಗಳನ್ನು ಕ್ಷಯಮಾಡಿ ಶ್ರಾವಣ ಶುದ್ಧ ಸಪ್ತಮಿಯಂದು ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ಪಾರ್ಶ್ವನಾಥ ಸ್ವಾಮಿ**[೨೪]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ಹಸಿರು ವರ್ಣದಿಂದ ಪಾರ್ಶ್ವನಾಥರನ್ನು ಚಿತ್ರಿಸಲಾಗಿದ್ದು, ಪದ್ಮಾಸನದಲ್ಲಿ ಕುಳಿತಿದ್ದು, ಕೆಳಭಾಗದಲ್ಲಿ ಎಡೆ ಎತ್ತಿರುವ ಸರ್ಪ ಲಾಂಛನವನ್ನು ತೋರಿಸಲಾಗಿದೆ. ಇವರ ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಿದ್ದು, ಪ್ರಭಾವಳಿಯಲ್ಲಿ ಐದೆಡೆಯ ಸರ್ಪವನ್ನು ತೋರಿಸಲಾಗಿದ್ದು, ಚಾಮರ, ಪೀಠ, ಹೂಗುಚ್ಚಗಳಿಂದ ಅಲಂಕರಿಸಲಾಗಿದೆ. ತೀರ್ಥಂಕರರ ಬಲಬದಿಯಲ್ಲಿ ಧರಣೇಂದ್ರ ಯಕ್ಷನ ಚಿತ್ರವಿದ್ದು, ಯಕ್ಷನು ನಾಲ್ಕು ಭುಜಗಳನ್ನು ಹೊಂದಿ ಮುಂದಿನ ಕೈಗಳಲ್ಲಿ ಸರ್ಪಗಳನ್ನು ಹಿಡಿದು, ಹಿಂದಿನ ಪ್ರಭಾವಳಿಯಲ್ಲೂ ಐದೆಡೆಯ ಸರ್ಪದ ಚಿತ್ರವನ್ನು ಕಾಣಬಹುದು. ಕೆಳಭಾಗದಲ್ಲಿ ಕೂರ್ಮದ ಲಾಂಛನವಿದ್ದು, ಹಿನ್ನೆಲೆಯ ಬಣ್ಣವನ್ನು ನೇರಳೆ ವರ್ಣದಿಂದ ಲೇಪಿಸಿದ್ದು, ಹೂಗುಚ್ಚಗಳಿಂದ ಅಲಂಕರಿಸಲಾಗಿದೆ. ಯಕ್ಷನ ಬಲಬದಿಯಲ್ಲಿ ಶ್ರಾವಕನೊಬ್ಬನು ಕೈಮುಗಿದು ನಿಂತಿರುವ ರೀತಿಯಲ್ಲಿ ಚಿತ್ರ ರಚಿಸಲಾಗಿದೆ. ತೀರ್ಥಂಕರರ ಎಡಬದಿಯಲ್ಲಿ ಪದ್ಮಾವತಿ ಯಕ್ಷಿಯ ಚಿತ್ರವಿದ್ದು, ದೇವಿಯು ನಾಲ್ಕು ಭುಜವನ್ನು ಹೊಂದಿದ್ದು, ಶಂಖ-ಚಕ್ರ, ಅಭಯ ಹಸ್ತದಿಂದ ಕುಳಿತಿರುವಳು. ಹಿನ್ನೆಲೆಯ ಪ್ರಭಾವಳಿಯಲ್ಲಿ ಐದೆಡೆಯ ಸರ್ಪವನ್ನು ತೋರಿಸಲಾಗಿದ್ದು, ಯಕ್ಷಿಯ ಎಡಬದಿಯಲ್ಲಿ ಸ್ತ್ರೀಯೊಬ್ಬಳು ಮಗುವನ್ನು ಕಂಕುಳಲ್ಲಿ ಕೂರಿಸಿಕೊಂಡು ಮಂಗಳಾರತಿಯನ್ನು ಬೆಳಗುತ್ತಿರುವ ಚಿತ್ರವನ್ನು ರಚಿಸಲಾಗಿದೆ. ಈ ಚಿತ್ರದ ಕೆಲಭಾಗದಲ್ಲಿ ಅಷ್ಟಮಂಗಳಗಳನ್ನು ತೋರಿಸಲಾಗಿದ್ದು, ಮೇಲ್ಭಾಗದಲ್ಲಿ ಕಮಾನುಗಳು,

---

೨೪. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೩೫

ಕೀರ್ತಿಮುಖಗಳನ್ನು, ದೊಡ್ಡ ದೊಡ್ಡ ಗೋಪುರಗಳ ಚಿತ್ರವಿದ್ದು, ಅದರ ಹಿನ್ನೆಲೆಯಲ್ಲಿ ಮರದ ಕೊಂಬೆಗಳು, ಎಲೆಗಳ ವಿನ್ಯಾಸವನ್ನು ಕಾಣಬಹುದಾಗಿದೆ. ಈ ಚಿತ್ರವು ಗೋಪುರಗಳ ವಿನ್ಯಾಸದಿಂದ ತನ್ನ ವೈಭವವನ್ನು ಹೆಚ್ಚಿಸಿಕೊಂಡಿದ್ದು, ಅಧಿಕವಾಗಿ ಹಳದಿ, ಕೆಂಪು, ಗಾಢನೀಲಿ, ಬಿಳಿ, ಹಸಿರು, ಕಂದು ವರ್ಣಗಳೇ ಇಲ್ಲಿ ಪ್ರಮುಖವಾಗಿ ಕಂಡುಬರುತ್ತದೆ.

ಚಿತ್ರ-೨೪. ಭಗವಾನ್ ಶ್ರೀ ವರ್ಧಮಾನ ತೀರ್ಥಂಕರರು

ಜಂಬೂ ದ್ವೀಪದ ಭರತಕ್ಷೇತ್ರದ ಆರ್ಯಾಖಂಡದ ಕುಂಡಲಪುರ ಪಟ್ಟಣದಲ್ಲಿ ನಾಥವಂಶದ ಸಿದ್ಧಾರ್ಥ ಮಹಾರಾಜನ ಪತ್ನಿ ತ್ರಿಶಲಾ (ಪ್ರಿಯಕಾರಿಣೀ) ದೇವಿಯ ಪವಿತ್ರ ಗರ್ಭದಲ್ಲಿ ಚೈತ್ರ ಶುದ್ಧ ತ್ರಯೋದಶಿಯಂದು ಇಪ್ಪತ್ತನಾಲ್ಕನೇ ತೀರ್ಥಂಕರರಾಗಿ ಜನಿಸಿ ಎಪ್ಪತ್ತೆರಡು ವರ್ಷ ಆಯುಷ್ಯವುಳ್ಳವರಾಗಿ ಏಳು ಮೊಳ ಎತ್ತರವುಳ್ಳವರಾಗಿ ವಜ್ರವೃಷಭ ನಾರಾಚ ಸಂಹನನದ ಪರಮೌದಾರಿಕ ದಿವ್ಯ ದೇಹಧಾರಿಗಳಾಗಿ ಸಿಂಹ ಲಾಂಛನವುಳ್ಳವರಾಗಿ ಬಾಲ ಬ್ರಹ್ಮಚಾರಿಗಳಾಗಿದ್ದು ಯುವರಾಜರಾಗಿದ್ದು, ತಮ್ಮ ಮೂವತ್ತನೇ ವಯಸ್ಸಿನಲ್ಲಿ ಸಹಜವಾಗಿಯೇ ಸಂಸಾರ ಶರೀರ ಭೋಗಗಳಲ್ಲಿ ವೈರಾಗ್ಯ ಹೊಂದಿ ದಿಗಂಬರ ದೀಕ್ಷಾಧಾರಿಗಳಾಗಿ ಬಹುಕಾಲ ಘೋರ ತಪಸ್ಸು ಮಾಡಿ ಘಾತೀಯ ಕರ್ಮಗಳನ್ನು ಗೆದ್ದು ಅರಿಹಂತ ಜಿನರಾಗಿ ನಿರ್ದೋಷರೂ, ವೀತರಾಗಿಗಳೂ, ಸರ್ವಜ್ಞರೂ, ಹಿತೋಪದೇಶಿಗಳೂ ಎನಿಸಿ ಸಮವಸರಣದಲ್ಲಿ ವಿರಾಜಮಾನರಾಗಿ ಅಷ್ಟಮಹಾಪ್ರಾತಿಹಾರ್ಯ ಸುಶೋಭಿತರಾಗಿ ಶ್ರೀ ಗೌತಮರೇ ಮೊದಲಾದ ಹನ್ನೊಂದು ಮಂದಿ ಗಣಧರರಿಂದ ಕೂಡಿ ದ್ವಾದಶಗುಣ ಪರಿಪೂರಿತರಾಗಿ ಸಕಲ ಕಲ್ಯಾಣ ಗುಣಾಭಿರಾಮರಾಗಿ ಶ್ರೀ ಮಾತಂಗ ಯಕ್ಷ ಶ್ರೀ ಸಿದ್ಧಾಯಿನೀ ದೇವಿ ಯಕ್ಷಿಯರ ಸಹಿತ ವಿಹಾರ ಮಾಡಿ ಬಹುಕಾಲ ಧರ್ಮೋಪದೇಶ ಮಾಡಿ ಕೊನೆಗೆ ಪಾವಪುರಿಯ ಕೆರೆಯ ಮಧ್ಯದಲ್ಲಿದ್ದ ಶಿಲಾ ಫಲಕದ ಮೇಲೆ ನಿಂತು ಸಕಲ ಕರ್ಮಗಳನ್ನು ಕ್ಷಯಮಾಡಿ ಅಶ್ವಯುಜ ಕೃಷ್ಣ ಅಮಾವಾಸ್ಯೆಯಂದು (ದೀಪಾವಳಿ) ನಿರ್ವಾಣ ಹೊಂದಿ ಪರಮ ನಿರಂಜನ ಸಿದ್ಧರಾದ ಭಗವಾನ್ ೧೦೦೮ **ಶ್ರೀ ವರ್ಧಮಾನ ಸ್ವಾಮಿ**[೨೫]ಯವರ ಪಾದಾರವಿಂದಗಳಿಗೆ ಭಕ್ತಿ ಪೂರ್ವಕ ಅನಂತಾನಂತ ಪ್ರಣಾಮಗಳು.

ವರ್ಧಮಾನ ತೀರ್ಥಂಕರರನ್ನು ತಿಳಿಗೆಂಪು ವರ್ಣದಿಂದ ಚಿತ್ರಿಸಿದ್ದು, ಪದ್ಮಾಸನದಲ್ಲಿ ಧ್ಯಾನಸಕ್ತರಾಗಿ ಕುಳಿತಿದ್ದಾರೆ. ಇವರ ಪೀಠದ ಕೆಳಭಾಗದಲ್ಲಿ ಸಿಂಹ ಲಾಂಛನವನ್ನು ಚಿತ್ರಿಸಿದ್ದು, ಹಿನ್ನೆಲೆಯಲ್ಲಿ ಗಾಢನೀಲಿ ವರ್ಣವನ್ನು ಲೇಪಿಸಿದ್ದು, ಹೂಗುಚ್ಛಗಳು, ಪ್ರಭಾವಳಿ, ಚಾಮರ, ಪೀಠಗಳ ವಿನ್ಯಾಸವನ್ನು ಕಲಾವಿದನು ಚಿತ್ರಿಸಿದ್ದಾನೆ. ಇವರ ಬಲಭಾಗದಲ್ಲಿ ಮಾತಂಗ ಯಕ್ಷರ ಚಿತ್ರವಿದ್ದು, ಇವರು ನಾಲ್ಕು ಭುಜಗಳನ್ನು ಹೊಂದಿ, ಶಂಖ-ಚಕ್ರ, ಅಭಯ ಹಸ್ತಗಳನ್ನು ತೋರಿ, ಹಸಿರು

೨೫. ರಾಮಚಂದ್ರ ಸ್ಯಾದ್ವಾದ್ವಿ : ಸದ್ಭಾವ ಸೌರಭ, ಪು-೩೫

ವರ್ಣಗಳಿಂದ ಕಂಗೊಳಿಸುತ್ತಿದ್ದಾರೆ. ಕೆಳಭಾಗದಲ್ಲಿ ಗಜ ಲಾಂಛನವನ್ನು ತೋರಿಸಲಾಗಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ತೀರ್ಥಂಕರರ ಎಡಭಾಗದಲ್ಲಿ ಸಿದ್ಧಾಯಿನೀ ಯಕ್ಷಿಯ ಚಿತ್ರವಿದೆ. ದೇವಿಯು ನಾಲ್ಕು ಭುಜಗಳನ್ನು ಹೊಂದಿ, ಹಸಿರು ಸೀರೆಯನ್ನು ತೊಟ್ಟು, ತಿಳಿಗೆಂಪು ವರ್ಣದಿಂದ ಕಂಗೊಳಿಸುತ್ತಿದ್ದು, ಹಿನ್ನೆಲೆಯಲ್ಲಿ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಹೂಗುಚ್ಛಗಳಿಂದ ಅಲಂಕರಿಸಲಾಗಿದೆ. ಉಳಿದಂತೆ ಚಿತ್ರದ ಕೆಳಭಾಗದಲ್ಲಿ ಅಷ್ಟ ಮಂಗಳಗಳಿದ್ದು, ಮೇಲೆ ಮೂರು ಕಮಾನುಗಳು, ಕೀರ್ತಿಮುಖಗಳು, ನಾಲ್ಕು ಚಿಕ್ಕ ಮತ್ತು ಮೂರು ದೊಡ್ಡ ಗೋಪುರಗಳಿದ್ದು, ಹಿನ್ನೆಲೆಯಲ್ಲಿ ಮರದ ಕೊಂಬೆ ಹಾಗೂ ಎಲೆಗಳ ವಿನ್ಯಾಸವನ್ನು ಕಲಾವಿದನು ಚಿತ್ರಿಸಿದ್ದಾನೆ. ಇಲ್ಲಿ ಹಳದಿ, ನೀಲಿ, ಕೆಂಪು, ಹಸಿರು, ತಿಳಿಗೆಂಪು, ಬಿಳಿ, ಕಂದು ವರ್ಣಗಳು ಪ್ರಮುಖವಾಗಿ ಉಪಯೋಗಿಸಿ ಚಿತ್ರವನ್ನು ಸಂಪೂರ್ಣಗೊಳಿಸಿದ್ದಾನೆ.

೨. ಕಾವಿ ಕಲೆಯ ಚಿತ್ರಗಳು

ಕರಾವಳಿ ಕರ್ನಾಟಕದ ಭಾಗದಲ್ಲಿ ಚಿತ್ರಕಲೆ ಪ್ರಾಚೀನ ಕಾಲದಿಂದಲೂ ಬೆಳವಣಿಗೆಯಾದರೂ ಪ್ರಾದೇಶಿಕವಾಗಿ ಕಾವಿ ಚಿತ್ರಕಲೆ ತನ್ನದೇಯಾದ ಪ್ರಭಾವವನ್ನು ಹೊಂದಿರುವುದನ್ನು ಕಾಣುತ್ತೇವೆ. ಕಾವಿ ಕಲಾಕೃತಿಗಳು ಕೇವಲ ದೇವ-ದೇವತೆಗಳಿಗೆ ಪೌರಾಣಿಕ ಕಥಾಸನ್ನಿವೇಶಗಳಿಗೆ ಮಾತ್ರ ಸೀಮಿತವಾಗಿರದೆ ಬಹುಪಾಲು ಕಲಾಕೃತಿಗಳು ಪೌರಾಣಿಕ ಕಥಾಚಿತ್ರಗಳನ್ನು ಒಳಗೊಂಡಿವೆ. ಅಲ್ಲದೆ ಕಾವಿ ಕಲಾವಿದರು ತಮ್ಮ ಸಮಕಾಲೀನ ವ್ಯಕ್ತಿಗಳ, ದನಿಗಳ ಧರ್ಮಾತರ ಊರಿನ ಪ್ರತಿಷ್ಟ ವ್ಯಕ್ತಿಗಳ, ವೀರಸೈನಿಕರ ಚಿತ್ರಗಳನ್ನು ಪೂರ್ವಜದ ಸೇನಾಧಿಪತಿಗಳ ಮತ್ತು ವೀರ ಸೈನಿಕರ ಚಿತ್ರಗಳನ್ನು ಚಿತ್ರಿಸಿದ್ದಾರೆ. ಇದರ ಜೊತೆಗೆ ಪರಿಸರ ಗಿಡ ಬಳ್ಳಿ, ಪ್ರಾಣಿ-ಪಕ್ಷಿಗಳನ್ನು ಚಿತ್ರಿಸಿದ್ದಾರೆ. ಇನ್ನೂ ಕೆಲವು ಕಾವಿ ಕಲಾಕೃತಿಗಳು ನೋಡುಗರನ್ನು ವಿಸ್ಮಯಗೊಳಿಸುವ ಚಮತ್ಕಾರಿಕ ಕಲಾಕೃತಿಯಾಗಿವೆ.

ಮುಖ್ಯವಾಗಿ ಕರ್ನಾಟಕವನ್ನು ವಿವಿಧ ಕಾರಣಗಳ ಹಿನ್ನೆಲೆಯಲ್ಲಿ ಪ್ರಾದೇಶಿಕವಾಗಿ ವಿಭಾಗಿಸಿ, ಅವುಗಳ ವಿಭಿನ್ನ ಮುಖಗಳನ್ನು ಅಥವಾ ಕ್ಷೇತ್ರಗಳ ವಿಶೇಷತೆಯನ್ನು ಗುರುತಿಸುವ ಸಂಶೋಧಿಸಿರುವ ನಿಟ್ಟಿನಲ್ಲಿ ಕರಾವಳಿ ಕರ್ನಾಟಕದ ಕಾವಿ ಚಿತ್ರಕಲೆ ಎಂಬ ಪಿಎಚ್.ಡಿ ಮಹಾಪ್ರಬಂಧವೂ ಸಿದ್ಧಗೊಂಡಿದ್ದು, ಇದರಲ್ಲಿ ಹಲವಾರು ವಿಷಯಗಳ ಕುರಿತಾಗಿ ವಿಭಾಗಿಸಿ, ವಿಶ್ಲೇಷಿಸಲಾಗಿದೆ. ಇದನ್ನು ಹೊರತುಪಡಿಸಿ, ಶ್ರವಣಬೆಳಗೊಳ, ನಲ್ಲೂರು, ಮೂಡಬಿದರೆಯ ಜೈನ ಬಸದಿಗಳ ಮೇಲೂ ಸಹ ಈ ಕಾವಿ ಕಲೆಯ ಅಂಶಗಳಿರುವ ಭಿತ್ತಿಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಏಷ್ಯಾ ಖಂಡದಲ್ಲಿಯೇ ಅತಿ ಎತ್ತರದ ಮತ್ತು ಭಾರತದಲ್ಲಿ ಅತೀ ಎತ್ತರವಾದ ಏಕಶಿಲಾ ವಿಗ್ರಹಗಳಲ್ಲಿಯೇ ದೊಡ್ಡದಾದ ಗೊಮ್ಮಟನ ಶಿಲೆಯಿರುವ ಶ್ರವಣಬೆಳಗೊಳ ಪ್ರಸಿದ್ಧ ಜೈನ ಪುಣ್ಯಕ್ಷೇತ್ರ

ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲೂಕಿನಲ್ಲಿರುವ ಶ್ರವಣಬೆಳಗೊಳದ ವಿಂದ್ಯಾಗಿರಿಯ ಮೇಲೆ ಕಡೆಯಲಾಗಿರುವ ಈ ಮೂರ್ತಿಯನ್ನು ನೋಡಲು ತೆರಳುವಾಗ ದೇವಾಲಯದ ದ್ವಾರ ಬಾಗಿಲಲ್ಲಿ ಬಲಗೋಡೆಯ ಮೇಲೆ ಈ ಕೆಂಪು ವರ್ಣದ ರೇಖಾಚಿತ್ರಗಳಿದ್ದು, ಎಡಭಾಗದ ಗೋಡೆಯ ಮೇಲೆ ಆನೆ ಹಾಗೂ ಬಲ ಬದಿಯ ಗೋಡೆಯ ಮೇಲೆ ಕುದುರೆಯ ಚಿತ್ರಗಳನ್ನು ನಾವು ಕಾಣಬಹುದಾಗಿದೆ. ಇವು ಕಾವಿಕಲೆಯ ಕುರುಹುಗಳಾಗಿದ್ದವು ಎಂಬುದಕ್ಕೆ ಬಿಳಿಯ ಸುಣ್ಣದ ಗೋಡೆಯ ಮೇಲಿನ ಕೆಂಪು ಚಿತ್ರಗಳು ಇವಾಗಿದ್ದವು ಎಂದು ಹೇಳಲಾಗುವುದು. ಆದರೆ ಇಂದು ಮಂಟಪದ ಮೇಲಿರುವ ಸುಣ್ಣವನ್ನು ಸಂಪೂರ್ಣವಾಗಿ ತೆಗೆದಿದ್ದು, ಕೆಂಪು ರೇಖಾಚಿತ್ರಗಳನ್ನು ಮಾತ್ರ ನಾವಿಲ್ಲಿ ಕಾಣಬಹುದಾಗಿದೆ.

ಎದುರು ಬದಿಯ ಗೋಡೆಯ ಆನೆಯ ಚಿತ್ರವು ಎಡದಿಂದ ಬಲಕ್ಕೆ ಸಾಗುವಂತಿದ್ದು, ಎರಡು ಹಂತದಲ್ಲಿ ರೇಖಾಚಿತ್ರವನ್ನು ಕಾಣಬಹುದಿದೆ. ಹೊರರೇಖೆಯನ್ನು ರಚಿಸಿಕೊಂಡ ಬಳಿಕ ಒಳರೇಖೆಯನ್ನು ರಚಿಸಲಾಗಿದೆ. ಈ ಆನೆಯು ಎರಡು ಹಂತಗಳನ್ನು ಹೊಂದಿದ್ದು, ಸೊಂಡಿಲನು ಕೆಳಭಾಗದಲ್ಲಿ ಸುರುಳಿ ಸುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಬಳಿಕ ಕೊರಳಲ್ಲಿ ಹಿಂದಿನ ತೊಡೆಯ ಬೆನ್ನನ್ನು ಭಾಗದಲ್ಲಿ ವೃತ್ತಾಕಾರದ ರಚನೆಯನ್ನು ಮಾಡಲಾಗಿರುವುದು ಕಂಡುಬರುತ್ತದೆ. ಇದರ ಬದಿಯೇ ಇರುವ ಕುದುರೆ ಚಿತ್ರವೂ ಸಹ ವಿಶೇಷವಾಗಿದ್ದು ಇದಕ್ಕೆ ಯಾವುದೇ ಚಿತ್ರದ ಬಾಹ್ಯ ರೇಖೆಯನ್ನು ಎಳೆಯದೆ ದೇಹದ ಮಾಡಲಾದ ರೇಖಾ ವಿನ್ಯಾಸದಲ್ಲಿಯೇ ಚಿತ್ರಗಳನ್ನು ಸಂಪೂರ್ಣ ಮಾಡಲಾಗಿದ್ದು ಇದೊಂದು ವಿಶೇಷ ಚಿತ್ರವೆನಿಸುತ್ತದೆ.

ಶ್ರವಣಬೆಳಗೊಳದ ಭಂಡಾರ ಬಸದಿಯನ್ನು ಕ್ರಿ.ಶ. ೧೧೫೯ರಲ್ಲಿ ದಂಡನಾಯಕ ಹುಳ್ಳಮಯ್ಯ ಕಟ್ಟಿಸಿದನು. ಈ ಹುಳ್ಳನು ಹೊಯ್ಸಳರ ನರಸಿಂಹನ ಭಂಡಾರಿಯಾಗಿ ಬೆಳಗೊಳಕ್ಕೆ ಸೇವೆ ಸಲ್ಲಿಸಿದ. ಇವನ ಕಾಲದಲ್ಲೇ ಈ ದೇವಾಲಯದ ಹೊರಗೋಡೆಗಳ ಮೇಲೆ ಕಾವಿ ಕಲೆ ಇದ್ದು, ಇಂದು ಅವು ಬಹುತೇಕ ಮುಚ್ಚಿಹೋಗಿವೆ. ಅವುಗಳಲ್ಲಿ ಕೆಲವನ್ನು ಎಕ್ಕೆತೆಗೆದಾಗ ಸುಣ್ಣದ ಹಿಂದೆ ರೇಖಾವಿನ್ಯಾಸಗಳು ಅಸ್ಪಷ್ಟವಾಗಿ ಗೋಚರಿಸುತ್ತವೆ. ಅದರಲ್ಲಿ ವೃತ್ತಾಕಾರದ ಹೂವಿನ ಧಳದ ಚಿತ್ರವಿದ್ದು ಅದರ ಮೇಲೆ ಕೆಂಪು ವರ್ಣದಲ್ಲಿ ರಚನೆಗಳು ಕಾಣುತ್ತವೆ. ಆದರೆ ಅದರ ಮೇಲೆ ಸುಣ್ಣ ಲೇಪಿಸಿರುವುದರಿಂದ ಅದ್ಯಾವುದೆಂಬುದನ್ನು ಕಂಡು ಹಿಡಿಯುವುದು ಕಷ್ಟಸಾಧ್ಯವಾದ ವಿಷಯವಾಗಿದೆ. ಆದರೂ ಸಹ ಇಲ್ಲಿ ವೃತ್ತಾಕಾರದ ಹೂವಿನ ಧಳದ ಚಿತ್ರವನ್ನು ಗುರುತಿಸಬಹುದಾಗಿದೆ.

ಶ್ರೀಮಠ ಅಥವಾ ಮಠದ ಬಸಿಯನ್ನು ೧೮ನೇ ಶತಮಾನದಲ್ಲಿ ಜೀರ್ಣೋದ್ಧಾರ-ಗೊಳಿಸಲಾಗಿದೆ. ಆದರೆ ಚಾವುಂಡರಾಯನೇ ಇಲ್ಲಿ ಮಠವನ್ನು ಸ್ಥಾಪಿಸಿ ತನ್ನ ಗುರು ಶ್ರೀ ನೇಮಿಚಂದ್ರ ಸಿದ್ಧಾಂತ ದೇವರನ್ನು ಪ್ರತಿಷ್ಠಾಪಿಸಿದ್ದ ಎಂಬುದು ಇತಿಹಾಸವಾಗಿದೆ. ಈ ಮಠದ ಮುಂಭಾಗದಲ್ಲಿರುವ

ಮಾನ್ಯಸ್ಥಂಬದ ಪಕ್ಕದಲ್ಲಿರುವ ಚಿಕ್ಕ ಮಂಟಪದಲ್ಲಿ ಪಶ್ಚಿಮ ದಿಕ್ಕಿನ ಗೋಡೆಯ ಮೇಲೆ ವೃತ್ತಾಕಾರದ ಸಮವಸರಣದ ಚಿತ್ರವಿದ್ದು ಈ ಚಿತ್ರದಲ್ಲಿ ಕೆಂಪು ಹಾಗೂ ಹಳದಿ ವರ್ಣಗಳಿದ್ದು, ಸುತ್ತಲೂ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ. ಆದರೆ ಸೂಕ್ಷ್ಮವಾಗಿ ಗಮನಿಸಿದಾಗ ಇದು ಕಾವಿಕಲೆ ಎಂಬುದು ಗೋಚರಿಸುವುದು. ಕಾರಣ ಗೋಡೆಯ ಗಾರೆಯ ಮೇಲೆ ಕೊರೆದ ರೇಖೆಗಳನ್ನು ನಾವಿಲ್ಲಿ ಕಾಣಬಹುದಾಗಿದ್ದು, ತದ ನಂತರದಲ್ಲಿ ಇದರ ಮೇಲೆ ಹಳದಿ ಮತ್ತು ಉರಿಮಂಜು ವರ್ಣದ ಕೆಂಪು ರೇಖೆಗಳನ್ನು ಎಳೆದಿರುವಂತೆ ತೋರುತ್ತದೆ.

ಈ ಚಿತ್ರವು ನೋಡಲು ಮೂಡಬಿದರೆಯ ಮಠದಲ್ಲಿಯ ಗರ್ಭಗೃಹದ ಬಲಬದಿಯ ಗೋಡೆಯ ಮೇಲೆ ಸಮವಸರಣ ಚಿತ್ರದಂತೆ ಕಾಣುವುದು. ಇದೇ ಚಿತ್ರವನ್ನು ಶ್ರವಣಬೆಳಗೊಳದ ಮಠದ ಒಳಭಾಗದಲ್ಲಿಯೂ ರಚಿಸಲಾಗಿದ್ದು, ಇಲ್ಲಿ ವರ್ಣಚಿತ್ರಗಳಿವೆ. ಅಷ್ಟೇ ಅಲ್ಲದೆ ಇಲ್ಲಿ ತೀರ್ಥಂಕರರು, ಮುನಿಗಳು, ಗುರುಗಳು, ಗಣದರರು, ಯಕ್ಷ-ಯಕ್ಷಿಯರು ದೇವಾನು-ದೇವತೆಗಳನ್ನು ಸಹ ಇಲ್ಲಿ ಚಿತ್ರಿಸಲಾಗಿದ್ದು, ಹೊರಭಾಗದ ಸಮವಸರಣ ಚಿತ್ರವನ್ನು ಹೋಲುತ್ತದೆ.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ನಲ್ಲೂರಿನ ಶ್ರೀಜೈನ ಮಠದ ಹೊರಗೋಡೆಯ ಸುತ್ತ ಒಳಮುಖವಾಗಿರುವ ಕಾವಿ ಕಲೆಯ ತರಹದ ಬಿಳಿ ವರ್ಣ ರೇಖಾಚಿತ್ರಗಳಿದ್ದು, ಇಲ್ಲಿಯೂ ಪೂರ್ವದಲ್ಲಿ ಕಾವಿ ಕಲೆಯು ಇತ್ತೆಂದು ಅದರ ಅವುಗಳು ನಾಶವೊಂದಿದವೆಂದು ಇಲ್ಲಿಯ ಸ್ಥಳೀಯರು ತಿಳಿಸುತ್ತಾರೆ. ಆದರೆ ಈ ಜೈನ ಮಠದ ಹೊರಗೋಡೆಯ ಒಳಮುಖದಲ್ಲಿ ಬಿಳಿಯ ವರ್ಣದ ಕುಂಭಗಳ ರೇಖಾಚಿತ್ರಗಳ ಸಾಲಿದ್ದು, ವೃತ್ತಾಕಾರದ ಕುಂಭದಲ್ಲಿ ತಳ ಮಧ್ಯ ಹಾಗೂ ಕಂಟದ ಬಳಿ ಬಳಿಯ ರೇಖೆಗಳನ್ನು ಎಳೆದಿದ್ದು, ಸುಮಾರು ಐದು ಅಡಿ ಎತ್ತರವಿವೆ. ಇವೇ ಚಿತ್ರಗಳ ಪೂರ ಸಾಕ್ಷಿಯಾಗಿ ಹೊರಗೋಡೆಯ ಮೇಲಿನ ವಿನ್ಯಾಸದಲ್ಲು ಕುಂಚಾಕಾರದ ಗಾರೆಯ ಶಿಲ್ಪಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಲ್ಲಿನ ಗುರು ಬಸದಿಯ ಮೇಲೂ ಸಹ ಬಿಳಿಯ ವರ್ಣದ ರೇಖಾಚಿತ್ರಗಳಿದ್ದು, ಇಲ್ಲಿಯೂ ಸಹ ಕಾವಿ ಚಿತ್ರಗಳಿದ್ದವು. ಆದರೆ ಕಾಲಾನುಕ್ರಮದಲ್ಲಿ ಈ ಚಿತ್ರಗಳು, ನಶಿಸಿ ಹೋಗಿದ್ದು, ಇಂದಿಗೆ ಹೊರಗೋಡೆಯ ಮೇಲಿನ ಬಿಳಿಯ ರೇಖೆಗಳನ್ನು ಮಾತ್ರ ನಾವು ಕಾಣಬಹುದಾಗಿದೆ.

ಮೇಲಿಂದ ಕೆಳಮುಖವಾಗಿ ಎಳೆದಿರುವ ಬಿಳಿಯ ರೇಖೆಗಳು ಹಾಗೂ ಚೌಕಾಕಾರದಲ್ಲಿ ಗುಣಾಕಾರದ ಚಿನ್ಹೆಯಂತಿರುವ ಅಡ್ಡರೇಖೆಗಳ ಬಿಳಿವರ್ಣ ಚಿತ್ರಗಳನ್ನು ಕಾಣಬಹುದಾಗಿದ್ದು, ಇದರಲ್ಲಿ ಅಧ್ಯಾಯ ವಿಷಯವಿಲ್ಲವಿದ್ದರೂ ಸಹ ಒಂದು ಕಲಾಪ್ರಕಾರವಾಗಿರುವ ಕಾರಣದಿಂದ ಸಂಕೀರ್ಣ

ಮಾಧ್ಯಮದಲ್ಲಿ ಈ ಚಿತ್ರಗಳ ಕುರಿತು ಉಲ್ಲೇಖಿಸಲು ಇಚ್ಛಿಸಲಾಗಿದೆ. ಉಳಿದಂತೆ ಶ್ರವಣಬೆಳಗೊಳದ ಚಿತ್ರಗಳಂತೂ ನೋಡಲು ಸುಂದರವಾಗಿರುವ ಇವುಗಳು ಜೈನ ಧರ್ಮ ಕಾವಿ ಕಲೆಯ ಉಳಿದ ಕುರುಹುಗಳೆಂದರೂ ತಪ್ಪಾಗಲಾರದು.

೩. ಗೋಡೆಯ ಮೇಲಿನ ತೈಲವರ್ಣ ಚಿತ್ರಗಳು

ತೈಲವರ್ಣದ ಭಿತ್ತಿಚಿತ್ರಗಳ ಇತಿಹಾಸವನ್ನು ನಾವು ಹೆಚ್ಚಾಗಿ ಪಾಶ್ಚಾತ್ಯರಲ್ಲಿ ಕೇಳುತ್ತೇವೆ. ಭಾರತೀಯ ಸಾಂಪ್ರದಾಯಿಕ ಕಲೆಯಲ್ಲಿ ನೈಸರ್ಗಿಕ ವರ್ಣಗಳಾದ ಜಲವರ್ಣದ ಚಿತ್ರಗಳನ್ನು ಹೆಚ್ಚಾಗಿ ನೋಡುತ್ತೇವೆ. ಭಿತ್ತಿಚಿತ್ರ ಪರಂಪರೆಯು ಪ್ರಪಂಚದ ಇತಿಹಾಸವನ್ನು ಕಟ್ಟುಕೊಟ್ಟರೆ. ಇದರ ಸಮಪಾಲು ಭಾರತೀಯ ಪ್ರಾಗಿತಿಹಾಸ ಕಾಲದ ಚಿತ್ರಗಳು ಕಟ್ಟಿಕೊಡುತ್ತವೆ. ಪಾಶ್ಚಾತ್ಯರ ಚರ್ಚೆಗಳಲ್ಲಿ ೧೫-೧೬ನೇ ಶತಮಾನದ ಕಲಾವಿದರು ಚಾವಣಿಗಳ ಮೇಲೆ, ಗೋಡೆಗಳ ಮೇಲೆ, ಕಂಬಗಳ ಮೇಲೆ, ಕ್ರೈಸ್ತ ಐತಿಹಾಸಿಕ ಚಿತ್ರಗಳು ದೇವತೆಗಳು, ದೇವಧೂತರು ಇವರ ವಸ್ತುವಿಷಯದ ಅನುಸಾರ ಚಿತ್ರಗಳನ್ನು ರಚಿಸುತ್ತಿದ್ದರು. ಆದರೆ ಭಾರತೀಯ ಕಲೆಯು ಹಾಗೂ ಅದರ ಶ್ರೀಮಂತಿಕೆ ಹರಪ್ಪ ಮೊಹೆಂಜೊದಾರೋ ಕಾಲದಿಂದ ಇದ್ದರು ಸಹ ಇವರ ದಾಖಲೀಕರಣದ ಅಜಂತ ಹಾಗೂ ಎಲ್ಲೋರಗಳಲ್ಲಿಯ ಸಾಂಪ್ರದಾಯಿಕ ಭಿತ್ತಿಚಿತ್ರಗಳು ಇಂದಿಗೂ ಸಾಕ್ಷಿಭೂತವಾಗಿವೆ. ಇದಾದ ನಂತರ ಇದರ ಪರಂಪರೆಯೂ ಭಾರತದಲ್ಲಿ ಮೈಸೂರು ಅರಸರವರೆಗೂ ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಜೈನ ಧರ್ಮದ ಭಿತ್ತಿ ಪರಂಪರೆಯೂ ಸಾಂಪ್ರದಾಯಿಕ ಜಲವರ್ಣದ್ದೇ ಆದರು ಕೆಲವಾರು ಕಡೆಗಳಲ್ಲಿ ಭಿತ್ತಿಚಿತ್ರದ ಪರಂಪರೆಯ ನಂತರದ ದಿನಗಳಲ್ಲಿನ ಚಿತ್ರಗಳಲ್ಲಿ ತೈಲವರ್ಣದ ಎನಾಮಲ್ ವರ್ಣಗಳಲ್ಲಿ ಭಿತ್ತಿಚಿತ್ರಗಳನ್ನು ರಚಿಸಲಾಗಿದೆ. ಇದರ ಪೂರ್ಣಪ್ರಮಾಣದ ಸಾಕ್ಷಿಭೂತವೆಂಬಂತೆ ಕಾವಿ ಕಲೆಯ ತವರೂರಾದ ಶಿರಸಿ ಮಾರಿಕಾಂಭ ದೇವಾಲಯದಲ್ಲಿನ ನೈಸರ್ಗಿಕ ವರ್ಣಚಿತ್ರಗಳ ಮೇಲೆ ಎನಾಮಿಲ್ ವರ್ಣಗಳನ್ನು ಬಳಸಿ ಮರುಚಿತ್ರಿಸಲಾಗಿದೆ. ಇದರಂತೆಯೇ ಜೈನ ಬಸಿದಿಗಳಲ್ಲು ತೈಲವರ್ಣ ಪರಂಪರೆಯೂ ಸಾಗಿ ಅಲ್ಲಲ್ಲಿ ನೆಲೆಗೊಂಡಿದೆ. ಇದಕ್ಕೆ ಸಾಕ್ಷಿಯಾಗುವಂತೆ ಮೂಡಬಿದರೆ, ನಾರಾವಿ, ನಲ್ಲೂರು, ಅರಿಕಲ್ಲು ಬಸದಿ, ಬಲ್ಲಮಂಜಗಳಲ್ಲಿ ಚಿತ್ರಗಳು ಸಾಕ್ಷಿಯಾಗಿವೆ. ಈ ಚಿತ್ರಗಳು ನೈಸರ್ಗಿಕ ಚಿತ್ರಗಳು ಪ್ರಾಕೃತಿಕವಾಗಿ ನಶಿಸಿದ ನಂತರ ಅದರ ಮೇಲೆ ತೈಲವರ್ಣಗಳಿಂದ ಚಿತ್ರಿಸಲಾಗಿದೆ.

ಚಿತ್ರ-೧. ದ್ವಾರಪಾಲಕರುಗಳ ಚಿತ್ರ

ಮೂಡಬಿದರೆಯು ಜೈನ ಧರ್ಮೀಯರಿಗೆ ಮೂಲ ಕ್ಷೇತ್ರವಾಗಿದ್ದು, ಇಲ್ಲಯ ಬಸದಿಗಳಲ್ಲು ಸಹ ವಾವು ತೈಲವರ್ಣ ಭಿತ್ತಿಚಿತ್ರಗಳನ್ನು ಕಾಣಬಹುದಾಗಿದೆ. ಅವುಗಳಲ್ಲಿ ಮುಖ್ಯವಾಗಿ ಐದು

ಕಡೆಗಳಲ್ಲಿ ದ್ವಾರಪಾಲಕರನ್ನು ಮತ್ತು ಒಂದುಕಡೆ ಸಮವಸರಣ ಹಾಗೂ ಸಂಸಾರ ದರ್ಶನದ ಚಿತ್ರಗಳನ್ನು ಕಾಣಬಹುದಾಗಿದೆ. ಎಲ್ಲಾ ಚಿತ್ರಗಳಲ್ಲಿಯೂ ದ್ವಾರಪಾಲಕರು ನಾಲ್ಕು ಬಾಹುಗಳನ್ನು ಹೊಂದಿದ್ದು, ಒಂದು ಕೈಯಲ್ಲಿ ಗದೆಯನ್ನು ಹಿಡಿದು ಮತ್ತೊಂದು ಕೈಯಲ್ಲಿ ಅಭಯ ಹಸ್ತಪ್ರತಿಯನ್ನು ಹಿಡಿದು ನಿಂತಿರುವಂತಿರುವ ದೃಶ್ಯವನ್ನು ನಾವಿಲ್ಲಿ ಕಾಣಬಹುದಾಗಿದ್ದು, ಒಂದು ಚಿತ್ರದಲ್ಲಿ ಮಾತ್ರ ಹಿಂದಿನ ಕೈಯಲ್ಲಿ ಶಂಖ ಚಕ್ರಗಳಿದ್ದು, ಉಳಿದ ನಾಲ್ಕು ದ್ವಾರಪಾಲಕರ ಚಿತ್ರದಲ್ಲಿಯೂ ಕಮಲದ ಹೂಗಳನ್ನು ಹಿಡಿದು ನಿಂತಿರುವ ಹಾಗೆ ಇದೆ. ಎಲ್ಲಾ ಚಕ್ರಗಳಲ್ಲು ಕಿರೀಟದಾರಿಯಾಗಿರುವ ದ್ವಾರ ಪಾಲಕರು 'ಯು' ಆಕಾರದ ನಾಮವನ್ನು ಅಂದರೆ ಇದು ಗೋವಿಂದನಿಗೆ ಕಾಣುವ ಅಥವಾ ವೈಷ್ಣವ ಸಂಕೇತವಾಗಿದೆ. ಕೈ, ಕೊರಳು, ಸೊಂಟಗಳಿಗೆ ಆಭರಣಗಳು ಹೂವಿನ ಮಾಲೆಯನ್ನು ಧರಿಸಿ ಮುಂಭಾಗದಲ್ಲಿ ಗಧೆಯನ್ನು ಹಿಡಿದಿದ್ದು ಅದರ ಮೇಲೆ ನಾಗರ ಹಾವೊಂದು ಆ ಗಧೆಗೆ ಸುತ್ತುಕೊಂಡ ಎಡೆ ಎತ್ತಿ ನೋಡುವ ರೀತಿಯಲ್ಲಿ ಚಿತ್ರಿಸಲಾಗಿದೆ. ಇವರ ಕೆಳಭಾಗದಲ್ಲಿ ಒಂದು ಪೀಠದ ಮೇಲೆ ಇವರು ನಿಂತಿರುತ್ತಾರೆ. ಒಂದು ಚಿತ್ರದಲ್ಲಿ ಮಂಟಪದ ಹಿನ್ನೆಲೆಯನ್ನು ತೋರಿಸಿದ್ದು, ಮತ್ತೊಂದು ಚಿತ್ರದಲ್ಲಿ ಕಮಾನಿನ ಆಕಾರದ ಹಿನ್ನೆಲೆ ತೋರಿಸಿ, ಗಿಣಿಯನ್ನು ಚಿತ್ರಿಸಲಾಗಿದೆ. ಇದನ್ನು ಬಿಟ್ಟರೆ ಇನ್ನುಳಿದು ಮೂರು ಚಿತ್ರದಲ್ಲಿಯೂ ಏಕರ್ಣ ಹಿನ್ನೆಲೆ ಇದು ನೀಲಿವರ್ಣವನ್ನು ತೋರಿಸಲಾಗಿದೆ.

ಇಲ್ಲಿ ನಿಂತಿರುವ ದ್ವಾರಪಾಲಕರನ್ನು ನೋಡುತ್ತಿದ್ದಾರೆ. ವೈಧಿಕ ಧರ್ಮದ ಮಹಾವಿಷ್ಣುವಿನ ದ್ವಾರಪಾಲಕರಾದ ವಿಜಯ ಜಯವಿಜಯರಂತೆ ತೋರುತ್ತಾರೆ. ಅವರೂ ಸಹ ಇದೇ ರೀತಿಯ ವಸ್ತ್ರಾಲಂಕಾರ, ವೇಷಭೂಷಣಗಳನ್ನು ತೊಟ್ಟು ನಿಂತಿರುವಂತೆ ಚಿತ್ರಿಸಲಾಗಿದೆ. ಸಾಮಾನ್ಯವಾಗಿ ತಿಳಿಗೆಂಪು ಹಾಗೂ ಶ್ವೇತವರ್ಣದಲ್ಲಿ ಈ ದ್ವಾರಪಾಲಕರ ಮೈಬಣ್ಣವಿದ್ದು, ಇನ್ನುಳಿದಂತೆ ಕೆಂಪು, ಹಳದಿ, ನೀಲಿ, ಹಸಿರು, ಕಪ್ಪು ಮತ್ತು ಬಿಳಿವರ್ಣಗಳನ್ನು ಬಳಸಿಕೊಂಡು ಚಿತ್ರಗಳನ್ನು ಚಿತ್ರಿಸಲಾಗಿದ್ದು, ಈ ಚಿತ್ರಗಳು ಪೂರ್ವದಲ್ಲಿ ನೈಸರ್ಗಿಕ ವರ್ಣ ಭಿತ್ತಿಚಿತ್ರಗಳೇ ಆಗಿದ್ದು, ಈಗ ಜಾಗತಿಕ ಪೈಪೋಟಿಯಲ್ಲಿ ತೈಲವರ್ಣಗಳ ಶೂಲಕ್ಕೆ ನಮ್ಮ ಸಾಂಪ್ರದಾಯಿಕ ಚಿತ್ರಗಳು ಸಿಲುಕಿದ್ದು, ಇವುಗಳ ಕೆನ್ನಾಲಿಗೆಯಿಂದ ಹೊರಬರಬೇಕಿದ್ದು, ಇದಕ್ಕೆ ಕಲಾಪೋಷಕರು ಕೈಜೋಡಿಸುವ ಅವಶ್ಯಕತೆ ಸಂಪೂರ್ಣವಾಗಿ ಬೇಕಾಗಿದೆ.

ಚಿತ್ರ–೨. ಸಮವಸರಣ ಚಿತ್ರ

ಮೂಡಬಿದರೆಯ ಕಲ್ಲು ಬಸದಿಯ ಮುಂಭಾಗದ ಗೋಡೆಯ ಮೇಲೆ ರಚಿತವಾಗಿರುವ ತೈಲವರ್ಣದ ಸಮವಸರಣದ ಭಿತ್ತಿಚಿತ್ರವು ನೋಡಲು ಮನಮೋಹಕವಾಗಿದ್ದು, ಬಸದಿ ಪ್ರವೇಶಿಸುವ ಎಡಭಾಗದಲ್ಲಿ ಈ ಚಿತ್ರವನ್ನು ಕಾಣಬಹುದು. ಈ ಚಿತ್ರದ ಪೂರ್ವದಲ್ಲಿ ಇಲ್ಲಿಯೂ ಸಾಂಪ್ರದಾಯಿಕ ವರ್ಣಗಳ ಭಿತ್ತಿಚಿತ್ರಗಳಿದ್ದವೆಂದು ಇಲ್ಲಿಯ ಸ್ಥಳೀಯರು ತಿಳಿಸುವರು ಆದರೆ ಇಲ್ಲಿ ಭಿತ್ತಿಚಿತ್ರಗಳಿದ್ದ

ಬಗ್ಗೆ ಯಾವುದೇ ಐತಿಹಾಸಿಕ ಮಾಹಿತಿ ಇರುವುದಿಲ್ಲ. ಆದರೂ ಇಲ್ಲಿಯ ಚಿತ್ರಗಳ ಸ್ಥಳಾವಕಾಶವನ್ನು ಗಮನಿಸದಿರೆ ಇದು ಸತ್ಯವಿರಬಹುದೆಂಬ ಪ್ರಜ್ಞೆ ಮಾಡದಿರದು.

ಸಮವಸರಣ ಚಿತ್ರವು ತೀರ್ಥಂಕರರಿಗೆ ಕೇವಲ ಜ್ಞಾನ ಪ್ರಾಪ್ತವಾದ ಬಳಿಕೆ ಬರುವ ಒಂದು ಸ್ಥಿತಿ ಇಲ್ಲಿ ತೀರ್ಥಂಕರರು ತಾವು ತಪಶಕ್ತಿಯಿಂದ ಗಳಿಸಿದ ಜ್ಞಾನವನ್ನು ಸರ್ವರಿಗೂ ಹಂಚುವ ಒಂದು ತತ್ವ ಮಂಟಪವೆಂದರೆ ತಪ್ಪಾಗಲಾರದು. ಸಮವಸರಣದಲ್ಲಿ ತೀರ್ಥಂಕರರು ಮಧ್ಯದಲ್ಲಿ ಕುಳಿತು ಸುತ್ತಲೂ ದೇವತೆಗಳು, ಗಣಧರರು, ಯಕ್ಷ-ಯಕ್ಷಿಯರು, ಸಾಮಾನ್ಯರು, ಮುನಿಗಳು, ಗುರುಗಳು ನೆರೆದಿರುತ್ತಾರೆ. ಈ ಚಿತ್ರದಲ್ಲಿ ತೀರ್ಥಂಕರರು ಪದ್ಮಾಸನಾರೂಢ ಧ್ಯಾನ ಸ್ಥಿತಿಯಲ್ಲಿದ್ದು, ಇವರ ಹಿಂಭಾಗದಲ್ಲಿ ಹಸಿರು ಪ್ರಭೆಯನ್ನು ತೋಸಿರಿಸಲಾಗಿದ್ದು, ಶಿರದ ಮೇಲೆ ಕಳಛತ್ರಿಗಳನ್ನು ತೋರಿಸಲಾಗಿರುವುದು, ಕೆಳಭಾಗದಲ್ಲಿ ಕಮಲದ ಹೂವಿನಿಂದ ಮೇಲೆ ತೇಲುವಂತೆ ಚಿತ್ರಿಸಲಾಗಿದೆ. ಕಮಲದ ಕೆಳಗೆ ಪೀಠವಿದ್ದು, ಪೀಠದಿಂದ ಕಮಲವೂ ಸಹ ತೇಲುವಂತಿದೆ. ಸುತ್ತಲೂ ಹತ್ತು ವೃತ್ತಗಳಿದ್ದು, ಹೊರಗಿನಿಂದ ಮೊದಲು ಗೋಪುರಗಳು, ನಂತರ ಜಲಚರ ಸಾಲು, ಮಂಟಪಗಳು, ಧ್ವಜಗಳು, ವೃಕ್ಷಗಳು, ದ್ವಾರಗಳು, ಕೋಟೆಯಂತಹ ಕಟ್ಟಡ ನಂತರ ಮನುಷ್ಯರು, ಮುನಿಗಳು, ಪ್ರಾಣಿಗಳು, ವೃತ್ತಾಕಾರದ ಮೇಲೆ ಗಣಧರರು, ಅದರ ಮೇಲೆ ಅಷ್ಟಮಂಗಲಗಳನ್ನು ತೋರಿಸಲಾಗಿದ್ದು, ನಾಲ್ಕು ದ್ವಾರಗಳಿದ್ದರೂ ಸಹ ಇಲ್ಲಿ ಮೂರು ದ್ವಾರವನ್ನು ತೋರಿಸಲಾಗಿದೆ. ಹಾಗೂ ಮಾನ ಸ್ತಂಬಗಳನ್ನು ಸಹ ಇಲ್ಲಿ ತೋರಿಸಲಾದೆ.

ದ್ವಾರದ ಪ್ರಥಮದಲ್ಲಿ ದ್ವಾರಪಾಲಕರನ್ನು ಕಾಣಬಹುದಾಗಿದೆ. ನಾಲ್ಕು ಮೂರ್ತಿಗಳ ಹೊರಭಾಗದಲ್ಲಿ ಬಿಳಿಯ ಮಂಟಪಗಳಿದ್ದು, ಅದರ ಮೇಲೆ ಧ್ವಜಗಳನ್ನು ತೋರಿಸಲಾಗಿದೆ. ಕೆಳಭಾಗದ ಭೂಮಿಗೆ ಹಸಿರು ವರ್ಣವನ್ನು ಲೇಪಿಸಿದ್ದು, ಹಳದಿ, ಕೇಸರಿ, ಕೆಂಪು ವರ್ಣಗಳಿಂದ ಆಕಾರವನ್ನು ಚಿತ್ರಿಸಲಾಗಿದೆ. ಇಲ್ಲಿ ದೇವತೆಗಳು ಹಾರುವ ವಿಮಾನಗಳಲ್ಲಿ ಬರುತ್ತಿದ್ದು, ಒಂದೊಂದಕ್ಕೂ ಒಂದೊಂದು ಮುಖವಿದೆ. ಅವುಗಳೆಂದರೆ, ಆನೆಯ ಮುಖದ ವಿಮಾನ, ಜಿಂಕೆ ವಿಮಾನ, ಹಾವಿನ ವಿಮಾನ, ಹಂಸದ ವಿಮಾನ ಹೀಗೆ ಪ್ರಾಣಿ-ಪಕ್ಷಿಗಳ ಮುಖಗಳಿರುವ ವಿಮಾನಗಳಿದ್ದು, ಇದರ ಮೇಲೆ ಬಿಳಿಯ ಧ್ವಜಗಳನ್ನು ಕಾಣಬಹುದಾಗಿದೆ. ಈ ಚಿತ್ರದಲ್ಲಿ ಹೆಚ್ಚಾಗಿ ಹಳದಿ, ಬಿಳಿ, ಕೇಸರಿ, ಕೆಂಪು, ಹಸಿರು ವರ್ಣಗಳನ್ನು ಬಳಸಿ ಚಿತ್ರವನ್ನು ಪೂರ್ಣಗೊಳಿಸಲಾಗಿದೆ.

ಚಿತ್ರ-೩. ಸಂಸಾರ ದರ್ಶನದ ಚಿತ್ರ

ಜೈನರ ಧರ್ಮ ಗ್ರಂಥದಲ್ಲಿ ಬಹು ಸೂಕ್ಷ್ಮ ವಿಷಯಗಳಿದ್ದು, ಅವುಗಳನ್ನು ಸಚಿತ್ರವಾಗಿ ಹೊರತಂದರೆ ಸಾಮಾನ್ಯರಿಗೆ ಸುಲಭವಾಗಿ ನಿಲುಕುತ್ತವೆ. ಆ ಪ್ರಯತ್ನಗಳಲ್ಲಿ ಇದೂ ಒಂದು.

ಸಂಸಾರ ದರ್ಶನ ಚಿತ್ರದಲ್ಲಿ ಮನುಷ್ಯನು ಯಾವ ರೀತಿಯಲ್ಲಿ ಸಂಸಾರ ಬಂಧನದಲ್ಲಿ ಅಥವಾ ಸುಳಿಯಲ್ಲಿ ಸಿಲುಕಿ ನರಳುತ್ತಾನೆ ಹಾಗೂ ಅದರಿಂದ ಪಾರಾಗುವ ಮಾರ್ಗದ ಚಿತ್ರ ಅರ್ಥ ಇದಾಗಿದ್ದು, ಇಲ್ಲಿ ಸಂಸಾರ ದರ್ಶನವನ್ನು ಮಾತ್ರ ತೋರಿಸಲಾಗಿದೆ. ಈ ಚಿತ್ರದಲ್ಲಿ ದೊಡ್ಡದೊಂದು ಮರವಿದ್ದು, ಹಸಿರು ತುಂಬಿರುವ ಇದರ ಟೊಂಗೆಯಲ್ಲಿ ಜೇನಿನಗೂಡು ಇರುವುದು ಇನ್ನೊಂದು ಟೊಂಗೆಯಲ್ಲಿ ೩ ಬಳ್ಳಿಯನ್ನು ಹಿಡಿದು ಮನುಷ್ಯನು ನೇತು ಬಿದ್ದಿದ್ದು, ಮೇಲೆ ಇಲ್ಲಿ ಅಳಿಲುಗಳು ಆ ಬಳ್ಳಿಯನ್ನು ತನ್ನ ಹಲ್ಲುಗಳಿಂದ ಕಚ್ಚಿ ತುಂಡರಿಸುತ್ತವೆ. ತುಂಡಾಗಿ ಬಿದ್ದರೆ ಕೆಳಗೆ ಕೊಳ್ಳವಿದ್ದು, ಅದರಲ್ಲಿ ಹಾವುಗಳು ಬಕ್ಷಿಸಲು ಕಾಯುತ್ತಿವೆ. ಇದರ ಪಕ್ಕದಲ್ಲಿ ಆನೆಯೊಂದು ಮರವನ್ನು ತನ್ನ ಸೊಂಡಲಿನಲ್ಲಿ ಹಿಡಿದು ಅಲುಗಾಡಿಸುತ್ತಿದೆ. ಹೀಗಿದ್ದರೂ ಸಹ ಆ ಮನುಷ್ಯ ಜೇನುಗೂಡಿನಿಂದ ಸೋರುತ್ತಿರುವ ಜೇನು ತುಪ್ಪವನ್ನು ಸವಿಯುತ್ತಿರುವುದು ಮನುಕುಲದ ಚಪಲತನವನ್ನು ತೋರಿಸುತ್ತದೆ. ಇದನ್ನು ಪುಷ್ಪಕವಿಮಾನದಲ್ಲಿ ಚಲಿಸುತ್ತಿರುವ ದೇವತಾ ದಂಪತಿಗಳು ನೋಡುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ಬೆಟ್ಟ-ಗುಡ್ಡ, ಮರ-ಗಿಡಗಳು, ಸರೋವರವನ್ನು ತೋರಿಸಲಾಗಿದೆ. ಇಲ್ಲಿ ಹಸಿರು, ನೀಲಿ, ಕಂದು, ಹಳದಿ, ಬಿಳಿ, ಕಪ್ಪು ವರ್ಣವನ್ನು ಬಳಸಿಕೊಂಡು ಚಿತ್ರಿಸಲಾಗಿದೆ.

೨.೧. ನಾರಾವಿಯಲ್ಲಿನ ತೈಲವರ್ಣದ ಭಿತ್ತಿಚಿತ್ರಗಳು

ನಾರಾವಿಯ ದಿಗಂಬರ ಜನ ಚೈತ್ಯಾಲಯದಲ್ಲಿನ ಗೋಡೆಯ ಮೇಲೆ ರಚಿಸಲಾದ ಷಡ್ಲೇಶ್ಯಗಳ ಚಿತ್ರ, ಸಂಸಾರ ಸುಖದ ಚಿತ್ರ, ಪದ್ಮಾವತಿಯಮ್ಮನವರ ಬಾಗಿಲ ಚೌಕಟ್ಟಿನ ಮೇಲೆ ರಚಿಸಲಾದ ವಿನ್ಯಾಸದ ಚಿತ್ರ ಹಾಗೂ ಅದೇ ಚೈತ್ಯಾಲಯದ ಉಪ ಮಂಟಪಗಳಲ್ಲಿರುವ ದ್ವಾರಪಾಲಕರ ಚಿತ್ರ ಮತ್ತು ಸಿಮೆಂಟಿನ ಶಿಲ್ಪ ಮಾಡಿ ಅದರ ಮೇಲೆ ತೈಲವರ್ಣವನ್ನು ಲೇಪಿಸಲಾಗಿರುವ ದ್ವಾರಪಾಲಕರ ಶಿಲ್ಪಚಿತ್ರ ಹಾಗೂ ನಾರಾವಿಯಲ್ಲಿನ ತೀರ್ಥಂಕರರ ವೃಕ್ಷ ವನದಲ್ಲಿರುವ ಆಡು, ಹುಲಿ ಸಿಮೆಂಟಿನ ತೈಲವರ್ಣ ಶಿಲ್ಪಗಳು ಇಲ್ಲಿ ಪ್ರಮುಖವಾಗಿದ್ದು, ಇವುಗಳ ಕುರಿತು ಇಲ್ಲಿ ವಿವೇಚಿಸಲಾಗಿದೆ.

ಚಿತ್ರ-೧. ಷಡ್ಲೇಶ್ಯಗಳ ಚಿತ್ರ

ತೈಲವರ್ಣದಿಂದ ಗೋಡೆಗಳ ಮೇಲೆ ರಚಿಸಲಾದ ಚಿತ್ರ ಇದಾಗಿದ್ದು, ಇಲ್ಲಿ ಆರು ರೀತಿಯ ಭಾವಗಳನ್ನು ಕಾಣುವಂತ ತಾತ್ವಿಕ ಉಪದೇಶದ ಚಿತ್ರ ಇದಾಗಿದೆ. ಈ ಚಿತ್ರದಲ್ಲಿ ನೇರಳೆ ಹಣ್ಣು ಬಿಡುವ ಮರವಿದ್ದು, ಆ ಮರದ ಕೆಳಗೆ ಆರು ಮಂದಿ ಹೋಗುತ್ತಿರುವಾಗ ಹಣ್ಣನ್ನು ಕಂಡು ತಿನ್ನುವ ಹಂಬಳವಾಗಿ ಮರದ ಕೆಳಗೆ ಹೋದಾಗಿ ಒಬ್ಬ ವ್ಯಕ್ತಿಯು ಕೆಳಗೆ ಬಿದ್ದಿರುವ ಹಣ್ಣುಗಳನ್ನು ಆಯ್ದು ತಿಂದರೆ ಮರದ ಮೇಲೆ ಏರಿ ಹಣ್ಣುಗಳನ್ನು ಕಿತ್ತು ತಿನ್ನುತ್ತಾನೆ. ಮತ್ತೊಬ್ಬನು ಮರದಲ್ಲಿಯ ಹಣ್ಣಿನ ಗೊಂಚುಗಳನ್ನು ಕಿತ್ತು ಹಣ್ಣನ್ನು ತಿಂದು ಕಾಯಿಯನ್ನು ಬಿಸಾಡುತ್ತಾನೆ. ಮತ್ತೊಬ್ಬ ಟೊಂಗೆಯನ್ನು

ಕಡಿದು, ಅದರಲ್ಲಿರುವ ಹಣ್ಣನ್ನು ಸೇವಿಸಿ, ಉಳಿದಿದ್ದನ್ನು ಬಿಸಾಡುತ್ತಾನೆ. ಮತ್ತೊಬ್ಬನು ಮೇಲಿನ ದೊಡ್ಡದಾದ ಕೊಂಬೆಯನ್ನು ಕತ್ತರಿಸಿ, ಮರದ ಸುಳಿಯನ್ನೇ ನಾಶಮಾಡುತ್ತಾನೆ. ಮತ್ತೊಬ್ಬನು ಮರದ ಬುಡವನ್ನೇ ಕಡಿದು, ಹಣ್ಣಿನ ಆಸೆಗಾಗಿ ಹಿಡೀ ಮರವನ್ನೇ ಕೊಲ್ಲುತ್ತಾನೆ. ಹೀಗೆ ಆರು ಶುದ್ಧ ಮನಸ್ಸಿನಿಂದ ಕ್ರೂರ ವಿಕೃತ ಮನಸ್ಸಿನವರೆಗೆ ವಿವಿಧ ಭಾವಗಳನ್ನು ನೋಡಬಹುದಾಗಿದೆ. ಈ ಚಿತ್ರದಲ್ಲಿ ಕೆಳಗೆ ಬಿದ್ದ ಹಣ್ಣುಗಳನ್ನು ಆಯ್ದು ತಿನ್ನುತ್ತಿರುವ ಬಿಳಿ ವರ್ಣದ ವ್ಯಕ್ತಿಯಿದ್ದು, ಮರದ ಮೇಲೆ ಎಡ ಭಾಗದಲ್ಲಿ ನಿಂತು ಹಣ್ಣುಗಳನ್ನು ಕಿತ್ತು ತಿನ್ನುವ ನಸುಗೆಂಪು ವರ್ಣದ ವ್ಯಕ್ತಿಯಿದ್ದಾನೆ. ಮರದ ಟೊಂಗೆಯನ್ನು ಕಡಿದು ಹಣ್ಣುಗಳನ್ನು ಸೇವಿಸುವ ಹಳದಿ ವರ್ಣದ ವ್ಯಕ್ತಿಯು ಬಲಬದಿಯನ್ನು ಕಡೆಯಲಿದ್ದಾನೆ. ಮಚ್ಚಿನಿಂದ ಟೊಂಗೆಯನ್ನು ಕಡಿಯುತ್ತಿರುವ ತಿಳಿ ನೀಲಿಯ ವ್ಯಕ್ತಿ ಬಲಬದಿಯ ಮಧ್ಯದಲ್ಲಿದ್ದಾನೆ. ಕಡು ನೀಲಿ ವ್ಯಕ್ತಿಯು ಕೊಡಲಿಯಿಂದ ಮರದ ಸುಳಿಯನ್ನು ಕತ್ತರಿಸುತ್ತಿದ್ದಾನೆ. ಕಡೆಯಲ್ಲಿ ಮರದ ಕೆಳಭಾಗದಲ್ಲಿ ಕಡುಗಪ್ಪು ವರ್ಣದ ವ್ಯಕ್ತಿಯು ಕೊಡಲಿಯನ್ನು ಹಿಡಿದು ಇಡೀ ಮರವನ್ನೇ ನಾಶಮಾಡುತ್ತಿರುವ ಚಿತ್ರ ಇಲ್ಲಿ ರಚಿಸಲಾಗಿದೆ. ಹಿಂಬದಿಯಲ್ಲಿ ತಿಳಿಗೆಂಪು, ಹಳದಿ ವರ್ಣಗಳಿಂದ ಆಕಾಶದ ಚಿತ್ರ ರಚಿಸಲಾಗಿದ್ದು, ಹಸಿರು, ಹಳದಿ ವರ್ಣಗಳನ್ನು ಬಳಸಿಕೊಂಡು ಭೂದೃಶ್ಯವನ್ನು ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಈ ಚಿತ್ರವು ಆರು ಭಾವಗಳ ಅಭಿವ್ಯಕ್ತಿ ಚಿತ್ರವಾಗಿದ್ದು, ಇದು ಮನುಕುಲಕ್ಕೆ ಸಂದೇಶವನ್ನು ನೀಡುತ್ತದೆ.

ಚಿತ್ರ–೨. ಸಂಸಾರ ಸುಖದ ಚಿತ್ರ

ಮೂಡಬಿದರೆಯ ಮಠದಲ್ಲಿ ಚಿತ್ರಿಸಲಾದಂತಹ ಚಿತ್ರದ ಯಥಾವತ್ತು ಮಾದರಿಯ ಚಿತ್ರ ಇದಾಗಿದ್ದು, ಇದರಲ್ಲಿ ಪುಷ್ಪಕ ವಿಮಾನದ ಬದಲು ಪಕ್ಷಿಯೊಂದರ ಮೇಲೆ ಸಾಗಿ ಬರುತ್ತಿರುವ ದೇವತೆಗಳನ್ನು ಮಾತ್ರ ಬದಲಾವಣೆ ಮಾಡಲಾಗಿದ್ದು, ಇನ್ನಾವುದೇ ವರ್ಣಸಂಯೋಜನೆ, ರೇಖಾವಿನ್ಯಾಸ ಬದಲಾಗಿರುವುದಿಲ್ಲ. ಇಷ್ಟಲ್ಲದೇ ಈ ಚಿತ್ರದ ಶೀರ್ಷಿಕೆಯಲ್ಲಿ ಸಂಸಾರ ಸುಖ ಅಡಿ ಬರಹವನ್ನು ಹಾಕಿದ್ದು, ಇನ್ನಾವುದೇ ಬದಲಾವಣೆಗಳು ಇಲ್ಲಿ ಆಗಿರುವುದಿಲ್ಲ.

ಚಿತ್ರ–೩. ಪದ್ಮಾವತಿಯಮ್ಮನವರ ದ್ವಾರಬಾಗಿಲ ಚಿತ್ರ

ಈ ದ್ವಾರಬಾಗಿಲ ಚಿತ್ರದಲ್ಲಿ ಬಾಗಿಲ ಚೌಕಟ್ಟಿನ ಸುತ್ತಲು ಹಳದಿ ವರ್ಣದಿಂದ ವಿನ್ಯಾಸ ಮಾಡಲಾಗಿದ್ದು, ಕೆಳಜಾಗದಲ್ಲಿ ದ್ವಾರಪಾಲಕರನ್ನು ತೋರಿಸಲಾಗಿದೆ. ಇವರ ಹಿಂಬದಿಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದೆ. ಚೌಕಟ್ಟಿನ ಮೇಲ್ಭಾಗದಲ್ಲಿ ಗೋಪುರದ ವಿನ್ಯಾಸವಿದ್ದು ಎಂದು ಬದಿಗಳಲ್ಲಿ ಕೀರ್ತಿಮುಖದ ರಚನೆಯನ್ನು ಮಾಡಲಾಗಿರುವುದು. ಇದರಲ್ಲಿ ಕೆಂಪು, ಹಳದಿ, ಹಸಿರು, ನೀಲಿ, ಕಂದು ವರ್ಣಗಳನ್ನು ಬಳಸಿ ಚಿತ್ರ ರಚಿಸಿದ್ದು, ಇದರ ಮುಂಬದಿಯಲ್ಲಿ ಕಬ್ಬಿಣದ ಬಾಗಿಲ ಚೌಕಟ್ಟನ್ನು ಕೂರಿಸಲಾಗಿದೆ.

ಚಿತ್ರ–೪. ತೈಲವರ್ಣದ ದ್ವಾರಪಾಲಕರು

ಈ ಚಿತ್ರಗಳು ಇದೇ ಚೈತ್ಯಾಲಯದ ಉಪಮಂಟಪದಲ್ಲಿದ್ದು, ಇಲ್ಲಿ ದ್ವಾರಪಾಲಕರು ನಾಲ್ಕು ಬಾಹುಗಳನ್ನು ಹೊಂದಿ ಮುಂದಿನ ಕೈಗಳಲ್ಲಿ ಗಧೆಯನ್ನು ಹಿಡಿದಿದ್ದು, ಅದರ ಮೇಲೆ ಸುರಳಿ ಆಕಾರದಲ್ಲಿ ಸರ್ಪವು ಸುತ್ತಿಕೊಂಡಿದೆ. ಹಿಂಬದಿಯ ಕೈಯಲ್ಲಿ ಪಾಷ ಹಾಗು ಕಮಲಗಳನ್ನು ಹಿಡಿದು ಕಿರೀಟಾಭರಣಗಳನ್ನು ಧರಿಸಿ, ಕೊರಳಲ್ಲಿ ಮಾಲೆಯನ್ನು ಹಾಕಿಕೊಂಡು ಇರುವಂತೆ ಚಿತ್ರವನ್ನು ಚಿತ್ರಿಸಲಾಗಿದೆ. ಹಿಂಬದಿಯಲ್ಲಿ ನೀಲಿ ವರ್ಣವನ್ನು ಲೇಪಿಸಲಾಗಿದ್ದು, ತಿಳಿಗಪ್ಪು ವರ್ಣದಲ್ಲಿ ಕಿರೀಟವನ್ನು ಚಿತ್ರಿಸಲಾಗಿದೆ.

ಚಿತ್ರ–೫. ದ್ವಾರಪಾಲಕರ ಸಿಮೆಂಟಿನ ಶಿಲ್ಪದ ತೈಲವರ್ಣ

ಈ ಚಿತ್ರದಲ್ಲಿರುವ ದ್ವಾರಪಾಲಕರನ್ನು ಸಿಮೆಂಟಿನ ಶಿಲ್ಪವನ್ನು ಮಾಡಲಾಗಿದ್ದು, ಅದರ ಮೇಲೆ ತೈಲವರ್ಣದಿಂದ ಬಣ್ಣ ಲೇಪಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ಬಣ್ಣವನ್ನು ಹಾಗೂ ಅದರ ಮೇಲೆ ಪರದೆಗಳನ್ನು ಹಸಿರು, ಕೇಸರಿ, ಬಿಳಿ ವರ್ಣಗಳಿಂದ ಲೇಪಿಸಲಾಗಿದೆ. ಈ ಶಿಲ್ಪದಲ್ಲಿ ದ್ವಾರಪಾಲಕರು ನಾಲ್ಕು ಬಾಹುಗಳನ್ನು ಹೊಂದಿ ಮುಂಬದಿಯ ಕೈಯಲ್ಲಿ ಗಧೆ ಹಾಗೂ ಅಭಯ ಹಸ್ತವನ್ನು, ಹಿಂಬದಿಯ ಕೈಗಳಲ್ಲಿ ಬಿಲ್ಲುಪಾಶ ಹಿಡಿದಿರುವಂತೆ ಚಿತ್ರಿಸಲಾಗಿದೆ.

ಚಿತ್ರ–೬. ತೀರ್ಥಂಕರರ ವೃಕ್ಷವನದಲ್ಲಿಯ ಹಸು ಹುಲಿ ಚಿತ್ರ

ನಾರಾವಿಯ ಚೈತ್ಯಾಲಯದಿಂದ ಸ್ವಲ್ಪ ದೂರದಲ್ಲಿರುವ ಈ ವೃಕ್ಷ ವನದಲ್ಲಿ ಹಸು ಮತ್ತು ಹುಲಿ ಒಂದೇ ಕೊಳದಲ್ಲಿ ನೀರು ಕುಡಿಯುತ್ತಿದ್ದು, ಕರುವು ಹುಲಿಯ ಹಾಲನ್ನು ಕುಡಿಯುತ್ತಿದ್ದರೆ, ಹುಲಿ ಮರಿಯು ಹಸುವಿನ ಹಾಲು ಕುಡಿಯುವಂತೆ ಇಲ್ಲಿ ಸಿಮೆಂಟಿನ ಶಿಲ್ಪ ರಚಿಸಲಾಗಿದ್ದು, ಅದರ ಮೇಲೆ ತೈಲವರ್ಣದಿಂದ ವರ್ಣಲೇಪಿಸಲಾಗಿದೆ. ಈ ಶಿಲ್ಪವು ಅಹಿಂಸೆಯನ್ನು ಬೋಧಿಸುವ ಶಿಲ್ಪವಾಗಿದ್ದು, ಇದನ್ನು ಮನುಷ್ಯರಲ್ಲಿ ಗೋಮುಖವ್ಯಾಘ್ರರಂತಿರುವ ಭಾವಗಳ ಪರಿವರ್ತನೆಯಾಗಲೆಂದು ಚಿತ್ರಶಿಲ್ಪವನ್ನು ಇಲ್ಲಿ ನಿರ್ಮಿಸಲಾಗಿರುವುದು.

೨.೨. ನಲ್ಲೂರಿನ ಶ್ರೀ ಜೈನಮಠದ ತೈಲವರ್ಣಚಿತ್ರಗಳು

ನಲ್ಲೂರಿನ ಶ್ರೀ ಜೈನಮಠದಲ್ಲಿ ತೈಲವರ್ಣಚಿತ್ರಗಳಿದ್ದು, ಇವುಗಳನ್ನು ಗೋಡೆಯ ಮೇಲೆ ಹಾಗೂ ಬಟ್ಟೆಯನ್ನು ರೊಟ್ಟಿಗೆ ಅಂಟಿಸಿ ತಯಾರಿಸಲಾದ ಫಲಕಗಳ ಮೇಲೂ ಚಿತ್ರರಚನೆಯನ್ನು ಇಲ್ಲಿ ಮಾಡಲಾಗಿರುವುದು. ಇಲ್ಲಿ ದ್ವಾರಪಾಲಕರು, ನಿರ್ವಾಣಭೂಮಿ, ಮಠದ ಗುರುಗಳು, ಸಿದ್ಧಿ ಕ್ಷೇತ್ರಗಳನ್ನು ಇಲ್ಲಿ ಚಿತ್ರಿಸಲಾಗಿದೆ.

ಚಿತ್ರ–೧. ದ್ವಾರಪಾಲಕರು

ದ್ವಾರಬಾಗಿಲಲ್ಲಿ ಎರಡು ಬದಿಯಲ್ಲಿಯೂ ದ್ವಾರಪಾಲಕ ಚಿತ್ರಗಳಿದ್ದು, ಇವರನ್ನು ನೋಡಿದರೆ ಶ್ರೀಮಾನ್ ವಿಷ್ಣುವಿನ ರೀತಿಯಲ್ಲಿ ಚಿತ್ರಿಸಲಾಗಿರುವುದು ಈ ಚಿತ್ರದಲ್ಲಿ ದ್ವಾರಪಾಲಕರಿಗೆ ನಾಲ್ಕು ಬಾಹುಗಳಿದ್ದು, ಮುಂದಿನ ಕೈಯಲ್ಲಿ ಗಧೆ ಮತ್ತು ಕಮಲದ ಹೂವನ್ನು ಹಿಡಿದು ನಿಂತಿರುವಂತೆ ಚಿತ್ರಿಸಲಾಗಿದೆ. ಹಿಂಬದಿಯ ಚಿತ್ರದಲ್ಲಿ ಶಂಕ, ಚಕ್ರಗಳನ್ನು ಹಿಡಿದಿರುವಂತಿದ್ದು, ಮೇಲೆ ಕಮಾನನ್ನು ರಚಿಸಿ, ಅದರ ಮೇಲೆ ಹೂಬಳ್ಳಿಯ ವಿನ್ಯಾಸವನ್ನು ಚಿತ್ರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ಹಸಿರು ವರ್ಣಗಳನ್ನು ಲೇಪಿಸಲಾಗಿದೆ. ಈ ದ್ವಾರಪಾಲಕರು ಕಿರೀಟಾಭರಣ ಕಚಿತನಾಗಿ ಹೂಮಾಲೆಯನ್ನು ಧರಿಸಿ ನಿಂತಿರುವಂತೆ ತೋರಿಸಲಾಗಿದೆ. ಇಲ್ಲಿ ನೀಲಿ, ಹಸಿರು, ಹಳದಿ, ಸುವರ್ಣ, ಕಂದು, ಕಪ್ಪು, ಕೆಂಪು, ಬಿಳಿ ವರ್ಣಗಳಿಂದ ಚಿತ್ರವನ್ನು ಸಂಪೂರ್ಣಗೊಳಿಸಲಾಗಿದ್ದು, ತೀರಾ ಇತ್ತೀಚಿನ ಚಿತ್ರವೆನಿಸುವುದು.

ಚಿತ್ರ–೨. ಸಿದ್ಧಿ ಕ್ಷೇತ್ರಗಳ ಚಿತ್ರಗಳು

ಜೈನ ಹಲವು ಸಿದ್ಧಿ ಕ್ಷೇತ್ರಗಳಿದ್ದು, ಅವುಗಳಲ್ಲಿ ಪ್ರಮುಖವಾದವುಗಳನ್ನು ಇಲ್ಲಿ ಚಿತ್ರಿಸಲಾಗಿರುವುದು. ಮೊದಲಿಗೆ ಕೈಲಾಸಗಿರಿ ಶ್ರೀ ಆದಿನಾಥ ಸ್ವಾಮಿ ತೀರ್ಥಂಕರರ ನಿರ್ವಾಣ ಭೂಮಿಯ ಚಿತ್ರವಿದ್ದು, ಇಲ್ಲಿ ಹಿನ್ನೆಲೆಯನ್ನು ನೀಲಿ ವರ್ಣದಿಂದ ಚಿತ್ರಿಸಿದ್ದು, ಹಿಮದ ಬೆಟ್ಟ ಸಾಲುಗಳನ್ನು ಬಿಳಿ ಹಾಗೂ ತಿಳಿ ನೀಲಿವರ್ಣದಿಂದ ಚಿತ್ರಿಸಲಾಗಿರುವುದು. ಎರಡನೆಯದು ಶ್ರೀ ಚಂಪಾಪುರಿ (ಮಂದಾರಗಿರಿ) ಸಿದ್ಧಿಕ್ಷೇತ್ರದ ಚಿತ್ರವಿದ್ದು, ಈ ತೈಲವರ್ಣದ ಭಿತ್ತಿಚಿತ್ರದಲ್ಲಿ ಹಲವು ಗೋಪುರಾಕಾರಗಳಿದ್ದು, ಮಧ್ಯದಲ್ಲೊಂದು ರಸ್ತೆ ಅದರ ಹಿಂದೊಂದು ಜೈನರ ಮಂಟಪ, ಆ ಮಂಟಪ ಬಲಬದಿಯಲ್ಲಿ ಗೊಮ್ಮಟ ಮೂರ್ತಿಯನ್ನು ಚಿತ್ರಿಸಲಾಗಿರುವುದು. ಅದರ ಹಿಂದೆ ಬಲಬದಿಯಲ್ಲಿ ಹಸಿರುವರ್ಣದ ಶಿಖರವನ್ನು ತೋರಿಸಲಾಗಿದ್ದು, ಮಧ್ಯಭಾಗದಲ್ಲಿ ಮತ್ತೊಂದು ಜೈನ ಚೈತ್ಯಾಲಯವನ್ನು ತೋರಿಸಲಾಗಿದೆ. ಅದರ ಮೇಲೂ ಜೈನ ಧ್ವಜವನ್ನು ನೆಡಲಾಗಿರುವುದು. ಹಾಗೆ ಬೆಟ್ಟದ ತುದಿಯಲ್ಲು ಮೂರು ಮಂಟಪಗಳನ್ನು ತೋರಿಸಲಾಗಿರುವುದು. ಮೂರನೆಯದು ಪಾವಾಪುರಿಯ ಸಿದ್ಧಕ್ಷೇತ್ರದ ಚಿತ್ರವನ್ನು ಮಠದ ಎಡಗೋಡೆಯ ಮೇಲೆ ಚಿತ್ರಿಸಲಾಗಿದ್ದು, ಇಲ್ಲಿ ಕಮಾನು ಗೋಪುರಗಳ ಶ್ವೇತ ಮಂಟಪವಿದ್ದು, ಇದನ್ನು ಸರೋವರ ದಡದಲ್ಲಿ ಇರುವಂತೆ ತೋರಿಸಲಾಗಿದೆ. ಇದರ ಹಿನ್ನೆಲೆಯಲ್ಲಿ ತಿಳಿನೀಲಿ, ಬಿಳಿ, ಹಳದಿ, ತಿಳಿಗೆಂಪು ವರ್ಣಗಳನ್ನು ಬಳಸಿ ಆಕಾಶದ ಚಿತ್ರ ರಚಿಸಲಾಗಿದ್ದು, ಹಿಂಬದಿಯಲ್ಲಿ ಮರ–ಗಿಡದ ದೃಶ್ಯವನ್ನು ಚಿತ್ರಿಸಿದ್ದಾರೆ. ಉಳಿದಂತೆ ಈ ಮಂಟಪದ ಪ್ರತಿಬಿಂಬವನ್ನು ನೀರಿನಲ್ಲಿ ತೋರಿಸಲಾಗಿರುವುದು.

ನಾಲ್ಕನೆಯದು ನಿರ್ವಾಣಭೂಮಿ ಚಿತ್ರವಾದ ಶ್ರೀ ಸಮ್ಮೇದ ಶಿಖರ ಸಿದ್ಧಿ ಕ್ಷೇತ್ರವನ್ನು ಇಲ್ಲಿ

ಚಿತ್ರಿಸಲಾಗಿದ್ದು, ಈ ಚಿತ್ರದಲ್ಲಿ ಹಿನ್ನೆಲೆಯನ್ನು ತಿಳಿ ನೀಲಿ ವರ್ಣದಲ್ಲಿ ಚಿತ್ರಿಸಲಾಗಿದ್ದು, ಮುಂದೆ ಜೈನ ಮಂಟಪವನ್ನು, ದೇವಾಲಯಗಳನ್ನು, ರಥ, ಮಂದಿರ ಮನೆ ಹಸುಕರುಗಳನ್ನು ರಸ್ತೆ ಅಲ್ಲಿ ಚಲಿಸುವ ವಾಹನಗಳನ್ನು ಹೀಗೆ ಎಲ್ಲವನ್ನು ಚಿತ್ರಿಸಲಾಗಿದ್ದು, ಸಮ್ಮೇದ ಶಿಖರವನ್ನು ಹಸಿರು ವರ್ಣದಲ್ಲಿ ಚಿತ್ರಿಸಲಾಗಿದ್ದು, ಅದರ ಮೇಲೆ ತೀರ್ಥಂಕರರ ನಿರ್ವಾಣ ಹೊಂದಿದ ಜಾಗದಲ್ಲಿಯ ಬಿಳಿಬಣ್ಣದ ಮಂದಿರಗಳನ್ನು ಇಲ್ಲಿ ತೋರಿಸಲಾಗಿರುವುದು, ಅದರ ಮೇಲೆ ಧ್ವಜಗಳನ್ನು ಸಹ ಹಾರಿಸಲಾಗುತ್ತಿರುವಂತೆ ತೋರಿಸಿದ್ದು, ಹಿಂದಿನಿಂದ ಪಕ್ಷಿಗಳು ಹಾರಿ ಬರುತ್ತಿರುವಂತೆ ತೋರಿಸಲಾಗಿದೆ.

ಚಿತ್ರ–೩. ಆನೆಯ ಮೇಲೆ ಗುರುಗಳು ಸಾಗುತ್ತಿರುವ ಚಿತ್ರ

ಈ ಚಿತ್ರವು ಈ ಜೈನಾಲಯವನ್ನು ಪ್ರವೇಶಿಸುವ ದ್ವಾರದಲ್ಲಿದ್ದು, ಇಲ್ಲಿ ಈ ಮಠದ ಜಿನ ಗುರುಗಳು ತಮ್ಮ ಕೈಯಲ್ಲಿ ದೇವರ ವಿಗ್ರಹವನ್ನು ಹಿಡಿದು ಆನೆಯ ಅಂಬಾರಿಯ ಮೇಲೆ ಕುಳಿತು ಸಾಗುತ್ತಿರುವಂತೆ ಇಲ್ಲಿ ತೋರಿಸಲಾಗಿದ್ದು, ಆನೆಯು ಬಿಳಿಯ ಮಾಲೆಯನ್ನು ಹಿಡಿದು ಸೊಂಡಿಲನ್ನು ಎತ್ತಿ ಸಾಗುತ್ತಿರುವುದು ಆನೆಯ ಶಿರದಬಳಿ ಮಾಹುತನಿದ್ದು, ಆನೆಯ ಬೆನ್ನ ಮೇಲೆ ಹಳದಿ ವರ್ಣದ ವಸ್ತ್ರವನ್ನು ಹಾಕಲಾಗಿದ್ದು, ಅದರ ಮೇಲೆ ಜೈನ ಪುರುಷನ ಚಿತ್ರವಿದ್ದು, ಸುತ್ತಲೂ ಪ್ರಭಾವಳಿಯನ್ನು ತೋರಿಸಲಾಗಿದೆ. ಹಿನ್ನೆಲೆಯಲ್ಲಿ ನೀಲಿ ವರ್ಣವನ್ನು ಲೇಪಿಸಿ, ಚಿತ್ರವನ್ನು ಸಂಪೂರ್ಣಗೊಳಿಸಲಾಗಿದೆ.

೨.೩. ಅರಿಕಲ್ಲು ಬಸದಿ

ಕರಾವಳಿಯ ಪ್ರದೇಶದ ಉಪ್ಪಿನ ಅಂಗಡಿಯ ಬಳಿಯಲ್ಲಿ ಇರುವ ಈ ಅರಿಕಲ್ಲು ಬಸದಿಯಲ್ಲಿಯೂ ತೈಲವರ್ಣದ ಚಿತ್ರಗಳಿದ್ದು, ಇವುಗಳ ಗೋಡೆಗಳ ಮೇಲೆ ರಚಿಸಲಾಗಿರುವುದು. ಪ್ರವೇಶದ್ವಾರದ ಎಡಬದಿಯಲ್ಲಿ ಇರುವ ಚಿತ್ರದಲ್ಲಿ ಗೋಡೆಯ ಬದಿಯಲ್ಲಿ ನಾಲ್ಕು ಬಾಹುಗಳನ್ನು ಹೊಂದಿರುವ ಲಕ್ಷ್ಮಿಯು ಕಮಲದ ಕೊಳದಲ್ಲಿದ್ದು, ಕಮಲದ ಮೇಲೆ ನಿಂತಿರುವಂತೆ ತೋರಿಸಲಾಗಿದೆ. ತನ್ನ ಹಿಂದಿನ ಕೈಯಲ್ಲಿ ಕಮಲವನ್ನು ಹಿಡಿದಿದ್ದು, ಮುಂದೆ ಅಭಯ ಹಸ್ತಗಳನ್ನು ಹಿಡಿದಿರುವಂತೆ, ಹಿನ್ನೆಲೆಯಲ್ಲಿ ಮರ–ಗಿಡ, ಆಕಾಶ, ಕೊಳ, ಕೊಳದಲ್ಲಿ ಆನೆಯು ಹೂಮಾಲೆಯನ್ನು ಹಿಡಿದು ನಿಂತಿರುವಂತೆ ತೋರಿಸಲಾಗಿದೆ. ಎರಡೂ ಕಡೆಯಲ್ಲಿಯೂ ಕಮಾನು ಕಂಬಳಿಗಳಿದ್ದು, ಹಸಿರು ವರ್ಣದಲ್ಲಿ ರಚಿಸಿ, ಅದರ ಮೇಲಿನ ಪಟ್ಟಿಯಲ್ಲಿ ಹೂ ಬಳ್ಳಿಯ ಚಿತ್ರಗಳನ್ನು ಚಿತ್ರಿಸಲಾಗಿದೆ.

ಬಾಗಿಲ ಬದಿಯಲ್ಲಿ ನಿಂತಿರುವ ದ್ವಾರಪಾಲಕನ ಚಿತ್ರವಿದ್ದು, ನಾಲ್ಕು ಬಾಹುಗಳನ್ನು ಹೊಂದಿದ್ದು, ಹಿಂದೆ ಶಂಕ ಚಕ್ರಗಳನ್ನು ತೋರಿಸಲಾಗಿದ್ದು, ಮುಂದೆ ಕೈಯಲ್ಲಿ ಈಟಿಯನ್ನು ಹಿಡಿದಿರುವ ರೀತಿಯಲ್ಲಿ ಚಿತ್ರಿಸಲಾಗಿರುವುದು. ಇವರ ಹಿಂಬದಿಯಲ್ಲಿ ನೀಲಿ ಆಗಸ ಗುಡ್ಡಗಳನ್ನು

ಚಿತ್ರಿಸಲಾಗಿದೆ. ಪೀಠದ ಮೇಲೆ ನಿಂತಿರುವ ರೀತಿಯಲ್ಲಿ ಚಿತ್ರಿಸಲಾಗಿದ್ದು, ಬಲಭಾಗದ ಕೆಳಮೂಲೆಯಲ್ಲಿ ಚಿತ್ರಿವಿರುವ ಗಾರೆ ಕಿತ್ತುಹೋದ ಕಾರಣ ಚಿತ್ರ ಸ್ವಲ್ಪಪಾಲಿನ ನಾಶವನ್ನು ಕಾಣಬಹುದು. ಇದೇ ರೀತಿಯಲ್ಲಿ ದ್ವಾರ ಬಲಭಾಗದಲ್ಲಿಯೂ ಸಹ ದ್ವಾರಪಾಲಕನ ಚಿತ್ರವಿದ್ದು, ಎಡಬದಿಯ ಯಥಾವತ್ತು ಚಿತ್ರ ಇದಾಗಿದೆ. ಇದರ ಬಲ ಬದಿಯಲ್ಲಿ ಸರಸ್ವತಿಯು ಕಲ್ಲಿನ ಮೇಲೆ ಕುಳಿತುಕೊಂಡು ಮುಂದಿನ ಕೈಗಳಲ್ಲಿ ವೀಣೆಯನ್ನು ನುಡಿಸುತ್ತಿದ್ದು, ಹಿಂದಿನ ಕೈಯಲ್ಲಿ ಜಪಮಾಲೆ ಹಾಗೂ ಗ್ರಂಥವನ್ನು ಹಿಡಿದಿರುವ ರೀತಿಯಲ್ಲಿ ಚಿತ್ರವನ್ನು ಚಿತ್ರಿಸಲಾಗಿದ್ದು, ಇವರ ಮುಂದೆ ನವಿಲಿನ ಚಿತ್ರವನ್ನು ಕಾಣಬಹುದಾಗಿದೆ. ಇದು ರವಿವರ್ಮನವರ ಕ್ಯಾಲೆಂಡರ್ ಚಿತ್ರಗಳ ಪ್ರತಿರೂಪದ ಚಿತ್ರವಾಗಿದೆ.

೨.೪. ಬಲ್ಲಮಂಜದಲ್ಲಿಯ ತೈಲವರ್ಣ ಭಿತ್ತಿಚಿತ್ರಗಳು

ಬೆಳ್ತಂಗಡಿಯ ಬಳಿಯಲ್ಲಿರುವ ಬಲ್ಲಮಂಜದಲ್ಲಿ ಹಲವು ಜಿನ ನೀತಿ ಉಪದೇಶವಿರುವ ಚಿತ್ರಗಳಿದ್ದು, ಅವುಗಳ ಮನುಷ್ಯನಿಗೆ ತಿಳಿಯಬೇಕಾದ ಸತ್ಯಗಳನ್ನು ತಿಳಿಸುವ ಪ್ರಯತ್ನವನ್ನು ಮಾಡುತ್ತವೆ. ಇದರ ಕುರಿತಾಗಿ ಗೋಡೆಯ ಮೇಲೆ ತೈಲವರ್ಣದ ಚಿತ್ರಗಳನ್ನು ಚಿತ್ರಿಸಲಾಗಿದೆ. ಇವುಗಳ ವಸ್ತುವಿಷಯಗಳು ಅನಿತ್ಯ, ಏಕತ್ವ, ಸಂಸಾರ, ಅಕರಣ, ಅಶುಚಿತ್ವ ಹೀಗೆ ಹಲವು ಜನತತ್ವಗಳ ಕುರಿತಾಗಿ ಇಲ್ಲಿ ಚಿತ್ರಗಳನ್ನು ಚಿತ್ರಿಸಲಾಗಿದ್ದು, ಇವುಗಳ ಸಂದೇಶವು ಸಾಮಾನ್ಯ ಜನರಿಗೂ ಅರ್ಥವಾಗುವಂತಿವೆ.

ಅನಿತ್ಯ : ಅರಸನಾಗಲಿ, ಆನೆಯೇರಿದವನೇ ಆಗಲಿ ಮೃತ್ಯ ಸರದಿಯನ್ನು ಕಾಯುತ್ತಿರುವುದು ಎಂಬ ಶೀರ್ಷಿಕೆಯನ್ನು ಹೊಂದಿರುವ ಚಿತ್ರ ಇದಾಗಿದ್ದು, ಈ ಚಿತ್ರದಲ್ಲಿ ಅರಸನು ಸಭೆಯಲ್ಲಿ ಕುಳಿತಿರುವ ಹಾಗೆ, ಆನೆಯು ಅಂಭಾರಿಯಲ್ಲಿ ಸಾಗಿಬರುತ್ತಿರುವ ಹಾಗೆ ಮತ್ತೊಬ್ಬ ವ್ಯಕ್ತಿಯು ಸತ್ತ ಶವದ ಮುಂದೆ ನಿಂತಿರುವಹಾಗೆ ಚಿತ್ರಗಳನ್ನು ರಚಿಸಿದ್ದು, ಸಾವಿಗೆ ಎಲ್ಲರೂ ಸಾಮಾನ್ಯರೆ ಎಂಬ ಗೋಷವನ್ನು ಇದು ಸಾರುವುದು. ಇದರಲ್ಲಿ ಕಲಾವಿದನ ಸಂಯೋಜನಾ ಕೌಶಲ್ಯವು ಎದ್ದು ಕಾಣುವುದು.

ಏಕತ್ವ : ಈ ಜೀವಾತ್ಮನಿಗೆ ಬಂಧುಬಾಂದವರಿಲ್ಲ. ಸಖರಾರೂ ಇಲ್ಲ, ಹುಟ್ಟು ಸಾವಿನಲ್ಲಿ ಅವನೊಬ್ಬನೇ ಎಂಬ ತಲೆ ಬರಹವನ್ನು ಈ ಚಿತ್ರವು ಹೊಂದಿದೆ. ಈ ಚಿತ್ರದಲ್ಲಿ ರಾಜಾ ರಾಣಿ ಹಾಗು ಅವರ ಮಗು ಇವರು ಕುಳಿತಿದ್ದು, ಸೇವಕನು ನಿಂತು ರಾಜರ ಮಾತುಗಳನ್ನು ಕೇಳಿಸಿಕೊಳ್ಳುತ್ತಿರುವನು. ಇಲ್ಲಿ ರಾಣಿ ಮಗುವಿನ ಮೇಲಿರುವ ಮೇಹ ರಾಜನಿಗೆ ತನ್ನ ಮಡದಿ ಮತ್ತು ಮಗುವಿನ ಮೇಲಿನ ಮೋಹ ಅಧಿಕಾರದ ಮೋಹ ಇವುಗಳನ್ನು ತೋರಿಸಿದರೆ, ಇದರ ಹಿಂದೆ ಸತ್ತ ಮನುಷ್ಯನನ್ನು ನಾಲ್ಕುಜನ ಹೊತ್ತು ಸಾಗುತ್ತಿರುವ ರೀತಿಯಲ್ಲಿ ಚಿತ್ರಿಸಲಾಗಿದೆ. ಇದರ

ಭಾವಾರ್ಥ ಯಾವ ಸಂಬಂಧಗಳು ಸಹ ಕೊನೆಗಾಲದಲ್ಲಿ ಬರುವುದಿಲ್ಲ. ಸತ್ತರೆ ಎಲ್ಲರೂ ಸಮಾನರು. ಹುಟ್ಟುತ್ತ ಒಬ್ಬನೇ, ಸಾಯುತ್ತ ಒಬ್ಬನೆ ಇದರ ನಡುವೆ ಹರಿಷಡ್ವರ್ಗಗಳ ಭಾವದಲ್ಲಿ ಸಿಲುಕಿ ಮೋಹಿತನಾಗುವನು ಎಂಬ ಸಂದೇಶ ಈ ಚಿತ್ರದಲ್ಲಿದೆ.

ಸಂಸಾರ : ಮಡ್ಡಿಲ್ಲದೆ ಬಡವನಿಗೆ ಚಿಂತೆ ದುರಾಶೆಯಿಂದ ಶ್ರೀಮಂತನಿಗೆ ಚಿಂತೆ ಇಲ್ಲಿ ಯಾರಿಗೂ ಸುಖವಿಲ್ಲ ಎಂಬ ತಲೆಬರಹದಂತೆ ಇಲ್ಲಿ ಬಡವನನ್ನು ಶ್ರೀಮಂತನ ಬಳಿ ಹೋಗಿ ಸಾಲ ಬೇರುತ್ತಿರುವುದು ಇದರ ಬದಿಯಲ್ಲಿ ಶ್ರೀಮಂತನು ಮತ್ತಷ್ಟು ಹಣ ಸಂಪಾದಿಸಲು ಬಡವರನ್ನು ದುಡಿಸಿಕೊಳ್ಳುತ್ತಿರುವುದು ಎರಡೂ ಚಿತ್ರಗಳನ್ನೂ ಮಿಶ್ರಣ ಮಾಡಿ ತೋರಿಸಲಾಗುವುದು.

ಆಶರಣ : ದೇವ ದೇವತೆಗಳಾಗಲಿ ಬಂಧು ಪರಿವಾರದವರಾಗಲಿ, ನಾವಿನಂಚಿನಲ್ಲಿರುವ ಜೀವಾತ್ಮವನ್ನು ರಕ್ಷಿಸಲಾರರು ಎಂಬ ಶೀರ್ಷಿಕೆಯನ್ನು ಇಲ್ಲಿ ಬರೆಯಲಾಗಿದ್ದು, ಮೂರು ಕಲ್ಪನೆಯನ್ನು ಒಂದೇ ಚಿತ್ರದಲ್ಲಿ ತೋರಿಸಲಾಗಿರುವುದು. ರಾಜನು ಅನಾರೋಗ್ಯದಿಂದ ಮಲಗಿದ್ದು, ವೈದ್ಯ ಮಾಡುತ್ತಿದ್ದು, ನಂತರದಲ್ಲಿ ಪೂಜಾಯಾಗವನ್ನು ಮಾಡುತ್ತಿರುವುದು. ಮೂರನೆ ಹಂತದಲ್ಲಿ ಊರಿಂದ ಹೊರಗೆ ರಾಜನ ಚಿತೆ ಉರಿಯುತ್ತಿರುವುದನ್ನು ಚಿತ್ರಿಸಲಾಗಿರುವುದು.

ಅನ್ಯತ್ವ : ಈ ದೇವೆ ನಮ್ಮದಲ್ಲವೆಂದ ಮೇಲೆ ಧನ, ಕನಕ ಬಂಧು, ಮಿತ್ರರು ನಮ್ಮವರಾಗುವುದೆಂತು? ಎಂಬ ಶೀರ್ಷಿಕೆಯನ್ನು ಹೊಂದಿರುವ ಈ ಚಿತ್ರದಲ್ಲಿ ದಿಗಂಬರ ತೀರ್ಥಂಕರರು ಮರದಡಿ ಕೂತು ಅಭಯ ಹಸ್ತವನ್ನು ತೋರುತ್ತ, ದಂಪತಿಗಳು ಹಾಗೂ ಅವರ ಇಬ್ಬರು ಮಕ್ಕಳ ಕಡೆ ತಿರುಗಿ ನುಡಿಯುತ್ತಿರುವ ಇಂಥ ವಚನದ ದೃಶ್ಯವಿದಾಗಿದ್ದು, ಹಿನ್ನೆಲೆಯಲ್ಲಿ ಮರಗಿಡ, ಸರೋವರ, ಮನೆಯನ್ನು ತೋರಿಸಲಾಗಿರುವುದು.

ಅಶುಚಿತ್ವ : ಅಸ್ಥಪಂಜರಕೆ ಚರ್ಮದ ಹೊದಿಕೆ ನವದ್ವಾರಗಳಿಂದ ಮಲ ಸೋರುತಿಹುದು, ಈ ದೇಹಕ್ಕಿಂತ ಅಶುಚಿಯ ಗೃಹವಿಲ್ಲ ಎಂಬ ಶೀರ್ಷಿಕೆ ಇಲ್ಲಿದೆ. ಇಲ್ಲಿ ವ್ಯಕ್ತಿಯೊಬ್ಬನು ಮರದಡಿ ಮಲಗಿದ್ದು, ಚರ್ಮವಿಲ್ಲದ ದೇಹದ ಚಿತ್ರವನ್ನು ತೋರಿಸಿದ್ದು, ಮಾಂಸಕಂಡ ಜಚ್ಚರ ಕರುಳುಗಳನ್ನು ತೋರಿಸಿದ್ದು, ಹಿಂಬದಿಯಲ್ಲಿ ಮತ್ತೊಂದು ಚಿತ್ರವನ್ನು ಸಂಯೋಜನೆ ಮಾಡಿದ್ದು, ಅಲ್ಲಿ ವ್ಯಕ್ತಿಯೊಬ್ಬನು ಕುಳಿತು ನೀರಿನಿಂದ ಸ್ನಾನಮಾಡುತ್ತಿರುವಂತೆ ತೋರಿಸಲಾಗಿದೆ. ಈ ಚಿತ್ರವು ಮನುಷ್ಯನಿಗಿರುವ ವ್ಯಕ್ತಿಯ ಅವನ ಬಾಹ್ಯ ಶುಚಿತ್ವದ ಬಗ್ಗೆ ಗಮನಹರಿಸುವನು. ಆದರೆ ಆಂತರಿಕ ಶುಚಿತ್ವದ ಬಗ್ಗೆ ಏಕಾಂಗಿ ಗಮನಿಸುವುದಿಲ್ಲ ಎಂಬುದರ ತಾತ್ಪರ್ಯ ಈ ಸಂದೇಶದ ಚಿತ್ರಗಳಲ್ಲಿ ಕಾಣಬಹುದಾಗಿದೆ. ಹೀಗೆ ಮೂಡಬಿದರೆ, ನಾರಾವಿ, ನಲ್ಲೂರು, ಅರಿಕಲ್ಲೂ ಬಸದಿಯ ಹಾಗೂ ಬಲ್ಲಮಂಜದಲ್ಲಿರುವ ಗೋಡೆಯ ಮೇಲಿನ ತೈಲವರ್ಣ ಭಿತ್ತಿಚಿತ್ರಗಳನ್ನು ನಾವು ಕಾಣಬಹುದಾಗಿದ್ದು, ಇಲ್ಲಿ ಹಲವು

ಚಿತ್ರಗಳು ಮೊದಲು ನೈಸರ್ಗಿಕ ವರ್ಣಗಳಿಂದ ಮೂಡಿ, ಅವುಗಳು ನಶಿಸಿ ಹೋದಮೇಲೆ ಅಲ್ಲಿ ಈ ತೈಲವರ್ಣ ಚಿತ್ರಗಳನ್ನು ಹತ್ತು ಇಪ್ಪತ್ತು ದಶಕಗಳಲ್ಲಿ ಮಾಡಲಾಗಿರುವುದನ್ನು ನಾವಿಲ್ಲಿ ಗಮನಿಸಬಹುದಾಗಿದೆ.

೪. ಬಟ್ಟೆಯ ಮೇಲಿನ ತೈಲವರ್ಣದ ಚಿತ್ರಗಳು

ಶ್ರವಣಬೆಳಗೊಳದ ಶ್ರೀಮಠದ ದ್ವಾರಬಾಗಿಲ ಎಡಭಾಗದಲ್ಲಿ ಇರುವ ಈ ಚಿತ್ರಗಳು ಕ್ಯಾನ್ವಾಸ್ ಬಟ್ಟೆಯನ್ನು ರೊಟ್ಟಿನ ಮೇಲೆ ಅಂಟಿಸಿರುವ ಫಲಕಗಳ ಮೇಲೆ ಈ ಚಿತ್ರಗಳಿದ್ದು, ಬಾಹುಬಲಿ ಹಾಗೂ ಇವರ ತಾಯಿಯ ಚಿತ್ರ ಮತ್ತು ಮನ್ಮತಾವಸ್ತಿ ಚಿತ್ರವನ್ನು ಇಲ್ಲಿ ರಚಿಸಲಾಗಿರುವುದು. ಎರಡು ಚಿತ್ರಗಳೂ ಸಹ ಸಿಥಿಲಾವಸ್ಥೆಗೆ ಬಂದಿದ್ದು, ಇವು ಸಂಪೂರ್ಣವಾಗಿ ನಶಿಸಿವೆ ಎಂದು ಹೊರಗೆ ಇರಿಸಲಾಗಿದೆ. ಮೂಲತಃ ಈ ಚಿತ್ರಗಳನ್ನು ಬರೆದವರು ವೀರೇಂದ್ರ ಹೆಗಡೆಯವರ ತಂದೆಯವರಾದ ಧರ್ಮಸ್ಥಳ ರತ್ನವರ್ಮ ಹೆಗಡೆಯವರು.

ಬಾಹುಬಲಿ : ಈ ತೈಲವರ್ಣದ ಚಿತ್ರದಲ್ಲಿ ಬಾಹುಬಲಿಯ ತಾಯಿಯಾದ ಸುನಂದ ದೇವಿಯು ತನ್ನ ಮಗನನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು ದ್ರಾಕ್ಷಿ ಹಣ್ಣನ್ನು ತಿನ್ನಿಸುವ ರೀತಿಯಲ್ಲಿ ಈ ಚಿತ್ರವನ್ನು ರಚಿಸಲಾಗಿದೆ. ಸುನಂದಾ ದೇವಿಯು ತಲೆಯ ಮೇಲೆ ಸೆರುಗು ಹಾಕಿಕೊಂಡು ಆಭರಣ ಮಾಲೆಯನ್ನು ತೊಟ್ಟು ತಲೆದಿಂಬನ್ನು ತನ್ನ ತೊಡೆಯ ಮೇಲೆ ಇಟ್ಟುಕೊಂಡು ಅದರ ಮೇಲೆ ತನ್ನ ಮಗನಾದ ಬಾಹುಬಲಿಯನ್ನು ಕೂರಿಸಿಕೊಂಡಿರುವುದು ತನ್ನ ಹಿನ್ನೆಲೆಯಲ್ಲಿ ನೀಲಿ ಹಾಗೂ ಕಂದು ವರ್ಣದ ಮಿಶ್ರಣವನ್ನು ಲೇಪಿಸಲಾಗಿರುವುದು ಹಾಗೂ ಇಲ್ಲಿ ಹಳದಿ ತಿಳಿಗೆಂಪು, ಹಸಿರು, ನೀಲಿ, ಕೆಂಪು, ಬಿಳಿ ವರ್ಣಗಳನ್ನು ಬಳಸಿಕೊಂಡು ಚಿತ್ರರಚಿಸಲಾಗಿದೆ.

ಮನ್ಮತಾವಸ್ತಿ : ಈ ಮನ್ಮತಾವಸ್ಥಿ ಚಿತ್ರದಲ್ಲಿ ಮನ್ಮತನು ಸ್ತ್ರೀಯರೊಂದಿಗೆ ಕುಳಿತು ಸಂಗೀತ ಸುಧೆಯನ್ನು ಕೇಳುತ್ತಿರುವ ದೃಶ್ಯ ಇದಾಗಿದೆ. ಮನ್ಮತನು ಕಿರೀಟದಾರಿಯಾಗಿದ್ದು, ವಜ್ರಾಭರಣಗಳನ್ನು ಧರಿಸಿ, ಸಿಂಹಾಸನದ ಮೇಲೆ ಕುಳಿತಿದ್ದು, ಕೆಳಗೆ ಸ್ತ್ರೀಯೊಬ್ಬಳು ವೀಣೆ ನುಡಿಸುತ್ತ ಸೆರಗನ್ನು ಜಾರಿಸಿರುವುದು ಹಿಂಬದಿಯಲ್ಲಿ ಸ್ತ್ರೀಯರು ಕೈಗಳನ್ನು ಎತ್ತಿಕೊಂಡು ನೃತ್ಯಮಾಡುತ್ತಿರುವಂತೆ ತೋರಿಸಿದ್ದು, ಮೇಲೆ ಅಲಂಕೃತ ಚಾವಣಿಯನ್ನು ತೋರಿಸಿದ್ದು, ಬಣ್ಣ ಬಣ್ಣದ ಪರದೆಗಳನ್ನು ಇಲ್ಲಿ ಬಿಡಲಾಗಿರುವುದು. ಒಟ್ಟಾರೆ ಮನ್ಮತನ ರಸಿಕತೆಯ ತೋರಿಸುವ ಚಿತ್ರ ಇದಾಗಿದ್ದು, ನೋಡಲು ರಮ್ಯವಾಗಿದೆ.

೫. ತೀರ್ಥಂಕರರ ವೃಕ್ಷರಾಧನೆ

ನಾರಾವಿಯ ದಿಗಂಬರ ಜಿನ ಚೈತ್ಯಾಲಯದಿಂದ ಮುಂದೆ ಸಾಗಿದರೆ, ಸ್ವಲ್ಪ ದೂರದಲ್ಲಿ ಸಿಗುವ ಈ ವೃಕ್ಷವನ್ನು ತೀರ್ಥಂಕರರಿಗೆ ಕೇವಲ ಜ್ಞಾನ ಮೂಡಿಸಿದ ವೃಕ್ಷವಾದ್ದರಿಂದ ಈ ಮರಗಳಲ್ಲಿ

ಆಯಾ ತೀರ್ಥಂಕರರನ್ನು ಕಾಣುವ ಪರಿಪಾಠವಿದೆ. ೨೪ ತೀರ್ಥಂಕರರು ತಪಸ್ಸಿಗೆ ಈ ವೃಕ್ಷಗಳಡಿಯಲ್ಲಿ ಕುಳಿತು ತಪಸ್ಸುಮಾಡಿ ಕೇವಲಜ್ಞಾನ ಹೊಂದಿದವರು ಆಗಾಗಿ ಇವು ತೀರ್ಥಂಕರರಷ್ಟೇ ಶ್ರೇಷ್ಠವಾದವುಗಳಾಗಿವೆ. ಆದ ಕಾರಣ ನಾರಾವಿಯಲ್ಲಿ ಈ ೨೪ ವೃಕ್ಷಗಳನ್ನು ಒಂದೆಡೆ ನೆಟ್ಟು ಅವುಗಳ ಮಾಹಿತಿಯನ್ನು ಒಂದು ಕೋಷ್ಟಕ ತಯಾರಿಸಿ, ಅವರವರ ವರ್ಣ ಚಿತ್ರಗಳೊಂದಿಗೆ ಇಡಲಾಗಿದೆ.

ತೀರ್ಥಂಕರರಿಗೆ ಸಂಬಂಧಿಸಿದ ವೃಕ್ಷಗಳ ಮಾಹಿತಿ ಋಷಭನಾಥರು ಆಲದಮರ, ಅಜಿತನಾಥರು ಏಳಲೆ, ಬಾಳೆ ಗಿಡ, ಸಂಭವನಾಥರು ತಾಲ ವೃಕ್ಷ, ಅಭಿನಂದನರು ಹೊನ್ನೇಮರ, ಸುಮತಿನಾಥರು, ತ್ರಿಯಂಗು ವೃಕ್ಷ, ಪದ್ಮಪ್ರಭರು, ಮನೋಹರವೃಕ್ಷ, ಸುಪಾರ್ಶ್ವನಾಥರು ಬಾಗೇಮರ, ಚಂದ್ರಪ್ರಭರು ನಾಗವೃಕ್ಷ, ಪುಷ್ಪದಂತರು ನಾಗವೃಕ್ಷ, ಶೀತಲನಾಥರು ಬಲ್ವವೃಕ್ಷ, ಶ್ರೇಯಾಂಸನಾಥರು ತುಂಬುರವೃಕ್ಷ, ವಾಸಾಪೂಜ್ಯರು ಕದಂಬವೃಕ್ಷ, ವಿಮನಾಥರು ಜಂಬೂ ವೃಕ್ಷ, ಅನಂತನಾಥರು ಅಶ್ವತ್ಥ ವೃಕ್ಷ, ಧರ್ಮನಾಥರು ಏಳೆಲೆ ಬಾಳೆಗಿಡ, ಶಾಂತಿನಾಥರು ನಂದ್ಯಾವರ್ತ ವೃಕ್ಷ, ಕುಂಥುನಾಥರು ತಿಲಕ ವೃಕ್ಷ, ಅರನಾಥರು ಮಾವಿನಮರ ಮಲ್ಲಿನಾಥರು ಅಶೋಕ ವೃಕ್ಷ, ಮುನಿಸುವುತರು ಸಂಪಿಗೆ ಮರ ನಮಿನಾಥರು ಸುರಗಿವೃಕ್ಷ, ನೇಮಿನಾಥರು ಬಿದಿರುಮೆಳೆ ಪಾರ್ಶ್ವನಾಥರು ದೇವದಾರು ವೃಕ್ಷ, ವರ್ಧಮಾನರು ಮತ್ತಿಮರ ಹೀಗೆ ೨೪ ತೀರ್ಥಂಕರರು ತನ್ನದೇಯಾದ ಒಂದೊಂದು ಮರಗಳನ್ನು ತಮ್ಮ ಕೇವಲಜ್ಞಾನವಾದ ವೃಕ್ಷಗಳೆಂದು ಆಯ್ಕೆಮಾಡಿಕೊಂಡು ತಪಸ್ಸುಮಾಡಿ ಕೇವಲ ಜ್ಞಾನ ಮೂಡಿ ತೀರ್ಥಂಕರರಾದರು.

೬. ಅಕ್ಷತಾ ಪುಂಜಗಳು

ಅಕ್ಷತಾ ಪುಂಜ ಎಂಬ ಪದವು ಅಕ್ಷತಾ ಮತ್ತು ಪುಂಜ ಎಂಬ ಎರಡು ಪದಗಳ ಸಂಯೋಜನೆಯಿಂದ ಆದುದಾಗಿದೆ. ಅಕ್ಷತಾ ಎಂಬ ಪದಕ್ಕೆ 'ಮಚ್ಚು' ಇಲ್ಲದ ಅಥವಾ ಮುರಿದು ಹೋಗದ ಅಕ್ಕಿ ಎಂದೂ, ಪುಂಜ ಎಂಬ ಪದಕ್ಕೆ ಗುಂಪು ಎಂದೂ ಅರ್ಥವಿದೆ. ಅಕ್ಕಿಯನ್ನು ಶುದ್ಧೀಕರಿಸಿ ಪೂರ್ಣಪ್ರಮಾಣದ ಅಂದರೆ ನುಚ್ಚಾಗದ ಅಕ್ಕಿಯನ್ನು ಆರಿಸಿ, ನೀರಿನಲ್ಲಿ ತೊಳೆದು ಒಣಗಿಸಿ, ಬಸದಿಯಲ್ಲಿ ಮತ್ತು ದೇವಪೂಜಾ ಗೃಹದಲ್ಲಿ ಪುಂಜಗಳನ್ನಿಡುವ ಜೈನ ಧಾರ್ಮಿಕ ಪದ್ಧತಿಯ ಮಹತ್ವ ಪೂರ್ಣವಾದುದು.

ಅಕ್ಷತಾ ಪುಂಜ ಜೈನ ಧಾರ್ಮಿಕ ನಿತ್ಯ ವಿಧಿಗಳಲ್ಲಿ ಒಂದು ಈ ಧಾರ್ಮಿಕ ಪದ್ಧತಿಯ ಪ್ರಾಚೀನತೆಯನ್ನು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಾಗಿದೆ. ಇದ್ದರೂ ಹತ್ತನೆಯ ಶತಮಾನಕ್ಕಾಗಲೆ ಅದು ಪ್ರಚಲಿತವಿದ್ದುದರ ನಿರ್ದಿಷ್ಟ ಉಲ್ಲೇಖವಿದೆ. ಕನ್ನಡ ನಾಡಿನ ಹೆಮ್ಮೆಯ ಕವಿಯಾದ ಕವಿ ರತ್ನತ್ರಯರಲ್ಲಿ ಒಬ್ಬನಾದ ಆದಿಕವಿ ಪಂಪನು ಅಕ್ಷತಾ ಪುಂಜದ ಬಗ್ಗೆ ಉಲ್ಲೇಖಿಸಿದ್ದಾರೆ. ಆದಿ

ತೀರ್ಥಂಕರರ ಭವಾವಳಿಯನ್ನು ಕುರಿತು ವಿವರಿಸುವಾಗ ಸ್ವಯಂಬುದ್ಧನು ಸುಮೇರು ಪರ್ವತದ ಆಕೃತಿಯ ಚೈತ್ಯಾಲಯಗಳನ್ನು ಪುಣ್ಯ ಪುಂಜಾಂಕುರದಂತಿರುವ ಅಕ್ಷತಾ ಪುಂಜಗಳಿಂದ ಅರ್ಚಿಸಿದನು ಎಂದು ವರ್ಣಿಸಿದ್ದಾನೆ.[೨೬] ಅಕ್ಷತ ಪುಂಜದ ಉಲ್ಲೇಖಗಳಿದ್ದರು, ಅದರ ವಿನ್ಯಾಸ ಕ್ರಮದ ಬಗ್ಗೆ ಎಲ್ಲಿಯೂ ವಿವರಣೆಗಳು ದೊರಕುವುದಿಲ್ಲ. ದಿನನಿತ್ಯದಲ್ಲಿ ಬಸಧಿ ಮತ್ತು ಮನೆಯ ದೇವಾ ಪ್ರಜಾಗೃಹದಲ್ಲಿ ಸ್ವಸ್ತಿಕ, ಓಂ ಮತ್ತು ಪಂಚ ಪರಮೇಷ್ಟಗಳನ್ನು ಭಾವಿಸಿ ಪುಂಜಗಳನ್ನು ಇಡುವ ಪದ್ಧತಿ ಇರುವುದಾದರೂ ಪೂರ್ವ ದಿನಗಳಲ್ಲಿ ಆಯಾ ಸಂದರ್ಭಕ್ಕೆ ಅನುಗುಣವಾಗಿ ವಿಶೇಷ ಪುಂಜ ವಿನ್ಯಾಸಗಳನ್ನು ರಚಿಸುವ ಕ್ರಮವು ಇದೆ. ವಿಶೇಷ ಪುಂಜ ವಿನ್ಯಾಸಗಳು ಸಾಮಾನ್ಯವಾಗಿ ಜೈನ ಧಾರ್ಮಿಕ ಚಿಂತನೆಗಳಿಗೆ ಸಂಬಂಧವುಳ್ಳವುಗಳಾಗಿರುತ್ತವೆ ಎಂಬುದು ಇಲ್ಲಿ ಪ್ರಕಟಿಸಿರುವ ಚಿತ್ರಗಳಿಂದಲೇ ಸ್ಪಷ್ಟವಾಗಿದೆ.

ಅಕ್ಷತಾ ಪುಂಜದಲ್ಲಿ ಅಭಿವ್ಯಕ್ತಗೊಂಡಿರುವ ಜೈನತತ್ವಗಳು ಜೈನ ಲೋಕಾಕಾರದ ವಿವರಣೆಗಳು, ಕಾಲವಿಭಜನೆ, ಧರ್ಮ ಲಾಂಚನಗಳು, ಯಂತ್ರಗಳು ಹಾಗೂ ಇತರ ವಿಷಯಗಳು ಗಹನವಾದವುಗಳಾದರೂ, ಆಕರ್ಷಕ ಪುಂಜ ವಿನ್ಯಾಸಗಳು ಅವುಗಳನ್ನು ಗ್ರಹಿಸಲು ಪೂರಕವಾಗಿದೆ. ಪುಂಜ ವಿನ್ಯಾಸಗಳನ್ನು ರಚಿಸುವುದು ಸುಲಭವಾದುದೇನು ಅಲ್ಲ, ಅದಕ್ಕೆ ಜೈನ ಸಿದ್ಧಾಂತದ ಅರಿವು ಅವಶ್ಯಕವಾಗಿದ್ದು, ದಾರ್ಶನಿಕ ಹಿನ್ನೆಲೆಯಲ್ಲಿಯೇ ಪುಂಜ ವಿನ್ಯಾಸಗಳನ್ನು ರಚಿಸಬೇಕಾಗುತ್ತದೆ. ಅಲ್ಲದೆ ಪುಂಜಾ ರಚನೆಯು ಧರ್ಮಧ್ಯಾನದ ಪ್ರತೀಕವೇ ಆಗಿದೆ. ಪುಂಜಗಳ ವಿವಿಧ ವಿನ್ಯಾಸಗಳನ್ನು ರಚಿಸುವವರು ಆಯಾ ಪುಂಜಗಳಿಗನುಸಾರವಾಗಿ ಧರ್ಮದ್ಯಾನ ನಿರತರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಪುಂಜಾ ವಿನ್ಯಾಸಗಳಿಗೆ ಜೈನ ಧರ್ಮಾಚರಣೆಯಲ್ಲಿ ವಿಶೇಷ ಸ್ಥಾನವಿದೆ ಎಂಬುದು ಗಮನಾರ್ಹವಾಗಿದೆ.[೨೭] ಅಕ್ಷತಾ ಪುಂಜಗಳ ಧಾರ್ಮಿಕ ಮಹತ್ವವು ದೇವ ಪೂಜಾ ನಿತ್ಯ ವಿಧಿಯಾದ ಅಷ್ಟ ವಿಧಾಚರಣೆಯೊಂದಿಗೆ ವಿಲೀನಗೊಂಡಿದೆ. ಬಸದಿಗಳಲ್ಲಿ ಅಭಿಷೇಕ-ನಿತ್ಯ ಪೂಜಾವಿಧಿಗಳನ್ನು ಮಾಡುವಾಗ ಪುರೋಹಿತರು ಪ್ರತಿ ಹಂತದಲ್ಲಿಯೂ ದೀಪವನ್ನು ಬೆಳಗಿಸುತ್ತ ಅಷ್ಟ ವಿದಾರ್ಚನಾ ಪೂಜಾ ವಿಧಿಗಳನ್ನು ಮಾಡುವಾಗ ತಟ್ಟೆಯಲ್ಲಿ ಚಂದನದಿಂದ ಸ್ವಸ್ತಿಕ ಚಿಹ್ನೆಯನ್ನು ಬರೆದು, ಅದರ ಮೇಲೆ ಮೂರು ಅಥವಾ ಐದು ಅಥವಾ ಒಂಭತ್ತು ಪುಂಜಗಳನ್ನು ಇಡುವ ಕ್ರಮವಿದೆ. ಮೂರು ಪುಂಜಗಳು ರತ್ನತ್ರಯ ಪ್ರತೀಕವು. ಐದು ಪುಂಜಗಳು ಪಂಚಪರಮೇಷ್ಠಿಗಳ ಪ್ರತೀಕವು ಮತ್ತು ಒಂಭತ್ತು ಪುಂಜಗಳು ನವದೇವತೆಗಳ ಪ್ರತೀಕವೂ ಆಗಿವೆ. ಈ ಹಿನ್ನೆಲೆಯಲ್ಲಿ ಅಕ್ಷತಾ ಪುಂಜಾ ವಿಧಿಗೆ ಧಾರ್ಮಿಕ ಮಹತ್ವವಿದೆ. ಚಿಂತನೆಯ ಪ್ರತೀಕಗಳಾಗಿರುವುದರಿಂದ ಅವುಗಳ ಪ್ರಾಮುಖ್ಯತೆಯನ್ನು ನಿರ್ಲಕ್ಷಿಸುವಂತಿಲ್ಲ.[೨೮]

---


೨೬. ಶ್ರೀಮತಿ ಕೌಸಲ್ಯ ಧರಣೇಂದ್ರ : ಜೈನ ಸಂಸ್ಕೃತಿ ಮತ್ತು ಅಕ್ಷತ ಪುಂಜ, ಪು-೧೬

೨೭. ಅದೇ., ಪು-೧೯

೨೮. ಅದೇ.

ಜೈನ ಸಂಸ್ಕೃತಿಯಲ್ಲಿ ಹಲವು ಬಗೆಯ ಅಕ್ಷತಾ ಪುಂಜ ವಿನ್ಯಾಸಗಳನ್ನು ಇಡುವರು. ಇವುಗಳಲ್ಲಿ ಮುಖ್ಯವಾದುವುಗಳನ್ನು ಇಲ್ಲಿ ಹೆಸರಿಸಲಾಗಿದೆ. ರತ್ನತ್ರಯಗಳು, ಪಂಚ ಪರಮೇಷ್ಠಿಗಳು, ನವದೇವತೆಗಳು, ಸ್ವಸ್ತಿಕ, ಪಂಚಕಲ್ಯಾಣ, ೧೦೮ ಜಾಪ್ಯಮಂತ್ರ, ಮಂಗಳ ಶಂಕ, ಅಷ್ಟಮಂಗಲಗಳು, ಕೇವಲಿ ಭಗವಾನ್, ನಂದ್ಯಾವರ್ತ್ಯ ಸ್ವಸ್ತಿಕ, ಧರ್ಮಚಕ್ರ, ಶ್ರುತಸ್ಕಂದ, ಸಮವಸರಣ ಸಭೆ, ೨೪ ತೀರ್ಥಂಕರರು, ನವದೇತೆಗಳು, ಷಡ್‌ದ್ರವ್ಯಗಳು, ಸತ್ತತತ್ವಗರು, ನವಪದಾರ್ಥಗಳು, ಕಾಲಚಕ್ರ ಷಡ್ ಲೇಷ್ಯಗಳು, ಅಷ್ಟಾಂಗಗಳು, ದಶಧರ್ಮಗಳು, ಅನುಪ್ರೇರಣೆಗಳು, ಋಧಿಗಳು, ಅನಂತ ಚತುಷ್ಟಯಗಳು, ಸಿದ್ಧಿ ಚಕ್ರ ಯಂತ್ರ, ಅನಂತಯಂತ್ರ, ಷೋಡಶ ಭಾವನೆಗಳು, ಲೋಕಾಕಾರ ನಂದೀಶ್ವರದೀಪ, ಮೇರುಪರ್ವತ, ಚತ್ತಾರಿ ಮಂಗಳ ಹೀಗೆ ಹತ್ತು ಹಲವು ತತ್ತ್ವಾಧಾರಗಳ, ತೀರ್ಥಂಕರರ, ನೇಯ ನಿಷ್ಠಗಳ ಪ್ರತೀಕವಾಗಿ ಈ ಅಕ್ಷತಾ ಪುಂಜಗಳನ್ನು ಇಡುವುದು ಇಂದಿಗೂ ಜೈನಧರ್ಮೀಯರಲ್ಲಿದ್ದು, ಇದರ ಆಚರಣೆಗಳನ್ನು ಬಸದಿಗಳಲ್ಲಿ, ದೇವಾಲಯಗಳಲ್ಲಿ, ಮನೆಯ ದೇವ ಗೃಹದಲ್ಲಿ ಆಚರಿಸುತ್ತಾರೆ. ಇದೊಂದು ದೈವೀಕಾರ್ಯವಾಗಿ ಸಂಪ್ರದಾಯದ ಧಾರ್ಮಿಕ ಚೌಕಟ್ಟಿನಲ್ಲಿ ಇದ್ದರೂ ಸಹ ಇದೊಂದು ಕಲೆಯಾಗಿದೆ. ಈ ಕಲೆಗೆ ತನ್ನದೇ ಆದ ಸಿದ್ಧಾಂತದ ಪರಿಮಿತಿ ಇದೆ. ಇದೇ ಕಲೆಯನ್ನು ಹಿಂದೂ ಧರ್ಮಿಯರು ದೇವರು ಕೂರಿಸುವಾಗ ಮದುವೆ ಶಾಸ್ತ್ರಗಳಲ್ಲಿ ಹಸೆಯಾಕುವುದು ಎಂಬ ಸಂಪ್ರದಾಯದವಿದು. ಇಲ್ಲಿಯೂ ಅಕ್ಕಿಯನ್ನು ಬಳಸಿಕೊಂಡು ನಾನಾ ವಿನ್ಯಾಸಗಳನ್ನು ಇಲ್ಲಿ ಬಳಸುವುದುಂಟು. ಆದರೆ ಜೈನೀಯರಲ್ಲಿ ಇದಕ್ಕೆ ತನ್ನದೇ ಆದ ಮಹತ್ವವಿದ್ದು, ಇದಕ್ಕೆ ಸಂಪ್ರದಾಯಿ ಚೌಕಟ್ಟನ್ನು ಹಾಕಿಕೊಂಡು ನಿಯಮಬದ್ಧವಾಗಿ ಆಚರಣೆಯ ರೀತಿಯಲ್ಲಿ ಆಚರಿಸುತ್ತಾ ಬರುತ್ತಿದ್ದಾರೆ.

卐卐卐



ಭಗವಾನ್ ಶ್ರೀ ಶಂಭವನಾಥ ತೀರ್ಥಂಕರರು



ಭಗವಾನ್ ಶ್ರೀ ಅಭಿನಂದನ ತೀರ್ಥಂಕರರು



ಭಗವಾನ್ ಶ್ರೀ ಸುಮತಿನಾಥ ತೀರ್ಥಂಕರರು



ಭಗವಾನ್ ಶ್ರೀ ಪದ್ಮಪ್ರಭ ತೀರ್ಥಂಕರರು



ಭಗವಾನ್ ಶ್ರೀ ಸುಪಾರ್ಶ್ವನಾಥ ತೀರ್ಥಂಕರರು



ಭಗವಾನ್ ಶ್ರೀ ಚಂದ್ರಪ್ರಭ ತೀರ್ಥಂಕರರು



ಭಗವಾನ್ ಶ್ರೀ ಪುಷ್ಪದಂತ ತೀರ್ಥಂಕರರು



ಭಗವಾನ್ ಶ್ರೀ ಶೀತಲನಾಥ ತೀರ್ಥಂಕರರು



ಭಗವಾನ್ ಶ್ರೀ ಶ್ರೇಯಾಂಸನಾಥ ತೀರ್ಥಂಕರರು




ಭಗವಾನ್ ಶ್ರೀ ವಾಸುಪೂಜ್ಯ ತೀರ್ಥಂಕರರು



ಭಗವಾನ್ ಶ್ರೀ ವಿಮಲನಾಥ ತೀರ್ಥಂಕರರು



ಭಗವಾನ್ ಶ್ರೀ ಅನಂತನಾಥ ತೀರ್ಥಂಕರರು



ಭಗವಾನ್ ಶ್ರೀ ಧರ್ಮನಾಥ ತೀರ್ಥಂಕರರು



ಭಗವಾನ್ ಶ್ರೀ ಶಾಂತಿನಾಥ ತೀರ್ಥಂಕರರು



ಭಗವಾನ್ ಶ್ರೀ ಕುಂಥುನಾಥ ತೀರ್ಥಂಕರರು




ಭಗವಾನ್ ಶ್ರೀ ಅರನಾಥ ತೀರ್ಥಂಕರರು




ಭಗವಾನ್ ಶ್ರೀ ಮಲ್ಲಿನಾಥ ತೀರ್ಥಂಕರರು



ಭಗವಾನ್ ಶ್ರೀ ಮುನಿಸುವ್ರತನಾಥ ತೀರ್ಥಂಕರರು




ಭಗವಾನ್ ಶ್ರೀ ನಮಿನಾಥ ತೀರ್ಥಂಕರು



ಭಗವಾನ್ ಶ್ರೀ ನೇಮಿನಾಥ ತೀರ್ಥಂಕರರು



ಭಗವಾನ್ ಶ್ರೀ ಪಾರ್ಶ್ವನಾಥ ತೀರ್ಥಂಕರರು



ಭಗವಾನ್ ಶ್ರೀ ವರ್ಧಮಾನ ತೀರ್ಥಂಕರರು

ಕಾವಿ ಕಲೆಯ ಚಿತ್ರಗಳು





ಕಾವಿ ಕಲೆಯ ಚಿತ್ರಗಳು







ಮೂಡಬಿದರೆಯ ದ್ವಾರಪಾಲಕರುಗಳ ಚಿತ್ರ



ನಲ್ಲೂರಿನ ದ್ವಾರಪಾಲಕರುಗಳ ಚಿತ್ರ



ಮೂಡಬಿದರೆಯ ಸಮವಸರಣ ಚಿತ್ರ



ನಾರಾವಿಯ ಸಂಸಾರ ದರ್ಶನದ ಚಿತ್ರ



ನಲ್ಲೂರಿನ ಶ್ರೀ ಆದಿನಾಥ ಸ್ವಾಮಿ ತೀರ್ಥಂಕರರ ನಿರ್ವಾಣ ಭೂಮಿಯ ಚಿತ್ರ



ನಲ್ಲೂರಿನ ಶ್ರೀ ಚಂಪಾಪುರಿ ಸಿದ್ಧಿಕ್ಷೇತ್ರದ ಚಿತ್ರ



ನಲ್ಲೂರಿನ ಆನೆಯ ಮೇಲೆ ಗುರುಗಳು ಸಾಗುತ್ತಿರುವ ಚಿತ್ರ



ತೀರ್ಥಂಕರರ ವೃಕ್ಷರಾದನೆ







ಅಕ್ಷತಾ ಪುಂಜಗಳು

ಅಧ್ಯಾಯ : ಆರು

ಜೈನ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ, ಶೈಲಿ ಹಾಗೂ ಗುಣಲಕ್ಷಣಗಳು

ಅಧ್ಯಾಯ : ಆರು

ಜೈನ ಚಿತ್ರಕಲೆಯ ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ ಮತ್ತು ಗುಣಲಕ್ಷಣಗಳು

ಪ್ರತಿಯೊಂದು ಧರ್ಮದ ಅನುಯಾಯಿಯಗಳು ತಮ್ಮ ಧರ್ಮವು ಅನಾದಿಯಾದುದು ಐತಿಹಾಸಿಕ ಕಾಲಕ್ಕಿಂತ ಮೊದಲಿನಿಂದಲೂ ನಡೆದು ಬಮದುದು ತೀರಾ ಪ್ರಾಚೀನವಾದುದು ಎಂಬ ಮಾತುಗಳನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಾರೆ. ಪ್ರಾಚೀನತಮವಾದ ಧರ್ಮವೇ ಶ್ರೇಷ್ಠ ಧರ್ಮ ಎಂಬ ಕಲ್ಪನೆಯು ಇಂಥ ಪ್ರಯತ್ನಗಳಿಗೆ ಕಾರಣವಾಗಿದೆ. ಅದೇ ರೀತಿಯಲ್ಲಿ ಕಲೆಯ ಉಗಮ ಹಾಗೂ ಪರಂಪರೆಯ ಘಹನತೆಗಳೂ ಸಹ ಧರ್ಮದ ಶ್ರೇಷ್ಠತೆಯಲ್ಲಿ ಮುಖ್ಯವಾಗಿದ್ದು, ಈ ಕಲೆ ಆಯಾ ಧರ್ಮದ ಸಂಸ್ಕಾರ, ಸಂಸ್ಕೃತಿ, ನಿಲುವು, ಧೋರಣೆಯ ಅಭಿವ್ಯಕ್ತ ಮಾಧ್ಯಮವಿದ್ದಂತೆ ಆದರೆ ವಸ್ತುವಿಷಯಗಳು ಮಾತ್ರ ಆಯಾ ಧರ್ಮದ ಸಾಂದ್ರತೆಯನ್ನು ತಿಳಿಸುತ್ತವೆಯೇ ಹೊರತು ಕಲೆಯು ನಿರಂತರ ಮತ್ತು ನಿರಾಕಾರವಾದುದು ಎಂಬುದನ್ನಲ್ಲ. ಕಲೆಯ ನಿರಾಕಾರವಾದುದರಿಂದ ಅದು ಯಾವ ಆಕಾರದಲ್ಲಿ ಇದನ್ನು ಸುರಿಯುತ್ತಾರೆ. ಆ ರೂಪವನ್ನು ತಾಳುವುದು ನೀರಿನಂತೆ. ನೀರು ಕಲೆಯಾದರೆ ಅದಕ್ಕೆ ಸೇರಿಸಲಾಗುವ ಬಣ್ಣ, ರುಚಿ, ತತ್ವ, ಆಕಾರಗಳು ಆಯಾ ಧರ್ಮ ಹಾಗೂ ರಾಜಪಂಪರೆಯ ಆಜ್ಞೆಯಂತೆ ನಡೆಯುವುದುಂಟು. ಆದರೆ ಕೆಲವರು ಇದರಿಂದ ಕಲೆಯು ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಅದರ ಮಹತ್ವವನ್ನು ಧರ್ಮ ಹಾಗೂ ರಾಜಕೀಯ ಕಪಿಮುಷ್ಠಿಗೆ ತನ್ನನ್ನು ಹೊಡ್ಡಿಕೊಳ್ಳುತ್ತದೆ ಎಂದು ಹಲವರು ಅಭಿಪ್ರಾಯಿಸಿದರು. ಆದರೆ ಕಲೆಗೆ ತನ್ನ ತನವೆಂಬುದೇ ಇಲ್ಲ. ಯಾರ್ಯಾರು ಹೇಗೆ ನೋಡುವರೋ ಹಾಗೆ ಅದು ಅವರಿಗೆ ಗೋಚರಿಸುತ್ತದೆ. ಪರಮಾತ್ಮನಂತೆ ಇದೇ ನೆಲೆಯಲ್ಲಿ ಧರ್ಮ ಮತ್ತು ಕಲೆಗಳು ಬೇರೆ ಬೇರೆ ಆದರೂ ಜೊತೆಯಲ್ಲಿದ್ದರು ಯಾವುದೇ ವ್ಯತ್ಯಾಸಗಳು ಇರುವುದಿಲ್ಲ. ಕಲೆ ಪರಮಾತ್ಮನಂತೆ ನಿರಾಕಾರ.

ಇದೇ ರೀತಿಯಲ್ಲಿ ಜೈನಿಯರೂ ಸಹ ಕಲೆಯನ್ನು ತಮ್ಮ ಧರ್ಮ ಪ್ರಚಾರ ಮಾಧ್ಯಮವಾಗಿಸಿಕೊಂಡು ಯಶಸ್ಸು ಕಂಡರೂ ಸಹ ತನ್ನ ಶೈಲಿಯಲ್ಲಿ ಬರಬೇಕೆಂಬ ದುರಾಸೆ ಇವರಿಗಿರಲಿಲ್ಲ. ಆದರೆ ಯಾವ ಶೈಲಿಯಾದರೇನು ಅಥವಾ ಯಾವ ಮಾಧ್ಯಮವಾದರೇನು ತಮ್ಮ ಧರ್ಮದ ತತ್ತ್ವಾನುವಾದ ಕಲೆಯಲ್ಲಿ ಬರಲೆಂಬ ಆಶಯ ಅವರದಾಗಿದ್ದು ನಿಜ. ಇದರ ಪರಂಪರೆಯನ್ನು ಕೆದಕುತ್ತ ಹೋದಂತೆ ಇದರ ಹಿರಿಮೆಯ ಸ್ವಲ್ಪ ಪರಿಚಯ ಅವಶ್ಯಕವಾಗುವುದು. ಐತಿಹಾಸಿಕ ಕಾಲದಲ್ಲಿ ಬರುವ ಉಪಲಬ್ಧವಿರುವ ಭಾರತೀಯ ಚಿತ್ರಗಳಲ್ಲಿ ಎಲ್ಲಕ್ಕೂ ಪ್ರಾಚೀನತಮವಾದುದ್ದು. ಜೈನಮತಕ್ಕೆ ಸಂಬಂಧಿಸಿದ ಚಿತ್ರವಾಗಿದೆ. ಮಧ್ಯ ಹಿಂದೂಸ್ಥಾನದ ಸರಗುಜಾ ಜಿಲ್ಲೆಯಲ್ಲಿ ಜೋಗೀ ಮಾರಾ ಎಂಬ ಹೆಸರಿನ ಗುಹೆ ಇದೆ. ಇದರಲ್ಲಿ ಇರುವ ಲೇಖನದ ಲಿಪಿಯು ಕ್ರಿ.ಪೂ. ಮೂರನೆಯ ಶತಮಾನದ್ದು ಎಂಬ ಡಾ. ಬ್ಲಾಕ್ ಅವರ ಮತವಿದೆ. ಕೆಲವು ವಿದ್ವಾಂಸರು ಸ್ವಲ್ಪ ಇತ್ತೀಚಿನ ಕಾಲದ್ದಿರಬೇಕೆಂದು ಸೂಚಿಸುವರು. ಈ ಗುಹೆಯ ನೆಲೆಯಲ್ಲಿಯೇ ಸೀತಾಬೊಂಗಾ ಗುಹೆಯಿದೆ. ಇದೊಂದು ನಾಟ್ಯಶಾಲೆಯಾಗಿದೆ. ಮೊದಲನೆಯ ಜೋಗೀ ಮಾರಾ ಗುಹೆಯು ಈ ನಾಟ್ಯಗೃಹದ ನಟಿಗಳ ವಿಶ್ರಾಮ ಗೃಹ ಎಂದು ತಿಳಿಯಲಾಗುತ್ತದೆ. ಇತ್ತೀಚೆಗೆ ಅಲ್ಲಿಯ ಲೇಖನದ ಅರ್ಥ ಹಚ್ಚಿದುದರಿಂದ ಅದು ವರುಣಗೃಹ ಎಂದೂ ಆ ವರುಣನ ಸೇವೆಗೆಂದು ಇರುವ ಓರ್ವ ದೇವದರ್ಶಿನಿಯು ಅಲ್ಲಿ ಇರುತ್ತಿದ್ದಳೆಂದೂ ಗೊತ್ತಾಗುತ್ತದೆ. ಈ ಗುಹೆಯಲ್ಲಿ ಆ ಕಾಲದ ಹಾಗೂ ಅದರ ತರುವಾಯದ ಕಾಲದ ಚಿತ್ರಗಳು ಇರುತ್ತವೆ. ಕ್ರಿ.ಪೂ. ೩ನೇಯ ಶತಮಾನದ ಚಿತ್ರಗಳು ಕೆಲವು ಜೈನ ಮತಕ್ಕೆ ಸಂಬಂಧಿಸಿದವುಗಳಾಗಿವೆ. ಇವುಗಳ ಸುಂದರ ರೇಖೆಗಳು ಬಹು ಕಲಾವಂತಿಕೆಯಿಂದ ಕೂಡಿದುದಾಗಿದೆ.

ಗುಪ್ತಕಾಲವು ಭಾರತೀಯ ಸಂಸ್ಕೃತಿಯ ಸ್ವರ್ಣಯುಗವಾಗಿದೆ. ಅಜಂತಾ ಗುಹೆಯೊಳಗಿನ ಭಿತ್ತಿಚಿತ್ರಗಳಲ್ಲಿ ಹಲವು ಆ ಕಾಲದಲ್ಲಿ ಬರೆದವುಗಳಾಗಿವೆ. ಆ ಚಿತ್ರಗಳು ಭಾರತದ ಚಿತ್ರಗಳಷ್ಟೇ ಅಲ್ಲ ಜಗತ್ತಿನ ಚಿತ್ರಗಳಲ್ಲಿಯೇ ಅಮೂಲ್ಯ ರತ್ನಗಳೆನಿಸುತ್ತಿವೆ. ಅವುಗಳಲ್ಲಿ ಜೈನ ಸಾದುವಿನ ಚಿತ್ರವೊಂದಿದೆ. ಅದೊಂದೇ ಆ ಕಾಲದ ಉಪಲಬ್ಧ ಜೈನ ಚಿತ್ರವಾಗಿದೆ. ಇದು ಕ್ರಿ.ಶ. ೩೨೦ರಿಂದ ೬೦೦ರ ನಡುವಿನ ಅವಧಿಯಲ್ಲಿ ಬರೆದುದಾಗಿದೆ. ಅನಂತರ ಮದ್ರಾಸ್ ವಿಭಾಗದ ತಂಜಾವೂರಿನ ನೆರೆಯಲ್ಲಿ ಇರುವ ಪುದುಕೋಟೆಯ ಸೀಮೆಯಲ್ಲಿ ಸಿತ್ತನವಾಸಲ್ ಎಂಬ ಸ್ಥಳವಿದೆ. ಅಲ್ಲಿ ಪಲ್ಲವರಾಜನಾದ ಮೊದಲನೆಯ ಮಹೇಂದ್ರ ವರ್ಮನು ಸುಮಾರು (ಕ್ರಿ.ಶ. ೬೦೦ ರಿಂದ ೬೨೫ರವರೆಗೆ) ಅವನ ಮಗನಾದ ನರಸಿಂಹ ವರ್ಮನು ಸುಮಾರು (ಕ್ರಿ.ಶ. ೬೨೫ರಿಂದ ೬೫೦) ತೋಡಿಸಿದ ಗುಹಾಮಂದಿರಗಳಿವೆ. ಈಗ ಹತ್ತಿಪ್ಪತ್ತು ವರ್ಷಗಳ ಹಿಂದೆ ಆ ಮಂದಿರಗಳಲ್ಲಿ ಕೆಲವು ಚಿತ್ರಗಳ ಶೋಧವಾಯಿತು.

ಇವುಗಳ ಶೈಲಿಯೂ ಅಜಂತಾದಂತೆಯೇ ಇದೆ. ಇವುಗಳಲ್ಲಿ ಕುಣಿಯುವ ಸ್ತ್ರೀಯ ಕೆಲವು ಭಂಗಿಗಳಿವೆ. ಅವಳ ಭಾವ, ಭಂಗಿ, ಹಸ್ತ, ಆಕೃತಿ, ಅಲಂಕಾರಗಳು ಬಹಳ ಸಜೀವವೂ ಪ್ರೇಕ್ಷಣೀಯವೂ ಆಗಿವೆ. ಅಲ್ಲಿಯೇ ಇನ್ನೊಂದು ಮಗ್ಗಲಿಗೆ ಸ್ತ್ರೀ ಪುರಷರ ಯುಗ್ಮವೊಂದಿದೆ. ಪುರುಷನನ್ನು ಮೆಚ್ಚಿ ನೋಡುತ್ತಿರುವ ಸ್ತ್ರೀಯ ಮುಖಭಾವವು ತುಂಬ ಅರ್ಥಪೂರ್ಣವಾಗಿ ಚಿತ್ರಿತವಾಗಿದೆ. ಸಂಭ್ರಾಂತ ಮಹಿಳೆಯ ಚಿತ್ರವದು. ಇದು ಮಹೇಂದ್ರ ವರ್ಮ ಹಾಗೂ ಅವನ ರಾಣಿಯ ಚಿತ್ರವಿರಬೇಕೆಂದು ಕೆಲವರು ಅನುಮಾನಿಸುತ್ತಾರೆ. ಈ ಗುಹೆಗಳ ಮೇಲ್‌ವಾಸಿನ ಮೇಲೆ ಒಂದು ಕಮಲವನವನ್ನು ಚಿತ್ರಿಸಿದ್ದಾಗಿದೆ. ಅದರಲ್ಲಿ ಮೀನ, ಮೊಸಳೆ, ಆನೆ, ಕೋಣ, ಹಂದಿ ಇತ್ಯಾದಿ ಜಲಪ್ರೇಮಿಯಾದ ಪ್ರಾಣಿ-ಪಕ್ಷಿಗಳ ಚಿತ್ರ ಬಹಳ ಸುಂದರವಾಗಿದೆ. ಇದರಲ್ಲಿ ಹೂ ಕೊಯ್ಯುವ ದಿವ್ಯಪ್ರಹಷನ ಆಕೃತಿಯಿದೆ. ಇಲ್ಲಿಯ ಹಲವು ಚಿತ್ರಗಳು ಜೈನಧರ್ಮಕ್ಕೆ ಸಂಬಂಧಿಸಿದವುಗಳಾಗಿವೆ.[೧]

ಇದೇ ರೀತಿ ವೇರೂಳಿನ ಭಿತ್ತಿಚಿತ್ರಗಳಲ್ಲಿಯೂ ಕೆಲವು ಜೈನಚಿತ್ರಗಳಿವೆ. ವೇರೂಳಿನ ಚಿತ್ರಕಲೆಯಲ್ಲಿ ಅಜಂತೆಯ ಪರಂಪರೆಯೇ ಮುಂದುವರಿದಂತಿದೆ. ಆದರೂ ತುಂಬ ವ್ಯತ್ಯಾಸಗಳಿವೆ. ವೇರೂಳಿನ ಕಲೆಯಲ್ಲಿ ಅವನತಿಯು ಕಂಡುಬರುತ್ತದೆ. ಆಕಾಶದ ಚಿಹ್ನೆಯನ್ನು ಚಿತ್ರಸಲಿಕ್ಕೆಂದು ಬರೆದ ಮೋಡದ ತುಂಡುಗಳಲ್ಲಿ, ಅಜಂತೆಯಲ್ಲಿಯ ಸೌಂದರ್ಯವಿಲ್ಲ. ಅದರಂತೆ ವ್ಯಕ್ತಿಗಳ ಅಲಂಕಾರಗಳಲ್ಲಿಯೂ ಚೆಲುವು ಇಲ್ಲ. ಇವುಗಳಿಗಿಂತ ಒಡೆದು ತೋರುವ ಕೊರತೆಯೆಂದರೆ ಚಿತ್ರಗಳಲ್ಲಿಯ ವ್ಯಕ್ತಿಗಳ ಅಂಗಾಂಗಗಳಲ್ಲಿ ಪ್ರಮಾಣ ಬದ್ಧತೆಯಿಲ್ಲ. ಮೂಗು ಉದ್ದ, ಹುಬ್ಬಿನಲ್ಲಿ ಹೆಚ್ಚಿನಕೊಂಕು, ಇವು ಕಲೆಯ ಹ್ರಾಸಿ..... ಸ್ಪಷ್ಟವಾಗಿ ಸೂಚಿಸುತ್ತವೆ. ಮಧ್ಯ ಕಾಲದಲ್ಲಿ (ಕ್ರಿ.ಶ. ೬೦೦ ರಿಂದ ೧೦೦೦ ರವರೆಗೆ) ಮೂಗುಗಳನ್ನು ಉದ್ದವಾಗಿ ಚಿತ್ರಿಸುವುದೊಂದು ಕಲೆಯ ರೀತಿಯೇ ಆಗಿದ್ದಂತೆ ತೋರುತ್ತದೆ. ಅದರ ಪರಿಣಾಮವು ಮೂರ್ತಿಕಲೆಯ ಮೇಲೆಯೂ ಆದದ್ದುಂಟು.

ಕ್ರಿ.ಶ. ಹನ್ನೊಂದು, ಹನ್ನೆರಡನೆಯ ಶತಮಾನಗಳಲ್ಲಿ ಭಾರತದ ರಾಜ ನೈತಿಕ ದೃಷ್ಟಿಕೋನದಲ್ಲಿ ಬಳ ಬದಲಾವಣೆಯು ಉಂಟಾಯಿತು. ಸಾಂಸ್ಕೃತಿಕ ಅವನತಿಗೂ ಆರಂಭವಾಯಿತು. ಅದರ ಪರಿಣಾಮವು ಚಿತ್ರಕಲೆಯ ಮೇಲೆಯೂ ಆಗದಿರಲಿಲ್ಲ. ಹನ್ನೆರಡನೆಯ ಶತಮಾನದಿಂದ ಸುಮಾರು ಹದಿನೈದನೆಯ ಶತಮಾನದವರೆಗಿನ ಚಿತ್ರಗಾರರು, ಕಲೋಪಾಸಕರಾಗಿರದೆ ವ್ಯವಸಾಯಿಗಳಾಗಿದ್ದಂತೆ ತೋರುತ್ತದೆ. ಇಂಥವರು ಅವಸರದಲ್ಲಿ ಬರೆದ ಅಪಭ್ರಂಶ ಚಿತ್ರಶೈಲಿಯು ನಮಗೆ ಎಲ್ಲೆಡೆಗೂ ನೋಡಲಿಕ್ಕೆ ಸಿಗುತ್ತದೆ. ಬಂಗಾಲ-ಬಿಹಾರಗಳನ್ನುಳಿದ ಭಾರತದ ಎಲ್ಲ ಕಡೆಗೂ ಚಿತ್ರಕಲೆಯು ತುಂಬ ಅವನತಿ ಸ್ಥಿತಿಯಲ್ಲಿತ್ತು.

ಈ ಕಾಲದ ಚಿತ್ರಶೈಲಿಗೆ ಒಂದು ಕಾಲು ಕನ್ನಡಕದ ಶೈಲಿಯೆಂದು ಹೇಳಬಹುದು. ಏಕೆಂದರೆ

ಆಗಿನ ಚಿತ್ರಗಳಲ್ಲಿಯ ವ್ಯಕ್ತಿಗಳ ಮುಖದ ಮೇಲೆಲ್ಲ ಒಂದು ಕಾಲು ಕಣ್ಣುಗಳು ಇರುತ್ತಿದ್ದವು. ಎರಡನೆಯ ಕಣ್ಣಿನ ಭಾಗವನ್ನು ಗಲ್ಲದ ಮೇಲೆ ಸ್ಪಷ್ಟವಾಗಿ ಮೂಡಿಸುತ್ತಿದ್ದರು. ಅದೂ ಸ್ವಲ್ಪ ಭಾಗವು ಕಪಾಳಿಗಿಂತ ಮುಂದೆ ಹಾಯ್ದಂತೆ ಇರುವುದು. ಹೀಗಿದ್ದೂ ಈ ಚಿತ್ರಗಳ ರೇಖೆಗಳಲ್ಲಿ ಒಂದು ತರದ ಬೆಡಗು ಇರುವುದರಿಂದ, ಇವುಗಳನ್ನು ಹಲವಾರು ಒಳ್ಳೆಯದೆಂದು ಹೇಳುತ್ತಾರೆ. ಇಂಥ ಚಿತ್ರಗಳಲ್ಲಿ ಬರುವ ಹಳ್ಳ, ಹೊಳ, ಮಳೆ, ಮೋಡ, ಗುಡ್ಡ ಪರ್ವತಗಳ ಆಕೃತಿಗಳನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಈ ಪ್ರಾಕೃತಿಕ ಚಿತ್ರಗಳ ಆಕೃತಿಗಳಲ್ಲಿಯೂ ಕಲೆಯು ಪೂರ್ಣ ಕೆಳ ತರಗತಿಗೆ ಮುಟ್ಟಿದ್ದನ್ನು ಕಾಣುತ್ತೇವೆ. ಇಷ್ಟೇ ಅಲ್ಲ, ಯೋಗ್ಯ ಬಣ್ಣಗಳ ಕೊರತೆಯೂ ಇದೆ. ಆಕೃತಿಗಳ ಸೀಮಾಂತ ರೇಖೆಗಳು ಮಸಿಯಿಂದ ಬರೆಯಲ್ಪಟ್ಟಿದ್ದು, ದಪ್ಪವಾಗಿವೆ. ಅದರಿಂದ ಕಲೆಯ ಕಲೆಯಲ್ಲಿ ಕೊರತೆಯಾಗಿದೆ.

ಈ ಶೈಲಿಯ ಬಹಳಷ್ಟು ಚಿತ್ರಗಳು ಶ್ವೇತಾಂಬರ ಜೈನ ಸಂಪ್ರದಾಯದ ಗ್ರಂಥಗಳಲ್ಲಿ ನೋಡಲಿಕ್ಕೆ ಸಿಗುತ್ತವೆ. ಕ್ರಿ.ಶ. ೧೧೦೦ ರಿಂದ ೧೪೫೦ರ ವರೆಗೂ ಇಂಥ ಗ್ರಂಥಗಳು ತಾಳೆಯೋಲೆಯ ಮೇಲೆ ಬರೆದವುಗಳು ಆಗಿವೆ. ಮುಂದೆ ಸುಮಾರು ವರ್ಷಗಳ ವರೆಗೆ ಕಾಗದ ಮೇಲೆ ಬರೆಯಲಾಗಿದೆ. ಅದರ ಮುಂದಿನ ಕಾಲದ ಗ್ರಂಥಗಳಲ್ಲಿ ಚಿತ್ರಗಳಿಲ್ಲ. ಸುಮಾರು ಐದುನೂರು ವರ್ಷಗಳ ಈ ಕಾಲಾವಧಿಯಲ್ಲಿ ಭಾರತದ ಎಲ್ಲ ಭಾಗಗಳಲ್ಲಿಯೂ ಜೈನರು ಪ್ರಬಲರಾಗಿದ್ದುದರಿಂದ, ಚಿತ್ರಿತ ಗ್ರಂಥಗಳು ವಿಪುಲವಾಗಿ ದೊರೆಯುತ್ತದೆ. ಅನೇಕ ಜನ ಜೈನ ಸಿರಿವಂತರು ಸಚಿತ್ರಶಾಸ್ತ್ರ, ಅಂಗಸೂತ್ರ, ನಿಶೇಧಚೂರ್ಣಿ, ಉತ್ತರಾಧ್ಯಯನಸೂತ್ರ, ಸಚಿತ್ರಪುರಾಣ, ನೇಮಿಪುರಾಣ, ಕ್ರಿಷಷ್ಟಿ ಶಲಾಕಾ ಪುರುಷ ಪುರಾಣ ಕಥಾರತ್ನಸಾಗರಗಳನ್ನು ಬರೆಯಿಸಿ, ಹಂಚುತ್ತಿದ್ದರು ದಾನಕೊಡುತ್ತಿದ್ದರು. ಜೈನಗ್ರಂಥಗಳಲ್ಲದೆ ಗೀತಗೋವಿಂದ, ಬಾಲಗೋಪಾಲ ಸ್ತುತಿ, ದುರ್ಗಾ ಸಪ್ತಶತಿ ಇತ್ಯಾದಿ ಗ್ರಂಥಗಳಲ್ಲಿಯೂ ಈ ಕಾಲದ ಅಪಭ್ರಂಶ ಶೈಲಿಯ ಚಿತ್ರಗಳು ನೋಡಲಿಕ್ಕೆ ಸಿಕ್ಕುತ್ತವೆ. ಇತ್ತೀಚೆಗೆ ಗುಜರಾತದಲ್ಲಿ 'ವಸಂತವಿಲಾಸ' ಎಂಬ ಸಂಸ್ಕೃತ ಕಾವ್ಯವೊಂದು ಅರಿವೆಯ ಮೇಲೆ ಬರೆದದ್ದು ದೊರೆತಿದೆ. ಅದನ್ನು ಅಹಮದಾಬಾದಿನಲ್ಲಿ ಕ್ರಿ.ಶ. ೧೪೫೦ರಲ್ಲಿ ಲಿಪಿ ಮಾಡಲಾಗಿದೆ. ಅದರಲ್ಲಿಯೂ ಕೆಲವು ಚಿತ್ರಗಳಿವೆ. ಅವು ಈ ಯುಗಧರ್ಮವನ್ನು ಮೀರಿ ನಿಂತವುಗಳಲ್ಲಿ ಹದಿನೈದನೆಯ ಶತಮಾನದ ತರುವಾಯ, ಭಾರತೀಯ ಸಂಸ್ಕೃತಿಯಲ್ಲಿ ಒಂದು ಹೊಸ ಯುಗವು ಆರಂಭವಾಯಿತು. ಇದು ಎಲ್ಲ ಕಲೆಗಳ ಮೇಲೆ ಪರಿಣಾಮವನ್ನುಂಟು ಮಾಡಿದಂತೆ ಚಿತ್ರಕಲೆಯ ಮೇಲೆಯೂ ಮಾಡಿತು. ಚಿತ್ರಕಲೆಯಲ್ಲಿ ಹೊಸ ಜೀವವು ಬಂದಿತು. ಆ ಕೆಳಗೊಂಡ ಚಿತ್ರಶೈಲಿಗೆ ಈಗ ರಾಜಸ್ಥಾನಿ ಶೈಲಿಯಂದು ಹೆಸರು ಅಂದಿನ ಕಾಲದ ಜೈನ ಚಿತ್ರಗಳೆಲ್ಲವೂ ಇದೇ ಶೈಲಿಯಲ್ಲಿವೆ. ಅಕ್ಬರನು ಭಾರತದ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಲು ಯತ್ನಿಸಿದರು. ಅದರ ಒಂದು ಮುಖ್ಯ ಅಂಗವು ಚಿತ್ರಕಲೆಯ ಪುನರುದ್ಧಾರವೂ

ಆಗಿದೆ. ಅಲ್ಲಿಯವರೆಗೆ ಭಾರತದ ಪ್ರಾಚೀನ ಚಿತ್ರ ಸಂಪ್ರದಾಯವೊಂದು ಕಾಶ್ಮೀರದಲ್ಲಿ ಜೀವಂತವಾಗಿದ್ದಿತು. ಅದಕ್ಕೆ ಇರಾಣೀ ಚಿತ್ರ ಕಲೆಯ ಮೆರುಗನ್ನು ಕೊಟ್ಟು, ಅಕ್ಬರನೊಂದು ಚಿತ್ರಕಲೆಯಲ್ಲಿ ಹೊಸ ಶೈಲಿಯನ್ನು ಆರಂಭಿಸಿದನು. ಅದು ಮುಂದೆ ಮೊಘಲ್ ಶೈಲಿಯೆಂದು ಪ್ರಸಿದ್ಧವಾಯಿತು. ಇದನ್ನು ಜೈನರು ಸ್ವೀಕರಿಸಿ ಬೆಳಸಿದರು. ಕಲ್ಕತ್ತೆಯ ಪ್ರಸಿದ್ಧ ಸಿರಿವಂತರೂ ಕಲಾಪ್ರೇಮಿಗಳೂ ಆದ ಶ್ರೀ ಬಹಾದ್ದೂರ ಸಿಂಹ, ಸಿಂಘೀ ಅವರ ಬಹುಮೂಲ್ಯ ಸಂಗ್ರಹದಲ್ಲಿ 'ಶೀಲ ಭದ್ರಚರಿತ' ಎಂಬ ಜೈನಗ್ರಂಥವಿದೆ. ಇದರಲ್ಲಿ ಮೊಗಲ್ ಶೈಲಿಯ ಚಿತ್ರಗಳಿವೆ. ಇವುಗಳನ್ನು ಕ್ರಿಶ. ೧೯೨೪ರಲ್ಲಿ ಶಾಲಿವಾಹನ ಎಂಬ ಚಿತ್ರಕಾರನು ಆಗ್ರಾದಲ್ಲಿ ಬರೆದಿದ್ದಾನೆ.

ಇದೇ ಕಲಾವಿದನು ಕ್ರಿ.ಶ. ೧೯೧೦ರಲ್ಲಿ ಬರೆದ ಚಿತ್ರಪಟವೂ ಒಂದು ಇದೆ. ಇವು ಜೈನ ಚಿತ್ರಕಲೆಯ ಅಮೂಲ್ಯ ರತ್ನಗಳಾಗಿವೆ. ಪೂರ್ವ ಭಾರತದಲ್ಲಿ ೧೮–೧೯ನೆಯ ಶತಮಾನಗಳ ವರೆಗೂ ರಾಜಸ್ತಾನಿ ಸಂಪ್ರದಾಯದ ಚಿತ್ರಕಲೆಯೂ ಜೈನರಲ್ಲಿ ರೂಢವಾಗಿದ್ದಿತು. ಇಂಥ ಚಿತ್ರಗಳು ಜೈನ ಶ್ರಾವಕರು ವರ್ಷಾಕಾಲದಲ್ಲಿ ಮುನಿಗಳಿಗೆ ಬರೆದು ಕೊಟ್ಟ ಕ್ಷಮಾಪತ್ರಗಳಲ್ಲಿ ನೋಡಲಿಕ್ಕೆ ಸಿಕ್ಕುತ್ತವೆ; ಕೈಕೊಂಡ ವ್ರತಕ್ಕೆ ತಪ್ಪಿ ನಡೆದುದಕ್ಕಾಗಿ ಬರೆದುಕೊಂಡ ಕ್ಷಮಾಪತ್ರಗಳಾದರೂ ಅವು ಚಿತ್ರಕಲೆಯ ಪ್ರಗತಿಯ ನಿದರ್ಶನ ಪತ್ರಗಳಂತಿವೆ.

ಭಾರತದ ಲಲಿತಕಲೆಯ ಮುಖ್ಯ ಅಂಗವಾದ ಚಿತ್ರಕಲೆಯ ಬೆಳವಣಿಗೆಗೆ ಜೈನ ಸಂಪ್ರದಾಯವು ಸಾಕಷ್ಟು ಸಹಾಯವೆನ್ನುತ್ತಿದೆ ಎಂಬುದು ಈ ಅಲ್ಪ ಪರಿಚಯದಿಂದ ಗೊತ್ತಾಗುವಂತಿದೆ. ವಿಶೇಷವಾಗಿ ಚಿತ್ರಕಲಾಭ್ಯಾಸಿಗಳು ಇತ್ತ ಲಕ್ಷ್ಯ ಪೂರೈಸಿ ಜೈನ ಚಿತ್ರಕಲೆಯ ಸಮಗ್ರ ಪರಿಚಯವನ್ನು ಮಾಡಿಕೊಡುವುದು ಈಗ ಅತ್ಯವಶ್ಯವಾಗಿದೆ. ಜೈನ ಚಿತ್ರಪರಂಪರೆಗೆ ಕರ್ನಾಟಕದಲ್ಲಿ ತನ್ನದೇಯಾದಂತಹ ಇತಿಹಾಸವಿದೆ. ಅಲ್ಲದೆ ತನ್ನದೇ ಆದ ಹಿನ್ನೆಲೆಯನ್ನು ಉಳಿಸಿಕೊಂಡು ಧರ್ಮ, ಸಂಪ್ರದಾಯದ ಜೊತೆ ತನ್ನ ಕಲಾಹಿರಿಮೆಯನ್ನು ಕಾಯ್ದುಕೊಂಡು ಬಂದಿದೆ. ಇದರ ಜೊತೆಯಲ್ಲಿ ಜೈನಧರ್ಮೀಯರು ರಾಜಕೀಯವಾಗಿಯು ಪ್ರಾಬಲ್ಯ ಹೊಂದಿ ತಮ್ಮ ನೆಲೆಯನ್ನು ಕರ್ನಾಟಕದಲ್ಲಿ ಬದ್ರಪಡಿಸಿಕೊಂಡರಲ್ಲದೇ ಇದರ ಪ್ರಯೋಜನದಿಂದ ನಾಡು–ನುಡಿ ಕಲೆಗಳಲ್ಲು ಜೈನ ತತ್ತ್ವಾಚರಣೆಯ ಮಹತ್ವದ ಅರಿವು ಉಂಟುಮಾಡಿದರು ಗ್ರಂಥದಾನ, ಗ್ರಂಥಪ್ರತಿಮಾಡುವುದು, ತತ್ವಚರಣೆಯ ಬೋಧನಾಕ್ರಮದಿಂದ ನಾಡಿನ ಪ್ರಮುಖರನ್ನು ತನ್ನಡೆಗೆ ಆಕರ್ಷಿಸುವಂತೆ ಈ ಧರ್ಮದ ಕಲೆ ಮತ್ತು ಸಾಹಿತ್ಯಗಳು ಮಾಡಿತೆಂದರೆ ಅತಿಶಯೋಕ್ತಿಯಲ್ಲ. ಪ್ರಪಂಚದ ಯಾವುದೇ ಇತಿಹಾಸವನ್ನು ಗಮನಿಸದಿರು ಅಲ್ಲಿಯ ಧರ್ಮದ ಪ್ರಚಾರದ ಪ್ರಮುಖ ಮಾಧ್ಯಮಗಳೇ ಕಲೆ ಮತ್ತು ಸಾಹಿತ್ಯವಾಗಿರುತ್ತದೆ. ಸಾಹಿತ್ಯವು ಶ್ರವಣ ಮಾಧ್ಯಮವಾದರೆ ಕಲೆಯು ದೃಶ್ಯಮಾಧ್ಯಮವಾಗಿ ಬಹುಬೇಗನೆ ಪರಿಸುವಲ್ಲಿ ಸಾಧ್ಯವಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಜೈನ ಚಿತ್ರಕಲೆಯ ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ ಮತ್ತು ಗುಣಲಕ್ಷಣಗಳನ್ನು ಕುರಿತಂತೆ ಮಹತ್ವದ ಸಂಗತಿಗಳ ಆಲೋಚನೆಯಡೆಗೆ ಕರೆದೊಯ್ಯುವ ಪ್ರಯತ್ನವನ್ನು ಮಾಡಲಾಗುವುದು.

ಕಲೆಯ ಉಗಮವು ಮನುಷ್ಯನ ಸೃಜನತೆಯ ಅಂಶವೇ ಆದರೂ ಮೊದ ಮೊದಲು ಅದೊಂದು ಅಭಿವ್ಯಕ್ತಿಯ ಮಾಧ್ಯಮವಾಗಿದ್ದನು ಎಂಬುದನ್ನು ನಾವಿಲ್ಲಿ ಕಾಣಬಹುದು. ಕಲೆ ಎಂಬ ಪದ ಕುರಿತಾಗಿ ನಾನಾ ವಿದ್ವಾಂಸರು ಅವರವರ ಅಭಿಪ್ರಾಯಗಳನ್ನು ಹಂಚಿಕೊಳ್ಳುವರು ಈ ಅಭಿಪ್ರಾಯಗಳು ಅವರ ಕಾಲಕ್ಕೆ ಸರಿಯಾಗಿ ಮತ್ತೆ ಸಮಾಜ ಮುಂದುವರೆದಂತೆ ಆ ಧೋರಣೆಗಳು ಸರಿಯನಿಸದಿರಬಹುದು. ಕಾರಣ ಕಲೆ ಎಂಬುದು ನಿಂತ ನೀರಲ್ಲ. ಕಲೆಯು ನಿತ್ಯ ಸಾಗುವ ಚೇತನದಿಂದ ಇಲ್ಲಿ ಹಲವು ಪ್ರಭಾವ, ಪ್ರೇರಣೆಗಳು ಕಲೆಯ ದಿಕ್ಕುಗಳನ್ನು ಬದಲಾಯಿಸುತ್ತ ಸಾಗುತ್ತವೆ. ಆದ ಕಾರಣ ಯಾವುದೇ ಕಲಾಪರಂಪರೆಯ ಮೇಲೆ ಅಲ್ಲಿಯ ಧಾರ್ಮಿಕ, ಸಾಮಾಜಿಕ, ರಾಜಕೀಯ ಪ್ರಭಾವ ಪ್ರೇರಣೆಗಳು ಮಹತ್ವವೆನಿಸುತ್ತವೆ. ಯಾವುದೇ ಕಲೆಯು ತನ್ನ ವಸ್ತುವಿಷಯಗಳ ಮಂಡನೆಯಲ್ಲಿ ಆಯಾ ಪರಂಪರೆಯ ಸ್ಥೂಲ ಪ್ರಭಾವವನ್ನು ಪಡೆಯುವ ಜೊತೆಗೆ ಹೊರಗಾಕುವ ದ್ವಿಪ್ರಕ್ರಿಯೆಯನ್ನು ಅನುಸರಿಸುವುದು. ಸಮಾಜದಿಂದ ಪ್ರಭಾವವನ್ನು ಧರ್ಮದ ಮೂಲಕ ಹೊರ ಹಾಕಿದರೆ ಧರ್ಮದ ಮೂಲಗಳನ್ನು ಕಲೆ ಸಾಹಿತ್ಯದ ಮೂಲಕವೇ ಹೊರಹಾಕುವುದು. ಇದೊಂದು ನಿರಂತರ ಪ್ರಕ್ರಿಯೇ ಇಲ್ಲಿ ಎಲ್ಲಾ ವಿಧವಾದ ಪ್ರಭಾವ, ಪ್ರೇರಣೆಗಳು ಸಮಾಜ, ಧರ್ಮ, ಕಲೆ ಈ ಮೂರನ್ನು ಅನುಸರಿಸಿಯೇ ಸಾಗುತ್ತವೆ.

ಯಾವುದೇ ಕಲಾಕೃತಿ ಅಥವಾ ಯಾವುದೇ ಕಲೆ ಮತ್ತು ಅದರ ಕಾಲಮಾನ ಪ್ರೇರಣೆ, ಪ್ರಭಾವ, ಶೈಲಿ ಮತ್ತು ತಂತ್ರಗಾರಿಕೆಯಿಂದ ಕೂಡಿರುತ್ತದೆ. ಪ್ರಾಗ್ಇತಿಹಾಸದ ಕಾಲದ ಆದಿಮಾನವರ ಕಾಲದಿಂದಿಡಿದು ಇಂದಿನ ಕಲೆಯವರೆಗೂ ಪ್ರೇರಣೆ, ಪ್ರಭಾವಗಳು, ಬಹುಮುಖ್ಯವಾಗಿರುತ್ತದೆ. ಕಾಲಕಾಲಕ್ಕೆ ಪ್ರಕ್ರಿಯೆಯೊಳಗೆ ಇವೆಲ್ಲವೂ ಬದಲಾವಣೆಯ ಪ್ರಭಾವಕ್ಕೆ ಸಿಲುಕಿ ಬೆಳೆದು ಬಂದಿವೆ. ಮೊದ ಮೊದಲು ಆದಿಮಾನವರು ತಮ್ಮ ದಿನನಿತ್ಯದ ಜೀವ ಕ್ರಿಯೆಗಳಾದ ಬೇಟೆಗಾರಿಕೆ, ಸಂಭೋಗಕ್ರಿಯ, ಜೀವನ ಸಾಗಿಸಲು ಎದುರಾಗುವ ಸವಾಲುಗಳಿಂದ ಪ್ರಾಣಿಪಕ್ಷಿಗಳ ಜೀವನ ಶೈಲಿ ಅವುಗಳು ಜೀವನ ಸಾಗಿಸುವ ಶೈಲಿಗಳಿಂದ ಇವರುಗಳು ಪ್ರೇರಣೆಯನ್ನು ಪಡೆದುಕೊಂಡು ಚಿತ್ರಗಳನ್ನು ರಚಿಸುತ್ತಿದ್ದರು. ಅದರೆ ಇವರು ಯಾವುದೇ ಅನುಕರಣೆಯ ಪ್ರಭಾವಗಳು ಸಿಗುತ್ತಿರಲಿಲ್ಲ. ಹಾಗಾಗಿ ಇವರು ಬೇರೆ ಆದಿವಾಸಿಗಳ ಬುಡಕಟ್ಟು ಸಮುದಾಯಗಳ ಒಡನಾಟಗಳಿಂದ ಅವರ ಕಲೆಯ ಪ್ರಭಾವಕ್ಕೊಳಪಟ್ಟು ತಮ್ಮ ಶೈಲಿ ತಂತ್ರಗಾರಿಕೆಗಳನ್ನು ಇವರು ರೂಪಿಸಿಕೊಳ್ಳುತ್ತಿದ್ದರು. ಇದಾದ ಬಳಿಕ ಇತಿಹಾಸ ಕಾಲವನ್ನು ನೋಡುವುದಾದರೆ ಇಲ್ಲಿ ಇದರ ವ್ಯಾಪ್ತಿ ಹೆಚ್ಚಾಗುತ್ತಾ ಹೋಗತೊಡಗಿತು. ಕಾರಣ ಆ ಕಾಲಕ್ಕಾಗಲೆ ಅರಸು ಮನೆತನಗಳು ಬೆಳೆದು ಬಂದಿದ್ದವು. ಇಲ್ಲಿ ನಾನಾ ರೀತಿಯ

ಜನರು ನಾನಾ ಧರ್ಮಗಳು ನಾನಾ ಮನೆತನಗಳ ಉಗಮವಾಗಿ ಧರ್ಮಗಳಲ್ಲಿ ತತ್ತ್ವಾಧಾರಿತ ಪ್ರೇರಣೆಗಳು ಹೆಚ್ಚಾಗಿ ಆಚರಣೆ, ನಂಬಿಕೆಗಳು ಆ ಕಾಲಕ್ಕೆ ಎಲ್ಲರಲ್ಲು ಮನೆಮಾಡಿ ಆ ಕಾಲದ ಕಲೆಯ ಮೇಲೆ ಹೆಚ್ಚಿನ ಪ್ರೇರಣೆಯಾಗ ತೊಡಗಿತು. ಹೀಗೆ ಸಮಾಜವು ಬೆಳೆದಂತೆ ಸಂಸ್ಕೃತಿ ಸಂಪ್ರದಾಯಗಳು ಬೆಳೆದು ಪ್ರತ್ಯೇಕ ಧರ್ಮಗಳು ಉದಯಿಸಿ ಆ ಧರ್ಮಗಳಲ್ಲಿಯ ಅಂಶಗಳಿಂದ ಪ್ರೇರೇಪಿತನಾದ ಕಲಾವಿದ ಬೇರೆ ಬೇರೆ ಧರ್ಮಗಳ ಬೇರೆ ಬೇರೆ ಕಾಲ ಹಾಗೂ ಪ್ರಾಂತ್ಯಗಳಲ್ಲಿಯ ಕಲೆಯಿಂದ ಪ್ರಭಾವಿತನಾಗಿ ತನ್ನದೇ ಆದಂತಹ ಶೈಲಿಯನ್ನು ರೂಢಿಸಿಕೊಂಡು ಅದರಲ್ಲಿ ತನ್ನದೇ ಸ್ವಂತಿಕೆಯ ತಂತ್ರಗಾರಿಕೆಯನ್ನು ನಿರಂತರ ಪ್ರಯತ್ನದಿಂದ ರೂಢಿಸಿಕೊಂಡು ಅಂದೊಂದು ಪರಂಪರೆಯಾಗಿ ಬೆಳೆದು ಇತಿಹಾಸಗಳ ಪುಟ ಸೇರಿದೆ.

ಪ್ರಭಾವ, ಪ್ರೇರಣೆ

ಜೈನ ಧರ್ಮವು ಪುರಾತನವಾದ ಧರ್ಮವಾಗಿದ್ದು, ವೃಷಭೇಂದ್ರರ ಉಲ್ಲೇಖಗಳು ನಮಗೆ ಕೃತಯುಗದಲ್ಲಿ ದೊರೆಯುತ್ತವೆ. ಅಂದರೆ ಈ ಧರ್ಮವು ಪುರಾಣಗಳ ಪೂರ್ವಕ್ಕೆ ಸರಿಯುತ್ತದೆ. ೨೪ನೆಯ ತೀರ್ಥಂಕರರು ಬುದ್ಧನ ಸಮಕಾಲೀನರು. ಈ ಸಂಗತಿಯಿಂದ ಬೌದ್ಧ ಹಾಗೂ ಜೈನ ಒಂದೇ ಕಾಲಮಾನದಲ್ಲಿ ಮೊಳಕೆಯೊಡೆದ ಎರಡು ಧರ್ಮಗಳು ಎಂಬ ಮಾತು ಸುಳ್ಳಾಗುತ್ತದೆ. ವೈಧಿಕ ಧರ್ಮದ ಸಂಪ್ರದಾಯಗಳೇ ಹೆಚ್ಚಿದ್ದರೂ ಸಹ ಜೈನ ಧರ್ಮದಲ್ಲಿ ನಿಲುವುಗಳು ಆಚಾರ-ವಿಚಾರ ಧರ್ಮನಿಷ್ಠ ತತ್ತ್ವಪರಿಪಾಲನೆಗಳು ಬೇರೆ ಆಗಿರುವವರು. ಮೇಲೆ ತಿಳಿಸಿದಂತೆ ಕ್ರಿ.ಪೂ. ಮೂರನೇ ಶತಮಾನ ಜೈನ ಕಲಾಕೃತಿಯೊಂದು ಸೀತಾಬೊಂಗಾದ ಗುಹೆಗಳಲ್ಲಿ ದೊರೆತ ಉದಾಹರಣೆ ನಮಗೆ ದೊರೆತರೆ ಸ್ವಲ್ಪ ಕಾಲ ಹಿಂದಿನ ಮೈಸೂರು ಶೈಲಿಯ ಭಿತ್ತಿಚಿತ್ರಗಳಾದ ಶ್ರವಣಬೆಳಗೊಳದಲ್ಲಿಯ ಚಿತ್ರದವರೆವಿಗೂ ಇದರ ಪರಂಪರೆಯನ್ನು ನಾವು ಕಾಣಬಹುದು. ಆ ಕಾಲಮಾನದಿಂದ ಈ ಕಾಲಮಾನದ ನಡುವೆ ಜೈನ ಕಲಾ ಪರಂಪರೆಯ ಮೇಲೆ ಹಲವಾರು ಪ್ರಭಾವಗಳು ಬೀರಿ ಹಲವು ಶೈಲಿ, ತಂತ್ರಗಾರಿಕೆಯ ಉದಯಕ್ಕೆ ನಾಂದಿಯಾಗಿವೆ.

ಕರ್ನಾಟಕದ ವ್ಯಾಪ್ತಿಯ ಮಟ್ಟಿಗೆ ನಮಗನಿಸುವ ಕುರುಹುಗಳ ಪ್ರಕಾರ ಜೈನರ ಮಹಾಗ್ರಂಥಗಳಾದ ಧವಳತ್ರಯಗಳೇ ಅತೀ ಪ್ರಾಚೀನ ಜೈನ ಚಿತ್ರಕಲೆಯ ಆಕಾರವಾಗಿದೆ. ಇದು ಸುಮಾರು ೧೨ನೇ ಶತಮಾನದಲ್ಲಿ ಹೊಯ್ಸಳ ಅರಸ ವಿಷ್ಣುವರ್ಧನ ಕಾಲದಲ್ಲಿ ಕ್ರಿ.ಶ. ೧೧೧೩ರಿಂದ ೧೧೨೦ರೊಳಗೆ ರಚಿಸಿರಬಹುದೆಂಬುದು ವಿದ್ವಾಂಸರ ಅಭಿಪ್ರಾಯ ಇದರ ಪೂರ್ವದಿಂದಲೂ ಇತ್ತೆಂಬುದಕ್ಕೆ ಹಲವು ಸಾಕ್ಷಾದಾರಗಳೂ ಶಾಸನಗಳಲ್ಲಿ ಹಸ್ತಪ್ರತಿ ಗ್ರಂಥಗಳಲ್ಲಿ ಉಲ್ಲೇಖಗಳು ಇದ್ದರೂ ಸಹ ಇವುಗಳ ಭೌತಿಕ ಕುರುಹುಗಳು ಸಿಗುತ್ತಿಲ್ಲ. ನಮಗೆ ಸಿಕ್ಕಿರುವ ಧವಳ ತ್ರಯಿಗಳ ಹಾಗೂ

ಶ್ರವಣ ಬೆಳಗೊಳದ ಭಿತ್ತಿಚಿತ್ರಗಳನ್ನು ಇಟ್ಟುಕೊಂಡು ನಾವಿಲ್ಲಿ ಈ ಕಲೆ ಮೇಲಾದ ಪ್ರಭಾವಗಳ ಕುರಿತಂತೆ ಚರ್ಚಿಸಬಹುದು.

ಇದರ ಪೂರ್ವದಲ್ಲಿ ಬೌದ್ಧ ಚಿತ್ರಕಲೆಯ ತಾಣವಾದ ಅಜಂತದಲ್ಲಿ, ಬುದ್ಧನಿಗೆ ಸಂಬಂಧಿಸಿದ ಚಿತ್ರಗಳನ್ನು ನಾವು ಕಾಣಬಹುದು. ಅಂತೆಯೇ ಎಲ್ಲೋರದಲ್ಲೂ ಇದ್ದರೂ ಸಹ ಪ್ರಾಕೃತಿಕ ಆಪತ್ತಿನಿಂದ ಅವು ನಮಗಿಂದು ಕಾಣಸಿಗುವುದಿಲ್ಲವೇನೋ. ಜೈನ ಧರ್ಮಕ್ಕೆ ಸಂಬಂಧಿಸಿದ ಚಿತ್ರಗಳಿದ್ದು, ಇವುಗಳೂ ಕೂಡ ಪ್ರಾಕೃತಿಕ ವಿಪತ್ತಿನಿಂದ ನಾಶವಾಗಿವೆ ಎಂಬ ಅಭಿಪ್ರಾಯಕ್ಕೆ ಬರಬಹುದು. ಉದಾಹರಣೆ ಎಂಬಂತೆ ಬಾದಾಮಿಯ ಮೇಣಬಸದಿಯಲ್ಲಿ ಜೈನ ದೇವಾಲಯಗಳಿದ್ದು, ಇತ್ತೀಚಿನವರೆಗೂ ಜೈನ ಚಿತ್ರಕಲೆಯನ್ನು ನಾವು ಕಾಣಬಹುದಿತ್ತು. ಪ್ರಾಕೃತಿಕ, ವ್ಯಕ್ತಿಗತ ಆಪತ್ತಿನಿಂದ ಇವುಗಳ ನಾಶವಾಗಿದ್ದು, ಅದರ ಕುರುಹುಗಳ ಛಾಯೆಯನ್ನು ಕಾಣಬಹುದಾಗಿದೆ. ಮೊದಲಿಗೆ ಜೈನ ಹಸ್ತಪ್ರತಿಗಳಾದ ಧವಳ ತ್ರಯಗಳನ್ನು ನಾವು ಗಮನಿಸುವುದಾದರೆ ಇಲ್ಲಿ ಚಿತ್ರಗಳು ಸುಂದರವು ಹಾಗೂ ಹೊಯ್ಸಳ ಶೈಲಿಯೂ ನೇರವಾಗಿ ನಮಗೆ ಗೋಚರಿಸುತ್ತದೆ. ಇವುಗಳ ಮೇಲಾದ ಪ್ರಭಾವವನ್ನು ಗಮನಿಸುವುದಾದರೆ ಗುಜರಾತಿನ ಹಾಗೂ ಪಶ್ಚಿಮ ಬಂಗಾಳದಲ್ಲಿಯ ಪಾಲ ಮತ್ತು ಸೇನಾ ಕಲಾಕೃತಿಗಳ ಪ್ರಭಾವವು ಹಾಗೂ ಪೂರ್ವ ಗಾಂಧಾರ ಶೈಲಿಯ ಕಲಾಕೃತಿಗಳ ಪ್ರಭಾವವ ಈ ಕಲಾಕೃತಿಗಳಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ.

ಪಾಲ ಹಾಗೂ ಸೇನಾ ಕಲಾಕೃತಿಗಳಲ್ಲಿ ಹೆಚ್ಚಾಗಿ ಶಿಲ್ಪಗಳೇ ಹೆಚ್ಚಾಗಿದ್ದರೂ ಸಹ ಇದ ನೇರ ಪ್ರಭಾವಗಳು ಧವಳತ್ರಯಿಗಳ ಸಚಿತ್ರ ಹಸ್ತಪ್ರತಿಗಳ ಮೇಲಾಗಿರುವುದು ಕಂಡು ಬರುತ್ತದೆ. ಇಲ್ಲಿಯ ಶಿಲ್ಪಗಳಲ್ಲಿ ಕಣ್ಣುಗಳು ದೀರ್ಘವಾಗಿ ತೆರೆದಿರುವಂತೆ ದಿಟ್ಟಿಸಿ ನೋಡುವಂತೆ ಮೂಗು ಚೂಪಾಗಿ ರಚಿಸುವು ಚೌಕಾಕಾರದ ಮುಖಗಳು ಕಣ್ಣು ಮೂಗುಗಳ ಚೂಪಾದ ರಚನೆ ವಸ್ತ್ರವಿನ್ಯಾಸದ ಅಲ್ಲಲ್ಲಿ ಬೌದ್ಧರ ಗುಣಲಕ್ಷಣಗಳನ್ನು ನಾವಿಲ್ಲಿ ಕಾಣಬಹುದು ಈ ಚಿತ್ರಗಳನ್ನು ನಾವು ಬಹು ಸೂಕ್ಷ್ಮವಾಗಿ ಗಮನಿಸದಿರೆ ಮಾತ್ರ ಈ ಅಂಶಗಳು ಬಯಲಾಗುತ್ತವೆ. ಅಂತೆಯೇ ನೇರವಾಗಿ ಗೋಚರಿಸುವ ಪ್ರಭಾವಗಳ ಹೊಯ್ಸಳರ ಶಿಲ್ಪಗಳಲ್ಲಿ ವಿನ್ಯಾಸ ರಚನೆ ಎಂದರೆ ತಪ್ಪಾಗಲಾರದು. ಸಂಯೋಜನೆ, ವಿನ್ಯಾಸಗಳು ಬಹುತೇಕ ಹೊಯ್ಸಳರನ್ನೇ ಹೋಲುತ್ತವೆ. ಈ ಎಲ್ಲಾ ಪ್ರಭಾವಗಳು ಧವಳ ತ್ರಯಗಳಲ್ಲಿ ಕಾಣಬಹುದಾಗಿದೆ. ಕೆಲವೊಂದು ಉದಾಹರಣೆಯನ್ನು ಈ ಕೆಳಗಿನಂತೆ ಗಮನಿಸಬಹುದು.

ಪಾಲ ಸಾಮ್ರಾಜ್ಯವು ಕ್ರಿ.ಶ. ೮ನೇ ಶತಮಾನದಿಂದ ೧೨ನೇ ಶತಮಾನದಲ್ಲಿ ಭಾರತದ ಈಶಾನ್ಯ ರಾಜ್ಯಗಳಾದ ಬಾಂಗ್ಲಾ ನೇಪಾಳ ಪಶ್ಚಿಮ ಬಂಗಾಳ ಪ್ರದೇಶಗಳಲ್ಲಿ ಇತ್ತು ಅದರಲ್ಲಿ

ಗೋಪಾಲ ಮತ್ತು ಮದನಪಾಲ ಎಂಬ ಎರಡು ಮನೆತನಗಳಾದವು. ಇವರ ಭಾಷೆ ಪಾಲಿ ಹಾಗೂ ಸಂಸ್ಕೃತವಾಗಿತ್ತು. ಇವರಲ್ಲಿ ಹಿಂದೂ ಹಾಗೂ ಬೌದ್ಧ ಧರ್ಮಪರಂಪರೆಯನ್ನು ನಡೆಸುತ್ತಿದ್ದರಾದರೂ ಹೆಚ್ಚಿನ ಪಾಲು ಶಿಲ್ಪಗಳು ಹಸ್ತಪ್ರತಿಗಳು ಬೌದ್ಧಧರ್ಮಕ್ಕೆ ಸಂಬಂಧಿಸಿದ್ದವೇ ಆಗಿವೆ. ಇಲ್ಲಿ ರಚಿಸಲಾಗಿರುವ ಪಾಲಿಯ ಬೌದ್ಧ ಹಸ್ತಪ್ರತಿಗಳಿಗೂ ದಕ್ಷಿಣ ಭಾರತದ ಜೈನ ಧವಳ ಹಸ್ತಪ್ರತಿಗಳಿಗೂ ತೀರ ಒಂದೇ ಎಂಬುವಷ್ಟರ ಮಟ್ಟಿಗೆ ಸಾಮ್ಯತೆಗಳನ್ನು ನಾವಿಲ್ಲಿ ಕಾಣಬಹುದು. ಪಾಲಿ ಹಸ್ತಪ್ರತಿಗಳಲ್ಲೂ ಜೈನ ತೀರ್ಥಂಕರರಿಗೆ ಸಂಬಂಧಿಸಿದ ಜೈನ ಧರ್ಮಾಚರಣೆಗೆ ಸಂಬಂಧಿಸಿದ ಉತ್ಕೃಷ್ಟ ಮಟ್ಟಿನ ಕಲಾಕೃತಿಯನ್ನು ಕಾಣಬಹುದಿದೆ. ಆದರೆ ದಕ್ಷಿಣ ಭಾರತದ ಚಿತ್ರಗಳಿಗೂ ಉತ್ತರ ಈಶಾನ್ಯ ಚಿತ್ರಗಳಿಗೂ ವಿನ್ಯಾಸದಲ್ಲಿ ಸಂಯೋಜನೆಯಲ್ಲಿ ವ್ಯಕ್ತಿಚಿತ್ರಗಳಲ್ಲಿ ತೀರ ಬಹುತೇಕ ವ್ಯತ್ಯಾಸವಿದ್ದು, ಅಂಗಾಂಗ ರಚನಾಶಾಸ್ತ್ರದಲ್ಲಿ ಉತ್ತರ ಈಶಾನ್ಯ ಚಿತ್ರಗಳ ಪ್ರಭಾವವು ಹೆಚ್ಚಿನದಾಗಿ ಕಂಡುಬರುವುದು.

ಪಾಲಿ ಹಾಗೂ ಧವಳ ತ್ರಯಗಳಲ್ಲಿಯ ಹಸ್ತಪ್ರತಿ ಚಿತ್ರಗಳು ನೋಡಲು ಬಹುತೇಕ ಒಂದೇ ತರನಾಗಿದ್ದರೂ ಸಹ ಧವಳ ತ್ರಯಗಳಲ್ಲಿ ಹೊಯ್ಸಳ ಪ್ರಭಾವವು ಬಹುತೇಕ ಆವರಿಕೊಂಡಿದ್ದು, ತನ್ನ ಸ್ವಂತಿಕೆಯನ್ನು ಕಾಪಾಡಿಕೊಂಡಿದೆ. ಪಾಲಿ ಚಿತ್ರಗಳಲ್ಲಿ ಹಿನ್ನೆಲೆಯನ್ನು ನೀಲಿ ವರ್ಣದಲ್ಲಿ ತೋರಿಸಿದರೆ ಧವಳ ತ್ರಯದಲ್ಲಿ ಕೆಂಪು ವರ್ಣಗಳನ್ನು ಕಾಣಬಹುದಾಗಿದೆ. ವಿಶೇಷವೆಂದರೆ ಪಾಲಿಯ ಹಸ್ತಪ್ರತಿಗಳಿಗಿಂತಲೂ ಧವಳತ್ರಯಗಳು ದೊಡ್ಡದಾಗಿದ್ದು, ಪಾಲಿಯಲ್ಲಿ ಎರಡು ವ್ಯಕ್ತಿಚಿತ್ರಗಳು ಹಾಗೂ ಎರಡು ವಿನ್ಯಾಸಗಳ ಪಟ್ಟಿಗಳಿದ್ದರೆ, ಧವಳದಲ್ಲಿ ಐದು ವಿನ್ಯಾಸಪಟ್ಟಿಕೆ ಹಾಗೂ ಮೂರು ವ್ಯಕ್ತಿಚಿತ್ರಗಳ ಪಟ್ಟಿಗಳನ್ನು ನಾವಿಲ್ಲಿ ಕಾಣಬಹುದು. ಎಷ್ಟೇ ಪ್ರಭಾವವನ್ನು ಕಲೆಯು ಹೊಂದಿದ್ದರು ಕಲಾವಿದನು ತನ್ನ ಸ್ವಂತಿಕೆಯನ್ನು ಮರೆಯುವುದಿಲ್ಲವೆಂಬುದಕ್ಕೆ ಸಾಕ್ಷಿ ಈ ಎರಡು ಚಿತ್ರಗಳ ತೌಲನಿಕ ಸಮೀಕ್ಷೆಗಳು ಹಾಗೂ ಅದರಲ್ಲಿಯ ಪ್ರಭಾವಗಳು ಒಂದೊಂದಾಗಿ ಜೈನ ಕಲಾಪರಂಪರೆಯ ಮೇಲಾದ ಪ್ರಭಾವಗಳನ್ನು ನೋಡುವುದಾದರೆ ಮೂಲ ಆಕಾರಗಳ ಅಧ್ಯಾಯ ಬೇಕಾಗುವುದು. ಅದರಲ್ಲಿ ಧವಳ ಗ್ರಂಥವು ಪುರಾತನ ಹಾಗೂ ಮೂಲ ಆಕರವಾಗಿರುವುದರಿಂದ ಇದರ ಒಂದೊಂದು ಚಿತ್ರಗಳನ್ನು ನೋಡುವುದಾದರೆ, ಧವಳತ್ರಯದ ವೃಷಭ ತೀರ್ಥಂಕರನ ಹಸ್ತಪ್ರತಿ ಚಿತ್ರವನ್ನು ಗಮನಿಸದಿರೆ ನೇರವಾಗಿ ಇಲ್ಲಿ ಇದರ ಪೂರ್ವದ ಕಲೆಯಾದ ಪಾಲ ಚಿತ್ರಶೈಲಿಯ ಪ್ರಭಾವವು ಮೇಲ್ನೋಟಕ್ಕೆ ಕಂಡರೂ ವರ್ಣಗಾರಿಕೆ ವಿನ್ಯಾಸ ರಚನೆಯಲ್ಲಿ ಹೊಯ್ಸಳರ ಪ್ರಭಾವವು ಕಾಣುವುದು ಇದಕ್ಕೆ ಉದಾಹರಣೆ ಎಂಬಂತೆ ಇವನ ಹಿಂಬದಿಯಲ್ಲಿ ಇರುವ ವೃಕ್ಷದ ಚಿತ್ರವಿನ್ಯಾಸ ಹಾಗೂ ತೀರ್ಥಂಕರನ ಮೂರು ಭಾವ ಅಂಗಾಂಗಗಳ ಶೈಲಿಯು ಹೊಯ್ಸಳ ಶಿಲ್ಪವನ್ನು ಹೋಲುವುದರಿಂದ ಅಂದಿನ ಶಿಲ್ಪಕಲಾವಿದರ, ಚಿತ್ರಕಲಾವಿದರೂ ಒಂದೇ ಶಿಕ್ಷಣವನ್ನು ಪಡೆದಿರಬಹುದೆಂಬ ಅನಿಸಿಕೆಯು ವ್ಯಕ್ತವಾಗುವುದು.

ಪಾರ್ಶ್ವನಾಥರು ಹಾಗೂ ಜಿನ ಗುರುಗಳ ಚಿತ್ರವು ಧವಳ-ತ್ರಯದಲ್ಲಿದ್ದು, ಇಲ್ಲಿ ಮತ್ತೆ ನಮಗೆ ಪಾಲಿ ಚಿತ್ರದ ಪ್ರಭಾವವು ತೋರುವುದು ಇದರಲ್ಲಿ ಪಾರ್ಶ್ವನಾಥರು ಹಾಗೂ ಜಿನ ಗುರುಗಳು ಕುಳಿತಿರುವುದನ್ನು ಕಾಣಬಹುದು. ಇದರಲ್ಲಿ ಪಾರ್ಶ್ವನಾಥರನ್ನು ಕುಬ್ಜರಂತೆ ತೋರಿಸಲಾಗಿದ್ದು, ಶಿಷ್ಯರ ಕಣ್ಣುಗಳನ್ನು ಗಮನಿಸಿದಾಗ ಪಾಲಿಯ ಪ್ರಭಾವ ತೋರುವ ವರ್ಣಗಾರಿಕೆಯಲ್ಲೂ ಹಿನ್ನೆಲೆಯ ವರ್ಣವನ್ನು ಇಲ್ಲಿ ನೀಲಿ ಬಳಸಿರುವುದರಿಂದ ಪಾಲಿ ಕಲಾವಿದರು ಈ ಚಿತ್ರಗಳನ್ನು ರಚಿಸಿದ್ದರೇನೋ ಎಂಬುದು ತಿಳಿದುಬರುತ್ತದೆ. ಜ್ಞಾನೋಪದೇಶ ಚಿತ್ರದಲ್ಲಿ ಗುರ ಶಿಷ್ಯರು ಕುಳಿತಿರುವ ಚಿತ್ರವಿದ್ದು, ಹಿನ್ನೆಲೆಯಲ್ಲಿ ನವಿಲಿನ ಚಿತ್ರ ಹಾಗೂ ಬದಿಯಲ್ಲಿ ವಿನ್ಯಾಸದ ಚಿತ್ರವನ್ನು ಕಾಣಬಹುದಾಗಿದೆ. ಇದರಲ್ಲಿ ವ್ಯಕ್ತಿ ಚಿತ್ರಗಳು ಹೊಯ್ಸಳರಾದರೆ ಕಣ್ಣುಗಳು ಮಾತ್ರ ಪಾಲಿಯಲೆನಿಸುತ್ತವೆ. ಅಲ್ಲದೆ ಬೆರಳಿನ ವಿನ್ಯಾಸ ನವಿಲಿನ, ಕೊಕ್ಕು, ಚುಟ್ಟು, ಪುಕ್ಕಗಳು ಎಲ್ಲವೂ ಹೊಯ್ಸಳರ ಪ್ರಭಾವವನ್ನು ನೇರವಾಗಿ ಕಾಣಬಹುದು.

ಚತುರ್ಮುಖ ಯಕ್ಷನ ಚಿತ್ರವು ಧವಳ ತ್ರಯದಲ್ಲಿದ್ದು, ಇಲ್ಲಿ ಅವನು ಕುಳಿತಿರುವ ಭಂಗಿ ಆಭರಣ ವಿನ್ಯಾಸ ಹಿನ್ನೆಲೆಯಲ್ಲಿ ನವಿಲಿನ ಪುಕ್ಕದ ಗೊಂಚಲ ವಿನ್ಯಾಸಗಳು ಹೊಯ್ಸಳರ ಶಿಲ್ಪಗಳಲ್ಲಿಯ ಬಾಹ್ಯ ರೇಖಾವಿನ್ಯಾಸವನ್ನು ಮೆಲುಕು ಹಾಕಿಸುತ್ತವೆ. ಮತ್ತೊಬ್ಬ ಯಕ್ಷ ಚಿತ್ರದಲ್ಲೂ ಸಹ ಅವನು ಹಿಡಿದಿರುವ ಆಯುಧಗಳು ವಸ್ತ್ರವಿನ್ಯಾಸ ಆಭರಣಗಳು ಹೊಯ್ಸಳ ಪ್ರಭಾವವನ್ನು ತೋರುತ್ತವೆ. ಜ್ವಾಲಮಾಲಿನಿ ಯಕ್ಷಿಯ ಚಿತ್ರವು ಧವಳ ತ್ರಯಗಳಲ್ಲಿ ಹೊಯ್ಸಳ ಪ್ರಭಾವ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ನಿಖರವಾಗಿ ಸೂಚಿಸುವುದು ಕುಳಿತಿರುವ ಭಂಗಿ ಅಂಗವಿನ್ಯಾಸ ಸ್ತನಗಳಿಗೆ ಹೊಯ್ಸಳರು ಕೊಡುವ ಪ್ರಾಮುಖ್ಯತೆ ಆಯುಧಗಳು ವಸ್ತ್ರವಿನ್ಯಾಸಗಳನ್ನು ಬೇಲೂರು ಶಿಲಾಬಾಲಿಕೆಯರಲ್ಲಿ ನಾವು ಕಾಣಬಹುದು. ಅಲ್ಲದೆ ಈ ಯಕ್ಷಿಯ ವಾಹನವಾದ ಮಹಿಷಿಯು ಕೆಳಗೆ ಮಲಗಿದ್ದು ಕೊರಳ ಮಾಲೆ, ತಲೆ, ಕೊಂಬು, ಕಾಲು ಮಡಿಚಿರುವುದು ಎಲ್ಲವೂ ಹೊಯ್ಸಳರ ಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಇದರ ಜೊತೆಗೆ ಚಿತ್ರ ಹಾಗೂ ಗ್ರಂಥ ವಿಷಯವನ್ನು ಬೇರೆ ಮಾಡಲು ಮಧ್ಯ ಮಧ್ಯ ವಿನ್ಯಾಸದ ಚಿತ್ರಗಳಿವೆ. ಇದರ ಮೇಲೆ ತಿಳಿಗಪ್ಪು ವರ್ಣವನ್ನು ಲೇಪಿಸಿ ಅದರ ಮೇಲೆ ಕಪ್ಪು ವರ್ಣಗಳಿಂದ ವಿನ್ಯಾಸ ರಚನೆಯನ್ನು ಮಾಡಲಾಗಿರುವ ಮನಮೋಹಕವಾಗಿದೆ. ಇದೇ ವಿನ್ಯಾಸಗಳು ಹೊಯ್ಸಳರ ಶಿಲ್ಪಗಳಲ್ಲಿ ಶಿಲ್ಪ ಶಿಲ್ಪಗಳ ನಡುವಿನ ಹಂತರವನ್ನು ಮುಚ್ಚಲು ಬಳಸಲಾಗುವ ವಿನ್ಯಾಸ ಪಟ್ಟಗಳಲ್ಲು ಇದೇ ವಿನ್ಯಾಸಗಳನ್ನು ಕಾಣಬಹುದು. ಇದರಿಂದಲೇ ಸುಲಭವಾಗಿ ಇವು ಹೊಯ್ಸಳ ಪ್ರಭಾವಿತ ಚಿತ್ರಗಳೆಂದು ಹೇಳಬಹುದು. ಹೀಗೆ ಸಚಿತ್ರ ಹಸ್ತಪ್ರತಿ ಮೇಲಾದ ಪ್ರಭಾವಗಳನ್ನು ನಾವಿಲ್ಲಿ ಕಾಣಬಹುದು.

ಇದೇ ರೀತಿಯಲ್ಲಿ ಭಿತ್ತಿಚಿತ್ರಗಳ ಮೇಲೂ ಹಲವು ಕಲಾಶೈಲಿಯ ಪ್ರಭಾವಗಳಾದ್ದುದು, ಇವುಗಳನ್ನು ಸಹ ನಾವಿಲ್ಲಿ ಆಲೋಚಿಸಬಹುದಾಗಿದೆ. ಜೈನ ಭಿತ್ತಿಚಿತ್ರಗಳಲ್ಲಿ ನಮಗೆ ಕರ್ನಾಟಕ ವ್ಯಾಪ್ತಿಯಲ್ಲಿ ದೊರಕುವ ಹಳೆಯ ಭಿತ್ತಿಚಿತ್ರಗಳೆಂದರೆ ಶ್ರವಣಬೆಳಗೊಳದ ಭಿತ್ತಿಚಿತ್ರಗಳು ಇವು ಮೈಸೂರು ಅರಸನಾದ ನಾಲ್ವಡಿ ಕೃಷ್ಣರಾಜ ಅರಸರ ಕಾಲದಲ್ಲಿದ್ದವು ಎಂಬುದಕ್ಕೆ ಸಾಕಷ್ಟು ಪುರಾವೆಗಳನ್ನು ಈ ಹಿಂದಿನ ಅಧ್ಯಾಯಗಳಲ್ಲಿ ಹೇಳಲಾಗಿ ಇವುಗಳ ಮೇಲೆ ಹೆಚ್ಚು ಪ್ರಭಾವಗಳನ್ನು ನಾವಿಲ್ಲಿ ಕಾಣಬಹುದು.

ಕರ್ನಾಟಕದಲ್ಲಿ ಜೈನ ಆದಿನೆಲೆಯಾದ ಶ್ರವಣ ಬೆಳಗೊಳದ ಶ್ರೀಮಠದಲ್ಲಿ ಭಿತ್ತಿಚಿತ್ರಗಳಿದ್ದು, ಇವುಗಳು ಮೈಸೂರು ಅರಸನಾದ ಮುಮ್ಮಡಿ ಕೃಷ್ಣರಾಜನ ಕಾಲಕ್ಕೆ ರಚಿತವಾದವು ಎಂಬುದು ಇತಿಹಾಸ ಇದರ ಹೊರತಾಗಿಯೂ ಕತ್ತಲಬಸದಿ, ನೇಮಿನಾಥ ಬಸದಿ, ಪಾರ್ಶ್ವನಾಥ ಬಸದಿ, ದಾನಾಶಿಲಾಬಸದಿ, ತಿಪ್ಪದ ಬಸದಿ ಹೀಗೆ ಇಲ್ಲೆಲ್ಲ ಚಿತ್ರಗಳಿದ್ದ ಕುರುಹುಗಳಿದ್ದು, ಇವು ಮಠದ ಚಿತ್ರಕ್ಕಿಂತ ಪೂರ್ವದ ಚಿತ್ರಗಳೆಂಬುದಕ್ಕೆ ಸಾಕ್ಷಿಗಳಿವೆ. ಅದೇನೆ ಇದ್ದರೂ ಸಹ ಶ್ರವಣಬೆಳಗೊಳದ ಶ್ರೀಮಠದಲ್ಲಿರುವ ಚಿತ್ರಗಳು ಈಗಿನ ಜೈನ ಚಿತ್ರಪರಂಪರೆಯ ಮೂಲ ಆಸ್ತಿ ಎಂದರೆ ಅತಿಶಯೋಕ್ತಿಯಿಲ್ಲ.

ಇಲ್ಲಿಯ ಚಿತ್ರಗಳ ಮೇಲಾದ ಪ್ರಭಾವಗಳನ್ನು ಒಂದೊಂದಾಗಿ ಗಮನಿಸುತ್ತಾ ಹೋಗುವುದಾದರೆ ಮೊಘಲ್ ಶೈಲಿ, ವಿಜಯನಗರ ಶೈಲಿ ಹಾಗು ಮೈಸೂರು ಶೈಲಿ ಈ ಮೂರು ಚಿತ್ರ ಶೈಲಿಗಳ ಪ್ರಭಾವವನ್ನು ನಾವಿಲ್ಲಿ ಕಾಣಬಹುದು. ಪಶ್ಚಿಮದ ಎಡಗೋಡೆಯಿಂದ ನಾವು ಈ ಚಿತ್ರಗಳನ್ನು ಗಮನಿಸದಿರೆ, ವಿಶ್ವಭೂತಿ ಮಹಾರಾಜನ ಆಸ್ಥಾನದ ಚಿತ್ರವಿದ್ದು, ಇಲ್ಲಿ ಮೈಸೂರು ಶೈಲಿಯ ಪ್ರಭಾವವಿದ್ದು, ಮೈಸೂರು ಅರಮನೆಯ ಪ್ರೇರಣೆಯನ್ನು ಕಾಣಬಹುದು. ಅರಮನೆಯ ಚಾವಣಿಯಿಂದ ಬಂದ ಹೂವಿನ ಮೊಗ್ಗಿನ ವಿನ್ಯಾಸಗಳನ್ನು ಇವುಗಳು ವಿಜಯನಗರ ಚಿತ್ರಗಳ ಪ್ರಭಾವವನ್ನು ತೋರುತ್ತವೆ. ಇದೇ ಚಿತ್ರಗಳಲ್ಲಿ ಕಾಣಸಿಗುವ ಗಾಜಿನ ದೀಪಕಂಬಗಳು, ಮೈಸೂರು ಅರಸರ ಅರಮನೆಯಿಂದ ಪ್ರೇರಣೆಯಾಗಿದ್ದು, ಇದರ ಪ್ರಭಾವವನ್ನು ಇಲ್ಲಿ ಕಾಣಬಹುದಾಗಿದೆ. ಇವರ ವಸ್ತ್ರ ವಿನ್ಯಾಸಗಳು ಅರಸರ ಚಿತ್ರಗಳು ಮೈಸೂರು ಅರಸರಿಂದ ಪ್ರೇರಣೆಗೊಂಡರೆ, ರಾಜ ಪರಿವಾರದ ಸಭಿಕರ ಚಿತ್ರಗಳನ್ನು ನೋಡುವುದಾದರ ಮೊಘಲರ ಶೈಲಿ ಎಂದೆನಿಸದಿರೂ ಅವು ಟಿಪ್ಪು ಹೈದರಾಲಿಯರ ಪರಿವಾರದ ವಸ್ತ್ರ ಶೈಲಿಯಿಂದ ಪ್ರೇರಣೆಗೊಂಡು ಚಿತ್ರ ವಿನ್ಯಾಸದಲ್ಲಿ ಮೈಸೂರು ಹಾಗೂ ಮೊಘಲರ ಪ್ರಭಾವವನ್ನು ಕಾಣಬಹುದು. ಆದರೆ ಚಾವಣಿಗಳು ಸಂಯೋಜನೆ ಕಟ್ಟಡಗಳ ವಿನ್ಯಾಸಗಳು ವಿಜಯನಗರ ಶೈಲಿಯ ಪ್ರಭಾವವನ್ನು ತೋರುತ್ತವೆ.

ಈ ಮಠದಲ್ಲಿಯ ಚಿತ್ರಗಳೂ ಜೈನ ಪುರಾಣಗಳಿಂದ ಪ್ರೇರಣೆಗೊಂಡು ಅವುಗಳ ಆದರ್ಶ ತತ್ತ್ವಗಳ ಕುರಿತಾಗಿದ್ದು, ಪುರಾಣ ಪುಣ್ಯ ಕತೆಗಳ ಪ್ರೇರಣೆಯನ್ನು ಹೊಂದಿವೆ. ಇಲ್ಲಿ ರಚಿಸಲಾಗಿರುವ

ಪಾರ್ಶ್ವನಾಥ ಚರಿತ್ರೆ ೨೪ ತೀರ್ಥಂಕರರು, ಯಕ್ಷ-ಯಕ್ಷಿಯರು, ಸಮವಸರಣ, ಪಂಚಕಲ್ಯಾಣ, ಮಾನಸ್ಥಂಬ, ಷಡ್‌ಲೇಷ್ಯಗಳು, ದೀಕ್ಷ ಕಲ್ಯಾಣ, ಕೇವಲಜ್ಞಾನ, ಅಷ್ಟ ಮಂಗಳಗಳು, ಹದಿನಾರು ಶುಭ ಕನಸುಗಳು, ನರಕ, ಸ್ವರ್ಗ ಪರಿಕಲ್ಪನೆ, ನಾಗಕುಮಾರ ಚರಿತ್ರೆ ಹೀಗೆ ಹಲವಾರು ಜೈನ ತತ್ತ್ವಗಳ ಕಥಾವಸ್ತುಗಳ ಪ್ರೇರಣೆಯಿಂದ ಈ ಚಿತ್ರಗಳು ರಚನೆಯಾಗಿದ್ದು, ಮೈಸೂರು, ವಿಜಯನಗರ ಹಾಗೂ ಮೊಘಲರ ಪ್ರಭಾವವನ್ನು ಸಹ ಇಲ್ಲಿ ಪ್ರಮುಖವಾಗಿ ನೋಡಬಹುದು.

ಈ ಚಿತ್ರಗಳಲ್ಲಿ ಮಹಡಿ ಮನೆಗಳು, ಫಿರಂಗಿಗಳು, ತುಪಾಕಿಗಳನ್ನು ಇಡಿ ಯುದ್ಧಕ್ಕೆ ಹೋಗುತ್ತಿರುವುದು ಇವೆಲ್ಲವುಗಳು ಮೈಸೂರಿನ ರಾಜವ್ಯವಸ್ಥೆಯ ಪ್ರೇರಣೆಗಳಾಗಿದ್ದು, ಇವುಗಳ ರಚನಾಕಾರ್ಯದಲ್ಲಿ ಮೈಸೂರು, ವಿಜಯನಗರ ಚಿತ್ರ ಶೈಲಿಯನ್ನು ಕಾಣಬಹುದಾಗಿದೆ. ಇಲ್ಲಿ ಕಾಣಸಿಗುವ ಚಿತ್ರಗಳೇ ಸಿಬಿಯ ಹೊರಚಾವಣಿಯಲ್ಲಿರುವ ಮಿಥುನ ಚಿತ್ರಗಳ ಬಳಿಯಲ್ಲಿಯೇ ಕಾಣಬಹುದಾಗಿದೆ. ಕಮ್ಮಟನು ಮರುಭೂಮಿಯ ಮೇಲೆ ಕಲ್ಲನ್ನು ಹಾಕಿ ಸಾಯಿಸುತ್ತಿರುವ ದೃಶ್ಯದಲ್ಲಿಯ ಪ್ರಕೃತಿ ಚಿತ್ರವು ಹಿರಿಯೂರಿನ ಭಿತ್ತಿಚಿತ್ರಗಳಿಂದ ಪ್ರಭಾವಿತವಾಗಿರುವುದನ್ನು ನಾವಿಲ್ಲಿ ಕಾಣಬಹುದು. ಹೀಗೆ ಈ ಮಠದಲ್ಲಿಯ ಚಿತ್ರಗಳು ಮೈಸೂರು, ವಿಜಯನಗರ ಹಾಗೂ ಸ್ವಲ್ಪ ಮಟ್ಟಿನ ಮೊಘಲರ ಪ್ರಭಾವ ಪ್ರೇರಣೆಯನ್ನು ಈ ಚಿತ್ರಗಳಲ್ಲಿ ಕಾಣಬಹುದಾಗಿದೆ.

ಇದನ್ನು ಹೊರತುಪಡಿಸಿ ಮೂಡಬಿದರೆಯ ಚಿತ್ರಗಳಿದ್ದು, ಇಲ್ಲಿಯೂ ಸಹ ಜೈನರ ಸಮವಸರಣ ಲೋಕರಚನೆ, ಮಾನಸ್ಥಂಬಗಳು, ಅಷ್ಟಮಂಗಲಗಳು, ಷಡ್‌ದ್ರವ್ಯಗಳು, ಜೈನ ರಾಮಾಯಣ, ಜೈನ ಮಹಾಭಾರತ, ಭರತ ಬಾಹುಗಳ ಚಿತ್ರ, ಯಕ್ಷಗಾನದ ಚಿತ್ರಗಳಿದ್ದು, ಇವು ಜೈನ ತತ್ತ್ವಾದರ್ಶಗಳ ಪ್ರೇರಣೆಯನ್ನು ಪಡೆದಿವೆ. ಇಲ್ಲಿ ಚಿತ್ರಗಳು ಶ್ರವಣ ಬೆಳಗೊಳದ ಚಿತ್ರಪ್ರಭಾವವಾಗದೆ ಮೈಸೂರು ಆಧುನಿಕ ಶೈಲಿಯ ರವಿವರ್ಮರ ಕಲಾಕೃತಿಗಳ ಪ್ರೇರಣೆಯು ಹೆಚ್ಚು ಕಂಡುಬರುತ್ತದೆ. ಗರ್ಭಗೃಹದ ಬಳಿಯಲ್ಲಿ ಇರುವ ಜಂಬೂ ವೃಕ್ಷಗಳು, ಸಮವಸರಣ ಹಾಗೂ ಲೋಕ ರಚನೆಯ ಚಿತ್ರಗಳ ಮೇಲೆ ಹಸ್ತಪ್ರತಿಗಳಲ್ಲಿಯ ರೇಖಾ ಚಿತ್ರಗಳ ಪ್ರಭಾವವು ಹೆಚ್ಚಿದ್ದು, ಧ್ವಜ, ಮಾನಸ್ಥಂಭ, ಅಷ್ಟಮಂಗಲಗಳ ಚಿತ್ರಗಳ ರೇಖಾ ಚಿತ್ರವು ಸಚಿತ್ರ ಹಸ್ತಪ್ರತಿ ರೇಖಾ ವಿನ್ಯಾಸದಲ್ಲಿವೆ. ಇವುಗಳ ಪ್ರಭಾವವು ಮತ್ತು ಪ್ರೇರಣೆಯನ್ನು ನಾವಿಲ್ಲಿ ಕಾಣಬಹುದು. ಆದರೆ ಹೊರಗೋಡೆಯ ಮೇಲಿರುವ ಜೈನ ರಾಮಾಯಣ ಮತ್ತು ಮಹಾಭಾರತ ಹಾಗೂ ಭರತ ಬಾಹುವಿನ ಚಿತ್ರದಲ್ಲಿ ಮಾತ್ರ ರಾಜರವಿವರ್ಮನ ಪ್ರಭಾವವು ಎದ್ದು ಕಾಣುತ್ತವೆ. ಇವರು ರಚಿಸಿರುವ ಕ್ಯಾಲೆಂಡರ್ ಚಿತ್ರಗಳ ಸಂಯೋಜನೆ ಹಾಗೂ ವರ್ಣಗಾರಿಕೆ ಇದಕ್ಕೆ ಪುಷ್ಟಿ ನೀಡುತ್ತಿದೆ.

ಇನ್ನುಳಿದಂತೆ ಬಜಗೋಳದಲ್ಲಿಯ ಚಿತ್ರಗಳೂ ಸಹ ಜೈನ ಪ್ರೇರಣೆಯಿಂದ ರಚಿತವಾದ ಚಿತ್ರಗಳಾದರೂ ಸಹ ಇಲ್ಲಿ ತೀರ್ಥಂಕರರ ಸಾಲುಚಿತ್ರಗಳ ಜೊತೆ ಸರಸ್ವತಿ ಹಾಗೂ ರಾಜನೊಬ್ಬನು

ತೀರ್ಥಂಕರರಿಗೆ ದಾನ ನೀಡುವ ಚಿತ್ರಗಳಿದ್ದು, ಇವುಗಳೂ ಸಹ ರವಿವರ್ಮರ ಪ್ರೇರಣೆಯನ್ನು ಕಾಣಬಹುದು. ಅರಿಕಲ್ಲು ಬಸಿದಿಯ ಚಿತ್ರಗಳಲ್ಲಿಯ ಚಿತ್ರಗಳು ರವಿವರ್ಮರಿಂದ ಪ್ರಭಾವಿತಗೊಂಡಿವೆ. ಇವನ್ನು ಹೊರತುಪಡಿಸಿ ಬಲ್ಲಮಂಜ ಹಾಗೂ ನಲ್ಲೂರು ನಾರಾವಿ ಚಿತ್ರಗಳು ತೀರಾ ಇತ್ತೀಚಿನವಾಗಿದ್ದು, ವಾಣಿಜ್ಯ ಕಲಾವಿದರ ಚಿತ್ರಗಳೆನಿಸುವುದರ ಜೊತೆಗೆ ಕ್ಯಾಲೆಂಡರ್ ಪ್ರಭಾವಗಳನ್ನು ಈ ಚಿತ್ರಗಳಲ್ಲಿ ಕಾಣಬಹುದು.

ಶೈಲಿ, ತಂತ್ರಗಾರಿಕೆ

ಯಾವುದೇ ಪರಂಪರೆ ಚಿತ್ರಗಳು ತನ್ನದೇಯಾದಂತಹ ಶೈಲಿ ಮತ್ತು ತಂತ್ರಗಾರಿಕೆಯನ್ನು ಹೊಂದಿರುತ್ತವೆ. ಈ ಶೈಲಿ ಮತ್ತು ತಂತ್ರಗಾರಿಕೆಗಳು ಪೂರ್ವಪರಂಪರೆಯ ಪ್ರಭಾವ ಪ್ರೇರಣೆಯನ್ನೊಳಗೊಂಡು ತನ್ನದೇಯಾದಂತಹ ಶೈಲಿಯನ್ನು ರೂಢಿಸಿಕೊಂಡಿರುತ್ತವೆ. ಜೈನ ಪರಂಪರೆಯಲ್ಲಿ ಹಸ್ತಪ್ರತಿ ಮತ್ತು ಭಿತ್ತಿಚಿತ್ರಗಳೆರಡರಲ್ಲಿಯೂ ಚಿತ್ರಗಳಿದ್ದು, ಇವುಗಳ ಶೈಲಿ ಮತ್ತು ತಂತ್ರಗಾರಿಕೆ ಬೇರೆ ಬೇರೆಯಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಸಚಿತ್ರ ಹಸ್ತಪ್ರತಿಗಳಲ್ಲಿಯ ಶೈಲಿ ತಂತ್ರಗಾರಿಕೆಗಳು ಹಾಗೂ ಭಿತ್ತಿಚಿತ್ರಗಳಲ್ಲಿಯ ಶೈಲಿ ತಂತ್ರಗಾರಿಕೆಗಳಾಗಿ ವಿಭಜಿಸಿ ಅಧ್ಯಯನ ಮಾಡಬಹುದಾಗಿದೆ.

ಕರ್ನಾಟಕದ ವ್ಯಾಪ್ತಿಯಲ್ಲಿ ಬರುವ ಸಚಿತ್ರ ಹಸ್ತಪ್ರತಿಯ ವರ್ಣಚಿತ್ರಗಳಲ್ಲಿ ಮೂಲ ಆಕರವಾಗಿರುವ ಧವಳ ತ್ರಯಗಳ ಜೈನ ಮೂಲ ಗ್ರಂಥಗಳೆನಿಸಿವೆ. ಇವುಗಳಲ್ಲಿರುವ ಚಿತ್ರಗಳು ನೋಡಲು ಮನಮೋಹಕವೆನಿಸುವವು ಕರ್ನಾಟಕದ ಮಟ್ಟಿಗೆ ಇವು ಅತಿ ಪ್ರಾಚೀನ ಸಚಿತ್ರ ವರ್ಣ ಹಸ್ತಪ್ರತಿಗಳಾಗಿವೆ. ಇವುಗಳ ಕಾಲಮಾನ ೧೨ನೇ ಶತಮನವಾಗಿದೆ. ಇದೆ ಸಮಕಾಲಿಕ ಹಸ್ತಪ್ರತಿಗಳಾದ ಪಾಲಿ ಹಸ್ತಪ್ರತಿಗಳಲ್ಲು ಇದೇ ಶೈಲಿಯ ಸಚಿತ್ರ ವರ್ಣ ಹಸ್ತಪ್ರತಿಗಳನ್ನು ಕಾಣಬಹುದು. ಈ ಹಸ್ತಪ್ರತಿಗಳಲ್ಲಿಯೂ ಜೈನರ ತತ್ತ್ವದರ್ಶನ, ತೀರ್ಥಂಕರರ ಚಿತ್ರಗಳಿದ್ದು, ಪಾಲಿ ಹಾಗೂ ಸಂಸ್ಕೃತಿ ಭಾಷೆಯಲ್ಲಿವೆ. ಇವೆರಡೂ ಹಸ್ತಪ್ರತಿಗಳ ಸಂಯೋಜನ ಶೈಲಿ, ಸ್ಥಳಾವಕಾಶಗಳ ಹೊಂದಾಣಿಕೆ ಬಾಹ್ಯ ರೇಖಾವಿನ್ಯಾಸಗಳು ತೀರ ಸಾಮ್ಯತೆ ಹೊಂದಿದ್ದರೂ ಇವೆರಡನ್ನೂ ಬೇರೆ ಬೇರೆಯಾಗಿಯೇ ವರ್ಗೀಕರಿಸುವಷ್ಟು ಭಿನ್ನತೆಗಳ ಸೂಕ್ಷ್ಮವಾಗಿ ಗಮನಿಸಿದಾಗ ಗ್ರಹಿಕೆಗೆ ಬರುತ್ತವೆ.

ಧವಳತ್ರಯಗಳ ಸಂಯೋಜನಾ ಶೈಲಿಯು ಹಾಗೂ ಪಾಲಿ ಶೈಲಿಯೂ ಒಂದೇ ತರನಾಗಿದ್ದು, ಬಣ್ಣಗಳ ಬಳಕೆ ವಿಷಯಗಳ ಆಯ್ಕೆ ಮತ್ತು ಸೃಷ್ಠಿ ಇವೆರಡರಲ್ಲೂ ಬಿನ್ನತೆಯನ್ನು ಕಾಣಬಹುದು. ಇಲ್ಲಿ ಕಲಾವಿದನು ಹಸ್ತಪ್ರತಿಯ ಮೇಲೆ ಮೊದಲು ರೇಖಾಚಿತ್ರ ರಚಿಸಿಕೊಂಡು ಮೊದಲಿಗೆ ಹಿನ್ನೆಲೆಯ ವರ್ಣಗಳನ್ನು ಲೇಪಿಸಿಕೊಂಡು ಉಳಿದಿರುವ ತಾಳೆಗರಿಯನ್ನು ಹಾಗೆ ಉಳಿಸಿಕೊಂಡು ರೇಖಾವಿನ್ಯಾಸದ

ಮೂಲಕ ಚಿತ್ರ ರಚಿಸಿದ್ದು, ಇಲ್ಲಿ ಕಲಾವಿದನ ತಂತ್ರಗಾರಿಕೆಯು ಮೆಚ್ಚುಗೆ ಪಡುವಂತಹದ್ದಾಗಿದೆ. ಇದರೊಂದಿಗೆ ವರ್ಣಗಳನ್ನು ಪ್ರಮಾಣಬದ್ಧವಾಗಿ ಲೇಪಿಸಿದ್ದು, ಬೇಕಿದ್ದಲ್ಲಿ ಮಾತ್ರ ಒತ್ತಾಗಿ ಲೇಪಿಸಿದ್ದು, ಉಳಿದಂತೆ ತೆಳುವಾಗಿ ತಾಳೆಗರಿಯೊಂದಿಗೆ ಮಿಶ್ರಿಸಿದ್ದಾನೆ. ಚಿತ್ರ ಸಂಯೋಜನೆಯು ತುಂಬಾ ಸ್ಪಷ್ಟವಾಗಿದ್ದು, ವಿಷಯಗಳ ಅಭಿವ್ಯಕ್ತತೆ ನೇರವಾಗಿರುತ್ತದೆ. ಇಲ್ಲಿಯ ತಾಳೆಗರಿಯಲ್ಲಿನ ವಿಷಯಕ್ಕೆ ತಕ್ಕಂತಹ ಚಿತ್ರಗಳನ್ನೇ ಕಾಣಬಹುದಾಗಿದೆ.

ಧವಳತ್ರಯದ ವೃಷಭನಾಥರ ಚಿತ್ರವು ಪಾಲಿಯ ಶೈಲಿಯನ್ನು ಹೋಲುತ್ತದೆ. ಆದರೆ ಇಲ್ಲಿಯ ರೇಖಾವಿನ್ಯಾಸ ಹಾಗೂ ಸಂಯೋಜನೆಗಳು ಹೊಯ್ಸಳರ ಶಿಲ್ಪಗಳಲ್ಲಿಯ ವಿನ್ಯಾಸವನ್ನು ತೋರುತ್ತವೆ. ವರ್ಣಗಾರಿಕೆಯು ಪಾಲಿಯನ್ನು ಹೋಲಿದರೂ ಸಹ ಇವರಿಬ್ಬರ ತಂತ್ರಗಾರಿಕೆಗಳು ಒಂದೇ ತರನಾಗಿವೆ. ಈ ಚಿತ್ರದಲ್ಲಿ ಹಿನ್ನೆಲೆಯಿಂದ ಚಿತ್ರವರ್ಣನೆಯನ್ನು ಮಾಡುತ್ತ ರೇಖಾ-ವಿನ್ಯಾಸದೊಂದಿಗೆ ಚಿತ್ರಗಳನ್ನು ಪೂರ್ಣಗೊಳಿಸಿದ್ದು, ದ್ವಿ ಆಯಾಮದ ತಂತ್ರಗಾರಿಕೆಯ ತುಂಬಾ ಚೆನ್ನಾಗಿ ಮೂಡಿಬಂದಿವೆ. ಮತ್ತೊಂದು ತೀರ್ಥಂಕರರ ಚಿತ್ರದಲ್ಲಿ ತೀರ್ಥಂಕರರು ನಿಂತಿದ್ದು, ಇಲ್ಲಿಯೂ ಸಹ ಹೊಯ್ಸಳರ ಅಂಗವಿನ್ಯಾಸ ಶೈಲಿಯನ್ನು ಕಾಣಬಹುದಾಗಿದ್ದು, ದ್ವಿ ಆಯಾಮದ ತಂತ್ರಗಾರಿಕೆಯನ್ನು ಬಳಸಿಕೊಂಡು ಸುಂದರವಾಗಿ ಕಾಣುವಂತೆ ಚಿತ್ರ ರಚಿಸಿದ್ದು, ಬದಿಗಳಲ್ಲಿಯ ವಿನ್ಯಾಸವು ಪಾಲಿ ಶೈಲಿಯನ್ನು ಹೋಲುತ್ತವೆ.

ಪಾರ್ಶ್ವನಾಥರ ಚಿತ್ರದಲ್ಲಿ ಅಜಂತ ಚಿತ್ರಗಳಲ್ಲಿಯ ಸಂಯೋಜನಾ ಶೈಲಿಯನ್ನು ಹೊಂದಿದ್ದು, ಪ್ರಕರವಾದ ಬಣ್ಣಗಳು ರೇಖಾವಿನ್ಯಾಸ ಸಂಯೋಜನೆಯಲ್ಲಿ ಕಲಾವಿದನು ತನ್ನ ತಂತ್ರಗಾರಿಕೆಯನ್ನು ತೋರಿದ್ದು ದ್ವಿ ಆಯಾಮದ ಚಿತ್ರದಲ್ಲಿ ವಿಷಯ ಸ್ಪಷ್ಟನೆಯನ್ನು ತೋರಿರುವನು. ಪಾರ್ಶ್ವನಾಥರು ನಿಂತಿದ್ದು, ಧವಳತ್ರಯದ ಚಿತ್ರದಲ್ಲಿ ಗೊಮ್ಮಟ ಆಕಾರವು ಹೊಯ್ಸಳ ಶೈಲಿಯ ಪ್ರತೀಕವಾಗಿದ್ದು, ಇಲ್ಲಿಯ ಸ್ತ್ರೀಯರುಗಳ ಸ್ತನಗಳನ್ನು ನಗ್ನವಾಗಿ ತೋರಿಸಿದ್ದು, ಬಹುಪಾಲು ದುಂಡಾಗಿ ಚಿತ್ರಿಸಿದ್ದಾರೆ. ಈ ಚಿತ್ರದಲ್ಲಿಯ ವಸ್ತ್ರವಿನ್ಯಾಸ ಅಂಗರಚನೆ, ಬಾಹ್ಯರೇಖೆಗಳು ಹೊಯ್ಸಳರ ಶೈಲಿಯನ್ನು ಹೋಲುತ್ತವೆ ಎನ್ನುವುದಕ್ಕೆ ಇಲ್ಲಿರುವ ಶಿಲ್ಪಗಳು ಸಾಕ್ಷಿಯಾಗಿದ್ದು, ಬೇಲೂರು, ಹಳೇಬೀಡುನಲ್ಲಿ ನಾವು ಇಂದಿಗೂ ಕಾಣಬಹುದಾಗಿದೆ.

ಗುರುಶಿಷ್ಯರ ಸಂವಾದದ ಚಿತ್ರದಲ್ಲಿಯೂ ಸಹ ರೇಖಾವಿನ್ಯಾಸದ ಅದ್ಭುತವಾದ ಸಂಯೋಜನೆಯನ್ನು ಇಲ್ಲಿ ಮಾಡಲಾಗಿದ್ದು, ಈ ಚಿತ್ರಶೈಲಿಯು ಬಾದಾಮಿ ಚಾಲುಕ್ಯರ ಶೈಲಿಯಿಂದ ಪ್ರೇರೇಪಿತವಾದಂತೆ ಕಾಣುತ್ತದೆ. ಇಲ್ಲಿರುವ ಚಿತ್ರಗಳಲ್ಲಿ ಬಾದಾಮಿಯ ಗುಹಾಂತರ ದೇವಾಲಯಗಳಲ್ಲಿ ಕಂಡುಬರುವಂತಹ ಚಿತ್ರ ಶೈಲಿಯಾಗಿದ್ದು, ತಂತ್ರಗಾರಿಕೆಯೂ ಸಹ ಇದನ್ನೇ ಹೋಲುತ್ತದೆ. ಮತ್ತೊಂದು

ಗುರುಶಿಷ್ಯರ ಚಿತ್ರವಿದ್ದು, ಅಜಂತಾ ಚಿತ್ರಗಳ ವರ್ಣಗಾರಿಕೆ ರೇಖಾ ವಿನ್ಯಾಸವನ್ನು ನಾವಿಲ್ಲಿ ಕಾಣಬಹುದಾಗಿದೆ. ಅಂಗವಿನ್ಯಾಸವು ಹಾಗೂ ಅದರ ಬಾಹ್ಯರೇಖಾ ವರ್ಣಗಳು ಅಜಂತೆಯ ಸಾಮ್ಯತೆಯನ್ನು ಹೊಂದಿದೆ. ಇಲ್ಲಿ ರಚಿಸಲಾಗಿರುವ ಕಣ್ಣುಗಳು ಪಾಲಿ ಶೈಲಿಯ ತಂತ್ರಗಾರಿಕೆಯನ್ನು ಬಳಸಿ ಚಿತ್ರಿಸಲಾಗಿದೆ.

ಜ್ವಾಲಮಾಲಿನಿ ಯಕ್ಷಿಯ ಚಿತ್ರದಲ್ಲಿಯೂ ಸಹ ಹಿನ್ನೆಲೆಯಲ್ಲಿ ಕೆಂಪುವರ್ಣವನ್ನು ಲೇಪಿಸಲಾಗಿದ್ದು, ಕೆಂಪು ಬಾಹ್ಯ ರೇಖೆಗಳಿಂದ ಚಿತ್ರವನ್ನು ಪೂರ್ಣಗೊಳಿಸಲಾಗಿದೆ. ಇಲ್ಲಿಯೂ ಸಹ ಹೊಯ್ಸಳರ ಬಾಹ್ಯ ರೇಖಾವಿನ್ಯಾಸದ ಶೈಲಿಯನ್ನು ಕಾಣಬಹುದಾಗಿದ್ದು, ವರ್ಣಗಾರಿಕೆಯಲ್ಲಿ ತೆಳುವಾದ ವರ್ಣಲೇಪನದ ಮೇಲೆ ದಟ್ಟವರ್ಣಗಳ ಲೇಪನದ ತಂತ್ರಗಾರಿಕೆಯನ್ನು ನಾವಿಲ್ಲಿ ಕಾಣಬಹುದಾಗಿದ್ದು, ಬದಿಯಲ್ಲಿಯ ವಿನ್ಯಾಸ ಶೈಲಿಯೂ ಸಹ ಪಾಲಿಯ ಹಸ್ತಪ್ರತಿಗಳಲ್ಲಿ ಇರುವಂತೆ ಇಲ್ಲಿಯೂ ಅದೇ ಶೈಲಿ ಮತ್ತು ತಂತ್ರಗಾರಿಕೆಯನ್ನು ಕಲಾವಿದನು ನಿರೂಪಿಸುವಲ್ಲಿ ಯಶಸ್ವಿಯಾಗಿರುವನು.

ಇದಾದ ಬಳಿಕ ಭಿತ್ತಿಚಿತ್ರಗಳ ಕುರಿತಾಗಿ ಹೇಳುವುದಾದರೆ ಜೈನ ಧರ್ಮೀಯ ಪುರಾತನ ಭಿತ್ತಿಚಿತ್ರಗಳ ಉಲ್ಲೇಖವು ಕ್ರಿಸ್ತಪೂರ್ವದಿಂದಲೇ ಇದ್ದರೂ ಸಹ ಕರ್ನಾಟಕದ ವ್ಯಾಪ್ತಿಯಲ್ಲಿ ಶ್ರವಣಬೆಳಗೊಳದ ಶ್ರೀಮಠದಲ್ಲಿಯ ಭಿತ್ತಿಚಿತ್ರಗಳೇ ಅತೀ ಪುರಾತನವಾಗಿವೆ. ಇದರ ಪೂರ್ವದಲ್ಲಾದ ಭಿತ್ತಿಚಿತ್ರಗಳು ನಾಶವಾಗಿದ್ದು, ಇವುಗಳು ಇದ್ದ ಬಗೆಯ ಉಲ್ಲೇಖಗಳನ್ನು ಗಮನಿಸಬಹುದು. ಜೈನ ಚಿತ್ರಪರಂಪರೆಯ ಚಿತ್ರಗಳಲ್ಲಿ ಭಿತ್ತಿಚಿತ್ರವು ಅಸಾಧಾರಣವಾದ ಆಕಾರವಾಗಿದೆ. ಇಲ್ಲಿಯ ಭಿತ್ತಿಗಳು ಜೈನ ಪುರಾಣವನ್ನು, ಆದರ್ಶವನ್ನು ಹಂತ ಹಂತವಾಗಿ ಕಣ್ಣಮುಂದೆ ಬಂದಂತೆ ಕಟ್ಟಿಕೊಡಲಾಗಿದೆ.

ಇಲ್ಲಿಯ ಭಿತ್ತಿಶೈಲಿಯ ವಿಜಯನಗರೋತ್ತರ ಶೈಲಿಯಾಗಿದ್ದು, ಇದರಲ್ಲಿ ಮೈಸೂರು ಶೈಲಿಯ ಮೊಘಲರ ಪ್ರಭಾವ ತಂತ್ರಗಾರಿಕೆಗಳನ್ನು ಕಾಣಬಹುದಾಗಿದೆ. ಈ ಭಿತ್ತಿಚಿತ್ರಗಳಿಗೆ ಈ ಧರ್ಮದ ತತ್ತ್ವಾದರ್ಶಗಳೇ ಪ್ರೇರಣೆಯಾಗಿದ್ದು, ಜೈನ ಧರ್ಮದ ಹಲವು ಸೂಕ್ಷ್ಮತೆಗಳು ಈ ಚಿತ್ರಗಳಲ್ಲಿ ವಿಸ್ತಾರವಾಗಿ ಕಾಣಸಿಗುತ್ತವೆ. ಈ ಚಿತ್ರಗಳಲ್ಲಿ ಮೈಸೂರಿನ ಶೈಲಿಯ ಸಂಯೋಜನೆಗಳು ಸಿಗುವುದರ ಜೊತೆಗೆ ವಿಷಯಗಳ ನಿರೂಪಣೆಯೂ ವಿಜಯನಗರದ ಪ್ರಭಾವ ಮತ್ತು ತಂತ್ರಗಾರಿಕೆಯನ್ನು ಹೋಲುತ್ತವೆ. ಮರುಭೂತಿಯ ಕಲೆಯಲ್ಲಿ ವಿಶ್ವಭೂತಿಯ ರಾಜಪರಿವಾರದವರು ತೊಟ್ಟಿರುವ ವಸ್ತ್ರವಿನ್ಯಾಸಗಳು ಮೊಘಲರ ವಸ್ತ್ರವಿನ್ಯಾಸದಂತೆ ತೋರಿದರೂ ಈ ಚಿತ್ರಗಳು ಮುಮ್ಮಡಿ ಕೃಷ್ಣರಾಜರ ಕಾಲಕ್ಕೆ ಆಗಿದ್ದ ಕಾರಣದಿಂದ ಅವರ ಸಾಮಂತರಾಜ ಪರಿವಾರದವರಾಗಿದರ ಹೈದರಾಲಿ ಮತ್ತು ಟಿಪ್ಪುಗಳು ಮುಸ್ಲೀಮರೇ ಆದ ಕಾರಣ ಇವರ ಪ್ರೇರಣೆ ಹಿಂದೆ ಈ ಶೈಲಿಯು ಕಂಡಿರಬಹುದು. ಅಲ್ಲದೆ ಚಿತ್ರದಲ್ಲಿಯ ಕಟ್ಟಡಗಳ ಮೇಲೂ ಮೊಘಲರ ಶೈಲಿಯಲ್ಲಿ ಭಿತ್ತಿಚಿತ್ರಗಳನ್ನು ಕಾಣಬಹುದು.

ಅವರು ಧರಿಸಿರುವ ರುಮಾಲು ಪೇಟ ಸೊಂಟಕ್ಕೆ ಸುತ್ತಿಕೊಂಡ ವಸ್ತ್ರಗಳು ಇವೆಲ್ಲವು ಸಹ ಮೊಘಲರ ಶೈಲಿಯನ್ನು ಹೋಲುತ್ತವೆ. ವ್ಯಕ್ತಿ ಅಂಗಗಳಲ್ಲಿಯು ಅವರ ಮೀಸೆ ಮತ್ತು ಮೂಗು ಗಲ್ಲಗಳು ಮೊಘಲರ ಶೈಲಿಯಲ್ಲಿವೆ.

ಇಲ್ಲಿಯ ಚಿತ್ರಗಳನ್ನು ಹಂತ ಹಂತವಾಗಿ ಕಥೆಯ ವಿಷಯವನ್ನು ಆಧರಿಸಿ ಚಲನಚಿತ್ರ ಮಾದರಿಯಲ್ಲಿ ಪಟ್ಟಿ ಪಟ್ಟಿಗಳಾಗಿ ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು ಈ ನಾಲ್ಕು ಸಾಲುಗಳಲ್ಲಿಯೂ ನಿರಂತರವಾಗಿ ಚಿತ್ರಗಳ ಚಲನೆ ತೋರುವಂತೆ ತಂತ್ರಗಾರಿಕೆಯನ್ನು ಬಳಸಿಕೊಂಡು ಚಿತ್ರರಚನೆಯನ್ನು ಮಾಡಲಾಗಿರುವುದು. ಇದರ ಜೊತೆಯಲ್ಲಿ ವಿಷಯದ ಕೇಂದ್ರವನ್ನು ಮಧ್ಯದಲ್ಲಿ ಇರಿಸಿಕೊಂಡು ಉಳಿದದ್ದನ್ನು ಅತ್ತಿತ್ತ ಔಚಿತ್ಯಪೂರ್ಣ ಸಂಯೋಜನೆಯನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ತಂತ್ರಗಾರಿಕೆಯು ನೋಡುಗನ ಕಣ್ಣುಗಳು ನೇರವಾಗಿ ವಿಷಯವನ್ನು ಗ್ರಹಿಸುವಂತೆ ಮಾಡಿದ್ದಾನೆ. ಇಲ್ಲಿ ರಾಜನ ಮುಂದೆ ವ್ಯಕ್ತಿಯೊಬ್ಬನ ಚಿತ್ರವಿದ್ದು, ರಾಜನಿಗೆ ಈ ವ್ಯಕ್ತಿಯ ಚಿತ್ರದಿಂದ ತೊಂದರೆಯಾಗದಿರುವಂತೆ ಅವನನ್ನು ಕಿರುರೂಪದಲ್ಲಿ ತೋರಿಸಲಾಗಿದ್ದು, ಅವರ ವಸ್ತ್ರವಿನ್ಯಾಸವನ್ನು ಸಹ ಗೌಣಗೊಳಿಸಿ ಕಲಾವಿದನು ತನ್ನ ತಂತ್ರಗಾರಿಕೆಯನ್ನು ಮೆರೆದಿದ್ದಾನೆ.

ಇದರ ಜೊತೆಯಲ್ಲಿಯೇ ವಿಜಯನಗರ ಶೈಲಿಯ ಗೋಪುರ ವಿನ್ಯಾಸಗಳಿದ್ದು, ಎಲ್ಲಾ ವಿನ್ಯಾಸಗಳನ್ನು ವಿಜಯನಗರದ ಶೈಲಿಗಳಲ್ಲಿ ಕಾಣಬಹುದು. ಉದಾಹರಣೆಗೆ ಹಂಪಿಯ ವಿರೂಪಾಕ್ಷೇಶ್ವರ ದೇವಾಲಯದಲ್ಲಿಯ ಚಿತ್ರಗಳಲ್ಲಿ ಹೇಗೆ ಕಟ್ಟಡಗಳ ರಚನೆ ಹಾಗೂ ಮೇಲಿಂದ ಹೂಗಳು ಬಿದ್ದಿರುವಂತೆ ತೋರಿಸಲಾಗಿರುವುದು. ಇಷ್ಟೇ ಅಲ್ಲ ರಾಜನು ಧರಿಸಿರುವ ಕಿರೀಟ ಶೈಲಿಯು ವಿಜಯನಗರದ್ದಾದರೆ ಅವನ ಸಭಿಕರು ಧರಿಸಿರುವ ಪೇಟಗಳು ಇಲ್ಲಿ ಮುಸ್ಲೀಮ್ ಸಾಮಂತ ಅರಸರ ಪೇಟಗಳನ್ನು ಹೋಲುತ್ತವೆ. ಇವು ಶ್ರೀರಂಗಪಟ್ಟಣದ ಚಿತ್ರಗಳಲ್ಲೂ ಹಾಗೂ ಸೀಬಿಯ ಹೊರ ಗೋಪುರದ ಚಾವಣಿಗಳ ಮೇಲಿರುವ ಚಿತ್ರಗಳನ್ನು ಮೆಲುಕು ಹಾಕುತ್ತವೆ. ಇಲ್ಲಿಯ ಯುದ್ಧದ ದೃಶ್ಯಗಳ ಚಿತ್ರಗಳಿದ್ದು, ಯುದ್ಧಕ್ಕೆ ಸಾಗುತ್ತಿರುವವರ ಕೈಯಲ್ಲಿ ತುಪಾಕಿ ಹಾಗೂ ಮದ್ದುಗುಂಡುಗಳು ಇದ್ದು, ಅದಕ್ಕೆ ಸರಿಹೊಂದುವ ಸೊಂಟದ ಪಟ್ಟಿಯೊಂದನ್ನು ಇಲ್ಲಿ ಕಟ್ಟಿರುವಂತೆ ತೋರಿಸಿದ್ದು, ಫಿರಂಗಿಗಳ ಚಿತ್ರಗಳೂ ಸಹ ಈ ಚಿತ್ರಗಳಲ್ಲಿದ್ದು, ಇವು ಮೈಸೂರು ಶೈಲಿಯನ್ನು ಹೋಲುವುದರಲ್ಲಿ ಅನುಮಾನವೇ ಇಲ್ಲ. ಕಮಟನ ರಾಸಲೀಲೆಯ ಚಿತ್ರದಲ್ಲಿಯೂ ಸಹ ಸ್ತ್ರೀಯ ವಸ್ತ್ರಗಳು ವಡವೆ, ವೈಢೂರ್ಯಗಳು ಹೆಚ್ಚಾನೆಚ್ಚಿದ್ದು, ಇವುಗಳು ಮೈಸೂರು ಶೈಲಿಯನ್ನು ಹೋಲುವುದರ ಜೊತೆಗೆ ಇಲ್ಲಿ ತ್ರಿ ಆಯಾಮದ ತಂತ್ರಗಾರಿಕೆಯನ್ನು ಕಲಾವಿದನು ತೋರಿಸಿದ್ದಾನೆ.

ಕಮ್ಮಟನನ್ನು ಸ್ತ್ರೀ ಕಾಮಿಯ ಪಟ್ಟವನ್ನು ಕಟ್ಟಿ ತಲೆಬೋಳಿಸಿ, ಕತ್ತೆಯ ಮೇಲೆ ಮೆರವಣಿಗೆ

ಮಾಡುವ ಚಿತ್ರವಿದ್ದು, ಇಲ್ಲಿಯ ವ್ಯಕ್ತಿಯೊಬ್ಬನು ಚಳ್ಳವನ್ನು ಧರಿಸಿ ಕತ್ತೆಯನ್ನು ಹಿಡಿದು ಚಲಾಯಿಸುತ್ತಿರುವಂತಿದ್ದು, ಇದೇ ಶೈಲಿಯ ಚಿತ್ರವು ಹಿರಿಯೂರಿನ ಭಿತ್ತಿಚಿತ್ರದಲ್ಲಿಯೂ ಕಾಣಬಹುದಾಗಿದೆ. ಇಲ್ಲಿ ಬೇಡರು ದೊಡ್ಡದಾದ ರುಮಾಲನ್ನು ಕಟ್ಟಿಕೊಂಡು ಮೊಣಕಾಲಿಗಿಂತ ಉದ್ದದ ಚಳ್ಳಗಳನ್ನು ಧರಿಸಿ ಸಾಗುತ್ತಿರುವುದು ಕಂಡುಬರುತ್ತವೆ. ಇದೇ ಚಿತ್ರದಲ್ಲಿ ಈ ಮನುಷ್ಯ ಎತ್ತರವಾಗಿದ್ದರೂ ಸಹ ವಿಷಯಕ್ಕೆ ತೊಂದರೆಯಾಗದಂತೆ ಕತ್ತೆ ಹಾಗೂ ಕಮಟನ ಚಿತ್ರಗಳಿಗೆ ತೊಂದರೆಯಾಗದಂತೆ ಅವನ್ನು ಮುಂದೆ ತರುವ ತಂತ್ರಗಾರಿಕೆಯಲ್ಲಿ ಕಲಾವಿದನು ಇಲ್ಲಿ ಯಶಸ್ವಿ ಕಂಡಿರುವನು.

ಪಾರ್ಶ್ವನಾಥರ ಜನ್ಮಾಂತರಗಳ ಚಿತ್ರದಲ್ಲಿಯೂ ಸಹ ವಿಶೇಷವಾಗಿ ವಿಜಯನಗರೋತ್ತರ ಶೈಲಿಯನ್ನು ನಾವಿಲ್ಲಿ ಕಾಣಬಹುದಾಗಿದ್ದು, ನರಕ ಮತ್ತು ಸ್ವರ್ಗದ ವ್ಯತ್ಯಾಸದ ತಂತ್ರಗಾರಿಕೆಯನ್ನು ಕಲಾವಿದನು ಚಿತ್ರಿಸಿದ್ದು, ಚೌಕಾಕಾರದಲ್ಲಿ, ವೃತ್ತಾಕಾರದಲ್ಲಿ ಇವರುಗಳ ನರಕದ ಕಲ್ಪನೆಯನ್ನು ತೋರಿಸಿರುವನು. ಇದರ ಕೆಳಭಾಗದ ಸ್ವರ್ಗ ಪರಿಕಲ್ಪನೆಯ ಚಿತ್ರಗಳಿದ್ದು, ಇವುಗಳ ಗೋಪುರದಲ್ಲಿ ವಿಜಯನಗರ ಶೈಲಿಯನ್ನು ಕಾಣಬಹುದಾಗಿದೆ. ಪಾರ್ಶ್ವನಾಥರ ಜನ್ಮಾಭಿಷೇಕದ ಚಿತ್ರದಲ್ಲಿ ಕಿರೀಟಧಾರಿಗಳಾದ ದೇವತೆಗಳಿದ್ದು, ಇವುಗಳು ಮೈಸೂರು ಶೈಲಿಯ ಪ್ರಭಾವಗಳು ನೇರವಾಗಿವೆ. ಇದೇ ಚಿತ್ರದಲ್ಲಿ ಪಾರ್ಶ್ವನಾಥರ ಜನನದ ಸಂದರ್ಭ ಚಿತ್ರವಿದು, ಇದನ್ನು ಕಲಾವಿದನು ಅರಮನೆಯ ಕಿಟಕಿಯಿಂದ ತೋರಿಸಿದ್ದು, ಇವನಲ್ಲಿಯ ತಂತ್ರಗಾರಿಕೆಯ ಹಿರಿಮೆಯ ಪ್ರದರ್ಶನವಾಗುತ್ತದೆ.

ಮೂಡಬಿದರೆಯ ಜೈನ ಮಠದಲ್ಲಿಯೂ ಭಿತ್ತಿಚಿತ್ರಗಳಿದ್ದು, ಇವು ಸಚಿತ್ರ ಹಸ್ತಪ್ರತಿಯಲ್ಲಿಯ ರೇಖಾಚಿತ್ರಗಳನ್ನು ಹೋಲುತ್ತವೆ. ಇಲ್ಲಿಯ ನಮಸರಣ ಚಿತ್ರ ಲೋಕವರ್ಣನೆ, ಮಾನಸ್ತಂಭ, ಅಷ್ಟಮಂಗಳಗಳು, ಜಂಬೂ ವೃಕ್ಷ ಇವೆಲ್ಲವೂ ಹಸ್ತಪ್ರತಿಗಳಲ್ಲಿ ರೇಖಾಚಿತ್ರದಲ್ಲಿದ್ದು, ಇದನ್ನು ಭಿತ್ತಿಯ ಮೇಲೆ ಮೂಡಿಸಿದ್ದು, ಇದೊಂದು ವಿಶೇಷ ಶೈಲಿಯಾಗಿದೆ. ಇದಲ್ಲದೆ ಗರ್ಭಗೃಹದ ಮುಂದಿರುವ ಕಟ್ಟಡ ಚಿತ್ರಗಳಲ್ಲಿ ಜೈನ ರಾಮಾಯಣ ಮಹಾಭಾರತಗಳಿದ್ದು, ಇವುಗಳಲ್ಲಿ ರಾಜರವಿವರ್ಮ ಪ್ರಭಾವ ನೇರವಾಗಿ ಕಂಡುಬಂದಿದ್ದು, ಈ ಚಿತ್ರಗಳಲ್ಲಿ ಪಾಶ್ಚಾತ್ಯ ಶೈಲಿಯು ನೇರವಾಗಿ ಮೂಡಿಬಂದಿದೆ. ಇಲ್ಲಿ ಕಲಾವಿದನು ಪಾಶ್ಚಾತ್ಯ ತಂತ್ರಗಾರಿಕೆಯನ್ನು ಬಳಸಿರುವನು.

ನೆಲ್ಲಿಕಾರು ಶ್ರಾವಕರ ಮನೆಯಲ್ಲಿರುವ ಚಿತ್ರಗಳೂ ಸಹ ೧೯ರ ದಶಕದ ಚಿತ್ರಗಳಾಗಿದ್ದು, ಈ ಚಿತ್ರಗಳಲ್ಲಿ ಪಾಶ್ಚಾತ್ಯರ ಶೈಲಿಯನ್ನು ಕಾಣಬಹುದು. ತಂತ್ರಗಾರಿಕೆಯೂ ಅದೇ ಮಾದರಿಯಲ್ಲಿ ಕಂಡುಬರುವುದು ಬಜಗೋಳದಲ್ಲಿಯು ಶ್ರಾವಕರ ಮನೆಯಲ್ಲಿ ಭಿತ್ತಿಚಿತ್ರಗಳಿದ್ದು, ಇವುಗಳು ೧೯ನೇ ಶತಮಾನದ ಸಂದರ್ಭದಲ್ಲಿ ಆದಂತಹ ಚಿತ್ರಗಳೇ ಆಗಿವೆ. ಇಲ್ಲಿರುವ ಶಾರದೇ, ರಾಜನು ದಾನ

ಮಾಡುವ ದೃಶ್ಯ ಇವುಗಳು ರಾಜ ರವಿವರ್ಮನಿಂದ ಪ್ರೇರೇಪಿತವಾಗಿ ಪಾಶ್ಚಾತ್ಯ ಶೈಲಿಯಲ್ಲಿ ಚಿತ್ರಗಳನ್ನು ರಚಿಸಲಾಗಿರುವುದು.

ನಲ್ಲೂರು, ಅರಿಕಲ್ಲು ಬಸದಿ, ಬಲ್ಲಮಂಜ ಇಲ್ಲಿಯ ಚಿತ್ರಗಳು ತೀರ ಇತ್ತೀಚಿನ ಚಿತ್ರಗಳೇ ಆಗಿದ್ದು, ಇಲ್ಲಿಯ ಕಲಾವಿದರೂ ಸಹ ರವಿವರ್ಮನ ಪ್ರಭಾವಕ್ಕೆ ಒಳಗಾಗಿ ಪಾಶ್ಚಾತ್ಯ ಶೈಲಿಯ ಚಿತ್ರಗಳೇ ಮೂಡಿರುವುದು ವಿಶೇಷವಾಗಿದೆ. ಒಟ್ಟಾರೆಯಾಗಿ ಶೈಲಿ ಮತ್ತು ತಂತ್ರಗಾರಿಕೆಗಳು ಪ್ರಭಾವ, ಪ್ರೇರಣೆಯ ಮುಂದುವರೆದ ಭಾಗವಾದ ಕಾರಣ ಸಾಮಾನ್ಯವಾಗಿ ಅದೇ ರೀತಿಯಲ್ಲಿರುತ್ತವೆ. ಇನ್ನು ಕಲಾವಿದನು ಬೇರೆ ಕಲಾವಂತಿಕೆಯ ಪ್ರಭಾವದಿಂದ ತನ್ನದೇಯಾದಂತಹ ಶೈಲಿ ಮತ್ತು ತಂತ್ರಗಾರಿಕೆಯನ್ನು ಬೆಳೆಸಿಕೊಂಡು ಅಲ್ಲಿ ರಚಿಸಿದ ಕಲಾಕೃತಿಯು ತನ್ನದೇಯಾದ ಶೈಲಿಯನ್ನು ಪಡೆದರೂ ಸಹ ಅವನ ಮೇಲಾದ ಪ್ರಭಾವ, ಪ್ರೇರಣೆಗಳು ಮುಂಬರುವ ಜನಾಂಗಕ್ಕೆ ಮಾದರಿಯಾಗಿ ಇಲ್ಲಿಯ ತಂತ್ರಗಾರಿಕೆಯಿಂದ ಅವರ ರಚನಾ ಕ್ರಮದ ಪರಿಚಯವಾಗುವುದು.

ಗುಣಲಕ್ಷಣಗಳು

ಜೈನಧರ್ಮವು ಪುರಾತನ ಧರ್ಮವೆಂಬುದು ತಿಳಿದಿರುವ ವಿಷಯ ಹಾಗೆ ಧರ್ಮದ ಜೊತೆ ಜೊತೆಗೆ ಕಲೆ ಸಾಹಿತ್ಯಗಳು ಸಾಗಿ ಬಂದಿರುತ್ತವೆ. ಹೀಗೆ ಸಾಗಿ ಬಂದ ಇತಿಹಾಸವನ್ನೇ ಪರಂಪರೆ ಎಂದು ವ್ಯಾಖ್ಯಾನಿಸಬಹುದು. ಇಷ್ಟು ಪುರಾತನ ಧರ್ಮಕ್ಕೆ ಅಷ್ಟೇ ಪುರಾತನವಾದ ಕಲಾ ಇತಿಹಾಸವೂ ಇರುತ್ತದೆಯಾದರೂ ಗ್ರಂಥಗಳ ಉಲ್ಲೇಖಗಳಲ್ಲಿ ಮಾತ್ರ ತಿಳಿದುಬರುತ್ತದೆ. ಆದರೆ ಜೈನ ಕಲೆಯ ಗುಣಲಕ್ಷಣಗಳನ್ನು ವಿವರಿಸಲು ಚಿತ್ರಗಳು ಅಗತ್ಯವಾಗಿರುತ್ತವೆ. ಆದ ಕಾರಣ ಜೈನ ಭಿತ್ತಿ ಹಾಗೂ ಹಸ್ತಪ್ರತಿ ಕಲೆಯಲ್ಲಿ ಪ್ರಮುಖ ಗುಣಲಕ್ಷಣಗಳ ಕುರಿತಂತೆ ಈ ಕೆಳಗಿನಂತೆ ಟಿಪ್ಪಣಿ ಮಾಡಬಹುದು.

೧. ಜೈನ ಧರ್ಮದ ಚಿತ್ರಗಳ ಧರ್ಮಾದಾರಿತವಾದ್ದರಿಂದ ಧರ್ಮದ ಹಿನ್ನೆಲೆಯಲ್ಲಿಯೇ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ.

೨. ಜೈನ ಧರ್ಮದ ತತ್ವಾದರ್ಶಗಳು ತೀರ್ಥಂಕರರ ಜನ್ಮಾತರ ಅವರ ಪಂಚಕಲ್ಯಾಣಗಳ ಚಿತ್ರಗಳನ್ನು ಇವು ಹೊಂದಿರುತ್ತವೆ.

೩. ಜೈನಧರ್ಮ ವಿಧಿ–ವಿಧಾನಗಳ ಚಿತ್ರಗಳಲ್ಲಿ ಅಷ್ಟ ಮಂಗಲಗಳು, ಕೇಶಲೋಚನ, ದೀಕ್ಷಾಕಲ್ಯಾಣ, ಕೇವಲಜ್ಞಾನ, ಜನ್ಮಾಭಿಷೇಕ, ಗರ್ಭಾವತರಣ, ಹದಿನಾರು ಶುಭಕನಸುಗಳು ಮಾನಸ್ತಂಭ ಸಮವಸರಣ, ಲೋಕರಚನೆ ಹೀಗೆ ಹತ್ತು ಹಲವು ಧರ್ಮ ವಿಧಿಗಳ ಕುರಿತಂತೆ ಚಿತ್ರಗಳನ್ನು ನಾವಿಲ್ಲಿ ಕಾಣಬಹುದು.

೪. ಜೈನ ಧರ್ಮ ಕಲೆಯು ಮೊದಲು ಪ್ರತಿಮಾಡುವ ಸಂದರ್ಭದಲ್ಲಿ ಬಳಕೆಯಾಗುತ್ತಿದ್ದರು. ಅನಂತ ಇದೊಂದು ಧರ್ಮ ಪ್ರಚಾರಮಾಧ್ಯಮವಾಗಿ ನಿಂತ, ಇದರಲ್ಲಿ ತತ್ತ್ವಾದರ್ಶಗಳನ್ನು ಸಾಹಿತ್ಯದಿಂದ ಕಲೆಗೆ ಮಾರ್ಪಾಡು ಮಾಡುವಲ್ಲಿ ಯಶಸ್ವಿಯಾಯಿತು.

೫. ಧವಳ ತ್ರಯಗಳಲ್ಲಿಯ ಚಿತ್ರಗಳು ಹನ್ನೆರಡನೇ ಶತಮಾನಕ್ಕೆ ಆದಂತಹ ಕಿರುರೂಪ ಚಿತ್ರಗಳಾಗಿದ್ದು, ಇದೊಂದು ಕರ್ನಾಟಕದ ಮಟ್ಟಿಗೆ ಹೊಸ ಪ್ರಯತ್ನವಾಗಿ ಬೆಳೆದು ನಿಂತಿತು.

೬. ಶ್ರವಣಬೆಳಗೊಳದ ಭಿತ್ತಿಚಿತ್ರಗಳ ನಿರ್ಮಾಣದಲ್ಲಿಯೂ ಸಹ ಧವಳ ತ್ರಯದ ಪ್ರಭಾವಗಳು ಕಂಡುಬಂದು ಇಲ್ಲಿರುವ ಕಿರುರೂಪ ಚಿತ್ರಕಲೆಯು ಭಿತ್ತಿಚಿತ್ರಗಳಲ್ಲೂ ಮೂಡಿಬರುವಲ್ಲಿ ಯಶಸ್ವಿಯಾಯಿತು.

೭. ಈ ಚಿತ್ರಗಳಲ್ಲಿ ಸ್ವರ್ಗ ಹಾಗೂ ನರಕಗಳ ಪರಿಕಲ್ಪನೆಯ ದೃಢೀಕರಣವನ್ನು ಮಾಡಿ ಸಚಿತ್ರವಾಗಿ ತೋರಿಸಿದ್ದಾರೆ.

೮. ಇಲ್ಲಿನ ಪ್ರತಿಯೊಂದು ಚಿತ್ರಗಳು ಮಾನವನ ತಪ್ಪು ದಾರಿಯನ್ನು ಸರಿಯೆಡೆಗೆ ತುಳಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ಪಾಪ–ಪುಣ್ಯಗಳ ಅರಿವು ಮೂಡಿಸುವ ಕಮಟ, ಮರುಭೂತಿಯ ಜೀವನ ಚಿತ್ರಗಳು ಇಲ್ಲಿ ಚಿತ್ರಿಸಲಾಗಿವೆ.

೯. ಜೈನ ಧರ್ಮದಲ್ಲಿಯೂ ರಾಮಾಯಣ ಮತ್ತು ಮಹಾಭಾರತಗಳ ಕುರಿತಾಗಿಯೂ ಚಿತ್ರಗಳನ್ನು ಮೂಡಬಿದರೆಯಲ್ಲಿ ರಚಿಸಿದ್ದು, ಸರ್ವಧರ್ಮ ಸಹಿಷ್ಣುತೆಯ ಪ್ರತೀಕವಾಗಿವೆ.

೧೦. ಧವಳ ತ್ರಯಗಳಲ್ಲಿಯ ಚಿತ್ರಗಳು ಪಾಲಿ ಚಿತ್ರಗಳಿಂದ ಪ್ರಭಾವಿತವಾದರೂ ಸಹ ಹೊಯ್ಸಳರ ಛಾಯೆ ಎದ್ದು ಕಾಣುವುದು ನಮ್ಮಲ್ಲಿ ವಿಶೇಷವೇ ಸರಿ.

೧೧. ನಮ್ಮ ಜೈನ ಪರಂಪರೆಯ ಮೇಲೆ ಹಲವು ಧರ್ಮೀಯ ಹಾಗೂ ಸಾಮ್ರಾಜ್ಯ ಶೈಲಿಗಳ ಪ್ರಭಾವ ಬೀರಿದರೂ ಸಹ ತನ್ನ ಸ್ವಂತಿಕೆಯನ್ನು ಬಿಡದೆ ಕಾಪಾಡಿಕೊಂಡು ಬಂದು, ಪ್ರತ್ಯೇಕ ಶೈಲಿಯಾಗಿ ಬೆಳದು ನಿಂತಿದೆ.

卐卐卐

ಅಧ್ಯಾಯ : ಏಳು

ಜೈನ ಚಿತ್ರಕಲೆ ಸ್ಥಿತಿಗತಿ, ಆಪತ್ತು-ವಿಪತ್ತು ಮತ್ತು ಸಂರಕ್ಷಣೋಪಾಯಗಳು

ಅಧ್ಯಾಯ : ಏಳು

ಜೈನ ಚಿತ್ರಕಲೆಯ ಸ್ಥಿತಿಗತಿ, ಆಪತ್ತು, ವಿಪತ್ತು ಮತ್ತು ಸಂರಕ್ಷಣೋಪಾಯಗಳು

"ಪ್ರಕೃತಿಯಲ್ಲಿನ ಯಾವ ವಸ್ತುಗಳು ಶಾಶ್ವತವಲ್ಲ ಅವು ಒಂದಲ್ಲಾ ಒಂದು ದಿನ ನಾಶಹೊಂದಲೇಬೇಕು. ಇದರಿಂದ ಪ್ರಸ್ತುತ ಭಿತ್ತಿಚಿತ್ರಗಳು ಹೊರತಾಗಿಲ್ಲ. ಆದರೂ ಸೂಕ್ತ ಕ್ರಮಗಳನ್ನು ಅನುಸರಿಸುವುದರಿಂದ ಆದಷ್ಟು ಹೆಚ್ಚು ದಿನ ಈ ಕಲಾ ಸಂಪತ್ತನ್ನು ಉಳಿಸಿಕೊಳ್ಳಬಹುದಾಗಿದೆ."[೧] ಭಾರತೀಯ ಕಲಾ ಇತಿಹಾಸದಲ್ಲಿ ಜೈನ ಧರ್ಮವು ತನ್ನದೇ ಆದ ಪುರಾತನ ಹಿರಿಮೆಯನ್ನು ಉಳಿಸಿಕೊಂಡು ಬಂದಿರುವುದು, ಜೈನಧರ್ಮವು ತನ್ನ ನೆಲೆಯನ್ನು ಭಾರತದಾದ್ಯಂತ ಪಸರಿಸಿದ್ದು, ಇದರೊಂದಿಗೆ ಸಾಹಿತ್ಯ, ಕಲೆಗಳ ಪ್ರಚಾರದಲ್ಲಿಯೂ ತನ್ನ ಧರ್ಮದಷ್ಟೇ ಪ್ರಾಮುಖ್ಯತೆಯನ್ನು ಕೊಟ್ಟು ಬೆಳೆಸಿದ ಸಾರ್ಥಕತೆ ಜೈನ ಧರ್ಮಕ್ಕೆ ಸಲ್ಲಬೇಕು. ಭಾರತದ ದಕ್ಷಿಣದಲ್ಲಿ ಕರ್ನಾಟಕ ಮತ್ತು ತಮಿಳುನಾಡುಗಳ ಜೈನೀಯರಿಗೆ ಸಾರ್ಥಕ ನೆಲೆಗಳಾಗಿವೆ. ಇಲ್ಲಿ ಜೈನ ಧರ್ಮವು ಬೆಳೆದಿದ್ದಲ್ಲದೆ ಸಮಾಜದ ಪರಿವರ್ತನೆಗೆ ಕಾರಣವಾಗಿ ಸಮಾಜದಲ್ಲಿ ಬೆರೆತು ಇಂದಿಗೂ ಅಹಿಂಸೆಯನ್ನು ಪ್ರತಿಪಾದಿಸುತ್ತಾ ಬಂದಿದೆ.

ಜೈನರು ತಮ್ಮ ತತ್ತ್ವಗಳನ್ನು, ಆದರ್ಶಗಳನ್ನು, ಧಾರ್ಮಿಕ ಪರಂಪರೆಯನ್ನು ಕೇವಲ ಸಾಹಿತ್ಯದಲ್ಲಿ ಸಂಗ್ರಹಿಸದೆ ಇದನ್ನು ಗ್ರಂಥಗಳ ಮೂಲಕ, ಶಿಲ್ಪಗಳ ಮೂಲಕ, ಹಸ್ತಪ್ರತಿಗಳ ಮೂಲಕ, ಶಿಲಾಶಾಸನಗಳ ಮೂಲಕ, ಚಿತ್ರಗಳ ಮೂಲಕವೂ ಹೊರತಂದರು. ಇದಕ್ಕೆ ಆ ಕಾಲದ ರಾಜಮನೆತನಗಳು ರಾಜಾಶ್ರಯವನ್ನು ನೀಡಿ ಈ ಧರ್ಮದ ಉತ್ತೇಜನಕ್ಕೆ ಬಸದಿಗಳನ್ನು, ದೇವಾಲಯಗಳನ್ನು, ಚೈತ್ಯಾಲಯಗಳನ್ನು ನಿರ್ಮಿಸಿ, ತೀರ್ಥಂಕರರನ್ನು ಪ್ರತಿಷ್ಠಾಪಿಸಿದರು. ಜೈನ ಧರ್ಮದ ಆದರ್ಶಗಳನ್ನು ಹಸ್ತಪ್ರತಿಗಳಲ್ಲಿ ಪ್ರತಿಪಾದಿಸಿದರು. ಜೈನ ಬಸದಿಗಳಲ್ಲಿ, ದೇವಾಲಯಗಳಲ್ಲಿ ಭಿತ್ತಿಚಿತ್ರಗಳನ್ನು ರಚಿಸಿದರು. ಕಲ್ಲಿನ ಶಿಲ್ಪಗಳು ಗಾರೆಯ ಶಿಲ್ಪಗಳನ್ನು ಕಟ್ಟಿಸಿ ಅವುಗಳಲ್ಲಿ ಆಯಾ

೦೧. ಸುಚಿತ್ರಾ ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ–ಒಂದು ಅಧ್ಯಯನ(ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ). ಪು–೧೧೭

ಸಾಮ್ರಾಜ್ಯ ಶೈಲಿಯನ್ನು ಮೆರೆದರು. ಹೀಗೆ ಜೈನ ಕಲಾಪರಂಪರೆಯನ್ನು ಉಲ್ಲೇಖಗಳ ಭೌತಿಕ ಆಧಾರದಲ್ಲಿ ಕ್ರಿ.ಪೂ. ೩೦೦ ದಿಂದಿಡಿದು ಮೈಸೂರು ಅರಸರ ನಂತರದ ಕಾಲದವರೆವಿಗೂ ನಡೆಯುತ್ತಾ ಬಂದಿದೆ.

ಕರ್ನಾಟಕದಲ್ಲಿ ಜೈನ ಚಿತ್ರಕಲಾ ಸಂಪತ್ತನ್ನು ಮುಂದಿನ ಪೀಳಿಗೆಯವರು ಅತ್ಯಂತ ಜೋಪಾನದಿಂದ ಕಾಪಾಡಿಕೊಂಡು ಬರುತ್ತಿರುವರಾದರೂ ಕೆಲವು ಸಂದರ್ಭದಲ್ಲಿ ಇವುಗಳಿಗೆ ಪ್ರಾಕೃತಿಕ ಅಥವಾ ಸ್ವಾಭಾವಿಕ ಆಪತ್ತುಗಳಿಂದ ಭಯವು ಸಹ ಕಾಡದೇ ಇರಲಾರದು. ಪ್ರತಿಯೊಂದು ವಸ್ತುವಾಗಲಿ, ಜೀವಿಯಾಗಲಿ ಅವುಗಳ ಇತಿಮಿತಿಗನುಸಾರವಾಗಿ ಇಂತಿಷ್ಟೇ ಕಾಲಮಾನವೆಂದೆನಿಸುತ್ತದೆ. ಜೈನ ಚಿತ್ರಗಳಲ್ಲಿ ಭಿತ್ತಿಚಿತ್ರಗಳಲ್ಲದೇ ಮರ ಅಥವಾ ಕಾಗದದ ಮೇಲೆ ಚಿತ್ರಿಸಿದ ಅನೇಕ ಚಿತ್ರಗಳುಂಟು, ಹೆಚ್ಚಿನ ಪ್ರಮಾಣದಲ್ಲಿ ರಚನೆಗೊಂಡ ಚಿತ್ರಗಳಿಗೆ ಬಳಸಿದ ಮಾಧ್ಯಮ, ಕಾಗದ, ಲೋಹ, ಕಲ್ಲು, ಮಣ್ಣು ಮುಂತಾದ ಗಟ್ಟಿ ಪದಾರ್ಥ ಎಷ್ಟು ದಿನಗಳಂತೆ ಉಳಿಯಲು ಸಾಧ್ಯ. ಕರ್ನಾಟಕ ಜೈನ ಚಿತ್ರಕಲೆಗೆ ಒದಗಿದ ಆಪತ್ತುಗಳಲ್ಲಿ ವ್ಯಕ್ತಿಗತ ಆಪತ್ತು, ಪ್ರಾಕೃತಿಕ ಆಪತ್ತು ಹಾಗೂ ಸ್ವಾಭಾವಿಕ ಆಪತ್ತುಗಳಂತಹ ವಿನಾಶಕಾರಿ ಅಶಂಗಳನ್ನು ನೀಗಿಸಲು ಚಿತ್ರಗಳ ಸಂರಕ್ಷಣೆಗೆ ಕೈಗೊಳ್ಳಬಹುದಾದ ಅನೇಕ ಬಗೆಯ ಸಂರಕ್ಷಣಾ ಕ್ರಮಗಳನ್ನು ಕುರಿತು ಪ್ರಸ್ತುತ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.[೨]

ಭಿತ್ತಿಚಿತ್ರಗಳಿಗೆ ಒದಗುವ ಆಪತ್ತುಗಳು

೧. ಸ್ವಾಭಾವಿಕ ಆಪತ್ತು

ಕಾಲಕ್ರಮೇಣ ಭಿತ್ತಿಚಿತ್ರಗಳಿಗೆ ಉಪಯೋಗಿಸಲಾದ ವಸ್ತುಗಳ ಸತ್ವ ಕಡಿಮೆಯಾಗಿ ಭಿತ್ತಿಚಿತ್ರಗಳು ಹಾಳಾಗುವುದನ್ನು ಇಲ್ಲಿ ಸ್ವಾಭಾವಿಕ ಆಪತ್ತು ಎಂದು ಪರಿಗಣಿಸಲಾಗಿದೆ. ಭಿತ್ತಿಚಿತ್ರಗಳಿಗೆ ಉಪಯೋಗಿಸಿದ ಬಣ್ಣಗಳ ಕಾಲಾಂತರದಲ್ಲಿ ಮಸುಕಾಗುವುದು, ಉದುರಿಹೋಗುವುದು ಸಹಜಕ್ರಿಯೆ ಹೀಗೆ ಬಣ್ಣ ಮಸುಕಾಗಿರುವುದು ಉದುರಿಹೋಗುವುದು ಹೆಚ್ಚಿನ ಎಲ್ಲಾ ಪ್ರಾಚೀನ ಭಿತ್ತಿಚಿತ್ರಗಳಲ್ಲಿಯೂ ಕಾಣಬಹುದು. ಕನಕಗಿರಿಯ ಕನಕಾಚಲಪತಿ ದೇವಾಲಯದ ಭಿತ್ತಿರಚನೆಯಲ್ಲಿ ಉಪಯೋಗಿಸಲಾದ ವಸ್ತುಗಳ ಸತ್ವ ಕಡಿಮೆಯಾಗಿ ಭಿತ್ತಿ ಸಂಪ್ರರ್ಣ ಉದುರಿ ಹೋಗಿದ್ದು ಅಲ್ಲಲ್ಲಿ ಅದರ ತುಣುಕುಗಳು ಕಂಡುಬಂದಿದ್ದು ಇದು ಸಹಿತ ಸ್ವಾಭಾವಿಕವಾದ ಕ್ರಿಯೆ ಎನ್ನಬಹುದು.[೩]

೨. ಪ್ರಾಕೃತಿಕ ಆಪತ್ತು

ಪ್ರಕೃತಿಯಲ್ಲಿನ ನೀರು ಬೆಂಕಿ, ಗಾಳಿಗಳಿಂದ ಭಿತ್ತಿಚಿತ್ರಗಳಾಗುವ ಹಾನಿಗಳನ್ನೂ ಪ್ರಾಕೃತಿಕ ಆಪತ್ತುಗಳೆಂದು ಇಲ್ಲಿ ಪರಿಗಣಿಸಲಾಗಿದೆ.

೦೨. ಉಮೇಶ ಎಸ್ : ಕರ್ನಾಟಕದ ಜೈನ ಚಿತ್ರಕಲೆ, ಪು-೬೮, ೬೯
೦೩. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ - ಒಂದು ಅಧ್ಯಯನ, ಪು-೪೯೧

೧. ನೀರು : ಭಿತ್ತಿ ಚಿತ್ರಗಳಿಗೊದಗುವ ಹಲವಾರು ಆಪತ್ತುಗಳಲ್ಲಿ ನೀರಿನಿಂದಲೇ ಅತ್ಯಂತ ಹೆಚ್ಚಿನ ಹಾನಿ ಸಂಭವಿಸುತ್ತಲಿದೆ. ಮೇಲ್ಛಾವಣಿಯಿಂದ ನೀರುಸೂರುವಿಕೆ ಗೋಡೆಯಲ್ಲಿನ ಬಿರುಕುಗಳಿಂದ ನೀರು ಜಿನುಗುವುದು ಹೀಗೆ ಯಾವುದೇ ರೀತಿಯಿಂದ ನೀರನ ಸಂಪರ್ಕ ಭಿತ್ತಿಚಿತ್ರಗಳಿಗೆ ಹಾನಿಯಾಗುವುದು ತಪ್ಪಿದ್ದಲ್ಲ.

೨. ಗಾಳಿ : ಗಾಳಿ ಬೀಸಿದಾಗ ಗಾಳಿಯೊಂದಿಗೆ ಬರುವ ಧೂಳಿನ ಕಣಗಳಿಂದಲ್ಲೂ ಭಿತ್ತಿಚಿತ್ರಗಳು ಹಾನಿಗೊಳಗಾಗುತ್ತದೆ. ವಾತಾವರಣದ ವಾಯುಮಂಡಲದಲ್ಲಿರುವ ಧೂಳು ಪ್ರತಿಯೊಂದು ವಸ್ತುವಿಗೂ ಅಂಟುವುದೂ ಸಾಮಾನ್ಯವಾದುದೇ ಆಗಿದೆ. ಹಾಗೆ ಭಿತ್ತಿಚಿತ್ರಗಳಿಗೆ ಧೂಳು ತಗುಲಿದಾಗ ಅವು ಹಾನಿಗೀಡಾಗುತ್ತವೆ. ವಾತಾವರಣದ ಸಹಜವಾದ ಧೂಳು ಇಲ್ಲವೇ ಇತರ ಚಟುವಟಿಕೆ ಹೆಚ್ಚಾಗಿರುವ ಸ್ಥಳದ ಸಮೀಪ ಭಿತ್ತಿಚಿತ್ರಗಳಿಂದ ಇನ್ನೂ ಹೆಚ್ಚಿನ ಪ್ರಮಾಣದ ಧೂಳು ಆವರಿಸುತ್ತದೆ.

೩. ವ್ಯಕ್ತಿಗತ ಆಪತ್ತು : ವ್ಯಕ್ತಿಯಿಂದ ಅಥವಾ ಆತ ನಡೆಸುವ ಯಾವುದೇ ಚಟುವಟಿಕೆಯಿಂದ ಭಿತ್ತಿಚಿತ್ರಗಳಿಗೆ ಹಾನಿ ಸಂಭವಿಸಿದಾಗ ಇಲ್ಲಿ ವ್ಯಕ್ತಿಗತ ಆಪತ್ತುಗಳೆಂದು ಪರಿಗಣಿಸಬೇಕಾಗುತ್ತದೆ. ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳ ಹಿನ್ನೆಲೆಯಲ್ಲಿ ವ್ಯಕ್ತಿಗತ ಆಪತ್ತುಗಳನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸಬಹುದು ಅವು

೧. ರಾಜಕೀಯ ಚಟುವಟಿಕೆಗಳಿಂದಾಗುವ ಆಪತ್ತು

೨. ಧಾರ್ಮಿಕ ಚಟುವಟಿಕೆಗಳಿಂದಾಗುವ ಆಪತ್ತು

೩. ಕಾರ್ಖಾನೆಗಳಿಂದ ಉಂಟಾಗುವ ಆಪತ್ತು

೪. ವಿದ್ಯುತ್ ದೀಪಗಳಿಂದುಂಟಾಗುವ ಆಪತ್ತು

೫. ಕ್ರಿಮಿಕೀಟಗಳಿಂದಾಗುವ ಆಪತ್ತು

೧. ರಾಜಕೀಯ ಚಟುವಟಿಕೆಗಳಿಂದಾಗುವ ಆಪತ್ತು : ಒಂದು ರಾಜ್ಯ ಇನ್ನೊಂದು ರಾಜ್ಯದ ಮೇಲೆ ದಾಳಿ ಕೈಗೊಂಡಾಗ ಆಗ ಜನತೆ ಮನೆಮಾರು ಮಠಮಾನ್ಯ ಅರಮನೆ ಮುಂತಾದವುಗಳನ್ನು ತೊರೆದು ಆಶ್ರಯ ಹುಡುಕಿಕೊಂಡು ಹೋಗುತ್ತಾರೆ. ಇಂತಹ ಸಂದರ್ಭದಲ್ಲಿ ಅಲ್ಲಿ ರಚನೆಯಾಗಿರ-ಬಹುದುದಾದ ಭಿತ್ತಿಚಿತ್ರಗಳ ಅನುದ್ದೇಶಿತವಾಗಿ ನಾಶವಾಗುತ್ತವೆ.

೨. ಧಾರ್ಮಿಕ ಚಟುವಟಿಕೆಗಳಿಂದಾಗುವ ಆಪತ್ತು

ಧಾರ್ಮಿಕ ಅಭಿಮಾನ, ದುರಾಭಿಮಾನ ಕೆಲವು ವೇಳೆ ಭಿತ್ತಿಚಿತ್ರಗಳ ನಾಶಕ್ಕೆ ಕಾರಣವಾಗಿವೆ ಎನ್ನಬಹುದು. ಹಾಗೇ ಧಾರ್ಮಿಕ ಕ್ರಿಯೆಗಳಿಂದಾಗುವ ಆಪತ್ತುಗಳನ್ನು

೧. ಧರ್ಮಾಭಿಮಾನದ ಆಪತ್ತು

೨. ಪ್ರಜಾ ವಿಧಾನಗಳಿಂದಾಗುವ ಆಪತ್ತು ಎಂಬುದಾಗಿ ವರ್ಗೀಕರಿಸಿ ಅಧ್ಯಯನ ಮಾಡಲಾಗಿದೆ.

* **ಧರ್ಮಾಭಿಮಾನದ ಆಪತ್ತು** : ಒಂದು ನಾಡಿನ ಧಾರ್ಮಿಕ ಚರಿತ್ರೆಯಲ್ಲಿ ಧರ್ಮಾಭಿಮಾನ ಮತಾಭಿಮಾನಗಳಿಂದುಂಟಾಗುವ ಮತ ಪ್ರಾಬಲ್ಯದ ಸಂದರ್ಭ, ಮತ ಮತಗಳ ತಾಕಲಾಟಗಳು ಇದ್ದದ್ದು ಇತಿಹಾಸದಿಂದ ತಿಳಿಯಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ಆಯಾಧರ್ಮಗಳಿಗೆ ಸಂಬಂಧಿಸಿದ ವಿಹಾರ, ಬಸದಿ, ಮಠ, ದೇವಾಲಯ ಧಾರ್ಮಿಕ ಕಟ್ಟಡಗಳು ನೆಲಸಮಗೊಂಡು ಅಲ್ಲಿರಬಹುದಾದ ಭಿತ್ತಿಚಿತ್ರಗಳು ನಾಶವಾಗಿರಬೇಕು, ಆಯಾಮತಗಳ ಪ್ರಾಬಲ್ಯದ ಕಾಲದಲ್ಲಿ ಆಯಾ ಪ್ರದೇಶದಲ್ಲಿ ಆ ಮತದ ಭಿತ್ತಿಚಿತ್ರಗಳು ಮಾತ್ರ ಹೆಚ್ಚು ಸುರಕ್ಷಿತವಾಗಿದ್ದು, ಇನ್ನುಳಿದವು ನಿರ್ಲಕ್ಷ್ಯಕ್ಕೆ ಒಳಗಾಗಿರಬಹುದು ಎಂದು ಊಹಿಸಬಹುದಾಗಿದೆ. ಇಂತಹ ಘಟನೆಗಳಲ್ಲದೇ ಒಬ್ಬ ದೊರೆಯ ಧಾರ್ಮಿಕ ಅಭಿಮಾನ ಇನ್ನೊಬ್ಬ ದೊರೆ ಬರೆಸಿದ ಭಿತ್ತಿಚಿತ್ರಕ್ಕೆ ಸಂಚಕಾರ ತಂದಿರಬಹುದು ಒಂದು ದೇವಾಲಯದಲ್ಲಿ ಈ ಮೊದಲ ರಚನೆಯಾಗಿರುವ ಭಿತ್ತಿಚಿತ್ರಗಳನ್ನು ಮುಚ್ಚಿಹಾಕಿ ಅವುಗಳ ಮೇಲೆ ಮತ್ತೆ ಬೇರೆಯದೇ ಚಿತ್ರಗಳನ್ನು ಬರೆಸಿರುವ ಉದಾಹರಣೆಗಳೂ ಸಿಗುತ್ತವೆ.[೪]

* **ಪೂಜಾ ವಿಧಾನಗಳಿಂದುಂಟಾಗುವ ಆಪತ್ತು** : ಭಾರತದಲ್ಲಿರುವ ಬಹುತೇಕ ಭಿತ್ತಿಚಿತ್ರಗಳು ದೇವಾಲಯ, ಮಠಮಾನ್ಯಗಳಂತಹ ಧಾರ್ಮಿಕ ಸ್ಥಳಗಳಲ್ಲೇ ಹೆಚ್ಚು ರಚನೆಯಾಗಿದ್ದು ಇವುಗಳಲ್ಲಿ ನಿತ್ಯವೂ ಪೂಜೆ ನಡೆಯುತ್ತಿದ್ದು. ಇಲ್ಲಿ ನಡೆಯುವ ಪ್ರಜೆಯ ಸಂದರ್ಭದಲ್ಲಿ ಉರಿಸುವ ಎಣ್ಣೆ, ದೀವಿಗೆ, ಕರ್ಪೂರ, ಹೋಮ ಹವನದಿಂದುಟಾಗುವ ಎಣ್ಣೆ ಜಿಡ್ಡುಯುಕ್ತ ಕಾಡಿಗೆ ಅಲ್ಲಿರುವ ಚಿತ್ರಗಳ ಮೇಲೆ ಆವರಿಸಿದ್ದು ಕಂಡುಬಂದಿದ್ದು ಇದರಿಂದ ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳು ಈ ತೊಂದರೆಯಿಂದ ಹೊರತಾಗಿಲ್ಲ ಇಲ್ಲಿ ಆಗಾಗ ನಡೆಯುವ ಹೋಮ ಹವನಗಳಿಂದುಂಟಾಗುವ ಜಿಡ್ಡುಯುಕ್ತ ಕಾಡಿಗೆಯಿಂದ ಆವರಿಸಿರುವುದು ಕಂಡುಬರುತ್ತದೆ.

೩. ಕಾರ್ಖಾನೆಗಳಿಂದುಂಟಾಗುವ ಆಪತ್ತು : ಬೆಳೆಯುತ್ತಿರುವ ದೊಡ್ಡ ದೊಡ್ಡ ಕಾರ್ಖಾನೆಗಳು ಕೈಗಾರಿಕೆಗಳಿಂದಾಗುವ ಮಾಲಿನ್ಯದಿಂದ ಭಿತ್ತಿಚಿತ್ರಗಳಿಗೆ ಹಾನಿ ಸಂಭವಿಸುತ್ತಲಿದೆ ಈ ಕಾರ್ಖಾನೆಗಳ ಹೊಗೆಯು ವಾತಾವರಣದಲ್ಲಿ ಒಂದು ರೀತಿಯ ರಾಸಾಯನಿಕ ಧೂಳಾಗಿ ಪರಿವರ್ತನೆಗೊಂಡು ಚಿತ್ರಗಳಿಗೆ ಅಂಟುತ್ತದೆ. ಅಲ್ಲದೆ ಈ ಧೂಳು ಅಂತಹ ಆಮ್ಲಯುಕ್ತ ಮಳೆಯ ನೀರು ಭಿತ್ತಿ ಚಿತ್ರಗಳ ಮೇಲೆ ಸೋರಿದಾಗ ಅವುಗಳಿಗೆ ಹಾನಿಯಾಗುವುದೆಂದು ವಿದ್ವಾಂಸರು ಗುರುತಿಸಿದ್ದಾರೆ.

೪. ವಿದ್ಯುತ್ ದೀಪದಿಂದಾಗುವ ಆಪತ್ತು : ಪ್ರಕಾಶ ಮಾನವಾದ ದೀಪಾವಳಿಯಿಂದ ಕೂಡಾ ಭಿತ್ತಿ ವಣಗಳಿಗೆ ಹಾನಿ ಸಂಭವಿಸುತ್ತದೆ. ಪ್ರಮುಖವಾಗಿ ಭಿತ್ತಿಚಿತ್ರಗಳ ವರ್ಣ ಹೊಳಪು

ಕುಂದುತ್ತದೆ. ವಿದ್ಯುತ್ ದೀಪವಾಗಬಹುದು ಅಥವಾ ಕ್ಯಾಮರಾಕ್ಕೆ ಅಳವಡಿಸಿದ ಫ್ಲ್ಯಾಷ್‌ಲೈಟ್ ಆಗಿರಬಹುದು ಯಾವುದೇ ಪ್ರಕಾಶವಾನವಾದ ದೀಪದಿಂದಲೂ ಚಿತ್ರಗಳಿಗೆ ಹಾನಿ ಉಂಟಾಗುವುದೆಂದು ಅಭಿಪ್ರಾಯ ಪಡಲಾಗಿದೆ. ವಿರೂಪಾಕ್ಷ ದೇವಾಲಯದ ಭಿತ್ತಿಚಿತ್ರಗಳು ಇದರಿಂದ ಹೊರತಾಗಿಲ್ಲ. ಅದರಿಂದಾಗಿಯೇ ಈಗ ಅಜಂತಾದಲ್ಲಿನ ಭಿತ್ತಿಚಿತ್ರಗಳ ವೀಕ್ಷಣೆಗೆ ಮಂದವಾದ ಹಳದಿ ಬೆಳಕನ್ನು ವ್ಯವಸ್ಥೆ ಮಾಡಿದ್ದರಲ್ಲದೇ ಪ್ಲ್ಯಾಷ್‌ಹಾಕಿ ಫೋಟೋ ತೆಗೆಯುವುದನ್ನು ನಿರ್ಬಂಧಿಸಿದ್ದಾರೆ.[೧೪]

೫. ಕ್ರಿಮಿಕೀಟಗಳಿಂದಾಗುವ ಆಪತ್ತು

೧. ಸೂಕ್ಷ್ಮಾಣುಜೀವಿ ಶಿಲೀಂದ್ರಗಳು : ಪ್ರಾಚೀನ ದೇವಾಲಯಗಳ ಕಲ್ಲಿನ ಕೆತ್ತನೆ ಮೇಲೆ ಕೆಲವು ಸೂಕ್ಷ್ಮಾಣುಜೀವಿ ಶಿಲೀಂದ್ರಗಳು ವಾಸ ಮಾಡಿ ಅವು ಬಿಡುಗಡೆಗೊಳಿಸುವ ಗಂಧಕಾಮ್ಲದಿಂದ ಶಿಲ್ಪಗಳನ್ನು ಪದರ ಪದರವಾಗಿ ನಾಶಗೊಳಿಸುತ್ತವೆ ಎನ್ನಲಾಗಿದ್ದು ಅದೇ ಪ್ರಕಾರ ಭಿತ್ತಿಚಿತ್ರಗಳ ಮೇಲೂ ಸೂಕ್ಷ್ಮಾಣುಜೀವಿಗಳು ವಾಸಮಾಡಿ ಚಿತ್ರಗಳಿಗೆ ಹಾನಿ ಉಂಟುಮಾಡುತ್ತವೆ. ಸೂಕ್ಷ್ಮಾಣು ಜೀವಿಗಳ ದಾಳಿಯಿಂದ ಶಿಲ್ಪಗಳು ಪದರ ಪದರವಾಗಿ ಉದುರಿ ನಾಶವಾದರೆ, ಭಿತ್ತಿ ಚಿತ್ರಗಳು ಭಿತ್ತಿ ಸಮೇತವಾಗಿ ಪುಡಿಪುಡಿಯಾಗಿ ಉದುರುತ್ತದೆ. ಅಲ್ಲದೆ ಇನ್ನಿತರ ಆಪತ್ತುಗಳಾದ ಭಿತ್ತಿಚಿತ್ರಗಳ ಪಕ್ಕದ ಜಾಗದಲ್ಲಿ ಆಲಂಕಾರಿಕ ಶಿಲೆಗಳನ್ನೂ ಜೋಡಿಸುವುದು ಸುಣ್ಣಬಣ್ಣ ಸಾರಿಸಿ ನವೀಕರಿಸುವುದು ಈ ಸಂದರ್ಭದಲ್ಲಿ ಹಳೆಯ ಭಿತ್ತಿಚಿತ್ರಗಳಿಗೆ ಆಧುನಿಕ ತೈಲಬಣ್ಣ ಲೇಪಿಸುವುದು. ವಿದ್ಯುತ್ ಸಂಪರ್ಕಕ್ಕಾಗಿ ಇಲ್ಲವೇ ಇನ್ನಿತರ ಉಪಯೋಗಕ್ಕಾಗಿ ಕಟ್ಟಡಗಳಲ್ಲಿ ಮೊಳೆ ಹೊಡೆಯುವುದು ಇಂತಹ ಕ್ರಮಗಳಿಂದ ಆ ಸ್ಥಳಗಳಿರುವಂತಹ ಭಿತ್ತಿಚಿತ್ರಗಳು ನಾಶವಾಗುತ್ತವೆ.

ನಾಶದ ಹಾದಿಯಲ್ಲಿರುವ ಇಂತಹ ಭಿತ್ತಿಚಿತ್ರಗಳನ್ನು ಹಲವು ಆಧುನಿಕ ವಿಧಾನಗಳಿಂದ ಸಂರಕ್ಷಿಸಬಹುದಾಗಿದೆ. ಕಲಾಕೃತಿಯೊಂದರ ಮೇಲಾಗಿರುವ ವಿರೂಪವನ್ನು ವೈಜ್ಞಾನಿಕ ವಿಧಾನಗಳಿಂದ ಹೋಗಲಾಡಿಸಿ ಅದನ್ನು ಸಾಧ್ಯವಾದಷ್ಟು ಮಟ್ಟಿಗೆ ಮೂಲತಃ ಇದ್ದ ಸ್ಥಿತಿಗೆ ಸಮೀಪ ತರುವ ತಂತ್ರ ಕೆಲವು ರಾಸಾಯನಿಕಗಳ ಮೂಲಕ ಸಾಧ್ಯವಾಗುತ್ತದೆ. ಆದರೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿದ್ದಾಗ್ಯೂ ಹೊಸ ಹೊಸ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಕಲಾಕೃತಿಗಳನ್ನು ಸಂರಕ್ಷಣೆಗೊಳಪಡಿದಾಗಲೂ ಅವು ಅತಿ ಹೆಚ್ಚು ದಿನಗಳವರೆಗೆ ಬಾಳಿಕೆ ಬರುತ್ತವೆ ಎಂದು ಹೇಳುವಂತಿಲ್ಲ. ಕೆಲವು ದಿನಗಳಲ್ಲೇ ಮತ್ತೆ ವಿವಿಧ ಬಗೆಯ ಆಪತ್ತುಗಳಿಗೀಡಾಗಿ ಶಿಥಿಲವಾಗುತ್ತ ಸಾಗುತ್ತವೆ. ಆದುದರಿಂದ ಪ್ರಾಚೀನ ಕಲಾಕೃತಿಗಳು ಹೆಚ್ಚುದಿನ ಬಾಳಿಕೆ ಬರುವಂತಾಗಲೂ ಅವುಗಳ ಸಂರಕ್ಷಣಾ ವಿಧಾನಗಳಲ್ಲಿ ಇನ್ನೂ ಹೊಸ ಹೊಸ ಸಂಶೋಧನೆಗಳಾಗಬೇಕಿದೆ. ಈ ದಿಸೆಯಲ್ಲಿ

೧೪. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. ಪು–೫೦೩

ಪ್ರಾಚೀನರು ಕಲಾಕೃತಿಗಳ ಸಂರಕ್ಷಣೆಯಲ್ಲಿ ಅನುಸರಿಸುತ್ತಿದ್ದ ಕ್ರಮಗಳತ್ತ ನಾವು ಮತ್ತೆ ಹಿಂತಿರುಗಿ ನೋಡಬೇಕಿದೆ. ಅಜಂತಾ ಮತ್ತಿತರ ಗುಹೆಗಳ ಭಿತ್ತಿಸೂರುಗಳಲ್ಲಿ ಕೆಂಪು, ಕೆಂಗಾವಿ, ಬಿಳುಪು, ಕಪುïE ಬಣ್ಣಗಳ ಲೇಪನಗಳು ಇಂದಿಗೂ ಪ್ರಖರವಾಗಿ ಉಳಿದಿರುವುದಕ್ಕೆ ಅವುಗಳಲ್ಲಿಯ ಪ್ರಕೃತಿ ಸಹಜ ಕ್ರಿಮಿನಾಶದ ಗುಣಗಳಿಂದ ಎನ್ನಲಾಗುತ್ತದೆ. ಅದೇ ರೀತಿ ಕೆಂಗಾವಿಯನ್ನು ಲೇಪಿಸಿರುವುದನ್ನು ಹಂಪೆ ವಿರೂಪಾಕ್ಷ ದೇವಾಲಯದಲ್ಲಿ ಕಾಣಬಹುದು. ಇಲ್ಲಿರುವ ಕಂಬಗಳು, ಗೋಡೆ, ಮೇಲ್ಛಾವಣಿ ಎಲ್ಲ ಕಡೆಗೂ ಕೆಂಗಾವಿಯ ಲೇಪನವಿದೆ.

ಪ್ರಾಚೀನರು ಈ ಲೇಪನಗಳನ್ನು ಸೌಂದರ್ಯದ ಜೊತೆಗೆ ಸಂರಕ್ಷಣೆಯ ದೃಷ್ಟಿಯಿಂದಲೂ ಲೇಪಿಸುತ್ತಿರಬಹುದು ಎನಿಸುತ್ತದೆ. ಭಿತ್ತಿ ಚಿತ್ರರಚನೆಯ ನಂತರ ಚಿತ್ರದ ಮೇಲೆ ರಕ್ಷಣೆಗಾಗಿ ರಾಳ, ಮರದಂಟು ಮತ್ತು ಹರಿದದಾ ದೇವಳೇರು ಮರದ ಎಣ್ಣೆ ಪಟಕದ ಹರಳುಗಳಂತಹ ವಿವಿಧ ವಸ್ತುಗಳಿಂದ ಸಂಸ್ಕರಣ ಮಾಡುತ್ತಿದ್ದರೆಂದು ತಿಳಿದುಬರುವುದು ಇವು ಕಾಲಕ್ರಮೇಣ ಹಳದಿಯಲ್ಲವೇ ತಿಳಿದು ಬರುವುದು ಇವು ಕಾಲಕ್ರಮೇಣ ಹಳದಿಯಲ್ಲವೇ ದಟ್ಟಕಂದು ಬಣ್ಣಕ್ಕೆ ತಿರುಗಿದರೂ ಅವುಗಳಲ್ಲಿರುವ ಕ್ರಿಮಿನಾಶಕ ಗುಣಗಳಿಂದ ಸೂಕ್ಷ್ಮಾಣು ಜೀವಿಗಳ ದಾಳಿಯಿಂದ ಹೆಚ್ಚಿನ ಸಮಯದವರೆಗೆ ಚಿತ್ರಗಳು ರಕ್ಷಿಸುತ್ತಿದ್ದರೆನ್ನುವುದು ಸತ್ಯಸಂಗತಿ.

ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಚಿತ್ರ ರಚನೆಯ ನಂತರ ಸ್ಥಿರತೆ ಕೂಡುವ ಲೇಪನಕ್ಕೆ ಸ್ತಂಭನವೆಂದೂ ಕರೆದಿದ್ದು ಕುದಗಿಸಿದ್ದ ಚರ್ಮದ ನೀರು ಅಥವಾ ಬಹುಲಾ ಎಂಬ ಔಷಧ ವೃಕ್ಷದ ರಸನ್ನು ಲೇಪಿಸುವುದರಿಂದ ವರ್ಣಗಳಲ್ಲಿ ದಾರ್ಢ್ಯ ಉಂಟಾಗುತ್ತದೆ. ಎಲ್ಲ ಬಣ್ಣಗಳಿಗೂ ಸಿಂಧೂರ ಸಹಿತವಾದ ಕ್ಷೀರವು ಸಂಸಾರಕ್ಕೆ ಉಪಯೋಗವಾಗುತ್ತದೆ. ನೀರಿನಲ್ಲಿ ತೊಳೆದರು ಹೋಗುವುದಗಿಲ್ಲ ಎಂದೂ ತಿಳಿಸುತ್ತದೆ. ಆಧುನಿಕ ಪದ್ಧತಿಯಲ್ಲಿ ಒಡೆದ ಕೆನೆಹಾಲು ಹಾಗೂ ಶುದ್ಧ ಆಲ್ಕೋಹಾಲ್‌ಗಳಿಂದ ಸಂಸ್ಕರಿಸಿದ ದಗ್ರಾವಕವನ್ನು ರೇಖಾಚಿತ್ರಗಳ ಮೇಲೆ ತುಂತುರು ರೂಪದಲ್ಲಿ ಸಿಂಪಡಿಸಿ ಸ್ತಂಭನ ಕ್ರಿಯೆ ಮಾಡುತ್ತಾರೆ.[೧೫]

ಭಿತ್ತಿ ಚಿತ್ರಕಲೆಯ ಸಂರಕ್ಷಣೆ ಕ್ರಮಗಳು

ಭಿತ್ತಿ ಚಿತ್ರಕಲೆಯ ಸಂರಕ್ಷಣೆಯ ಕ್ರಮಗಳನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ೧. ನೇರ ಕ್ರಮಗಳು ಮತ್ತು ೨. ಪೂರಕ ಕ್ರಮಗಳು ಎಂದು ವಿಭಾಗಿಸಿ ಅಧ್ಯಯನ ಮಾಡಲಾಗಿದೆ.

೧. ನೇರ ಕ್ರಮಗಳು

೧. ಪುನಃ ರೂಪಿಸುವುದು, ೨. ಪ್ರತಿ ಮಾಡುವುದು, ೩. ಛಾಯಾಚಿತ್ರಣ, ೪. ಸ್ಲೈಡ್ಸ್, ೫. ವಿಡಿಯೋ ಚಿತ್ರೀಕರಣ ಎಂದು ವಿಂಗಡಿಬಹುದಾಗಿದೆ.

೧೫. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ. ಪು–೫೦೩

೧. ಪುನಃ ರೂಪಿಸುವುದು

ಭಿತ್ತಿ ಚಿತ್ರಗಳಲ್ಲಿನ ಗಾರೆ ಉದುರಿ ನಾಶ ಆದಾಗ ಅವುಗಳನ್ನು ಪುನಃ ಜೀರ್ಣೋದ್ಧಾರ ಮಾಡುವುದು[೬] ರಕ್ಷಣೆಯ ಒಂದು ಕ್ರಮವಾಗಿದೆ. ನಶಿಸಿ ಹೋಗುತ್ತಿರುವ ಇಲ್ಲಿನ ಭಿತ್ತಿ ಚಿತ್ರಗಳನ್ನು ಪುನಃ ರೂಪಿಸುವುದರ ಮೂಲಕ ಸಂರಕ್ಷಿಸಬಹುದು. ಪುನಃ ರೂಪಿಸುವ ಮೊದಲು ನವಿರಾದ ಕುಂಚದಿಂದ ತೆಗೆದು ಸ್ವಚ್ಛಗೊಳಿಸಬೇಕು.[೭] ಆಮೇಲೆ ಚಿತ್ರಕ್ಕೆ ದೀಪದ ಹೊಗೆಯಿಂದ ಸೃಷ್ಟಿಗೊಂಡ ಕಾಡಿಗೆ ಹಾಗೂ ಇತರ ಕಲೆಗಳನ್ನು ಯೋಗ್ಯ ರಾಸಾಯನಿಕ ದ್ರವ್ಯಗಳನ್ನು ಉಳಿಸಿ ತೆಗೆಯಬೇಕು.

ಈ ರೀತಿ ಸ್ವಚ್ಛಗೊಳಿಸುವಾಗ ಈ ಮೊದಲೇ ಆ ಚಿತ್ರ ಸಂರಕ್ಷಣೆಗೊಳಗಾಗಿದ್ದರೆ ಸಂರಕ್ಷಣೆಯ ಸಮಯದಲ್ಲಿ ತುಂಬಲಾದ ಭಿತ್ತಿಯ ಸತ್ವ ಕಳೆದುಕೊಂಡ ಭಾಗ, ಅಲ್ಲಲ್ಲಿ ಲೇಪಿಸಿದ ಬಣ್ಣ ಮತ್ತು ಚಿತ್ರಣ ಮಾಡಿದ ಹೊಂದಾಣಿಕೆಯಾಗದ ಅಂಶವನ್ನು ತೊಳೆದು ತೆಗೆಯಬೇಕಾಗುವುದು.[೮] ಕರ್ನಾಟಕದ ಭಿತ್ತಿಚಿತ್ರಗಳನ್ನು ಮತ್ತೆ ತಿದ್ದಿ ಬರೆಯಿಸಿದ ಬಗ್ಗೆ ಶಾಸನಗಳು ಕಂಡುಬರುವುದಿಲ್ಲ.[೯] ಆದರೂ ಡಾ.ಅ.ಲ. ನರಸಿಂಹನವರು ಹೇಳುವುದೇನೆಂದರೆ, ಹಂಪೆಯ ಚಿತ್ರಗಳು ಮೂರು ಬಾರಿ ತಿದ್ದಿದೆಯೆಂಬ ಹೇಳಿಕೆಗೆ ಆಧಾರವಿಲ್ಲವಾದರೂ ತಿದ್ದಿರುವ ಗುರುತು ವಿದ್ಯಾರಣ್ಯರ ಮೆರವಣಿಗೆಯಲ್ಲಿ ಕಂಡುಬರುತ್ತದೆ[೧೦] ಎಂಬುದು ಇವರ ಅಭಿಪ್ರಾಯವಾಗಿದೆ. ಅರ್ಜುನನ ಭೇದಿಸುವ ಚಿತ್ರದ ಯಂತ್ರದ ಕೆಳಗೆ ಕೋವಿ ಹಿಡಿದ ಸೈನಿಕರ ಚಿತ್ರ ತಿದ್ದಿದ ನಂತರದ ಕಾಲದ್ದು ಎಂದು ಕಾರಂತರು ಊಹಿಸುತ್ತಾರೆ.[೧೧]

ಹೀಗೆ ಇವುಗಳನ್ನು ಸ್ವಚ್ಛಗೊಳಿಸಿದ ನಂತರ ಭಿತ್ತಿಚಿತ್ರ ಕಲೆಯ ಬಗ್ಗೆ ಪ್ರರ್ಣ ಮಾಹಿತಿಯಿರುವ ನುರಿತ ಕಲಾವಿದರಿಂದ ಆಧುನಿಕ ಭಿತ್ತಿಯನ್ನು ಸಿದ್ಧಗೊಳಿಸಿ ಮೂಲಚಿತ್ರದ ಮಾದರಿಯಲ್ಲಿ ಮತ್ತು ಚಿತ್ರದ ವರ್ಣಗಳಿಗೆ ಸರಿಹೊಂದುವ ವರ್ಣವನ್ನು ಬೆಳಸಿ ಬಣ್ಣವನ್ನು ತುಂಬಿ ಹಿನ್ನೆಲೆ ವರ್ಣ ಲೇಪನಕ್ಕೆ ಸಿಂಥೆಟಿಕ್, ಆಕ್ರೆಲಿಕ್‌ನಂತಹ ವರ್ಣಗಳನ್ನು ಬಳಿಸಿ ಚಿತ್ರರಚಿಸಿ ಚಿತ್ರವು ಪ್ರರ್ತಿಯಾಗಿ ಒಣಗಿದ ನಂತರ ಉತ್ತಮ ಗುಣಾತ್ಮಕ ವಾರ್ನಿಸ್‌ನ ತೆಳುವಾದ ಲೇಪನ ಮಾಡಿ ಪುನಃ ರೂಪಿಸುವ ಸಾಧ್ಯತೆಯಿದ್ದರೂ ಕೂಡಾ, ಮೂಲ ಭಿತ್ತಿಚಿತ್ರಗಳು ಕೊಡುವ ಅನುಭವವೇ ಬೇರೆ, ಆದುದರಿಂದ ಇಂತಹ ಚಿತ್ರಗಳನ್ನು ಆದಷ್ಟು ಹೆಚ್ಚು ದಿನಗಳ ಕಾಲದವರೆಗೆ ಸಂರಕ್ಷಿಸಬೇಕಾದ ಅಗತ್ಯತೆ ಇದೆ.[೧೨]

---

೦೬. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪು-೫೩

೦೭. ಅದೇ., ಪು-೧೫೪

೦೮. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಪು-೫೧೫

೦೯. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪು-೧೫೧

೧೦. ಅದೇ.

೧೧. ಅದೇ.

೧೨. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಪು-೮೮

೨. ಪ್ರತಿ ಮಾಡುವುದು ಮತ್ತು ನಕಲು ಮಾಡುವುದು

ರಕ್ಷಣೆಯ ಇನ್ನೊಂದು ರೂಪವೆಂದರೆ ನಕಲು ಮಾಡುವುದು. ಮೂಲಕೃತಿಯ ಮೇಲೆ ನಕಲು ಕಾಗದವಿಟು ಯಥಾವತ್ತಾಗಿ ಚಿತ್ರಗಳನ್ನು ಮೂಡಿಸಿಕೊಂಡು ಮೂಲ ಚಿತ್ರವನ್ನು ಹೋಲುವಂತೆಯೇ ವರ್ಣ ಲೇಪಿಸುವುದು ಒಂದು ಕ್ರಮ.[೧೩] ಉದಾಹರಣೆಗೆ, ಅಜಂತದ ಚಿತ್ರಗಳನ್ನು ಲೇಡಿ ಹೆರಿಂಗ್ ಹೆಮ್ ಮತ್ತು ಅವರ ನೇತೃತ್ವದ ಕಲಾವಿದರ ತಂಡದಲ್ಲಿರುವ ಕರ್ನಾಟಕದ ಪ್ರಖ್ಯಾತ ಕಲಾವಿದರಾದ ಕೆ.ವೆಂಕಟಪ್ಪನವರು. ಈ ಚಿತ್ರಗಳನ್ನು ಪ್ರತಿಮಾಡಿರುವುದು ತಿಳಿದ ವಿಷಯ ಹಾಗೇ ಜೆ. ಎನ್. ಅಹೇವಾಸಿ ತಂಡದವರು ಹಾಗೂ ಎಂ. ವ್ಹಿ. ಮಿಣಜಗಿ ಅವರು[೧೪] ಪ್ರತಿಮಾಡಿರುವುದು ತಿಳಿದು ಬಂದಿದ್ದು, ಬಾದಾಮಿಯ ಚಿತ್ರಗಳನ್ನು ನಾವು ಇಂದು ಪ್ರತಿಮಾಡಿಟ್ಟ ಚಿತ್ರಗಳಿಂದಲೇ ನೋಡಬೇಕಾಗಿದೆ.

ಪ್ರಸ್ತುತ ಈ ಚಿತ್ರಗಳು ಸಂಪೂರ್ಣ ನಾಶವಾಗಿದ್ದು ಬಣ್ಣಗಳ ಉಳಿಕೆ ಅಲ್ಲಲ್ಲಿ ಕಂಡುಬರುತ್ತದೆ. ಆದರೆ ಹಂಪೆಯ ವರ್ಣಚಿತ್ರಗಳು ಇನ್ನು ಉತ್ತಮಸ್ಥಿತಿಯಲ್ಲಿದ್ದು. ಅವುಗಳನ್ನು ಪ್ರತಿಮಾಡಿಸಿದ್ದ ದಾಖಲೆಗಳು ತಿಳಿದುಬರುವುದಿಲ್ಲ. ಹೀಗೆ ಚಿತ್ರಗಳನ್ನು ಪ್ರತಿಮಾಡಿ ಕಾಯ್ದಿರಿಸ-ಬಹುದಾದರೂ ಅದರಲ್ಲಿ ಮೂಲಚಿತ್ರಕ್ಕಿಂತ ಅಲ್ಪಸ್ವಲ್ಪ ಭಿನ್ನತೆಗಳು ಕಂಡುಬರುತ್ತವೆ. ಮೂಲಚಿತ್ರಗಳಲ್ಲಿ ಪುರಾತನರು ಬಳಿಸಿದ ಖನಿಜ ಮೂಲ, ಸಸ್ಯಮೂಲ, ಬಣ್ಣಗಳ ಬಳಕೆಯಾಗಿದ್ದು, ಇಂದಿನವರು ಸಿದ್ಧ ರಾಸಾಯನಿಕ ವರ್ಣ ಬಳಿಸಿದಾಗ ಮೂಲ ಚಿತ್ರಗಳ ವರ್ಣ ವೈವಿಧ್ಯತೆಗಿಂತ ಬೇರೆಯಾದ ಹೊಳಪು ಚಿತ್ರಗಳಿಗೆ ಒದಗುವ ಸಂಭವವಿರುತ್ತದೆ.[೧೫]

ಚಿತ್ರಗಳನ್ನು ಪ್ರತಿ ಮಾಡುವಂತೆ ಮೂಲಕೃತಿಯನ್ನು ಎದುರಿಗಿಟ್ಟು ಅದು ಇದ್ದಂತೆ ರಚಿಸುವುದು ಇನ್ನೊಂದು ವಿಧಾನ. ಇಂತಹ ಸಂದರ್ಭಗಳಲ್ಲಿ ಭಿತ್ತಿ ಹಾಳಾಗಿದ್ದರೆ, ಅದು ಹೇಗೆ ಕಾಣುವುದೋ ಹಾಗೆಯೇ ನಕಲು ಮಾಡುವುದು, ಅರೆಬರೆಯಾಗಿ ಕಾಣವು ಆಕಾರವನ್ನು ಪೂರ್ಣ ಮಾಡುವುದು ಹಾಗೂ ಏನೂ ಉಳಿದಿಲ್ಲದ ಭಾಗದಲ್ಲಿ ಉಹಾಪಾತದಂತೆ ಊಹಿಸಿ ಚಿತ್ರಿಸುವ ಮೂರು ಪದ್ಧತಿಗಳಿವೆ.[೧೬]

ಇಲ್ಲಿ ಕಲಾವಿದರು ಎಷ್ಟೇ ನುರಿತವರಾಗಿದ್ದರೂ, ಮೂಲಚಿತ್ರಗಳ ಶೈಲಿ, ರೇಖಾವಿನ್ಯಾಸ, ವರ್ಣಗಾರಿಕೆಯನ್ನು ಇವರು ಸರಿಗಟ್ಟಲಾರರು ಅಥವಾ, ಮೂಲಚಿತ್ರಗಳಿಗಿಂತ ಭಿನ್ನವಾದ ಅನುಭವವೇ ಮೂಡಿಸಬಹುದು. ಇಂತಹ ಅನೇಕ ಅಂಶಗಳಿಂದ ಪ್ರತಿಮಾಡಿದೆ ಮತ್ತು ನಕಲು ಮಾಡಿದ ಚಿತ್ರಗಳ ಸ್ವರೂಪ, ಲಕ್ಷಣಗಳು ಮೂಲ ಚಿತ್ರಗಳು ಒದಗಿಸುವ ಪರಿಣಾಮಕ್ಕೆ ಸಮನಾಗುವುದಿಲ್ಲ

೧೩. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪು-೧೫೫

೧೪. ಡಾ. ಶಿವರಾಮ ಕಾರಂತ : ಕರ್ನಾಟಕದಲ್ಲಿ ಚಿತ್ರಕಲೆ, ಪು-೩೫

೧೫. ಡಾ. ಯಾದಪ್ಪ ಪರದೇಶಿ : ಉತ್ತರಕರ್ನಾಟಕದ ಭಿತ್ತಿಚಿತ್ರಕಲೆ - ಒಂದು ಅಧ್ಯಯನ, ಪು-೫೧೮

೧೬. ಡಾ. ಅ. ಲ. ನರಸಿಂಹನ್ : ಕರ್ನಾಟಕದ ಭಿತ್ತಿಚಿತ್ರ ಪರಂಪರೆ, ಪು-೧೫೫

ಎಂದು ಹೇಳಬಹುದು. ಆದರೂ ಕೂಡಾ ದಾಖಲೆಯ ದೃಷ್ಟಿಯಿಂದ ಚಿತ್ರಗಳನ್ನು ಪ್ರತಿ, ಮತ್ತು ನಕಲು ಮಾಡಿಸಬಹುದಾಗಿದೆ.[೧೭]

೩. ಛಾಯಾಚಿತ್ರಣ ಮಾಡುವುದು

ಹಾಳಾಗುತ್ತಿರುವ ಭಿತ್ತಿಚಿತ್ರಗಳನ್ನು ಛಾಯಾಚಿತ್ರಣ ಮಾಡಿಸಿ ದಾಖಲಿಸುವುದು ಭಿತ್ತಿಚಿತ್ರಗಳ ರಕ್ಷಣೆಯ ಮತ್ತೊಂದು ಕ್ರಮವಾಗಿರುವುದು ಪ್ರಸಿದ್ಧ ವಿಷಯ, ಛಾಯಾಚಿತ್ರಗಳಲ್ಲಿ ಇಂದು ಅತ್ಯಾಧುನಿಕ ವಿಧಾನಗಳು ಬಂದಿದ್ದು ಚಿತ್ರಗಳನ್ನು ಯಥಾವತ್ತಾಗಿ ಸೆರೆ ಹಿಡಿಯಬಹುದು. ಹೀಗೆ ಸೆರೆಹಿಡಿದ ಚಿತ್ರಗಳ ಮೂಲ ಸ್ವರೂಪ, ಬಣ್ಣಗಳು ಚಿತ್ರದಲ್ಲಿನ ತಾಂತ್ರಿಕ ಗುಣಗಳು ಯಥಾವತ್ತಾಗಿ ಮೂಡಿಬಂದು ಇದು ಮೂಲಚಿತ್ರಕ್ಕೆ ಸಮೀಪವಾಗಿರುತ್ತವೆ. ಅಲ್ಲದೇ ಈ ಮೂಲಕ ಚಿತ್ರಗಳನ್ನು ಸಮೀಪದಿಂದ ನೋಡಿ ತಿಳಿದುಕೊಳ್ಳುವಲ್ಲಿ ಇದು ಹೆಚ್ಚು ಸೂಕ್ತವಾಗಿ ಕಂಡುಬರುತ್ತದೆ.[೧೮]

೪. ಸ್ಲೈಡ್ಸ್ ಮಾಡುವುದು

ಛಾಯಾಚಿತ್ರಣ ಮಾಡಿದ ಭಿತ್ತಿಚಿತ್ರಗಳನ್ನು ಸ್ಲೆ ೈಡ್ಸ್‌ಗಳನ್ನಾಗಿ ಮಾರ್ಪಡಿಸಿ ದೊಡ್ಡ ಪ್ರಮಾಣದ ಸ್ಕ್ರೀನ್‌ನ ಮೇಲೆ ಮೂಡಿಸಿ ಚಿತ್ರಗಳನ್ನು ವೀಕ್ಷಿಸುವುದರಿಂದ ಚಿತ್ರಗಳ ಸ್ವರೂಪವನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಉತ್ತಮ ಸಾಧನವಾಗಿದೆ.[೧೯]

೫. ವೀಡಿಯೋ ಚಿತ್ರೀಕರಣ ಮಾಡುವುದು

ಭಿತ್ತಿ ಚಿತ್ರಗಳನ್ನು ವೀಡಿಯೋ ಚಿತ್ರೀಕರಣ ಮಾಡುವುದು ರಕ್ಷಣೆಯ ದೃಷ್ಟಿಯಿಂದ ಮತ್ತು ಪ್ರಾಚೀನ ಚಿತ್ರಗಳ ಪರಂಪರೆಯ ದಾಖಲೆಯ ದೃಷ್ಟಿಯಿಂದ ಇನ್ನುಳಿದ ಕ್ರಮಗಳಿಗಿಂತಲೂ ಈ ವಿಧಾನ ಸೂಕ್ತವಾದದ್ದು. ಏಕೆಂದರೆ, ವೀಡಿಯೋ ಚಿತ್ರೀಕರಣ ಮಾಡಿದ ದೃಶ್ಯಗಳನ್ನು ನೋಡಿದಾಗ ನೇರವಾಗಿ ಚಿತ್ರಗಳ ನೆಲೆಯಲ್ಲಿ ನಿಂತು ನೋಡಿದಂತ ಅನುಭವವಾಗುತ್ತದೆ. ಹೀಗೆ ವೀಡಿಯೋ ಚಿತ್ರೀಕರಣ ಮಾಡಿದ ಚಿತ್ರಗಳನ್ನು ಈ ಪ್ರದೇಶ ಸಾಂಸ್ಕೃತಿಕ ಪರಿಸರದ ಚರಿತ್ರೆಯ ವಿವರವನ್ನು ಧ್ವನಿ ಸಂಯೋಜನೆ ಮಾಡಿ ದೂರದರ್ಶನ, ಖಾಸಗಿ ಚಾನೆಲ್‌ಗಳಲ್ಲಿ ಪ್ರಸಾರ ಮಾಡಬೇಕು, ಹೇಗೆ ಮಾಡುವುದರಿಂದ ಭಿತ್ತಿಚಿತ್ರಗಳ ಅಂದಿನ ಪರಿಸರ, ಆಡಳಿತ ಹೀಗೆ ಅಂದಿನ ಚಾರಿತ್ರಿಕ ಅಂಶಗಳನ್ನು ದಾಖಲೆಗೊಳಿಸುವುದರಿಂದ ಜನಸಾಮಾನ್ಯರಿಗೆ, ಕಲಾಭಿಮಾನಿಗಳಿಗೆ ಅಧ್ಯಯನಕಾರರಿಗೆ ಚರಿತ್ರೆಯ ಮೂಲಸ್ವರೂಪವನ್ನು ದೊರಕಿಸುವಲ್ಲಿ ಸಹಾಯಕವಾಗುತ್ತದೆ ಹಾಗೂ ಈ ಮೂಲಕ ಪ್ರಾಚೀನ

೧೭. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಪು-೮೯

೧೮. ಅದೇ.

೧೯. ಅದೇ.

ಭಿತ್ತಿಚಿತ್ರಗಳ ಮಹತ್ವವನ್ನು ಸಾರಬಹುದು. ಭಿತ್ತಿಚಿತ್ರಗಳನ್ನು ವಿಡಿಯೋ ಚಿತ್ರೀಕರಣ ಮಾಡಿ ಸಿಡಿಯಲ್ಲಿ ಅಳವಡಿಸಿ ಕಾಯ್ದಿಡಬಹುದು. ಹೀಗೆ ಮಾಡುವುದರಿಂದ ಎಲ್ಲ ಚಿತ್ರಣಗಳನ್ನು ಹಾಗೂ ಮಾಹಿತಿಯನ್ನು ಒಂದರಲ್ಲೇ ಸಂಗ್ರಹಿಸಿಡಬಹುದಲ್ಲದೇ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಸರಳವಾಗಿ ಕೊಂಡೊಯ್ಯಲು ಅಥವಾ ಸಾಗಿಸಲು ಇದು ಸೂಕ್ತವಾದುದಾಗಿದೆ. ಈ ರೀತಿ ಸಿಡಿಯಲ್ಲಿ ಸಂಗ್ರಹಿಸಿದ ಭಿತ್ತಿಚಿತ್ರಗಳನ್ನು ನೂರಾರು ವರ್ಷಗಳ ಕಾಲ ಸುರಕ್ಷಿತವಾಗಿಡಬಹುದು.[೨೦]

೨. ಪೂರಕ ಕ್ರಮಗಳು

ಭಿತ್ತಿಚಿತ್ರ ಕಲೆಯ ಸಂರಕ್ಷಣೆಯಲ್ಲಿ ಅನುಸರಿಸುವುದು ನೇರ ಕ್ರಮಗಳಂತೆ ಪೂರಕವಾಗಿಯೂ ಕೆಲವು ಕ್ರಮಗಳನ್ನು ಅನುಸರಿಸುವುದರಿಂದ ಭಿತ್ತಿಚಿತ್ರಗಳನ್ನು ಸಂರಕ್ಷಣೆಗೊಳಿಸಬಹುದು. ಪೂರಕ ಕ್ರಮಗಳಲ್ಲಿ ಮೊದಲಿಗೆ ಪುಸ್ತಕಗಳಲ್ಲಿ ಭಿತ್ತಿಚಿತ್ರಗಳ ಛಾಯಾಚಿತ್ರಗಳನ್ನು ಮುದ್ರಿಸುವುದು ಒಂದು ರಕ್ಷಣೆಯ ಕ್ರಮವಾಗಿದೆ. ಇತಿಹಾಸ ಪುಸ್ತಕಗಳಲ್ಲಿ ಶಾಲಾಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಮತ್ತು ಮಾಸಿಕ ಪ್ರತಿಕೆಗಳಲ್ಲಿ ಅವಶ್ಯಕವಿದ್ದಲ್ಲಿ ಈ ಚಿತ್ರಗಳನ್ನು ಮುದ್ರಿಸುವುದರಿಂದ ಈ ಮೂಲಕ ವಿದ್ಯಾರ್ಥಿಗಳಿಗೆ, ಕಲಾಸಕ್ತರಿಗೆ, ಜನಸಾಮಾನ್ಯರಿಗೆ, ಪ್ರಾಚೀನ ಭಿತ್ತಿಚಿತ್ರಕಲೆಯ ಬಗ್ಗೆ ಪರಿಚಯಿಸಿದಂತಾಗುತ್ತದೆ. ಇದರಿಂದ ಭಿತ್ತಿಚಿತ್ರಗಳನ್ನು ಪರೋಕ್ಷವಾಗಿ ರಕ್ಷಣೆ ಮಾಡಬಹುದು. ಹಾಗೂ ಮುಖ್ಯವಾಗಿ ಪದವೀಧರರು ಇಂತಹ ಪ್ರಾಚೀನ ಭಿತ್ತಿಚಿತ್ರಕಲೆಯ ಬಗ್ಗೆ ಆಸಕ್ತಿ ಹೊಂದಿ ಹಾಗೂ ಅದರ ಮಹತ್ವ ಅರಿತು ಭಿನ್ನ ಭಿನ್ನವಾದ ದೃಷ್ಟಿಕೋನದಿಂದ ಪರಾಮರ್ಶಿಸಿ ಸಮಗ್ರವಾದ ಸಂಶೋಧನೆ ಅಧ್ಯಯನ ಮಾಡುವ ಅವಶ್ಯಕತೆಯಿದೆ.[೨೧] ಇದಲ್ಲದೇ ಅಲಂಕಾರಿಕ ವಾಣಿಜ್ಯ ವಸ್ತುಗಳಲ್ಲಿಯೂ ಕೂಡಾ ಭಿತ್ತಿಚಿತ್ರಗಳನ್ನು ರಚಿಸಿ ಸಂರಕ್ಷಿಸಬಹುದಾಗಿದೆ. ಶುಭಾಷಿತ ಪತ್ರಗಳು ಕ್ಯಾಲೆಂಡರಗಳ ಮೇಲೆ ಭಿತ್ತಿಚಿತ್ರಗಳನ್ನು ಮುದ್ರಿಸುವುದರಿಂದ ಇವು ವಿಭಿನ್ನವಾಗಿ ಜನರನ್ನು ಆಕರ್ಷಿಸುತ್ತವೆ. ಅಲ್ಲದೇ, ಈ ಮುಖಾಂತರ ಜನರಿಗೆ ಭಿತ್ತಿಚಿತ್ರಗಳನ್ನು ಪರಿಚಯಿಸಿದಂತಾಗುತ್ತದೆ ಅಲ್ಲದೆ. ವಸ್ತ್ರಗಳ ಮೇಲೆ ಬಾಗಿಲು ಪರದೆಗಳ ಮೇಲೆ ಹೂಕುಂಡ ಮತ್ತು ಹೂಜಿ ಹೀಗೆ ಹಲವು ಅಲಂಕಾರಿಕ ವಸ್ತುಗಳಲ್ಲಿ ಇವುಗಳನ್ನು ರಚಿಸಬಹುದಾಗಿದೆ.[೨೨]

ಜೈನಚಿತ್ರಕಲೆಯ ಸ್ಥಿತಿಗತಿ

ಜೈನ ಚಿತ್ರಗಳ ಕುರಿತಂತೆ ಇತಿಹಾಸದಲ್ಲಿ ಕ್ರಿಪೂ. ೩೦೦ ರಿಂದ ಉಲ್ಲೇಖಗಳು ದೊರೆಯುತ್ತವೆ. ಆದರೆ ಭೌತಿಕ ಸಾಕ್ಷಿಗಳು ಬಹುವಿರಳವಾಗಿವೆ. ಅವುಗಳಲ್ಲಿ ಭಿತ್ತಿಚಿತ್ರಗಳು ಹಾಗೂ ಹಸ್ತಪ್ರತಿ ಚಿತ್ರಗಳಲ್ಲಿ

೨೧. ಸುಚಿತ್ರಾ ಜಿ. ಲಿಂಗದಳ್ಳಿ : ವಿಜಯನಗರ ಭಿತ್ತಿಚಿತ್ರಕಲೆ – ಒಂದು ಅಧ್ಯಯನ, ಪು–೮೯

೨೧. ಅದೇ., ಪು–೯೦

೨೨. ಅದೇ.

ದೊರೆಯುವ ಚಿತ್ರಗಳು. ಕರ್ನಾಟಕದ ವ್ಯಾಪ್ತಿಯಲ್ಲಿ ದೊರೆಯುವ ಚಿತ್ರಗಳಲ್ಲಿ ಧವಳತ್ರಯದ ಸಚಿತ್ರ ಹಸ್ತಪ್ರತಿಗಳೇ ಪುರಾತನವಾಗಿದ್ದು, ಶ್ರವಣಬೆಳಗೊಳ, ಮೂಡಬಿದರೆ, ಕಾರ್ಕಳ, ನಲ್ಲೂರು, ನಾರಾವಿ, ಬಜಗೋಳ ಹೀಗೆ ಹಲವಾರು ಜೈನ ಭಿತ್ತಿಚಿತ್ರ ನೆಲೆಗಳಿದ್ದು, ಅವುಗಳಲ್ಲಿ ಮುಖ್ಯವಾಗಿ ಮೂರು ರೀತಿಯಲ್ಲಿ ವಿಭಾಗಿಸಿಕೊಂಡು ಅಧ್ಯಯನ ಮಾಡಬಹುದಾಗಿದ್ದು, ಅವುಗಳೆಂದರೆ: ೧. ಬಸದಿಗಳಲ್ಲಿರುವ ಭಿತ್ತಿಚಿತ್ರಗಳು, ೨. ಜೈನ ಮಠಗಳಲ್ಲಿಯ ಭಿತ್ತಿಚಿತ್ರಗಳು, ೩. ಜೈನ ಶ್ರಾವಕರ ಮನೆಗಳಲ್ಲಿರುವ ಭಿತ್ತಿಚಿತ್ರಗಳು. ಪ್ರಸ್ತುತ ಪ್ರಬಂಧದಲ್ಲಿ ಈ ಮೇಲಿನ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಮೊದಲನೆಯದಾಗಿ ಬಸದಿಯಲ್ಲಿರುವ ಭಿತ್ತಿಚಿತ್ರಗಳೆಂದರೆ, ಶ್ರವಣಬೆಳಗೊಳ, ಮೂಡಬಿದರೆ ಬಸದಿಗಳಲ್ಲಿ ಭಿತ್ತಿಚಿತ್ರಗಳ ಕುರುಹುಗಳಿದ್ದು, ಅವುಗಳಲ್ಲಿ ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿಯ ಚಾವುಂಡರಾಯ ಬಸದಿ, ಕತ್ತಲ ಬಸದಿ, ಪಾರ್ಶ್ವನಾಥ ಬಸದಿ, ಇಲ್ಲಿಯ ದಾನಶಾಲಾ ಬಸದಿ; ಮೂಡಬಿದರೆಯ ಅಮ್ಮನವರ ಬಸದಿ ಹಾಗೂ ಲೆಪ್ಪದ ಬಸದಿಗಳಲ್ಲಿ ಚಿತ್ರಗಳಿದ್ದ ಕುರುಹುಗಳಿದ್ದು, ಇಲ್ಲಿ ಯಾವುದೇ ಚಿತ್ರಗಳು ಕಂಡುಬರುವುದಿಲ್ಲ. ಅಲ್ಲಲ್ಲಿ ಗಾರೆಯ ಚಕ್ಕಳಗಳಿದ್ದು, ಭಿತ್ತಿ ಕುರುಹುಗಳೆಂದಷ್ಟೇ ಗುರುತಿಸಬಹುದಾಗಿದೆ.

ಎರಡನೆಯದಾಗಿ ಶ್ರವಣಬೆಳಗೊಳ, ಮೂಡಬಿದರೆ ಹಾಗೂ ಕಾರ್ಕಳದ ಜೈನ ಮಠಗಳಲ್ಲಿನ ಭಿತ್ತಿಚಿತ್ರಗಳನ್ನು ಕಾಣಬಹುದು. ಇಲ್ಲಿ ಶ್ರವಣಬೆಳಗೊಳದ ಚಿತ್ರಗಳೇ ಪುರಾತನ ಮತ್ತು ಉತ್ಕೃಷ್ಟ ಮಟ್ಟದ ಭಿತ್ತಿಚಿತ್ರಗಳೆಂದು ಗುರುತಿಸಬಹುದು. ಇಲ್ಲಿಯ ಶ್ರೀಮಠದ ಒಳಾಂಗಣದ ನಾಲ್ಕು ಗೋಡೆಯ ಮೇಲೂ ಚಿತ್ರಗಳಿದ್ದು, ಪಾರ್ಶ್ವನಾಥ ಚರಿತ್ರೆ, ಸಮವಸರಣ, ಪಂಚಪರಮೇಷ್ಟಿಗಳು, ಅಷ್ಟಮಂಗಳಗಳು, ಜನ್ಮಾಭಿಷೇಕ, ನಾಗಕುಮಾರ ಚರಿತ್ರೆ, ಷಡ್ ಲೇಷ್ಯಗಳು, ಜಾತ್ರಾ ಉತ್ಸವಗಳು ಹೀಗೆ ಹಲವು ವಸ್ತು ವಿಷಯಗಳುಳ್ಳ ಚಿತ್ರಗಳಿದ್ದು, ಜೈನ ತತ್ವ ಆದರ್ಶಗಳಿಂದ ಪ್ರೇರೇಪಿತವಾದ ಚಿತ್ರಗಳಾಗಿವೆ ಹಾಗು ವಿಜಯನಗರ, ಮೈಸೂರು ಮತ್ತು ಮೊಘಲ್ ಶೈಲಿಗಳ ಪ್ರಭಾವ ಇವುಗಳ ಮೇಲಾಗಿದ್ದು, ಇದೊಂದು ಕರ್ನಾಟಕದ ಜೈನ ಭಿತ್ತಿಚಿತ್ರ ಪರಂಪರೆಯ ಮೂಲನೆಲೆಗಳಲ್ಲಿ ಅಗ್ರಗಣ್ಯವೆನಿಸುವುದಲ್ಲದೆ, ಬಹು ಉತ್ತಮ ಹಾಗೂ ಸೂಕ್ಷ್ಮ ರಚನೆಯ ಅತ್ಯುತ್ತಮ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ.

ಮೂಡಬಿದರೆಯಲ್ಲೂ ಸಹ ಭಿತ್ತಿಚಿತ್ರಗಳಿದ್ದು, ಗರ್ಭಗುಡಿಯ ದ್ವಾರಬಾಗಿಲ ಎಡ ಬಲಬದಿಗಳಲ್ಲಿ, ಮಠದ ಗುರುಗಳು ಕೂರುವ ಹಿಂಬದಿಯಲ್ಲಿ ಹಾಗೂ ಗರ್ಭಗುಡಿಯ ಮುಂಭಾಗದ ಕಟ್ಟಡದಲ್ಲಿ ಭಿತ್ತಿಚಿತ್ರಗಳಿದ್ದು, ಇವುಗಳೂ ಸಹ ಉತ್ತಮ ಸ್ಥಿತಿಯಲ್ಲಿವೆ. ಶ್ರವಣಬೆಳಗೊಳದ ನಂತರದ ಚಿತ್ರಗಳು ಇವಾಗಿದ್ದು, ಸಚಿತ್ರ ರೇಖಾ ಹಸ್ತಪ್ರತಿಗಳಲ್ಲಿಯ ಚಿತ್ರಗಳ ಪ್ರಭಾವ ಹಾಗೂ ರವಿವರ್ಮರ ಕಲಾಕೃತಿಗಳ ಪ್ರಭಾವವೂ ಇವುಗಳ ಮೇಲಾಗಿದ್ದು, ಜೈನ ತತ್ತ್ವ, ಜೈನ ರಾಮಾಯಣ, ಜೈನ

ಮಹಾಭಾರತ, ಭರತಬಾಹುಗಳ ಕಥಾ ಪ್ರೇರಣೆ ಇವುಗಳ ಮೇಲಾಗಿದೆ. ಗರ್ಭಗುಡಿಯ ಗೋಡೆಯ ಮೇಲಿರುವ ಚಿತ್ರಗಳು ಉತ್ತಮ ಸ್ಥಿತಿಯಲ್ಲಿದ್ದು, ಮುಂಭಾಗದ ಕಟ್ಟಡದಲ್ಲಿಯ ಚಿತ್ರಗಳ ಮೇಲೆ ಸುಣ್ಣವನ್ನು ಬಳಿದು ನಾಶವಾದಂತೆ ತೋರುತ್ತವೆ. ಆದರೆ ಇಲ್ಲಿ ಗುರುಗಳ ಕಲಾಪ್ರಜ್ಞೆಯಿಂದಾಗಿ ಇವುಗಳನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿದೆ. ಆದರೆ ಕಾರ್ಕಳದ ಭಿತ್ತಿಚಿತ್ರಗಳು ಸಂಪೂರ್ಣ ಅವನತಿಯ ಹಂತವನ್ನು ಮುಟ್ಟಿದ್ದು, ಇವುಗಳನ್ನು ಸಂರಕ್ಷಿಸುವುದೇ ಕಷ್ಟ ಸಾಧ್ಯವಾಗಿದ್ದು, ಇವುಗಳ ಬಗ್ಗೆ ಈ ಮಠದಲ್ಲಿ ಗಮನಹರಿಸುವ ಅವಶ್ಯಕತೆ ತುಂಬಾ ಅವಶ್ಯವಿದೆ.

ಇನ್ನೂ ಶ್ರಾವಕರ ಮನೆಗಳಲ್ಲಿಯ ಚಿತ್ರಗಳು ಬಹುಪಾಲು ಅವನತಿಯ ಅಂಚಿನಲ್ಲಿದ್ದು, ಇಲ್ಲಿಯ ಶ್ರಾವಕರು ಇವುಗಳ ಬಗ್ಗೆ ಇತ್ತೀಚೆಗೆ ಒಲವನ್ನು ತೋರಿಸುತ್ತಿದ್ದು, ಇವುಗಳ ಮಹತ್ವದ ಅರಿವು ಅವರಿಗೆ ಇದೀಗಾಗಿದ್ದು, ಸರ್ಕಾರ ಹಾಗು ಸಂಘ-ಸಂಸ್ಥೆಗಳು ಇವುಗಳನ್ನು ಉಳಿಸುವ ಕ್ರಮವನ್ನು ಕೈಗೊಂಡು ಇದರ ಜೊತೆಗೆ ಇವುಗಳನ್ನು ದಾಖಲೀಕರಿಸುವ ಅವಶ್ಯಕತೆಯೂ ತುಂಬಾ ಜರೂರಿಯಾಗಿ ಸಾಗಬೇಕಿದೆ. ಒಟ್ಟಾರೆಯಾಗಿ ಬಹುಪಾಲು ಚಿತ್ರಗಳು ನಮಗೆ ಇಂದು ಸಿಗದೇ ಇದ್ದರೂ ಇತ್ತೀಚೆಗೆ ಇವುಗಳ ಮಹತ್ವದ ಬಗ್ಗೆ ಅರಿವು ಮೂಡಿದ್ದು, ಉಳಿದಿರುವ ಚಿತ್ರಗಳ ಸಂರಕ್ಷಣಾ ಕಾರ್ಯಗಳು ನಡೆಯುತ್ತಲಿವೆ.

ಸಚಿತ್ರ ಹಸ್ತಪ್ರತಿಗಳಲ್ಲಿಯೂ ಚಿತ್ರಗಳಿದ್ದು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ; ಮೈಸೂರು ವಿಶ್ವವಿದ್ಯಾಲಯ, ಮೈಸೂರು; ಜೈನಮಠ, ಮೂಡಬಿದರೆ; ಶ್ರೀ ಮಂಜುನಾಥೇಶ್ವರ ಹಸ್ತಪ್ರತಿ ಕೇಂದ್ರ, ಧರ್ಮಸ್ಥಳ; ಶ್ರವಣಬೆಳಗೊಳದ ಹಸ್ತಪ್ರತಿ ಕೇಂದ್ರ ಹೀಗೆ ಹಲವು ಕಡೆಗಳಲ್ಲಿ ಸಚಿತ್ರ ಹಸ್ತಪ್ರತಿಗಳಿದ್ದು, ಇವುಗಳಲ್ಲಿ ಫಲಕಗಳ ಮೇಲೆ, ತಾಳೆಗರಿಯ ಮೇಲೆ ಕಂಟದಿಂದ ಕೊರೆದ, ವರ್ಣಗಳನ್ನು ಬಳಸಿ ರಚಿಸಿದ ಹಲವು ಹಸ್ತಪ್ರತಿಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಅವುಗಳಲ್ಲಿ ಜೈನರು ಬಹುಮುಖ್ಯವಾಗಿ ಪೂಜ್ಯನೀಭಾವನೆಯಿಂದ ಪೂಜಿಸುವ ಧವಳ ಗ್ರಂಥಗಳಲ್ಲಿ ಸಚಿತ್ರ ವರ್ಣಚಿತ್ರಗಳಿದ್ದು, ಇವು ಜೈನರ ಮೂಲಾಧಾರವಿದ್ದಂತೆ. ಇವುಗಳಲ್ಲಿ ಜೈನ ತೀರ್ಥಂಕರರು, ಮುನಿಗಳು, ಯತಿಗಳು, ಗುರುಗಳು, ಯಕ್ಷ-ಯಕ್ಷಿಯರ ಚಿತ್ರಗಳಿದ್ದು, ವೃತ್ತ, ಚೌಕ, ಹೂಗಳ ವಿನ್ಯಾಸದ ಚಿತ್ರಗಳನ್ನು ನಾವಿಲ್ಲಿ ಕಾಣಬಹುದಾಗಿದೆ. ಹನ್ನೆರಡನೇ ಶತಮಾನದಷ್ಟು ಹಳೆಯದಾದರೂ ಸಹ ಇವುಗಳನ್ನು ನಾವು ಇಂದಿಗೂ ನೋಡುತ್ತಿದ್ದೇವೆಂದರೆ ಜೈನರು ಇವುಗಳನ್ನು ಎಷ್ಟರಮಟ್ಟಿಗೆ ಗೌರವಿಸಿ, ಪೂಜ್ಯಭಾವನೆಯಿಂದ ನೋಡುತ್ತಿರುವುದನ್ನು ಮನಗಾಣಬಹುದು. ಇದಲ್ಲದೆ ಇನ್ನೂ ಹಲವು ಗ್ರಂಥಗಳಲ್ಲಿ ಕಂಟದಿಂದ ಕೊರೆದ ರೇಖಾಚಿತ್ರಗಳಿದ್ದು, ಮಾನಸ್ಥಂಭಗಳು, ಮಂಡಲಗಳು, ಜೈನ ಪೂಜಾ ಕೈಕರ ವಿಧಿ-ವಿಧಾನಗಳಿಗೆ ಸಂಬಂಧಿಸಿದ ಹಲವು ರೇಖಾ ವಿನ್ಯಾಸಗಳನ್ನು ಕಾಣಬಹುದು. ಇವಗಳೂ ಸಹ

ಆಧುನಿಕ ಪದ್ಧತಿಯಲ್ಲಿ ಸಂಗ್ರಹಿಸಲಾಗಿದ್ದು, ಸುರಕ್ಷಿತವಾಗಿದೆ. ಇನ್ನೂ ಹಲವಾರು ಸಚಿತ್ರ ಹಸ್ತಪ್ರತಿಗಳಿದ್ದರೂ ಸಹ ಇವುಗಳನ್ನು ಸಂಶೋಧಿಸಲು ಧಾರ್ಮಿಕ ವಿಧಿಗಳು ಅಡ್ಡಲಾಗಿದ್ದು, ಇವುಗಳು ಬೆಳಕಿಗೆ ಬರದೆ ಹಲವು ಗ್ರಂಥಗಳು ಪೆಟ್ಟಿಗೆಯಲ್ಲಿ ಸೇರಿರುವುದು ವಿಶಾದದ ಸಂಗತಿಯಾಗಿದೆ.

ಇನ್ನುಳಿದಂತೆ ಸಚಿತ್ರ ಕಾಗದ ಪ್ರತಿಗಳೂ ಸಹ ಇದೇ ಭಾಗಗಳಲ್ಲಿ ಸಿಗುತ್ತಿದ್ದು, ಇವುಗಳನ್ನು ಸುರಕ್ಷಿತವಾಗಿ ಸಂರಕ್ಷಿಸಲಾಗಿರುವುದು. ಇವುಗಳು ಮುಂಬರುವ ಸಂಶೋಧಕರಿಗೂ ದೊರೆಯುವಂತೆ ಶಾಸ್ತ್ರಬದ್ಧವಾಗಿ ಹಾಗೂ ವೈಜ್ಞಾನಿಕವಾಗಿ ಸುರಕ್ಷಿಸಲಾಗಿರುವುದು. ಒಟ್ಟಾರೆಯಾಗಿ ಕೆಲವೊಂದು ಭಿತ್ತಿಚಿತ್ರ ನೆಲೆಗಳನ್ನು ಬಿಟ್ಟರೆ ಉಳಿದೆಲ್ಲ ಹಸ್ತಪ್ರತಿ ಮತ್ತು ಭಿತ್ತಿಚಿತ್ರಗಳು ಸುರಕ್ಷಿತವಾಗಿವೆ. ಆದರೆ ಸರ್ಕಾರ ಮತ್ತು ಸಂಘ-ಸಂಸ್ಥೆಗಳು ಇವುಗಳನ್ನು ಮುಂದಿನ ಪೀಳಿಗೆಗೆಕೊಂಡೊಯ್ಯಲು ಹಲವು ವೈಜ್ಞಾನಿಕ ಮಾರ್ಗಗಳನ್ನು ಅನುಸರಿಸಿ ಈ ಮಹತ್ವದ ಕಲಾಪರಂಪರೆಯನ್ನು ಉಳಿಸಿ, ಬೆಳೆಸುವ ಅನಿವಾರ್ಯತೆ ಹೆಚ್ಚಿದೆ.

卐卐卐

ಅಧ್ಯಾಯ : ಎಂಟು

ಸಮಾರೋಪ

ಅಧ್ಯಾಯ : ಎಂಟು

ಸಮಾರೋಪ

ಆದಿಮಾನವನ ಕಾಲದಿಂದಲೂ ಕಲೆಯು ಮಾನವನ ಜೊತೆ ಜೊತೆಯಾಗಿಯೇ ಬೆಳೆದು ಬಂದಿದ್ದು, ಸಂಸ್ಕೃತಿಯೂ ಬೆಳೆಯುತ್ತಲೇ ಬಂದಿದೆ. ಸುತ್ತಲಿನ ಪರಿಸರದಿಂದಾಗುವ ಬದಲಾವಣೆಗಳು ಬದುಕಿನಂತೆ ಕಲೆಯೂ ಸಹ ಬದಲಾಗುತ್ತ ಬಂದಿದೆ. ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಸಂಪರ್ಕ ಸೇತುವೆ ಆಗಿ ಕಲೆ ತನ್ನದೇ ಆದ ವಿಶಿಷ್ಠ ಕಾಣಿಕೆಯನ್ನು ಪ್ರಪಂಚಕ್ಕೆ ನೀಡಿದ್ದು, ಸರ್ವವಿಧಿತ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಐತಿಹಾಸಿಕವಾಗಿ ಆಯಾ ಸಂದರ್ಭಗಳನ್ನು ಅನುಸರಿಸಿ, ಅಗತ್ಯತೆಗಳನ್ನು ತೀರಿಸಲು ಚಿತ್ರಕಲೆಯು ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಭಾರತದಲ್ಲಿ ದೇವಾಲಯ, ಗುಹಾಂತರ ದೇವಾಲಯ, ಮಠ, ಮಂದಿರ, ಮನೆ ಅರಮನೆಗಳ ಭಿತ್ತಿಗಳ ಮೇಲೆ ಚಿತ್ರಗಳು ಬೆಳೆದು ಬಂದಿದ್ದು ಒಂದೆಡೆಯಾದರೆ, ತಾಳೆಗರಿ ಹಸ್ತಪ್ರತಿಗಳು ಕಾಗದದ ಹಸ್ತಪ್ರತಿಗಳು, ಶಿಲೆ, ಭಿತ್ತಿ, ಮರ, ಲೋಹ, ಗಾಜು ಹೀಗೆ ವಿವಿಧ ಮಾಧ್ಯಮಗಳಲ್ಲಿ ಚಿತ್ರಕಲೆಯು ಬೆಳೆದು ಬಂದಿದೆ. ಮಾನವನ ಜೀವನದ ಒಂದು ಅಂಗವೆನ್ನುವ ಹಾಗೆ ರೂಪುಗೊಂಡಿದ್ದು, ಚಿತ್ರಕಲೆಯು ಮಾನವನ ಉನ್ನತಿ ಹಾಗೂ ವ್ಯಕ್ತಿತ್ವ ವಿಕಾಸಕ್ಕೆ ಕೈಗನ್ನಡಿಯಾಗಿದೆ.[೧] ಹೀಗೆ ಕಲೆ ಹಲವು ಕ್ಷೇತ್ರಗಳ ಗಾಳಗಳಿಗೆ ಸಿಲುಕದೆ, ಒಂದು ರೀತಿ ನೀರಿನಲ್ಲಿ ತಾವರೆಯ ಎಲೆಯಂತೆ ಎಲ್ಲದರಲ್ಲಿಯೂ ಇದ್ದು, ಇಲ್ಲದಂತೆ ಕಾಣುವ ಸೌಂದರ್ಯ ಅನುಭವವೇ ಕಲೆಯಾಗಿದೆ.

ಇದೇ ರೀತಿಯಲ್ಲಿ ಕರ್ನಾಟಕದಲ್ಲಿಯ ಜೈನ ಚಿತ್ರಪರಂಪರೆಯೂ ಪ್ರಚಾರಕ್ಕಾಗಿ ಜೈನರು ಕಲೆ ಮತ್ತು ಸಾಹಿತ್ಯವನ್ನು ಬಳಸಿಕೊಂಡರು ಎಂಬ ವಾದದಲ್ಲಿಯೂ ಸಹ ಕಲೆಯು ತನ್ನ ಸ್ವಂತಿಕೆಯನ್ನು

---

೦೧. ಬಿ. ಎಂ. ಪಾಟೀಲ : ಕೆ. ಬಿ. ಕುಲಕರ್ಣಿ, ಪು–೧

ಎಲ್ಲಿಯೂ ಕಳೆದುಕೊಳ್ಳದೆ ಧರ್ಮ ಹಾಗೂ ತತ್ವಗಳನ್ನು ಪ್ರತಿಪಾದಿಸುತ್ತಲೇ ತನ್ನ ಪ್ರಭುತ್ವವನ್ನು ಸಾಧಿಸಿಕೊಂಡು ತನ್ನ ಹಿರಿಮೆಯನ್ನು ನಾಡಿನುದ್ದಗಲಕ್ಕೂ ಹಿಗ್ಗಿಸಿದೆ ಎಂದರೆ ತಪ್ಪಾಗಲಾರದು. ಜೈನ ಕಲಾಪರಂಪರೆಯಲ್ಲಿ ಭಿತ್ತಿಚಿತ್ರಗಳು ಮತ್ತು ಹಸ್ತಪ್ರತಿ ಚಿತ್ರಗಳೆಂದು ಎರಡು ಬಹುಮುಖ್ಯ ಕಲಾಪರಂಪರೆಯಿದ್ದು, ಇವು ಭಾರತೀಯ ಚಿತ್ರಕಲೆಗೆ ತನ್ನದೇ ಆದಂತಹ ಅಮೂಲ್ಯ ಕೊಡುಗೆಯನ್ನು ನೀಡಿದ್ದು, ಕರ್ನಾಟಕದ ಬಹುತೇಕ ಅರಸುಮನೆತನಗಳು ಈ ಕಲೆಯನ್ನು ಪ್ರೋತ್ಸಾಹಿಸಿ, ಬೆಳೆಸಿಕೊಂಡ ಪರಿಯನ್ನು ನಾವು ಈ ಸಮಗ್ರ ಅಧ್ಯಾಯಗಳಲ್ಲಿ ಕಂಡುಕೊಂಡಿದ್ದು, ಇವುಗಳ ನೆಲೆಗಳು, ಪ್ರೇರಣೆ, ಪ್ರಭಾವ ಮತ್ತು ವಿಷಯ ರಚನಾ ವಿಧಾನ, ವರ್ಣಗಾರಿಕೆ, ಭಿತ್ತಿ ತಯಾರಿಕೆ, ಹಸ್ತಪ್ರತಿಗಳ ರಚನಾಕ್ರಮ, ಇವುಗಳ ಸ್ಥಿತಿಗತಿ, ಸಂರಕ್ಷಣೆ, ಅಳಿವು ಉಳಿವು ಹೀಗೆ ಒಟ್ಟಾರೆ ಸಂಪೂರ್ಣ ಅಧ್ಯಯನವನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಪ್ರಸ್ತುತ ಅಧ್ಯಯನ 'ಕರ್ನಾಟಕ ಜೈನ ಚಿತ್ರಕಲಾ ಪರಂಪರೆ' ಮಹಾಪ್ರಬಂಧದಲ್ಲಿ ಬರುವ ಎಂಟು ಅಧ್ಯಾಯಗಳಲ್ಲಿ ನಡೆದ ಅಧ್ಯಯನಗಳ ಫಲಿತಗಳನ್ನು ಸ್ಥೂಲವಾಗಿ ಇಲ್ಲಿ ಸಮೀಕ್ಷಿಸಲಾಗಿದೆ.

ಮೊದಲನೇ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಕುರಿತಾದ ಈ ಅಧ್ಯಾಯದಲ್ಲಿ ಕರ್ನಾಟಕ ಜೈನ ಚಿತ್ರಕಲಾ ಪರಂಪರೆಯ ಚಿತ್ರಕಲೆಯ ಉದ್ದೇಶಗಳನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಯಾವ ಕಾರಣಕ್ಕಾಗಿ ಈ ಅಧ್ಯಯನ ಮಹತ್ವದ್ದಾಗಿದೆ ಎಂಬುದನ್ನು ತಿಳಿಸುತ್ತ ಉದ್ದೇಶಗಳನ್ನು ಚರ್ಚಿಸಲಾಗಿದೆ. ಹಾಗೆಯೇ ಈ ಅಧ್ಯಯನದ ಸ್ವರೂಪದ ಕುರಿತು ಬೇರೆ ಬೇರೆ ಅಧ್ಯಾಯಗಳ ಸ್ಥೂಲ ನೋಟವನ್ನು ಕಟ್ಟಿಕೊಡಲಾಗಿದೆ. ಮತ್ತು ಪ್ರಸ್ತುತ ಅಧ್ಯಯನದ ಕುರಿತು ಈ ಹಿಂದೆ ನಡೆದ ವಿದ್ವಾಂಸರ ಅಧ್ಯಯನಗಳ ಸ್ಥೂಲ ಸಮೀಕ್ಷೆಯನ್ನು ಮಾಡಲಾಗಿದೆ. ಹಾಗೆಯೇ ಈ ಅಧ್ಯಯನದ ವ್ಯಾಪ್ತಿಯನ್ನು ಸಹ ಸ್ಪಷ್ಟಪಡಿಸಲಾಗಿದೆ. ಮತ್ತು ಈ ಸಂಶೋಧನಾಧ್ಯಯನಕ್ಕೆ ಬಳಸಿದ ಸಂಶೋಧನೆಯ ವಿಧಾನಗಳನ್ನು ಸಹ ಸ್ಥೂಲವಾಗಿ ಚರ್ಚಿಸಲಾಗಿದೆ.

ಎರಡನೇ ಅಧ್ಯಾಯವು ಕರ್ನಾಟಕ ಜೈನ ಚಿತ್ರಕಲೆಯ ಸಾಹಿತ್ಯ, ಐತಿಹಾಸಿಕ ನೆಲೆ–ಹಿನ್ನೆಲೆ ತಳಹದಿಯನ್ನು ಕುರಿತು ಚರ್ಚಿಸುವ ಸಂಗತಿಯಾಗಿದ್ದು, ಜೈನ ಸಾಹಿತ್ಯದ ಮಹಾಗ್ರಂಥಗಳಲ್ಲಿನ ಜೈನ ಚಿತ್ರಕಲೆಯ ಉಲ್ಲೇಖವನ್ನು ಹಾಗೂ ಜೈನ ಚಿತ್ರಕಲೆಯ ಉಲ್ಲೇಖವನ್ನು ಹಾಗೂ ಜೈನ ಚಿತ್ರಕಲೆ ಇತಿಹಾಸವನ್ನು ಸಾಹಿತ್ಯದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಪ್ರಸ್ತುತ ಈ ಎರಡನೇ ಅಧ್ಯಾಯದಲ್ಲಿ ಮಾಡಲಾಗಿದೆ.

ಅಧ್ಯಾಯ ಮೂರು ಜೈನ ಭಿತ್ತಿ ಚಿತ್ರಕಲೆಯ ಕುರಿತಾಗಿದ್ದು, ಜೈನ ಬಸದಿ ಮತ್ತು ಮಠಗಳು ಹಾಗೂ ಜೈನ ಶ್ರಾವಕರ ಮನೆಗಳಲ್ಲಿಯ ಭಿತ್ತಿಚಿತ್ರಗಳ ಕುರಿತಾಗಿ ಈ ಅಧ್ಯಯನದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಜೈನ ಹಸ್ತಪ್ರತಿ ಚಿತ್ರಕಲೆಯ ಕುರಿತಾಗಿ ವಿವೇಚಿಸಲಾಗಿದ್ದು, ಕರ್ನಾಟಕದ ಜೈನ ಮಠಗಳಲ್ಲಿಯ ಸಚಿತ್ರ ಹಸ್ತಪ್ರತಿಗಳ ತಾಂತ್ರಿಕ ಅಂಶಗಳು, ಆಕಾರಗಳು, ರೇಖಾ ವಿನ್ಯಾಸ, ನಿಲುವು, ಬಣ್ಣ ಹಾಗೂ ಸಂಕೇತಗಳನ್ನು ದೃಶ್ಯಾತ್ಮಕ ನೆಲೆಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದು ಜೈನ ಸಂಕೀರ್ಣ ಚಿತ್ರಕಲೆ ಎಂದಾಗಿದ್ದು ಈ ಅಧ್ಯಾಯದಲ್ಲಿ ಜೈನಧರ್ಮದ ಸಂಕೀರ್ಣ ಮಾಧ್ಯಮದ ಚಿತ್ರಕಲೆಯ ಕುರಿತಾಗಿರುವುದರಿಂದ ತೀರ್ಥಂಕರರ, ಯಕ್ಷ–ಯಕ್ಷಿಣಿಯರ ಚಿತ್ರಪಟ, ಕಾಗದ ಮೇಲಿನ ಜಾಮೀತಿಕ ಚಿತ್ರಗಳು, ವರ್ಣ ಮೂರ್ತಿ ಚಿತ್ರಗಳು ಹಾಗೂ ಮುದ್ರಿತ ಜೈನ ಗ್ರಂಥಗಳ ಚಿತ್ರಗಳನ್ನು ಅಧ್ಯಯನಕ್ಕೆ ಒಳಪಡಿಸಿ ಅವುಗಳ ಕುರಿತಾಗಿ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ಆರು ಜೈನ ಚಿತ್ರಕಲೆಯ ಪ್ರಭಾವ, ಪ್ರೇರಣೆ, ಶೈಲಿ, ತಂತ್ರಗಾರಿಕೆ ಮತ್ತು ಗುಣಲಕ್ಷಣಗಳು ಇದರ ಕುರಿತಾಗಿದ್ದು, ಜೈನ ಚಿತ್ರಕಲೆಯ ತಾಂತ್ರಿಕ ಅಂಶಗಳನ್ನೊಳಗೊಂಡ ಆಕಾರಗಳ ರೇಖಾ ವಿನ್ಯಾಸ, ನಿಲುವು, ಶೈಲಿಯ ಪ್ರಭಾವ, ಪ್ರೇರಣೆ, ಚಿತ್ರಕಲೆಯ ತಂತ್ರಗಾರಿಕೆ ಹಾಗೂ ಅವುಗಳ ಗುಣಲಕ್ಷಣಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಏಳು ಜೈನ ಚಿತ್ರಕಲೆಯ ಸ್ಥಿತಿಗತಿ, ಆಪತ್ತು–ವಿಪತ್ತು ಮತ್ತು ಸಂರಕ್ಷಣೋಪಾಯಗಳ ಕುರಿತಾಗಿದ್ದು ಈ ಪ್ರಸ್ತುತ ಅಧ್ಯಾಯದಲ್ಲಿ ಜೈನ ಚಿತ್ರಕಲೆಗೆ ಬಂದೊದಗುವ ಆಪತ್ತುಗಳ ವಿಧಗಳು, ಪರ್ಯಾಯ ವ್ಯವಸ್ಥೆ, ಸಂರಕ್ಷಣೋಪಾಯಗಳ ಕುರಿತಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ಪ್ರಮುಖ ಫಲಿತಗಳು

- ಭಾರತೀಯ ಚಿತ್ರ ಪರಂಪರೆಯು ಮುಕ್ಕಾಲು ಭಾಗ ಭಿತ್ತಿಪರಂಪರೆಯೇ ಆವರಿಸಿಕೊಂಡಿದೆ. ಇಲ್ಲಿಯ ಜೈನ ಚಿತ್ರ ಪರಂಪರೆಯಲ್ಲಿ ಭಿತ್ತಿಚಿತ್ರಗಳ ಮಹತ್ವ, ಹಿನ್ನೆಲೆ, ಇತಿಹಾಸಗಳ ಉಲ್ಲೇಖ, ಭಿತ್ತಿ ತಯಾರಿಕೆ, ರಚನಾವಿಧಾನ, ಮಾಧ್ಯಮಗಳು, ವರ್ಣವಿನ್ಯಾಸ, ರೇಖಾಚಿತ್ರ ಶೈಲಿ, ತಂತ್ರಗಾರಿಕೆ, ವಿಶೇಷತೆ ವಸ್ತುವಿಷಯದ ಮಹತ್ವಗಳನ್ನು ಈ ಸಮಗ್ರ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಭಾರತೀಯ ಜೈನ ಪರಂಪರೆಗೆ ಕರ್ನಾಟಕದ ಕೊಡುಗೆ ಅಪಾರವಾಗಿದ್ದು, ಕನ್ನಡ ಜೈನ ಸಾಹಿತ್ಯಕ್ಕೆ ಪೂರಕವಾದ ದೃಶ್ಯಗಳನ್ನು ಭಿತ್ತಿಪರಂಪರೆಗೆ ಮತ್ತು ಹಸ್ತಪ್ರತಿ ಪರಂಪರೆಯಲ್ಲಿ ಚಿತ್ರಕಲೆಯು ಸೊಗಸಾಗಿ ಕಟ್ಟಿಕೊಟ್ಟಿದೆ. ಈ ಅಧ್ಯಯನವು ಕನ್ನಡ ಜೈನ ಸಾಹಿತ್ಯಕ್ಕೆ ಚಿತ್ರಕಲೆಯ ಕೊಡುಗೆಯು ಮಹತ್ವಪೂರ್ಣವಾದದ್ದು ಎಂಬುದನ್ನು ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ.

- ಕರ್ನಾಟಕದ ಜೈನ ಧರ್ಮ ಇತಿಹಾಸವನ್ನು ಕಟ್ಟಿಕೊಡುವ ಹಿನ್ನೆಲೆಯಲ್ಲಿ ಸಾಹಿತ್ಯ, ಸಂಸ್ಕೃತಿ, ಆಚಾರ–ವಿಚಾರ, ಜನಜೀವನ, ವ್ಯಕ್ತಿಭಿನ್ನತೆ, ವೈಚಾರಿಕ ನಡಿಗೆಗೆ ಸಂಬಂಧಿಸಿದಂತೆ

ಹಲವು ಅಧ್ಯಯನಗಳು ನಡೆದಿವೆ. ಆದರೆ ಈ ಅಧ್ಯಯನವು ಇವುಗಳನ್ನು ಒಳಗೊಂಡಂತೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಜೈನ ಧರ್ಮದ ಅಧ್ಯಯನದಲ್ಲಿ ಇದರ ಮಹತ್ವ, ಧಾರ್ಮಿಕ ಪ್ರೇರಣೆ, ವಸ್ತುವಿಷಯ, ಮನುಕುಲ ಆಚರಿಸಬೇಕಾದ ತತ್ತ್ವಾದರ್ಶಗಳನ್ನು ಹೊರ ಜಗತ್ತಿಗೆ ದೃಶ್ಯ ಮಾಧ್ಯಮವೇ ಪರಿಣಾಮಕಾರಿಯಾಗಿ ಕಟ್ಟಿಕೊಡಲು ಸಾಧ್ಯ ಎಂಬುದನ್ನು ಕಂಡುಕೊಳ್ಳಲಾಗಿದೆ.

- ಜೈನ ಚಿತ್ರಕಲೆಯು ಧಾರ್ಮಿಕ ಹಿನ್ನೆಲೆಯಲ್ಲಿ ರಚಿತವಾಗಿದ್ದರೂ ಈ ಅಧ್ಯಯನದಲ್ಲಿ ಜೈನ ಚಿತ್ರಕಲೆಯನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ವರ್ಗೀಕರಿಸಿ ಪ್ರತ್ಯೇಕವಾಗಿ ಅಧ್ಯಯನ ಮಾಡಿದ್ದು ಹಾಗೂ ಇವುಗಳ ಮಹತ್ವವನ್ನು ಕಂಡುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದ್ದು, ಇದರಲ್ಲಿ ಭಾಗಶಃ ಯಶಸ್ವಿಯಾಗಿದೆ.

- ಭಿತ್ತಿಚಿತ್ರ ಮತ್ತು ಹಸ್ತಪ್ರತಿ ಚಿತ್ರಗಳನ್ನು ಹೊರತುಪಡಿಸಿ ಜೈನ ಧರ್ಮದ ಹಲವು ವಿಶೇಷ ಸಂಕೀರ್ಣ ದೃಶ್ಯ ಮಾಧ್ಯಮಗಳ ವಸ್ತುವಿಷಯ, ರಚನಾ ವಿನ್ಯಾಸ, ಶೈಲಿ ಮತ್ತು ಪ್ರಭಾವಳಿಗಳನ್ನು ಉಲ್ಲೇಖಿಸುವ ಮೂಲಕ ಇವುಗಳ ಮಹತ್ವವನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಜೈನ ಚಿತ್ರಕಲೆಯು ಧರ್ಮಾಧಾರಿತವಾಗಿದ್ದು, ಈ ಧರ್ಮದ ತತ್ತ್ವಗಳನ್ನು ಮತ್ತು ಮಹತ್ವವನ್ನು ಚಿತ್ರಿಸುತ್ತದೆ. ಆದರೆ ಈ ಕಲೆಯು ಸ್ವಾಭಾವಿಕವಾಗಿ, ನೈಸರ್ಗಿಕವಾಗಿ, ವ್ಯಕ್ತಿಗತವಾಗಿ ವಿನಾಶದ ಹಂತಕ್ಕೆ ತಲುಪುತ್ತಿದೆ. ಇವುಗಳನ್ನು ಸಂರಕ್ಷಿಸುವ ಹಲವು ಮಾರ್ಗೋಪಾಯಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಜೈನ ಚಿತ್ರಕಲೆಯ ಉಲ್ಲೇಖಗಳು, ನೆಲೆಗಳು ಹಾಗೂ ಅಲ್ಲಿಯ ಸ್ಥಳ ಮಹಿಮೆ ಮತ್ತು ಕಾಲಮಾನಗಳ ಸಂಶೋಧನೆಗಳೇ ಇಲ್ಲಿಯವರೆಗೂ ಸಾಗಿದ್ದು, ವಸ್ತುವಿಷಯಗಳ ಉಲ್ಲೇಖ, ಪುರಾಣ, ಪರಿಚಯ, ಕಥಾಹಂದರ, ನೋಡುವ ಕ್ರಮಗಳ ಕುರಿತಾಗಿ ಎಲ್ಲಿಯೂ ಪ್ರಕಟವಾಗಿಲ್ಲ. ಪ್ರಸ್ತುತ ಈ ಸಮಗ್ರ ಅಧ್ಯಯನದಲ್ಲಿ ಈ ವಿಷಯಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

- ಪ್ರಸ್ತುತ ಈ ಅಧ್ಯಯನದಲ್ಲಿ ಈ ಕಲೆಯ ಪ್ರೇರಣೆ, ಪ್ರಭಾವ ಉಲ್ಲೇಖಗಳನ್ನು ಹೇಳುವಾಗ ಈ ಕಲೆಯ ಮೇಲಾದ ಶೈಲಿಯ ಪ್ರಭಾವದ ಹೊಸ ಬೆಳಕನ್ನು ಹರಿಸಿದ್ದು, ವಿಜಯನಗರ, ಮೈಸೂರು, ಮೊಘಲರ, ಪಾಲರ, ಹೊಯ್ಸಳರ ಪ್ರಭಾವ, ಶೈಲಿಯ ಕುರಿತು ಹೊಸಬೆಳಕನ್ನು ಚೆಲ್ಲಲಾಗಿದೆ. ಮೊಘಲರ ವಸ್ತ್ರವಿನ್ಯಾಸ, ಅಂಗಾಂಗ ವರ್ಣನೆ, ಭಂಗಿ ಭಾವಗಳನ್ನು ಗುರುತಿಸಿ, ಮೈಸೂರು ಅರಸರ ಸಾಮಂತರಾದ ಹೈದರಾಲಿ ಟಿಪ್ಪುವಿನ ಛಾಯೆಗಳು ಶ್ರವಣಬೆಳಗೊಳದ ಚಿತ್ರಗಳಲ್ಲಿ ಕಂಡುಬಂದಿರುವುದನ್ನು ಹೊಸದಾಗಿ ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಶ್ರವಣಬೆಳಗೊಳದಲ್ಲಿಯ ಭಿತ್ತಿಚಿತ್ರಗಳಲ್ಲಿ ಬಂಧೂಕು, ಫಿರಂಗಿಗಳ ಚಿತ್ರಗಳನ್ನು ಗುರುತಿಸಿದ್ದು, ಇವುಗಳ ಈ ಚಿತ್ರದ ಕಾಲಮಾನಕ್ಕೆ ಪೂರಕ ಅಂಶಗಳೇನೆಂಬುದನ್ನು ಈ ಅಧ್ಯಯನದಿಂದ ತಿಳಿದುಬರುತ್ತದೆ. ಶ್ರವಣಬೆಳಗೊಳದ ಭಿತ್ತಿಚಿತ್ರಗಳಲ್ಲಿಯ ಜಾತ್ರ ಸನ್ನಿವೇಶದಲ್ಲಿ ಅಂದಿನ ಉಡುಗೆ-ತೊಡುಗೆ, ಮಾರುಕಟ್ಟೆಯ ವ್ಯವಸ್ಥೆ, ಚೋರರ ಉಲ್ಲೇಖಗಳು ಈ ಚಿತ್ರದಲ್ಲಿ ಪ್ರಸ್ಥಾಪಿಸುವ ಮೂಲಕ ಇಂದಿನ ಮತ್ತು ಅಂದಿನ ಸಮಾಜ ವ್ಯವಸ್ಥೆಯನ್ನು ಅರಿತುಕೊಳ್ಳಲು ಈ ಅಧ್ಯಯನ ಸಹಕಾರಿಯಾಗಿದೆ.

- ಮೂಡಬಿದರೆಯ ಧವಳತ್ರಯಗಳಲ್ಲಿಯ ಚಿತ್ರಗಳ ಪ್ರಭಾವ ಮತ್ತು ಶೈಲಿಯ ಉಲ್ಲೇಖವನ್ನು ಮಾಡಿದ್ದು, ಅದು ಹೇಗೆ ಪಾಲರಿಂದ ಹೊಯ್ಸಳರವರೆಗೆ ನಡೆದುಬಂದ ಸಂಗತಿ ಮತ್ತು ಇವುಗಳ ಸಾಮ್ಯತೆ ಕುರಿತಂತೆ ಹೊಸ ಸಂಶೋಧನೆಗೆ ಬೆಳಕು ಚೆಲ್ಲುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಅಲ್ಲದೆ ಧವಳ ತ್ರಯಗಳ ಚಿತ್ರಗಳಲ್ಲಿ ಪಾಲರ ನೇರ ಪ್ರಭಾವವೇ ಇದ್ದರೂ ಹೊಯ್ಸಳ ಕಲಾವಿದರಿಂದಲೇ ಈ ಕಲಾಕೃತಿಗಳು ರಚಿತವಾಗಿರುವವು ಎಂಬ ಹೊಸ ಅನ್ವೇಷಣೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

- ಕರ್ನಾಟಕದ ಜೈನ ಚಿತ್ರಕಲಾ ಪರಂಪರೆಯು ಚಿತ್ರಕಲಾ ಕ್ಷೇತ್ರಕ್ಕೆ ಕೊಟ್ಟ ಅಮೂಲ್ಯವಾದ ಕೊಡುಗೆಯೆಂದರೆ ಕಿರುರೂಪ ಚಿತ್ರಗಳು. ಈ ಚಿತ್ರಗಳು ಭಾರತದಲ್ಲಿ ಅತ್ಯಂತ ಪ್ರಾಚೀನವಾದ ಹಸ್ತಪ್ರತಿ ಚಿತ್ರಗಳೆಂದು ದಾಖಲೆಯಾಗಿವೆ.

- ಜೈನ ಚಿತ್ರಕಲೆಯು ಜೈನ ಧರ್ಮದ ತಾತ್ವಿಕ ಹಿನ್ನೆಲೆಯಲ್ಲಿ ರಚನೆಯಾದರೂ, ಕಲಾವಿದರ ತಮ್ಮ ಸೃಜನಶೀಲ ಪ್ರತಿಭೆಯನ್ನು ಬೇರೆ ಬೇರೆ ಸನ್ನಿವೇಶಗಳನ್ನು ಚಿತ್ರಗಳಿಗೆ ಪೂರಕವಾಗಿ ಬಳಸಿಕೊಂಡು ಅಂದಂದಿನ ಕಾಲದ ಸಾಮಾನ್ಯ ಜನಜೀವನದ ಸಾಂಸ್ಕೃತಿಕ ವಿವರಗಳನ್ನು ಚಿತ್ರಗಳಲ್ಲಿ ದಾಖಲಿಸಿರುವುದು ಮಹತ್ವದ ಅಂಶವಾಗಿದೆ.

- ಜೈನ ಚಿತ್ರಕಲಾ ಪರಂಪರೆಯು ಕರ್ನಾಟಕದ ಜೈನ ಮಠಗಳಲ್ಲಿ ಮತ್ತು ಬಸದಿಗಳಲ್ಲಿ, ಶ್ರಾವಕರ ಮನೆಗಳಲ್ಲಿ ಹಸ್ತಪ್ರತಿಗಳಲ್ಲಿ, ಕಾಗದ ಪತ್ರಗಳಲ್ಲಿ ಇಂದಿಗೂ ಸಂಗ್ರಹಗೊಂಡಿರುವುದು ಆ ನೆಲೆಗಳನ್ನು ಗುರುತಿಸಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

卐卐卐

ಅನುಬಂಧಗಳು

೧. ಸಂಕ್ಷೇಪಗಳು

೨. ಗ್ರಂಥಋಣ

೩. ಕೋಷ್ಟಕಗಳು

೪. ಕರ್ನಾಟಕದಲ್ಲಿನ ಜೈನಚಿತ್ರಗಳ ನೆಲೆಗಳು

ಅನುಬಂಧ-೧

ಸಂಕ್ಷೇಪಗಳು

೦೧. ಸಂ	–	ಸಂಪಾದಕರು
೦೨. ಪ್ರ.ಸಂ	–	ಪ್ರಧಾನ ಸಂಪಾದಕರು
೦೩. ಪು.ಸಂ	–	ಪುಟ ಸಂಖ್ಯೆ
೦೪. ಕಿ.ಪ್ರ.	–	ಕಿರುಪ್ರಬಂಧ
೦೫. ಸಂ.ಪ್ರ	–	ಸಂಪ್ರಬಂಧ
೦೬. ಮ.ಪ್ರ	–	ಮಹಾಪ್ರಬಂಧ
೦೭. ಚಿ.ಸಂ.	–	ಚಿತ್ರಸಂಖ್ಯೆ
೦೮. ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೦೯. ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦. ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧. ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨. ಕ.ವಿ.ವಿ	–	ಕರ್ನಾಟಕ ವಿಶ್ವವಿದ್ಯಾಲಯ
೧೩. ಗು.ವಿ.ವಿ	–	ಗುಲ್ಬರ್ಗಾ ವಿಶ್ವವಿದ್ಯಾಲಯ
೧೪. ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫. ಅ.ಪ್ರ	–	ಅಪ್ರಕಟಿತ
೧೬. ಪ್ರ	–	ಪ್ರಕಟಿತ

೧೭. ಯೋ.ವ	–	ಯೋಜನಾ ವರದಿ
೧೮. ಕ.ಸಾ.ಪ	–	ಕನ್ನಡ ಸಾಹಿತ್ಯ ಪರಿಷತ್
೧೯. ಕ್ರಿ.ಪೂ	–	ಕ್ರಿಸ್ತ ಪೂರ್ವ
೨೦. ಕ್ರಿ.ಶ.	–	ಕ್ರಿಸ್ತಶಕ
೨೧. ಅನು	–	ಅನುವಾದ
೨೨. ಪ್ರೊ.	–	ಪ್ರೊಫೇಸರ್

卐卐卐

ಅನುಬಂಧ-೨

ಗ್ರಂಥಋಣ

೧. ಕನ್ನಡ ಗ್ರಂಥಗಳು

೦೧. ಉತ್ತರ ಕರ್ನಾಟಕದ ಭಿತ್ತಿಚಿತ್ರಕಲೆ – ಒಂದು ಅಧ್ಯಯನ — **ಡಾ. ಯಾದಪ್ಪ ಪರದೇಶಿ**
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೨೦೦೧

೦೨. ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ — **ಡಾ. ಬಿ. ಕೆ. ಹಿರೇಮಠ**
ವೀರಶೈವ ಅಧ್ಯಯನ ವೇದಿಕೆ, ಬಿಜಾಪುರ
೧೯೯೨

೦೩. ಕರ್ನಾಟಕ ಹಸ್ತಪ್ರತಿ ಚಿತ್ರಕಲೆ – ಒಂದು ಅಧ್ಯಯನ — **ಡಾ. ಎಚ್.ಎನ್.ಚಿತ್ರಗಾರ**
ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ ಹಂಪಿ
೨೦೦೩

೦೪. ಕರ್ನಾಟಕದ ಜನಪದ ಚಿತ್ರಕಲೆ — **ಡಾ. ಎಸ್. ಸಿ. ಪಾಟೀಲ**
ವೀರಶೈವ ಅಧ್ಯಯನ ಸಂಸ್ಥೆ, ಗದಗ
೧೯೯೩

೦೫. ಕರ್ನಾಟಕದ ಜೈನ ಚಿತ್ರಕಲೆ — **ಉಮೇಶ ಎಸ್.**
ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೯

೦೬.	**ಕರ್ನಾಟಕ ಭಿತ್ತಿಚಿತ್ರಕಲೆ – ಹಲವು ಹೊಸ ಶೋಧಗಳು** ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ, ಧಾರವಾಡ, ೨೦೧೬	**ಪ್ರೊ, ಎಸ್. ಸಿ. ಪಾಟೀಲ**
೦೭.	**ಕರ್ನಾಟಕದ ಭಿತ್ತಿಚಿತ್ರಗಳು** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೮೩	**ಬಿ. ವಿ. ಕೆ. ಶಾಸ್ತ್ರಿ**
೦೮.	**ಕರ್ನಾಟಕದ ಭಿತ್ತಿಚಿತ್ರ ಪರಂಪರೆ** ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು. ೧೯೯೮	**ಡಾ ಅ. ಲ. ನರಸಿಂಹನ್**
೦೯.	**ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ** ಸುಜಾತ ಪಬ್ಲಿಕೇಷನ್ಸ್, ಧಾರವಾಡ ೧೯೯೮	**ಡಾ. ಸಿಂಧಗಿ ರಾಜಶೇಖರ**
೧೦.	**ಕರ್ನಾಟಕದ ಸಂಸ್ಕೃತಿ ಸಮೀಕ್ಷೆ** ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು. ೨೦೦೧	**ಡಾ. ಎಚ್.ತಿಪ್ಪೇರುದ್ರಸ್ವಾಮಿ**
೧೧.	**ಕರ್ನಾಟಕದಲ್ಲಿ ಅರಸು ಮನೆತನಗಳು ಸಂ–೧** ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ ಧಾರವಾಡ. ೧೯೪೬	**ಲಕ್ಷ್ಮೀನಾರಾಯಣರಾವ್** **ಎಸ್.ಆರ್.ಪಂಚಮುಖಿ**
೧೨.	**ಕರ್ನಾಟಕದಲ್ಲಿ ಚಿತ್ರಕಲೆ** ಪ್ರಸಾರಂಗ ಮೈಸೂರು ವಿ.ವಿ. ಮೈಸೂರು. ೧೯೭೮	**ಶಿವರಾಮ ಕಾರಂತ**
೧೩.	**ಕರ್ನಾಟಕದಲ್ಲಿ ಜೈನಧರ್ಮ** ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೬	**ಕೆ. ಶಾರದಾ**
೧೪.	**ಕರಕುಶಲ ಕಲೆಗಳು** ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦	**(ಸಂ) ಡಾ.ಕರಿಗೌಡ ಬೀಚನಹಳ್ಳಿ**
೧೫.	**ಚಂದ್ರಪ್ರಭ ಚಂದ್ರನಾಥಸ್ವಾಮಿ ಬಸದಿ** ಧಾಮಸಂಪ್ರೋಕ್ಷಣ ಪೂರ್ವಕ ಪ್ರತಿಷ್ಠಾ– ಮಹೋತ್ಸವ ಸಮಿತಿ, ಶ್ರೀಕ್ಷೇತ್ರ ಧರ್ಮಸ್ಥಳ ೨೦೦೧	**(ಸಂ) ಪ್ರೋ. ಎಸ್.ಪ್ರಭಾಕರ**

೧೬. **ಚಿತ್ರಕಲಾ ಪ್ರಪಂಚ** — (ಸಂ) ಪಿ.ಆರ್.ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು. ೧೯೯೩

೧೭. **ಚಿತ್ರಾಕ್ಷಿ (ವಜ್ರಮಹೋತ್ಸವ ಸಂಚಿಕೆ)** — ಸಂ. ಡಾ. ಎಸ್. ಪಿ. ಪಾಟೀಲ
ಸ್ಕೂಲ್ ಆಫ್ ಆರ್ಟ್, ಡೈಮಂಡ್
ಜೂಬ್ಲಿ ಸಮಿತಿ, ಧಾರವಾಡ
೧೯೯೪

೧೮. **ಜಾಗತಿಕ ಚಿತ್ರಕಲೆ** — ಬಿ. ಪಿ. ಬಾಯರಿ
ಪ್ರತಿಭಾ ಗ್ರಂಥಮಾಲೆ, ಧಾರವಾಡ
೧೯೯೪

೧೯. **ಜೈನ ಕಥಾಕೋಶ** — ಡಾ. ಹಂಪಾ ನಾಗರಾಜಯ್ಯ
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೧೯೯೭

೨೦. **ಜೈನ ಕ್ಷೇತ್ರಗಳ ಐತಿಹ್ಯ** — ಪಿ. ಜಿ. ಕೆಂಪಣ್ಣವರ
ಶ್ರೀ ಬಿ.ಬಿ.ಕರ್ಣವಾಡಿ, ಭೀಮರಾಜ ನಿಲಯ,
ವಿದ್ಯಾನಗರ, ಹಾರೋಗೇರಿ, ರಾಯಭಾಗ
೧೯೯೦

೨೧. **ಜೈನ ಧರ್ಮ** — ಮಿರ್ಜಿ ಅಣ್ಣಾರಾಯ
ಶಾಂತಿಸೇವಾ ಸದನ, ಸೇಡಬಾಳ
೧೯೪೭

೨೨. **ಜೈನ ಧರ್ಮ** — (ಮೂ) ಪಂಡಿತ ಕೈಲಾಸ್‌ಚಂದ್ರಶಾಸ್ತ್ರಿ
ಜೈನ ಸಂಸ್ಕೃತಿ ಸಂರಕ್ಷಕ ಸಂಘ, — (ಅನು) ಕೆ.ಭುಜಬಲಶಾಸ್ತ್ರಿ
ಸೊಲ್ಲಾಪುರ.
೧೯೬೯

೨೩. **ದಕ್ಷಿಣ ಕನ್ನಡ ಜಿಲ್ಲೆಯ ಜೈನಧರ್ಮ ಪರಂಪರೆ ಮತ್ತು ವಿಶಿಷ್ಟ ಸಂಪ್ರದಾಯಗಳು** — ಡಾ. ಎಸ್.ಡಿ.ಶೆಟ್ಟಿ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ
ಪ್ರಕಾಶನ ಮಾಲೆ, ಉಜಿರೆ
೨೦೦೦

೨೪. **ದೃಶ್ಯಕಲಾ** — ಎನ್.ಮರಿಶಾಮಚಾರ್
ಸಿ.ಎಂ.ಎನ್. ಪ್ರಕಾಶನ,
ಬೆಂಗಳೂರು. ೧೯೮೪

೨೫. **ದೃಶ್ಯಕಲಾ ಸಂವೇದನೆ** — **ಪ್ರೊ. ಎಸ್. ಸಿ. ಪಾಟೀಲ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,
ಧಾರವಾಡ. ೨೦೧೬

೨೬. **ಧರ್ಮ (ವಿಶ್ವಕೋಶ)** — **(ಸಂ) ರಹಮತ್ ತರೀಕೆರೆ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೨೭. **ನಿಜದ ನೆಲೆ** — **(ಸಂ) ಡಾ.ಎಸ್.ಸಿ.ಪಾಟೀಲ, ಸತ್ಯಾನಂದ ಪಾತ್ರೋಟ**
ಡಾ. ಬಿ. ಕೆ. ಹಿರೇಮಠ ಅಭಿನಂದನಾ ಗ್ರಂಥ
ಬಸವೇಶ್ವರ ವಿದ್ಯಾವರ್ಧಕ ಸಂಘ,
ಬಾಗಲಕೋಟೆ. ೨೦೦೩

೨೮. **ಪ್ರಾಚೀನ ಲೇಖನ ಸಾಮಗ್ರಿಗಳು** — **(ಮೂಲ) ಡಾ.ಅಲ್ಬರ್ಟನ್‌ಗೌರ್, (ಅನು) ಡಾ. ಶ್ರೀನಿವಾಸ್ ಹಾವನೂರು, ಡಾ.ಲಕ್ಷ್ಮೀನಾರಾಯಣ ಅರೋರ**
ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೨೯. **ಬಾಹುಬಲಿ–ರೂಪಸ್ವರೂಪ ವಿಶ್ವಕೋಶ** — **ಪ್ರೊ. ಹಂಪ ನಾಗರಾಜಯ್ಯ**
ಸಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು.
೨೦೦೫

೩೦. **ಬೆಳೆದು ಬಂದ ಭಾರತದ ಚಿತ್ರಕಲೆ** — **ಪಿ.ಆರ್.ತಿಪ್ಪೇಸ್ವಾಮಿ**
ಕಲಾಕ್ಷೇತ್ರ, ಮೈಸೂರು
೧೯೬೨

೩೧. **ಬುಜರಕೆಂಚನಹಳ್ಳಿಯ ಭಿತ್ತಿಚಿತ್ರಕಲೆ** — **ಪ್ರೊ. ಎಸ್. ಸಿ. ಪಾಟೀಲ, ಡಾ. ಯಾದಪ್ಪ ಪರದೇಶಿ**
ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,
ಧಾರವಾಡ. ೨೦೧೬

೩೨. **ಭಾರತೀಯ ಚಿತ್ರಕಲೆ** — **ಶಿವರಾಮ ಕಾರಂತ**
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು. ೧೯೯೮

೩೩. **ಭಾರತೀಯ ಚಿತ್ರಕಲೆ** — **ಬಿ.ಪಿ.ಬಾಯರಿ**
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೬೨

೩೪. **ಭಾರತೀಯ ಚಿತ್ರಕಲೆ ಸಂಕ್ಷಿಪ್ತ ಪರಿಚಯ** — **ಎಸ್. ಎಂ. ಶಿರಹಟ್ಟಿ**
ಸಿಹಾಮಿ ಪಬ್ಲಿಕೇಷನ್, ಗದಗ
೧೯೬೨

೩೫. **ಭಾರತೀಯ ಸಂಸ್ಕೃತಿಗೆ ಜೈನಧರ್ಮದ ಕೊಡುಗೆ** (ಮೂಲ)ಡಾ.ಹೀರಾಲಾಲ್
ಜೈನ ಸಂಸ್ಕೃತಿ ಸಂರಕ್ಷಿತ ಸಂಘ, ಸೊಲ್ಲಾಪುರ (ಅನು)ಮಿರ್ಜಿ ಅಣ್ಣಾರಾಯ
ಲಾಲಾ ಚಂದ್ರ ಹೀರಾ ಚಂದ ದೇಶಿ,
ಸೀಡೆಬಾಳೆ. ೧೯೭೧

೩೬. **ಮಲೆನಾಡಿನ ಜೈ ಅರಸೊತ್ತಿಗೆ – ಒಂದು ಅಧ್ಯಯನ** ಬಿ.ಎಸ್.ರಾಮಭಟ್ಟ
ಅಪ್ರಕಟಿತ ಡಿ.ಲಿಟ್ ಮಹಾಪ್ರಬಂಧ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೯೯೫

೩೭. **ಮಹಾಪುರಾಣ ಆಕೃತಿ : ಆಶಯ** ಡಾ. ಹಂಪಾ ನಾಗರಾಜಯ್ಯ
ಕಾಂತಾವರ ಕನ್ನಡ ಸಂಘ,
೨೦೧೦

೩೮. **ಮೂಡುಬಿದರೆಯ ವೈಶಿಷ್ಟ್ಯ** ಪ್ರೊ.ಎಸ್.ಪಿ.ಅಜಿತ್‌ಪ್ರಸಾದ್
ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ,
ಹಂಪಿ–೨೦೦೨

೩೯. **ಯಕ್ಷ ಯಕ್ಷಿಯರು** ಡಾ. ಹಂಪಾ ನಾಗರಾಜಯ್ಯ
ಚಂದ್ರಸಾಗರ ವರ್ಣ ಸ್ಮಶರಕ ಗ್ರಂಥಮಾಲೆ
ಬೆಂಗಳೂರು. ೧೯೭೬

೪೦. **ವಡ್ಡಾರಾಧನೆ ಸಮಗ್ರ ಅಧ್ಯಯನ** ಡಾ. ಹಂಪಾ ನಾಗರಾಜಯ್ಯ
ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೧೯೯೯

೪೧. **ವರ್ಣಸಂಚಯ** ಡಾ. ಎಸ್. ಸಿ. ಪಾಟೀಲ
ವಿಜಯ ಚಿತ್ರಕಲಾ ಮಹಾವಿದ್ಯಾಲಯ,
ಇಲಕಲ್ ೨೦೦೧

೪೨. **ವಿಜಯನಗರದ ಗಾರೆಶಿಲ್ಪ** ಡಾ. ಸಿ.ಮಹಾದೇವ
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೪೩. **ಶಿಲ್ಪಕಲಾ ಪ್ರಪಂಚ** (ಸಂ) ಪಿ.ಆರ್.ತಿಪ್ಪೇಸ್ವಾಮಿ
ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು.
೧೯೯೪

೪೪.	**ಶ್ರವಣ ಬೆಳಗೋಳದ ಒಂದು ಸಮೀಕ್ಷೆ** ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೮೩	**ಡಾ. ಜಿ.ಎಸ್.ಶಿವರುದ್ರಪ್ಪ**
೪೫.	**ಶ್ರವಣ ಬೆಳಗೊಳದ ಬಸದಿಗಳು ವಾಸ್ತು ಶಿಲ್ಪ** ಚಂದ್ರಗುಪ್ತ ಗ್ರಂಥಮಾಲೆ, ಶ್ರವಣಬೆಳಗೊಳ ೧೯೯೩	**ಡಾ. ದೇವರಕೊಂಡಾರೆಡ್ಡಿ**
೪೬.	**ಸಂಶೋಧನ ಚತುರ್ಮುಖ** ವಿದ್ಯಾನಿಧಿ ಪ್ರಕಾಶನ, ಹುಬ್ಬಳ್ಳಿ ೨೦೦೬	**ಡಾ. ಬಿ. ವ್ಹಿ. ಶಿರೂರು**
೪೭.	**ಸಂಶೋಧನಾ ಸ್ವರೂಪ** ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ, ೨೦೧೨ (೫ನೇ ಮುದ್ರಣ)	**ಡಾ. ಬಿ. ವ್ಹಿ. ಶಿರೂರು**
೪೮.	**ಸಾಹಿತ್ಯ ಮತ್ತು ಚಿತ್ರಕಲೆ** ರಾಘವ ಪ್ರಕಾಶನ, ಬೆಂಗಳೂರು ೧೯೮೫	**ವಿ. ಸೀತಾರಾಮಯ್ಯ**
೪೯.	**ಸಾಹಿತ್ಯದಲ್ಲಿ ಚಿತ್ರಕಲೆ** ಸಿ.ಎಂ.ಎನ್. ಪ್ರಕಾಶನ ಬೆಂಗಳೂರು ೧೯೮೬	**ಎನ್. ಮರಿಶಾಮಚಾರ್**
೫೦.	**ಸುರಪುರ ಚಿತ್ರಕಲೆ** ಸರಚಂದ್ರ ಪ್ರಕಾಶನ, ಚಿತ್ತಾಪೂರ ೨೦೦೯	**ಡಾ. ಮಲ್ಲಿಕಾರ್ಜುನ ಬಾಗೋಡಿ**
೫೧.	**ಸೃಷ್ಠಿ (ಲೇಖನ ಸಂಕಲನ)** ಬಾಪೂಜಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಬಾಗಲಕೋಟೆ. ೨೦೦೩	**ಡಾ. ಬಿ. ಕೆ. ಹಿರೇಮಠ**
೫೨.	**ಸೌಂದರ್ಯಶಾಸ್ತ್ರ** ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು	**ಅನು. ಡಾ. ಕಾಶೀನಾಥ ಅಂಬಲಿಗೆ**
೫೩.	**ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಶ್ವಕೋಶ ಲಲಿತಕಲೆಗಳ ಸಂಪುಟ** ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. ೨೦೧೨	**ಸಂ. ಡಾ. ಪಿ. ಕೆ. ಖಂಡೋಬಾ** **ಡಾ. ಎಸ್. ಸಿ. ಪಾಟೀಲ**

೫೪. **ಜ್ಞಾನಗಂಗೋತ್ರಿ (ಕಲೆ, ಸಾಹಿತ್ಯ) ಕಿರಿಯರ ವಿಶ್ವಕೋಶ-೫**
ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,
ಬೆಂಗಳೂರು.
ಸಂ. ನಿರಂಜನ ಕೆ.

卐卐卐

೨. ಇಂಗ್ಲೀಷ್ ಗ್ರಂಥಗಳು

01. **A History of Fine Arts in India and west** — **Edith Tomory**
Orient Logman Limited,
Madras– 1992

02. **An Early Document of Indian Art** — **B. N. Goswamy**
Manohar book service, Delhi
1976

03. **Abhilashitartha Chintamani** — **(edt) R. Shama Sastri**
Mysore Sanskrit Series, Mysore
1926

04. **Ajanta (4 Volumes)** — **G. Yazdani**
Oxford University Press,
Oxford – 1930-1958

05. **Chitralakshana of Nagnajit** — **B. N. Goswamy**
Manohar book service, Delhi
1976

06. **Colour and Meaning** — **Mariciahall**
Cambridge Univeristy Press,
Cambridge. 1992

07. **Essays on Jain Art** — **A. K. Coomaraswamy**
Indra Gandi National Centre
For Arts, New Delhi. 2003

08. **Fundamental of Indian Art** — **S. N. Dasgupta**
Bharatiya Vidya Bhavan, Bombay
1983

09. **Gommata : Celebrating Faith**
Forsee Publication,
2006

10. **Hand book of Indian Art** — **E. B. Havell**
Murry, London
1920

11. **Indian Painting** — **Percy Brown**
Y.M.C.A Publishing House,
Culcutta. 1960

12. **Indian Miniature Paintings** — **Anjan Chakravarthy**
Roli Book,
1996

13. **Indra in Jaina Iconography** — **Dr. Nagarajaiah Hampa**
Siddantakriti Granthamale,
Hombuja – 2002

14. **Jaina Art** — **Ananta Kumaraswamy**
Munshiram Manoharlal Publishers
Pvt Ltd., New Delhi – 1994

15. **Jamoda Jaina Murals** — **M.S.Mate**
Research Institute
Pune – 1977

16. **Jain Wall Paintings in Doab Region** — **B. N. Goswamy**
Manohar book service, Delhi
1976

17. **Masterpeaces of Jain paintings** — **Sarayu Doshi**
Marg Publications, Mumbai
1985

18. **Mural Paintings in India** — **J.C.Nagpal**
Gain Publication,
Delhi – 1987

19. **Shilparatna of Srikumara-I** — **Ganapathy T. Shastri**
P.B.H. Publication, Nagarcoil,
Tamilnadu. 2008

20. **Techniques in Indian Mural Painting** — **Jayanth Chakravarthi**
K.P.Bagachi & Co., Kolkotta
1980

21. **The Artist's Hand Book** — **Ray Smith**
Jain Book Depot,
2009

22. **The Cambridge Encyclopedia**
Cambridge Univeristy Press,
Cambridge. U.K. 1987

23. **The New Encyclopedia Britannica-VIII**
Encyclopedia Britannica (India) Pvt. Ltd,
New Delhi.

卐卐卐

ಅನುಬಂಧ-೩

ಕೋಷ್ಟಕಗಳು

೦೧. ಶಾಸ್ತ್ರಕೃತಿಗಳಲ್ಲಿ ಉಲ್ಲೇಖವಾಗಿರುವ ೨೪ ಯಕ್ಷರ ಹೆಸರುಗಳು

ಕ್ರ ಸಂ	ತಿಲೋಯ ಪಣ್ಣತ್ತಿ	ಪ್ರತಿಷ್ಠಾಸಾರ ಸಂಗ್ರಹ	ಅಭಿಧಾನ ಚಿಂತಾಮಣಿ	ಅಪರಾಜಿತ ವೃಚ್ಛಾ	ತೀರ್ಥಂಕರ
೧	ಗೋವರ್ಧನ	ಗೋಮುಖ	ಗೋಮುಖ	ಗೋಮುಖ	ಋಷಭ
೨	ಮಹಾಯಕ್ಷ	ಮಹಾಯಕ್ಷ	ಮಹಾಯಕ್ಷ	ಮಹಾಯಕ್ಷ	ಅಜಿತ
೩	ತ್ರಿಮುಖ	ತ್ರಿಮುಖ	ತ್ರಿಮುಖ	ತ್ರಿಮುಖ	ಸಂಭವ
೪	ಯಕ್ಷೇಶ್ವರ(ಈಶ್ವರ)	ಯಕ್ಷೇಶ್ವರ	ಯಕ್ಷನಾಯಕ	ಚತುರಾನನ	ಅಭಿನಂದನ
೫	ತುಂಬರ	ತುಂಬರ	ತುಂಬರ	ತುಂಬರ	ಸುಮತಿ
೬	ಮಾತಂಗ	ಪುಷ್ಪ	ಸುಮುಂ	ಕುಸುಮ	ಪದ್ಮಪ್ರಭ
೭	ವಿಜಯ	ಮಾತಂಗ	ಮಾತಂಗ	ಮಾತಂಗ	ಸುಪಾರ್ಶ್ವ
೮	ಅಜಿತ	ಶ್ಯಾಮ	ವಿಜಯ	ವಿಜಯ	ಚಂದ್ರಪ್ರಭ
೯	ಬ್ರಹ್ಮ	ಅಜಿತ	ಅಜಿತ	ಜಯ	ಪುಷ್ಪದಂತ
೧೦	ಬ್ರಹ್ಮೇಶ್ವರ	ಬ್ರಹ್ಮ	ಬ್ರಹ್ಮ	ಬ್ರಹ್ಮ	ಶೀತಲ
೧೧	ಕುಮಾರ(ಯಕ್ಷರಾಜ)	ಈಶ್ವರ	ಯಕ್ಷೇಶ್ವರ	ಕಿಂನರೇಶ	ಶ್ರೇಯಾಂಸ
೧೨	ಷಣ್ಮುಖ	ಕುಮಾರ	ಕುಮಾರ	ಕುಮಾರ	ವಾಸುಪೂಜ್ಯ
೧೩	ಪಾತಾಲ	ಚತುರ್ಮುಖ	ಷಣ್ಮುಖ	ಷಣ್ಮುಖ	ವಿಮಲ
೧೪	ಕಿಂನರ	ಪಾತಾಲ	ಪಾತಾಲ	ಪಾತಾಲ	ಅನಂತ
೧೫	ಕಿಂಪುರುಷ	ಕಿಂನರ	ಕಿಂನರ	ಕಿಂನರ	ಧರ್ಮ
೧೬	ಗರುಡ	ಗರುಡ	ಗರುಡ	ಗರುಡ	ಶಾಂತಿ
೧೭	ಗಂಧರ್ವ(ಗಂಧರ್ವಯಕ್ಷೇಶ್ವರ)	ಗಂಧರ್ವ	ಗಂಧರ್ವ	ಗಂಧರ್ವ	ಕುಂಥು

೧೮	ಕುಬೇರ	ಬೇಂದ್ರ	ಯಕ್ಷೇದ್ರ	ಯಕ್ಷೇಶ	ಅರ
೧೯	ವರುಣ	ಕುಬೇರ	ಕುಬೇರ	ಕುಬೇರ	ಮಲ್ಲಿ
೨೦	ಭೃಕುಟಿ	ವರುಣ	ವರುಣ	ವರುಣ	ಮುನಿಸುವ್ರತ
೨೧	ಗೋಮೇಧ	ಭೃಕುಟಿ	ಭೃಕುಟಿ	ಭೃಕುಟಿ	ನಮಿ
೨೨	ಪಾರ್ಶ್ವ	ಗೋಮೇದ	ಗೋಮೇದ	ಗೋಮೇದ	ನೇಮಿ
೨೩	ಮಾತಂಗ	ಧರಣ	ಪಾರ್ಶ್ವ	ಪಾರ್ಶ್ವ	ಪಾರ್ಶ್ವ
೨೪	ಗುಹ್ಯಕ	ಮಾತಂಗ	ಮಾತಂಗ	ಮಾತಂಗ	ಮಹಾವೀರ

೨. ಹದಿನಾರು (ಷೋಡಶ) ವಿದ್ಯಾದೇವರು

ಕ್ರ ಸಂ	ಹೆಸರು	ಪರಂಪರೆ	ಬಣ್ಣ	ವಾಹನ	ಭುಜಸಂಖ್ಯೆ	ಆಯುಧ
1	ರೋಹಿಣಿ	ದಿಗಂಬರ	ಸುವರ್ಣ	ಕಮಲಾಸನಾ	ನಾಲ್ಕು	ಕಲಶ ಶಂಖ ಕಮಲ ಬೀಜಪೂರ
		ಶ್ವೇತಾಂಬರ	ಧವಲ	ಗೋಗಾಮಿನೀ	ನಾಲ್ಕು	ಧನುಷ್ ಬಾಣ ಶಂಖ ಅಕ್ಷಸೂತ್ರ
2	ಪ್ರಜ್ಞಪ್ತಿ	ದಿಗಂಬರ	ನೀಲಿ	ಕುದುರೆ	ನಾಲ್ಕು	ಚಕ್ರ ಖಡ್ಗ ಕಮಲ ಫಲ
		ಶ್ವೇತಾಂಬರ	ಶ್ವೇತ	ಮಯೂರ	ನಾಲ್ಕು	ವರದ ಶಕ್ತಿಮಾತುಲಿಂಗ ಶಕ್ತಿ
		ಶ್ವೇತಾಂಬರ	ಶ್ವೇತ	ಮಯೂರ	ಎರಡು	ಶಕ್ತಿ ಕಮಲ
3	ವಜ್ರಶೃಂಖಲಾ	ದಿಗಂಬರ	ಸುವರ್ಣ	ಆನೆ	ಎರಡು	ವಜ್ರಶೃಂಕಲಾ
		ದಿಗಂಬರ	ಸುವರ್ಣ	ಆನೆ	ನಾಲ್ಕು	ವಜ್ರಶೃಂಕಲಾ ಶಂಖ ಕಮಲ ಬೀಜಪೂರ
		ಶ್ವೇತಾಂಬರ	ಸುವರ್ಣ	ಪದ್ಮ	ಎರಡು	ಶೃಂಖಲಾ ಗದೆ
		ಶ್ವೇತಾಂಬರ	ಶ್ವೇತ	ಪದ್ಮ	ನಾಲ್ಕು	ವರದ ಶೃಂಖಲಾ ಪದ್ಮಾ ಶೃಂಖಲಾ
4	ವಜ್ರಾಂಕುಶಾ	ದಿಗಂಬರ	ಸುವರ್ಣ	ಪುಷ್ಪ	ನಾಲ್ಕು	ಅಂಕುಶ ಕಮಲ ಬೀಜಪೂರ ವೀಣಾ
		ಶ್ವೇತಾಂಬರ	ಸುವರ್ಣ	ಗಜ	ನಾಲ್ಕು	ಕತ್ತಿ ವಜ್ರ ಗುರಾಣಿ ಭಲ್ಲೆ
		ಶ್ವೇತಾಂಬರ	ಸುವರ್ಣ	ಗಜ	ನಾಲ್ಕು	ವರದ ವಜ್ರ ಮಾತುಲಿಂಗ ಅಂಕುಶ
5	ಜಾಂಬೂನದಾ	ದಿಗಂಬರ	ಸುವರ್ಣ	ಕೇಕಿ	ನಾಲ್ಕು	ಖಡ್ಗ ಭಲ್ಲೇ ಕಮಲ ಬೀಜಪೂರ
	ಅಪ್ರತಿಚಕ್ರಾ					
	ಚಕ್ರೇಶ್ವರೀ	ಶ್ವೇತಾಂಬರ	ಸುವರ್ಣ	ಗರುಡ	ನಾಲ್ಕು	ನಾಲ್ಕು ಭುಜಗಳಲ್ಲಿ ಚಕ್ರ
6	ಪುರುಷದತ್ತಾ	ದಿಗಂಬರ	ಶ್ವೇತ	ಕೋಕ	ನಾಲ್ಕು	ವಜ್ರ ಕಮಲ ಶಂಖ ಫಲ
		ಶ್ವೇತಾಂಬರ	ಸುವರ್ಣ	ಮಹಿಷಿ	ಎರಡು	ಖಡ್ಗ ಗುರಾಣಿ
		ಶ್ವೇತಾಂಬರ	ಸುವರ್ಣ	ಮಹಿಷಿ	ನಾಲ್ಕು	ವರದ ಕತ್ತಿ ಮಾತುಲಿಂಗ ಖೇಟಕ
7	ಕಾಲೀ	ದಿಗಂಬರ	ಸುವರ್ಣ	ಮೃಗ	ನಾಲ್ಕು	ಮುಸಲ ಅಸಿ ಪದ್ಮ ಫಲ
		ಶ್ವೇತಾಂಬರ	ಕೃಷ್ಣ	ಪದ್ಮ	ಎರಡು	ಗದೆ ವಜ್ರ
		ಶ್ವೇತಾಂಬರ	ಕೃಷ್ಣ	ಪದ್ಮ	ನಾಲ್ಕು	ಅಕ್ಷಸೂತ್ರ ಗದೆ ವಜ್ರ ಅಭಯ
8	ಮಹಾಕಾಲೀ	ದಿಗಂಬರ	ಶ್ಯಾಮ	ಶರಭ	ನಾಲ್ಕು	ಧನುಷ್ ಬಾಣ ಖಡ್ಗ ಅಭಯ ಘಂಟೆ
		ಶ್ವೇತಾಂಬರ	ತಮಾಲ	ನರ	ನಾಲ್ಕು	ಅಕ್ಷಸೂತ್ರ ವಜ್ರ ಅಭಯ ಘಂಟೆ
		ಶ್ವೇತಾಂಬರ	ಶ್ವೇತ	ನರ	ನಾಲ್ಕು	ಅಕ್ಷಸೂತ್ರ ವಜ್ರ ಅಭಯ ಘಂಟೆ

9	ಗೌರಿ	ದಿಗಂಬರ	ಸುವರ್ಣ	ಗೋಧಾ	ನಾಲ್ಕು	ಕಮಲ (ನಾಲ್ಕು)
		ಶ್ವೇತಾಂಬರ	ಗೌರ	ಗೋಧಾ	ನಾಲ್ಕು	ವರದ ಮುಸಲ ಅಕ್ಷಮಾಲಾ ಕುವಲಯ
10	ಗಾಂಧಾರೀ	ದಿಗಂಬರ	ಶ್ಯಾಮ	ಕಚ್ಛಪ	ಎರಡು	ಚಕ್ರ ಖಡ್ಗ
		ಶ್ವೇತಾಂಬರ	ಶ್ಯಾಮ	ಕಮಲ	ನಾಲ್ಕು	ಕಮಲ ಎರಡು ಮುಸಲ ವಜ್ರ
		ಶ್ವೇತಾಂಬರ	ಶ್ಯಾಮ	ಕಮಲ	ನಾಲ್ಕು	ವರದ ಮುಸಲ ಅಭಯ ವಜ್ರ
11	ಜ್ವಾಲಾಮಾಲಿನೀ	ದಿಗಂಬರ	ಶ್ವೇತ	ಮಹಿಷಿ	ಎಂಟು	ಧನುಷ್ ಬಾಣ ಖಡ್ಗ ಖೇಟಕ ಚಕ್ರ (ಇತ್ಯಾದಿ)
	ಜ್ವಲಾ	ಶ್ವೇತಾಂಬರ	ಶ್ವೇತ	ವರಾಹ	ಅನೇಕ	ಬೇರೆ ಬೇರೆ ಆಯುಧಗಳು
		ಶ್ವೇತಾಂಬರ	ಶ್ವೇತ	ಮಾರ್ಜಾರ	ಎರಡು	ಎರಡರಲ್ಲೂ ಜ್ವಾಲೆ
12	ಮಾನವೀ	ದಿಗಂಬರ	ನೀಲಿ	ಶೂಕರ	ನಾಲ್ಕು	ಮತ್ಸ್ಯ ಖಡ್ಗ ತ್ರಿಶೂಲ
		ಶ್ವೇತಾಂಬರ	ನೀಲ	ಸರೋಜ	ನಾಲ್ಕು	ವರದ ಪಾಶ ಅಕ್ಷಸೂತ್ರ ವೃಕ್ಷ
13	ವೈರೋಟೀ	ದಿಗಂಬರ	ನೀಲ	ಸಿಂಹ	ನಾಲ್ಕು	ವರದ ಹಾವು, ಎರಡು ಕೈ ಪ್ರಣಾಮ ಮುದ್ರೆ
	ವೈರೋಟ್ಯಾ	ಶ್ವೇತಾಂಬರ	ಶ್ಯಾಮ	ಅಜಗರ	ನಾಲ್ಕು	ಖಡ್ಗ ಹಾವು, ಹುರಾಣಿ ಹಾವು
		ಶ್ವೇತಾಂಬರ	ಗೌರ	ಸಿಂಹ	ನಾಲ್ಕು	ಖಡ್ಗೋಊರ್ಧ್ವಹಸ್ತ ಹಾವು ವರದ
14	ಅಚ್ಯುತಾ	ದಿಗಂಬರ	ಸುವರ್ಣ	ಕುದುರೆ	ನಾಲ್ಕು	ವಜ್ರ ಎರಡು ಕೈ ಪ್ರಣಾಮ ಮುದ್ರೆ
	ಅಚ್ಛುಪಾ	ಶ್ವೇತಾಂಬರ	ವಿದ್ಯುತ್ವರ್ಣ	ಕುದುರೆ	ನಾಲ್ಕು	ಬಾಣ ಖಡ್ಗ ಧನುಷ್ ಗುರಾಣಿ
		ಶ್ವೇತಾಂಬರ	ವಿದ್ಯುತ್ವರ್ಣ	ಕುದುರೆ	ನಾಲ್ಕು	ಬಾಣ ಖಡ್ಗ ಗುರಾಣಿ ಹಾವು
15	ಮಾನಸೀ	ದಿಗಂಬರ	ರಕ್ತ	ಸರ್ಪ	ಎರಡು	ಪ್ರಣಾಮ ಮುದ್ರೆ
		ಶ್ವೇತಾಂಬರ	ಸುವರ್ಣ	ಹಂಸ	ಎರಡು	ವರದ ಮುದ್ರೆ
		ಶ್ವೇತಾಂಬರ	ಧವಳ	ಹಂಸ	ನಾಲ್ಕು	ವರದ ವಜ್ರ ಅಕ್ಷಸೂತ್ರ ಅಶನಿ
16	ಮಹಾಮನಸೀ	ದಿಗಂಬರ	ವಿದ್ರುಮ	ಹಂಸ	ನಾಲ್ಕು	ಅಕ್ಷಮಾಲಾ ಮಾಲಾ ವರದ ಅಂಕುಶ
		ದಿಗಂಬರ	ವಿದ್ರುಮ	ಹಂಸ	ನಾಲ್ಕು	ಪ್ರಣಾಮ ಮುದ್ರೆ
		ಶ್ವೇತಾಂಬರ	ಧವಲ	ಸಿಂಹ	ನಾಲ್ಕು	ವರದ ಅಸಿ ಕುಂಡಿಕಾ ಗುರಾಣಿ

೩. ಚತುರ್ವಿಂಶತಿ ಶಾಸನ ಯಕ್ಷರು

ಕ್ರ ಸಂ	ಹೆಸರು	ಪರಂಪರೆ	ಬಣ್ಣ	ವಾಹನ	ಭುಜಸಂಖ್ಯೆ	ಆಯುಧ	ವಿಶೇಷ
1	ಗೋಮುಖ	ದಿಗಂಬರ ಶ್ವೇತಾಂಬರ	ಸುವರ್ಣ ಸುವರ್ಣ	ವೃಷಭ ಗಜ	ನಾಲ್ಕು ನಾಲ್ಕು	ಪರಶು ಬೀಜಪೂರ ಅಕ್ಷಸೂತ್ರ ವರದ ವರದ ಅಕ್ಷಸೂತ್ರ ಪಾಶ ಬೀಜಪೂರ	ಗೋವಕ್ತ್ರ ಮಸ್ತಕದಲ್ಲಿ ಧರ್ಮಚಕ್ರ
2	ಮಹಾಯಕ್ಷ	ದಿಗಂಬರ ಶ್ವೇತಾಂಬರ	ಸುವರ್ಣ ಶ್ಯಾಮ	ಗಜ ಗಜ	ಎಂಟು ಎಂಟು	ಖಡ್ಗ ದಂಡ ಪರಶು ವರದ ಚಕ್ರ ತ್ರಿಶೂಲ ಕಮಲ ಅಂಕುಶ ವರದ ಮುದ್ಗರ ಪಾಶ ಅಕ್ಷಸೂತ್ರ ಅಭಯ ಬೀಜಪೂರ ಅಂಕುಶ ಶಕ್ತಿ	ಚತುರ್ಮುಖ
3	ತ್ರಿಮೂಖ	ದಿಗಂಬರ ಶ್ವೇತಾಂಬರ	ಶ್ಯಾಮ ಶ್ಯಾಮ	ಮಯೂರ ಮಯೂರ	ಆರು ಆರು	ದಂಡ ತ್ರಿಶೂಲ ಕರ್ತಿಕಾ ಚರ್ಕ ಅಸಿ ಸೃಣಿ ನಕುಲ ಗದಾ ಅಭಯ ಬೀಜಪೂರ ಅಕ್ಷಸೂತ್ರ ನಾಗ	ತ್ರಿಮುಖ ತ್ರಿಲೋಚನ
4	ಯಕ್ಷೇಶ್ವರ ಈಶ್ವರ	ದಿಗಂಬರ ಶ್ವೇತಾಂಬರ	ಶ್ಯಾಮ ಶ್ಯಾಮ	ಗಜ ಗಜ	ನಾಲ್ಕು ನಾಲ್ಕು	ಬಾಣ ಖಡ್ಗ ಧನುಷ್ ಗುರಾಣಿ ಅಕ್ಷಸೂತ್ರ ಬೀಜಪೂರ ನಕುಲ ಅಂಕುಶ	
5	ತುಂಬರು	ದಿಗಂಬರ ಶ್ವೇತಾಂಬರ	ಶ್ಯಾಮ ಶ್ವೇತ	ಗರುಡ ಗರುಡ	ನಾಲ್ಕು ನಾಲ್ಕು	ಸರ್ಪ (ಎರಡು ಕೈ) ವದರ ಫಲ ವದರ ಶಕ್ತಿ ಗದೆ ನಾಗಪಾಶ	ಸರ್ಪಯಜ್ಞೋಪವೀತ
6	ಪುಷ್ಪ ಕುಸುಮ	ದಿಗಂಬರ ಶ್ವೇತಾಂಬರ	ಶ್ಯಾಮ ನೀಲ	ಮೃಗ ಮೃಗ	ನಾಲ್ಕು ನಾಲ್ಕು	ಗುರಾಣಿ ಅಭಯ ಕುಂತ ವರದ ಫಲ ಅಭಯ ನಕುಲ ಅಕ್ಷಸೂತ್ರ	
7	ಮಾತಂಗ	ದಿಗಂಬರ ಶ್ವೇತಾಂಬರ	ಶ್ಯಾಮ ನೀಲ	ಸಿಂಹ ಗಜ	ಎರಡು ನಾಲ್ಕು	ಶೂಲ ದಂಡ ಬಿಲ್ವಪಾಶ ನಕುಲ ಅಂಕುಶ	ವಕ್ರ ತುಂಡ
8	ಶ್ಯಾಮ ವಿಜಯ	ದಿಗಂಬರ ಶ್ವೇತಾಂಬರ	ಶ್ಯಾಮ ನೀಲ	ಕಪೋತ ಹಂಸ	ನಾಲ್ಕು ಎರಡು	ಅಕ್ಷಸೂತ್ರ ವರದ ನಕುಲ ಕುಂತ ಚಕ್ರ ಮುದ್ಗರ	
9	ಅಜಿತ	ದಿಗಂಬರ ಶ್ವೇತಾಂಬರ	ಶ್ವೇತ ಶ್ವೇತ	ಕೂರ್ಮ ಕೂರ್ಮ	ನಾಲ್ಕು ನಾಲ್ಕು	ಅಕ್ಷಸೂತ್ರ ವರದ ಶಕ್ತಿ ಫಲ ಬೀಜಪೂರ ಅಕ್ಷಸೂತ್ರ ನಕುಲ ಕುಂತ	

10	ಬ್ರಹ್ಮ	ದಿಬಂಬರ	ಶ್ವೇತ	ಪದ್ಮ	ಎಂಟು	ಬಾಣ ಧನುಷ್ ಪರಶುದಂಡ ಕತ್ತಿ ಗುರಾಣಿ ವರದ ವಜ್ರ	ಚತುರ್ಮುಖಿ
		ಶ್ವೇತಾಂಬರ	ಶ್ವೇತ	ಪದ್ಮ	ಎಂಟು	ಬೀಜಪೂರ ಮುದ್ಗರ ಪಾಶ ಅಭಯ ನಕುಲ ಅಂಕುಶ ಗದೆ ಅಕ್ಷಸೂತ್ರ ಅಕ್ಷಸೂತ್ರ ಪದ್ಮ ತ್ರಿಶೂಲ	
11	ಈಶ್ವರ	ದಿಬಂಬರ	ಶ್ವೇತ	ವೃಷಭ	ನಾಲ್ಕು	ದಂಡ	
		ಶ್ವೇತಾಂಬರ	ಶ್ವೇತ	ವೃಷಭ	ನಾಲ್ಕು	ಜೀಪೂರ ಗದೆ ನಕುಲ ಅಕ್ಷಸೂತ್ರ	
12	ಕುಮಾರ	ದಿಬಂಬರ	ಶ್ವೇತ	ಹಂಸ	ಆರು	ಬಾಣ ಗದೆ ವರದ ಧನುಷ್ ನಕುಲ ಫಲ	
		ಶ್ವೇತಾಂಬರ	ಶ್ವೇತ	ಹಂಸ	ನಾಲ್ಕು	ಜೀಜಪೂರ ಬಾಣ ಧನುಷ್ ನಕುಲ	
13	ಷಣ್ಮುಖ	ದಿಬಂಬರ	ಹರಿತ	ಮಯೂರ	ಹನ್ನೆರಡು	ಮೇಲಿನ ಎಂಟು ಕೈಗಳಲ್ಲಿ ಪರಶು ಶೇಷ, ನಾಲ್ಕು ಕೈಗಳಲ್ಲಿ ಕತ್ತಿ, ಅಕ್ಷಸೂತ್ರ, ಗುರಾಣಿ ದಂಡ	ತ್ರಿಮುಖಿ
	ಚತುರ್ಮುಖಿ	ದಿಬಂಬರ	ಹರಿತ	ಮಯೂರ	ಹನ್ನೆರಡು	ಮೇಲಿನ ಎಂಟು ಕೈಗಳ್ಳಲಿ ಪರಶು ಶೇಷ, ನಾಲ್ಕು ಕೈಗಳಲ್ಲಿ ಕತ್ತಿ, ಅಕ್ಷಸೂತ್ರ, ಗುರಾಣಿ ದಂಡ	
		ಶ್ವೇತಾಂಬರ	ಶ್ವೇತ		ಹನ್ನೆರಡು	ಫಲ ಚಕ್ರ ಬಾಣ ಖಡ್ಗ ಪಾಶ ಅಕ್ಷಸೂತ್ರ ನಕುಲ ಚಕ್ರ ಧನುಷ್ ಗುರಾಣಿ ಅಂಕುಶ ಅಭಯ	ಆರು ಮುಖಿ
14	ಪಾತಾಲ	ದಿಬಂಬರ	ರಕ್ತ	ಮಕರ	ಆರು	ಅಂಕುಶ ಶೂಲ ಕಮಲ ಕಶಾ ಹಲಫಲ	ನಾಲ್ಕು ಮುಖಿ
		ಶ್ವೇತಾಂಬರ	ರಕ್ತ	ಮಕರ	ಆರು	ಪದ್ಮ ಪಾಶ ಅಸಿ ನಕುಲ ಗುರಾಣಿ ಅಕ್ಷಸೂತ್ರ	
15	ಕಿನ್ನರ	ದಿಬಂಬರ	ರಕ್ತ	ಮಿನೂ	ಆರು	ಬೀಜಪೂರ ಗದೆ ಅಭಯ ನಕುಲ ಪದ್ಮ ಅಕ್ಷಸೂತ್ರ	ಆರು ಮುಖಿ
		ಶ್ವೇತಾಂಬರ	ರಕ್ತ	ಕೂರ್ಮ	ಆರು	ಮುದ್ಗರ ಅಕ್ಷಸೂತ್ರ ಪರದೆ ಚಕ್ರ ವಜ್ರ ಅಂಕುಶ	ತ್ರಿಮುಖಿ
16	ಗರುಡ	ದಿಬಂಬರ	ಶ್ಯಾಮ	ವರಾಹ	ನಾಲ್ಕು	ವಜ್ರ ಪದ್ಮ ಚಕ್ರ ಫಲ	ತ್ರಿಮುಖಿ
		ಶ್ವೇತಾಂಬರ	ಶ್ಯಾಮ	ವರಾಹ	ನಾಲ್ಕು	ಬೀಜಪೂರ ಕಮಲ ಅಕ್ಷಸೂತ್ರ ನಕುಲ	
17	ಗಂಧರ್ವ	ದಿಬಂಬರ	ಶ್ಯಾಮ	ಪಕ್ಷಿ	ನಾಲ್ಕು	ಎರಡು ಕೈ, ನಾಗಪಾಶ, ಬಾಣ ಧನುಷ್	ಶೂಕರಮುಖಿ
		ಶ್ವೇತಾಂಬರ	ಶ್ಯಾಮ	ಹಂಸ	ನಾಲ್ಕು	ವರದ ಪಾಸ ಬೀಜಪೂರ ಅಂಕುಶ	
18	ಖೇಂದ್ರ	ದಿಬಂಬರ	ಶ್ಯಾಮ	ಶಂಖ	ಹನ್ನೆರಡು	ಬಾಣ ಕಮಲ ಫಲ ಮಾಲಾ ಅಕ್ಷಸೂತ್ರ ಅಭಯ ಧನುಷ್ ವಜ್ರಪಾಶ ಮುದ್ಗರ ಅಂಕುಶ ವರದ	ಆರು ಮುಖಿ
	ಯಕ್ಷೇಂದ್ರ	ಶ್ವೇತಾಂಬರ	ಶ್ಯಾಮ	ಶಂಖ	ಹನ್ನೆರಡು	ಬೀಜಪೂರ ಬಾಣ ಖಡ್ಗ ಮುದ್ಗದ ಪಾಶ ಅಭಯ ನಕುಲ ಧನುಶ್ ಗುರಾಣಿ ಶೂಲ ಅಂಕುಶ ಅಕ್ಷಸೂತ್ರ	

19	ಕುಬೇರ	ಶ್ವೇತಾಂಬರ ದಿಗಂಬರ	ಇಂದ್ರಧನುಷ್ ಇಂದ್ರಧನುಷ್	ಆನೆ ಆನೆ	ಎಂಟು ಎಂಟು	ಕೃಪಾಣು ಬಾಣ ಪಾಶ ವರದ ಗುರಾಣಿ ಧನುಷ್ಯ ದಂಡ ಪದ್ಮ ಶೂಲ ಪರಶು ಅಭಯ ವರದ ಮುದ್ಗರ ಅಕ್ಷಸೂತ್ರ ಬೀಜಪೂರ ಶಕ್ತಿ	ಚತುರ್ಮುಖ
20	ವರುಣ	ದಿಗಂಬರ ಶ್ವೇತಾಂಬರ	ಶ್ವೇತ ಶ್ವೇತ	ವೃಷಭ ವೃಷಭ	ನಾಲ್ಕು ಎಂಟು	ವರದ ಕತ್ತಿ ಗುರಾಣಿ ಫಲ ಬೀಜಪೂರ ಗದೆ ಬಾಣ ಶಕ್ತಿ ನಕುಲ ಪದ್ಮ ಧನುಷ್ ಪರಶು	ಅಷ್ಟಮುಖ ಚತುರ್ಮುಖ
21	ಭೃಕುಟ	ದಿಗಂಬರ ಶ್ವೇತಾಂಬರ	ಸುವರ್ಣ ಸುವರ್ಣ	ವೃಷಭ ವೃಷಭ	ಎಂಟು ಎಂಟು	ಗುರಾಣಿ ಅಸಿ ಧನುಷ್ ಬಾಣ ಅಂಕುಶ ಕಮಲ ಚಕ್ರ ವರದ ಬೀಜಪೂರ ಶಕ್ತಿ ಮುದ್ಗರ ಅಭಯ ನಕುಲ ಪರಶು ವಜ್ರ ಅಕ್ಷಸೂತ್ರ	ಚತುರ್ಮುಖ
22	ಗೋಮೇದ	ದಿಗಂಬರ ಶ್ವೇತಾಂಬರ	ಶ್ಯಾಮ ಶ್ಯಾಮ	ನೃವಾಹನ ಪುಷ್ಪಯಾನ ನರವಾಹನ	ಆರು ಆರು	ಮುದ್ಗರ ಮುಠಾರ ದಂಡ ಫಲ ವಜ್ರ ವರದ ಪರಶು ಬೀಜಪೂರ ಚಕ್ರ ನಕುಲ ಶುಲಶಕ್ತಿ	ತ್ರಿಮುಖ
23	ಧರಣೇಂದ್ರ ಪಾರ್ಶ್ವ	ದಿಗಂಬರ ಶ್ವೇತಾಂಬರ ಶ್ವೇತಾಂಬರ	ಶ್ಯಾಮ ಶ್ಯಾಮ ಶ್ಯಾಮ	ಕೂರ್ಮ ಕೂರ್ಮ ಕೂರ್ಮ	ನಾಲ್ಕು ನಾಲ್ಕು ನಾಲ್ಕು	ಎರಡು ಕೈಗಳಲ್ಲಿ ನಾಗ, ನಾಗಪಾಶ ಗದೆ ಬೀಜಪೂರ ಸರ್ಪ ನಕುಲ ಗಜಮುಖ ಸರ್ಪಭೀಜಪೂರ ಸರ್ಪ ನಕುಲ	ಸರ್ಪಹೆಡೆ ಸರ್ಪಹೆಡೆ
24	ಮಾತಂಗ	ದಿಗಂಬರ ಶ್ವೇತಾಂಬರ	ಮುದ್ಗ ಶ್ಯಾಮ	ಆನೆ ಆನೆ	ಎರಡು ಎರಡು	ವರದ ಫಲ ನುಲ ಬೀಜಪೂರ	ಹಣೆಯಲ್ಲಿ ಧರ್ಮಚಕ್ರ

೪. ಚತುರ್ವಿಂಶತಿ ಶಾಸನ ಯಕ್ಷಕಿರು

ಕ್ರ ಸಂ	ಹೆಸರು	ಪರಂಪರೆ	ಬಣ್ಣ	ವಾಹನ	ಭುಜಸಂಖ್ಯೆ	ಆಯುಧ
1	ಚಕ್ರೇಶ್ವರೀ ಅಪ್ರತಿಚಕ್ರಾ	ದಿಗಂಬರ ದಿಗಂಬರ ಶ್ವೇತಾಂಬರ	ಸುವರ್ಣ ಸುವರ್ಣ ಸುವರ್ಣ	ಕಮಲವಾಹನ ಗರುಡ ಗರುಡ	ಹನ್ನೆರಡು ನಾಲ್ಕು ಎಂಟು	ಎರಡು ಕೈಯಲ್ಲಿ ವಜ್ರ ಎಂಟು ಕೈಯಲ್ಲಿ ಚಕ್ರ ವರದ, ಫಲ ಎರಡು ಚಕ್ರ ವರದ, ಫಲ ವರದ, ಚಕ್ರ ಪಾಶ ಬಾಣ ಧನುಷ್ ಚಕ್ರ ಅಂಕುಶ ವಜ್ರ
2	ರೋಹಿಣೀ ಅಜಿತಾ	ದಿಗಂಬರ ಶ್ವೇತಾಂಬರ	ಸುವರ್ಣ ಧವಲ	ಲೋಹಾಸನ ಲೋಹಾಸನ	ನಾಲ್ಕು ನಾಲ್ಕು	ಚಕ್ರ ಶಂಖ ಅಭಯ ವರದ ವರದ ಪಾಶ ಅಂಕುಶ ಫಲ
3	ಪ್ರಜ್ಞಪ್ತಿ ದುರಿತಾರಿ	ದಿಗಂಬರ ಶ್ವೇತಾಂಬರ	ಶ್ವೇತ ಶ್ವೇತ	ಪಕ್ಷಿ ಮೇಷ	ಆರು ನಾಲ್ಕು	ಅರ್ಧಚಂದ್ರ ಪರಶು ಫಲ ಕತ್ತಿ ಕಮಂಡಲ ವರದ ವರದ ಅಕ್ಷಸೂತ್ರ ಫಲ ಅಭಯ
4	ವಜ್ರಶೃಂಕಲಾ ಕಾಲಿಕಾ	ದಿಗಂಬರ ಶ್ವೇತಾಂಬರ	ಸುವರ್ಣ ಶ್ಯಾಮ	ಹಂಸ ಪದ್ಮ	ನಾಲ್ಕು ನಾಲ್ಕು	ನಾಗಪಾಶ ಅಕ್ಷಸೂತ್ರ ಫಲ ವರದ ಪಾಶ ವರದ ನಾಗ ಅಂಕುಶ
5	ಪುರುಷದತ್ತಾ ಮಹಾಕಾಲೀ	ದಿಗಂಬರ ಶ್ವೇತಾಂಬರ	ಸುವರ್ಣ ಸುವರ್ಣ	ಗಜ ಪದ್ಮ	ನಾಲ್ಕು ನಾಲ್ಕು	ಚಕ್ರ ವಜ್ರ ಫಲ ವರದ ಪಾಶ ವರದ ಅಂಕುಶ ಬೀಜಪೂರ
6	ಮನೋವೇಗಾ ಶ್ಯಾಮಾ	ದಿಗಂಬರ ಶ್ವೇತಾಂಬರ ಶ್ವೇತಾಂಬರ ಶ್ವೇತಾಂಬರ	ಸುವರ್ಣ ಶ್ಯಾಮ ಶ್ಯಾಮ ಶ್ಯಾಮ	ಅಶ್ವ ನರ ನರ ನರ	ನಾಲ್ಕು ನಾಲ್ಕು ನಾಲ್ಕು ನಾಲ್ಕು	ವರದ ಅಸಿ ಗುರಾಣಿ ಫಲ ಪಾಶ ವರದ ವಾಣ ಬೀಜಪೂರ ಅಂಕುಶ ವರದ ಬಾಣ ಧನುಷ್ ಅಭಯ ವರದ ಪಾಶ ಧನುಷ್ ಅಭಯ
7	ಕಾಲೀ ಶಾಂತಾ	ದಿಗಂಬರ ಶ್ವೇತಾಂಬರ	ಶ್ವೇತ ಪೀತ	ವೃಷಭ ಗಜ	ನಾಲ್ಕು ನಾಲ್ಕು	ಗಂಟೆ ತ್ರಿಶೂಲ ಫಲ ವರದ ವರದ ಅಕ್ಷಸೂತ್ರ ಶೂಲ ಅಭಯ
8	ಜ್ವಾಲಾಮಾಲಿನೀ ಭೃಕುಟಿ	ದಿಗಂಬರ ಶ್ವೇತಾಂಬರ	ಶ್ವೇತ ಪೀತ	ಮಹಿಷಿ ವರಾಹ/ಹಂಸ/ ಬಿಡಾಲ	ಎಂಟು ನಾಲ್ಕು	ಚಕ್ರ ಧನುಷ್ ಪಾಶ ಗುರಾಣಿ ತ್ರಿಶೂಲ ಬಾಣ ಮತ್ಸ್ಯ ಕತ್ತಿ ಖಡ್ಗ ಮುದ್ಗರ ಫಲಕ ಪರಶು
9	ಮಹಾಕಾಲೀ	ದಿಗಂಬರ ಶ್ವೇತಾಂಬರ	ಕೃಷ್ಣ ಗೌರ	ಕೂರ್ಮ ವೃಷಭ	ನಾಲ್ಕು ನಾಲ್ಕು	ವಜ್ರ ಫಲ ಮುದ್ಗರ ವರದ ವರದ ಅಕ್ಷಸೂತ್ರ ಕಲಶ ಅಂಕುಶ

10	ಮಾನವೀ	ದಿಗಂಬರ	ಹರಿತ್	ಸೂಕರ(ಹಂದಿ)	ನಾಲ್ಕು	ಮಾಲಾ ವರದ ಮತ್ಸ್ಯ ಫಲ
	ಅಶೋಕಾ	ಶ್ವೇತಾಂಬರ	ಹರಿತ್	ಪದ್ಮ	ನಾಲ್ಕು	ವರದ ಪಾಶ ಫಲ ಅಂಕುಶ
11	ಗೌರೀ	ದಿಗಂಬರ	ಸುವರ್ಣ	ಮೃಗ	ನಾಲ್ಕು	ಮುದ್ಗರ ಕಮಲ ಕಲಶ ವರದ
	ಮಾನವೀ	ಶ್ವೇತಾಂಬರ	ಗೌರ	ಸಿಂಹ	ನಾಲ್ಕು	ವರದ ಮುದ್ಗರ ಕಲಶ ಅಂಕುಶ
12	ಗಾಂಧಾರಿ	ದಿಗಂಬರ	ಹರಿತ್	ಮಕರ	ನಾಲ್ಕು	ಪದ್ಮ ವರದ ಕಮಲ ಮುಸಲ
	ಪ್ರಚಂಡಾ	ಶ್ವೇತಾಂಬರ	ಶ್ಯಾಮ	ಅಶ್ವ	ನಾಲ್ಕು	ವರದ ಶಕ್ತಿ ಪುಷ್ಪ ಗದೆ
13	ವೈರೋಟೀ	ದಿಗಂಬರ	ಹರಿತ್	ಅಜಗರ(ಹೆಬ್ಬಾವು)	ನಾಲ್ಕು	ಎರಡು ಕೈಗಳಲ್ಲಿ ಸರ್ಪ, ಧನುಷ್, ಬಾಣ
	ವಿದಿತಾ	ಶ್ವೇತಾಂಬರ	ಸುವರ್ಣ	ಪದ್ಮ	ನಾಲ್ಕು	ಪಾಶ ಕತ್ತಿ ಅಂಕುಶ ಗುರಾಣೀ
14	ಅನಂತಮತೀ	ದಿಗಂಬರ	ಸುವರ್ಣ	ಹಂಸ	ನಾಲ್ಕು	ಧನುಷ್ ಬಾಣ ಫಲ ವರದ
	ಅಂಕುಶಾ	ಶ್ವೇತಾಂಬರ	ಗೌರ	ಪದ್ಮ	ನಾಲ್ಕು	ಪಾಶ ಕತ್ತಿ ಅಂಕುಶ ಗುರಾಣಿ
15	ಮಾನಸೀ	ದಿಗಂಬರ	ಪ್ರವಾಳಿ(ಹವಳ)	ವ್ಯಾಘ್ರ	ಆರು	ಕಮಲ ಧನುಷ್ ವರದ ಅಂಕುಶ ಬಾಣ ಕಮಲ
	ಕಂದರ್ಪಾ	ಶ್ವೇತಾಂಬರ	ಗೌರ	ಮತ್ಸ್ಯ	ನಾಲ್ಕು	ಉತ್ಪಲ ಅಂಕುಶ ಪದ್ಮ ಅಭಯ
16	ಮಹಾಮಾನಸೀ	ದಿಗಂಬರ	ಸುವರ್ಣ	ಮಯೂರ	ನಾಲ್ಕು	ಫಲ ಚಕ್ರ ಖಡ್ಗ ವರದ
	ನಿರ್ವಾಣೀ	ಶ್ವೇತಾಂಬರ	ಗೌರ	ಪದ್ಮ	ನಾಲ್ಕು	ಪುಸ್ತಕ ಉತ್ಪಲ ಕಮಂಡಲು ಕಮಲ
17	ಜಯಾ	ದಿಗಂಬರ	ಸುವರ್ಣ	ಸೂಕರ	ನಾಲ್ಕು	ಶಂಕ ಅಸಿ ಚಕ್ರ ವರದ
	ವಿಜಯಾ	ಶ್ವೇತಾಂಬರ	ಗೌರ	ಮಯೂರ	ನಾಲ್ಕು	ಬೀಜಪೂರ ಶೂಲ ಮುಷಂಢೀ ಪದ್ಮ
18	ತಾರಾವತೀ	ದಿಗಂಬರ	ಸುವರ್ಣ	ಹಂಸ	ನಾಲ್ಕು	ಸರ್ಪವಜ್ರ ಮೃಗ ವರದ
	ಧಾರಿಣೀ	ಶ್ವೇತಾಂಬರ	ಕೃಷ್ಣ	ಪದ್ಮ	ನಾಲ್ಕು	ಬೀಜಪೂರ ಕಮಲ ಪಾಶ
19	ಅಪರಾಜಿತಾ	ದಿಗಂಬರ	ಹರಿತ್	ಅಷ್ಟಾಪದ	ನಾಲ್ಕು	ಗುರಾಣಿ ಕತ್ತಿ ಫಲ ವರದ
	ವೈರೋಟ್ಯಾ	ಶ್ವೇತಾಂಬರ	ಕೃಷ್ಣ	ಪದ್ಮ	ನಾಲ್ಕು	ವರದ ಅಕ್ಷಸೂತ್ರ ಬೀಜಪೂರ ಶಕ್ತಿ
20	ಬಹುರೂಪಿಣೀ	ದಿಗಂಬರ	ಪೀತ	ನಾಗ	ನಾಲ್ಕು	ಗುರಾಣಿ ಕತ್ತಿ ಫಲ ವರದ (ಅಷ್ಟಾಸನ)
	ನರದತ್ತಾ	ಶ್ವೇತಾಂಬರ	ಗೌರ	ಭದ್ರಾಸನ	ನಾಲ್ಕು	ವರದ ಅಕ್ಷಸೂತ್ರ ಬೀಜಪೂರ ಶೂಲ
21	ಚಾಮುಂಡಾ	ದಿಗಂಬರ	ಹರಿತ್	ಮಕರ	ನಾಲ್ಕು	ಯಷ್ಟಿ ಗುರಾಣಿ ಅಕ್ಷಸೂತ್ರ ಕತ್ತಿ
	ಗಾಂಧಾರಿ	ಶ್ವೇತಾಂಬರ	ಶ್ವೇತ	ಹಂಸ	ನಾಲ್ಕು	ವರದ ಖಡ್ಗ ಬೀಜಪೂರ ಕುಂಭ
		ಶ್ವೇತಾಂಬರ	ಶ್ವೇತ	ಹಂಸ	ನಾಲ್ಕು	ವರದ ಖಡ್ಗ ಶಕುಂತ ಕುಂಭ
		ಶ್ವೇತಾಂಬರ	ಶ್ವೇತ	ಹಂಸ	ನಾಲ್ಕು	ವರದ ಖಡ್ಗ ಬೀಜಾಪೂರ ಬೀಜಾಪೂರ ಅಮ್ರಸ್ತಬಕ

22	ಆಮ್ರಾ	ದಿಗಂಬರ	ಹರಿತ್	ಸಿಂಹ	ಎರಡು	ಪುತ್ರನಿಗೆ ಶುಭಕೋರುವ ಹಸ್ತ (ಆಮ್ರವೃಕ್ಷದ ನೆರಳಲ್ಲಿ ಎರಡು ಮಕ್ಕಳ ಜೆತೆಗೆ ಇರುತ್ತಾರೆ)
						ಜೀಜಪೂರ ಪಾಶ ಪುತ್ರ ಅಂಕುಶ
	ಅಂಬಿಕಾ	ಶ್ವೇತಾಂಬರ	ಪೀತ	ಸಿಂಹ	ನಾಲ್ಕು	ಆಮ್ರಾಲೀ ಪಾಶ ಪುತ್ರ ಅಂಕುಶ
		ಶ್ವೇತಾಂಬರ	ಪೀತ	ಸಿಂಹ	ನಾಲ್ಕು	ಅಂಕುಶ ಅಕ್ಷಸೂತ್ರ ಕಮಲ ವರದ (ತ್ರಿಫಣಸರ್ಪ ಮೌಳೀ)
23	ಪದ್ಮಾತತೀ	ದಿಗಂಬರ	ರಕ್ತ	ಪದ್ಮ	ನಾಲ್ಕು	ಪಾಶ ಅಕ್ಷಸೂತ್ರ ಕುಂತ ಅರ್ಧಚಂದ್ರ ಗದೆ ಮುಸಲ
		ದಿಗಂಬರ	ರಕ್ತ	ಪದ್ಮ	ಆರು	ಯಥೋಚಿತ
		ದಿಗಂಬರ	ರಕ್ತ	ಪದ್ಮ	ಎಂಟು	ವಿಭಿನ್ನ
		ದಿಗಂಬರ	ರಕ್ತ	ಪದ್ಮ	ಹದಿನಾರು	ಪದ್ಮ ಪಾಶ ಫಲ ಅಂಕುಶ
		ಶ್ವೇತಾಂಬರ	ಸುವರ್ಣ	ಕುಕ್ಕುಟ ಸರ್ಪ	ನಾಲ್ಕು	ವರದ ಪುಸ್ತಕ
24	ಸಿದ್ಧಯಿಕಾ	ದಿಗಂಬರ	ಸುವರ್ಣ	ಭದ್ರಾಸನ/ಸಿಂಹ	ಎರಡು	ಪುಸ್ತಕ ಅಭಯ ಬೀಜಾಪೂರ ವೀಣೆ
		ಶ್ವೇತಾಂಬರ	ಹರಿತ್	ಸಿಂಹ	ನಾಲ್ಕು	ಪುಸ್ತಕ ಅಭಯ ಪಾಶ ಕಮಲ
		ಶ್ವೇತಾಂಬರ	ಹರಿತ್	ಗಜ	ನಾಲ್ಕು	

೫. ಸಂಕೀರ್ಣ

ಕ್ರ ಸಂ	ಹೆಸರು	ಪರಂಪರೆ	ಬಣ್ಣ	ವಾಹನ	ಭುಜಸಂಖ್ಯೆ	ಆಯುಧ
1	ಕ್ಷೇತ್ರಪಾಲ	ದಿಗಂಬರ ಶ್ವೇತಾಂಬರ ಶ್ವೇತಾಂಬರ ಶ್ವೇತಾಂಬರ	ಶ್ಯಾಮ ವಿಭಿನ್ನ ಶ್ಯಾಮ ಶ್ಯಾಮ	ಶ್ವಾನ ಶ್ವಾನ ಶ್ವಾನ ಶ್ವಾನ	ನಾಲ್ಕು ಇಪ್ಪತ್ತು ಆರು ಆರು	ಕತ್ತಿ ಕಪ್ಪು ನಾಯಿ ಗದೆ (ನಾಗಾಲಂಕೃತ ತ್ರಿನೇತ್ರ) ವಿಭಿನ್ನ ಮುದ್ಗರ ಪಾಶ ಡಮರು ಶ್ವಾನ ಅಂಕುಶ ಖಡ್ಗ ದಕ್ಕೆ ಶೂಲ ಮಾಲೆ ಪಾಶ ಅಂಕುಶ ಖಡ್ಗ
2	ಅನಾವೃತ ಯಕ್ಷ	ದಿಗಂಬರ	ಕೃಷ್ಣ	ಗರುಡ	ನಾಲ್ಕು	ಶಂಖ ಚಕ್ರ ಕಮಂಡಲು ಅಕ್ಷಸೂತ್ರ
3	ಸರ್ವಹ್ಣ ಯಕ್ಷ	ದಿಗಂಬರ	ಶ್ಯಾಮ	ಶ್ವೇತಗಜ	ನಾಲ್ಕು	(ಎರಡಕ್ಕೆ) ಬದ್ಧಾಂಜಲ (2ಕ್ಕೆ) ದರ್ಗಚಕ್ರ ಹಿಡಿದಿವೆ (ಪುಸ್ತಕದ ಮೇಲೆ ಧರ್ಮಚಕ್ರ)
4	ಬ್ರಹ್ಮ ಶಾಂತಿ ಯಕ್ಷ	ಶ್ವೇತಾಂಬರ	ಪಿಂಗ	ಭದ್ರಾಸನ	ನಾಲ್ಕು	ಅಕ್ಷಸೂತ್ರ ದಂಡ ಕಮಂಡಲ ಛತ್ರ ಪಾದುಕಾರೂಢ

ಅನುಬಂಧ-೪

ಕರ್ನಾಟಕದ ಜೈನಚಿತ್ರಗಳ ನೆಲೆಗಳು

೧. ಜೈನ ಭಿತ್ತಿಚಿತ್ರಗಳು ಇರುವ ನೆಲೆಗಳು

೦೧.	ಮೂಡಬಿದರೆ (ದಕ್ಷಿಣ ಕನ್ನಡ ಜಿಲ್ಲೆ)	೧. ಅಮ್ಮನವರ ಬಸದಿ ೨. ಲೆಪ್ಪದ ಬಸದಿ ೩. ಜೈನಮಠ
೦೨.	ಶ್ರವಣಬೆಳಗೊಳ (ಹಾಸನ ಜಿಲ್ಲೆ)	೧. ಕತ್ತಲ ಬಸದಿ ೨. ಚಾವುಂಡರಾಯ ಬಸದಿ ೩. ಪಾರ್ಶ್ವನಾಥ ಬಸದಿ ೪. ದಾನ ಶಾಲಾ ಬಸದಿ ೫. ಶ್ರವಣಬೆಳಗೊಳ ಶ್ರೀಮಠ ೬. ಬೆಳಗೊಳದ ಮಂಟಪ
೦೩.	ಕಾರ್ಕಳ (ದಕ್ಷಿಣ ಕನ್ನಡ ಜಿಲ್ಲೆ)	೧. ಜೈನ ಮಠ ೨. ಸುಬ್ಬಯ್ಯಶಾಸ್ತ್ರಿಗಳ ಮನೆ, ಬಜಗೋಳಿ ೩. ಪಂಡಿತ ಮನೆ(ಜೈನ್‌ಪೇಟೆ, ನೆಲ್ಲಿಕಾರು) ೪. ದೊಡ್ಡಮನೆ (ಜೈನ್ ಪೇಟೆ, ನೆಲ್ಲಿಕಾರು)
೦೪.	ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ)	೧. ವಾಸಂತಿಕಾ ದೇವಾಲಯ, ಅಂಗಡಿ
೦೫.	ಕೆ. ಆರ್. ನಗರ (ಮೈಸೂರು ಜಿಲ್ಲೆ)	೧. ಸಾಲಿಗ್ರಾಮ ಪಾರ್ಶ್ವನಾಥ ಬಸದಿ
೦೬.	ಬಲ್ಲಮಂಜ (ಮೈಸೂರು ಜಿಲ್ಲೆ)	
೦೭.	ಧರ್ಮಸ್ಥಳ (ದಕ್ಷಿಣ ಕನ್ನಡ ಜಿಲ್ಲೆ)	
೦೮.	ಅರಿಕಲ್ಲು ಬಸದಿ (ದಕ್ಷಿಣ ಕನ್ನಡ ಜಿಲ್ಲೆ)	
೦೯.	ನಲ್ಲೂರು (ದಕ್ಷಿಣ ಕನ್ನಡ ಜಿಲ್ಲೆ)	
೧೦.	ನಾರಾವಿ (ದಕ್ಷಿಣ ಕನ್ನಡ ಜಿಲ್ಲೆ)	

೨. ಜೈನ ಹಸ್ತಪ್ರತಿ ಚಿತ್ರಗಳು ಇರುವ ನೆಲೆಗಳು

೦೧. ಹಸ್ತಪ್ರತಿ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ವಿದ್ಯಾರಣ್ಯ

೦೨. ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೦೩. ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೦೪. ಕನ್ನಡ ಅಧ್ಯಯನ ಕೇಂದ್ರ ಹಸ್ತಪ್ರತಿ ಭಂಡಾರ, ಬೆಂಗಳೂರು ವಿ.ವಿ., ಬೆಂಗಳೂರು

೦೫. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿ ಭಂಡಾರ, ಮಾನಸ ಗಂಗೋತ್ರಿ, ಮೈಸೂರು ವಿ.ವಿ., ಮೈಸೂರು

೦೬. ಹಸ್ತಪ್ರತಿ ವಿಭಾಗ, ಶೃತ ಕೇವಲಿ ವಿದ್ಯಾಸಂಸ್ಥೆ, ಶ್ರೀಧವಳ ತೀರ್ಥ, ಶ್ರವಣಬೆಳಗೊಳ

೦೭. ಜೈನ ಮಠ, ಮೂಡಬಿದರೆ, ದಕ್ಷಿಣಕನ್ನಡ ಜಿಲ್ಲೆ

೦೮. ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನಾ ಕೇಂದ್ರ, ಉಜಿರೆ, ಧರ್ಮಸ್ಥಳ

೦೯. ಶ್ರೀಲಕ್ಷ್ಮೀಸೇನ ಭಟ್ಟಾರಕ, ಶ್ರೀಮಠ, ಕೊಲ್ಹಾಪುರ.

೧೦. ಶಿವಯೋಗ ಮಂದಿರ ಹಸ್ತಪ್ರತಿ ಕೇಂದ್ರ, ಶಿವಯೋಗ ಮಂದಿರ, ಬಾದಾಮಿ.

೧೧. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಜೈನಮಠ, ಶ್ರವಣಬೆಳಗೊಳ

೧೨. ವೀರಶೈವ ಅಧ್ಯಯನ ಸಂಸ್ಥೆ, ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ


೧೩. ಬಿ.ಎಂ.ಶ್ರೀ ಪ್ರತಿಷ್ಠಾನ, ನರಸಿಂಹರಾಜ ಕಾಲನಿ, ಬೆಂಗಳೂರು

೧೪. ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು

೧೫. ಜೈನಮಠ, ಕಾರ್ಕಳ, ದಕ್ಷಿಣ ಕನ್ನಡ ಜಿಲ್ಲೆ

೧೬. ಜಗದ್ಗುರು ಶ್ರೀ ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ

卐卐卐


▲ ಜೈನ ಚಿತ್ರಗಳಿರುವ ಸ್ಥಳಗಳು
Bidar
Gulbarga
Bijapur
Yadgir
Belgaum
Bagalkot
Raichur
Koppal
Gadag
Dharwad
Bellary
Uttar Kannand
Haveri
Davanagere
Shimoga
Tumkur
Kolar
Udupi
Chikmagalur
ಕಾರ್ಕಳ
ಬಜಗೋಳಿ
ನಲ್ಲೂರು
ನಾರಾವಿ
ಮೂಡಿಗೆರೆ
ಮೂಡಬಿದ್ರಿ
ಬಲ್ಲಮಂಜ
ಧರ್ಮಸ್ಥಳ
Dakshin Kannad
ಅಲತಲ್ಲು ಬಸದಿ
Hassan
Bangalore Rural
Mandya
Kodagu
ಕೆ. ಆರ್. ನಗರ
Mysore
Chamarajanagar



